ಇರುಳಿಗ ಸಮುದಾಯದ
ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಅಧ್ಯಯನ

(ರಾಮನಗರ ಜಿಲ್ಲೆಯನ್ನು ಪರಿಗಣಿಸಿ)

ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬುಡಕಟ್ಟು ಅಧ್ಯಯನ ವಿಭಾಗಕ್ಕೆ
ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ಮಹೇಂದ್ರಕುಮಾರ್ ಎ.ಎಸ್.

ಮಾರ್ಗದರ್ಶಕರು
ಡಾ. ಎ.ಎಸ್. ಪ್ರಭಾಕರ
ಪ್ರಾಧ್ಯಾಪಕರು



ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೬

ಇರುಳಿಗ ಸಮುದಾಯದ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಅಧ್ಯಯನ

(ರಾಮನಗರ ಜಿಲ್ಲೆಯನ್ನು ಪರಿಗಣಿಸಿ)

ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬುಡಕಟ್ಟು ಅಧ್ಯಯನ ವಿಭಾಗಕ್ಕೆ
ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ಮಹೇಂದ್ರಕುಮಾರ್ ಎ.ಎಸ್.

ಮಾರ್ಗದರ್ಶಕರು
ಡಾ. ಎ.ಎಸ್. ಪ್ರಭಾಕರ
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೬

ಮಾರ್ಗದರ್ಶಕರ ದೃಢೀಕರಣ ಪತ್ರ

ಮಹೇಂದ್ರಕುಮಾರ್ ಎ.ಎಸ್. ಅವರು **"ಇರುಳಿಗ ಸಮುದಾಯದ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಅಧ್ಯಯನ"** (ರಾಮನಗರ ಜಿಲ್ಲೆಯನ್ನು ಪರಿಗಣಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

೧೭-೪-೧೬

ದಿನಾಂಕ :
ಸ್ಥಳ : ವಿದ್ಯಾರಣ್ಯ

(ಡಾ. ಎಸ್. ಪ್ರಭಾಕರ)
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

"ಇರುಳಿಗ ಸಮುದಾಯದ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳ ಅಧ್ಯಯನ" (ರಾಮನಗರ ಜಿಲ್ಲೆಯನ್ನು ಪರಿಗಣಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು **ಡಾ. ಎ.ಎಸ್. ಪ್ರಭಾಕರ,** ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ, ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : 15/4/16
ಸ್ಥಳ : ವಿದ್ಯಾರಣ್ಯ

(ಮಹೇಂದ್ರಕುಮಾರ್ ಎ.ಎಸ್.)
ಸಂಶೋಧಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿಶಿಷ್ಟ

ಭೂಪಟ

ಕೋಷ್ಟಕಗಳು

ಲಂಬಚಿತ್ರಗಳು

ವೃತ್ತಚಿತ್ರಗಳು

ಅಂಕಿ ಅಂಶಗಳು

ಛಾಯಾಚಿತ್ರಗಳು

೯. ಇರುಳಿಗರ ಸಮುದಾಯದ ವಿದ್ಯಾರ್ಥಿಗಳು

೧೦. ಇರುಳಿಗರ ಸಮುದಾಯದ ಬಾಲಕರು

೧೧. ಅರಣ್ಯವಾಸಿ ಇರುಳಿಗರ ಸಮುದಾಯ

೧೨. ಇರುಳಿಗರ ವಿದ್ಯಾವಂತ ಯುವಕರು

೧೩. ಬಿಳಿಕಲ್‌ಬೆಟ್ಟ ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆ ಹಚ್ಚಿದ ಬೆಂಕಿಗೆ ಇರುಳಿಗರ ಮನೆ ಬಲಿ

೧೪. ಇರುಳಿಗರ ಕಾಲೋನಿ ಜನರಿಗೆ ಕುಡಿಯಲು ಮಲಿನ ನೀರೆ ಗತಿ

೧೫. ಇರುಳಿಗರ ಯುವಕರ ಇಲಿ ಬೇಟೆ

೧೬. ಕೇತ್ಲು ಬೇಸಾಯದ ಕೆಲಸದಲ್ಲಿ ನಿರತನಾಗಿರುವ ಇರುಳಿಗ

೧೭. ಕ್ಷೇತ್ರಕಾರ್ಯದಲ್ಲಿ ಇರುಳಿಗರ ದಂಪತಿಗಳು ಹಾಗೂ ವಯೋವೃದ್ಧೆಯೊಂದಿಗೆ ಸಮುದಾಯದ ಕುರಿತು ಸಂಶೋಧಕರು ಮಾಹಿತಿ ಸಂಗ್ರಹಣೆ ಪಡೆಯುತ್ತಿರುವುದು

೧೮. ಮದುವೆ ಮನೆಗೆ ಹಂದರ ತರುವ ಸಂಪ್ರದಾಯ

೧೯. ಮದುವೆ ಮನೆಗೆ ಗಂಗಾಸ್ಥಳದಿಂದ ದೇವರನ್ನು ಹೊತ್ತು ನೀರು ತುಂಬಿ ತರುವ ಸಂಪ್ರದಾಯ

೨೦. ವರನು ವಧುವಿಗೆ ಮಾಂಗಲ್ಯ ಕಟ್ಟುತ್ತಿರುವುದು

೨೧. ಕೋಲಕಾರನಿಂದ ಹಾಲು ಎರೆದು ಕನ್ಯಾದಾನ ಮಾಡುತ್ತಿರುವ ಸಂಪ್ರದಾಯ

೨೨. ಜಟ್ಟಿದೊಡ್ಡಿ ಇರುಳಿಗರ ಶಕ್ತಿದೇವತೆ ಮದ್ದೂರಮ್ಮ

೨೩. ಮದ್ದೂರಮ್ಮನ ಮಗ ಸಿಡಿರಣ್ಣನ ಉತ್ಸವಮೂರ್ತಿ

೨೪. ಬುಡಗಯ್ಯದೊಡ್ಡಿ ಆದಿಶಕ್ತಿ ದೇವಸ್ಥಾನ

೨೫. ಮುನೇಶ್ವರ ಪೂಜೆ ಮಾಡುವ ಕಣಿ ಪೂಜಾರಿ

೨೬. ಕಾರಾಯ್ಯ ಬಿಲ್ಲೆಯ್ಯನ ಜೊತೆ ಮಹದೇಶ್ವರ ದೇವರ ಉತ್ಸವಮೂರ್ತಿ

೨೭. ಇರುಳಿಗರ ಅರಣ್ಯದಲ್ಲಿನ ಮೂಲ ದೇವರು

೨೮. ಇರುಳಿಗರು ಆರಾಧಿಸುವ ಹೆಬ್ಬಂಡೆಯಲ್ಲಿ ಮೂಡಿರುವ ದೈವ ಪಾದ

೨೯. ಉರಗನದೊಡ್ಡಿ ಇರುಳಿಗರ ಮಾಂತ್ರಿಕವಿದ್ಯೆಯ ಕಾಳಯ್ಯ ತಾತಾನ ಸಮಾಧಿ

೩೦. ಕಲ್ಲುಸೇವೆ ಸಮಾಧಿ ಬಳಿ ಕುಳಿತಿರುವ ಇರುಳಿಗರ ವೃದ್ಧ

೩೧. ಸತ್ತ ವ್ಯಕ್ತಿ ಕಲ್ಲುಸೇವೆಯ ಸಮಾಧಿಯಲ್ಲಿ ಅವಶೇಷವಾಗಿರುವ ಅಸ್ಥಿಪಂಜರ

೩೨. ಪರಂಪಾರಿಕ ಆಹಾರ ದೊಣ್ಣೆಕಾಡು ಗೆಣಸು

೩೩. ಪರಂಪಾರಿಕ ಆಹಾರ ಕೆರೆಯಲ್ಲಿ ದೊರೆಯುವ ಗೆಂಡೆ

೩೪. ಪರಂಪಾರಿಕ ಆಹಾರ ಮುಳ್ಳಿಗೆಡ್ಡೆ

೩೫. ಕಾಡು ಕರಿಬೇವು

೩೬. ಔಷಧಿಯ ಸಸ್ಯ ಜಾಗಡಿಕುಡಿ

೩೭. ಬುಡಕಟ್ಟು ವೈದ್ಯ ಸಂಜೀವಿನಿ ಈಶ್ವರಿಬೇರು

೩೮. ಹಂದಲಗದ ಸೊಪ್ಪು

೩೯. ಇರುಳಿಗರ ಸಮುದಾಯದ ಪವಿತ್ರ ವೃಕ್ಷ ಅಲೆಮರ

೪೦. ಸತ್ಯಗ್ರಹ ನಿರತ ಇರುಳಿಗರ ಮುಖಂಡರು, ತಾಲೂಕು ಪಂಚಾಯಿತಿ ಕಾರ್ಯಾಲಯ, ರಾಮನಗರ

೪೧. ರಾಮನಗರ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಅರಣ್ಯಹಕ್ಕು ಜಾರಿಗಾಗಿ ಮನವಿ


೪೨. ಸತ್ಯಗ್ರಹ ನಿರತ ಇರುಳಿಗರ ಯುವಕರ ಹೋರಾಟ

೪೩. ಸತ್ಯಗ್ರಹ ನಿರತ ಇರುಳಿಗರ ಮಹಿಳೆಯರು

೪೪. ಆದಿವಾಸಿ ಅರಣ್ಯಹಕ್ಕು ಜಾರಿಗಾಗಿ ಇರುಳಿಗರ ಹೋರಾಟ ರಸ್ತೆ ಪಥ ಸಂಚಾಲನ

೪೫. ಆದಿವಾಸಿ ಅರಣ್ಯಹಕ್ಕು ಜಾರಿಗೊಳಿಸುವಂತೆ ಇರುಳಿಗರ ಸಮುದಾಯದ ಹೋರಾಟ

ನಕ್ಷೆ: ರಾಮನಗರ ಜಿಲ್ಲೆ ತಾಲೂಕುಗಳ ಕ್ಷೇತ್ರಕಾರ್ಯ ಹೋಬಳಿಗಳು



ಪರಿವಿಡಿ

ಅನುಬಂಧಗಳು

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರವೇಶ

ಬಹು ಸಂಸ್ಕೃತಿಯನ್ನು ಹೊಂದಿದ ಭಾರತವು ಭೌಗೋಳಿಕ ವೈವಿಧ್ಯತೆಯನ್ನು ಹೊಂದಿದ ದೇಶ ಮಾತ್ರವಲ್ಲ. ಇಲ್ಲಿ ವಿವಿಧ ರೀತಿಯ ಜಾತಿ, ಸಮುದಾಯಗಳು ಕಂಡುಬರುತ್ತವೆ. ಇಲ್ಲಿರುವ ಜಾತಿ, ಸಮುದಾಯಗಳು ವಿವಿಧ ರೀತಿಯ ಸಂಸ್ಕೃತಿಯಿಂದ ಕೂಡಿವೆ.

ಕರಾವಳಿ, ಬಯಲು ಪ್ರದೇಶ, ದಟ್ಟ ಅರಣ್ಯ, ಮಲೆನಾಡು, ದಕ್ಷಿಣದ ಕುರುಚಲು ಕಾಡುಗಳ ಬಯಲು, ಉತ್ತರದ ವಿಶಾಲ ಮೈದಾನ ಪ್ರದೇಶ ಹೀಗೆ ವೈವಿಧ್ಯಮಯವಾದ ಭೂ ಪ್ರದೇಶ ಹೊಂದಿರುವ ಈ ರಾಜ್ಯದ ಊಟ, ಉಪಚಾರ, ಉಡುಗೆ ತೊಡುಗೆ ಮುಂತಾದವು ಕೂಡ ಪ್ರಾದೇಶಿಕ ಭಿನ್ನತೆಯನ್ನು ಪ್ರತಿಬಿಂಬಿಸುವಂತೆ ವರ್ಣಮಯವಾಗಿವೆ.

ಇದಕ್ಕೆ ಬುಡಕಟ್ಟು ಸಮುದಾಯಗಳೂ ಹೊರತಾಗಿಲ್ಲ. ಇಲ್ಲಿಯ ಬುಡಕಟ್ಟುಗಳು ಇತರರಿಗಿಂತ ಭಿನ್ನವಾದ ಜೀವನ ವಿಧಾನ, ಭಾಷೆ, ಆಚರಣೆಗಳನ್ನು ಹೊಂದಿವೆ. ಇತ್ತೀಚೆಗೆ ಜಾಗತಿಕ ಬದುಕಿನ ಮಧ್ಯ ಪ್ರವೇಶದಿಂದಾಗಿ ಇಲ್ಲಿಯ ಬುಡಕಟ್ಟುಗಳು ಅತಂತ್ರವಾದ ಸ್ಥಿತಿಗೆ ನೂಕಲ್ಪಟ್ಟಿವೆ. ಹೀಗಾಗಿ ಇಲ್ಲಿಯ ಬುಡಕಟ್ಟುಗಳ ಅತಂತ್ರವಾಗುತ್ತಿವೆಯೆನಿಸಿದರೂ ಅವು ತಮ್ಮ ಮೂಲ ಸಂಸ್ಕೃತಿಯನ್ನು ಅಷ್ಟು ಸುಲಭವಾಗಿ ಬಿಟ್ಟುಕೊಡಲಾರವು ಎಂಬುದು ಸ್ಪಷ್ಟವಾಗಿ ಅಧ್ಯಯನಗಳ ಮೂಲಕ ತಿಳಿಯುತ್ತದೆ.

ಬುಡಕಟ್ಟುಗಳು ಹೊರನೋಟಕ್ಕೆ ಭೌತಿಕವಾಗಿ ಬದಲಾಗಿರಬಹುದಾದರೂ ಆಂತರಿಕವಾಗಿ ಸಾಂಸ್ಕೃತಿಕ ಆಚರಣೆಗಳಲ್ಲಿ ಮೂಲ ಅದಿಮ ಬದುಕಿನ ಚಹರೆಗಳು ಇನ್ನು ಬದಲಾಗಿಲ್ಲ. ಬುಡಕಟ್ಟುಗಳಲ್ಲಿ

ಮೇಲ್ನೋಟಕ್ಕೆ ಮೂಲ ಲಕ್ಷಣಗಳು ಮಾಯವಾಗಿರುವಂತೆ ಭಾಸವಾದರೂ ಆಹಾರ ಪದ್ಧತಿ, ಭಾಷೆ ಹಾಗೂ ಜನನ, ವಿವಾಹ, ಅಂತ್ಯಸಂಸ್ಕಾರ, ಹಬ್ಬ ಹರಿದಿನ ಮುಂತಾದ ಆಚರಣೆಗಳಲ್ಲಿ ಬುಡಕಟ್ಟಿನ ಅನನ್ಯತೆಯು ಹಾಗೆಯೇ ಉಳಿದುಬಂದಿರುವುದು ಕಂಡುಬರುತ್ತದೆ. ಉದಾಹರಣೆಗಾಗಿ ಹೇಳುವುದಾದರೆ ದೈನಂದಿನ ಬದುಕಿನಲ್ಲಿ ಆಧುನಿಕ ಪದ್ಧತಿಗಳನ್ನು ರೂಢಿಸಿಕೊಂಡಿದ್ದರೂ ತಮ್ಮ ಮೂಲ ಆಚರಣೆಗಳಾದ ಮೂಲದೈವ ಹಾಗೂ ಪೂರ್ವಜರನ್ನು ಸ್ಮರಿಸುವ ಹಬ್ಬಗಳನ್ನು ಆಚರಿಸುತ್ತಿರುವುದು ಗೋಚರಿಸುತ್ತದೆ.

ಆದರೆ ದಿನೇ ದಿನೇ ಆಧುನಿಕತೆಯತ್ತ ದಾಪುಗಾಲು ಇಡುತ್ತಿರುವ ಈ ಸಮಾಜ ವ್ಯವಸ್ಥೆಯಲ್ಲಿ ಪ್ರತಿಯೊಂದು ಸಮುದಾಯ ಕೂಡ ಅದರ ತೆಕ್ಕೆಗೆ ಸಿಲುಕಿ ಒದ್ದಾಡುವಂತಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಈ ಮಾತಿಗೆ ಇರುಳಿಗ ಬುಡಕಟ್ಟು ಸಮುದಾಯವು ಸಹ ಹೊರತಾಗಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಇಂತಹ ಸಂದಿಗ್ಧ ಸ್ಥಿತಿಯಲ್ಲಿರುವ ಇರುಳಿಗರ ಸಾಮಾಜಿಕ ಹಾಗೂ ಆರ್ಥಿಕ ಜೀವನದ ಸ್ವರೂಪವನ್ನು ನೋಡಬೇಕಾಗುತ್ತದೆ.

ನಾಗರಿಕರು ಎಂದು ಹೇಳಿಕೊಳ್ಳುವವರು ಅನುಸರಿಸುವ ನಿಯಮಗಳಾವೂ ಬುಡಕಟ್ಟು ಜಗತ್ತಿಗೆ ಅನ್ವಯಿಸುವುದಿಲ್ಲ. ಈ ಸಮುದಾಯಗಳ ಲೋಕವೇ ವಿಶಿಷ್ಟವಾದದ್ದು, ಇಂದಿನ ಜಾಗತಿಕ ಜಗತ್ತು ಎಲ್ಲವನ್ನೂ ಹಣದ ರೂಪದಲ್ಲಿಯೇ ಅಳೆಯುತ್ತದೆ. ಒಂದರ್ಥದಲ್ಲಿ ಈ ಜಗತ್ತು ಹಣವೇ ಎಲ್ಲದು ಎಂದೇ ಅರ್ಥೈಸಿಕೊಂಡಿದೆ ಎನಿಸುತ್ತದೆ. ಈ ಆಧುನಿಕ ಜಗತ್ತಿಗೆ ತುಂಬಾ ದೂರದಲ್ಲಿರುವ ಬುಡಕಟ್ಟುಗಳಿಗೆ ಹಣ ಮುಖ್ಯವೇ ಅಲ್ಲ. ಅವರ ಜೀವನ ಕ್ರಮ ತುಂಬಾ ಸರಳ, ಸಚೇತನವಾದದ್ದು. ಹಣವೇ ಎಲ್ಲಾ ಎಂಬ ಆಧುನಿಕ ಜಗತ್ತಿಗೆ ನಿಜವಾದ ಬುಡಕಟ್ಟು ಜನ ಸಡ್ಡುಹೊಡೆದು ನಿಲ್ಲಬಲ್ಲರು. ಹಣವಿಲ್ಲದೇ ಬದುಕನ್ನು ಹೇಗೆ ಸಹ್ಯ ಮಾಡಿಕೊಳ್ಳಬಹುದು ಎಂಬುದನ್ನು ಬುಡಕಟ್ಟು ಬದುಕು ಕಲಿಸಬಲ್ಲದು.

ಆಧುನಿಕ ಸೆಳಕುಗಳಿಗೆ ಒಳಗಾಗಿಯೂ ಒಳಗಾಗದಂತೆ ಇರುವ ಬುಡಕಟ್ಟು ಸಮುದಾಯಗಳಲ್ಲಿ ಇರುಳಿಗ ಬುಡಕಟ್ಟು ಒಂದಾಗಿದೆ. ಆಧುನಿಕತೆಯ ಬದಲಾವಣೆಗೆ ತಮ್ಮನ್ನು ಒಡ್ಡಿಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂಬ ಎಚ್ಚರವು ಇರುಳಿಗರಲ್ಲಿ ಕಾಣಿಸುತ್ತಿದೆ.

ಇರುಳಿಗ ಸಮುದಾಯವು ತನ್ನದೇ ಆದ ನಿರ್ದಿಷ್ಟ ವಾಸಸ್ಥಾನ, ಸಾಮಾಜಿಕ, ಆರ್ಥಿಕ ರಚನೆ, ಭಾಷೆ, ಉಡುಗೆ ತೊಡುಗೆ, ಆಚಾರ–ವಿಚಾರ, ವಿಧಿ ನಿಷೇಧಗಳನ್ನು ಹೊಂದಿದೆ. ಮೂಲತಃ ಮಾತೃ ಪ್ರಧಾನ ವ್ಯವಸ್ಥೆಯನ್ನು ಹೊಂದಿದ್ದು ಇತರ ಸಮುದಾಯಗಳ ಸಂಪರ್ಕದಿಂದ ಪಿತೃಪ್ರಧಾನ ವ್ಯವಸ್ಥೆಗೆ ಜಾರಿದೆ. ಆಧುನಿಕ ಜಗತ್ತು ಈ ಸಮುದಾಯದ ಮೇಲೆ ಹೇಗೆ ಪ್ರಭಾವ ಬೀರಿದೆ, ಅದರ ಸ್ವರೂಪವೇನು ಎಂಬುದನ್ನು ನೋಡಬೇಕಾದ ಅವಶ್ಯಕತೆ ಇದೆ. ಆರ್ಥಿಕ, ಶೈಕ್ಷಣಿಕವಾಗಿ ಹಿಂದುಳಿದ ಇವರು ಹಲವು ಬಗೆಯ ಸಾಮಾಜಿಕ ಹಿನ್ನಡೆಯನ್ನು ಅನುಭವಿಸುತ್ತಿದ್ದಾರೆ. ಈ ಕಾರಣಕ್ಕಾಗಿ ರಾಮನಗರ ಜಿಲ್ಲೆಯ ಇರುಳಿಗರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಈ ಅಧ್ಯಯನದಲ್ಲಿ ಅಧ್ಯಯನ ಮಾಡಲಾಗಿದೆ.

೧.೧. ಅಧ್ಯಯನದ ಉದ್ದೇಶ

ಶೈಕ್ಷಣಿಕ ಆರ್ಥಿಕ, ರಾಜಕೀಯ, ಜಾತೀಯ ಅಸಮಾನತೆ, ಲಿಂಗ ತಾರತಮ್ಯ ಮುಂತಾದ ಸಮಾಜಿಕ ಪಿಡುಗುಗಳು ಎಷ್ಟೋ ತಳ ಸಮುದಾಯಗಳು ಕೀಳಿರಿಮೆಯಿಂದ ಬದುಕುವಂತೆ ಮಾಡಿವೆ. ಈ ಹಿನ್ನೆಲೆಯಲ್ಲಿ ಇರುಳಿಗ ಸಮುದಾಯದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಕುರಿತು ಅಧ್ಯಯನ ಮಾಡುವುದು ಈ ಅಧ್ಯಯನದ ಉದ್ದೇಶವಾಗಿದೆ.

ಇರುಳಿಗ, ಇರುಳ, ಇಲ್ಲಿಗ ಈ ಹೆಸರಿನ ಸಮುದಾಯಗಳ ನಡುವಿನ ವ್ಯತ್ಯಾಸಗಳ ಬಗ್ಗೆ ಈಗಾಗಲೇ ಅನೇಕ ಹಿರಿಯ ವಿದ್ವಾಂಸರು ಉತ್ತರಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ಇರುಳಿಗರು ಎಂಬ ಹೆಸರನ್ನೇ ಅವರ ಮಾನವಶಾಸ್ತ್ರೀಯ ವರ್ಣ ವಿಧಾನದ ಮೂಲಕ ಅರ್ಥೈಸಲು ಕೆಲವರು ಪ್ರಯತ್ನಿಸಿದರೆ, ಕೆಲವರು ಅವರ ವೃತ್ತಿಗೆ ಸಂಬಂಧಿಸಿದ ಅಂಶಗಳ ಮೂಲಕ ವಿವರಿಸಲು ಪ್ರಯತ್ನಿಸಿದ್ದಾರೆ. ಇರುಳಿಗರ, ಇರುಳ, ಇಲ್ಲಿಗ ಹೀಗೆ ಬೇರೆ ಬೇರೆ ಹೆಸರುಗಳಿಂದ ಗುರುತಿಸಲಾಗುತ್ತಿರುವ ಸಮುದಾಯಗಳ ಮಧ್ಯ ಇರುವ ವಿಭಿನ್ನತೆ ಹಾಗೂ ಸಾಮ್ಯತೆಗಳ ಕುರಿತು ನೋಡುವ ಉದ್ದೇಶವನ್ನೂ ಈ ಅಧ್ಯಯನವು ಹೊಂದಿದೆ.

೧. ಈ ಸಮುದಾಯದ ಕುರಿತು ಇರುವ ಲಿಖಿತ ಹಾಗೂ ಮೌಖಿಕ ಸಾಹಿತ್ಯ, ಚಾರಿತ್ರಿಕ ಹಿನ್ನೆಲೆ ಬಗ್ಗೆ ಗಮನಿಸುವುದು

೨. ಇರುಳಿಗ ಸಮುದಾಯದ ಭೌಗೋಳಿಕ ಪರಿಸರ, ಸಮುದಾಯದ ದೈಹಿಕ ಲಕ್ಷಣ, ಆಹಾರ ಪದ್ಧತಿ, ಆಚರಣೆ, ವಿಧಿ ನಿಷೇಧ, ದೈವರಾಧನೆ, ವಿವಾಹ, ಆರೋಗ್ಯ ಕಲೆ ಇತ್ಯಾದಿಗಳನ್ನು ಗಮನಿಸಿಸುವುದು

೩. ಇರುಳಿಗ ಸಮುದಾಯದ ಕುರಿತು ಸರ್ಕಾರ ನೀಡಿರುವ ಸವಲತ್ತು ಹಾಗೂ ವಿಶೇಷ ಯೋಜನೆಗಳ ಕುರಿತು ಅವಲೋಕನ ಮಾಡುವ ಉದ್ದೇಶವನ್ನು ಈ ಅಧ್ಯಯನವು ಒಳಗೊಂಡಿದೆ.

೪. ಮುಖ್ಯವಾಗಿ ಅಧ್ಯಯನದಲ್ಲಿ ಸಮಾಜೋ ಆರ್ಥಿಕ ಹಿನ್ನೆಲೆಯಲ್ಲಿ ಇರುಳಿಗ ಸಮುದಾಯದ ಸಂಸ್ಕೃತಿಯನ್ನು ಅರಿಯುವುದು ಹಾಗೂ ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಗತಿಗಳ ಕುರಿತು ನೋಡುವುದು ಈ ಅಧ್ಯಯನದ ಉದ್ದೇಶವಾಗಿದೆ.

೧.೨. ಅಧ್ಯಯನದ ಮಹತ್ವ

ಇಂದು ಸಹ ಇರುಳಿಗ ಸಮುದಾಯದ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳಲ್ಲಿ ಮಹತ್ವದ ಬದಲಾವಣೆಗಳಾಗಿಲ್ಲ. ಇಂದಿಗೂ ಶೈಕ್ಷಣಿಕವಾಗಿ, ಆರ್ಥಿಕವಾಗಿ ಹೀನಾಯ ಸ್ಥಿತಿಯಲ್ಲಿದ್ದಾರೆ. ಇವರು ರಾಜ್ಯದ ರಾಜಧಾನಿಗೆ, ಜಿಲ್ಲಾ ಕೇಂದ್ರಕ್ಕೆ ಕೂಗಳತೆಯ ಅಂತರದಲ್ಲಿ ಇದ್ದರೂ ನಾಗರಿಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇರುಳಿಗ ಸಮುದಾಯ ಕುರಿತು ಕೆಲವು ಲೇಖನಗಳು, ವರದಿಗಳ ಹಾಗೂ ಜನಪರ ಅಧ್ಯಯನಗಳ ಹೊರತಾಗಿ ಸಮಗ್ರವಾಗಿ ಸಾಮಾಜೋ ಆರ್ಥಿಕ ವ್ಯವಸ್ಥೆಯ ಕುರಿತು

ಯಾವೊಂದು ಅಧ್ಯಯನಗಳೂ ಇಲ್ಲಿಯವರೆಗೆ ನಡೆದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಇರುಳಿಗ ಸಮುದಾಯದ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಕುರಿತು ಅಧ್ಯಯನವನ್ನು ಮಾಡುವುದು ಮಹತ್ವವೆಂದು ಭಾವಿಸಲಾಗಿದೆ.

೧.೩. ಅಧ್ಯಯನದ ವ್ಯಾಪ್ತಿ

ಇರುಳಿಗರು ಕರ್ನಾಟಕದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮೈಸೂರು, ಚಾಮರಾಜನಗರ ಮತ್ತು ರಾಮನಗರ ಜಿಲ್ಲೆಗಳಲ್ಲಿ ನೆಲೆಸಿದ್ದಾರೆ. ಅಧ್ಯಯನದ ಕಾಲಮಿತಿಯಿಂದಾಗಿ ಇರುಳಿಗರು ನೆಲೆಸಿದ ಕರ್ನಾಟಕದ ಎಲ್ಲಾ ಪ್ರದೇಶಗಳನ್ನು ಅಧ್ಯಯನ ಮಾಡುವುದು ಕಷ್ಟಸಾಧ್ಯದ ವಿಚಾರವಾಗಿದೆ. ಆದುದರಿಂದ ಪ್ರಸ್ತುತ ಅಧ್ಯಯನವನ್ನು ರಾಮನಗರ ಜಿಲ್ಲೆಗೆ ಮಾತ್ರ ಸೀಮಿತ ಮಾಡಿಕೊಳ್ಳಲಾಗಿದೆ. ರಾಮನಗರ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಇರುಳಿಗರು ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ಆ ಜಿಲ್ಲೆಯ ನಾಲ್ಕು ತಾಲೂಕುಗಳನ್ನು ಮಾತ್ರ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

೧.೪. ಊಹೆಗಳು

ಇರುಳಿಗ, ಇರುಳ, ಇಲ್ಲಿಗ ಹೆಸರಿನ ಸಮುದಾಯಗಳು ಒಂದೇ ಆಗಿದ್ದು ಪ್ರಾದೇಶಿಕ ಭಿನ್ನತೆಯಿಂದಾಗಿ ಒಂದೇ ಸಮುದಾಯವನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ.

ಮೂಲತಃ ಮಾತೃ ಪ್ರಧಾನವಾದ ಇರುಳಿಗರು ಪ್ರಸ್ತುತ ಪಿತೃ ಪ್ರಧಾನ ವ್ಯವಸ್ಥೆಯನ್ನು ಅನುಸರಿಸುತ್ತಿದ್ದಾರೆ.

ತಮಿಳು ನಾಡಿನಿಂದ ವಲಸೆ ಬಂದಿದ್ದಾರೆ.

ಸಾಮಾಜಿಕವಾಗಿ ಇರುಳಿಗರು ಕೀಳರಿಮೆಯಿಂದ ಬಳಲುತ್ತಿದ್ದಾರೆ.

ಇತರ ಸಮುದಾಯಗಳಿಗಿಂತ ಇರುಳಿಗರು ಆರ್ಥಿಕವಾಗಿ ದುರ್ಬಲರಾಗಿದ್ದಾರೆ.

ಇರುಳಿಗರು ಶೈಕ್ಷಣಿಕವಾಗಿ ಹಿಂದುಳಿದಿದ್ದಾರೆ. ಅದರಲ್ಲೂ ಇರುಳಿಗ ಪುರುಷರಿಗಿಂತ ಮಹಿಳೆಯರು ಶೈಕ್ಷಣಿಕವಾಗಿ ತುಂಬಾ ಹಿಂದಿದ್ದಾರೆ.

ರಾಜಕೀಯ ಪ್ರಮುಖ ಸ್ಥಾನಗಳನ್ನು ಪಡೆಯುವಲ್ಲಿ ಇರುಳಿಗರು ಸೋತಿದ್ದಾರೆ.

ಸರ್ಕಾರ ಕೊಡುವ ವಿಶೇಷ ಅನುದಾನಗಳ ಸೌಲಭ್ಯಗಳು ಇಂದಿಗೂ ಇರುಳಿಗರಿಗೆ ಸಮರ್ಪಕವಾಗಿ ತಲುಪಿಲ್ಲ.

ದುಡುಮೆಯಲ್ಲಿ ಪುರುಷರಿಗಿಂತ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ತೊಡಗಿದ್ದಾರೆ.

ಇರುಳಿಗರು ವಿಶಿಷ್ಟ ದೈಹಿಕ ಲಕ್ಷಣಗಳನ್ನು ಹೊಂದಿದ್ದಾರೆ.

ಇರುಳಿಗರು ಕರ್ನಾಟಕದ ಇತರ ಬುಡಕಟ್ಟುಗಳಿಗಿಂತ ಭಿನ್ನವಾದ ಆಚಾರ ವಿಚಾರ, ಜೀವನ ಶೈಲಿ ಹೊಂದಿದ್ದಾರೆ.

೧.೫. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನವು ಸಮಾಜೋ ಆರ್ಥಿಕ ಹಿನ್ನೆಯಿಂದ ಕೂಡಿದ್ದು ಈ ಕೆಳಗಿನ ವಿಧಾನಗಳ ಮೂಲಕ ಅಧ್ಯಯನವನ್ನು ಮಾಡಲಾಗಿದೆ. ಪ್ರಸ್ತುತ ಅಧ್ಯಯನವನ್ನು ಆಯ್ಕೆ ವಿಧಾನವನ್ನನುಸರಿಸಿ (ರ್‍ಯಾಂಡಮ್) ಅಧ್ಯಯನ ಮಾಡಲಾಗಿದೆ. ಮುಖ್ಯವಾಗಿ ಈ ಅಧ್ಯಯನ ನಡೆಸಲು ಚಾರಿತ್ರಿಕ ವಿಧಾನ, ಸಂಖ್ಯಾಶಾಸ್ತ್ರೀಯ ವಿಧಾನ, ಸಂದರ್ಶನ ವಿಧಾನ, ಸಮೀಕ್ಷೆ ಹಾಗೂ ಸಹಭಾಗಿತ್ವ ವಿಧಾನಗಳನ್ನು ಹಾಗೂ ಪ್ರಶ್ನಾವಳಿಯ ವಿಧಾನಗಳನ್ನು ಅನುಸರಿಸಲಾಗಿದೆ. ಹಾಗೆ ನಕ್ಷೆಗಳು, ಕೋಷ್ಟಕಗಳು ಮುಂತಾದವುಗಳನ್ನು ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಪ್ರಶ್ನಾವಳಿಯ ಮಾದರಿ

ಅಧ್ಯಯನದಲ್ಲಿ ಇರುಳಿಗ ಬುಡಕಟ್ಟಿನ ಸಾಂಸ್ಕೃತಿಕ ಸಂಗತಿಗಳು ಹಾಗೂ ಸಾಮಾಜಿಕ ಹಾಗೂ ಆರ್ಥಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿಗಳ ಕುರಿತು ಅರಿಯುವ ಉದ್ದೇಶದಿಂದ ಪ್ರಶ್ನಾವಳಿ ಮಾದರಿಗಳನ್ನು ತಯಾರಿಸಿಕೊಂಡು ಮಾಹಿತಿಯನ್ನು ಪಡೆಯಲಾಗಿದೆ. ಈ ಪ್ರಶ್ನಾವಳಿಗಳಲ್ಲಿ ಕುಟುಂಬಗಳ ಸ್ಥೂಲ ವಿವರಗಳನ್ನು ಪಡೆಯುವುದಕ್ಕಾಗಿ ರೂಪಿಸಿದ ಸಾಮಾನ್ಯ ಪ್ರಶ್ನಾವಳಿಯೊಂದಿದ್ದರೆ ಮತ್ತೊಂದು ಅವರ ಸಂಸ್ಕೃತಿ, ಜೀವನ ವಿಧಾನ, ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಆಳವಾಗಿ ಅರಿಯಲು ರೂಪಿಸಿದ ಮಾದರಿ ಪ್ರಶ್ನಾವಳಿಯಾಗಿರುತ್ತದೆ.

ಸಂದರ್ಶನ ವಿಧಾನ

ಕ್ಷೇತ್ರಕಾರ್ಯದಲ್ಲಿ ಇರುಳಿಗ ಬುಡಕಟ್ಟಿನ ಕುಟುಂಬಗಳ ಸ್ಥಿತಿಗತಿಗಳನ್ನು, ಅವರ ಸಂಸ್ಕೃತಿ, ಪಾರಂಪರಿಕ ವೃತ್ತಿ, ಆಚರಣೆಗಳು, ಹಬ್ಬ ಹರಿದಿನಗಳು, ಅವರಲ್ಲಿರುವ ನಾಟಿ ವೈದ್ಯ ಪದ್ಧತಿ, ಜನಪದ ಹಾಡು, ಕಥೆ, ನಂಬಿಕೆ, ವಿಧಿ ನಿಷೇಧಗಳು ಇತ್ಯಾದಿಗಳನ್ನು ಅರಿಯುವ ಉದ್ದೇಶದಿಂದ ಆ ಸಮುದಾಯದ ವಿವಿಧ ವಯೋಮಾನದವರನ್ನು ಸಮೀಕ್ಷೆಗೆ ಒಳಪಡಿಸಿ ಮಾಹಿತಿಯನ್ನು ಕ್ರೋಡೀಕರಿಸಿ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಚಾರಿತ್ರಿಕ ವಿಧಾನ

ಇರುಳಿಗ ಬುಡಕಟ್ಟಿನ ಮೂಲ ತಿಳಿಯುವ ಉದ್ದೇಶದಿಂದ ಅವರ ಚರಿತ್ರೆಯನ್ನು ಪ್ರತಿಬಿಂಬಿಸುವ ಪ್ರಕಟಿತ ಮತ್ತು ಅಪ್ರಕಟಿತ ಗ್ರಂಥಗಳು, ವರದಿಗಳು, ವಿವಿಧ ಪತ್ರಿಕೆಯಲ್ಲಿ ಪ್ರಕಟಗೊಂಡ ಲೇಖನಗಳು ಮುಂತಾದವುಗಳಿಂದ ಮಾಹಿತಿ ಸಂಗ್ರಹಿಸಲಾಗಿದ್ದು ಆ ರೀತಿ ಸಂಗ್ರಹಿಸಿದ ಮಾಹಿತಿಯನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಸಂಖ್ಯಾಶಾಸ್ತ್ರೀಯ ವಿಧಾನ

ಜನಸಂಖ್ಯಾ ವರದಿ, ಮಾನವಾಭಿವೃದ್ಧಿ ವರದಿ ಹಾಗೂ ಸಂದರ್ಶನದಲ್ಲಿ ಕಲೆಹಾಕಿದ ಮಾಹಿತಿಗಳನ್ನು ಸಂಖ್ಯಾ ಶಾಸ್ತ್ರೀಯ ವಿಧಾನದಲ್ಲಿ ವಿಶ್ಲೇಷಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ತುಲನಾತ್ಮಕ ವಿಧಾನ

ಇರುಳಿಗ ಬುಡಕಟ್ಟಿನಲ್ಲಿ ಹಿಂದೆ ಪ್ರಚಲಿತವಿದ್ದ ಆಚರಣೆಗಳಿಗೂ ಹಾಗೂ ಪ್ರಸ್ತುತ ಇರುವ ಆಚರಣೆಗಳು, ವೃತ್ತಿ, ಜೀವನ ವಿಧಾನ, ಅವರ ಹಿಂದಿನ ಮತ್ತು ಪ್ರಸ್ತುತ ದಿನದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಸ್ಥಿತಿಗತಿಗಳನ್ನು ತುಲನಾತ್ಮಕವಾಗಿ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲು ತುಲನಾತ್ಮಕ ವಿಧಾನವನ್ನು ಅನುಸರಿಸಲಾಗಿದೆ.

ಸಹಭಾಗಿತ್ವ ವಿಧಾನ

ಇರುಳಿಗ ಬುಡಕಟ್ಟಿನ ಜನರ ಜೀವನಾವರ್ತನ ಮತ್ತು ಧಾರ್ಮಿಕ ಆಚರಣೆಗಳು, ನಂಬಿಕೆಗಳು, ವಿಧಿ ನಿಷೇಧ ಸಾಮಾಜಿಕ ಹಾಗೂ ಇತರ ಸಂಗತಿಗಳನ್ನು ಅರಿಯುವ ಉದ್ದೇಶದಿಂದ ಅವರ ಆಚರಣೆಗಳಲ್ಲಿ ನೇರವಾಗಿ ಪಾಲ್ಗೊಂಡು ಮಾಹಿತಿಗಳನ್ನು ಪಡೆಯಲಾಗಿದೆ. ಹಾಗೂ ಅವಶ್ಯವಿದ್ದಲ್ಲಿ ಛಾಯಾ ಚಿತ್ರಗಳನ್ನು ತೆಗೆಯುವುದು, ವಿಡಿಯೋ ಆಡಿಯೋ ರೆಕಾರ್ಡಿಂಗ್ ಮಾಡುವುದು ಹೀಗೆ ಒಟ್ಟಾಗಿ ಎಲ್ಲಾ ವಿಧಾನಗಳಿಂದಲೂ ಮಾಹಿತಿ ಸಂಗ್ರಹಿಸಿ ಅವುಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

೧.೬. ಮಹಾಪ್ರಬಂಧದ ಅಧ್ಯಾಯಗಳು

ಅಧ್ಯಾಯ ಒಂದು ಪ್ರಸ್ತಾವನೆ ಎಂದಿದ್ದು ಇದರಲ್ಲಿ ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ, ಊಹೆಗಳು, ಅಧ್ಯಯನದ ವಿಧಾನ, ಮಹಾಪ್ರಬಂಧದ ಅಧ್ಯಾಯಗಳ ವಿವರಗಳನ್ನು ನೀಡಲಾಗಿದೆ ಮತ್ತು ಇರುಳಿಗರ ಕುರಿತಾಗಿ ಇಲ್ಲಿಯವರೆಗೆ ನಡೆದ ಅಧ್ಯಯನಗಳು, ಪ್ರಕಟಗೊಂಡ ಗ್ರಂಥಗಳು ಹಾಗೂ ಲೇಖನಗಳ ಕುರಿತು ಅವಲೋಕಿಸಲಾಗಿದೆ.

ಅಧ್ಯಾಯ ಎರಡರಲ್ಲಿ ರಾಮನಗರ ಜಿಲ್ಲೆಯ ಚಾರಿತ್ರಿಕ ಹಾಗೂ ಭೌಗೋಳಿಕ ವಿವರಗಳ ಕುರಿತು ನೋಡಲಾಗಿದೆ. ಪ್ರಸ್ತುತ ಅಧ್ಯಾಯವು ಅಧ್ಯಯನಕ್ಕೆ ಒಂದು ಪ್ರವೇಶಿಕೆಯನ್ನು ಒದಗಿಸುತ್ತದೆ. ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ, ಭೌಗೋಳಿಕತೆ, ಜನಸಂಖ್ಯೆ, ಲಿಂಗಾನುಪಾತ ಮುಂತಾದವುಗಳನ್ನು ಗಮನಿಸಲಾಗಿದೆ.

ಅಧ್ಯಾಯ ಮೂರು ಇರುಳಿಗರ ಮೂಲ ಮತ್ತು ನೆಲೆಗಳು ಎಂದಿದ್ದು ಇದರಲ್ಲಿ ಇರುಳಿಗ ಪದನಿಷ್ಪತ್ತಿ, ಇರುಳಿಗರನ್ನು ವಿವಿಧ ಹೆಸರುಗಳಲ್ಲಿ ಗುರುತಿಸುವ ರೀತಿ, ಅವರಲ್ಲಿ ಸೃಷ್ಟಿಯ ಕುರಿತಾಗಿ ಇರುವ ಪುರಾಣ ಕಥೆ, ಭಾರತದ ವಿವಿಧ ರಾಜ್ಯಗಳಲ್ಲಿ ನೆಲೆಸಿರುವ ಇರುಳಿಗರ ವಿವರಗಳನ್ನು ವಿವರಿಸಲು ಪ್ರಯತ್ನಿಸಲಾಗಿದೆ.

ಅಧ್ಯಾಯ ನಾಲ್ಕು ಇರುಳಿಗರ ಸಾಮಾಜಿಕ ಸ್ಥಿತಿಗತಿ ಎಂದಿದ್ದು ಇರುಳಿಗ ಸಮುದಾಯದ ಸಾಮಾಜಿಕ ಸ್ಥಿತಿಗತಿಗಳನ್ನು ವಿಶ್ಲೇಷಿಸುವ ಪ್ರಯತ್ನ ಈ ಅಧ್ಯಾಯದಲ್ಲಿ ಮಾಡಲಾಗಿದೆ. ಇರುಳಿಗರ ಕುಟುಂಬದ ಸ್ವರೂಪ, ವಿವಾಹ, ಜನನ, ಸಾವು, ಆಹಾರ ಪದ್ಧತಿ, ಉಡುಗೆ ತೊಡುಗೆ ಹಾಗೂ ವಾರ್ಷಿಕಾವರ್ತನ ಆಚರಣೆ, ವಿಧಿ ನಿಷೇಧ ಇತ್ಯಾದಿ ವಿವರಗಳು ಈ ಅಧ್ಯಾಯದೊಳಗಿವೆ.

ಅಧ್ಯಾಯ ಐದು ಇರುಳಿಗರ ಆರ್ಥಿಕ ಸ್ಥಿತಿಗತಿ ಎಂದಿದ್ದು ಇರುಳಿಗ ಬುಡಕಟ್ಟಿನ ಪಾರಂಪರಿಕ ಆರ್ಥಿಕ ಚಟುವಟಿಕೆಗಳು, ಆಹಾರ ಸಂಗ್ರಹಣೆ, ಕೇತ್ಲು ಬೇಸಾಯ, ಪಶುಪಾಲನೆ, ಕುಶಲ ಕಲೆ ವಸ್ತುಗಳು, ಅವಲಂಬಿತ ವೃತ್ತಿ ಮುಂತಾದವುಗಳ ಕುರಿತ ವಿಶ್ಲೇಷಣೆ ಈ ಅಧ್ಯಾಯದಲ್ಲಿದೆ.

ಅಧ್ಯಾಯ ಆರು ಶೈಕ್ಷಣಿಕ ಹಾಗೂ ರಾಜಕೀಯ ಸ್ಥಿತಿಗತಿ ಎಂದಿದ್ದು ಇದರಲ್ಲಿ ಇರುಳಿಗರ ಶೈಕ್ಷಣಿಕ ಹಾಗೂ ರಾಜಕೀಯ ಸ್ಥಿತಿಗತಿಗಳ ವಿವರಗಳನ್ನು ನೀಡಲಾಗಿದೆ.

ಅಧ್ಯಾಯ ಏಳರಲ್ಲಿ ಇರುಳಿಗರ ಕಲೆ ಹಾಗೂ ಭಾಷೆಯ ಕುರಿತು ನೋಡಲಾಗಿದ್ದು ಅವರ ಪಾರಂಪರಿಕ ಕಲೆ ಭಾಷೆಯ ಕುರಿತಾಗಿ ಅವರು ಮಾತನಾಡುವ ಪದಗಳ ಸಂಕ್ಷಿಪ್ತ ಪರಿಚಯ ಮಾಡಲಾಗಿದೆ.

ಅಧ್ಯಾಯ ಎಂಟು ಇರುಳಿಗ ಸಮುದಾಯದ ಇಂದಿನ ಸ್ಥಿತಿಗತಿಗಳು ಎಂದಿದ್ದು ಇದರಲ್ಲಿ ಇರುಳಿಗರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳು ಹಾಗೂ ಜಾಗತೀಕರಣವು ಇರುಳಿಗರ ಮೇಲೆ ಉಂಟುಮಾಡಿದ ಪರಿಣಾಮಗಳ ಕುರಿತು ಅವಲೋಕಿಸಲಾಗಿದೆ.

ಕೊನೆಯಲ್ಲಿ ಸಮಾರೋಪವಿದ್ದು ಇದರಲ್ಲಿ ಅಧ್ಯಯನದ ಫಲಿತಗಳು ಹಾಗೂ ಸಲಹೆ ಸೂಚನೆಗಳಿವೆ. ಹಾಗೆಯೇ ಅನುಬಂಧ ಒಂದರಲ್ಲಿ ಪರಾಮಾರ್ಶನ ಗ್ರಂಥಗಳು, ಅನುಬಂಧ ಎರಡರಲ್ಲಿ ಕ್ಷೇತ್ರಕಾರ್ಯದಲ್ಲಿ ತಿಳುವಳಿಕೆ ನೀಡಿದವರ ವಿವರ, ಅನುಬಂಧ ಮೂರರಲ್ಲಿ ಕ್ಷೇತ್ರಕಾರ್ಯ ಪ್ರಶ್ನಾವಳಿ ಮಾದರಿ, ಅನುಬಂಧ ನಾಲ್ಕರಲ್ಲಿ ವ್ಯಕ್ತಿ ಸಂದರ್ಶನ ಪ್ರಶ್ನಾವಳಿ ಮಾದರಿ, ಅನುಬಂಧ ಐದರಲ್ಲಿ ಸಮೀಕ್ಷೆಗೊಳಪಟ್ಟ ಅಂಕಿಅಂಶಗಳು, ಅನುಬಂಧ ಆರರಲ್ಲಿ ಇರುಳಿಗ ಸಮುದಾಯದ ಹಾಡು, ಗಾದೆ, ಒಗಟು, ಅನುಬಂಧ ಏಳರಲ್ಲಿ ದಾಖಲಾತಿಗಳ ವಿವರ ನೀಡಲಾಗಿದೆ. ಅನುಬಂಧ ಎಂಟು ಪತ್ರಿಕೆಗಳಲ್ಲಿ ಪ್ರಕಟಗೊಂಡ ವರದಿಗಳಿದ್ದು, ಕೊನೆಯದಾಗಿ ಅನುಬಂಧ ಒಂಭತ್ತರಲ್ಲಿ ಛಾಯಾಚಿತ್ರಗಳನ್ನು ನೀಡಲಾಗಿದೆ.

೧.೭. ಇರುಳಿಗ ಸಮುದಾಯ ಕುರಿತು ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಇರುಳಿಗ ಸಮುದಾಯ ಕುರಿತು ಅಧ್ಯಯನಗಳು ವಸಾಹತು ಕಾಲಘಟ್ಟದಲ್ಲಿಯೇ ಪ್ರಾರಂಭವಾದವು. ಇರುಳಿಗ ಸಮುದಾಯ ಕುರಿತು ಇಲ್ಲಿಯವರೆಗೂ ನಡೆದಿರುವ ಅಧ್ಯಯನಗಳು ಮುಖ್ಯವಾಗಿ ಅವರ ಜೀವನ ಕ್ರಮ, ಅವರ ಸಾಮಾಜಿಕ ಬದುಕು ಮತ್ತು ಐತಿಹಾಸಿಕ ಹಿನ್ನೆಲೆಯನ್ನು ಕುರಿತದ್ದಾಗಿದೆ. ಈ ಅಧ್ಯಯನಗಳು ಪ್ರಸ್ತುತ ಅಧ್ಯಯನದುದ್ದಕ್ಕೂ ಮಾರ್ಗದರ್ಶಕಗಳಾಗಿವೆ. ಇವುಗಳು ಇರುಳಿಗ ಸಮುದಾಯದ ಕುರಿತ ಭವಿಷ್ಯದ ಅಧ್ಯಯನಗಳಿಗೆ ದಿಕ್ಸೂಚಿ ಗ್ರಂಥಗಳಾಗಿವೆ. ಈ ಗ್ರಂಥಗಳನ್ನು ಅವುಗಳ ಪ್ರಾಮುಖ್ಯತೆಯೊಂದಿಗೆ ಪರಾಮರ್ಶಿಸಲಾಗಿದೆ.

ಎಡ್ಗರ್ ಥರ್ಸ್ಟನ್ ಅವರ Cast and Tribes of South India, ೧೯೦೯, ಎಂಬ ಕೃತಿಯಲ್ಲಿ ಇರುಳಿಗರನ್ನು ಬುಡಕಟ್ಟು ಸಮುದಾಯವೆಂದು ಗುರುತಿಸಲಾಗಿದೆ. ಸುಮಾರು ಒಂದು ಶತಮಾನಗಳ ಹಿಂದೆಯೇ ಇರುಳಿಗರ ವಿವಿಧ ಆಚರಣೆಗಳು, ಸಂಸ್ಕೃತಿ ಸಂಪ್ರದಾಯಗಳ ಕುರಿತ ವಿವರಗಳನ್ನು ಈ ಕೃತಿಯಲ್ಲಿ ಸಂಕ್ಷಿಪ್ತವಾಗಿ ದಾಖಲಿಸಲಾಗಿದೆ.[೧]

ನಂಜುಂಡಯ್ಯ ಮತ್ತು ಅನಂತಕೃಷ್ಣ ಅಯ್ಯರ್ ಅವರು "ದ ಮೈಸೂರು ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್" (The Mysore Tribes and Caste Vol-III), ೧೯೨೮ ಕೃತಿಯಲ್ಲಿ "ಇರುಳಿಗ ಸಮುದಾಯವು ವಾಸ ಮಾಡುವ ಸ್ಥಳಗಳ ವಿವರ, ಸಂಪ್ರದಾಯ, ಹವ್ಯಾಸಗಳು, ವಿಧಿ- ನಿಷೇಧಗಳು, ಧಾರ್ಮಿಕತೆ, ವೃತ್ತಿ, ಸಾಮಾಜಿಕ ಪರಿಸ್ಥಿತಿ, ಬೇಸಾಯ, ಆಹಾರ ಪದ್ಧತಿ, ಉಡುಗೆ ತೊಡುಗೆ ಮುಂತಾದ ಹಲವು ಮಹತ್ವಪೂರ್ಣವಾದ ವಿಷಯಗಳನ್ನು ವಿವರಿಸಲಾಗಿದೆ[೨].

ಕೆ.ಎಸ್.ಸಿಂಗ್ ಅವರ "ಪೀಪಲ್ ಆಫ್ ಇಂಡಿಯಾ - ಕರ್ನಾಟಕ" (People of India-Karnataka, Vol-III), ೨೦೦೩, ನ್ಯಾಷನಲ್ ಸಿರೀಸ್ ಎಂಬ ಕೃತಿಯಲ್ಲಿ ಇರುಳಿಗರಿಗೆ ಸಂಬಂಧಿಸಿದಂತಹ ಜೀವನ ವಿಧಾನ, ಬೇಸಾಯ, ಆಚರಣೆಗಳು, ಭಾಷೆ, ಸಾಮಾಜಿಕ ನಡವಳಿಕೆ, ಸಂಸ್ಕೃತಿಯ ಬಗ್ಗೆ ಬೆಳಕು ಚಲ್ಲಲಾಗಿದ್ದು ಈ ಹಿಂದೆ ಪ್ರಕಟಗೊಂಡ ಗ್ರಂಥಗಳು ನೀಡುವ ವಿವರಗಳನ್ನು ಈ ಗ್ರಂಥವು ನೀಡುತ್ತದೆ[೩].

೧೯೯೩ರಲ್ಲಿ ಉಪಸಂಸ್ಕೃತಿ ಮಾಲೆಯಡಿ ಪ್ರಕಟಗೊಂಡ ಕೃತಿಗಳಲ್ಲಿ ಸಿದ್ಧಲಿಂಗಯ್ಯ ಬಿ. ಕಂಬಾಳ ಈ ಕೃತಿ ಕನ್ನಡದಲ್ಲಿ ಇರುಳಿಗ ಸಮುದಾಯವನ್ನು ಕುರಿತಾದ ಮೊದಲ ಕೃತಿಯಾಗಿದೆ. ಇದರಲ್ಲಿ ಇರುಳಿಗರ ಜೀವನ ವಿಧಾನ, ಸಾಮಾಜಿಕ ವ್ಯವಸ್ಥೆ, ಭಾಷೆ, ಸಾಹಿತ್ಯ, ಆಚರಣೆ, ನಂಬಿಕೆಗಳು, ಆಚರಣೆಗಳ ಕುರಿತಾದ ವಿವರಗಳು ಈ ಕೃತಿಯಲ್ಲಿದೆ[೪].

ಡಾ. ಚಂದ್ರಶೇಖರ ಕಂಬಾರ ಅವರ (ಸಂ), 'ಕನ್ನಡ ಜಾನಪದ ವಿಶ್ವಕೋಶ', ೧೯೮೫, ಸಂಪುಟ-೧ ರಲ್ಲಿ ಇರುಳಿಗ ಸಮುದಾಯದ ಸೃಷ್ಟಿ ಪುರಾಣದ ಜೊತೆಗೆ ಇರುಳಿಗ ಸಮುದಾಯದಲ್ಲಿ ಪ್ರಚಲಿತವಿರುವ ತಂದೆ ಮಗಳ ಸಂಬಂಧದ ಕುರಿತಾದ ಜಾನಪದ ಕಥೆಯ ಮಾಹಿತಿಯನ್ನು ನೀಡಲಾಗಿದೆ[೫].

ಡಾ. ಎಂ. ಭೈರೇಗೌಡರು ಅವರು 'ಇರುಳಿಗರ ಜಾನಪದ ಅಧ್ಯಯನ', ೨೦೦೦ ಎಂಬ ಸಂಶೋಧನಾ ಮಹಾಪ್ರಬಂಧವನ್ನು ರಚಿಸಿದ್ದು, ಇರುಳಿಗರ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆ, ಭಾಷೆ, ಜನಪದ ಸಾಹಿತ್ಯ, ಸಂಪ್ರದಾಯ, ನಂಬಿಕೆ ಹಾಗೂ ಆಚರಣೆಗಳು, ಜಾನಪದ ವೈದ್ಯ ಮತ್ತು ಆರಾಧನೆ, ಸಮುದಾಯದ ಜನರು ವಾಸಮಾಡುವ ಸ್ಥಳಗಳು, ವಿಶಿಷ್ಟ ಆಚರಣೆಗಳ ಬಗ್ಗೆ ವಿವರಗಳನ್ನು ದಾಖಲಿಸಿರುತ್ತಾರೆ[೬].

ಪ್ರೊ. ಎಚ್.ಜೆ. ಲಕ್ಕಪ್ಪಗೌಡ (ಸಂ), 'ಕರ್ನಾಟಕದ ಬುಡಕಟ್ಟುಗಳು', ಸಂಪುಟ-೨ ಎಂಬ ಸಂಪುಟದಲ್ಲಿ ಡಾ. ಕುರುವ ಬಸವರಾಜು ಅವರ ಇರುಳಿಗರು ಎಂಬ ಲೇಖನವು ಇರುಳಿಗ ಸಮುದಾಯದ ಹಿನ್ನೆಲೆ, ಇರುಳಿಗರ ಕುರಿತಾದ ಅಧ್ಯಯನಗಳ ವಿವರಗಳನ್ನು ನೀಡಿದ್ದಾರೆ. ಇರುಳಿಗ ಹೆಸರಿನ ಮೂಲ, ಕಣಿಶಾಸ್ತ್ರ, ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹಿನ್ನೆಲೆ, ಭೌಗೋಳಿಕ ಹಿನ್ನೆಲೆ, ಇತರೆ ಬುಡಕಟ್ಟುಗಳೊಂದಿಗಿನ ಸಾಮ್ಯತೆ, ನ್ಯಾಯ ಪಂಚಾಯಿತಿ, ಕುಲಕಸುಬು, ಮದುವೆ, ಶವಸಂಸ್ಕಾರದ ಬಗ್ಗೆ ಸಮಗ್ರವಾದ ವಿವರಗಳನ್ನು ಈ ಕೃತಿ ನೀಡುತ್ತದೆ[೭].

ಡಾ. ಎ.ಎಸ್.ಪ್ರಭಾಕರ ಅವರ ವಿಶ್ವವಿದ್ಯಾಲಯದ ಧನ ಸಹಾಯ ಯೋಜನಾ ವರದಿಯಲ್ಲಿ (ಪು. ೧ ೧೬ರಲ್ಲಿ) ಕರ್ನಾಟಕದಲ್ಲಿ ಇರುಳಿಗರ ನೆಲೆಗಳು, ಜನಸಂಖ್ಯಾ ವಿವರ, ವಲಸೆ, ಹವ್ಯಾಸ, ಜಿಲ್ಲಾವಾರು ಮಾಹಿತಿ, ಅಂಕಿ-ಅಂಶಗಳು, ಆಹಾರ, ಉಡುಗೆ, ಭಾಷೆ, ಮದುವೆ, ಶವಸಂಸ್ಕಾರದ ವಿವರ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಬೆಳಕು ಚೆಲ್ಲುತ್ತದೆ[೮].

ಡಾ. ಎಂ.ಭೈರೇಗೌಡ ಅವರು 'ಕಾಡು ಬಿಡಲೊಲ್ಲದವರು', ೨೦೦೫, ಕೃತಿಯಲ್ಲಿ ಇರುಳಿಗ ಸಮುದಾಯದ ದೈವಗಳ ನೆಲೆಗಳು, ದೈವಾರಾಧನೆ, ನಾಟಿವೈದ್ಯ ಪದ್ಧತಿ, ನಂಬಿಕೆಗಳು, ವಿಧಿ ನಿಷೇಧಗಳು, ಮಾಟ ಮದ್ದು, ಜನಪದ ಸಾಹಿತ್ಯ, ಭಾಷೆ, ಇರುಳಿಗರು ಸದ್ಯದ ಆರ್ಥಿಕ ಸ್ಥಿತ್ಯಂತರದ ಸಂದರ್ಭದಲ್ಲಿ ಅನುಭವಿಸುತ್ತಿರುವ ತಲ್ಲಣಗಳನ್ನು ದಾಖಲಿಸಲಾಗಿದೆ[೯].

ಆಸಿಫ್ ಶರೀಫ್ ಅವರು 'ರೇಷ್ಮೆ ನಗರ', ೨೦೦೬, ಎಂಬ ಕೃತಿಯಲ್ಲಿ ಇರುಳಿಗರ ಬಗ್ಗೆ ಹಲವು ಮಹತ್ವವಾದ ಅಂಶಗಳನ್ನು ದಾಖಲಿಸಿದ್ದಾರೆ. ಇರುಳಿಗ ಬುಡಕಟ್ಟು ಜನರ ವ್ಯವಸಾಯ ಪದ್ಧತಿ, ಬದುಕು ಬವಣೆ, ಶಾಸ್ತ್ರ ಸಂಪ್ರದಾಯ, ಕಣಿ, ಆಹಾರ ಪದ್ಧತಿಯ ಬಗ್ಗೆ ವಿವರ ನೀಡುವುದರೊಂದಿಗೆ ಇರುಳಿಗ ಸಮುದಾಯವನ್ನು ರಾಮನಗರ ಜಿಲ್ಲೆಯ ಅತ್ಯಂತ ಪ್ರಾಚೀನ ನಿವಾಸಿಗಳು ಎಂದು ಈ ಕೃತಿಯಲ್ಲಿ ತಿಳಿಸಲಾಗಿದೆ[೧೦].

ಡಾ. ಕೆ.ಎಂ. ಮೈತ್ರಿ ಅವರ 'ಬುಡಕಟ್ಟು ಕುಲಕಸುಬುಗಳು', ೨೦೦೨, ಎಂಬ ಕೃತಿಯಲ್ಲಿ ಇರುಳಿಗ ಸಮುದಾಯದ ಕುಲ ಪಂಗಡಕ್ಕೆ ಸಂಬಂಧಿಸಿದ ಆಧಾರಗಳು, ಬಣ್ಣ ಚಹರೆ, ದೈವರಾಧನೆ, ನೆಲೆಗಳು, ಆಹಾರ, ಜೀವನಕ್ರಮ, ಕುಲಕಸುಬುಗಳ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ[೧೧].

ಡಾ. ಮಂಗಳಾ ಶ್ರೀಧರ ಅವರ 'ಬುಡಕಟ್ಟು ವೈದ್ಯ ಸಂಸ್ಕೃತಿ', ೨೦೦೮, ಎಂಬ ಕೃತಿ ಇರುಳಿಗ ಸಮುದಾಯದ ನೆಲೆಗಳ ಪರಿಚಯ, ಹಲವು ಔಷಧಿಗಳ ಬಗ್ಗೆ ಇರುಳಿಗ ಬುಡಕಟ್ಟು ಜನರು ಹೊಂದಿರುವ ಜ್ಞಾನ, ವಿವಿಧ ರೋಗಗಳಿಗೆ ಸಂಬಂಧಿಸಿದಂತೆ ಅವರು ಬಳಸುವ ಗಿಡಮೂಲಿಕೆಗಳು, ಈ ಜನರ ಮಾಂತ್ರಿಕ ವೈದ್ಯದ ಬಗ್ಗೆ ಪರಿಚಯಾತ್ಮಕವಾಗಿ ಮಾಹಿತಿಯನ್ನು ಒದಗಿಸುತ್ತದೆ.[೧೨]

ಡಾ. ಅಂಕನಹಳ್ಳಿ ಪಾರ್ಥ ಅವರ 'ರಾಮನಗರ ಒಂದು ಸಾಂಸ್ಕೃತಿಕ ಅಧ್ಯಯನ', ೨೦೦೮, ಎಂಬ ಕೃತಿಯಲ್ಲಿ ಇರುಳಿಗರ ಸಮುದಾಯದ ಕಣಿಶಾಸ್ತ್ರ ಪದ್ಧತಿ, ತಟ್ಟೆಶಾಸ್ತ್ರ ಪದ್ಧತಿ, ಗರಿಕೆಶಾಸ್ತ್ರ,

ಕಾಣೆಶಾಸ್ತ್ರ, ಕಲ್ಲುಸೇವೆ, ಅವರ ಜೀವನ ವಿಧಾನ ಮುಂತಾದ ಮಾಹಿತಿಗಳನ್ನು ಈ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ.[೧೩]

ಕೆ.ಪಿ. ಸುರೇಶ ಅವರ ಅಪ್ರಕಟಿತ ಪಿಎಚ್.ಡಿ. ಪ್ರಬಂಧ 'ರಾಮನಗರ ಜಿಲ್ಲೆಯ ಸ್ಥಳನಾಮಗಳು' ೨೦೧೧, ಎಂದಿದ್ದು ಅದರಲ್ಲಿ ಇರುಳಿಗ ಸಮುದಾಯದ ದೈವ ನೆಲೆಗಳು ಹಾಗೂ ಇರುಳಿಗರ ನಾಟಿವೈದ್ಯ ಹಾಗೂ ಮಾಂತ್ರಿಕ ವೈದ್ಯದ ಕುರಿತು ವಿವರಿಸಲಾಗಿದೆ. ಇರುಳಿಗ ಸೂಚಿತ ಸ್ಥಳನಾಮಗಳ ಕುರಿತು ವಿವರವಾದ ಮಾಹಿತಿಯನ್ನು ಒದಗಿಸಿದೆ[೧೪].

ಕೆ.ಎಂ. ಮೊಹಂತಿ ಅವರ 'ಕೊಯಮತ್ತೂರು ಜಿಲ್ಲೆ ಇರುಳಿಗ –ಟ್ರೈಬಲ್ ಎಜುಕೇಷನ್ ಇನ್ ಇಂಡಿಯಾ ೧೯೮೦ ಎಂಬ ವರದಿಯನ್ನು ಮಾನವಶಾಸ್ತ್ರ ಅಧ್ಯಯನ ಸಂಸ್ಥೆ, ಮೈಸೂರು ಇವರಿಗೆ ಸಲ್ಲಿಸಿದ್ದಾರೆ. ಈ ವರದಿಯಲ್ಲಿ ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯಲ್ಲಿ ನೆಲೆಸಿರುವ ಇರುಳಿಗ ಸಮುದಾಯದ ಶೈಕ್ಷಣಿಕ ಸ್ಥಿತಿಗತಿ, ಮಹಿಳಾ ಶಿಕ್ಷಣದ ಪ್ರಮಾಣ, ವೃತ್ತಿ, ಆಹಾರ ಮುಂತಾದ ವಿಷಯಗಳನ್ನು ಪ್ರಸ್ತಾಪಿಸಲಾಗಿದೆ[೧೫].

ಕರ್ನಾಟಕ ಸ್ಟೇಟ್ ಗೆಜೆಟಿಯರ್, ಬೆಂಗಳೂರು ರೂರಲ್ ಡಿಸ್ಟ್ರೀಟ್ ಗೆಜೆಟಿಯರ್, ೧೯೯೮, ನಲ್ಲಿ ರಾಮನಗರ ಜಿಲ್ಲೆಯಲ್ಲಿನ ಸಮುದಾಯಗಳ ಕುರಿತು ಕಿರುಪರಿಚಯ ನೀಡಲಾಗಿದೆ. ಈ ಸಮುದಾಯಗಳ ವಿವರದಲ್ಲಿ ಇರುಳಿಗ ಸಮುದಾಯದ ಕುರಿತು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ[೧೬].

ಡಾ. ಹಿ.ಚಿ. ಬೋರಲಿಂಗಯ್ಯ ಅವರು 'ಬುಡಕಟ್ಟು ದೈವರಾಧನೆ' ಅಧ್ಯಯನ ಮಾಲೆ-೧, ೨೦೦೦, ಕೃತಿಯಲ್ಲಿ ಇರುಳಿಗ ಸಮುದಾಯವು ಆಚರಿಸುವ ವಿಶಿಷ್ಟ ರೀತಿಯ ದೈವರಾಧನೆ ಹಾಗೂ ಸಂಪ್ರದಾಯ, ಪ್ರೇತವನ, ನಾಗಾರಾಧನೆಯ ಮೂಲ, ಕಣಿಶಾಸ್ತ್ರ ಹಾಗೂ ಇರುಳಿಗರ ನೆಲೆಗಳ ಕುರಿತಾದ ವಿವರಗಳು ದೊರೆಯುತ್ತವೆ[೧೭].

ಡಾ. ಎ. ರಂಗಸ್ವಾಮಿ ಅವರು 'ಬುಡಕಟ್ಟು ಜಾನಪದ', ೨೦೧೨, ಕಣಿಶಾಸ್ತ್ರದ ಸಂಪ್ರದಾಯದಲ್ಲಿನ ವಿವರಗಳ ಜೊತೆಯಲ್ಲಿಯೇ ಇರುಳಿಗ ಬುಡಕಟ್ಟಿನ ಚಹರೆ, ವಾಸದ ನೆಲೆ, ಆಹಾರಗಳ ಬಗೆಯ ವಿವರವನ್ನು ಗ್ರಂಥದಲ್ಲಿ ನೀಡಿರುತ್ತಾರೆ[೧೮].

ಪ್ರೊ. ಎಚ್.ವಿ. ನಾಗೇಶ ಅವರು 'ಬುಡಕಟ್ಟು ಜನರ ನ್ಯಾಯ ತೀರ್ಮಾನಗಳು', ೨೦೦೩, ಎಂಬ ಕೃತಿಯಲ್ಲಿ ಇರುಳಿಗರ ಕಟ್ಟೆಮನೆಯ ನ್ಯಾಯ ಪಂಚಾಯಿತಿ, ಕೋಲುಗೌಡನ ಪಾತ್ರ, ದಂಡ, ಶಿಕ್ಷೆಯ ವಿವಿಧ ರೂಪಗಳನ್ನು ತಿಳಿಸುತ್ತಾರೆ[೧೯].

ಡಾ. ಡಿ.ಬಿ. ನಾಯಕ (ಸಂ), 'ಗಿರಿಜನ ಸಿರಿ ಡಾ. ಪಿ.ಕೆ. ಖಂಡೋಬಾ ಅಭಿನಂದನ ಸಂಪುಟ', ೨೦೦೩ ದಲ್ಲಿ ಭಾರತದ ಬುಡಕಟ್ಟುಗಳನ್ನು ಪರಿಚಯಿಸುತ್ತಾ ದಕ್ಷಿಣ ಭಾರತದಲ್ಲಿನ ಇರುಳಿಗರ ಜೀವನಕ್ರಮ ಹಾಗೂ ಪರಂಪರೆ, ವೃತ್ತಿ , ವ್ಯವಸಾಯ, ಪಶುಪಾಲನೆ, ಅವರ ಜೀವನ ಮೌಲ್ಯಗಳ ಕುರಿತು ಎ.ಎಸ್. ಪ್ರಭಾಕರ ಮತ್ತು ಲಲಿತ ಎ.ಸಿ. ಅವರ ಲೇಖನಗಳಿವೆ[೨೦].

ಡಾ. ಎ.ಎಸ್. ಪ್ರಭಾಕರ ಅವರ 'ಆದಿವಾಸಿ ಅಖ್ಯಾನ – ಸಮುದಾಯಗಳ ಅಧ್ಯಯನದ ಆಕರ', ೨೦೦೬, ಎಂಬ ಕೃತಿ ಇರುಳಿಗರು ವಾಸಿಸುವ ನೆಲೆಗಳು, ವೃತ್ತಿ ಬದುಕು ಹಾಗೂ ಇತರೆ ಸಮುದಾಯಗಳ ಬಗ್ಗೆ ಬುಡಕಟ್ಟುಗಳನ್ನು ಅಭ್ಯಾಸ ಮಾಡುವವರಿಗೆ ಬಹುಮುಖ್ಯವಾದ ವಿವರಗಳನ್ನು ನೀಡುತ್ತದೆ[೨೧].

Indigenous Knowledege on Medicinal Plants among the Iruliga Tribal (Department of Anothropology, University of Mysore, Vol-9, 2013.) ಪಶ್ಚಿಮ ಘಟ್ಟದಲ್ಲಿರುವ ವಿವಿಧ ರೀತಿಯ ಔಷಧಿಯ ಗಿಡಮೂಲಿಕೆ ಮತ್ತು ಇರುಳಿಗರ ಹೆಸರಿನ ಮೂಲ, ಇತ್ತೀಚಿನ ಬದಲಾವಣೆ, ಸುಮಾರು ೧೭ಕ್ಕೂ ಹೆಚ್ಚು ರೋಗಗಳಿಗೆ ಇರುಳಿಗರು ನೀಡುವ ಔಷಧಿ, ನಾಟಿ ವೈದ್ಯದಲ್ಲಿ ಬಳಕೆಯಾಗುವ ಸಸ್ಯಗಳ ವೈಜ್ಞಾನಿಕ ವಿವರಗಳನ್ನು ಪರಿಚಯಿಸುತ್ತದೆ[೨೨].

ಡಾ. ಪಳನಿದಾಸ್ ಅವರ 'ಇರುಳರ ಭಾಷೆ', ೨೦೧೩, (ಕೊಯಂಬತ್ತೂರು ವಿಶ್ವವಿದ್ಯಾಲಯ, ಕೊಯಂಬತ್ತೂರು) ಇರುಳಿಗರ ಭಾಷೆಯ ಮೂಲ, ವಿವಿಧ ರಾಜ್ಯದಲ್ಲಿರುವ ಇರುಳಿಗ ಭಾಷೆಯ ಮಧ್ಯದಲ್ಲಿರುವ ವ್ಯತ್ಯಾಸ, ಈ ಸಮುದಾಯದವರ ಮಾತನಾಡುವ ಭಾಷೆಯ ಪದದಲ್ಲಿರುವ ದೇಶೀಯ ಭಾಷೆಗಳ ಪ್ರಭಾವ ಮುಂತಾದ ವಿವರಗಳನ್ನು ಒದಗಿಸುತ್ತದೆ[೨೩].

ಕೆ.ಎಸ್. ಸಿಂಗ್ 'ಟ್ರೈಬಲ್ಸ್ ಮೂಮೆಂಟ್ ಇನ್ ಇಂಡಿಯಾ', ೨೦೦೬, ಈ ಕೃತಿಯಲ್ಲಿ ಭಾರತದ ಬುಡಕಟ್ಟುಗಳ ಬಗ್ಗೆ ವಿವರ ನೀಡುವುದರ ಜೊತೆಗೆ ಕರ್ನಾಟಕದಲ್ಲಿ ಬುಡಕಟ್ಟು ಇರುಳಿಗರ ಬಗ್ಗೆ, ಅವರು ವಾಸಿಸುವ ಇತರ ರಾಜ್ಯಗಳ ವಿವರ, ಜನಸಂಖ್ಯೆ ಶೇಕಡವಾರು ವಿವರಣೆಗಳು ದೊರೆಯುತ್ತದೆ[೨೪].

ಚನ್ನ ಎಸ್.ಎಂ. (ಸಂ), 'ಎನ್‌ಸೈಕ್ಲೋಪಿಡಿಯಾ ಆಫ್ ಇಂಡಿಯನ್ ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್', ೨೦೦೪, ಇರುಳಿಗ ಸಮುದಾಯವು ಮಾಡುವ ಮೂಲವೃತ್ತಿ, ಸಂಪ್ರದಾಯ, ಪರಂಪರೆ ಬೇರೆ ಬೇರೆ ರಾಜ್ಯದಲ್ಲಿರುವ ಇವರ ಪರಿಸ್ಥಿತಿ, ದೈವರಾಧನೆ, ವಾಸಸ್ಥಳ, ಸಂಸ್ಕೃತಿ, ಆಹಾರಭ್ಯಾಸ ಮತ್ತು ಭಾಷೆ ಮುಂತಾದ ಮಾಹಿತಿಯನ್ನು ನೀಡುತ್ತದೆ[೨೫].

ಡಾ. ಹಿ.ಚಿ. ಬೋರಲಿಂಗಯ್ಯ, ಡಾ. ಎ.ಎಸ್. ಪ್ರಭಾಕರ ಅವರು 'ಕರ್ನಾಟಕ ಬುಡಕಟ್ಟು ಚಿತ್ರ ಸಂಪುಟ', ೨೦೧೩, ಕರ್ನಾಟಕದಲ್ಲಿ ವಾಸಮಾಡುವ ಬುಡಕಟ್ಟುಗಳ ಬಗ್ಗೆ ಛಾಯಾಚಿತ್ರ ಸಹಿತ ವಿವರಗಳನ್ನು ನೀಡಲಾಗಿದೆ. ಹಾಗೆಯೇ ಇರುಳಿಗರ ಹೆಸರಿನ ಮೂಲ, ಅವರು ವಾಸಿಸುವ ನೆಲೆಗಳು, ಕಣಿಶಾಸ್ತ್ರ ಮುಂತಾದ ವಿವರಗಳಿವೆ[೨೬].

ಡಾ. ಮುನಿರಾಜಪ್ಪ ಅವರ 'ಮಾಗಡಿ ಸೀಮೆಯ ಇತಿಹಾಸ', ೨೦೦೫, ಕೃತಿಯು ಮಾಗಡಿಯ ಪ್ರದೇಶದಲ್ಲಿನ ಇರುಳಿಗರ ಸಾಮಾಜಿಕ ಬದುಕು, ನೆಲೆ, ಸಂಸ್ಕೃತಿ, ಸಂಪ್ರದಾಯ ಜೀವನಾವರ್ತನ ಹಾಗೂ ವಾರ್ಷಿಕಾವರ್ತನ ಆಚರಣೆಗಳ ಕುರಿತ ಮಾಹಿತಿಯನ್ನು ನೀಡುತ್ತದೆ[೨೭].

ಪ್ರೊ. ಡಿ. ಲಿಂಗಯ್ಯ ಮತ್ತು ಚಕ್ಕರೆ ಶಿವಶಂಕರ ಅವರು 'ಸ್ಥಳನಾಮಗಳ ಅಧ್ಯಾಯ-ಸಂವಾದ', ೨೦೦೮, ಕೃತಿಯಲ್ಲಿ ಬೆಂಗಳೂರು ಗ್ರಾಮಾಂತರ ವ್ಯಾಪ್ತಿಯಲ್ಲಿನ ಸ್ಥಳಗಳ ಬಗ್ಗೆ ವಿಶ್ಲೇಷಿಸುವಾಗ ಇರುಳಿಗ ಸಮುದಾಯದ ಹಿರಿಯರ ಹೆಸರಿನಿಂದ ಕರೆಯುವ ಗ್ರಾಮಗಳು, ದೊಡ್ಡಿಗಳು ಹಾಗೂ ಆ ಹೆಸರುಗಳು ಬರಲು ಕಾರಣ ಮತ್ತು ಸಮುದಾಯದ ವ್ಯಕ್ತಿಗಳ ಹಿನ್ನೆಲೆಯ ಬಗ್ಗೆ ವಿವರಗಳನ್ನು ದಾಖಲಿಸಿದ್ದಾರೆ. ಇದು ಸಮುದಾಯದಲ್ಲಿನ ವ್ಯಕ್ತಿಗಳ ವಿವರ ಹಾಗೂ ಪರಂಪರೆಯನ್ನು ಪರಿಚಯಿಸುತ್ತದೆ[೨೮].

'ಕನ್ನಡ ವಿಷಯ ವಿಶ್ವಕೋಶ ಜಾನಪದ', ೨೦೦೮, ಕುವೆಂಪು ಕನ್ನಡ ಅಧ್ಯಯನ ಕೇಂದ್ರ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಈ ವಿಶ್ವಕೋಶದಲ್ಲಿ ಇರುಳಿಗರ ಜಾನಪದ ಆಚರಣೆಗಳು, ದೈವರಾಧನೆಯ ವಿವಿಧ ರೂಪಗಳು ಹಾಗೂ ಜಾನಪದ ವೈದ್ಯ ಪದ್ಧತಿಯ ಬಗ್ಗೆ ವಿವರಗಳಿವೆ[೨೯].

ಡಾ. ಮೋಹನ್ ಚಂದ್ರಗುತ್ತಿ ಅವರು 'ಸಮಪಾಲು', ೨೦೧೩, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, ಕೃತಿಯಲ್ಲಿ ಆದಿವಾಸಿ ಪರಂಪರೆಯಲ್ಲಿನ ಮಹಾಕಾವ್ಯಗಳ ಬಗ್ಗೆ ವಿವರವನ್ನು ದಾಖಲಿಸುತ್ತಾ ಇರುಳಿಗರ ಸೃಷ್ಟಿ ಪುರಾಣದ ಬಗ್ಗೆ ಪರಿಚಯಿಸಿರುತ್ತಾರೆ[೩೦].

ಸಚ್ಚಿದಾನಂದನ್ (ಸಂ), 'ಎನ್‌ಸೈಕ್ಲೋಪಿಡಿಯಾ ಆಫ್ ಇಂಡಿಯನ್ ಟ್ರೈಬ್ಸ್ ಆ್ಯಂಡ್ ಕ್ಯಾಸ್ಟ್', ೧೯೯೮, ಇರುಳಿಗ ಸಮುದಾಯದ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆ ಬೇರೆ ಬೇರೆ ರಾಜ್ಯಗಳಲ್ಲಿನ ವೃತ್ತಿಗೆ ಸಂಬಂಧಿಸಿದ ವಿವರಗಳನ್ನು ವಿವಿಧ ಲೇಖನಗಳಲ್ಲಿ ಕಂಡುಬರುತ್ತದೆ[೩೧].

ರೇಣುಕಾ ಕೋಡಗುಂಟಿ (ಸಂ), 'ಕರ್ನಾಟಕದಲ್ಲಿ ಶವಸಂಸ್ಕಾರ', ೨೦೦೯, ಕೃತಿಯಲ್ಲಿ ಕರ್ನಾಟಕದಲ್ಲಿನ ಬಹುತೇಕ ಸಮುದಾಯಗಳ ಶವಸಂಸ್ಕಾರ ಸಂಸ್ಕೃತಿಯ ವಿವರ ನೀಡುತ್ತಾ ಇರುಳಿಗರ ಕಲ್ಲುಸೇವೆ, ಶವಸಂಸ್ಕಾರದ ಬಗ್ಗೆ ಬಹಳಷ್ಟು ವಿವರಗಳನ್ನು ನೀಡುತ್ತಾರೆ. ಹಾಗೂ ಇತರೆ ಸಮುದಾಯ ಮತ್ತು ಬುಡಕಟ್ಟು ಸಮುದಾಯದಲ್ಲಿ ಹಲವು ವ್ಯತ್ಯಾಸಗಳ ವಿವರವನ್ನು ನೀಡಿರುತ್ತಾರೆ[೩೨].

ರಾಜೇಶ್ ಕೆ. (ಮುಖ್ಯ ಸಂಪಾದಕರು), ಯೋಜನಾ ಅಭಿವೃದ್ಧಿ, (ಜನವರಿ ೨೦೧೪), ಮಾಸ ಪತ್ರಿಕೆಯಲ್ಲಿ ಬುಡಕಟ್ಟು ಕಾನೂನು, ಮೂಲನಿವಾಸಿ, ಕಾಡಿನ ಆಹಾರ, ಜಾಗತೀಕರಣ, ಬುಡಕಟ್ಟು ಸಮಾಜ, ಅರಣ್ಯವಾಸಿ ಮಹಿಳೆ ಮತ್ತು ಸಮಸ್ಯೆ, ಬುಡಕಟ್ಟು ನುಡಿ ಎಂಬ ಲೇಖನದಲ್ಲಿ ದ್ರಾವಿಡ ನುಡಿ ಕುಟುಂಬಕ್ಕೆ ಸೇರಿದ ಇರುಳಿಗರ ಭಾಷೆಯ ಬಗ್ಗೆ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ[೩೩].

ಡಾ. ಎಸ್.ಎಸ್. ಅಂಗಡಿ ಅವರು 'ಕರ್ನಾಟಕ ಬುಡಕಟ್ಟು ಭಾಷೆ', ೨೦೦೮, ಎಂಬ ಕೃತಿಯಲ್ಲಿ ಇರುಳ ಸಮುದಾಯದ ಮಾಟ ಮಂತ್ರ, ಕಣಿಯ ಹಿನ್ನೆಲೆಯಲ್ಲಿ ಭಾಷೆಯ ಸಾಮಾಜಿಕ ನೆಲೆಯ ಬಗ್ಗೆ ಹಾಗೂ ದೈವರಾಧನೆಯಲ್ಲಿ ಭಾಷೆಯ ಪ್ರಯೋಗದ ಬಗ್ಗೆ ವಿವರಗಳು ದೊರೆಯುತ್ತವೆ.[೩೪].

ಡಾ. ಎಚ್.ಡಿ. ಪ್ರಶಾಂತ್ ಅವರು 'ಜನ ಸಮುದಾಯ ಕರ್ನಾಟಕ ರಾಜ್ಯಕೋಶ-೪', ೨೦೦೦, ಜನಸಮುದಾಯ ಸಂಪುಟದಲ್ಲಿ ಇರುಳಿಗರು ಮತ್ತು ಇಲ್ಲಿಗ ಒಂದೇ ಆಗಿರುತ್ತದೆ ಎಂದು

ಅಭಿಪ್ರಾಯಪಟ್ಟಿರುತ್ತಾರೆ. ವಿವಾಹ, ನ್ಯಾಯ ಪಂಚಾಯಿತಿ, ಆರ್ಥಿಕತೆ, ಸಾಮಾಜಿಕ ಪರಿಸ್ಥಿತಿಯ ಬಗ್ಗೆ ವಿವರ ನೀಡಿರುತ್ತಾರೆ[೩೫].

ಡಾ. ಕೆ. ಕೆಂಪೇಗೌಡ ಅವರು 'ಎ ಬ್ರೀಫ್ ಸರ್ವೆ ಆಫ್ ದ್ರಾವಿಡಿಯನ್ ಟ್ರೈಬಲ್ಸ್ ಲಾಂಗ್ವೇಜ್ ಆಫ್ ಕರ್ನಾಟಕ', ೧೯೯೪, ಕರ್ನಾಟಕದಲ್ಲಿ ಇರುಳಿಗ ಸಮುದಾಯದ ಜನರು ವಾಸಿಸುವ ನೆಲೆಗಳು ಹಾಗೂ ಭಾಷೆಯ ಬಗ್ಗೆ ಕೆಲವು ವಿವರಗಳಿವೆ[೩೬].

'ಜಾತಿ ವರ್ಗೀಕರಣ ಪಟ್ಟಿ', ೨೦೧೩, ಕರ್ನಾಟಕ ಸರ್ಕಾರದ ಜಾತಿ ವರ್ಗೀಕರಣ ವ್ಯವಸ್ಥೆಯಲ್ಲಿ 'ಇರುಳಿಗ' ಮತ್ತು 'ಇರುಳರ್' ಎಂಬ ಎರಡು ಹೆಸರನ್ನು ಪ್ರಕಟಿಸಿದ್ದು ಕಲಂ ೧೩ ಮತ್ತು ೧೪ರಲ್ಲೂ ಪ್ರಕಟಿಸುತ್ತದೆ[೩೭].

೨೦೦೯ರ ಬುಡಕಟ್ಟು ಅಧ್ಯಯನ ವಿಭಾಗ ಹಂಪಿ ವಿಶ್ವವಿದ್ಯಾಲಯ ಅರ್ಧವಾರ್ಷಿಕ ಸಂಚಿಕೆ, ಇರುಳಿಗರ ಆರ್ಥಿಕ ಸ್ಥಿತಿಗತಿ ಮತ್ತು ಸಾಮಾಜಿಕ ವ್ಯತ್ಯಾಸಗಳ ಕುರಿತು ಹಾಗೂ ಇತರೆ ಸ್ಥಿತ್ಯಂತರ ಬಗ್ಗೆ ವಿವರ ದೊರೆಯುತ್ತದೆ[೩೮].

ಡಾ. ಆರ್. ರಾಮಕೃಷ್ಣ ಅವರ 'ಕರ್ನಾಟಕದ ಬುಡಕಟ್ಟುಗಳು', ೨೦೦೭, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಇರುಳಿಗರ ಸಾಮಾಜಿಕ ಬದುಕು, ಆಹಾರ ಪದ್ಧತಿ, ಅವರ ವಾಸ ಸ್ಥಳದ ಬಗ್ಗೆ ಹಾಗೂ ಇಲಿ ಬೇಟೆಯ ವಿವರಗಳನ್ನು ನೀಡುತ್ತದೆ[೩೯].

'ಮೈಸೂರು ರಾಜ್ಯ ಸರ್ಕಾರಿ ರಾಜ್ಯ ಪತ್ರ', ಸೆಪ್ಟೆಂಬರ್ ೨೮, ೧೯೫೦ರ ಪ್ರಕಾರ ಇರುಳಿಗರನ್ನು ಎಸ್.ಟಿ.(ಪರಿಶಿಷ್ಟ ಪಂಗಡ)ಗೆ ಸೇರಿಸಲಾಗಿದೆ. (ಸರ್ಕಾರಿ ಆದೇಶ ನಂ.ಎಲ್.ಡಿ ೧೯೧೩-Legic-5-50-16 ಬೆಂಗಳೂರು, ೨೦ ಸೆಪ್ಟೆಂಬರ್, ೧೯೫೦) Reg No. MG 1176/ ದಿನಾಂಕ ೨೦.೯.೧೯೫೦[೪೦].

'ರಾಮನಗರ ಜಿಲ್ಲಾ ಅಂಕಿ-ಅಂಶಗಳ ನೋಟ, ೨೦೧೨-೧೩, ಜಿಲ್ಲಾ ಸಂಗ್ರಹಣಾಧಿಕಾರಿಗಳ ಕಚೇರಿ, ರಾಮನಗರ ಜಿಲ್ಲೆ ಕೃತಿಯಲ್ಲಿ ಈ ಜಿಲ್ಲೆಯ ಸಂಪೂರ್ಣ ಅಂಕಿ ಅಂಶಗಳ ವಿವರಗಳನ್ನು ನೀಡುತ್ತದೆ. ರಾಮನಗರ ಜಿಲ್ಲೆಯ ಬಗ್ಗೆ ಪರಿಪೂರ್ಣವಾದ ಮಾಹಿತಿಯನ್ನು ಒದಗಿಸುತ್ತದೆ.[೪೧]

ವೆಂಕಟೇಶ್, ಬುಡಕಟ್ಟು ಸಾಮಾಜಿಕ ಬದಲಾವಣೆ (ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ಅನುಲಕ್ಷಿಸಿ), ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ೨೦೧೧, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಈ ಕೃತಿಯು ಬೆಂಗಳೂರು ಗ್ರಾಮಾಂತರ ಜಿಲ್ಲೆಯೊಳಗಿರುವ ಬುಡಕಟ್ಟು ಸಮುದಾಯಗಳ ಕುರಿತು ಅಧ್ಯಯನ ಮಾಡಲಾಗಿದೆ.[೪೨]

ಕೆ.ಸಿ. ಪ್ರಕಾಶ ಅವರ 'ಕನಕಪುರ ಪ್ರದೇಶದ ಇತಿಹಾಸ ಸಂಸ್ಕೃತಿ'(ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ೨೦೧೨, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕನಕಪುರ ಪ್ರದೇಶದಲ್ಲಿನ ಸಮುದಾಯಗಳನ್ನು ಸ್ಥೂಲವಾಗಿ ತಿಳಿಸಿಕೊಡುವಾಗ ಇರುಳಿಗ ಸಮುದಾಯದ ಬಗ್ಗೆ ಕೂಡ ವಿವರಗಳನ್ನು ನೀಡಲಾಗಿದೆ[೪೩].

ಮೇಲಿನ ಬಹುತೇಕ ಎಲ್ಲಾ ಕೃತಿಗಳು ತಮ್ಮ ಅಧ್ಯಯನದ ಮಿತಿಯನ್ನೊಳಗೊಂಡು, ಇರುಳಿಗ ಸಮುದಾಯವನ್ನು ಅಭ್ಯಸಿಸಲು ವಿಪುಲ ತಿಳುವಳಿಕೆಯನ್ನು ನೀಡಿದೆ. ಹಾಗೆಯೇ ಪ್ರಸ್ತುತ ಸಂಶೋಧನೆಗೆ ದಾರಿದೀಪವಾಗಿ ಮಾರ್ಗದರ್ಶನ ನೀಡಿದೆ. ಈ ಎಲ್ಲಾ ಕೃತಿಗಳನ್ನು ಗಮನದಲ್ಲಿರಿಸಿಕೊಂಡು ನೋಡಿದಾಗ ಇರುಳಿಗರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ಅಧ್ಯಯನ ನಡೆದಿಲ್ಲ. ಆದಕಾರಣ ಪ್ರಸ್ತುತ ಇರುಳಿಗ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ, ವರ್ತಮಾನದ ಸ್ಥಾನಮಾನ ಹಾಗೂ ಅವರ ಸಂಘಟನೆಯ ಬವಣೆಗಳನ್ನು ಅವಲೋಕಿಸಿ ಅಧ್ಯಯನ ನಡೆಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಅಡಿಟಿಪ್ಪಣಿಗಳು

೧. Edgor Thurston, K. Rangachari, Castes and Tribes of Southern India, Vol-I to VII, Asian Educational Services, New Delhi, Pp. 372-391, 1909.

೨. Nanjunadayya and Ananthkrishana Ayyar, The Mysore Tribes and Castes Vol-III, Mittal Publication, New Delhi, Pp. 378-394, 1928.

೩. K.S. Singh, People of India-Karnataka Vol-III, Anthropological Survey of India, New Delhi, Pp. 656-660, 2003.

೪. ಸಿದ್ಧಗಂಗಯ್ಯ ಬಿ. ಕಂಬಾಳ, ಇರುಳಿಗರ ಉಪಸಂಸ್ಕೃತಿ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು. ೧೮೦, ೧೯೯೩.

೫. ಚಂದ್ರಶೇಖರ ಕಂಬಾರ (ಸಂ), ಕನ್ನಡ ಜಾನಪದ ವಿಶ್ವಕೋಶ, ೧೯೮೫, ಸಂಪುಟ-೧, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ಪು. ೧೭೮-೧೭೯, ೧೯೮೫.

೬. ಭೈರೇಗೌಡ ಎಂ., ಇರುಳಿಗರ ಜಾನಪದ ಅಧ್ಯಯನ, ಸಿ.ಜಿ.ಕೆ. ಪಬ್ಲಿಕೇಷನ್, ಬೆಂಗಳೂರು, ಪು. ೪೬೪ ೨೦೦೦.

೭. ಲಕ್ಕಪ್ಪಗೌಡ ಎಚ್.ಜೆ. (ಸಂ), ಕರ್ನಾಟಕದ ಬುಡಕಟ್ಟುಗಳು, ಸಂಪುಟ-೨, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ಪು. ೫೭-೯೦, ೨೦೦೦.

೮. ಪ್ರಭಾಕರ ಎ.ಎಸ್., ಕನ್ನಡ ವಿಶ್ವವಿದ್ಯಾಲಯದ ಯುಜಿಸಿ ಯೋಜನಾ ವರದಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಪು. ೧೬೭-೧೮೮, ೨೦೦೮.

೯. ಭೈರೇಗೌಡ ಎಂ., ಕಾಡು ಬಿಡಲೊಲ್ಲದವರು, ದಾಮಿನಿ ಸಾಹಿತ್ಯ ಪ್ರಕಾಶನ, ಬೆಂಗಳೂರು, ಪು. ೩೫೮, ೨೦೦೫.

೧೦. ಆಸಿಫ್ ಶರೀಫ್, ರೇಷ್ಮೆ ನಗರ, ಅಂಕನಹಳ್ಳಿ ಪ್ರಕಾಶನ, ರಾಮನಗರ, ಪು. ೧೨೪-೧೩೨, ೨೦೦೬.

೧೧. ಮೈತ್ರಿ ಕೆ.ಎಂ., ಬುಡಕಟ್ಟು ಕುಲಕಸುಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಯ, ಹಂಪಿ, ವಿದ್ಯಾರಣ್ಯ, ಪು. ೯೨-೯೭, ೨೦೦೨.

೧೨. ಮಂಗಳಾ ಶ್ರೀಧರ, ಬುಡಕಟ್ಟು ವೈದ್ಯ ಸಂಸ್ಕೃತಿ, ಕೆ.ಎಸ್. ಮುದ್ದಪ್ಪ ಪ್ರತಿಷ್ಠಾನ, ರಾಮನಗರ, ಪು. ೪೩-೬೪, ೨೦೦೮.

೧೩. ಅಂಕನಹಳ್ಳಿ ಪಾರ್ಥ, ರಾಮನಗರ ಒಂದು ಸಾಂಸ್ಕೃತಿಕ ಅಧ್ಯಯನ, ಅಂಕನಹಳ್ಳಿ ಪ್ರಕಾಶನ, ಕೈಲಂಚ, ರಾಮನಗರ, ಪು. ೧೬೮- ೧೭೦, ೨೦೦೮.

೧೪. ಸುರೇಶ ಕೆ.ಪಿ., ರಾಮನಗರ ಜಿಲ್ಲೆಯ ಸ್ಥಳನಾಮಗಳು, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಯ, ಹಂಪಿ, ವಿದ್ಯಾರಣ್ಯ, ಪು. ೨೩೬-೨೩೮, ೨೦೧೧.

೧೫. ಮೊಹಂತಿ ಕೆ.ಎಂ., 'ಟ್ರೈಬಲ್ ಎಜುಕೇಷನ್ ಇನ್ ಇಂಡಿಯಾ ಕೊಯಮತ್ತೂರು ಜಿಲ್ಲೆ ಇರುಳಿಗರು ವರದಿ', ಭಾರತೀಯ ಮಾನವಶಾಸ್ತ್ರೀಯ ಸರ್ವೇಕ್ಷಣಾ ಸಂಸ್ಥೆ, ಮೈಸೂರು, ಪು. ೧೦-೬೪, ೧೯೮೦.

೧೬. ಕರ್ನಾಟಕ ಸ್ಟೇಟ್ ಗೆಜೆಟಿಯರ್, ಬೆಂಗಳೂರು ರೂರಲ್ ಡಿಸ್ಟ್ರಿಟ್ ಗೆಜೆಟಿಯರ್, ಕರ್ನಾಟಕ ಸರ್ಕಾರ, ಪು. ೩೩೫-೩೫೯, ೧೯೯೮.

೧೭. ಬೋರಲಿಂಗಯ್ಯ ಹಿ.ಚಿ., ಬುಡಕಟ್ಟು ದೈವರಾಧನೆ, ಅಧ್ಯಯನ ಮಾಲೆ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಪು. ೬೩-೬೯, ೨೦೦೦.

೧೮. ರಂಗಸ್ವಾಮಿ ಎ., ಬುಡಕಟ್ಟು ಜಾನಪದ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು, ಪು. ೧೬-೧೮, ೨೦೧೨.

೧೯. ನಾಗೇಶ ಎಚ್.ವಿ., ಬುಡಕಟ್ಟು ಜನರ ನ್ಯಾಯ ತೀರ್ಮಾನಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. ೨೫, ೨೦೦೩.

೨೦. ನಾಯಕ ಡಿ.ಬಿ. (ಸಂ), ಗಿರಿಜನ ಸಿರಿ, ಡಾ. ಪಿ.ಕೆ.ಖಂಡೋಬಾ ಅಭಿನಂದನ ಸಂಪುಟ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ಪು. ೧೮೯-೨೨೦, ೨೦೦೩.

೨೧. ಪ್ರಭಾಕರ ಎ.ಎಸ್., ಆದಿವಾಸಿ ಅಖ್ಯಾನ ಸಮುದಾಯಗಳ ಅಧ್ಯಯನದ ಆಕರ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ಪು. ೧೫೬-೧೫೮, ೨೦೦೬.

೨೨. Indigenous Knowledege on Medicinal Plants among the Iruliga Tribal Department of Anothropology, University of Mysore, Vol-9, Pp.195-203, 2013.

೨೩. ಪಳನಿದಾಸ್. ಇರುಳಿಗರ ಭಾಷೆ, ಅಂತರ್ಜಾಲ, ಪು.೩, ೨೦೧೩.

೨೪. Singh K.S., Tribal Movements in India, Vol-2, Monohar Publication, New Delhi, Pp. 325-337, 2006.

೨೫. Channa S.M. (Edit), Encyclopaedia of Indian Tribes and Castes, Vol-8, COSM Publication, New Delhi, Pp. 2303-2309, 2004.

೨೬. ಬೋರಲಿಂಗಯ್ಯ ಹಿ.ಚಿ., ಪ್ರಭಾಕರ ಎ.ಎಸ್., ಕರ್ನಾಟಕ ಬುಡಕಟ್ಟು ಚಿತ್ರ ಸಂಪುಟ, ವಾರ್ತಾ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ಪು. ೮೧–೮೬, ೨೦೧೩.

೨೭. ಮುನಿರಾಜಪ್ಪ, ಮಾಗಡಿ ಸೀಮೆಯ ಇತಿಹಾಸ, ಸ್ಫೂರ್ತಿ ಪ್ರಕಾಶನ, ಹೊಸಪಾಳ್ಯ, ಪು. ೧೧೩–೧೧೫, ೨೦೦೫.

೨೮. ಲಿಂಗಯ್ಯ ಡಿ. ಮತ್ತು ಚಕ್ಕರೆ ಶಿವಶಂಕರ, ಸ್ಥಳನಾಮಗಳ ಅಧ್ಯಾಯ ಸಂವಾದ, ಪ್ರಕಾಶನ ಜಾನಪದ ಪರಿಷತ್ತು, ಬೆಂಗಳೂರು, ಪು.೧೬, ೨೦೦೮.

೨೯. ನಾಯಕ ಹ.ಮಾ., ಕನ್ನಡ ವಿಷಯ ವಿಶ್ವಕೋಶ ಜಾನಪದ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಪು. ೭೫–೮೦, ೧೯೭೬.

೩೦. ಮೋಹನ್ ಚಂದ್ರಗುತ್ತಿ, ಸಮಪಾಲು, ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ ಜಿಲ್ಲೆ, ಪು. ೧೭–೨೧, ೨೦೧೩.

೩೧. Sachhidanandan (Edit), Encyclopaedie Profile of Indian tribes, Vol-II, Discovery Publication, New Delhi, Pp. 345-350, 1998.

೩೨. ರೇಣುಕಾ ಕೋಡಗುಂಟಿ (ಸಂ), ಕರ್ನಾಟಕದಲ್ಲಿ ಶವಸಂಸ್ಕಾರ, ಭಂಡಾರ ಪ್ರಕಾಶನ ಮಸ್ಕಿ, ಪು. ೮೬–೯೩, ೨೦೦೯.

೩೩. ರಾಜೇಶ್ ಕೆ.ಜೆ., ಯೋಜನಾ ಅಭಿವೃದ್ಧಿ ಮಾಸಪತ್ರಿಕೆ, ಸಮಾಚಾರ ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಪು. ೩, ಜನವರಿ ೨೦೧೪.

೩೪. ಅಂಗಡಿ ಎಸ್.ಎಸ್., ಕರ್ನಾಟಕ ಬುಡಕಟ್ಟು ಭಾಷೆ, ಸೃಷ್ಟಿ ಪಬ್ಲಿಕೇಷನ್, ಬೆಂಗಳೂರು, ಪು. ೧೮೦–೧೯೮, ೨೦೦೮.

೩೫. ಪ್ರಶಾಂತ್ ಎಚ್.ಡಿ., ಜನ ಸಮುದಾಯ ಕರ್ನಾಟಕ ರಾಜ್ಯಕೋಶ-೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೫–೬, ೨೦೦೦.

೩೬. Kempegouda K., A Brief Survey of Dravidian Tribal Languages of Karnataka, Mysore University, Mysore, Pp. 55-94, 1993.

೩೭. ಜಾತಿ ವರ್ಗೀಕರಣ ಪಟ್ಟಿ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಪು. ೧–೧೮, ೨೦೧೩.

೩೮. ಬುಡಕಟ್ಟು ಅಧ್ಯಯನ, ಸಂಪುಟ–೬, ಸಂಚಿಕೆ–೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಜನವರಿ–ಜೂನ್ ೨೦೦೯.

೩೯. ರಾಮಕೃಷ್ಣ ಆರ್., ಕರ್ನಾಟಕದ ಬುಡಕಟ್ಟುಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಪು. ೮-೨೧, ೨೦೦೭.

೪೦. ಮೈಸೂರು ರಾಜ್ಯ ಸರ್ಕಾರಿ ರಾಜ್ಯ ಪತ್ರ, ಮೈಸೂರು ರಾಜ್ಯ ಸರ್ಕಾರ, ಪು. ೫೯೩-೫೯೬, ಸೆಪ್ಟೆಂಬರ್ ೨೮, ೧೯೫೦.

೪೧. ರಾಮನಗರ ಜಿಲ್ಲಾ ಅಂಕಿ-ಅಂಶಗಳ ನೋಟ', ಜಿಲ್ಲಾ ಸಂಗ್ರಹಣಾಧಿಕಾರಿಗಳ ಕಚೇರಿ, ರಾಮನಗರ, ಪು. ೧-೧೮, ೨೦೧೨-೧೩.

೪೨. ವೆಂಕಟೇಶ್, ಬುಡಕಟ್ಟು ಸಾಮಾಜಿಕ ಬದಲಾವಣೆ (ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ಅನುಲಕ್ಷಿಸಿ), ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೧೦-೨೩೨, ೨೦೧೧.

೪೩. ಪ್ರಕಾಶ ಕೆ.ಸಿ., ಕನಕಪುರ ಪ್ರದೇಶದ ಇತಿಹಾಸ ಸಂಸ್ಕೃತಿ'(ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೮-೧೯, ೨೦೧೨.

ಅಧ್ಯಾಯ ಎರಡು

ರಾಮನಗರ ಜಿಲ್ಲೆಯ ಚಾರಿತ್ರಿಕ ಹಾಗೂ ಭೌಗೋಳಿಕ ವಿವರ

ಕರ್ನಾಟಕ ರಾಜ್ಯದ ೩೦ ಜಿಲ್ಲೆಗಳ ಪೈಕಿ ರಾಜ್ಯದ ರಾಜಧಾನಿಗೆ ಅತೀ ಹತ್ತಿರದಲ್ಲಿರುವ ಜಿಲ್ಲೆ ರಾಮನಗರ ಜಿಲ್ಲೆ. ಈ ಜಿಲ್ಲೆಯು ಭೌಗೋಳಿಕವಾಗಿ ದಕ್ಷಿಣ ಪ್ರಸ್ಥಭೂಮಿಯ ಎತ್ತರವಾದ ಪ್ರದೇಶದಿಂದ ಆವೃತವಾಗಿದೆ. ಈ ಜಿಲ್ಲೆಯು ಹಲವು ವೈಶಿಷ್ಟ್ಯಗಳ ತೊಟ್ಟಿಲು, ಇದೊಂದು ಪ್ರವಾಸಿಗರ ಸ್ವರ್ಗ. ಈ ಜಿಲ್ಲೆಯಾದ್ಯಂತ ಹರಡಿರುವ ಹಲವು ಪ್ರವಾಸಿಧಾಮ ಹಾಗೂ ಬೆಟ್ಟ ಗುಡ್ಡ ಗಿರಿ ಸಾಲುಗಳಿಂದ ಕೂಡಿದೆ. ಹಾಗೆಯೇ ರಾಜಧಾನಿ ಬೆಂಗಳೂರಿಗೆ ಹೊಂದಿಕೊಂಡತಿರುವ ಈ ಜಿಲ್ಲೆಯು ಅತಿ ವೇಗವಾಗಿ ಬೆಂಗಳೂರು ನಗರೀಕರಣದ ಕಬಂಧಬಾಹುವಿಗೆ ಸಿಲುಕುತ್ತಿರುವ ಜಿಲ್ಲೆಯಾಗಿದೆ. ರಾಮನಗರ ಜಿಲ್ಲೆಯು ಚನ್ನಪಟ್ಟಣ, ಕನಕಪುರ, ಮಾಗಡಿ, ರಾಮನಗರ ಎಂಬ ನಾಲ್ಕು ತಾಲೂಕುಗಳನ್ನು ಒಳಗೊಂಡಿದೆ.

೨.೧ ರಾಮನಗರ ಜಿಲ್ಲೆಯ ಪ್ರಾಚೀನ ಇತಿಹಾಸ

ಹಳೆಯ ಹಾಗೂ ನವ ಶಿಲಾಯುಗದ ಮಾನವನು ರಾಮನಗರ ಜಿಲ್ಲೆಯು ಪರಿಸರದಲ್ಲಿ ನೆಲೆಸಿದ್ದನು ಎಂಬುದಕ್ಕೆ ಅನೇಕ ಕುರುಹುಗಳು ದೊರೆಯುತ್ತಿವೆ. ಈ ಜಿಲ್ಲೆಯ ಪರಿಸರವು ಬೆಟ್ಟ ಗುಡ್ಡಗಳಿಂದ ಕೂಡಿದ ಪ್ರದೇಶವಾಗಿದ್ದು ಶಿಲಾಯುಗದ ಮಾನವರಿಗೆ ನೆಲೆಗಳಾಗಿದ್ದವು.

"ಚನ್ನಪಟ್ಟಣ ತಾಲೂಕು ಸಿದ್ಧಪುರದಲ್ಲಿ ಸೂಕ್ಷ್ಮ ಶಿಲಾಯುಗಕ್ಕೆ ಸೇರಿದ ಬೆಣಚುಕಲ್ಲಿನ ಆಯುಧಗಳು ದೊರೆತಿವೆ. ಈ ಆಯುಧಗಳು ಕ್ರಿ.ಪೂ. ೧೦ ಸಾವಿರ ವರ್ಷಗಳಷ್ಟು ಪ್ರಾಚೀನವೆಂದು"[1] ಇತಿಹಾಸಕಾರರು ಗುರುತಿಸಿದ್ದಾರೆ.

ಮಾಗಡಿ ತಾಲೂಕಿನ ಸಾವನದುರ್ಗ ಗುಡ್ಡಹಳ್ಳಿ, ಗವಿನಾಗಮಂಗಲ, ಕೋರಮಂಗಲ, ಹೂಜಿಗಲ್ಲು, ಕಲ್ಯಹೊಸಪಾಳ್ಯ, ಅಂಕನಹಳ್ಳಿ ಮುಂತಾದ ಸ್ಥಳಗಳಲ್ಲಿ ನೂರಾರು ಬೃಹತ್ ಶಿಲಾಗೋರಿಗಳಿವೆ. "೧೮೮೧ರಲ್ಲಿ ಕರ್ನಲ್ ಆರ್.ಬಿ. ಬ್ರೋನ್‌ವಿತ್ ಅವರ ಸಾವನದುರ್ಗದಲ್ಲಿ ನಡೆಸಿದ ಸಂಶೋಧನೆಯಲ್ಲಿ ಶಿಲಾಯುಗ ಕಾಲದ ಮಾನವನ ಅಸ್ಥಿಪಂಜರ, ನವಶಿಲಾಯುಗ ಕಾಲದ ಆಯುಧಗಳು, ಪಿಂಗಾಣಿ ಪಾತ್ರೆ, ಮಣ್ಣಿನ ಹೂಜಿಗಳು ದೊರೆತಿವೆ"[೨]. ಕನಕಪುರ ತಾಲೂಕಿನ ಗುತ್ತಲು ಹುಣಸೆಯಲ್ಲಿ ೪೫ ಶಿಲಾಗೋರಿಗಳಿವೆ. ಈ ಗೋರಿಗಳ ಸುತ್ತಲಿನ ಪರಿಸರದ ಸುಮಾರು ನಾಲ್ಕು ಎಕರೆ ಭೂಮಿಯ ಸುತ್ತ ಬೂದಿ ಮಣ್ಣನ್ನು ಕಂಡುಬರುತ್ತದೆ. "ಸಾತನೂರು ಹೋಬಳಿ ವೀರೇಗೌಡನದೊಡ್ಡಿ ಬಳಿಯ ಬೊಳಾರೆ ಗ್ರಾಮದ ಪೂರ್ವಾರ್ಧಕ್ಕೆ ೧೭೪ಕ್ಕೂ ಹೆಚ್ಚು ಬೃಹತ್ ಶಿಲಾಯುಗದ ಗೋರಿಗಳಿದ್ದು ಸ್ಥಳೀಯರು ಇವನ್ನು ಪಾಂಡವರಗುಡಿ ಎನ್ನುತ್ತಾರೆ"[೩] ಈ ಹಳ್ಳಿಯಲ್ಲಿ ದೊರೆತ ಅತೀ ದೊಡ್ಡ ಕಲ್ಲಿನ ಶಿಲಾ ಸಮಾಧಿ ಮೇಲಿನ ಕಲ್ಲಿನ ಅಳತೆ ೩೫೦ ಸೇಂ.ಮೀ.ನಿಂದ ೨೫೦ ಸೆಂ.ಮೀ. ಅಗಲವಿದೆ. ಈ ಎಲ್ಲಾ ಆಧಾರಗಳಿಂದ ರಾಮನಗರ ಜಿಲ್ಲಾ ಪರಿಸರವು ಹಳೆಯ ಹಾಗೂ ಹೊಸ ಶಿಲಾಯುಗದ ಮಾನವನ ನೆಲೆಯಾಗಿತ್ತು ಎಂದು ತಿಳಿದುಬರುತ್ತದೆ.

ವಿಜಯನಗರ ಸಾಮ್ರಾಜ್ಯದ ಸ್ಥಾಪಕರಾದ ಹಕ್ಕಬುಕ್ಕರು ಮೂಲತಃ ರಾಮನಗರ ಪ್ರದೇಶದವರಾಗಿರ ಬಹುದೆಂದು ಇತಿಹಾಸಕಾರರು ತಿಳಿಸುತ್ತಾರೆ. ವಿಜಯನಗರ ಸ್ಥಾಪನೆಗೆ ಮೂಲ ಕಾರಣೀಕರ್ತರಾದ ಕಾಳಮುಖ ಶೈವ ಗುರು ಕ್ರಿಯಾಶಕ್ತಿಯ ಶಿಷ್ಯನಾದ ಕಾಕತೀಯ ಪ್ರತಾಪರುದ್ರನೊಂದಿಗೆ ಸಾಂಪ್ರದಾಯಿಕ ಸಂಬಂಧ ಹಕ್ಕ ಬುಕ್ಕರು ಬೆಳೆಸಿರಬಹುದು"[೪] ಎಂದು ಅಭಿಪ್ರಾಯ ಪಡುತ್ತಾರೆ.

ರಾಮನಗರದ ರಾಮದೇವರ ಬೆಟ್ಟದ ಕೋಟೆ ಜಗತಿಯ ಮೇಲಿರುವ ಶಾಸನವನ್ನು ಆಧರಿಸಿ ಎಂ.ಜೆ. ನಾಗರಾಜು ಅವರು ಇಲ್ಲಿಯ ತ್ರಿಯಾಂಬಕ ಮಂಟಪವನ್ನು ವಿಜಯನಗರದ ಹಕ್ಕ-ಬುಕ್ಕರು ಕಟ್ಟಿಸಿದ್ದಾರೆ ಎಂದು ತಿಳಿಸುತ್ತಾರೆ.

ಜಿಲ್ಲಾ ಕೇಂದ್ರವಾದ ರಾಮನಗರವು ಅರ್ಕಾವತಿ ನದಿಯ ದಂಡೆಯ ಮೇಲಿದೆ. ಬ್ರಿಟೀಷರ ಆಳ್ವಿಕೆಯಲ್ಲಿ ಸರ್ ಬ್ಯಾರಿ ಕ್ಲೋಸ್ ಎಂಬುವವರು ರಾಮನಗರಕ್ಕೆ ಬರುವುದಕ್ಕೆ ಮುಂಚೆ ಈ ಊರು ಒಂದು ಪುಟ್ಟ ಗ್ರಾಮವಾಗಿತ್ತು. ಪುರಾಣ ಕಾಲದಲ್ಲಿ ರಾಮನಗರಕ್ಕೆ ರಾಮಗಿರಿ, ಶಿವರಾಮಗಿರಿ ಎಂಬ ಹೆಸರಿತ್ತು ಎನ್ನಲಾಗುತ್ತದೆ.

ಸರ್ ಬ್ಯಾರಿ ಕ್ಲೋಸ್‌ನ ನೆನಪಿಗಾಗಿ ೧೮೦೦ರಲ್ಲಿ ಈ ನಗರಕ್ಕೆ ಕ್ಲೋಸ್‌ಪೇಟೆ ಎಂದು ನಾಮಕರಣ ಮಾಡಲಾಯಿತು.

ಸರ್ ಬ್ಯಾರಿ ಕ್ಲೋಸ್ ಎಂಬ ಬ್ರಿಟೀಷ್ ಅಧಿಕಾರಿಯು ೩ನೇ ಆಂಗ್ಲೋ ಮೈಸೂರು ಯುದ್ಧದ ಸಮಯದಲ್ಲಿ ಗವರ್ನರ್ ಜನರಲ್ ಲಾರ್ಡ್ ಕಾರನ್‌ವಾಲಿಸ್ ಅವರ ಬಳಿ ಡೆಪ್ಯುಟಿ ಅಡಿಷನಲ್ ಜನರಲ್ ಈತನು ಕಾರ್ಯನಿರ್ವಹಿಸುತ್ತಿದ್ದನು. ೪ನೇ ಆಂಗ್ಲೋ ಮೈಸೂರು ಯುದ್ಧದ ವೇಳೆಗೆ ಅಡಿಷನಲ್ ಜನರಲ್ ಆಗಿ ಬಡ್ತಿ ಪಡೆದನು. ಟಿಪ್ಪು ಮರಣಾನಂತರ ಮೈಸೂರು ರಾಜ ಮನೆತನ

ಹಾಗೂ ರಾಜ್ಯಾಡಳಿತ ಪುನರ್ ವ್ಯವಸ್ಥೆ ಸಮಿತಿಯ ಸದಸ್ಯನಾಗಿ ೧೯೭೯ರಲ್ಲಿ ಇದೇ ಸಂಸ್ಥಾನದ ಪ್ರಪ್ರಥಮ ರೆಸಿಡೆಂಟ್ ಆಗಿಯೂ ನೇಮಕವಾದನು.

ಒಮ್ಮೆ ಮೈಸೂರಿನ ದಿವಾನರಾದ ಪೂರ್ಣಯ್ಯನವರೊಡನೆ ಸಂಸ್ಥಾನದ ಕೆಲಸದ ಮೇಲೆ ರಾಮನಗರ ಭಾಗದಲ್ಲಿ ಬ್ಯಾರಿ ಕ್ಲೋಸ್ ಸಂಚಾರ ಕೈಗೊಂಡನು. ಆಗ ತುಂಬಿ ಹರಿಯುತ್ತಿದ್ದ ಅರ್ಕಾವತಿ ನದಿ ದಾಟಲು ಅಲ್ಲಿನ ಹೊಳೆ ಸಾಲಿನ ಹಳ್ಳಿಯ ಜನರು ಅವರಿಗೆ ನೆರವು ನೀಡಿದರು. ಸ್ವಲ್ಪ ಸಮಯ ರಾಮಗಿರಿ ಬೆಟ್ಟದ ಮೇಲೆ ವಿಶ್ರಾಂತಿಗಾಗಿ ಇವನು ತಂಗಿದ್ದರ ನೆನಪಿಗಾಗಿ ಈ ಊರಿಗೆ 'ಕೂಲೋಸ್ ಪೇಟೆ' ಎಂದು ಹೆಸರಿಡಲಾಯಿತು' ಎಂಬ ವಿವರವನ್ನು ಈ ನಗರದ ಪೇಟೆ ಬೀದಿಯಲ್ಲಿರುವ ಶಿಲಾಶಾಸನವು ತಿಳಿಸುತ್ತದೆ. ೧೮೮೪ರಲ್ಲಿ ಮೈಸೂರು ಸಂಸ್ಥಾನದ ಉಪವಿಭಾಗದ ಕೇಂದ್ರವಾಗಿದ್ದ ಕ್ಲೊಸ್‌ಪೇಟೆ ೧೯೨೮ರಲ್ಲಿ ತಾಲೂಕು ಕೇಂದ್ರವಾಯಿತು. ಸ್ವಾತಂತ್ರ್ಯ ನಂತರ ೧೯೪೯ರಲ್ಲಿ ಕ್ಲೊಸ್‌ಪೇಟೆಗೆ 'ರಾಮನಗರ' ಎಂದು ನಾಮಕರಣ ಮಾಡಲಾಯಿತು.

ರಾಮನಗರವು ೧೯೮೬ಕ್ಕಿಂತ ಮೊದಲು ಬೆಂಗಳೂರು ಜಿಲ್ಲೆಯಲ್ಲಿದ್ದಿತು. ೧೯೮೬ರ ನಂತರ ಈ ಪ್ರದೇಶವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿಸಲಾಯಿತು. ತದನಂತರ ೨೦೦೭ ಆಗಸ್ಟ್ ತಿಂಗಳಲ್ಲಿ ಜಿಲ್ಲೆಯ ನಾಲ್ಕು ತಾಲೂಕುಗಳನ್ನೊಳಗೊಂಡ ರಾಜ್ಯದ ೨೮ನೇ ಜಿಲ್ಲೆಯಾಗಿ(ಸರ್ಕಾರಿ ಆದೇಶ ಸಂಖ್ಯೆ ಆರ್.ಡಿ.೨೮ ಒಡಪು, ಬೆಂಗಳೂರು ಆಗಸ್ಟ್ ೨೩ ತಿದ್ದುಪಡಿ ೨೩.೦೮.೨೦೦೭ರ ಅನ್ವಯ) ರಾಮನಗರ ಜಿಲ್ಲೆಯಾಗಿ ರೂಪುಗೊಂಡಿತ್ತು.

೨.೨ ರಾಮನಗರ ಜಿಲ್ಲೆಯ ಭೌಗೋಳಿಕತೆ

ರಾಮನಗರ ಜಿಲ್ಲೆಯ ಭೌಗೋಳಿಕ ವಿಸ್ತೀರ್ಣವು ೩೫೭೬ ಚ.ಕಿ.ಮೀ.ಗಳಾಗಿದೆ. ಈ ಜಿಲ್ಲೆಯು ರಾಜ್ಯದ ಒಟ್ಟು ಭೂವಿಸ್ತೀರ್ಣದಲ್ಲಿ ಶೇ. ೧.೮೫ ವಿಸ್ತೀರ್ಣ ಹೊಂದಿದ್ದು ರಾಜ್ಯದ ೨೭ನೇ ದೊಡ್ಡ ಜಿಲ್ಲೆ ಎಂದು ಗುರುತಿಸಲಾಗಿದೆ. ಈ ಜಿಲ್ಲೆಯಲ್ಲಿ ಒಟ್ಟು ನಾಲ್ಕು ತಾಲೂಕುಗಳಿದ್ದು ರಾಮನಗರ ತಾಲೂಕು ೬೨೦ ಚ.ಕಿ.ಮೀ. ವಿಸ್ತೀರ್ಣ, ಕನಕಪುರ ೧೬೦೧ ಚ.ಕಿ.ಮೀ. ವಿಸ್ತೀರ್ಣ, ಮಾಗಡಿ ೭೯೫ ಚ.ಕಿ.ಮೀ. ಹಾಗೂ ಚನ್ನಪಟ್ಟಣ ತಾಲೂಕು ೫೩೪ ಚ.ಕಿಮೀ. ವಿಸ್ತೀರ್ಣವನ್ನು ಹೊಂದಿವೆ. ಜಿಲ್ಲೆಯ ಒಟ್ಟು ವಿಸ್ತೀರ್ಣಕ್ಕೆ ಹೋಲಿಸಿದರೆ ತಾಲೂಕುಗಳಲ್ಲಿ ಚನ್ನಪಟ್ಟಣ ಅತೀ ಕಡಿಮೆ ಶೇ. ೧೫.೦೨ರಷ್ಟು ವಿಸ್ತೀರ್ಣ ಹೊಂದಿದ್ದು, ಕನಕಪುರ ತಾಲೂಕು ಅತೀ ಹೆಚ್ಚು ಶೇ. ೪೫.೦೩ ಭೂವಿಸ್ತೀರ್ಣ ಹೊಂದಿವೆ.

ರಾಮನಗರ ಜಿಲ್ಲೆಯ ಒಟ್ಟು ಭೂ ಪ್ರದೇಶದಲ್ಲಿ ೭೯೪೬ ಹೆಕ್ಟೇರಿನಷ್ಟು ಅರಣ್ಯ ಭೂಮಿಯಿದೆ. ಹಾಗೆಯೇ ವ್ಯವಸಾಯೇತರ ಚಟುವಟಿಕೆಗಳಿಗಾಗಿ ೨೬.೨೨೫ ಹೆಕ್ಟೇರಿನಷ್ಟು ಭೂಮಿ ಬಳಕೆಗೊಳ್ಳುತ್ತಿದೆ. ಯಾವುದೇ ಉಪಯೋಗಕ್ಕೆ ಬಾರದ ಬಂಜರು ಭೂಮಿಯು ೨೪೩೯ ಹೆಕ್ಟೇರಿನಷ್ಟಿದೆ.

ಈ ಜಿಲ್ಲೆಯಲ್ಲಿ ಆಡಳಿತದ ಅನುಕೂಲಕ್ಕಾಗಿ ಒಟ್ಟು ೧೮ ಹೋಬಳಿಗಳಿದ್ದು, ಚನ್ನಪಟ್ಟಣ ತಾಲೂಕಿನಲ್ಲಿ ೩ ಹೋಬಳಿ, ಕನಕಪುರ ತಾಲೂಕಿನಲ್ಲಿ ೬ ಹೋಬಳಿ, ಮಾಗಡಿ ತಾಲೂಕಿನಲ್ಲಿ ೫ ಹಾಗೂ ರಾಮನಗರ ತಾಲೂಕಿನಲ್ಲಿ ೪ ಹೋಬಳಿಗಳಿವೆ".[೫] ಜಿಲ್ಲೆಯಲ್ಲಿ ಒಟ್ಟು ೨೪೨ ಗ್ರಾಮಲೆಕ್ಕಾಧಿಕಾರಿಗಳ

ವೃತ್ತಗಳು, ೧೩೦ ಗ್ರಾಮಪಂಚಾಯಿತಿ ಹಾಗೂ ನಾಲ್ಕು ತಾಲೂಕು ಪಂಚಾಯಿತಿಗಳು ಕಾರ್ಯ ನಿರ್ವಹಿಸುತ್ತವೆ.

ಈ ಜಿಲ್ಲೆಯಲ್ಲಿ ಒಟ್ಟು ೭೩ ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿ ೨೯೯.೦೩ ಕಿ.ಮೀ. ಜಿಲ್ಲಾ ಮುಖ್ಯ ರಸ್ತೆಗಳು ೧೫೫೫೪೦ ಕಿ.ಮೀ. ಹೊಂದಿದೆ.

೨.೩. ಅರಣ್ಯ

ಕರ್ನಾಟಕದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ೧೯೦.೫ ಲಕ್ಷ ಹೆಕ್ಟೇರ್ ಅಂದರೆ ಶೇ.೧೬ರಷ್ಟು ಮಾತ್ರ ಅರಣ್ಯಗಳಿಂದಾವೃತವಾಗಿದೆ. ಇದು ಭಾರತದ ಸರಾಸರಿಗಿಂತಲೂ ಶೇ. ೨೨.೦೭ರಷ್ಟು ಕಡಿಮೆ. ರಾಷ್ಟ್ರೀಯ ಅರಣ್ಯ ನೀತಿಯಲ್ಲಿ ಗೊತ್ತುಪಡಿಸಿರುವಂತೆ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ. ೩೩.೩ರಷ್ಟು ಅರಣ್ಯಗಳಿಂದ ಆವೃತವಾಗಿರಬೇಕೆಂದು ತಿಳಿಸಲಾಗಿದೆ. ರಾಜ್ಯದಲ್ಲಿ ೧೯೦೪೯೮೩೬ ಹೆಕ್ಟೇರ್ ಪ್ರದೇಶವು ಅರಣ್ಯಗಳಿಂದ ಕೂಡಿದೆ. ಜಿಲ್ಲಾವಾರು ಅರಣ್ಯದ ಹಂಚಿಕೆಯನ್ನು ಅವಲೋಕಿಸಿದಾಗ ಅದು ಒಂದೇ ರೀತಿಯಲ್ಲಿ ಇಲ್ಲ. ಜಿಲ್ಲೆಯಿಂದ ಜಿಲ್ಲೆಗೆ ವ್ಯತ್ಯಾಸ ಕಂಡುಬರುತ್ತದೆ.

ರಾಮನಗರ ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ೨೯೪೬ ಹೆಕ್ಟೇರ್‌ಗಳಷ್ಟು ಅರಣ್ಯ ಪ್ರದೇಶವಿದೆ. ಇದು ಒಟ್ಟು ಭೌಗೋಳಿಕ ವಿಸ್ತೀರ್ಣಕ್ಕೆ ಹೋಲಿಸಿದಾಗ ಈ ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶವು ಶೇ. ೨೦ರಷ್ಟು ಮಾತ್ರವಿದೆ. ಅಧಿಕ ಬೆಟ್ಟ, ಗುಡ್ಡಗಳಿಂದಾಗಿ ಕೆಲವು ಸ್ಥಳಗಳಲ್ಲಿ ದಟ್ಟವಾದ ಅರಣ್ಯ ಪ್ರದೇಶವು ಕಂಡುಬರುತ್ತದೆ.

ಕನಕಪುರ ತಾಲೂಕಿನ ಅರಣ್ಯದಲ್ಲಿ ಚಿರತೆ, ತೋಳ, ನರಿ, ಕರಡಿ, ನವಿಲು, ಕಾಡುಹಂದಿ, ಮೊಲ, ಆನೆ ವಾಸವಾಗಿವೆ. ಈ ಪ್ರದೇಶದ ಅರಣ್ಯವು ಕಲ್ಲುಗಣಿಗಾರಿಕೆಯಿಂದ ಪ್ರಸ್ತುತ ದಿನೆ ದಿನೇ ಕ್ಷೀಣಿಸುತ್ತಿರುವುದರಿಂದ ಪ್ರಾಣಿಗಳ ಸಂಖ್ಯೆಯು ಸಹ ಕಡಿಮೆಯಾಗುತ್ತಿದೆ ಎಂಬ ಆರೋಪ ಕೇಳಿಬರುತ್ತಿದೆ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನಕ್ಕೆ ಹೊಂದಿಕೊಂಡಿರುವ ಅರಣ್ಯ ಪ್ರದೇಶವು ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಸೇರಿರುತ್ತದೆ. ರಾಮನಗರ ಪ್ರದೇಶದ ಅರಣ್ಯವನ್ನು ನಾಲ್ಕು ಪ್ರಕಾರದಲ್ಲಿ ವರ್ಗೀಕರಣ ಮಾಡಬಹುದು.

೧. ಕಾಯ್ದಿರಿಸಿದ ಅರಣ್ಯಗಳು (Reserved Forests)

೨. ಸಂರಕ್ಷಿತ ಅರಣ್ಯಗಳು (Protected Forests)

೩. ಗ್ರಾಮೀಣ ಅರಣ್ಯಗಳು (Rural Forests)

೪. ಖಾಸಗಿ ಅರಣ್ಯಗಳು (Private Forests)

ನಮ್ಮ ರಾಜ್ಯದ ಒಟ್ಟು ಅರಣ್ಯ ಕ್ಷೇತ್ರದಲ್ಲಿ ಶೇ. ೭೩ ಭಾಗ ಕಾಯ್ದಿರಿಸಿದೆ. ಶೇ. ೧೦.೩ರ ಭಾಗ ಸಂರಕ್ಷಿತ ಅರಣ್ಯ, ಶೇ. ೧೪.೫ ಭಾಗ ಕಾಯ್ದಿರಿಸಿದ ಅರಣ್ಯ ಹಾಗೂ ೦.೮ ಭಾಗ ಖಾಸಗಿ ಅರಣ್ಯಗಳು ಕಂಡುಬರುತ್ತವೆ.

ರಾಮನಗರ ಜಿಲ್ಲೆಯು ಬೆಟ್ಟ ಗುಡ್ಡ ಪ್ರದೇಶಗಳಿಂದ ಕೂಡಿದ್ದು, ಜಿಲ್ಲೆಯನ್ನು ಸಪ್ತ ಬೆಟ್ಟಗಳ ಸೀಮೆ (ಸಿಟಿ ಆಫ್ ಸೆವೆನ್ ಹಿಲ್ಸ್) ಎಂದು ಕರೆಯುತ್ತಾರೆ. ರಾಮನಗರ ಸುತ್ತಮುತ್ತ ಶಿವರಾಮಗಿರಿ, ಯತಿರಾಜಗಿರಿ, ಕೃಷ್ಣಗಿರಿ, ಸೋಮಗಿರಿ, ರೇವಣಗಿರಿ, ಜಲಸಿದ್ಧಗಿರಿ, ಸೂಕಾಸುರಗಿರಿ ಎಂಬ ಹೆಸರಿನ ಪ್ರಮುಖ ಬೆಟ್ಟಗುಡ್ಡಗಳಿವೆ. ರಾಮನಗರ ಜಿಲ್ಲೆಯಲ್ಲಿ ಇರುವ ಇತರ ದುರ್ಗಮ ಬೆಟ್ಟಗಳೆಂದರೆ ಸಾವನದುರ್ಗಾ, ಕಬ್ಬಾಳುದುರ್ಗಾ ಬೆಟ್ಟಗಳಾಗಿವೆ. ಏಷ್ಯಾದಲ್ಲೇ ಎರಡನೇ ಅತೀ ದೊಡ್ಡ ಶಿಲಾತೋರಣ ಎಂದು ಗುರುತಿಸಿರುವ ಭೀಮನಕಿಂಡಿ ಬೆಟ್ಟ ಇದೇ ಜಿಲ್ಲೆಯಲ್ಲಿದೆ. ಜಿಲ್ಲೆಯು ೪೮೬.೩೮ ಚ.ಕಿ.ಮೀ. ಅರಣ್ಯವನ್ನು ಹೊಂದಿದೆ. ಈ ಜಿಲ್ಲೆಯಲ್ಲಿ ಚಳಿಗಾಲದ ತರುವಾಯ ತೇವಾಂಶದ ಕೊರತೆಯಿಂದಾಗಿ ಮರಗಳ ಎಲೆಗಳು ಉದುರುತ್ತವೆ. ಮತ್ತೆ ವಸಂತ ಋತುವಿನಲ್ಲಿ ಚಿಗುರುತ್ತದೆ. ಇವುಗಳನ್ನು ಎಲೆ ಉದುರುವ ಸಸ್ಯವರ್ಗ ಎನ್ನುತ್ತೇವೆ. ವಾರ್ಷಿಕ ೬೦ರಿಂದ ೧೨೦ ಸೆಂ.ಮೀ. ಮಳೆ ಬೀಳುವ ಭಾಗಗಳಲ್ಲಿ ಇಂತಹ ಸಸ್ಯವರ್ಗವಿದೆ. ಇಂತಹ ಕಾಡುಗಳು ಜಿಲ್ಲೆಯಲ್ಲಿ ಕಂಡುಬರುತ್ತದೆ. ಈ ಪ್ರದೇಶದ ವ್ಯಾಪ್ತಿಯಲ್ಲಿ ತೇಗ, ಹೊನ್ನೆ, ಶ್ರೀಗಂಧ, ಮತ್ತಿ, ಆಲ, ಬೇವು, ಮಾವು, ಹಲಸು, ಬಾಗೇ ಮುತ್ತುಗ ಮತ್ತು ಬಿದಿರು ಮರಗಳು ಕಂಡುಬರುತ್ತವೆ.

೨.೪ ನದಿಗಳು

ಜಿಲ್ಲೆಯಲ್ಲಿ ಮುಖ್ಯವಾಗಿ ಹರಿಯುವ ನದಿಗಳೆಂದರೆ ಅರ್ಕಾವತಿ, ಸುವರ್ಣವತಿ, ಕುಮುದ್ವತಿ, ವೃಷಭಾವತಿ, ಕಣ್ವ, ಕಾವೇರಿ, ಶಿಂಷಾ ಈ ನದಿಗಳು ಹರಿಯುವುದರ ಜೊತೆಗೆ ಹಲವು ತೊರೆ, ಕೆರೆ, ಕುಂಟೆ, ಬಾವಿಗಳು ನೀರಿನ ಸೆಲೆಗಳಾಗಿವೆ. ಹಾಗೆಯೇ ಕಣ್ವ ಜಲಾಶಯ, ಇಗ್ಗಲೂರು ಜಲಾಶಯ, ಮಂಚನಬಲೆ ಜಲಾಶಯ, ವೈ.ಜಿ. ಗುಡ್ಡ ಜಲಾಶಯ ಹಾಗೂ ಹಾರೋಬಲೆ ಭೈರಮಂಗಲ ಜಲಾಶಯಗಳಿದ್ದರೂ ಜಿಲ್ಲೆಯ ಬಹುಪಾಲು ಭೂಮಿ ಮಳೆಯನ್ನೇ ಅವಲಂಬಿಸಿದೆ. ಚುಂಚಿಜಲಪಾತ, ಅರ್ಕಾವತಿ ಹಾಗೂ ಕಾವೇರಿ ನದಿಗಳ ಸಂಗಮ, ಮೇಕೆದಾಟು ಮುಂತಾದ ಪ್ರೇಕ್ಷಣೀಯ ಸ್ಥಳಗಳಿವೆ.

೨.೫ ವಾಯುಗುಣ

ರಾಮನಗರ ಜಿಲ್ಲೆಯು ಸಮಶೀತೋಷ್ಣ ವಲಯದ ಮಾನ್ಸೂನ್ ವಾಯುಗುಣವನ್ನೊಳಗೊಂಡ ಮಳೆಯಧಾರಿತ ಪ್ರದೇಶವಾಗಿದೆ. ಈ ಜಿಲ್ಲೆಯು ಸಮುದ್ರ ಮಟ್ಟದಿಂದ ಸರಾಸರಿ ೨೨೫೦ ಅಡಿ ಎತ್ತರದಲ್ಲಿದೆ. ಈ ಪ್ರದೇಶ ೧೨.೪೦ ಅಕ್ಷಾಂಶ ೮೩.೧೨ ರೇಖಾಂಶದಲ್ಲಿದೆ. ಈ ಪ್ರದೇಶದಲ್ಲಿ ಪ್ರತಿ ವರ್ಷ ಸರಾಸರಿ ೮೪೭ ಮೀ.ಮೀಟರ್ ಮಳೆ ಆಗುತ್ತದೆ ಹಾಗೂ ಇಲ್ಲಿಯ ಮಳೆಯ ಗರಿಷ್ಠ ಪ್ರಮಾಣ ೧೦೮೫ ಮೀ.ಮೀಟರ್ ಎಂದು ದಾಖಲಾಗಿದೆ. ಈ ಜಿಲ್ಲೆಯಲ್ಲಿ ಈಶಾನ್ಯ ದಿಕ್ಕಿನಿಂದ ಬೀಸುವ ಮಾನ್ಸೂನ್ ಗಾಳಿಯಿಂದ ಮಾತ್ರ ಮಳೆ ಬೀಳುತ್ತದೆ. ಸಾಮಾನ್ಯವಾಗಿ ಏಪ್ರಿಲ್‌ನಿಂದ ಜೂನ್‌ನಲ್ಲಿ ಹೆಚ್ಚಾಗಿ ಮಳೆಯಾಗುತ್ತದೆ. ಡಿಸೆಂಬರ್ ತಿಂಗಳಲ್ಲಿ ಅತ್ಯಂತ ಹೆಚ್ಚು ಚಳಿ ಮತ್ತು ತೇವಾಂಶ ಕಂಡಬರುತ್ತದೆ. ಈ ತಿಂಗಳಲ್ಲಿ ಗರಿಷ್ಠ ಉಷ್ಣತೆ ೨೫°ಸೆ. ಮತ್ತು ಕನಿಷ್ಠ ೧೫°ಸೆ. ಆಗಿರುತ್ತದೆ. ಡಿಸೆಂಬರ್ ಮತ್ತು ಫೆಬ್ರವರಿಯ ನಡುವೆ ಉಷ್ಣತೆ ೨೦° ಸೆಂ.ಗಿಂತಲೂ ಕೆಳಗಿಳಿದಿರುತ್ತದೆ.

೨.೬ ಜನಸಂಖ್ಯೆ

ಕೋಷ್ಟಕ ೨.೧. ೨೦೧೧ರ ಜನಗಣತಿ ಪ್ರಕಾರ ತಾಲೂಕುವಾರು ಜನಸಂಖ್ಯೆ

ಕ್ರ. ಸಂ.	ತಾಲೂಕು	ವಿಸ್ತೀರ್ಣ	ಜನಸಂಖ್ಯೆ			ನಗರ	ಗ್ರಾಮೀಣ
			ಒಟ್ಟು	ಗಂಡು	ಹೆಣ್ಣು		
೧	ಚನ್ನಪಟ್ಟಣ	೫೪೩	೨೬೧೩೦೪	೧೩೦೪೦೮	೧೩೦೮೯೬	೧೫೯೧೯	೪೬೪೬೫
೨.	ಕನಕಪುರ	೧೫೯೧	೩೫೦೮೭೭	೧೭೮೫೭೨	೧೭೨೩೦೫	೧೨೪೨೫	೭೨೭೪೮
೩.	ಮಾಗಡಿ	೮೦೯	೨೦೩೮೪೧	೧೦೨೫೮೨	೧೦೧೨೫೯	೮೮೫೧	೪೦೭೭೩
೪.	ರಾಮನಗರ	೬೩೩	೨೬೬೬೧೪	೧೩೬೪೪೬	೧೩೦೧೬೮	೨೩೬೬೫	೩೯೬೮೭
	(ಜಿಲ್ಲೆ) ಒಟ್ಟು	**೩೫೭೬**	**೧೦೮೨೬೩೬**	**೫೪೮೦೦೮**	**೫೩೪೬೨೮**	**೬೦೮೬೦**	**೧೯೯೬೭೩**

ಕೃಪೆ: ಜನಗಣತಿ ವರದಿ, ೨೦೧೧

ರಾಮನಗರ ಜಿಲ್ಲೆಯ ಜನಸಂಖ್ಯೆಯು ಒಟ್ಟು ೧೦,೮೨,೬೩೬ರಷ್ಟಿದೆ. ಇದರಲ್ಲಿ ಪುರುಷರು ೫,೪೮,೦೦೮ ಹಾಗೂ ಮಹಿಳೆಯರು ೫,೩೪,೬೨೮ ರಷ್ಟಿದ್ದಾರೆ. ಅಂದರೆ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪುರಷರು ಶೇಕಡ ೫೦.೬೧ರಷ್ಟಿದ್ದಾರೆ. ಮಹಿಳೆಯರು ಶೇಕಡ ೪೯.೩೯ರಷ್ಟಿದ್ದಾರೆ. "ಒಟ್ಟು ಜನಸಂಖ್ಯೆಯಲ್ಲಿ ನಗರದಲ್ಲಿ ನೆಲೆಸಿದವರು ೬೦೮೬೦ ಸಂಖ್ಯೆಯಲ್ಲಿದ್ದರೆ ಗ್ರಾಮೀಣ ಪ್ರದೇಶದಲ್ಲಿ ನೆಲೆಸಿದವರು ೧೯೯೬೭೩ ರಷ್ಟು ಸಂಖ್ಯೆಯಲ್ಲಿದ್ದಾರೆ".[೬] ಅಂದರೆ ನಗರ ಪ್ರದೇಶದಲ್ಲಿ ನೆಲೆಸಿದವರ ಪ್ರಮಾಣವು ಶೇಕಡ ೫.೬೨ರಷ್ಟು ಮಾತ್ರವಿದೆ. ಇನ್ನುಳಿದ ಶೇಕಡ ೯೪.೩೮ರಷ್ಟು ಜನ ಇಂದಿಗೂ ಗ್ರಾಮೀಣ ಪ್ರದೇಶದಲ್ಲಿಯೇ ವಾಸಿಸುತ್ತಿದ್ದಾರೆ.

ಚನ್ನಪಟ್ಟಣ ತಾಲೂಕಿನ ಒಟ್ಟು ಜನಸಂಖ್ಯೆಯು ೨೬೧೩೦೪ ಇದ್ದು ಇದರಲ್ಲಿ ಪುರುಷರು ೧೩೦೪೦೮ ಹಾಗೂ ಮಹಿಳೆಯರು ೧೩೦೮೯೬ ರಷ್ಟಿದ್ದಾರೆ.

ಕನಕಪುರ ತಾಲೂಕಿನ ಒಟ್ಟು ಜನಸಂಖ್ಯೆಯು ೩೫೦೮೭೭ ಇದ್ದು ಇದರಲ್ಲಿ ಪುರುಷರು ೧೭೮೫೭೨ ಹಾಗೂ ಮಹಿಳೆಯರು ೧೭೨೩೦೫ರಷ್ಟಿದ್ದಾರೆ.

ಮಾಗಡಿ ತಾಲೂಕಿನ ಒಟ್ಟು ಜನಸಂಖ್ಯೆಯು ೨೦೩೮೪೧ ಇದ್ದು ಇದರಲ್ಲಿ ಪುರುಷರು ೧೦೨೫೮೨ ಹಾಗೂ ಮಹಿಳೆಯರು ೧೦೧೨೫೯ ರಷ್ಟಿದ್ದಾರೆ.

ರಾಮನಗರ ತಾಲೂಕಿನ ಒಟ್ಟು ಜನಸಂಖ್ಯೆಯು ೨೬೬೬೧೪ ಇದ್ದು ಇದರಲ್ಲಿ ಪುರುಷರು ೧೩೬೪೪೬ ಹಾಗೂ ಮಹಿಳೆಯರು ೨೩೬೬೫ ರಷ್ಟಿದ್ದಾರೆ.

ಕೋಷ್ಟಕ ೨.೨. ೨೦೧೧ರ ಜನಗಣತಿ ಪ್ರಕಾರ ತಾಲೂಕುವಾರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನಸಂಖ್ಯೆ

ವಿವರ	ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಡ		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ರಾಮನಗರ ಜಿಲ್ಲೆ	೧,೦೨,೬೧೨	೧,೦೧,೨೦೭	೨,೦೩,೮೧೯	೧೧,೬೧೯	೧೧,೩೨೭	೨೨,೯೪೬
ಮಾಗಡಿ	೧೮,೬೪೪	೧೮,೫೮೩	೩೭,೨೨೭	೨,೭೬೨	೨,೭೧೩	೫,೪೭೫
ಕನಕಪುರ	೩೧,೦೮೮	೩೦,೧೯೦	೬೧,೨೭೮	೩,೪೨೦	೩,೩೦೨	೬,೭೨೨
ಚನ್ನಪಟ್ಟಣ	೧೭,೭೨೫	೧೭,೬೭೬	೩೫,೪೦೧	೩೪೯	೩೭೮	೭೨೭
ರಾಮನಗರ	೧೬,೭೦೭	೧೬,೨೨೭	೩೨,೯೩೪	೩,೫೨೬	೩,೪೩೨	೬,೯೫೮

ಕೃಪೆ: ಜನಗಣತಿ ವರದಿ ೨೦೧೧

ರಾಮನಗರ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೨,೦೩,೮೧೯ ಇದ್ದು ಇದರಲ್ಲಿ ಪುರುಷರು ೧,೦೨,೬೧೨ ಹಾಗೂ ಮಹಿಳೆಯರು ೧,೦೧,೨೦೭ ರಷ್ಟಿದ್ದಾರೆ. ಹಾಗೆಯೇ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೧೧,೬೧೯ ಇದ್ದು ಇದರಲ್ಲಿ ೧೧,೩೨೭ ಪುರುಷರು ಹಾಗೂ ೨೨,೯೪೬ರಷ್ಟು ಮಹಿಳೆಯರಿದ್ದಾರೆ. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯವರು ಶೇಕಡ ೧೮.೮೨ ಹಾಗೂ ಪರಿಶಿಷ್ಟ ಪಂಗಡದವರು ಶೇಕಡ ೧೨.೫೬ ರಷ್ಟಿದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರು ಸೇರಿ ಕೇವಲ ಶೇಕಡ ೩೧.೩೮ರಷ್ಟು ಮಾತ್ರ ಇರುವುದು ೨೦೧೧ರ ಜನಗಣತಿಯಿಂದ ತಿಳಿದುಬರುತ್ತದೆ.

ಮಾಗಡಿ ತಾಲೂಕಿನ ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೩೭,೨೨೭ ಇದ್ದು ಇದರಲ್ಲಿ ಪುರುಷರು ೧೮,೬೪೪ ಹಾಗೂ ಮಹಿಳೆಯರು ೧೮,೫೮೩ ರಷ್ಟಿದ್ದಾರೆ. ಹಾಗೆಯೇ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೫,೪೭೫ ಇದ್ದು ಇದರಲ್ಲಿ ೨,೭೬೨ ಪುರುಷರು ಹಾಗೂ ೨,೭೧೩ ರಷ್ಟು ಮಹಿಳೆಯರಿದ್ದಾರೆ.

ಕನಕಪುರ ತಾಲೂಕಿನ ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೬೧,೨೭೮ ಇದ್ದು ಇದರಲ್ಲಿ ಪುರುಷರು ೩೧,೦೮೮ ಹಾಗೂ ಮಹಿಳೆಯರು ೩೦,೧೯೦ ರಷ್ಟಿದ್ದಾರೆ. ಹಾಗೆಯೇ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೬,೭೨೨ ಇದ್ದು ಇದರಲ್ಲಿ ೩,೪೨೦ ಪುರುಷರು ಹಾಗೂ ೩,೩೦೨ ರಷ್ಟು ಮಹಿಳೆಯರಿದ್ದಾರೆ.

ಚನ್ನಪಟ್ಟಣ ತಾಲೂಕಿನ ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೩೫,೪೦೧ ಇದ್ದು ಇದರಲ್ಲಿ ಪುರುಷರು ೧೭,೭೨೫ ಹಾಗೂ ಮಹಿಳೆಯರು ೧೭,೬೭೬ ರಷ್ಟಿದ್ದಾರೆ. ಹಾಗೆಯೇ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೭೨೭ ಇದ್ದು ಇದರಲ್ಲಿ ೩೪೯ ಪುರುಷರು ಹಾಗೂ ೩೭೮ರಷ್ಟು ಮಹಿಳೆಯರಿದ್ದಾರೆ.

ರಾಮನಗರ ತಾಲೂಕಿನ ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೩೨,೯೩೪ ಇದ್ದು ಇದರಲ್ಲಿ ಪುರುಷರು ೧೬,೭೦೭ ಹಾಗೂ ಮಹಿಳೆಯರು ೧೬,೨೨೭ ರಷ್ಟಿದ್ದಾರೆ. ಹಾಗೆಯೇ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೬,೯೫೮ ಇದ್ದು ಇದರಲ್ಲಿ ೩,೫೨೬ ಪುರುಷರು ಹಾಗೂ ೩,೪೩೨ರಷ್ಟು ಮಹಿಳೆಯರಿದ್ದಾರೆ.

ಕೋಷ್ಟಕ ೨.೩. ಜನಸಂಖ್ಯೆ ೨೦೧೧ರ ಪ್ರಕಾರ ತಾಲೂಕುವಾರು ಲಿಂಗಾನುಪಾತ

ಕ್ರಸಂ.	ತಾಲೂಕು	೧೦೦೦ ಪುರುಷರಿಗೆ ಸ್ತ್ರೀಯರ ಪ್ರಮಾಣ
೧	ಚನ್ನಪಟ್ಟಣ	೧೦೦೪
೨.	ಕನಕಪುರ	೯೬೫
೩.	ಮಾಗಡಿ	೯೮೭
೪.	ರಾಮನಗರ	೯೫೪
ಒಟ್ಟು		೯೭೬

ಕೃಪೆ: ೨೦೧೧ರ ಜನಗಣತಿ ವರದಿ

ತಾಲೂಕುವಾರು ಲಿಂಗಾನುಪಾತ

೨೦೧೧ರ ಜನಗಣತಿ ಪ್ರಕಾರ ರಾಮನಗರ ಜಿಲ್ಲೆಯ ಲಿಂಗಾನುಪಾತವು ಸಾವಿರ ಪುರುಷರಿಗೆ ಸರಾಸರಿ ೯೭೬ರಷ್ಟು ಮಹಿಳೆಯರಿದ್ದಾರೆ. ಆದರೆ ಜಿಲ್ಲೆಯ ನಾಲ್ಕು ತಾಲೂಕುಗಳನ್ನು ಗಮನಿಸಿದಾಗ ಲಿಂಗಾನುಪಾತವು ಸಮಾನವಾಗಿರುವುದಿಲ್ಲ. ಚನ್ನಪಟ್ಟಣ ತಾಲೂಕಿನಲ್ಲಿ ಸಾವಿರ ಪುರುಷರಿಗೆ ೧೦೦೪ರಷ್ಟು ಮಹಿಳಾ ಪ್ರಮಾಣವಿದೆ. ಅಂದರೆ ಪುರುಷರ ಪ್ರಮಾಣಕ್ಕಿಂತ ಮಹಿಳೆಯರ ಪ್ರಮಾಣವು ಈ ತಾಲೂಕಿನಲ್ಲಿ ಅಧಿಕವಾಗಿದೆ.

ಕನಕಪುರ ತಾಲೂಕಿನಲ್ಲಿ ಸಾವಿರ ಪುರುಷರಿಗೆ ೯೬೫ರಷ್ಟು ಮಹಿಳಾ ಪ್ರಮಾಣವಿದೆ. ಮಾಗಡಿ ತಾಲೂಕಿನಲ್ಲಿ ಸಾವಿರ ಪುರುಷರಿಗೆ ೯೮೭ರಷ್ಟು ಮಹಿಳಾ ಪ್ರಮಾಣವಿದೆ. ರಾಮನಗರ ತಾಲೂಕಿನಲ್ಲಿ ಸಾವಿರ ಪುರುಷರಿಗೆ ೯೫೪ರಷ್ಟು ಮಹಿಳಾ ಪ್ರಮಾಣವಿದೆ. ಅಂದರೆ ಚನ್ನಪಟ್ಟಣದಲ್ಲಿ ಪುರುಷರಿಂತ ಮಹಿಳೆಯರು ಜಿಲ್ಲೆಯಲ್ಲಿಯೇ ಅಧಿಕ ಪ್ರಮಾಣದಲ್ಲಿದ್ದರೆ, ರಾಮನಗರದಲ್ಲಿ ಪುರುಷರ ಪ್ರಮಾಣಕ್ಕೆ ಹೋಲಿಸಿದರೆ ಮಹಿಳೆಯರ ಪ್ರಮಾಣ ಅತ್ಯಂತ ಕಡಿಮೆ ಇರುವುದು ಕಂಡುರುತ್ತದೆ.

೨.೭. ತಾಲೂಕುವಾರು ಜನಸಾಂದ್ರತೆ

ರಾಮನಗರ ಜಿಲ್ಲೆಯ ಒಟ್ಟು ಜನಸಾಂದ್ರತೆಯು ೩೦೮ ಇದೆ. ಚನ್ನಪಟ್ಟಣದಲ್ಲಿ ಜನಸಾಂದ್ರತೆಯು ೪೭೦ರಷ್ಟಿದೆ. ಕನಕಪುರದಲ್ಲಿ ಈ ಪ್ರಮಾಣವು ೨೧೫ರಷ್ಟಿದೆ. ಮಾಗಡಿಯಲ್ಲಿ ೨೫೫ ಹಾಗೂ ರಾಮನಗರದಲ್ಲಿ ೩೮೨ರಷ್ಟು ಜನಸಾಂದ್ರತೆ ಕಂಡುಬರುತ್ತದೆ. ಅಂದರೆ ಜನಸಾಂದ್ರತೆಯ ವಿಚಾರದಲ್ಲಿ

ಚನ್ನಪಟ್ಟಣವು ಮುಂಚೂಣಿಯಲ್ಲಿದ್ದು ರಾಮನಗರವು ಎರಡನೇ ಸ್ಥಾನದಲ್ಲಿದೆ. ಅತ್ಯಂತ ಕಡಿಮೆ ಜನಸಾಂದ್ರತೆ ಇರುವ ತಾಲೂಕು ಕನಕಪುರವಾಗಿದೆ.

ಕೋಷ್ಟಕ ೨.೪. ತಾಲೂಕುವಾರು ಜನಸಾಂದ್ರತೆ ವಿವರ

ಕ್ರಸಂ.	ತಾಲೂಕು	ಜನಸಾಂದ್ರತೆ
೧	ಚನ್ನಪಟ್ಟಣ	೪೭೦
೨.	ಕನಕಪುರ	೨೧೫
೩.	ಮಾಗಡಿ	೨೫೫
೪.	ರಾಮನಗರ	೩೮೨
	ಒಟ್ಟು	೩೦೮

ಕೃಪೆ: ರಾಮನಗರ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೧೩-೧೪

೨.೮. ಸಾಕ್ಷರತೆ

ಕರ್ನಾಟಕದಲ್ಲಿ ಶಿಕ್ಷಣ ಪಡೆದವರ ಒಟ್ಟು ಸಂಖ್ಯೆಯು ೪,೦೬,೪೭,೩೨೨ ಇದೆ. ಇದರಲ್ಲಿ ಪುರುಷರು ೨,೨೫,೦೮,೪೭೧ ರಷ್ಟಿದ್ದರೆ ಮಹಿಳೆಯರು ೧,೮೧,೩೮,೮೫೧ ರಷ್ಟಿದ್ದಾರೆ. ಅದೇ ರೀತಿಯಾಗಿ "ಕರ್ನಾಟಕದಲ್ಲಿ ನೆಲೆಸಿದ ಪರಿಶಿಷ್ಟ ಜಾತಿಯವರ ಒಟ್ಟು ಶೈಕ್ಷಣಿಕ ಪ್ರಗತಿಯ ಸಾಧಿಸಿದವರ ಒಟ್ಟು ೧,೦೪,೭೪,೯೯೨ ರಷ್ಟಿದೆ. ಇದರಲ್ಲಿ ಪುರುಷರು ೫೨,೬೪,೫೪೫ ರಷ್ಟಿದ್ದರೆ ಮಹಿಳೆಯರು ೫೨,೧೦,೪೪೭ ರಷ್ಟಿದ್ದಾರೆ".[೭] ಪರಿಶಿಷ್ಟ ಜಾತಿಯವರ ಒಟ್ಟು ಶೈಕ್ಷಣಿಕ ಪ್ರಗತಿಯ ಸಾಧಿಸಿದವರ ಒಟ್ಟು ೧,೦೪,೭೪,೯೯೨ ರಷ್ಟಿದೆ. ಇದರಲ್ಲಿ ಪುರುಷರು ೫೨,೬೪,೫೪೫ ರಷ್ಟಿದ್ದರೆ ಮಹಿಳೆಯರು ೧,೮೧,೩೮,೮೫೧ ರಷ್ಟಿದ್ದಾರೆ.

ರಾಮನಗರ ಜಿಲ್ಲೆಯಲ್ಲಿ ಸಾಕ್ಷರತೆಯನ್ನು ಪಡೆದವರ ಒಟ್ಟು ಸಂಖ್ಯೆಯು ೬,೭೪,೭೫೮ ಇದೆ. ಇದರಲ್ಲಿ ಪುರುಷರು ೩,೭೮,೪೬೧ ರಷ್ಟಿದ್ದರೆ ಮಹಿಳೆಯರು ೨,೯೬,೨೯೭ ರಷ್ಟಿದ್ದಾರೆ. ಅದೇ ರೀತಿಯಾಗಿ ಕರ್ನಾಟಕದಲ್ಲಿ ನೆಲೆಸಿದ ಪರಿಶಿಷ್ಟ ಜಾತಿಯ ಜನರಲ್ಲಿ ಸಾಕ್ಷರತೆಯನ್ನು ಪಡೆದವರು ಒಟ್ಟು ೨,೦೩,೮೧೯ ರಷ್ಟಿದ್ದಾರೆ. ಇದರಲ್ಲಿ ಪುರುಷರು ೧,೦೨,೬೧೨ ರಷ್ಟಿದ್ದರೆ ಮಹಿಳೆಯರು ೧,೦೧,೨೦೭ ರಷ್ಟಿದ್ದಾರೆ. ಪರಿಶಿಷ್ಟ ಪಂಗಡದವರಲ್ಲಿ ಸಾಕ್ಷರತೆಯನ್ನು ಪಡೆದವರು ಒಟ್ಟು ೨೨,೯೪೬ರಷ್ಟಿದ್ದಾರೆ. ಇದರಲ್ಲಿ ಪುರುಷರು ೧೧,೬೧೯ರಷ್ಟಿದ್ದರೆ ಮಹಿಳೆಯರು ೧೧,೩೨೭ ರಷ್ಟಿದ್ದಾರೆ.

ಕೋಷ್ಟಕ ೨.೫. ೨೦೧೧ರ ಜನಗಣತಿ ಪ್ರಕಾರ ರಾಜ್ಯ ಹಾಗೂ ಜಿಲ್ಲೆಯ ಸಾಕ್ಷರತೆಯ ವಿವರ

	ಒಟ್ಟು			ಪರಿಶಿಷ್ಟ ಜಾತಿ			ಪರಿಶಿಷ್ಟ ಪಂಗಂಡ		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ರಾಜ್ಯ	೨,೨೫,೦೮,೪೭೧	೧,೮೧,೩೮,೮೫೧	೪,೦೬,೪೭,೩೨೨	೫೨,೬೪,೫೪೫	೫೨,೧೦,೪೪೭	೧,೦೪,೭೪,೯೯೨	೨೧,೩೪,೭೫೪	೨೧,೧೪,೨೩೩	೪೨,೪೮,೯೮೭
ಜಿಲ್ಲೆ	೩,೭೮,೪೬೧	೨,೯೬,೨೯೭	೬,೭೪,೭೫೮	೧,೦೨,೬೧೨	೧,೦೧,೨೦೭	೨,೦೩,೮೧೯	೧೧,೬೧೯	೧೧,೩೨೭	೨೨,೯೪೬

ಕೃಪೆ: ೨೦೧೧ರ ಜನಗಣತಿ

ಕೋಷ್ಟಕ ೨.೬. ೨೦೧೧ರ ಜನಗಣತಿ ಪ್ರಕಾರ ರಾಜ್ಯ ಹಾಗೂ ಜಿಲ್ಲೆಯ ಸಾಕ್ಷರತೆಯ ಶೇಕಡವಾರು ವಿವರ

%	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ರಾಜ್ಯ	೮೨.೪೭	೬೮.೦೮	೭೫.೩೬	೧೭.೦೦	೧೭.೨೯	೧೭.೧೫	೬.೮೯	೭.೦೨	೬.೯೫
ಜಿಲ್ಲೆ	೭೬.೭೬	೬೧.೫೦	೬೯.೨೨	೧೮.೭೨	೧೮.೯೩	೧೮.೮೩	೨.೧೨	೨.೧೨	೨.೧೨

ಕೃಪೆ: ೨೦೧೧ರ ಜನಗಣತಿ

೨೦೧೧ರ ಜನಗಣತಿ ಪ್ರಕಾರ ಕರ್ನಾಟಕದ ಜನರು ಶೇಕಡ ೭೫.೩೬ರಷ್ಟು ಸಾಕ್ಷರರಾಗಿದ್ದಾರೆ. ಇದರಲ್ಲಿ ಪುರುಷರು ಶೇಕಡ ೮೨.೪೭ ಹಾಗೂ ಮಹಿಳೆಯರು ಶೇಕಡ ೬೮.೦೮ ರಷ್ಟಿದ್ದಾರೆ. ಪರಿಶಿಷ್ಟ ಜಾತಿಯ ಜನರು ಶೇಕಡ ೧೭.೧೫ರಷ್ಟು ಸಾಕ್ಷರರಾಗಿದ್ದಾರೆ. ಇದರಲ್ಲಿ ಪುರುಷರು ಶೇಕಡ ೧೭ ಹಾಗೂ ಮಹಿಳೆಯರು ಶೇಕಡ ೧೭.೨೯ ರಷ್ಟಿದ್ದಾರೆ. ಅಂದರೆ ರಾಜ್ಯದ ಪರಿಶಿಷ್ಟ ಜಾತಿಯ ಪುರುಷರಿಗಿಂತ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಸಾಕ್ಷರತೆಯನ್ನು ಹೊಂದಿರುವುದನ್ನು ಅಂಕಿ ಅಂಶಗಳಿಂದ ತಿಳಿಯುತ್ತದೆ. ಪರಿಶಿಷ್ಟ ಪಂಗಡದವರಲ್ಲಿ ಸಾಕ್ಷರತೆಯ ಪ್ರಮಾಣವು ಶೇಕಡ ೬.೯೫ ಮಾತ್ರವಿದೆ. ಇದರಲ್ಲಿ ಪುರುಷರು ಶೇಕಡ ೬.೮೯ ರಷ್ಟು ಸಾಕ್ಷರರಿದ್ದರೆ ಮಹಿಳೆಯರು ಶೇಕಡ ೭.೦೨ರಷ್ಟು ಸಾಕ್ಷರತೆಯನ್ನು ಹೊಂದಿದ್ದಾರೆ. ಅಂದರೆ ರಾಜ್ಯದ ಪರಿಶಿಷ್ಟ ಪಂಗಡದ ಸಾಕ್ಷರತೆಯಲ್ಲಿ ಪುರುಷರಿಗಿಂತ ಮಹಿಳೆಯರೇ ಮುಂದಿರುವುದು ತಿಳಿದುಬರುತ್ತದೆ.

ಇನ್ನು ರಾಮನಗರ ಜಿಲ್ಲೆಯ ಒಟ್ಟು ಸಾಕ್ಷರತೆಯ ಪ್ರಮಾಣವು ಶೇಕಡ ೬೯.೨೨ ಇದೆ. ರಾಜ್ಯದ ಸರಾಸರಿ ಸಾಕ್ಷರತೆಗೆ ಹೋಲಿಸಿದರೆ ಜಿಲ್ಲೆಯು ಸಾಕ್ಷರತೆಯಲ್ಲಿ ಇನ್ನೂ ಹಿಂದಿರುವುದು ತಿಳಿದುಬರುತ್ತದೆ. ಇದರಲ್ಲಿ ಪುರುಷರು ಶೇಕಡ ೭೬.೭೬ ರಷ್ಟು ಹಾಗೂ ಮಹಿಳೆಯರು ಶೇಕಡ ೬೧.೫೦ ರಷ್ಟು ಸಾಕ್ಷರತೆಯನ್ನು ಪಡೆದಿದ್ದಾರೆ. ಜಿಲ್ಲೆಯ ಪರಿಶಿಷ್ಟ ಜಾತಿಯ ಸಾಕ್ಷರತೆಯ ಪ್ರಮಾಣವು ಒಟ್ಟು ಶೇಕಡ ೧೮.೮೩ ಮಾತ್ರವಿದೆ. ಇದರಲ್ಲಿ ಪುರುಷರು ಶೇಕಡ ೧೮.೭೨ ಹಾಗೂ ಮಹಿಳೆಯರು ಶೇಕಡ ೧೮.೯೩ ರಷ್ಟು ಸಾಕ್ಷರತೆಯನ್ನು ಹೊಂದಿದ್ದಾರೆ. ಇಲ್ಲಿಯೂ ಸಹ ಮಹಿಳೆಯರು ಸಾಕ್ಷರತೆಯಲ್ಲಿ ಪುರುಷರಿಗಿಂತ ಮುಂಚೂಣಿಯಲ್ಲಿದ್ದಾರೆ. ಪರಿಶಿಷ್ಟ ಪಂಗಡದವರ ಸಾಕ್ಷರತೆಯ ಪ್ರಮಾಣವು ಒಟ್ಟು ಶೇಕಡ ೨.೧ ಮಾತ್ರವಿದೆ. ಇದರಲ್ಲಿ ಪುರುಷರು ಶೇಕಡ ೨.೧೨ ಹಾಗೂ ಮಹಿಳೆಯರು ಶೇಕಡ ೨.೧೨ ರಷ್ಟು ಸಾಕ್ಷರತೆಯನ್ನು ಹೊಂದಿದ್ದಾರೆ. ರಾಜ್ಯದ ಒಟ್ಟು ಸಾಕ್ಷರತೆಯಲ್ಲಿ ಪರಿಶಿಷ್ಟ ಪಂಗಡದವರ ಸಾಕ್ಷರತೆಯ ಪ್ರಮಾಣ ತುಂಬಾ ಕಳಪೆಯಾಗಿದೆ. ಆದರೆ ಪುರುಷರಿಗೆ ಸಮಾನ ಪ್ರಮಾಣದಲ್ಲಿಯೇ ಮಹಿಳೆಯರು ಸಾಕ್ಷರತೆ ಪಡೆದಿರುವುದು ತಿಳಿದುಬರುತ್ತದೆ.

೨.೯. ಕೃಷಿ

ಈ ಜಿಲ್ಲೆಯ ಮಣ್ಣನ್ನು ಪ್ರಮುಖವಾಗಿ ಮೂರು ಭಾಗವಾಗಿ ವಿಂಗಡಿಸಬಹುದು. ೧. ಕೆಂಪುಮಣ್ಣು ೨. ಕಪ್ಪುಮಿಶ್ರಿತಮಣ್ಣು ೩. ಮರಳು ಮಿಶ್ರಿತಮಣ್ಣು. ಇದರಲ್ಲಿ ಬಹುತೇಕ ಕೆಂಪು ಬಣ್ಣದಿಂದ ಕೂಡಿದ ಮೇಲ್ಮೈ ಮಣ್ಣು ಹೆಚ್ಚಿನ ಪ್ರಮಾಣದಲ್ಲಿದೆ. ಕೆಂಪು ಬಣ್ಣದಿಂದ ಕೂಡಿದ ಈ ಮಣ್ಣು ಗ್ರಾನೈಟ್ ಸೀಸ ಶಿಲಾದ್ರವ್ಯಗಳಿಂದ ರೂಪುಗೊಂಡಿದೆ. ಹೆಚ್ಚು ಸುಣ್ಣ ಮತ್ತು ಉಪ್ಪಿನಾಂಶವಿದ್ದು ಹೆಚ್ಚು ಹಗುರ, ತೆಳು ಪದರವುಳ್ಳ ಈ ಮಣ್ಣು ಅಷ್ಟೊಂದು ಫಲವತ್ತಾದುದಲ್ಲ. ತೇವಾಂಶ ಉಳಿಸಿಕೊಳ್ಳುವ ಸಾಮರ್ಥ್ಯ ಕಡಿಮೆ. ಈ ಮಣ್ಣಿನಲ್ಲಿ ತೃಣ ಧಾನ್ಯಗಳಾದ ರಾಗಿ, ನವಣೆ, ಮೆಕ್ಕೆಜೋಳ, ಹಾರಕ ಇತ್ಯಾದಿ ಬೆಳೆಗಳ ಜೊತೆಗೆ ದ್ವಿದಳ ಧಾನ್ಯಗಳಾದ ನೆಲಗಡಲೆ, ಅವರೆ, ಹುರುಳಿ, ತೊಗರಿ, ಅಲಸಂದಿಗಳಂತಹ ಮಳೆಯಾಶ್ರಿತ ಬೆಳೆಗಳನ್ನು ಬೆಳೆಯಬಹುದು. ನೀರಿನ ಸೌಲಭ್ಯವಿರುವ ಕಡೆ ಕಬ್ಬು, ಭತ್ತ, ತರಕಾರಿ, ಬಾಳೆ, ತೆಂಗು,

ಅಡಿಕೆ ಇತ್ಯಾದಿ ಬೆಳೆಯಲು ಯೋಗ್ಯವಾಗಿದ್ದು ಈ ಜಿಲ್ಲೆಯಲ್ಲಿ ತೋಟಗಾರಿಕೆಗೆ ಅದರಲ್ಲೂ ಮಾವನ್ನು ಹೆಚ್ಚಾಗಿ ಬೆಳೆಯುವುದು ಕಂಡುಬರುತ್ತದೆ. ಜಿಲ್ಲೆಯ ಪ್ರಮುಖ ಬೆಳೆ ರಾಗಿಯಾಗಿದೆ. ನದಿಯ ಕೆಳಭಾಗದ ರೈತರು ಮಾತ್ರ ನೀರಾವರಿಯ ಸೌಲಭ್ಯ ಪಡೆದಿರುವರಾದರೂ ಹೆಚ್ಚಿನ ಪ್ರಮಾಣದ ರೈತರು ಇಂದಿಗೂ ಮಳೆಯಾಧಾರಿತ ಕೃಷಿಯನ್ನೇ ಅವಲಂಭಿಸಿದ್ದಾರೆ. ಮಳೆ ಪ್ರಮಾಣ ಕಡಿಮೆ ಇರುವುದರಿಂದ ಕೊಳವೆ ಬಾವಿಯ ನೀರನ್ನು ಬಳಸಿಕೊಂಡು ತೋಟಗಾರಿಕಾ ಬೆಳೆಗಳನ್ನು ಬೆಳೆಯುವುದನ್ನು ಕಾಣಬಹುದು. ವಿಶೇಷವಾಗಿ ರೇಷ್ಮೆ, ಮಾವು, ಪಪ್ಪಾಯಿ ಮುಂತಾದ ತೋಟಗಾರಿಕಾ ಬೆಳೆಗೆ ಇಲ್ಲಿಯ ರೈತರು ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ.

ರಾಮನಗರದ ರೇಷ್ಮೆಗೂಡಿನ ಮಾರುಕಟ್ಟೆಯು ಏಷ್ಯಾದ ಅತೀ ದೊಡ್ಡ ರೇಷ್ಮೆಗೂಡಿನ ಮಾರುಕಟ್ಟೆಯಾಗಿದೆ. "೧೮ನೇ ಶತಮಾನದಲ್ಲೇ ಚೀನಾದಿಂದ ಭಾರತಕ್ಕೆ ರೇಷ್ಮೆ ತಂದ ಕೀರ್ತಿ ಟಿಪ್ಪುಸುಲ್ತಾನನಿಗೆ ಸಲ್ಲುತ್ತದೆ"[೮]. ಟಿಪ್ಪು ಕರಿಕಲ್ಲ್ ಫಾರ್ಂ ರೇಷ್ಮೆ ಮೊಟ್ಟೆ ಉತ್ಪಾದನೆಯಲ್ಲಿ ದೇಶದಲ್ಲೇ ಮೊದಲ ಕೇಂದ್ರ ಚನ್ನಪಟ್ಟಣದ ಬಳಿಯ ಕೆಂಗಲ್ ಬಳಿಯಿದೆ. ಹೀಗೆ ಹಲವಾರು ವೈಶಿಷ್ಟ್ಯಗಳನ್ನು ರಾಮನಗರ ಜಿಲ್ಲೆ ಒಳಗೊಂಡಿದೆ.

ಜಿಲ್ಲೆಯಲ್ಲಿ ರಾಗಿ ೭೩೨ರ ಹೆಕ್ಟೇರ್, ಭತ್ತ ೬೭೫೧ ಹೆಕ್ಟೇರ್, ಮೆಕ್ಕೆಜೋಳ ೩೩೮೪ ಹೆಕ್ಟೇರ್, ದ್ವಿದಳ ಧಾನ್ಯಗಳಾದ ಹುರುಳಿ ೭೪೭೬ ಹೆಕ್ಟೇರ್, ತೊಗರಿ ೩೫೫ ಹೆಕ್ಟೇರ್, ಅವರೆ ೨೧೫೪ ಹೆಕ್ಟೇರ್, ಅಲಸಂದಿ ೧೧೫೪ ಹೆಕ್ಟೇರ್. ಖಾದ್ಯ ತೈಲ ಬೆಳೆಗಳು ಶೇಂಗಾ ೩೧೭೩ ಹೆಕ್ಟೇರ್, ಹರಳು(ಔಡಲ) ೮೦/೨ ಹೆಕ್ಟೇರ್, ಎಳ್ಳು ೭೨೭ ಹೆಕ್ಟೇರ್, ಹುಚ್ಚೆಳ್ಳು ೬೧೭ ಹೆಕ್ಟೇರ್. ತೋಟಗಾರಿಕೆ ಬೆಳೆಗಳು ತೆಂಗು ೨೯೯೦೬ ಟನ್, ಮಾವು ೧೯೭೮೬೪ ಟನ್, ಅಡಿಕೆ ೨೮೭೦ ಟನ್, ಬಾಳೆ ೧೧೨೫೧೯ ಟನ್, ಸಪೋಟ ೫೯೦೩ ಟನ್, ಪಪ್ಪಾಯಿ ೯೦೩೧ ಟನ್ ಬೆಳೆಯಾಗುತ್ತದೆ ಎಂದು ಕೃಷಿ ಇಲಾಖೆಯ ವರದಿಗಳು ತಿಳಿಸುತ್ತವೆ.

೨.೧೦. ಉದ್ದಿಮೆಗಳು

ರಾಮನಗರ ಜಿಲ್ಲೆಯಲ್ಲಿ ಸಿದ್ಧ ಉಡುಪು ಕಾರ್ಖಾನೆ ೮, ಬಟ್ಟೆ ತಯಾರಿಕೆ ಕಾರ್ಖಾನೆ ೯, ರಾಸಾಯನಿಕ ಕಾರ್ಖಾನೆ ೧೦, ಇಂಜೀನಿಯರ್ ಉದ್ಯಮದ ಕಾರ್ಖಾನೆ ೮ ಇದ್ದು, "ಈ ಎಲ್ಲಾ ಕಾರ್ಖಾನೆಗಳ ಉದ್ಯೋಗಿಗಳ ಸಂಖ್ಯೆ ೮೭೩೪".[೯] ಜಿಲ್ಲೆಯಲ್ಲಿ ಕೆಲವು ಬೃಹತ್, ಮಧ್ಯಮ ಗಾತ್ರದ ಉದ್ದಿಮೆಗಳಿವೆ. ಬಿಡದಿ ಕೈಗಾರಿಕಾ ಪ್ರದೇಶವಾಗಿ ಮಾರ್ಪಟ್ಟಿದ್ದು ಈ ಭಾಗದಲ್ಲಿ **ಜಪಾನ್ ಕಂಪನಿಯ ಟಯೋಟಾ ಕಿರ್ಲೋಸ್ಕರ್ ಅರೆಕೋ ಕಂಪನಿ**, ಕಾರು ಉತ್ಪಾದನೆ ಮತ್ತು ಬಿಡಿ ಭಾಗಗಳನ್ನು ಉತ್ಪಾದಿಸಲಾಗುತ್ತದೆ. 'ಅಚ್ಚಲು ಬಳಿಯ ಸೇನಾಪತಿ ವೆಲ್ಲಿ ಲಿಮಿಟೆಡ್ ಮತ್ತು ಲಕ್ಷಣ್ ಐಸೋಲ್ ಲಿಮಿಟೆಡ್ ಪ್ರಿಂಟಿಂಗ್ ಪ್ರೆಸ್‌ಗೆ ಬೇಕಾದ ಕಾಗದ ಮತ್ತು ರಟ್ಟುಗಳನ್ನು ಉತ್ಪಾದಿಸುತ್ತದೆ. ಕೈಗಾರಿಕೆ ಪ್ರದೇಶದಲ್ಲಿ ಎಲೆಕ್ಟ್ರಾನಿಕ್ ಸಣ್ಣಪುಟ್ಟ ಉಪಕರಣಗಳ ತಯಾರಿಕಾ ಕಾರ್ಖಾನೆಗಳು ಮುಖ್ಯವಾದವು. ಇದಲ್ಲದೆ ಸಣ್ಣ ಕೈಗಾರಿಕಾ ಘಟಕಗಳಾದ ನಾಮಧಾರಿ ಸಿಡ್ಸ್, ಕಂಪನಿ, ತೆಂಗಿನ ನಾರಿನ ಕೈಗಾರಿಕೆಗಳು, ಬೀಡಿ ಉದ್ಯಮ, ಹೆಂಚು ಉದ್ಯಮ, ರೇಷ್ಮೆ ನೂಲು ಉತ್ಪಾದನಾ ಘಟಕಗಳು ಜಿಲ್ಲೆಯಾದ್ಯಂತ

ಇವೆ.[೧೦] ಓರಿಯಂಟಲ್ ಟಿಂಬರ್ಸ್ ಇಂಡಸ್ಟ್ರೀಯಲ್ಸ್, ಮೈಸೂರು ಪಾಲಿಮರ್ಸ್ ಹಾಗೂ ಮಾಂಡ್ರೆ ಬ್ರಿಕ್ಸ್ ಮತ್ತು ಟೈಲ್ಸ್, ಮಣ್ಣು ಗೊಂಬೆ ತಯಾರಿಕೆ ಘಟಕಗಳು ಅರಗು ಮತ್ತು ಬಣ್ಣದ ತಯಾರಿಕೆ, ಕರ್ನಾಟಕ ಆರ್ಟ್ಸ್ ಅಂಡ್ ಕ್ರಾಫ್ಟ್ ಎಂಪೋರಿಯಂ, ಸೀಗೆಪುಡಿ ತಯಾರಿಕಾ, ಚರ್ಮ ಮತ್ತು ಪ್ಲಾಸ್ಟಿಕ್ ಘಟಕಗಳು ಮುಂತಾದವುಗಳನ್ನು ಈ ಜಿಲ್ಲೆಯಲ್ಲಿ ಕಾಣಬಹುದಾಗಿದೆ.

೨.೧೧. ರಾಮನಗರ ಜಿಲ್ಲೆಯ ಪಡಿತರ ಸೌಲಭ್ಯ

ಕೋಷ್ಟಕ ೨.೭. ರಾಮನಗರ ಜಿಲ್ಲೆಯ ಪಡಿತರ ಚೀಟಿ ಹೊಂದಿದ

ಕುಟುಂಬಗಳ ವಿವರ (೨೦೧೪ರ ಪ್ರಕಾರ)

ಕ್ರಸಂ	ವಿವರ ಕುಟುಂಬಗಳ ಸಂಖ್ಯೆ	ಪಡಿತರ ಚೀಟಿ ಹೊಂದಿದ
೧	ಅಂತ್ಯೋದಯ	೧೮೮೧೫
೨	ಅಕ್ಷಯ (ಬಿಪಿಎಲ್)	೩೭೯೦೬
೩	ಎ.ಪಿ.ಎಲ್.	೨೬೬೩೫೨
	ಒಟ್ಟು	೩೨೪೦೭೩

ಕೃಪೆ: ರಾಮನಗರ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೧೩-೧೪

ಪಡಿತರ ವ್ಯವಸ್ಥೆ

೨೦೧೪ರ ಗಣತಿಯಂತೆ ರಾಮನಗರ ಜಿಲ್ಲೆಯೊಳಗೆ ಒಟ್ಟು ೧೮೮೧೫ರಷ್ಟು ಕುಟುಂಬಗಳು ಅಂತ್ಯೋದಯ ಪಡಿತರ ಚೀಟಿಯನ್ನು ಹೊಂದಿವೆ. **ಅಕ್ಷಯ ಪಡಿತರದಾರ ಕುಟುಂಬಗಳು** ೩೭೯೦೬ ರಷ್ಟಿವೆ. ಬಡತನ ರೇಖೆಗಿಂತ ಮೇಲಿರುವ ಎಪಿಎಲ್ ಕಾರ್ಡುದಾರ ಕುಟುಂಬಗಳು ೨೬೬೩೫೨ ರಷ್ಟಿವೆ. ಇದರಾಚೆಗೆ ಇನ್ನೂ ಎಷ್ಟೋ ಅಲೆಮಾರಿ ಹಾಗೂ ಬುಡಕಟ್ಟು ಸಮುದಾಯದ ಕುಟುಂಬಗಳು ಪಡಿತರ ಚೀಟಿಯಿಂದ ವಂಚಿತರಾಗಿರುವುದು ತಿಳಿದುಬರುತ್ತದೆ.

೨.೧೨. ಆರೋಗ್ಯ ಸೌಲಭ್ಯ

ಕೋಷ್ಟಕ ೨.೮. ರಾಮನಗರ ಜಿಲ್ಲೆಯಲ್ಲಿ ಆರೋಗ್ಯ ಸೌಲಭ್ಯ

ಒದಗಿಸುತ್ತಿರುವ ಆಸ್ಪತ್ರೆಗಳ ವಿವರ

ಕ್ರಸಂ	ವಿವರ	ಸಂಖ್ಯೆ
೧	ಅಲೋಪತಿ ಆಸ್ಪತ್ರೆಗಳು	೩೯
೨	ಭಾರತೀಯ ವೈದ್ಯ ಪದ್ಧತಿ ಆಸ್ಪತ್ರೆಗಳು	೦೩
೩	ಪ್ರಾಥಮಿಕ ಆರೋಗ್ಯ ಕೇಂದ್ರಗಳು	೬೨

೪	ಸಮುದಾಯ ಆರೋಗ್ಯ ಕೇಂದ್ರಗಳು	೦೪
೫	ಖಾಸಗಿ ಆಸ್ಪತ್ರೆಗಳು (ನರ್ಸಿಂಗ್ ಹೋಂಗಳು ಸೇರಿ)	೩೫

ಕೃಪೆ: ರಾಮನಗರ ಜಿಲ್ಲೆಯ ಅಂಕಿ ಅಂಶಗಳ ನೋಟ, ೨೦೧೩-೧೪

ರಾಮನಗರ ಜಿಲ್ಲಾ ಕೇಂದ್ರ ಒಳಗೊಂಡಂತೆ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಆರೋಗ್ಯ ಸೌಲಭ್ಯ ಒದಗಿಸುತ್ತಿರುವ ಆಸ್ಪತ್ರೆಗಳಲ್ಲಿ ಒಟ್ಟು ೩೬ ಆಲೋಪತಿ ಆಸ್ಪತ್ರೆಗಳಿವೆ. ಹಾಗೆಯೇ ಭಾರತೀಯ ವೈದ್ಯ ಪದ್ಧತಿಯ ಆಸ್ಪತ್ರೆಗಳು ಕೇವಲ ಮೂರು ಇವೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಒಟ್ಟು ೬೨ ಇವೆ. ಹಾಗೆಯೇ ತಾಲೂಕಿಗೆ ಒಂದರಂತೆ ನಾಲ್ಕು ಸಮುದಾಯ ಆರೋಗ್ಯ ಕೇಂದ್ರಗಳಿವೆ. ಇವುಗಳಲ್ಲದೆ ವೈದ್ಯರು ಖಾಸಗಿಯಾಗಿ ನಡೆಸುವ ನರ್ಸಿಂಗ್ ಹೋಮ್ ಮುಂತಾದ ಖಾಸಗಿ ಆಸ್ಪತ್ರೆಗಳು ೩೫ರಷ್ಟಿವೆ. ಇವುಗಳ ಹೊರತಾಗಿ ಗ್ರಾಮೀಣ ಭಾಗಗಳಲ್ಲಿ ಖಾಸಗಿಯಾಗಿ ಆರ್ ಎಂ ಪಿ ಮುಂತಾದ ಸರ್ಟಿಫಿಕೇಟುಗಳನ್ನು ಹೊಂದಿದ ವೈದ್ಯರು ಗ್ರಾಮೀಣ ಭಾಗದ ಜನರಿಗೆ ಸಣ್ಣ ಪುಟ್ಟ ಕಾಯಿಲೆಗಳಿಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸುತ್ತಿರುವುದನ್ನು ಜಿಲ್ಲೆಯಲ್ಲಿ ಕಾಣಬಹುದು.

೨.೧೩. ಆಧುನಿಕ ರಾಮನಗರ ಜಿಲ್ಲೆಯ ವೈಶಿಷ್ಟ್ಯಗಳು

ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಪ್ರತ್ಯೇಕವಾಗಿ ಕರ್ನಾಟಕ ರಾಜ್ಯದ ೨೮ನೆಯ ಜಿಲ್ಲೆಯಾಗಿ ರಚನೆಯಾದ ಈ ಜಿಲ್ಲೆಯು ರಾಜಕೀಯ, ಸಾಮಾಜಿಕ, ಐತಿಹಾಸಿಕ, ಆಧ್ಯಾತ್ಮಿಕ ಸಮಾಜಸೇವೆ ಮುಂತಾದ ವಿಚಾರಗಳಲ್ಲಿ ತನ್ನ ಸೂಕ್ಷ್ಮತೆಯ ಕೌತುಕವನ್ನು ತನ್ನ ಒಡಲಾಳದಲ್ಲಿ ಅಡಗಿಸಿಕೊಂಡಿದೆ. ರಾಜ್ಯದ ರಾಜಧಾನಿಗೂ ಸಾಂಸ್ಕೃತಿಕ ನಗರ ಮೈಸೂರಿಗೂ ಕೊಂಡಿಯಂತಿರುವ ಈ ಜಿಲ್ಲೆ ವಿಶಿಷ್ಟವೂ ವಿನೂತನವೂ ಆದ ಕೆಲವು ವಿಷಯಗಳಿಂದ ಇತರೆ ಜಿಲ್ಲೆಗಳಿಗಿಂತ ಭಿನ್ನವಾಗಿ ಕಾಣಸಿಗುತ್ತದೆ.

ಹಿಂದಿ ಚಿತ್ರರಂಗದ ಅವಿಸ್ಮರಣೀಯ ದಾಖಲೆಯ ಮೈಲಿಗಲ್ಲು ಎಂದೇ ಹೆಸರುಗಳಿಸಿದ್ದ "ಶೋಲೆ" ಚಲನಚಿತ್ರದ ಮೂಲಕ ರಾಮಘಾಡ ಎಂದು ವಿಶ್ವ ಪ್ರಸಿದ್ಧವಾದ ಗಿರಿಶಿಲಾ ಪಂಕ್ತಿಯ ಬೆಟ್ಟಸಾಲುಗಳನ್ನು ಹೊಂದಿದ್ದು, ರಾಜಕೀಯ ವಿಷಯದಲ್ಲಿ ಕರ್ನಾಟಕದಲ್ಲಿ ವಿಶಿಷ್ಟವಾದ ಛಾಪನ್ನು ಮೂಡಿಸಿದ್ದು ಈ ನಾಡಿಗೆ ನಾಲ್ಕು ಮುಖ್ಯಮಂತ್ರಿಗಳನ್ನು ನೀಡಿದ ಹೆಗ್ಗಳಿಕೆ ಈ ಜಿಲ್ಲೆಗೆ ಇದೆ. "ಅಮೆರಿಕಾದ ಅಧ್ಯಕ್ಷರ ಕಛೇರಿ ಶ್ವೇತಭವನವನ್ನು ಸಂದರ್ಶಿಸಿ" ಹೆಚ್ಚು ಕಡಿಮೆ ಅದೇ ಮಾದರಿಯಲ್ಲಿ ಕರ್ನಾಟಕದ ಆಡಳಿತದ ಸೌಧ ವಿಧಾನಸೌಧವನ್ನು ನಿರ್ಮಿಸಿದ ಕೀರ್ತಿಯ ರಾಷ್ಟ್ರರತ್ನ ಕೆಂಗಲ್ ಹನುಮಂತಯ್ಯನವರು ಈ ಜಿಲ್ಲೆಯವರು. ಹಾಗೆಯೇ ಜಾತ್ಯತೀತ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಿಗೆ ಇಂಬು ನೀಡುವ ಸಾಕಷ್ಟು ಉದಾಹರಣೆಗಳನ್ನು ಇಲ್ಲಿ ನೋಡಬಹುದಾಗಿದ್ದು, ಪ್ರಬಲವಾದ ಒಂದು ಸಮುದಾಯವನ್ನು ಹೊಂದಿರುವ ಈ ಜಿಲ್ಲೆಯ ವ್ಯಾಪ್ತಿಯಿಂದ ಅಲ್ಪಸಂಖ್ಯಾತರಲ್ಲಿ ಅಲ್ಪಸಂಖ್ಯಾತರು ಎನಿಸಿಕೊಂಡು ಜನಪ್ರತಿನಿಧಿಗಳನ್ನು ಆರಿಸಿ ಕಳುಹಿಸುವ ಮೂಲಕ ನಿಜವಾದ ಜಾತ್ಯತೀತ ಪ್ರಜಾಪ್ರಭುತ್ವವಾದಿ

ಮನೋಭಾವನೆಯ ಜನರನ್ನು ಈ ಜಿಲ್ಲೆ ಹೊಂದಿದೆ. ರಾಮನಗರದಿಂದ ಅಬ್ದುಲ್ ಸಮದ್ ಆರೋಗ್ಯ ಸಚಿವರಾಗಿದ್ದವರು ಚನ್ನಪಟ್ಟಣದಿಂದ ಡಿ.ಟಿ. ರಾಮು ಮತ್ತು ಸಾದತ್ ಅಲಿಖಾನ್ ಹಾಗೂ ಮಾಗಡಿಯಿಂದ ಎಚ್.ಎಂ. ರೇವಣ್ಣ, ಕನಕಪುರದಿಂದ ಸತತ ಆರು ಬಾರಿ ಆಯ್ಕೆಯಾಗಿ ರಾಜ್ಯದ ವಿವಿಧ ಮಹತ್ವ ಖಾತೆಗಳನ್ನು ನಿರ್ವಹಿಸಿದ ಪಿ.ಜಿ.ಆರ್. ಸಿಂಧ್ಯಾ ಅವರನ್ನು ಆರಿಸಿಕಳುಹಿಸಿದ್ದ ಈ ಜಿಲ್ಲೆಯ ವ್ಯಾಪ್ತಿ ಜನರೇ ದೇಶದಲ್ಲಿ ಅತಿದೊಡ್ಡ ಲೋಕಸಭಾ ಕ್ಷೇತ್ರವೆಂದು ಹೆಸರು ಗಳಿಸಿದ್ದ ಕನಕಪುರ ಲೋಕಸಭಾ ಕ್ಷೇತ್ರವನ್ನು ತನ್ನ ಒಡಲಲ್ಲಿಟ್ಟುಕೊಂಡಿತ್ತು. ಮತ್ತೊಂದು ವಿಶೇಷವೆಂದರೆ ಈ ರಾಜ್ಯಕ್ಕೆ ನಾಲ್ಕು ಜನ ಮುಖ್ಯಮಂತ್ರಿಗಳನ್ನು ನೀಡಿದ್ದು ಅದರಲ್ಲಿ ಮೂರು ಜನ ಕಾಂಗ್ರೆಸೇತರ ಮುಖ್ಯಮಂತ್ರಿಗಳನ್ನು ನೀಡಿದ ಕೀರ್ತಿ ಈ ಜಿಲ್ಲೆಗೆ ಸೇರಿದೆ. ರಾಜ್ಯ ವಿಧಾನಸಭೆಯ ಮೊದಲ ಸ್ಪೀಕರ್ ವಿ. ವೆಂಕಟಪ್ಪ ನವರು ಸಮಾಜವಾದಿ ಪಕ್ಷದ ಹಿನ್ನೆಲೆಯಿಂದ ಬಂದು ವಿಧಾನಸಭೆ ಪ್ರವೇಶಿಸಿದ ರಾಷ್ಟ್ರೀಯ ಸಮಾಜವಾದಿ ಧುರೀಣರಾದ ಜಯಪ್ರಕಾಶ ನಾರಾಯಣ, ರಾಮಮನೋಹರ ಲೋಹಿಯಾ, ಮಧುದಂಡವತೆ, ಶಾಂತವೇರಿ ಗೋಪಾಲಗೌಡರ ಸಂಪರ್ಕದಲ್ಲಿದ್ದು, ರಾಜ್ಯ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿದ್ದ ಬಿ.ಕೆ. ಪುಟ್ಟರಾಮಯ್ಯನವರನ್ನು ಆಯ್ಕೆ ಮಾಡಿದ್ದ ಚನ್ನಪಟ್ಟಣ ಕ್ಷೇತ್ರ, ಸ್ವಾತಂತ್ರ್ಯ ಹೋರಾಟಗಾರರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಆಗಿದ್ದ ಹೆಚ್.ಕೆ. ವೀರಣ್ಣಗೌಡರು ಈ ಜಿಲ್ಲೆಯವರು. ಸಂವಿಧಾನ ರಚನಾ ಮಂಡಳಿಯ ಅಧ್ಯಕ್ಷರಾಗಿದ್ದ ಡಾ. ರಾಜೇಂದ್ರಪ್ರಸಾದ್ ಅವರು 'ಭಾರತೀಯ ಬಹುಪಾಲ ಜನರು ನಿರಕ್ಷರಿಗಳಾದರೂ ಮತ ಚಲಾಯಿಸಿ ಉತ್ತಮರನ್ನು ಆಯ್ಕೆ ಮಾಡಿಕೊಳ್ಳವಷ್ಟು ಬುದ್ಧಿವಂತರಾಗಿದ್ದಾರೆ' ಎಂದು ಅಂದು ಹೇಳಿದ ಮಾತು ರಾಜಕೀಯವಾಗಿ ಈ ಜಿಲ್ಲೆಯ ಜನರ ರಾಜಕೀಯ ಪ್ರಜ್ಞೆಗೆ ಅಕ್ಷರಶಃ ಹತ್ತಿರವಾಗಿದೆ. ಅಧ್ಯಾತ್ಮಿಕವಾಗಿಯೂ ಉತ್ತಮ ತಳಹದಿಯನ್ನು ಹೊಂದಿದ್ದು "ಕರ್ನಾಟಕ ಕೀರ್ತನಾ ಪ್ರಪಂಚದಲ್ಲಿ ಮೊದಲನೆಯ ಕೀರ್ತನಕಾರರು ಎಂದು ಹೆಸರುಗಳಿಸಿದ್ದ ಶ್ರೀಪಾದರಾಜರು ಜನಿಸಿದ್ದು ಚನ್ನಪಟ್ಟಣ ತಾಲೂಕಿನ ಅಬ್ಬೂರಿನಲ್ಲಿ"[೧೧]. ಪ್ರಸಿದ್ಧ ಸಂಗೀತಗಾರ ಪುಂಡರೀಕವಿಠ್ಠಲ ಸಂಗೀತ ಸಾಮ್ರಾಟ ಭೈರವಿ ಕೆಂಪೇಗೌಡ ರಾಜ್ಯದ ಎರಡು ಅತಿದೊಡ್ಡ ಮಠಗಳಿಗೆ ಮಠಾಧೀಶರನ್ನು ನೀಡಿದ ಕೀರ್ತಿ ಈ ಜಿಲ್ಲೆಗೆ ಸೇರುತ್ತದೆ. ಸಿದ್ಧಗಂಗಾ ಮಠದ ಹಿರಿಯ ಪೀಠಾಧಿಪತಿಗಳು ಕರ್ನಾಟಕ ರತ್ನ ಡಾ. ಶಿವಕುಮಾರ ಸ್ವಾಮಿಗಳು ಹಾಗೂ ಆದಿಚುಂಚನಗಿರಿಯ ಹಿರಿಯ ಪೀಠಾಧಿಪತಿಗಳಾಗಿದ್ದ ಡಾ. ಬಾಲಗಂಗಾಧರನಾಥ ಸ್ವಾಮೀಜಿ, ಮೈಸೂರು ದತ್ತಪೀಠದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಇವರ ಪೂರ್ವಾಶ್ರಮದ ನೆಲೆಗಳು ಈ ಜಿಲ್ಲೆಯೇ ಆಗಿದೆ. ಸಮಾಜ ಸೇವೆಯಲ್ಲಿ ಹೆಸರು ಗಳಿಸಿರುವ ಸಾಲುಮರದ ತಾಯಿ ನಾಡೋಜ ತಿಮ್ಮಕ್ಕನ ಕಾರ್ಯಕ್ಷೇತ್ರವು ಈ ಜಿಲ್ಲೆಯೇ ಆಗಿದೆ. ಸಾಹಿತ್ಯ ಕ್ಷೇತ್ರದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸಂಸ್ಥಾಪಕರು ಮೂರು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಆದ ಹೆಬ್ಬಾಳಲೆ ನಂಜುಂಡಯ್ಯನವರು, ರಾಜಭಾಷಾ ಪ್ರವೀಣ, ಸಿ.ಕೆ. ವೆಂಕಟರಾಮಯ್ಯ, ಕನ್ನಡ ರತ್ನ ಜಿ.ಪಿ. ರಾಜರತ್ನಂ, ಜೋಗದ ಸಿರಿಬೆಳಕಿನ ನಿತ್ಯೋತ್ಸವದ ಕವಿ ಕೆ.ಎಸ್. ನಿಸಾರ್ ಅಹ್ಮದ್, ಟಿ.ವಿ. ವೆಂಕಟಾಚಲಶಾಸ್ತ್ರಿಗಳು, ಟಿ.ಕೆ.

ರಾಮರಾವ್, ದಲಿತ ಕವಿ ಸಿದ್ಧಲಿಂಗಯ್ಯ, ದೆ.ಜೇ.ಗೌ., ಕಾಳೇಗೌಡ ನಾಗವಾರ, ಮೊಗಳ್ಳಿ ಗಣೇಶ್, ಚಿತ್ರ ಸಾಹಿತಿ ಮೊಟಗಾನಹಳ್ಳಿ ಮಹದೇವಶಾಸ್ತ್ರಿ, ಒಡೆಯರ್ ಡಿ. ಹೆಗ್ಗಡೆ, ಅಗ್ನಿ ಶ್ರೀಧರ, ಭಾಷಾ ವಿಜ್ಞಾನಿ ಕೆ. ಕೆಂಪೇಗೌಡರು ಹೀಗೆ ಸಾಹಿತ್ಯ ಕ್ಷೇತ್ರದ ದಿಗ್ಗಜರನ್ನು ಕಾಣಬಹುದು. ಚಲನಚಿತ್ರ ಕ್ಷೇತ್ರದಲ್ಲಿ ಪಂಚಭಾಷಾ ತಾರೆ ಎಂದು ಹೆಸರು ಗಳಿಸಿರುವ ಪದ್ಮಶ್ರೀ ಬಿ. ಸರೋಜದೇವಿ, ಸಿ.ಆರ್. ಸಿಂಹ, ಶ್ರೀನಾಥ್, ಹೊನ್ನಪ್ಪ ಭಾಗವತರ್, ಜಗತ್ತಿನ ಕೆಲವೇ ಕೆಲವು ಪ್ರಮುಖ ಆರ್ಥಿಕ ತಜ್ಞರಲ್ಲಿ ಒಬ್ಬರು ಎನಿಸಿಕೊಂಡಿದ್ದ ಪ್ರೊ. ವೆಂಕಟಗಿರೀಗೌಡರು, ಇಂಗ್ಲಿಷ್ ಕಡಲು ಕಾಲುವೆ ನಿರ್ಮಿಸಿದ ಅಂತಾರಾಷ್ಟ್ರೀಯ ಖ್ಯಾತಿಯ ಸತ್ಯನಾರಾಯಣ ಸೋಗಾಲ್, ಅಂದಿನ ರಾಜರ ಅವಧಿಯಲ್ಲಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಅಕ್ಕೂರಿನ ದೊಡ್ಡ ಗುಂಡಪ್ಪನವರು, ಖ್ಯಾತ ಜಾನಪದ ಗಾಯಕರಾದ ಅಪ್ಪಗೆರೆ ತಿಮ್ಮರಾಜು, ಬಾನಂದೂರು ಕೆಂಪಯ್ಯ, ಅಂತಾರಾಷ್ಟ್ರೀಯ ಕಬ್ಬಡಿ ಕ್ರೀಡಾಪಟುಗಳಾದ ಬಿ.ಸಿ. ಸುರೇಶ ಮತ್ತು ಬಿ.ಸಿ. ರಮೇಶ, ಅಂಗವಿಕಲ ಕ್ರಿಕೆಟ್ ಕ್ರೀಡಾಪಟು ಜಯರಾಮಯ್ಯ, ಖ್ಯಾತಚಲನಚಿತ್ರ ನಿರ್ದೇಶಕರಾಗಿದ್ದ ಸಿ.ವಿ.ಎಲ್.ಶಾಸ್ತ್ರಿಗಳು, ಗುರುಪ್ರಸಾದ್, ಕನ್ನಡ ಭಾಷೆಯ ಮಾಧ್ಯಮದಲ್ಲಿ ಮೊದಲು ಐ.ಎ.ಎಸ್.(IAS) ಗಳಿಸಿದ ಕೆ. ಶಿವರಾಮು, ಕನಕಪುರದ ಐಪಿಎಸ್(IPS) ಕೆಂಪಯ್ಯ, ಚನ್ನಪಟ್ಟಣದ ಸಂತೋಷ ಬಾಬು, ಕರ್ನಾಟಕ ಸಂಗೀತ ವಿದ್ವಾಂಸರು ಮಹಾಮಹೋ ಪಾಧ್ಯಾರಾದ ಡಾ. ರಾ.ಸತ್ಯನಾರಾಯಣ, ಖ್ಯಾತ ಇತಿಹಾಸ ಸಂಶೋಧಕರಾದ ಡಾ. ಮುನಿರಾಜಪ್ಪ, ಬಹುಭಾಷಾ ಪಂಡಿತರಾದ ಮಾಗಡಿ ರಂಗಪ್ಪನವರು, ತೊಗಲುಗೊಂಬೆ ಪ್ರದರ್ಶನದಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯ ಎಂ.ಆರ್. ರಂಗನಾಥರಾವ್, ಕರ್ನಾಟಕ ಮತ್ತು ಆಂಧ್ರಪ್ರದೇಶದ ಜೀವನದಿ ಬಳ್ಳಾರಿ ಜಿಲ್ಲೆಯ ಜೀವಸೆಲೆ ತುಂಗಭದ್ರ ನದಿಯ ಅಣೆಕಟ್ಟು ನಿರ್ಮಿಸಿದ ಮುಖ್ಯ ಅಭಿಯಂತರರು ಎಂ.ಎಸ್. ತಿರುಮಲೆ ಅಯ್ಯಂಗಾರ್ ಅವರು ಚನ್ನಪಟ್ಟಣ ತಾಲೂಕಿನ ದೊಡ್ಡಮಳೂರು ಗ್ರಾಮದವರು. ಇದೇ ಗ್ರಾಮದ ಪೋಲಿಸ್ ಮಹಾನಿರ್ದೇಶಕರಾಗಿದ್ದ ಅಪ್ರಮೆಯ ಮಳೂರುಕರ್ ಇಲ್ಲಿಯವರೇ. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಶಶಿಧರ ಪ್ರಸಾದ್, ಖ್ಯಾತ ಮನೋರೋಗ ಶಾಸ್ತ್ರಜ್ಞರಾದ ಸಿ. ಚಂದ್ರಶೇಖರ್ ಹಾಗೂ ಮಾಜಿ ಮುಖ್ಯಮಂತ್ರಿಗಳ ಪತ್ನಿಯಾದ ಶ್ರೀಮತಿ ವರಲಕ್ಷ್ಮೀ ಗುಂಡೂರಾವ್, ಸಿದ್ಧಯ್ಯ ಐ.ಎ.ಎಸ್.(IAS), ಸಹಕಾರಿ ರತ್ನ ಬಿ.ಎಲ್. ಲಕ್ಕೇಗೌಡ. ಹಾಗೆಯೇ ಸಾರ್ವಜನಿಕ ಸೇವೆಯಲ್ಲಿದ್ದುಕೊಂಡು ಉತ್ತಮ ಹೆಸರುಗಳಿಸಿದ ಜಿಲ್ಲೆಯ ಇತರೆ ಸಮಾಜ ಸೇವಕರು "ತೋಟಗಾರಿಕೆ ನಿರ್ದೇಶಕರು ತೋಟಗಾರಿಕಾ ಪಿತಾಮಹ ಎಂದು ಹೆಸರು ಗಳಿಸಿದ ಎಂ.ಎಚ್. ಮರೀಗೌಡರು, ಶಿಕ್ಷಣ ಇಲಾಖೆ ಹಲವು ಸುಧಾರಣೆಗೆ ಕಾರಣೀಭೂತರಾದ ಡಿ.ಪಿ.ಐ.(DPI) ಸಿ.ಮಂಚಯ್ಯ, ಕರ್ನಾಟಕ ಪ್ರಾಚ್ಯವಸ್ತು ಸಂಗ್ರಹಾಲಯದ ಮಹಾನಿರ್ದೇಶಕರಾದ ಕೃಷ್ಣಪ್ಪನವರು, ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಹುಲುವಾಡಿ ರಮೇಶ, ಕೇಂದ್ರ ರಕ್ಷಣಾ ಇಲಾಖೆ ವಿಜ್ಞಾನಿ ಕೆ. ಪ್ರಹ್ಲಾದ್‌ರಾವ್ ಅಮೇರಿಕಾದ ನಾಸಾ ವಿಜ್ಞಾನಿ ಕೆ.ಜಿ.ರಾವ್"[೨]. ಹೀಗೆ ಹಲವು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಮಹನೀಯರನ್ನು ಒಳಗೊಂಡ ಜಿಲ್ಲೆ ರಾಮನಗರ ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕ,

ಸಾಹಿತ್ಯಿಕ, ಸಮಾಜಸೇವೆ ತನ್ನದೇ ಆದಂತಹ ಕೊಡುಗೆ ನೀಡುವುದರ ಮೂಲಕ ಕೋಮುಸೌಹಾರ್ದತೆಗೆ ಹೆಸರಾದ ೧೦ಕ್ಕಿಂತಲೂ ಹೆಚ್ಚು ಆದಿಮ ಸಂಸ್ಕೃತಿಯನ್ನು ಹೊಂದಿರುವ ಬುಡಕಟ್ಟು ಲಕ್ಷಣವನ್ನು ಹೊಂದಿರುವ ಸಮುದಾಯಗಳು ರಾಮನಗರ ಜಿಲ್ಲೆಯಲ್ಲಿವೆ. ಹಲವು ಮತಾವಲಂಬಿಗಳಾದ ಸಿಖ್, ಜೈನರು, ಬೌದ್ಧರನ್ನೊಳಗೊಂಡಂತೆ ರಾಜ್ಯದ ಹಲವು ವಿಭಾಗಗಳ ಶ್ರಮಿಕ ವರ್ಗದವರಿಗೆ ಆಶ್ರಯವನ್ನು ನೀಡುವುದರ ಮೂಲಕ ವೈಶಿಷ್ಟ್ಯತೆಯನ್ನು ಉಳಿಸಿಕೊಂಡಿದೆ. ಎಲ್ಲಾ ವಿಚಾರಗಳಿಗೂ ಕಳಸವಿಟ್ಟಂತೆ ೧೯೨೮ರಲ್ಲಿ ಬುಡಕಟ್ಟು ಜನರ ಬಗ್ಗೆ ದಾಖಲೆಗಳನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಹೊರತಂದು ಇಂದಿನ ಬುಡಕಟ್ಟು ಅಧ್ಯಾಯನಕ್ಕೆ ಬುನಾದಿಯಂತ್ತಿರುವ “ 'ದಿ ಮೈಸೂರು ಟ್ರೈಬ್ಸ್ ಅ್ಯಂಡ್ ಕ್ಯಾಸ್ಟ್' ಗ್ರಂಥ ಹೊರಬರಲು ಕಾರಣರಾದ ಹೆಚ್.ವಿ. ನಂಜುಂಡಯ್ಯನವರು ರಾಮನಗರ ಜಿಲ್ಲೆಯವರು”[೧೩] ಎಂಬುದು ಒಂದು ದೊಡ್ಡ ಹೆಮ್ಮೆ. ಇಂತಹ ಹಲವು ಸಾಧಕರನ್ನೊಳಗೊಂಡಿರುವ ರಾಮನಗರ ಜಿಲ್ಲೆ ಬುಡಕಟ್ಟು ವೈಶಿಷ್ಟ್ಯತೆಗಳನ್ನು ಇರಿಸಿಕೊಂಡಿರುವ ಆದಿಮ ಸಂಸ್ಕೃತಿಯ ಸಂಗಮವಾಗಿ ಕಾಣುತ್ತದೆ.

೨.೧೪. ಅಧ್ಯಯನಕ್ಕೆ ಆಯ್ದುಕೊಂಡ ತಾಲೂಕುಗಳ ಭೌಗೋಳಿಕ ವಿವರಗಳು

ಚನ್ನಪಟ್ಟಣ: ಚನ್ನಪಟ್ಟಣ ತಾಲೂಕು ರಾಮನಗರ ಜಿಲ್ಲೆಯ ಒಂದು ತಾಲೂಕಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ರಾಮನಗರವು ಚನ್ನಪಟ್ಟಣ ತಾಲೂಕಿಗೆ ಒಂದು ಉಪ ತಾಲೂಕಾಗಿತ್ತು ಎಂಬುದು ಒಂದು ವಿಶೇಷ. ರಾಮನಗರ ಕನಕಪುರ ಮಂಡ್ಯ ಜಿಲ್ಲೆಯ ಮಳವಳ್ಳಿ, ಮದ್ದೂರು ತಾಲೂಕುಗಳು ಚನ್ನಪಟ್ಟಣ ತಾಲೂಕಿನ ಗಡಿಯನ್ನು ಹಂಚಿಕೊಂಡಿವೆ. ಈ ತಾಲೂಕಿನಲ್ಲಿ ಒಟ್ಟು ೩೨ ಗ್ರಾಮಪಂಚಾಯಿತಿಗಳು, ೫ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳನ್ನು, ೧೩೪ ಜನವಸತಿ ಗ್ರಾಮಗಳನ್ನು, ೧೧ ಜನ ರಹಿತ ಬೇಚಾರಕ್ ಗ್ರಾಮಗಳನ್ನು ಹೊಂದಿದ್ದು, ಮೂರು ಹೋಬಳಿಗಳಾದ ವಿರೂಪಾಕ್ಷಿಪುರ, ಮಳೂರು, ಕಸಬಾವನ್ನು ಒಳಗೊಂಡಿದೆ. ವಿಸ್ತೀರ್ಣ ೫೪೩ ಚ.ಕಿ.ಮೀ. ಇದ್ದು “೨೦೧೧ರಂತೆ ೨೬೧೩೦೪ ಒಟ್ಟು ಜನಸಂಖ್ಯೆಯನ್ನು ಹೊಂದಿದೆ. ಲಿಂಗಾನುಪಾತದಲ್ಲಿ ಜಿಲ್ಲೆಯಲ್ಲಿ ಮೊದಲನೆ ಸ್ಥಾನವನ್ನು ಕಾಯ್ದುಕೊಂಡಿದ್ದು ಜಿಲ್ಲೆಯಲ್ಲಿ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿರುವ ತಾಲೂಕಾಗಿದೆ”[೧೪]. ೧೯೨.೯೦ ಚ.ಕಿ.ಮೀ. ಅರಣ್ಯವನ್ನು ಹೊಂದಿದೆ. ರಾಜ್ಯದಲ್ಲೇ ಅತಿ ದೊಡ್ಡ ಪೋಲಿಸ್ ತರಬೇತಿ ಶಾಲೆಯನ್ನು ಹೊಂದಿದೆ.

ಈ ತಾಲೂಕಿನ ಮಣ್ಣು ವೈವಿಧ್ಯತೆಯಿಂದ ಕೂಡಿದ್ದು, ತೆಂಗು, ಮಾವು, ಅಡಿಕೆ, ವೀಳ್ಯೆದೆಲೆ, ಶುಂಠಿ, ಬಾಳೆ, ತರಕಾರಿ ಮತ್ತು ಹೂವಿನ ಕೃಷಿಗೆ ಸಹಕಾರಿಯಾಗಿದೆ. ೭೨.೬೦ ಚ.ಕಿ.ಮೀ. ರಾಜ್ಯ ಹೆದ್ದಾರಿಯನ್ನು ೧೧ ಕಿ.ಮೀ. ರೈಲ್ವೆ ಮಾರ್ಗವನ್ನು ಹೊಂದಿದೆ ರಾಮನಗರ ಜಿಲ್ಲೆ. ೫೦೬.೧೦ ಚ.ಕಿ.ಮೀ. ಜಿಲ್ಲಾ ಮುಖ್ಯರಸ್ತೆ ಹಾಗೂ ೫೮೯.೬೫ ಚ.ಕಿ.ಮೀ. ಹಳ್ಳಿ ರಸ್ತೆಯನ್ನು ಹೊಂದಿದ್ದು ಸಾರಿಗೆ ಸೌಲಭ್ಯವನ್ನು ಹೊಂದಿದೆ. ಕರ್ನಾಟಕದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಕಾಲಘಟ್ಟದಲ್ಲಿ ಚನ್ನಪಟ್ಟಣ ತಾಲೂಕು ತನ್ನ ಹೆಜ್ಜೆ ಗುರುತುಗಳನ್ನು ಮೂಡಿಸಿದೆ. ಈ ನಾಡಿನ ವೈವಿಧ್ಯಮಯ ಸಾಂಸ್ಕೃತಿಕ

ದಾಖಲೆಗಳಲ್ಲಿ ಇದರ ಕಾಣಿಕೆಯನ್ನು ಸ್ಪಷ್ಟವಾಗಿ ಗುರುತಿಸಬಹುದು. ಗೊಂಬೆಯಲೋಕ, ಬೊಂಬೆ ನಗರಿ ಎಂದು ವಿಖ್ಯಾತಿ ಹೊಂದಿದ್ದು, "ಜಗತ್ತಿನಲ್ಲಿ ಆಟದ ಸಾಮಾನುಗಳಲ್ಲಿ ವಿಶಿಷ್ಟತೆಯನ್ನು ಹೊಂದಿರುವುದಲ್ಲದೆ ಈ ಪ್ರದೇಶದಲ್ಲಿ ಮಾತ್ರ ದೊರೆಯುವ ವಿಶೇಷವಾದ ಅಲೆಮರದಿಂದ ತಯಾರಿಸುವ ಬಣ್ಣದ ಗೊಂಬೆಗಳು ಅಮೇರಿಕಾದ ಶ್ವೇತಭವನದಿಂದ ಹಿಡಿದು ದೂರದ ಡೆನ್ಮಾರ್ಕ್, ಜಪಾನ್, ಚೀನಾ ಮುಂತಾದ ವಿದೇಶಗಳಿಗೆ ವಾರ್ಷಿಕವಾಗಿ ೫೦ ಕೋಟಿ ರೂಪಾಯಿಗೂ ಅಧಿಕ ಆಟಿಕೆಗಳು ರಫ್ತಾಗುತ್ತದೆ"[೧೫]. ಇಲ್ಲಿಯ ಗೊಂಬೆಯ ಸೌಂದರ್ಯವನ್ನು ನೋಡಿ ಮಾರುಹೋದ ಪ್ರಸಿದ್ಧ ಕವಿ ಜಿ.ಪಿ. ರಾಜರತ್ನಂ ಹೇಗೆ ಬಣ್ಣಿಸಿದ್ದಾರೆ.

"ಚನ್ನಪಟ್ಟಣದ ಬಣ್ಣದ ಗೊಂಬೆ
ಚಿನ್ನದ ಹಾಗೆ ಹೊಳೆಯುವ ಗೊಂಬೆ
ಕನ್ನಡಿ ಹಾಗೆ ಮಿನುಗುವ ಗೊಂಬೆ
ಕಣ್ಣನ್ನು ಮಿಟಕಿಸಿ ಆಡುವ ಗೊಂಬೆ"[೧೬]

ಎಂದು ಕವಿತೆ ರಚಿಸಿದ್ದಾರೆ.

ಸುಂದರವಾದ ಗೊಂಬೆಯನ್ನು ತಯಾರಿಸುತ್ತಿದ್ದ ಈ ಊರಿಗೆ ವ್ಯಾಸತೀರ್ಥರು ಚಂದದ ಪಟ್ಟಣವೆಂದು ಕರೆದರೆ, ಚಂದನದ ಗೊಂಬೆ ತಯಾರಿಕೆಗೆ ಪ್ರಸಿದ್ಧಿ ಪಡೆದಿದ್ದರಿಂದ ಚನ್ನಪಟ್ಟಣ ಎಂದು ಹೆಸರಾಯಿತು ಎಂದು ತಿಳಿದುಬರುತ್ತದೆ. ೧೮೦೦ ಜುಲೈ ತಿಂಗಳಲ್ಲಿ ಬೆಂಗಳೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡ ಬ್ರಿಟಿಷ್ ಅಧಿಕಾರಿ ಡಾ. ಫ್ರಾನ್ಸಿಸ್ ಬುಕೆನಾನ್ ಈ ನಗರದ ಬಣ್ಣದ ವಸ್ತುಗಳನ್ನು ನೋಡಿ "A Very Beautiful Place" ಎಂದು ತಿಳಿಸಿದ್ದಾರೆ. ಜೊತೆಗೆ ದೆಹಲಿಯ ಗಣರಾಜ್ಯೋತ್ಸವ ಸಮಾರಂಭದಲ್ಲಿ ಈ ತಾಲೂಕಿನ ಚನ್ನಪಟ್ಟಣಗೊಂಬೆಯ ಸ್ತಬ್ಧ ಚಿತ್ರವು ರಾಜ್ಯವನ್ನು ಪ್ರತಿನಿಧಿಸಿ ಬಹುಮಾನವನ್ನು ಪಡೆದು ದಾಖಲೆ ಮೂಡಿಸಿದ ಹಿರಿಮೆ ಈ ತಾಲೂಕಿನದ್ದಾಗಿದೆ. ಚನ್ನಪಟ್ಟಣ ತೆಂಗು, ಅಡಿಕೆ, ಕಬ್ಬು, ಬಾಳೆಗಳಿಂದ ಕೂಡಿದ ಪ್ರದೇಶ ಎಂದು ಹೊಗಳಿದ್ದಾನೆ"[೧೭]. ಚನ್ನಪಟ್ಟಣ ನಮ್ಮ ನಾಡಿನ ಅತ್ಯಂತ ಹಳೆಯ ಊರುಗಳಲ್ಲಿ ಒಂದು. ೧೦೦೦ ವರ್ಷಗಳಿಗೂ ಮಿಗಿಲಾದ ಲಿಖಿತ ಇತಿಹಾಸ ದಾಖಲೆಯಲ್ಲಿ ಈ ಊರಿನ ಉಲ್ಲೇಖವಿದೆ. ಈ ಪ್ರದೇಶದ ಮೂಲ ಲಕ್ಷಣವನ್ನು ಗಮನಿಸಿ ಎರಡು ಭಾಗಗಳಾಗಿ ವಿಂಗಡಿಸಬಹುದು.

೧. ಉತ್ತರ ಮತ್ತು ವಾಯವ್ಯ ಭಾಗದಲ್ಲಿ ಹಲವು ಬೆಟ್ಟಗಳ ಸಾಲುಗಳಿಂದ ಕೂಡಿದ್ದು, ಹೆಚ್ಚಾದ ಬೆಂಗಾಡು ಮತ್ತು ಕುರುಚಲು ಸಸ್ಯಗಳನ್ನೊಳಗೊಂಡ ಅರಣ್ಯವನ್ನು ಹೊಂದಿದ್ದು, ಹೆಚ್ಚು ನೀರಾವರಿ ಪ್ರದೇಶ ಕಂಡುಬರುವುದಿಲ್ಲ.

೨. ದಕ್ಷಿಣ ನೈರುತ್ಯ ಭಾಗವು ಮೈದಾನ ಪ್ರದೇಶವಾಗಿದ್ದು ಕೆಲವು ಕಡೆ ಕೆರೆ ಮತ್ತು ನೀರಾವರಿ ಸೌಲಭ್ಯ ಕಂಡುಬರುತ್ತದೆ.

ಕಣ್ವ ನದಿಯು ಈ ತಾಲೂಕಿನ ಮುಖ್ಯ ನದಿಯಾಗಿದ್ದು, ಮಾಗಡಿ ತಾಲೂಕಿನ ಶ್ರೀಪತಿಹಳ್ಳಿಯಲ್ಲಿ ಉದ್ಭವಿಸಿ ಉತ್ತರದಿಂದ ದಕ್ಷಿಣಕ್ಕೆ ಹರಿಯುತ್ತದೆ. ಕಣ್ವ ನದಿ ಹರಿಯುವ ಪ್ರದೇಶವು ಸಮುದ್ರ ಮಟ್ಟದಿಂದ ಸುಮಾರು ೬೫ ಮೀಟರ್ ಎತ್ತರವಾಗಿದ್ದು, ಜಲಾನಯನ ಪ್ರದೇಶದಿಂದ ೨೧೫ ಚ. ಹೊಂದಿದೆ. ಚನ್ನಪಟ್ಟಣ ತಾಲೂಕಿನ ಗಡಿಯಿಂದ ಪ್ರಾರಂಭವಾಗಿ ತಾಲೂಕಿನ ಗಡಿ ಗ್ರಾಮವಾದ ಗುಡಿಸರಗೂರಿನ ಸಮೀಪ ಕಾವೇರಿ ನದಿಯ ಉಪನದಿಯಾದ ಶಿಂಷಾ ನದಿಗೆ ಸೇರುತ್ತದೆ. ನದಿಯ ಅಕ್ಕಪಕ್ಕದಲ್ಲಿ ತೋಟಗಳಿದ್ದು ೫೦೦೦ ಎಕರೆಗೆ ನೀರಾವರಿ ಸೌಲಭ್ಯವನ್ನು ಒದಗಿಸುತ್ತದೆ. ತಾಲೂಕಿನಲ್ಲಿ ಹಲವಾರು ದೊಡ್ಡ ಕೆರೆಗಳಿವೆ. ರಾಮಮ್ಮನಕೆರೆ, ಕೂಡ್ಲೂರುಕೆರೆ, ಮಳೂರುಪಟ್ಟಣ, ಅಕ್ಕೂರು, ಹೊಂಗನೂರು ಕೆರೆಗಳು ನೀರಿನ ಸೆಲೆಯಾಗಿದೆ. ಚನ್ನಪಟ್ಟಣದಿಂದ ಸುಮಾರು ೮ ಕಿ.ಮೀ. ದೂರದಲ್ಲಿರುವ ಅಬ್ಬೂರಿನ ಬಳಿ ಈ ನದಿಗೆ ಮೈಸೂರು ಮಹಾರಾಜರ ಆಳ್ವಿಕೆಯ ಕಾಲದಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರ ಮಾರ್ಗದರ್ಶನದಲ್ಲಿ ೧೯೪೦-೪೬ರ ಅವಧಿಯಲ್ಲಿ ಸಣ್ಣ ಅಣೆಕಟ್ಟು ನಿರ್ಮಾಣವಾಗಿದ್ದು ಸ್ವಾತಂತ್ರ್ಯಪೂರ್ವದಲ್ಲಿ ನಿರ್ಮಾಣವಾದ ಹಳೆಯ ಅಣೆಕಟ್ಟಾಗಿದ್ದು ಏಷ್ಯಾದಲ್ಲಿ ಪ್ರಥಮ ಸ್ವಯಂಚಾಲಿತ ತೂಬಿನ ತಾಂತ್ರಿಕತೆಯನ್ನು ಹೊಂದಿದ್ದು ಈ ತಾಲೂಕಿನ ಮೂವತ್ತು ಗ್ರಾಮಗಳಿಗೆ ನೀರು ಹಾಗೂ ವ್ಯವಸಾಯಕ್ಕೆ ಉಪಯುಕ್ತವಾಗಿದೆ. ಸದ್ಯಕ್ಕೆ ಇದು ಕಾವೇರಿ ನೀರಾವರಿ ನಿಗಮದ ವಶದಲ್ಲಿದೆ.

ರಾಮನಗರ ಜಿಲ್ಲೆ ಪೌರಾಣಿಕವಾಗಿ ಮಹತ್ವ ಹೊಂದಿರುವುದಲ್ಲದೆ ಐತಿಹಾಸಿಕವಾಗಿ ಗವಿರಂಗಸ್ವಾಮಿ ಬೆಟ್ಟ, ಮಾಕಳಿಬೆಟ್ಟ, ನರಸಿಂಹಸ್ವಾಮಿ, ವಾಡೇಮಲ್ಲೇಶ್ವರ, ಚನ್ನಾಪ್ಪಾಜಿಬೆಟ್ಟ, ತಾಲೂಕು ಗಡಿಯ ಶ್ರವಣಪ್ಪನಬೆಟ್ಟ, ಸಿದ್ಧೇಶ್ವರ ಬೆಟ್ಟಗಳಿವೆ. ಶರಣರು, ಸಂಗೀತಗಾರರು, ವಿದ್ವಾಂಸರು, ಕೀರ್ತನೆಕಾರರು, ಕವಿಗಳು ಮತ್ತು ದಾರ್ಶನಿಕರಿಗೆ ಈ ತಾಲೂಕು ಜನ್ಮ ನೀಡಿದೆ. ಧಾರ್ಮಿಕ, ರಾಜಕೀಯ, ಶೈಕ್ಷಣಿಕ, ರಂಗಭೂಮಿ, ಸಿನಿಮಾರಂಗ ಅಧ್ಯಾತ್ಮ ಚಿಂತಕರ ಪರಂಪರೆಯ ಇತಿಹಾಸವನ್ನು ಹುಟ್ಟುಹಾಕಿದೆ. ಭಾರತದಲ್ಲೇ ಪ್ರಥಮ ಎನಿಸಿದ ರೇಷ್ಮೆ ಸಂಶೋಧನಾ ಕೇಂದ್ರವು ಟಿಪ್ಪುಸುಲ್ತಾನ್ ಆಡಳಿತ ಕಾಲದಲ್ಲಿ ಕರಿಕಲ್ಲ ಫಾರಂ ಎಂದು ಹೆಸರು ಗಳಿಸಿರುವ ಚನ್ನಪಟ್ಟಣದ ಬಳಿ ಸ್ಥಾಪಿಸಲ್ಪಟ್ಟಿತು. ಮೈಸೂರು ರಾಜ್ಯಕ್ಕೆ ಅರಗಿನ ವಸ್ತುಗಳನ್ನು ತಯಾರಿಸುವ ಮೂಲಕೇಂದ್ರ ಚನ್ನಪಟ್ಟಣ. ವಾದ್ಯಗಳಿಗೆ ಬೇಕಾದ ಉತ್ಕೃಷ್ಟವಾದ ತಂತಿಯೂ ಕೂಡ ತಯಾರಾಗುತ್ತಿತ್ತು. ಹೈದರಾಲಿ ಕಾಲದಲ್ಲಿ ಈ ಸ್ಥಳದಲ್ಲಿ ತಯಾರಾಗುತ್ತಿದ್ದ ವಾದ್ಯಗಳ ತಂತಿಗಳಿಗೆ ದೆಹಲಿಯಲ್ಲಿ ಅಪಾರವಾದ ಬೇಡಿಕೆಯಿತ್ತು. ಇಲ್ಲಿನ ವಿಶೇಷವೆಂದರೆ ಸ್ಥಳದಲ್ಲೇ ತಯಾರಿಸಿದ, ಹದವಾಗಿ ಕಾಯಿಸಿ ತಯಾರಿಸಿದ ಉಕ್ಕಿನಿಂದ ತಂತಿಯನ್ನು ತಯಾರಿಸುವ ಕೌಶಲ್ಯ ವನ್ನು ಹೊಂದಿದ್ದ ತಂತ್ರಜ್ಞಾನ ತಂಡವೇ ಇದ್ದಿತು. ಗಾಜಿನ ಬಳೆಗಳು, ಅರಗಿನ ವಸ್ತು, ಸ್ಟೀಲ್ ಚೇರು, ಬಿಳಿಸಕ್ಕರೆ ತಯಾರಿಕೆಗೆ ಈ ಪ್ರದೇಶ ಪ್ರಸಿದ್ಧಿ ಪಡೆದಿತ್ತು. ಹಾಗೆಯೇ "ಚನ್ನಪಟ್ಟಣದಲ್ಲಿನ ಕುಂಬಾರಿಕೆ ಯಲ್ಲಿ ಮಣ್ಣಿನಲ್ಲಿ ಗಂಟೆಗಳಲ್ಲಿ ಸುಶ್ರಾವ್ಯವಾದ ನಾದ ಹೊಮ್ಮಿಸುವ ಗಂಟೆ ತಯಾರಿಕೆಯ ತಂತ್ರಜ್ಞನರು ಇದ್ದರು"[೧೮] ಎಂಬುದು ವಿಶೇಷ.

ರಾಮನಗರ ಜಿಲ್ಲಾ ಪ್ರದೇಶದಲ್ಲಿ ವಿಜಯನಗರ ರಾಜ ಪ್ರತಿನಿಧಿಯಾದ ಜಗದೇವರಾಯನು "ಉತ್ತರದ ಬಾರ್‌ಮಹಲ್‌ನಿಂದ ಪಶ್ಚಿಮಘಟ್ಟದವರೆಗಿನ ಪ್ರದೇಶಕ್ಕೆ ಅರಸನಾಗಿದ್ದ; ಚನ್ನಪಟ್ಟಣ ಈ ಪ್ರಾಂತ್ಯದ ರಾಜಧಾನಿಯಾಗಿತ್ತು. ಈತನಿಗೂ ವಿಜಯನಗರ ಅರಸರಿಗೂ ವೈವಾಹಿಕ ಸಂಬಂಧ ಇದ್ದು, ಕ್ರಿ.ಶ. ೧೫೬೬ರಲ್ಲಿ ಪೆನುಗೊಂಡದ ಮೇಲೆ ನಡೆದ ಮುಸ್ಲಿಂ ಅರಸರ ದಾಳಿಯನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ"[೧೯]. ಈತನ ನಂತರ ಸ್ವಲ್ಪ ಸಮಯ ಮರಾಠರ ರಣೋಜಿರಾಯ, ನಂತರ ಇಮ್ಮಡಿ ಜಗದೇವ, ಮುಮ್ಮಡಿ ಜಗದೇವ ಮತ್ತು ಅಂಕುಶರಾಯರು ಚನ್ನಪಟ್ಟಣವನ್ನು ಆಳಿದರು. ಕ್ರಿ.ಶ. ೧೬೩೦ರಲ್ಲಿ ಈ ಪಾಳೆಯಪಟ್ಟಿನ ಒಡೆತನವನ್ನು ಮೈಸೂರಿನ ಚಾಮರಾಜ ಒಡೆಯರು ಗಳಿಸಿಕೊಂಡರು. ನಂತರ ಟಿಪ್ಪು ಸುಲ್ತಾನ್ ಮತ್ತು ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟ ಪ್ರದೇಶವಾಗಿತ್ತು. ಹಲವು ಐತಿಹಾಸಿಕ ಸ್ಥಳಗಳನ್ನು ಒಳಗೊಂಡಿರುವ ಈ ಪ್ರದೇಶವು ಗಂಗ ವಂಶದ ಇತಿಹಾಸದ ದಾಖಲೆಯನ್ನು ತಿಳಿಸುವ ಕೂಡ್ಲೂರು ರಾಜಧಾನಿ ಮಕುಂದವನ್ನು ಒಳಗೊಂಡಿದೆ. ಹಿಂದೂ ಮುಸ್ಲಿಂ ಪವಿತ್ರಸ್ಥಳವಾದ ಚನ್ನಪಟ್ಟಣದಲ್ಲಿನ ಹೈದರಾಲಿಯ ಗುರುಗಳಾದ ಫಕೀರ ಮೊಹಮ್ಮದ್ ಅಲಿಷಾ ಖಾದ್ರಿಯವರ ದರ್ಗಾ, ಬ್ರಹ್ಮಣ್ಯತೀರ್ಥರ ಬೃಂದಾವನ ಇರುವ ಅಬ್ಬೂರು, ಜೈನ ಕ್ಷೇತ್ರವೆನಿಸಿದ್ದ ಬೇವೂರು, ವೈಷ್ಣವ ಕ್ಷೇತ್ರ ದೊಡ್ಡಮಳೂರಿನ ಶ್ರೀರಾಮ ಅಪ್ರಮೇಯ ಹಾಗೂ ಪಂಚ ಶೈವ ದೇವಾಲಯಗಳಿವೆ. ಇಲ್ಲಿನ ಅಂಬೆಗಾಲು ಶ್ರೀಕೃಷ್ಣನ ವಿಗ್ರಹವನ್ನು ನೋಡಿದ ಪುರಂದರದಾಸರು 'ಅಡಿಸಿದಳೆ ಯಶೋಧೆ ಜಗದ್ದೋದ್ಧರನ' ಎಂಬ ಕೀರ್ತನೆಯನ್ನು ರಚಿಸಿದರು ಎಂಬ ಐತಿಹ್ಯವಿದೆ. ಹಾಗೆಯೇ ಈ ಸ್ಥಳಕ್ಕೆ ದಾಸರವೇಣ್ಯರಾದ ಕನಕದಾಸರು ಹಾಗೂ ಪುರಂದರ ದಾಸರು, ರಾಮಾನುಜರು, ಭೇಟಿ ನೀಡಿದ ಬಗ್ಗೆ ವಿವರಗಳು ಇವೆ. ಹಾಗೆಯೇ ಶರಣ ಸಾಹಿತ್ಯದ ಮಂಟೇಸ್ವಾಮಿ ಹಾಗೂ ಸಿದ್ದಪ್ಪಾಜಿ ಪಂಥಗಳು ಬಹುಭದ್ರವಾದ ನೆಲೆಯನ್ನು ಕಂಡುಕೊಂಡಿವೆ. ಸ್ಥಳೀಯವಾಗಿ ಹಲವು ಐತಿಹಾಸಿಕ ಕೋಟೆ ಕೊತ್ತಲಗಳು, ಮಾಸ್ತಿ–ವೀರಗಲ್ಲುಗಳು ಇದಕ್ಕೆ ಸಾಕ್ಷಿಯಾಗಿವೆ.

ಕನಕಪುರ

ಜಿಲ್ಲಾ ಕೇಂದ್ರ ರಾಮನಗರದಿಂದ ಕನಕಪುರ ೨೬ ಕಿ.ಮೀ. ದೂರದಲ್ಲಿ ಇದ್ದು ತನ್ನದೇ ಆದ ವಿಶೇಷತೆಗಳನ್ನು ಒಳಗೊಂಡಿದೆ. "ಈ ಹಿಂದೆ ಕನಕಪುರಕ್ಕೆ ಕಾಣೆಕಾರನಹಳ್ಳಿ, ಕಾನಕಾನಹಳ್ಳಿ ಎಂದು ಕರೆಯುತ್ತಿದ್ದು"[೨೦] ಕಾಣೆಕಾರ್ ಎಂದರೆ ಹೊಲಗದ್ದೆಯನ್ನು ಉಳ್ಳವನು ಎಂಬುದಾಗಿದೆ. ಕಾಣೆ ಎಂಬುದು ನಾಣ್ಯದ ಒಂದು ಅಂಶವೆಂಬ ಅರ್ಥವೂ ಹಾಗೂ ಲೇವಾದೇವಿಗಾರ ಎಂಬ ಅರ್ಥವು ಇದೆ. ಕನಕಪುರವೆಂದು ೧೦.೪.೧೯೫೨ರಂದು ಪುನರ್ ನಾಮಕರಣಗೊಂಡಿದೆ(RER No. Reven DEP. 279-352-RM 20-51-25 Bang 10-April-1952 Date/10-4-1952 ಅನ್ವಯ ಮೈಸೂರು ರಾಜ್ಯ ಪತ್ರ). ಈ ತಾಲೂಕು ಪೂರ್ವದಲ್ಲಿ ತಮಿಳುನಾಡು ರಾಜ್ಯ, ಪಶ್ಚಿಮದಲ್ಲಿ ಚನ್ನಪಟ್ಟಣ ಮತ್ತು ಮಂಡ್ಯ

ಜಿಲ್ಲೆಯ ಮಳವಳ್ಳಿ ತಾಲೂಕು ಗಡಿಯನ್ನು, ಉತ್ತರಕ್ಕೆ ಜಿಲ್ಲಾಕೇಂದ್ರ ರಾಮನಗರ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್ಲು ತಾಲೂಕು, ದಕ್ಷಿಣಕ್ಕೆ ಕಾವೇರಿ ನದಿ ಹಾಗೂ ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲೂಕನ್ನು ಗಡಿಯಾಗಿ ಹೊಂದಿದ್ದು, ಸಮುದ್ರಮಟ್ಟದಿಂದ ೬೩೧ ಮೀಟರ್ ಎತ್ತರದಲ್ಲಿದೆ. ಅಕ್ಷಾಂಶ ಕನಿಷ್ಟ ೧೨೨೪೫೨, ಗರಿಷ್ಠ ೭೭೧೮೧೨ ರೇಖಾಂಶ ಕನಿಷ್ಠ ೭೭೧೮೧೬, ಗರಿಷ್ಠ ೭೭೩೩೧೨ ಹೊಂದಿದೆ. ಸರಾಸರಿ ಕನಿಷ್ಠ ಉಷ್ಣಾಂಶ ೨೧° ೨೫° ಸಿ ಗರಿಷ್ಠ ೩೮° ೩೯°ಸಿ ಯನ್ನು ಹೊಂದಿದೆ. "ಕನಕಪುರ ತಾಲೂಕಿನ ನಕ್ಷೆಯು ಹಿಪ್ಪುನೇರಳೆ ಎಲೆಯ ಆಕಾರವನ್ನು ಹೊಂದಿದ್ದು ಕರ್ನಾಟಕ ರಾಜ್ಯದ ಎರಡನೆಯ ಅತಿದೊಡ್ಡ ತಾಲೂಕು ಎಂದು ಹೆಸರು ಗಳಿಸಿದೆ"[೨೧]. ಈ ತಾಲೂಕಿನ ವಿಸ್ತೀರ್ಣ ೧೫೯೧ ಚ.ಕಿ.ಮೀ. ಇದ್ದು, ೮೧ ಗ್ರಾಮ ಲೆಕ್ಕಿಗರ ವೃತ್ತಗಳು, ೩ ನಾಡ ಕಚೇರಿಗಳನ್ನು, ೬ ಹೋಬಳಿ ಕೇಂದ್ರಗಳಾದ ಹಾರೋಹಳ್ಳಿ, ದೊಡ್ಡಮರಳುವಾಡಿ, ಕಸಬಾ, ಸಾತನೂರು, ಕೋಡಿಹಳ್ಳಿ, ಉಯ್ಯಂಬಳ್ಳಿ ಹಾಗೂ ೪೩ ಗ್ರಾಮ ಪಂಚಾಯಿತಿಗಳು, ೮ ಜಿಲ್ಲಾ ಪಂಚಾಯಿತಿಗಳು, ೩೦ ತಾಲೂಕು ಪಂಚಾಯತ್ ಕ್ಷೇತ್ರಗಳನ್ನು, ೨೯ ಜನವಸತಿ ಗ್ರಾಮಗಳನ್ನು ೩೦ ಜನರಹಿತ ಬೇಚಾರಕ್ ಗ್ರಾಮಗಳನ್ನು ಹೊಂದಿದೆ. ೧೨೧.೩ ಚ.ಕಿ.ಮೀ. ಅರಣ್ಯ ಪ್ರದೇಶವನ್ನು ಹೊಂದಿದ್ದು, ಬಿಳಿಕಲ್ಲುಬೆಟ್ಟ, ತೇರುಬೀದಿ, ಸಂಗಮ ಹುಣಸನಹಳ್ಳಿ ಬೆಲಂದವಾಡಿ ಪ್ರದೇಶಗಳು ದಟ್ಟವಾದ ಅರಣ್ಯವನ್ನು ಹೊಂದಿದ್ದು, ವನ್ಯಮೃಗಗಳು ಹಾಗೂ ಶ್ರೀಗಂಧ, ತೇಗ, ಹೊನ್ನೆ, ತೊರೆಮತ್ತಿ, ಬೀಟೆ ಮರದಂತಹ ಅತ್ಯುತ್ತಮ ಸಸ್ಯ ಸಂಪತ್ತು ಒಳಗೊಂಡಿದೆ. ೪೭ ಕಿ.ಮೀ. ರಾಷ್ಟ್ರೀಯ ಹೆದ್ದಾರಿ, ೩೩.೫೦ ಕಿ.ಮೀ. ರಾಜ್ಯ ಹೆದ್ದಾರಿ ೩೮೩.೮೦ ಕಿ.ಮೀ. ಜಿಲ್ಲಾ ಮುಖ್ಯರಸ್ತೆಯನ್ನು ಮತ್ತು ಇತರೆ ೭೮೫.೪೦ ಕಿ.ಮೀ. ಗ್ರಾಮ ರಸ್ತೆಯನ್ನು ಹೊಂದಿದೆ. ಈ ತಾಲೂಕಿನಲ್ಲಿ ಅರ್ಕಾವತಿ ನದಿಗೆ ಹಾರೋಬಲೆ ಹತ್ತಿರ ಒಂದು ಅಣೆಕಟ್ಟು ನಿರ್ಮಿಸಲಾಗಿದೆ. ಇದು ತಾಲೂಕಿನ ಏಕೈಕ ನೀರಾವರಿ ಆಸರೆಯಾಗಿದೆ. ಈ ನದಿಯು ನಂದಿಬೆಟ್ಟದಲ್ಲಿ ಹುಟ್ಟಿ ತಾಲೂಕಿನ ಹೃದಯಭಾಗದಲ್ಲಿ ಸುಮಾರು ೪೫ ಕಿ.ಮೀ. ಹರಿಯುತ್ತದೆ. ಈ ನದಿಯು ಪ್ರಾಚೀನ ಕಾಲದಿಂದಲೂ ಈ ಪ್ರಾಂತ್ಯದ ಕೃಷಿ ಚಟುವಟಿಕೆ ಹಾಗೂ ಆದಾಯದ ಮೂಲದ ಮೇಲೆ ನಿಚ್ಚಳವಾದ ಪ್ರಭಾವ ಬೀರಿದೆ. ಕನಕಪುರ ತಾಲೂಕಿನ ಇತರೆ ನೀರಾವರಿಯ ಮೂಲಗಳಾಗಿ ಸುವರ್ಣಮುಖಿ, ವೃಷಭಾವತಿ, ಸುನಂದಹೊಳೆ, ಚಿಕ್ಕಹೊಳೆ, ಬಸವನಹೊಳೆ, ಸೀತಾಹೊಟ್ಟಲು, ನದಿ ತೊರೆಗಳು ಜೀವನಾಧಾರಕ್ಕೆ ಪೂರಕ ಎನಿಸಿದೆ. ಹಾಗೆಯೇ ಪ್ರಾಕೃತಿಕವಾಗಿ ಬೆಟ್ಟ ಗುಡ್ಡಗಳಿಂದ ಕೂಡಿದ್ದು, ಐತಿಹಾಸಿಕ ಮಹತ್ವವುಳ್ಳ ಕಬ್ಬಾಳು ದುರ್ಗ ೧೦೬೯ ಮೀಟರ್ ಎತ್ತರವಾಗಿದೆ. ಹಾಗೆಯೇ ಏಷ್ಯಾದಲ್ಲೇ ಎರಡನೆಯ ಅತಿ ದೊಡ್ಡ ಶಿಲಾತೋರಣವೆಂದು ಹೆಸರು ಗಳಿಸಿರುವ ಕಂಚನಹಳ್ಳಿಯ ಭೀಮನಕಿಂಡಿಬೆಟ್ಟ ಹೊಸದುರ್ಗ, ಬಿಳಿಕಲ್ಲು ರಂಗನಾಥಸ್ವಾಮಿಬೆಟ್ಟ, ಚಿಕ್ಕಮುದುವಾಡಿಬೆಟ್ಟ ಬಾಣಾಂತಿ ಮಾರಮ್ಮನಬೆಟ್ಟ ಐತಿಹಾಸಿಕವಾಗಿ ಧಾರ್ಮಿಕವಾಗಿ ತನ್ನದೇ ಆದ ಹಿರಿಮೆಯನ್ನು ಪಡೆದಿದೆ. ಈ ಸ್ಥಳಗಳು ಹಿಂದೆ ಅಚ್ಚಲುನಾಡು ಕಳಲೆನಾಡು, ಹೊಮ್ಮಳಿಗೆನಾಡು, ಚೊಕ್ಕನಾಡು, ಸಿಗಲನಾಡು, ಹರಿಯೂರುನಾಡು, ಏಳವೆನಾಡು ದೇಸಿಗರನಾಡು ಮಹಾನಾಡು ಎಂದು

ಹೆಸರುಗಳಿಸಿತ್ತು"[೨೨]. ಇತಿಹಾಸದಲ್ಲಿ ದಾಖಲಾಗಿದ್ದ ಚನ್ನಪಟ್ಟಣದ ಜಗದೇವರಾಯನ ಆಡಳಿತಕ್ಕೆ ಒಳಪಟ್ಟಿದ ಪ್ರದೇಶವಾಗಿದ್ದು ಈ ಊರಿನಲ್ಲಿ ಅರ್ಕಾವತಿ ನದಿಯ ದಂಡೆಯ ಮೇಲೆ ಕೋಟೆಯೊಂದನ್ನು ಟಿಪ್ಪು ನಿರ್ಮಿಸಿದ್ದನು. "ಟಿಪ್ಪುಸುಲ್ತಾನ್ ಕಾಲದಲ್ಲಿ ಕಬ್ಬಾಳು ದುರ್ಗಕ್ಕೆ "ಜಾಫರಬಾದ್" ಎಂದು ನಾಮಕರಣ ಮಾಡಿದ್ದ"[೨೩]. ೧೭೯೩–೧೭೯೯ರಲ್ಲಿ ಬ್ರಿಟಿಷರ ಸೈನ್ಯವು ಕನಕಪುರದ ಮಾರ್ಗವಾಗಿ ಶ್ರೀರಂಗಪಟ್ಟಣವನ್ನು ತಲುಪುವುದನ್ನು ತಡೆಯಲು ಕನಕಪುರಕ್ಕೆ ಎರಡು ಬಾರಿ ಬೆಂಕಿ ಹಾಕಿಸಿ ಸುಟ್ಟನೆಂದು ಹಾಗೂ ಸೇತುವೆಯನ್ನು ನಾಶ ಮಾಡಿಸಿದ್ದ ಎಂದು ೧೮೦೦–೧೮೦೧ರಲ್ಲಿ ಕಾನಕಾನಹಳ್ಳಿಗೆ ಭೇಟಿ ನೀಡಿದ್ದ ಪ್ರವಾಸಿ ಫ್ರಾನ್ಸಿಸ್ ಬುರಾನ್ ದಾಖಲಿಸಿದ್ದಾನೆ. ಹಿಂದೆ ಈ ಸ್ಥಳವು ಉತ್ತಮ ದರ್ಜೆಯ ಇದ್ದಲು ಉತ್ಪಾದನೆಯಲ್ಲಿ, ಕೆಂಪು ಹರುಳುಗಳ ಉತ್ಪಾದನೆಯಲ್ಲಿ ಹಾಗೂ ಉಕ್ಕು ಉತ್ಪಾದನೆಯಲ್ಲಿ ಹೆಸರು ಗಳಿಸಿತ್ತು ಎಂದು ತಿಳಿದುಬರುತ್ತದೆ. ಇಂದು ಮೇಕೆದಾಟು ಸಂಗಮ, ಚುಂಚುಫಾಲ್ಸ್ ಕಬ್ಬಾಳುದುರ್ಗ, ಮೈತ್ರಿಯಿ ಪಿರಮಿಡ್ ವ್ಯಾಲಿ ಮುಂತಾದ ಕ್ಷೇತ್ರಗಳಿಂದ ಈ ತಾಲೂಕು ಪ್ರಸಿದ್ಧ ಪಡೆದ ಪ್ರೇಕ್ಷಣೀಯ ಕ್ಷೇತ್ರವಾಗಿದೆ. ಹಾಗೆಯೇ ಈ ತಾಲೂಕಿನ ಬಹುಪಾಲು ಭಾಗ ಕಣಶಿಲೆಗಳಿಂದ ಕೂಡಿದ್ದು ಅಗ್ನಿಶಿಲೆಯ ಪ್ರಮುಖ ಪ್ರಭೇದವಾಗಿದ್ದ ಭೂಪದರವು ರೂಪಾಂತರ ಹೊಂದಿ ಸುಮಾರು ೫೦೦ ಕೋಟಿ ವರ್ಷಗಳ ಹಿಂದೆ ಶಿಲಾದ್ರವರೂಪದ ಲಾವಾರಸ ಭೂಮಿಯ ಕೇಂದ್ರ ಭಾಗದಿಂದ ಹೊರಚಿಮ್ಮಿ ಘನೀಕರಿಸಿ ಉಂಟಾದ ಶಿಲೆಯು ಈ ಪ್ರದೇಶದಲ್ಲಿ ಕಂಡುಬರುವ ಗ್ರಾನೈಟ್‌ಶಿಲೆ. ಈ ಶಿಲೆಯು ಅತ್ಯುತ್ತಮ ದರ್ಜೆಯಾಗಿದ್ದು ಶೇ. ೭೫ ಭಾಗ ಇಂತಹ ಶಿಲೆಯನ್ನು ಒಳಗೊಂಡಿದ್ದು ೩೦ರಿಂದ ೧೩೦ ಮೀಟರ್ ದಪ್ಪದ ಪದರವನ್ನು ಹೊಂದಿದ್ದು ವ್ಯಾಪಾರದ ದೃಷ್ಟಿಯಿಂದ ಬಹಳ ಮಹತ್ವ ಪಡೆದಿದೆ. ಈ ಶಿಲೆಗಳನ್ನು ನವೀರಾಗಿ ಕತ್ತರಿಸಿ ಅತ್ಯಂತ ಕಲಾತ್ಮಕವಾಗಿ ಮೆರುಗು ನೀಡಿ ವಿದೇಶಕ್ಕೆ ರಫ್ತು ಮಾಡುತ್ತಾರೆ. ವಿದೇಶದಲ್ಲಿ ಇಲ್ಲಿಯ ಗ್ರಾನೈಟಿಗೆ ಅಧಿಕವಾದ ಬೇಡಿಕೆ ಇದೆ. ಇತ್ತೀಚಿನ ವರ್ಷಗಳಲ್ಲಿ ಅತಿ ಹೆಚ್ಚು ವಿದೇಶಿ ವಿನಿಮಯ ಗಳಿಸುವಲ್ಲಿ ಸಹಕಾರಿಯಾಗಿದೆ. ಈ ಉದ್ಯಮವು ಕೆಲವೇ ಕೆಲವು ಜನರ ಕೈಯಲ್ಲಿ ಉಳಿದಿದ್ದು ನಿರಂತರ ನಿಸರ್ಗದ ಒಡಲನ್ನು ಸೀಳುತ್ತಾ ಪ್ರಕೃತಿಯ ಮೇಲೆ ಅತಿಹೆಚ್ಚಿನ ರೀತಿಯಲ್ಲಿ ಒತ್ತಡ ಹಾಕುತ್ತಿರುವುದು ಕಂಡುಬರುತ್ತಿದೆ. ಗಣಿಗಾರಿಕೆ ಮೀತಿಮಿರಿದ್ದು ತಾಲೂಕಿನಾದ್ಯಂತ ಇಂತಹ ದೃಶ್ಯವನ್ನು ನೋಡಬಹುದಾಗಿದ್ದು ಪ್ರಕೃತಿ ಮುನಿದು ಜನಸಮುದಾಯದ ಮೇಲೆ ಹರಿಹಾಯುವ ಸಂದರ್ಭಗಳು ಗೋಚರಿಸುತ್ತಿದೆ. ಹೀಗೆ ಗಣಿಗಾರಿಕೆ ಮುಂದುವರೆಯುವುದರಿಂದ ಈ ಸುಂದರ ನಿಸರ್ಗ ನಿರ್ಮಿತ ಪ್ರದೇಶವು ಮುಂದಿನ ಪೀಳಿಗೆಗೆ ದಕ್ಕದೆ ಹೋಗಬಹುದು ಎಂಬ ಆತಂಕವಿದೆ.

ಮಾಗಡಿ

ರಾಮನಗರ ಜಿಲ್ಲಾ ಕೇಂದ್ರದಿಂದ ೩೫ ಕಿ.ಮೀ. ದೂರದಲ್ಲಿ ಮಾಗಡಿ ಪಟ್ಟಣದ ಹೆಸರಿನ ಬಗ್ಗೆ ಐತಿಹ್ಯವಿದೆ. "ಮಾಂಡವ್ಯ ಋಷಿಗಳು ಕೆಂಪೇಗೌಡನ ವಂಶಜರಿಗೆ ಮಹಾಲಕ್ಷ್ಮಿಗಣೆ ನಿಧಿ ದೊರೆತು

ಮಹಾಗಣಿ, ಮಹಾಗಡಿ ಮಾಗಡಿಯಾಗಿದೆ. ‘ಮಾ’ ಎಂದರೆ ಲಕ್ಷ್ಮೀ ಗಡಿ ಎಂದರೆ ಸ್ಥಳವೆಂಬ ಅರ್ಥವಿದ್ದು ಮಾಗಡಿ ಲಕ್ಷ್ಮೀವಾಸ ಸ್ಥಳವಾಗಿತ್ತು ಎಂಬ ವಿಚಾರ ಪುರಾಣಗಳಲ್ಲಿ ಉಲ್ಲೇಖವಿದೆ”[೨೪].

‘ಮಾಗಧಿ’ ಎಂದರೆ ಹೋಗಳುವವರು ಹಾಗೂ ಸುವಾಸನೆಯತ್ತ ಮಲ್ಲಿಗೆ ಹೂ ಎಂಬ ಅರ್ಥಗಳಿವೆ. ಮಾಗಡಿ ಎಂದರೆ ಬೌದ್ಧರ ಕಾಲದ ಪೇಯದ ತಯಾರಿಕೆಗೆ ಕೇಂದ್ರ ಸ್ಥಾನ ಎಂಬರ್ಥವಿದೆ. ಇವೆಲ್ಲ ಮಾಗಡಿಯ ನಾಮ ವಿವೇಚನೆ ಬಗೆಗಿನ ಅಭಿಪ್ರಾಯಗಳಾಗಿವೆ. ಕ್ರಿ.ಶ. ೧೫೨೪ರ ಒಂದು ಶಾಸನವೊಂದರಲ್ಲಿ ‘ಮಾಗುಂಡಿ’ ಎಂಬ ಹೆಸರು ತಿಳಿದುಬಂದಿದೆ. ವಿಜಯನಗರ ಸಾಮ್ರಾಜ್ಯದ ಮಹಾಗಡಿಯಾಗಿದ್ದರಿಂದ ಮಾಗಡಿ ಎಂದು ಹೆಸರು ಬಂದಿತೆಂದು ಐತಿಹಾಸಿಕ ದಾಖಲೆಗಳಿಂದ ತಿಳಿದುಬಂದಿದೆ. ತಾಲೂಕಿನಲ್ಲಿ ೫ ಹೋಬಳಿಗಳಿದ್ದು ಮಾಡಬಾಳ್, ಕಸಬಾ, ತಿಪ್ಪಸಂದ್ರ ಸೋಲೂರು ಮತ್ತು ಕುದೂರುಗಳನ್ನೊಳಗೊಂಡಿವೆ. ೩೨ ಗ್ರಾಮ ಪಂಚಾಯಿತಿಗಳು ಹಾಗೂ ೬೨ ಗ್ರಾಮಲೆಕ್ಕಾಧಿಕಾರಿಗಳ ವೃತ್ತಗಳಿವೆ. ಉತ್ತರಕ್ಕೆ ಶಿವಗಂಗೆ ಬೆಟ್ಟವನ್ನು ಸೇರಿಕೊಂಡು ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕು, ಪೂರ್ವಕ್ಕೆ ಅರ್ಕಾವತಿ ನದಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲೂಕು, ದಕ್ಷಿಣಕ್ಕೆ ರಾಮನಗರದ ತಾಲೂಕಿನ ಗಡಿ, ಪಶ್ಚಿಮಕ್ಕೆ ಹುತ್ತುರಿ ದುರ್ಗದ ಬೆಟ್ಟದವರೆಗೂ ಹಬ್ಬಿದೆ. “ಮಾಗಡಿ ತಾಲೂಕು ೮೯೯ ಚ.ಕಿ.ಮೀ ವಿಸ್ತೀರ್ಣವನ್ನು ಹೊಂದಿದೆ. ೨೬ ಕಿ.ಮೀ. ರಾಷ್ಟ್ರೀಯ ಹೆದ್ದಾರಿಯನ್ನು, ೭೮.೪೦ ಕಿ.ಮೀ. ರಾಜ್ಯ ಹೆದ್ದಾರಿಯನ್ನು, ಜಿಲ್ಲಾ ಮುಖ್ಯರಸ್ತೆ ೫೦೫. ೩೫ ಕಿ.ಮೀ. ಇದೆ. ಇನ್ನಿತರ ರಸ್ತೆ ೬೫೮ ೧೫ ಕಿ.ಮೀ. ಹೊಂದಿದೆ. ಅಕ್ಷಾಂಶರೇಖೆ ೧೨° ೫೩.೩೬ ೧೩° ೦೮.೧೫ ಗರಿಷ್ಠ ರೇಖಾಂಶ ೭೭೦೬೧೧ ೭೭° ೧೬ ೪೦ಗಳು ಹೊಂದಿದ್ದು ಸಮುದ್ರಮಟ್ಟದಿಂದ ೮೪೫ ಮೀಟರ್ ಎತ್ತರದಲ್ಲಿದೆ. ಹೊಂದಿದೆ. ಒಟ್ಟು ೨೮೬ ಗ್ರಾಮಗಳನ್ನು ಇದ್ದು ಅದರಲ್ಲಿ ೨೭೪ ಜನವಸತಿ ಗ್ರಾಮಗಳಾಗಿದ್ದು, ೧೨ ಜನರಹಿತ ಬೇಚಾರಕ್ ಗ್ರಾಮಗಳಾಗಿವೆ. ಸುಮಾರು ೮೬.೪೪ ಚ.ಕಿ.ಮೀ. ಅರಣ್ಯವನ್ನು ಹೊಂದಿದೆ”[೨೫]. ಅತ್ಯಮೂಲ್ಯವಾದ ಔಷಧಿಯ ಗಿಡಮೂಲಿಕೆಗಳನ್ನು ಹೊಂದಿರುವ ಹೆಗ್ಗಳಿಕೆಯು ಇಲ್ಲಿನ ಅರಣ್ಯ ಪ್ರದೇಶಕ್ಕೆ ಇದೆ. ಸಾವನದುರ್ಗ ರಕ್ಷಿತ ಅರಣ್ಯ ಪ್ರದೇಶವಾಗಿದ್ದು, ಭೌಗೋಳಿಕವಾಗಿ ತಗ್ಗು ಪ್ರದೇಶವನ್ನು ಹೊಂದಿದೆ. ಈ ತಾಲೂಕಿನ ವ್ಯಾಪ್ತಿಯಲ್ಲಿ ಎರಡು ಜಲಾಶಯಗಳು ಕಂಡುಬರುತ್ತದೆ. ವೈ.ಜಿ. ಗುಡ್ಡ ಜಲಾಶಯವು ಕಣ್ವ ನದಿಗೂ, ಮಂಚನಬಲೆ ಜಲಾಶಯವನ್ನು ಅರ್ಕಾವತಿ ನದಿಗೂ ಕಟ್ಟಲಾಗಿದೆ. ಇಲ್ಲಿ ಪ್ರತಿ ಚ.ಕಿ.ಮೀಟರ್‌ಗೆ ೨೫೫೮ ಜನಸಾಂದ್ರತೆಯಿದ್ದು ಲಿಂಗಾನುಪಾತದಲ್ಲಿ ಪ್ರತಿ ೧೦೦೦ ಪುರುಷರಿಗೆ ೯೮೭ ಜನ ಸ್ತ್ರೀಯರನ್ನು ಕಾಣಬಹುದಾಗಿದೆ. ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಅತಿಹೆಚ್ಚು ವೀರಶೈವ ಮಠಗಳು, ಅತಿಹೆಚ್ಚು ಜೈನ ಕುಟುಂಬಗಳು ವಾಸವಾಗಿರುವ ಮತ್ತು ಜೈನ ಬಸದಿಗಳನ್ನು ಹೊಂದಿರುವ ತಾಲೂಕಾಗಿದೆ. ಮಾಯಸಂದ್ರ ಸಂಕೀಘಟ್ಟಗಳಲ್ಲಿನ ಜೈನರ ಬಸದಿಗಳಲ್ಲಿ ಇಂದಿಗೂ ನಿರಂತರ ಆರಾಧನೆ ನಡೆಯುತ್ತಿರುವುದು ವಿಶೇಷವಾಗಿದೆ. ಪ್ರಾಚೀನ ಕಾಲದಿಂದಲೂ ಬೌದ್ಧ, ಜೈನ,

ಶೈವ, ವೈಷ್ಣವರ ನೆಲೆಯಾಗಿದೆ. ಭಾರತೀಯ ಇತಿಹಾಸದಲ್ಲಿ ದಾಖಲಾಗಿರುವ ವಿಜಯನಗರ ಸಾಮ್ರಾಜ್ಯದ ಕಾಲಾವಧಿಯಲ್ಲಿ ನಡೆದ ಧರ್ಮ ಅಸಹಿಷ್ಣುತೆಗೆ ಸಂಬಂಧಿಸಿದ ಜೈನರು ಮತ್ತು ಶ್ರೀ ವೈಷ್ಣವರ ಮತೀಯ ಕಲಹವನ್ನು ವಿಜಯನಗರದ ಅರಸ ಬುಕ್ಕರಾಯನು ಬಗೆಹರಿಸಿದ ನ್ಯಾಯತೀರ್ಮಾನ ಧರ್ಮ ಸಹಿಷ್ಣುತೆಗೆ ಹೆಸರಾದ ಘಟನೆಯು ಈ ಸ್ಥಳದಲ್ಲಿ ನಡೆದದ್ದು, ಜಗತ್ತಿನ ಕೋಮುಸೌಹಾರ್ದತೆಗೆ ಅತ್ಯುತ್ತಮವಾದ ಉದಾಹರಣೆಯಾಗಿದೆ. "ಹೀಗೆಯೇ ಇದೇ ಕಾಲಘಟ್ಟದಲ್ಲಿ ಪುರಂದರದಾಸರ ಸಮಕಾಲೀನರಾದ ಪುಂಡಲೀಕವಿಠ್ಠಲ ಎಂಬ ಸಂಗೀತಗಾರನಿದ್ದನು. ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ಪರ್ಶಿಯನ್ ನೃತ್ಯ ಸಂಗೀತದ ಕಲೆಗಳನ್ನು ಕಲಿತಿದ್ದ ಅಕ್ಬರನ ಅಸ್ಥಾನದ ಮೂವತ್ತು ಪ್ರಖ್ಯಾತ ಗಾಯಕರಲ್ಲಿ ಪುಂಡಲೀಕವಿಠ್ಠಲ ದಕ್ಷಿಣ ಭಾರತದ ಏಕೈಕ ಕನ್ನಡ ಸಂಗೀತ ವಿದ್ವಾಂಸನಾಗಿದ್ದ"[೨೬] ಗಾಯನ ಮತ್ತು ನೃತ್ಯ ಕಲೆಗಳೆರಡಲೂ ಸಮಾನ ಪರಿಣತಿ ಇದ್ದವನು ಇವನೊಬ್ಬನೆ; ಆದ್ದರಿಂದ ಈತನಿಗೆ ಅಕಬರೀಯ ಕಾಳಿದಾಸ ಎನ್ನುವ ಬಿರುದನ್ನಿತ್ತು ಅಕ್ಬರನು ಸನ್ಮಾನಿಸಿದ್ದರು. ಇವನು ಮಾಗಡಿ ತಾಲೂಕು ಸಾತನೂರು ಎಂಬ ಹಳ್ಳಿಯಿಂದ ಹೋದವನು ಎಂಬುದು ಈ ತಾಲೂಕಿನ ಘನತೆಗೆ ಮತ್ತೊಂದು ಹಿರಿಮೆ. ಐತಿಹಾಸಿಕವಾಗಿ ಸಾವನದುರ್ಗ, ತಿರುಮಲೆರಂಗನಾಥ ದೇವಸ್ಥಾನ ಮಾಗಡಿಯ ಸೋಮೇಶ್ವರ ದೇವಾಲಯ, ಕಲ್ಯಬೆಟ್ಟದಲ್ಲಿರುವ ಆಂಧ್ರದ ಪಾಲ್ಕುರಿಕೆಸೋಮನಾಥ ಸರ್ವಶಿಲೆ ಚನ್ನಮ್ಮನವರ ಗದ್ದುಗೆಗಳು ಇತಿಹಾಸದ ದೃಷ್ಟಿಯಿಂದ ಪ್ರಮುಖವಾಗಿವೆ. ಹೊಯ್ಸಳರು, ಗಂಗರು, ವಿಜಯನಗರದ ಮೂಲ ಅರಸು ಹರಿಹರಬುಕ್ಕರು ಈ ಸೀಮೆಯಲ್ಲಿ ಇದ್ದವರು ಎಂಬ ವಾದಕ್ಕೆ ಪೂರಕ ಆಕರಗಳು ದೊರಕಿವೆ. ಬುಕ್ಕರಾಯನ ಭಂಟವಿಠ್ಠಲನಾಥ ಕಲ್ಯದ ಕೆರೆ ಕಟ್ಟಿಸಿ ಕಾಲುವೆಗಳನ್ನು ನಿರ್ಮಿಸಿದ್ದನು. ಹೀಗೆ ತದನಂತರ "ಮಾಗಡಿಯು ಕಾಲ ನಂತರ ಹಿತ್ತಾಳೆಯ ದೀಪದ ಕಂಬಗಳು ಹಾಗೂ ಗೃಹೋಪಯೋಗಿ ವಸ್ತುಗಳ ತಯಾರಿಕೆಯಲ್ಲಿ ಪ್ರಸಿದ್ಧಿ ಪಡೆಯಿತು. ಇದಲ್ಲದೆ ತಂಬೂರಿ ಮತ್ತು ವೀಣೆ ತಯಾರಿಕೆಯಲ್ಲಿ ದಕ್ಷಿಣ ಭಾರತದಲ್ಲಿ ಪ್ರಸಿದ್ಧಿಯನ್ನು ಪಡೆದ ಸ್ಥಳವಾಗಿತ್ತು"[೨೭]. ಹೀಗೆ ಇತಿಹಾಸದ ಪುಟದಲ್ಲಿ ಮಾಗಡಿ ಮೊಗೆದಷ್ಟು ಐತಿಹಾಸಿಕ ಸಂಪನ್ಮೂಲಗಳನ್ನು ತನ್ನ ಒಡಲಿನಲ್ಲಿ ಇರಿಸಿಕೊಂಡಿರುವ ಆಸಕ್ತ ಸಂಶೋಧಕರ ಮಹಾವೃಕ್ಷವಾಗಿದೆ.

ರಾಮನಗರ

ರಾಮನಗರವು ಹಿಂದಿನ ಕ್ಲೋಸ್‌ಪೇಟೆ. ಇಲ್ಲಿ ರಾಜ ಪ್ರತಿನಿಧಿಯಾಗಿದ್ದ ಸರ್ ಬ್ಯಾರಿ ಕ್ಲೋಸ್ ಹೆಸರಿನಿಂದಾಗಿ ಈ ಹೆಸರು ಪ್ರಾಪ್ತವಾಯಿತು. ಇಲ್ಲಿ ಅನೇಕ ಹಿಂದೂ ಮತ್ತು ಮುಸ್ಲಿಂ ಆರಾಧನ ಸ್ಥಳಗಳಿದ್ದು ರೇಷ್ಮೆ ಕೈಗಾರಿಕೆಯ ಸ್ಥಾಪನೆಯಾಗಿ ಸುಮಾರು ೨೦೦ ವರ್ಷಗಳು ಸಂದಿವೆ. ಇಲ್ಲಿನ ಮಾರುಕಟ್ಟೆಯು ಏಷ್ಯಾದಲ್ಲೇ ಹೆಸರುವಾಸಿಯಾಗಿದ್ದು, ೧೯೭೧ರಲ್ಲಿ ಈ ನಗರದ ಆಗ್ರಹಾರದಲ್ಲಿ ಮೊದಲಿಗೆ ಗೂಡಿನ ಮಾರುಕಟ್ಟೆ ಅಸ್ತಿತ್ವಕ್ಕೆ ಬಂದಿದ್ದು, ಕೆಲವು ವರ್ಷಗಳ ನಂತರ ಇದು ಬೆಂಗಳೂರು ಮೈಸೂರು ಹೆದ್ದಾರಿಗೆ ಸ್ಥಳಾಂತರವಾಯಿತು. ಶ್ರೀರಾಮದೇವರಬೆಟ್ಟವು ರಾಮನಗರದ ಇತಿಹಾಸದ

ಕೇಂದ್ರಬಿಂದುವಾಗಿದೆ. ಈ ಪ್ರದೇಶವು ಸಮುದ್ರಮಟ್ಟದಿಂದ ೩೦೬೬ ಅಡಿ ಎತ್ತರದಲ್ಲಿದೆ. ತಾಲೂಕಿನ ಉತ್ತರದಲ್ಲಿ ಮಾಗಡಿ, ಈಶಾನ್ಯದಲ್ಲಿ ಬೆಂಗಳೂರು ದಕ್ಷಿಣ ತಾಲೂಕು, ಪೂರ್ವ ಮತ್ತು ಆಗ್ನೇಯದಲ್ಲಿ ಕನಕಪುರ ತಾಲೂಕು, ದಕ್ಷಿಣ ಮತ್ತು ಪಶ್ಚಿಮದಲ್ಲಿ ಚನ್ನಪಟ್ಟಣ ತಾಲೂಕು, ವಾಯುವ್ಯದಲ್ಲಿ ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕು ಸುತ್ತುವರೆದಿದೆ.

ರಾಮನಗರ ತಾಲೂಕು ೬೩೩ ಚ.ಕಿ.ಮೀ. ವಿಸ್ತೀರ್ಣ ಹೊಂದಿದ್ದು, ನಾಲ್ಕು ಹೋಬಳಿಗಳಾದ ಕಸಬಾ, ಬಿಡದಿ, ಕೂಟಗಲ್ ಮತ್ತು ಕೈಲಂಚವನ್ನು ಹೊಂದಿದೆ. ೪೫ ಗ್ರಾಮಲೆಕ್ಕಾಧಿಕಾರಿಗಳ ವೃತ್ತ ೨ ನಾಡಕಛೇರಿಗಳು, ೨೩ ಗ್ರಾಮ ಪಂಚಾಯಿತಿಗಳು, ೪ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳು ೧೬ ಮತ್ತು ತಾಲೂಕು ಪಂಚಾಯಿತಿ ಕ್ಷೇತ್ರಗಳನ್ನೊಳಗೊಂಡಿದೆ. ೨೮ ಕಿ.ಮೀ. ರೈಲ್ವೆಹಳಿಯನ್ನು, ೧೧೪.೫೩ ಕಿ.ಮೀ. ರಾಜ್ಯ ಹೆದ್ದಾರಿ, ೧೬೦.೧೩ ಜಿಲ್ಲಾ ಮುಖ್ಯರಸ್ತೆ ಮತ್ತು ಇತರೆ ೫೨೨.೧೦ ಕಿ.ಮೀ. ರಸ್ತೆಯನ್ನು ಹೊಂದಿದೆ. ಒಟ್ಟು ೧೩೩ ಗ್ರಾಮಗಳನ್ನು ಹೊಂದಿದ್ದು ೧೨೩ ಜನವಸತಿಯ ಗ್ರಾಮಗಳು, ೧೦ ಜನರಹಿತ ಗ್ರಾಮಗಳನ್ನು ಒಳಗೊಂಡಿದೆ. ೮೫.೬೮ ಚ.ಕಿ.ಮೀ. ಅರಣ್ಯವನ್ನು ಹೊಂದಿದ್ದು, ಹಂದಿಗೊಂದಿ ಅರಣ್ಯ ಮತ್ತು ಹುಲ್ತಾರ್ ಅರಣ್ಯ ಹಾಗೂ ರಾಮಗಿರಿಬೆಟ್ಟ ಅರಣ್ಯವನ್ನು ಹೊಂದಿದೆ. ಹುಲಿಮುತ್ತಿಗೆ ಅರಣ್ಯ ಮತ್ತು ಪವಿತ್ರವನದಲ್ಲಿ ರಾಜ್ಯದಲ್ಲೇ ಅಪರೂಪವೆನಿಸುವ ವಿವಿಧ ಔಷಧಿಯ ಉಪಯುಕ್ತ ನಾನಾ ಜಾತಿಯ ಗಿಡಮೂಲಿಕೆಗಳನ್ನು ಬೆಳೆಸಲಾಗಿದೆ. ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಅತಿಹೆಚ್ಚು ಕೈಗಾರಿಕೆಯ ಪ್ರದೇಶವನ್ನು ಈ ತಾಲೂಕು ಹೊಂದಿದೆ. ತಾಲೂಕಿನಲ್ಲಿ ೨೬೬೧೪ ಜನಸಂಖ್ಯೆ ಇದ್ದು, ಪ್ರತಿ ಚ.ಕಿ.ಮೀ.ಗೆ ೩೮೨ ಜನರನ್ನು ಒಳಗೊಂಡಿದೆ. ಲಿಂಗಾನುಪಾತದ ಪ್ರಕಾರ ಪ್ರತಿ ಸಾವಿರ ಪುರುಷರಿಗೆ ೯೫೪ ಸ್ತ್ರೀಯರನ್ನು ಹೊಂದಿದೆ. ಈ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಇತರ ತಾಲೂಕಿಗೆ ಹೋಲಿಸಿದರೆ ಲಿಂಗಾನುಪಾತ ಅತಿ ಕಡಿಮೆ ಹೊಂದಿರುವ ತಾಲೂಕಾಗಿ ರಾಮನಗರ ಕಂಡುಬರುತ್ತದೆ. ಈ ತಾಲೂಕಿನ ಪ್ರೇಕ್ಷಣೀಯ ಹಾಗೂ ಐತಿಹಾಸಿಕ ಕ್ಷೇತ್ರಗಳೆಂದರೆ ೧. ರೇವಣಸಿದ್ಧೇಶ್ವರ ಬೆಟ್ಟ ಜಲಸಿದ್ಧೇಶ್ವರಬೆಟ್ಟ, ಜಾನಪದ ಕಲೆಗಳ ಸ್ವರ್ಗವೆಂದೇ ಪ್ರಸಿದ್ಧ ಪಡೆದಿರುವ ಜಾನಪದಲೋಕ, ಜೋಗರದೊಡ್ಡಿಯ ಕರಕುಶಲ ತರಬೇತಿ ಕೇಂದ್ರ, ನಾಮಧಾರಿ ಸಿಡ್ಸ್ ಕಂಪನಿಯ ಬೀಜೋತ್ಪಾದನಾ ಕೇಂದ್ರವನ್ನು ಜಿಲ್ಲೆಯು ಒಳಗೊಂಡಿದ್ದು ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಸಿಖ್ಖ್ ಧರ್ಮಿಯರು ಕಂಡುಬರುವ ತಾಲೂಕು ಎಂದು ಹೆಸರು ಪಡೆದಿದೆ. ರಾಜಕೀಯವಾಗಿ ರಾಜ್ಯಕ್ಕೆ ಮೂರು ಮುಖ್ಯಮಂತ್ರಿಗಳನ್ನು ನೀಡಿದ ತಾಲೂಕು ಎಂದು ಹೆಸರು ಪಡೆದಿದೆ.

ಹೊಯ್ಸಳರು, ಗಂಗರು, ಚನ್ನಪಟ್ಟಣದ ಪಾಳೇಗಾರರು, ವಿಜಯನಗರದ ಅರಸರು, ಹೈದರಾಲಿ, ಟಿಪ್ಪು, ಮೈಸೂರು ಅರಸರ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿದೆ. ರಾಮನಗರ ಅತಿ ವೇಗವಾಗಿ ಬೆಳೆಯುತ್ತಿರುವ ತಾಲೂಕು ಕೇಂದ್ರ ಎಂದು ಹೆಸರು ಗಳಿಸಿದೆ.

ಜಿಲ್ಲೆಯ ಕಲೆ, ಸಂಸ್ಕೃತಿ

ರಾಮನಗರ ಜಿಲ್ಲೆಯ ಜಾನಪದ ಕಲೆಗಳಾದ ಕಂಸಾಳೆ, ಕೋಲಾಟ, ಗಾರುಡಿಗ ಗೊಂಬೆ, ಹರಿಕಥೆ, ಒನಕೆ ಕುಣಿತ, ನಂದಿಕೋಲು ಕುಣಿತ, ಪಟದ ಕುಣಿತ, ಪೂಜಾ ಕುಣಿತ, ವೀರಗಾಸೆ ಕುಣಿತ, ವೀರಭದ್ರ ಕುಣಿತ, ಮಂಟೇಸ್ವಾಮಿ, ದೊಂಬಿದಾಸರ ಆಟಗಳು, ಹುಲಿವೇಷ, ತತ್ವಪದ, ಕಣಿಶಾಸ್ತ್ರ, ಸೋಬಾನೆ ಪದ, ತಮಟೆ ಬಾರಿಸುವುದು, ಇತ್ಯಾದಿ ಕಲೆಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದ ಕಲಾವಿದರಿದ್ದಾರೆ. ಹಾಗೆಯೇ ಈ ಜಿಲ್ಲೆಯ ಮುಖ್ಯ ಕಸುಬು ವ್ಯವಸಾಯ. ಜನಸಂಖ್ಯೆಯ ಬಹುಭಾಗ ಹಳ್ಳಿಗಳಲ್ಲಿ ವಾಸಿಸುತ್ತಿದ್ದು ಅವರ ಮುಖ್ಯ ಕಸುಬು ಒಕ್ಕಲುತನ, ಕೃಷಿ ಮತ್ತು ಇತರೆ ಸಾಂಪ್ರದಾಯಿಕ ಉದ್ಯೋಗಗಳಲ್ಲಿ ನಿರತರಾಗಿದ್ದಾರೆ.

ವಾರ್ಷಿಕ ಕೃಷಿ ಕೆಲಸದ ಬಿಡುವಿನ ನಂತರ ಜಿಲ್ಲೆಯ ವ್ಯಾಪ್ತಿಯಲ್ಲಿ ನಡೆಯುವ ಹತ್ತು ಹಲವು ಜನಪದ ಸಿರಿ ಸಂಗಮವಾದ ವೈಶಿಷ್ಟ್ಯಗ್ರಾಮ. ದೇವತೆಗಳ ಜಾತ್ರೆಯು ಬಹುವಿಶೇಷದಿಂದ ಕೂಡಿದೆ. ಚನ್ನಪಟ್ಟಣ ತಾಲೂಕಿನ ಗುಡಿಸರಗೂರಿನ ಶ್ರೀಬಸವೇಶ್ವರ ಜಾತ್ರೆ ಬಹುಪ್ರಸಿದ್ಧಿ ಪಡೆದಿದ್ದು, ಜಿಲ್ಲೆಯಲ್ಲಿ ಅತಿ ಹೆಚ್ಚು ಕೊಂಡದ ಸೌದೆ ಸೇರುವ ಜಾತ್ರೆಯಾಗಿದೆ. ಕೆಂಗಲ್ ಆಂಜನೇಯಸ್ವಾಮಿ ದೇವರ ಜಾತ್ರೆ ದನಗಳ ಜಾತ್ರೆ ಎಂಬುದಾಗಿ ಪ್ರಸಿದ್ಧಿ ಪಡೆದಿದೆ. ಹಾಗೆಯೇ ಈ ತಾಲೂಕಿನ ಹುಣಸಿನಹಳ್ಳಿ ಶ್ರೀ ಬಿಸಿಲಮ್ಮ ದೇವರ ಜಾತ್ರೆಯು ಎಂಟು ದಿನಗಳ ಕಾಲ ನಡೆಯುತ್ತದೆ. ಈ ಜಾತ್ರೆಯಲ್ಲಿ ಸುತ್ತಮುತ್ತಲಿನ ೩೨ ಗ್ರಾಮಗಳ ಜನರು ದೇವರಿಗೆ ವಂಶಪಾರಂಪರ್ಯವಾಗಿ ನಡೆದುಕೊಂಡು ತಾವು ವಹಿಸಿಕೊಂಡಿರುವ ಸೇವಾಕೈಂಕರ್ಯವನ್ನು ಸಲ್ಲಿಸುತ್ತಾ ಬಂದಿದ್ದಾರೆ. ಈ ಜಾತ್ರೆಯು ಸಮಾಜದ ಎಲ್ಲಾ ಸಮುದಾಯಗಳು ಬಂದು ಭಾಗವಹಿಸಿ ತಮ್ಮ ಕರ್ತವ್ಯ ನಿರ್ವಹಿಸುವ ಜಿಲ್ಲೆಯ ಏಕೈಕ ದೊಡ್ಡ ಜಾತ್ರೆಯಾಗಿದೆ. ಹಾಗೆಯೇ ರಾಮನಗರ ಶ್ರೀ ಚಾಮುಂಡೇಶ್ವರಿ ಕರಗ ಮಹೋತ್ಸವವು ಭಾವೈಕ್ಯತೆಯ ಸಂದೇಶವಾಗಿದ್ದು ಅತಿ ದೊಡ್ಡ ಜನಪದ ಉತ್ಸವವಾಗಿದೆ. ಹೀಗೆಯೇ ಮಾಗಡಿ ತಾಲೂಕಿನ ಶ್ರೀರಂಗನಾಥನ ದನಗಳ ಜಾತ್ರೆ, ಕನಕಪುರ ತಾಲೂಕಿನ ಕಬ್ಬಾಳಮ್ಮನ ಜಾತ್ರೆ, ಶಿವನಹಳ್ಳಿಯ ವೀರಭದ್ರನ ಜಾತ್ರೆಗಳು ಬಹಳ ಪ್ರಸಿದ್ಧಿಯನ್ನು ಪಡೆದಿದೆ.

ಒಟ್ಟಾರೆಯಾಗಿ ನೋಡುವುದಾದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ವಿಭಜನೆಯಾಗಿ ಪ್ರತ್ಯೇಕ ಜಿಲ್ಲೆಯಾಗಿರುವ ರಾಮನಗರ ಜಿಲ್ಲೆಯು ಒಂದು ಕಡೆ ತಮಿಳ್ನಾಡಿನ ಗಡಿ ಪ್ರದೇಶ ಹಾಗೂ ರಾಜ್ಯದ ರಾಜಧಾನಿ ಬೆಂಗಳೂರು ನಗರಕ್ಕೆ ತುಂಬಾ ಹತ್ತಿರದಲ್ಲಿದೆ. ಒಂದು ಕಡೆ ಕಣಶಿಲೆಗಳಿಂದ ಕೂಡಿದ ಬೆಟ್ಟಗುಡ್ಡಗಳು ಮತ್ತೊಂದು ಕಡೆ ವಿಶಿಷ್ಟ ವನ್ಯಸಂಪತ್ತನ್ನು ಹೊಂದಿದ ಕಾಡು ಹೊಂದಿದ್ದು ಬುಡಕಟ್ಟು ಸಮುದಾಯಗಳು ನೆಲೆಸಲು ಪೂರಕ ವಾತಾವರಣವನ್ನು ಹೊಂದಿದ ಭೌಗೋಳಿಕ ಪರಿಸರವನ್ನು ಹೊಂದಿದೆ.

ಅಡಿಟಿಪ್ಪಣಿಗಳು

೧. ಗೋಪಾಲರಾವ್ ಎಚ್.ಎಸ್., ಕನಕ ಸಿರಿ, ಸಾಹಿತ್ಯ ಸಮ್ಮೇಳನ ಸಂಚಿಕೆ, ಪು. ೮೪, ೧೯೯೯.

೨. ಗಾಯತ್ರಿ, ಮಾಗಡಿ ಇತಿಹಾಸ ಚರಿತ್ರೆ, ಅಭರಣ ಸುದ್ದಿ ವಿಶೇಷಾಂಕ, ಪು. ೯೧, ೧೯೯೫.

೩. ವೆಂಕಟಾಚಲಶಾಸ್ತ್ರಿ ಟಿ.ವಿ., ಕನಕಪುರ ಎಂಬ ಕಾನಕನಹಳ್ಳಿ, ಪುಸ್ತಕ ಶಕ್ತಿ ಪ್ರಕಾಶನ, ಬೆಂಗಳೂರು, ಪು. ೨೧, ೨೦೧೦.

೪. ನಾಗರಾಜು ಎಂ.ಜಿ., ಶಿವರಾಯಗಿರಿ ಕ್ಷೇತ್ರದರ್ಶನ, ಶ್ರೀರಾಮ ಸೇವಾ ಮಂಡಳಿ ರಾಮನಗರ, ಪು. ೧೬, ೨೦೦೧.

೫. ರಾಮನಗರ ಜಿಲ್ಲಾ ಅಂಕಿ ಅಂಶಗಳ ನೋಟ, ಜಿಲ್ಲಾಡಳಿತ, ರಾಮನಗರ, ಕರ್ನಾಟಕ ಸರ್ಕಾರ, ಪು. ೨೮-೨೯, ೨೦೧೩.

೬. ೨೦೧೧ರ ಜನಗಣತಿ ವರದಿ, ಭಾರತ ಸರ್ಕಾರ, ಬೆಂಗಳೂರು, ೨೦೧೨.

೭. ೨೦೧೧ರ ಜನಗಣತಿ ವರದಿ, ಭಾರತ ಸರ್ಕಾರ, ಬೆಂಗಳೂರು, ೨೦೧೨.

೮. ಜಿಲ್ಲಾ ಕೃಷಿ ದರ್ಶಿನಿ, ಕೃಷಿ ಇಲಾಖೆ, ರಾಮನಗರ ಜಿಲ್ಲಾಪಂಚಾಯತ್, ಪು.೧೬, ೨೦೧೧.

೯. ರಾಮನಗರ ಜಿಲ್ಲಾ ಅಂಕಿ ಅಂಶಗಳ ನೋಟ, ಜಿಲ್ಲಾಡಳಿತ, ರಾಮನಗರ, ಕರ್ನಾಟಕ ಸರ್ಕಾರ, ಪು. ೭೯-೮೬, ೨೦೧೨.

೧೦. ಅದೇ, ಪು. ೮೦-೮೧, ೨೦೧೨.

೧೧. ಲಕ್ಷ್ಮೀನಾರಾಯಣ ಎಸ್.ಎಲ್., ದಾಸ ಶ್ರೀ ಶ್ರೀ ವಾದಿರಾಜರು, ಕನ್ನಡ ಸಾಹಿತ್ಯ ಸಮ್ಮೇಳನ ವಿಶೇಷ ಸಂಚಿಕೆ, ಪು. ೨೪೯, ೨೦೧೦.

೧೨. ಕ್ಷೇತ್ರಕಾರ್ಯದ ಮಾಹಿತಿ

೧೩. ಪಾನ್ಯಂ ನಟರಾಜು, ಹೆಬ್ಬಾಳಲು ನಂಜುಂಡಯ್ಯ (ಲೇ), ಕಟ್ಟಾಣೆ, ರಾಮನಗರ ಜಿಲ್ಲಾ ಸಾಹಿತ್ಯ ಸಮ್ಮೇಳನ, ಪು. ೨೨೭, ೨೦೧೦.

೧೪. ರಾಮನಗರ ಜಿಲ್ಲಾ ಅಂಕಿ-ಅಂಶ ನೋಟ, ಕರ್ನಾಟಕ ಸರ್ಕಾರ, ರಾಮನಗರ ಜಿಲ್ಲಾ ಪಂಚಾಯತ್, ಪು. ೧೫೨, ೨೦೧೩.

೧೫. ಚಿಣ್ಣರ ಜಿಲ್ಲಾ ದರ್ಶನ, ಶೈಕ್ಷಣಿಕ ಕೈಪಿಡಿ, ರಾಮನಗರ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಪು. ೩೨, ೨೦೧೨.

೧೬. ರಾಜರತ್ನ ಜಿ.ಪಿ., ಜನಪ್ರಿಯ ಶಿಶುಗೀತೆಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು. ೧೬, ೨೦೦೪

೧೭. Arachaeology in Mysore, Mysore State, Vol-2, P. 236, 1906.

೧೮. ನಾಗೇಶ ಹೆಗಡೆ, ೨೨ನೇ ನುಡಿಹಬ್ಬ ಘಟಿಕೋತ್ಸವ ಭಾಷಣ, ಕನ್ನಡ ವಿಶ್ವವಿದ್ಯಾಲಯ, ಪು. ೧೬, ೨೦೧೩.

೧೯. ನಂಜುಂಡಸ್ವಾಮಿ ಎನ್.ಎಸ್., ಪಾಳೇಗಾರರು ಮತ್ತು ಒಡೆಯರ ಇತಿಹಾಸ, ಸಮಾಜ ಪುಸ್ತಕ ಪ್ರಕಾಶನ, ಧಾರವಾಡ, ಪು. ೫೬, ೧೯೮೬.

೨೦. ವೆಂಕಟಚಲಶಾಸ್ತ್ರಿ ಟಿ.ವಿ., ಕಾನಕಾನಹಳ್ಳಿ ಚರಿತ್ರೆ, ಕನಕ ಸಿರಿ ಸಮ್ಮೇಳನ ಸಂಚಿಕೆ, ಪು. ೮, ೨೦೦೭.

೨೧. ರಾಮನಗರ ಜಿಲ್ಲಾ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶಕರ ಕಚೇರಿ, ಕರ್ನಾಟಕ ಸರ್ಕಾರ, ರಾಮನಗರ ಜಿಲ್ಲಾ ಪಂಚಾಯತ್, ಪು. ೮-೧೩, ೨೦೧೨.

೨೨. ವೆಂಕಟಾಚಲಶಾಸ್ತ್ರಿ ಟಿ.ವಿ., ಕಾನಕಾನಹಳ್ಳಿ ಚರಿತ್ರೆ, ಪುಸ್ತಕ ಶಕ್ತಿ ಪ್ರಕಾಶನ, ಬೆಂಗಳೂರು, ಪು. ೮, ೨೦೧೦.

೨೩. ಗೋಪಾಲರಾವ್ ಎಚ್.ಎಸ್., ಪ್ರಕೃತಿ ಸಿರಿಯ ಕನಕಪುರ ಲೇ. ಕಟ್ಟಾಣೆ, ಪ್ರಥಮ ಜಿಲ್ಲಾ ಸಮ್ಮೇಳನ ಸಂಚಿಕೆ, ಪು. ೨೬೮, ೨೦೧೦.

೨೪. ಮುನಿರಾಜಪ್ಪ, ಮಾಗಡಿ ಸೀಮೆಯ ಸಾಂಸ್ಕೃತಿಕ ಇತಿಹಾಸ, ಸ್ಫೂರ್ತಿ ಪ್ರಕಾಶನ, ಹೊಸಪಾಳ್ಯ, ಮಾಗಡಿ, ಪು. ೫, ೨೦೦೫.

೨೫. ಜಿಲ್ಲಾ ಅಂಕಿಅಂಶಗಳ ಮುನ್ನೋಟ, ಕರ್ನಾಟಕ ಸರ್ಕಾರ, ರಾಮನಗರ ಜಿಲ್ಲಾ ಪಂಚಾಯತ್, ಪು. ೧೩-೧೮, ೨೦೧೩.

೨೬. ಚಂದ್ರ ಡಿ.ಆರ್., ಪುಂಡಲೀಕವಿಠ್ಠಲ (ಲೇ), ಕಟ್ಟಾಣೆ, ಪ್ರಥಮ ಜಿಲ್ಲಾ ಸಮ್ಮೇಳನ ಸಂಚಿಕೆ, ಪು. ೨೮೪-೨೮೫, ೨೦೧೦.

೨೭. ಅನಂತರಾಮರಾವ್, ಕರ್ನಾಟಕ ದರ್ಶನ, ವಿದ್ಯಾಸಿರಿ ಪ್ರಕಾಶನ, ಮಂಗಳೂರು, ಪು. ೪೭, ೨೦೦೬.

ಅಧ್ಯಾಯ ಮೂರು

ಇರುಳಿಗರ ಮೂಲ ಮತ್ತು ನೆಲೆಗಳು

ಅಸಮಾನತೆಯಿಂದ ಕೂಡಿದ ಭಾರತದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಪ್ರತಿಯೊಂದು ಜನವರ್ಗಕ್ಕೂ ಜಾತಿ, ಸಮುದಾಯದ ಹೆಸರನ್ನು ಅಂಟಿಸಲಾಗಿದೆ. ಅದು ಆಯಾ ಜನವರ್ಗವು ತಮಗೆ ತಾವೇ ಕರೆದುಕೊಳ್ಳುವ ಹೆಸರಾಗಿರದೆ ತಮ್ಮ ಸುತ್ತ ಮುತ್ತಲ ಇತರರು ವಾಡಿಕೆಯಿಂದ ಕರೆಯುವ ಹೆಸರೂ ಆಗಿರುತ್ತದೆ. ಸಾಮಾನ್ಯವಾಗಿ ಆ ಸಮುದಾಯದ ಆಚರಣೆ, ವೃತ್ತಿ, ಜೀವನ ಕ್ರಮಗಳು ಇಂತಹ ಜಾತಿ ಸೂಚಕ ಹೆಸರುಗಳು ಹುಟ್ಟಲು ಕಾರಣವಾಗಿರುತ್ತದೆ. ಉದಾಹರಣೆಗೆ ಹೊಲಸಾದ ಬಟ್ಟೆಗಳನ್ನು ಮಡಿ ಮಾಡಿಕೊಡುವವನು ಮಡಿವಾಳನಾದರೆ ಧರ್ಮವನ್ನು ಬಳಸಿ ಪರಿಕರಗಳನ್ನು ತಯಾರಿಸುವವನು ಚಮ್ಮಾರನಾಗಿದ್ದಾನೆ. ಕಬ್ಬಿಣ ಕೆಲಸ ಮಾಡುವವನು ಕಮ್ಮಾರ ಹೀಗೆ ಆಯಾ ವೃತ್ತಿ, ಕ್ರಿಯಾದಿಗಳ ಆಧಾರದಲ್ಲಿ ಜಾತಿ ಸೃಷ್ಟಿಗೊಂಡಿವೆ. ಫಣ ಸಂಸ್ಕೃತಿಯು ಇದನ್ನೇ ಬಿಂಬಿಸುವುದು. ಕೃಷಿಯಾಧಾರಿತ ವರ್ಗವು ಬಲಗೈ ಫಣ ಸಂಸ್ಕೃತಿಗೆ ಸೇರಿದರೆ ವೃತ್ತಿಯಾದಾರಿತ ವರ್ಗವು ಎಡಗೈ ಫಣಕ್ಕೆ ಸೇರುತ್ತದೆ. ಹೀಗೆ ಎಡಗೈ ಬಲಗೈಗಳೇ ಎಲ್ಲಾ ಜಾತಿ ಸಮುದಾಯಗಳಿಗೆ ಮೂಲ ಎಂಬ ವಾದವೂ ಇದೆ.

ಹೀಗೆ ಜನ್ಮತಾಳಿದ ಈ ಜಾತಿ, ಸಮುದಾಯಗಳು ತಮ್ಮದೇ ಆದ ಸಂಸ್ಕೃತಿಗಳನ್ನು ಹೊಂದಿವೆ. ತಮ್ಮ ಜಾತಿಕಟ್ಟುಗಳು ತಮಗೆ ಶ್ರೇಷ್ಠವೆಂದು ಭಾವಿಸುವ ಈ ಸಮುದಾಯಗಳು ತಮ್ಮ ಸಮುದಾಯಗಳು ರೂಢಿಯಲ್ಲಿರಿಸಿಕೊಂಡ ಆಚಾರ, ವಿಚಾರ, ವಿಧಿ ನಿಷೇಧಗಳನ್ನು ಅತ್ಯಂತ ಕಟ್ಟುನಿಟ್ಟಾಗಿ ಪಾಲಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ಈ ರೀತಿಯ ವಿಧಿ ನಿಷೇಧಗಳು ಬುಡಕಟ್ಟುಗಳಲ್ಲಿ ಇಂದಿಗೂ ತುಂಬಾ

ಬಿಗುವಿನಿಂದಲೇ ಪಾಲನೆಗೊಳ್ಳುತ್ತಿವೆ. ಒಂದು ಗುಂಪಾಗಿ ಪ್ರತ್ಯೇಕವಾಗಿ ನೆಲೆಸುತ್ತಿರುವುದೇ ಆಚಾರ-ವಿಚಾರ, ವಿಧಿ-ನಿಷೇಧಗಳು ಇನ್ನೂ ಈ ಬುಡಕಟ್ಟು ಸಮುದಾಯಗಳಲ್ಲಿ ಜೀವಂತವಾಗಿರಲು ಸಾಧ್ಯವಾಗಿರುವುದು.

ಇಂತಹ ಅರಣ್ಯವಾಸಿ ಸಮುದಾಯಗಳಲ್ಲಿ ಇರುಳಿಗ ಸಮುದಾಯವು ಒಂದು. ಈ ಸಮುದಾಯದ ಜನರು ಇಂದಿಗೂ ಪಾಲಿಸಿಕೊಂಡು ಬರುತ್ತಿರುವ ಸಂಪ್ರದಾಯ, ಆಚರಣೆಗಳು ಈ ಸಮುದಾಯದ ಮೂಲ ಹುಡುಕಲು ನೆರವಾಗುತ್ತದೆ ಎಂದು ನಂಬಲಾಗಿದೆ. ಇರುಳಿಗ ಸಮುದಾಯವೂ ಸಹ ತಮ್ಮ ಸಮುದಾಯದ ಹುಟ್ಟಿನ ಕುರಿತು ಮಾಹಿತಿ ನೀಡುವ ಸೃಷ್ಟಿ ಪುರಾಣದ ಕಥೆಗಳನ್ನು ಮೌಖಿಕವಾಗಿ ಹೇಳುತ್ತದೆ.

ಸ್ವಾತಂತ್ರ್ಯಾಪೂರ್ವದಲ್ಲಿ ರಾಜ ಮಹಾರಾಜರು ತಮ್ಮ ರಾಜ್ಯಗಳಿಗೆ ಗಡಿಗಳನ್ನು ನಿರ್ಮಿಸಿ ಕೊಳ್ಳುತ್ತಿದ್ದರೆಂಬುದು ನಿಜ. ಆದರೆ ಅರಣ್ಯವಾಸಿ ಬುಡಕಟ್ಟುಗಳಿಗೆ ಈ ಮೇರೆಯಂಬುದು ಇರಲಿಲ್ಲ. ಅವರು ತಮಗೆ ಪ್ರಾಶಸ್ತ್ಯವಾದ ಯಾವುದೇ ಕಾಡಿನಲ್ಲಿ ನೆಲೆಸಬಲ್ಲಷ್ಟು ಸ್ವತಂತ್ರರಾಗಿದ್ದರು. ಸ್ವಾತಂತ್ರ್ಯ ದೊರೆತ ತರುವಾಯ ಭಾಷೆಯಾಧಾರದ ಮೇಲೆ ರಾಜ್ಯಗಳು ತಲೆಯೆತ್ತಿದವು. ಆದರೂ ಈ ರಾಜ್ಯಗಳ ಪರಿಕಲ್ಪನೆಯಿಂದ ಇಲ್ಲಿಯ ಬುಡಕಟ್ಟುಗಳು ದೂರವೇ ಇವೆ. ಹೀಗಾಗಿ ಬಹುತೇಕ ಬುಡಕಟ್ಟುಗಳಿಗೆ ರಾಜ್ಯದ ಎಲ್ಲೆಕಟ್ಟುಗಳಿಲ್ಲವೆಂದೇ ಹೇಳಬಹುದು.

ಇರುಳಿಗ ಸಮುದಾಯವೂ ಇದಕ್ಕೆ ಹೊರತಾಗಿಲ್ಲ. ಇರುಳಿಗರು ತಮಿಳುನಾಡಿನ ನೀಲಗಿರಿ ಸೀಮೆಯಿಂದ ವಲಸೆ ಬಂದವರೆಂದು ಹೇಳಲಾಗುತ್ತದೆ. ಇರುಳಿಗರ ಭಾಷೆಯ ಮೇಲೆ ತಮಿಳು ಭಾಷೆಯ ದಟ್ಟ ಪ್ರಭಾವವಿದೆ. ಇರುಳಿಗ ಭಾಷೆಯು ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ್ದು ಅದು ಸ್ವತಂತ್ರವಾದ ಪ್ರತ್ಯೇಕ ಭಾಷೆಯೋ ಅಥವಾ ತಮಿಳಿನ ಉಪಭಾಷೆಯೋ ಎಂಬುದನ್ನು ಭಾಷಾ ತಜ್ಞರು ಗುರುತಿಸಬೇಕಾದ ಅಗತ್ಯವಿದೆ. ಹಾಗೆಯೇ ಇವರ ಆರಾಧನಾ ದೈವಗಳ ನೆಲೆಗಳಿರುವುದು ನೀಲಗಿರಿ ಪ್ರಾಂತ್ಯದಲ್ಲಿ ಎಂದು ಹೇಳಲಾಗುತ್ತಿದೆ. ಹೀಗಾಗಿ ಇರುಳಿಗರು ತಮಿಳ್ನಾಡಿನ ನೀಲಗಿರಿ ಪ್ರಾಂತ್ಯದವರಿರಬೇಕೆಂದು ಬಹುತೇಕ ವಿದ್ವಾಂಸರು ನಿರ್ಣಯಿಸಿದ್ದಾರೆ.

ಯಾವುದೋ ಒಂದು ಕಾಲಘಟ್ಟದಲ್ಲಿ ನೀಲಗಿರಿ ಪ್ರಾಂತ್ಯದಿಂದ ತಮಿಳ್ನಾಡಿಗೆ ಹತ್ತಿರವಿರುವ ಕರ್ನಾಟಕದ ಗುಡ್ಡಗಾಡು ಅರಣ್ಯ ಪ್ರದೇಶಗಳಿಗೆ ಇರುಳಿಗರು ವಲಸೆ ಬಂದಿರುವ ಸಾಧ್ಯತೆಗಳು ಇವೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗೆಝೆಟಿಯರ್‌ನಲ್ಲಿ ಈ ಸಮುದಾಯವನ್ನು ಕುರಿತು "The speak a diatect mixed with Kannada, Telugu and Tamil words. They are grouped under scheduled tribes. According to a legend they are the descendants of billayya, an ardent devotess of Mahadeshwar and the brother of Karayya. The proginator of the Soligas accoding to another legend they are the

descendents of male rishi the sage of hills. Some of the Iruligas are said to be immigrants from the Nilgiri hills and some others from annamalai forests"[1] ಎಂಬ ಅಭಿಪ್ರಾಯ ನೀಡಿರುತ್ತಾರೆ.

ಇರುಳರಿಗೆ ಇರುಳಿಗ ಅಥವಾ ಇರುಳ ಎಂದು ಹೆಸರು ಬರಲು ಆ ಸಮುದಾಯದ ಜನ ಹೊಂದಿರುವ ಮೈಬಣ್ಣವೇ ಕಾರಣವಾಗಿರಬೇಕೆಂಬ ವಾದಗಳೂ ಇವೆ. ಕನ್ನಡದಲ್ಲಿ ಇರಳು ಎಂದರೆ ರಾತ್ರಿ, ಕತ್ತಲು ಎಂಬ ಅರ್ಥಗಳಿವೆ. ಕತ್ತಲಿನಲ್ಲಿ ಸುತ್ತಾಡುವವರು, ಕತ್ತಲಿನ ಮೈ ಬಣ್ಣ ಹೊಂದಿದವರು ಇರುಳಿಗ ಅಥವಾ ಇರುಳ ಎಂಬ ಹೆಸರು ಬರಲು ಕಾರಣ ಎಂದು ಹೇಳಲಾಗುತ್ತದೆ. ಈ ಮಾತಿಗೆ ಪುಷ್ಠಿ ನೀಡುವ ಮಾತುಗಳನ್ನೇ ಎಡ್ಗರ್ ಥರ್ಸ್ಟನ್ ಅವರು ದ ಕಾಸ್ಟ ಅಂಡ್ ಟ್ರೈಬ್ಸ್ ಇನ್ ಸದರ್ನ್ ಇಂಡಿಯಾ ಪುಸ್ತಕದೊಳಗೆ ಹೇಳಿದ್ದಾರೆ 'Charcoal would have a white mark. The name Irual in fact means Darkness of the Blackness(Irul)"[2] ಇವರ ಬಣ್ಣದಿಂದಲೇ ಈ ಸಮುದಾಯಕ್ಕೆ ಹೆಸರು ಬಂದಿರುವ ಸಾಧ್ಯತೆ ಎಂದು ವಿವರಿಸುತ್ತಾರೆ.

ತಮಿಳುನಾಡಿನ ಇರುಳಿಗರ ಕುರಿತು ಅಧ್ಯಯನ ಮಾಡಿರುವ ಜಕ್ಕಾ ಪಾರ್ಥಸಾರಥಿ ಅವರು 'The Irular are one of the major tribal of Tamilnadu. They are also found in Karnataka and Karala state. The Irular are known by several names like Irulas, Irulan, Iruliya, Iruvan, Iriligaru, Poosari and Villiars. The name Irular is suppored to be derived from tamil word Irul meaning davkners, which may refer to their skin complexion"[3]. ಎಂದು ತಿಳಿಸುತ್ತಾರೆ. ಅಂದರೆ ಮಾನವಶಾಸ್ತ್ರಜ್ಞರಾದ ಜಕ್ಕಾ ಪಾರ್ಥಸಾರಥಿ ಅವರು ಸಹ ಎಡ್ಗರ್ ಥರ್ಸ್ಟನ್ ರವರ ಮಾತುಗಳನ್ನೇ ಪುಷ್ಠೀಕರಿಸುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ.

ಡಾ. ಎ.ಎಸ್. ಪ್ರಭಾಕರ ಅವರು ಯೋಜನಾ ವರದಿಯಲ್ಲಿ ಈ ರೀತಿ ನಿರೂಪಿಸಿದ್ದಾರೆ. A few scholars debated on the synoym names of the Irular in Karnataka. Siddagangaiah feels that Irulatu and Iligaru are not one and the same tribe Kuruva Basavaraj decided them as one tribe due to cultural similarities K.S. Singh arsested that the Iruliga of Karnataka. rular of keral and Irula of Tamilnadu are the same People"[4].

ಡಾ. ಎಂ. ಭೈರೇಗೌಡ ಅವರ ಅಭಿಪ್ರಾಯದಂತೆ "ತಮಿಳುನಾಡಿನ ಭಾಗದಿಂದ ಬಹಳ ವರ್ಷಗಳ ಹಿಂದೆಯೇ ಇರುಳಿಗರು ಕರ್ನಾಟಕಕ್ಕೆ ವಲಸೆ ಬಂದಿರುವ ಸಾಧ್ಯತೆಗಳೇ ಹೆಚ್ಚು, ಹಾಗೆ ಬಂದ ಹಳೆಯ ತಲೆಮಾರು ಇಲ್ಲವಾಗಿ ಹೊಸ ತಲೆಮಾರು ಅಲ್ಲಿನ ಎಲ್ಲಾ ಸಾಹಿತ್ಯಿಕ ಬಗೆಗಳನ್ನು ಮರೆತಿರುವ ಸಾಧ್ಯತೆ ಇದೆ"[೫] ಎಂದಿದ್ದಾರೆ.

ಡಾ. ಕೆ.ಎಂ. ಮೈತ್ರಿ ಅವರು “ಶ್ಯಾಮಲ ವರ್ಣೀಯ ಹಾಗೂ ಪೀತವರ್ಣೀಯ ದೈಹಿಕ ಲಕ್ಷಣಗಳನ್ನು ಹೊಂದಿರುವ ಆಸ್ಟ್ರೇಲಿಯಾದ ಆದಿವಾಸಿಗಳು, ಸಿಲೋನಿನ ವಡ್ಡರು, ಕೊಲೇರಿಯನ್ನರು, ಮಾಯಾಗಳು, ಪಾಲಿನೀಶಿಯನ್ನರು, ಜಪಾನಿನ ಐನುಗಳು ಹಾಗೂ ಇರುಳರು ಇತ್ಯಾದಿ ಜನಾಂಗದವರು ಸಂದೇಹಾಸ್ಪದ ಬಡುಕಟ್ಟುಗಳಿಗೆ ಸೇರಿದ್ದಾರೆ”[೬] ಎಂದು ವಿವರಿಸುತ್ತಾರೆ.

ಸಿದ್ಧಗಂಗಯ್ಯ ಕಂಬಾಳ ಬಿ. ಅವರು ಇರುಳಿಗರ ಉಪಸಂಸ್ಕೃತಿ ಎಂಬ ಕೃತಿಯಲ್ಲಿ “ಇರುಳಿಗರು ಗುಂಗುರು ಕೂದಲು, ಉಬ್ಬಿದ ಹಲ್ಲು, ಕಡು ಕಪ್ಪು ಮೈಬಣ್ಣ, ಶರೀರ ರಚನೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಭಾರತಕ್ಕೆ ಬಹಳ ಶತಮಾನಗಳ ಹಿಂದೆ ವಲಸೆ ಬಂದಿರಬಹುದು. ನೆಗ್ರೆಟೋ ಜನಾಂಗದವರು ಇರಬಹುದು ಎಂದು ಊಹೆಯಾಗಿದೆ. ಆಫ್ರಿಕಾ ಖಂಡದ ಯಾವುದೋ ಭಾಗದಿಂದ ಬಂದವರು ಇರಬಹುದು”[೭] ಎಂದು ಅಭಿಪ್ರಾಯಪಡುತ್ತಾರೆ.

ಒಟ್ಟಾರೆಯಾಗಿ ಇರುಳಿಗರ ಕಪ್ಪಾದ ಮೈ ಬಣ್ಣವೇ ಅವರನ್ನು ಇರುಳಿಗ ಎಂದು ಕರೆಯಲು ಕಾರಣವಿರಬೇಕೆಂದು ಮೇಲಿನ ಅಧ್ಯಯನಕಾರರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ಇರುಳಿಗ ಎಂಬ ಪದವು ಇಲಿಯನ್ನು ಬೇಟೆಯಾಡುವುದರಿಂದಾಗಿ ಈ ಬುಡಕಟ್ಟಿಗೆ ಬಂದಿದೆ ಎಂಬ ವಾದವೂ ಇದೆ. ಇಲಿಯನ್ನು ಹಿಡಿಯುವ ಕಾಯಕವನ್ನು ಮಾಡುವ ಸಮುದಾಯ ಇಲಿಗ > ಇಲ್ಲಿಗ > ಇರುಳಿಗ ಎಂದಾಗಿರಬೇಕೆಂದು ಹೇಳಲಾಗುತ್ತದೆ.

೩.೧. ಪದನಿಷ್ಪತ್ತಿ

ಇರುಳಿಗ ಎಂಬ ಪದ ‘ಇರುಳ’ ಎಂಬ ಪದದಿಂದ ನಿಷ್ಪನ್ನವಾಗಿದೆ. ‘ಇರು’ ಎಂಬ ಪದಕ್ಕೆ ರಾತ್ರಿ, ಕತ್ತಲು ಕಪ್ಪು ಎಂಬ ಅರ್ಥಗಳಿವೆ. ಇವರ ಬಣ್ಣ ಕಪ್ಪಾಗಿರುವುದರಿಂದ ಈ ಹೆಸರು ಬಂದಂತಿದೆ. ಇರುಳ್> ಇರುಳ> ಇರುಳಿಗ ಎಂದಾಗಿರಬೇಕು

ಇಲಿಯನ್ನು ಬೇಟೆಯಾಡುವುದರಿಂದಾಗಿ ಈ ಬುಡಕಟ್ಟಿಗೆ ಬಂದಿದೆ ಎಂಬ ವಾದವೂ ಇದೆ. ಇಲಿಯನ್ನು ಹಿಡಿಯುವ ಕಾಯಕವನ್ನು ಮಾಡುವ ಸಮುದಾಯ ಇಲಿಗ> ಇಲ್ಲಿಗ ಎಂದಾಗಿರಬೇಕೆಂಬ ವಾದವೂ ಇದೆ. ಇಲ್ಲಿಗ ಎಂದರೆ ಇಲಿಯನ್ನು ಹಿಡಿಯುವವನು, ಆ ವೃತ್ತಿಯಿಂದ ಜೀವನ ನಡೆಸುವವನು ಎಂದು ಹೇಳಾಗುತ್ತದೆ.

ಇಲಿ > ಇಲ್ಲಿಗ > ಇಲ್ಲಿಗರೆಂದು ರೂಪಾಂತರಗೊಂಡಿದೆ. ಇವರು ಇಲಿ ಹಿಡಿದು ತಿನ್ನುವುದರಿಂದ ಇವರಿಗೆ ಜನಸಾಮಾನ್ಯರು ಇಲ್ಲಿಗರೆಂದು ಕರೆದರು”[೮]. ಇಲ್ಲಿಗ> ಇರ್ಳಿಗ> ಇರುಳಿಗ ಎಂದಾಗಿರುವ ಸಾಧ್ಯತೆಯೂ ಹೆಚ್ಚಾಗಿದೆ.

ಎಚ್.ವಿ. ನಂಜುಂಡಯ್ಯ ಮತ್ತು ಅನಂತಕೃಷ್ಣ ಅಯ್ಯರ್ ಅವರ ಪ್ರಕಾರ ಇರುಳಿಗರು ಆಹಾರಕ್ಕಾಗಿ ಇಲಿಯನ್ನು ಬೇಟೆಯಾಡಿ ಆಹಾರವಾಗಿ ಬಳಸುವುದನ್ನು ಕಂಡು ಜನರು ಇವರನ್ನು ಇಲಿಗರು ಎಂದು ಕರೆದಿರಬಹುದು. ಎಂ.ಕೆ. ಅನಂತಕೃಷ್ಣ ಅಯ್ಯರ್ ಅವರು “The tribe known as Iraliya

or Iruliga which is some times corrupted into Ilrigaru"[9] ಇರುಳಿಗ ಇರ್ಳಿಗ ಎಂದು ತಿಳಿಸುತ್ತಾರೆ. ಭಾರತದ ಬಹುತೇಕ ಜಾತಿ ಸೂಚಕ ಪದಗಳು ಆ ಜನರ ದೈಹಿಕ ಆಕಾರಕ್ಕಿಂತ ವೃತ್ತಿಯನ್ನಾಧರಿಸಿ ಬಂದವುಗಳು ಎಂಬುದಕ್ಕೆ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ. ಪ್ರಾಯಶಃ ಇರುಳಿಗರಿಗೂ ಸಹ ಅವರ ಮೈಬಣ್ಣಕ್ಕಿಂತ ಅವರ ಇಲಿ ಹಿಡಿಯುವ ವೃತ್ತಿಯಿಂದಾಗಿ ಇಲ್ಲಿಗ, ಇರುಳ, ಇರುಳಿಗ ಹೆಸರುಗಳು ಬಂದಿರುವ ಸಾಧ್ಯತೆಗಳೇ ಹೆಚ್ಚಿವೆ ಎನಿಸುತ್ತದೆ. ವಿವಿಧ ರಾಜ್ಯಗಳಲ್ಲಿ ನೆಲೆಸಿರುವ ಇರುಳಿಗರನ್ನು ಆಯಾ ರಾಜ್ಯಗಳಲ್ಲಿ ವಿವಿಧ ಹೆಸರುಗಳಿಂದ ಗುರುತಿಸಲಾಗುತ್ತಿದ್ದು ಅವುಗಳ ವಿವರ ಈ ಕೆಳಗಿನಂತಿದೆ.

ಕೋಷ್ಟಕ ೩.೧. ರಾಜ್ಯವಾರು ಇರುಳಿಗರ ವಿವಿಧ ಹೆಸರುಗಳು

ರಾಜ್ಯ	ಹೆಸರುಗಳು
ತಮಿಳುನಾಡು	ಇರುಲ, ಇರುವನ್, ಇರುಳನ್, ಇರುಳರು, ಇರುವಲನ್, ಇರುಲಿಗರು, ಇರುಲಿಗ, ಕಸಬಾ, ಯರುಕುಲ, ಯರುಕುಲನ್, ಕಾಡಚಂಚು, ಕೂರವ, ಕಾಡುಪುಸಾರಿ, ವೈಲಿಯನ್, ಶಿಕಾರಿ.
ಕೇರಳ	ಇರುಳ, ಇರುಳನ್, ಇರುಳರ್.
ಆಂಧ್ರಪ್ರದೇಶ	ಯನಾದಿ, ಇರುಳ
ಕರ್ನಾಟಕ	ಇಲ್ಲಿಗರು, ಇರುಳ, ಇರುಳರ್, ಇರುಳಗರ್, ಕಾಡುಪೂಜಾರಿ, ಕಸುಬ, ಕಸುವ.
ಪಾಂಡಿಚೇರಿ	ಇರುಳಿಗಾನ್, ಇರುಳರ್.

ಆಧಾರ: ಕ್ಷೇತ್ರಕಾರ್ಯ ಮಾಹಿತಿ

೩.೨. ಸೃಷ್ಟಿ ಪುರಾಣ

"ಬಹುತೇಕ ಬುಡಕಟ್ಟು ಸಮುದಾಯಗಳು ತಮ್ಮ ಮೂಲದ ಕುರಿತು ಸೃಷ್ಟಿ ಪುರಾಣಗಳನ್ನು ರೂಪಿಸಿಕೊಂಡಿವೆ. ಬಾಯಿಂದ ಬಾಯಿಗೆ ಮೌಖಿಕ ರೂಪದಲ್ಲಿ ಈ ಸೃಷ್ಟಿ ಪುರಾಣಗಳಿರುತ್ತವೆ. ಅವು ಮಾನವನ ಹುಟ್ಟು, ಸಮುದಾಯದ ಹುಟ್ಟಿನ ಕುರಿತಾಗಿ ಇರುವ ನಂಬಿಕೆಗಳನ್ನು ಅನಾವರಣಗೊಳಿಸುತ್ತವೆ. ಇರುಳಿಗರೂ ಸಹ ಅಂತಹ ಸೃಷ್ಟಿ ಪುರಾಣದ ಮೂಲಕ ತಾವು ಎಲ್ಲಿಂದ ಬಂದವರು, ತಮ್ಮ ಸಮುದಾಯದ ಸೃಷ್ಟಿ ಹೇಗಾಯಿತು ಎಂಬುದರ ಕುರಿತಾಗಿ ಸೃಷ್ಟಿ ಪುರಾಣಗಳಲ್ಲಿ ತಿಳಿಸುತ್ತಾರೆ. ಈ ದೃಷ್ಟಿಯಿಂದ "ಸೃಷ್ಟಿ ಪುರಾಣಗಳು ತನ್ನ ಸಮಾಜದಲ್ಲಿ ಸಕ್ರಿಯವಾದ ಪಾತ್ರವಹಿಸುತ್ತದೆ. ಹಾಗೂ ಜೀವಂತ ಶಕ್ತಿಯಾಗಿರುತ್ತದೆ. ಪುರಾಣಗಳು ಒಂದು ಸಮಾಜದ ಅಥವಾ ಬುಡಕಟ್ಟಿನ ಜನರಿಗೆ ಪರಮ ಪವಿತ್ರವಾದವುಗಳಾಗಿವೆ"[೧೦] ಕರ್ನಾಟಕದಲ್ಲಿ ನೆಲೆಸಿದ ಇರುಳಿಗರಲ್ಲಿ ಚಾಲ್ತಿಯಲ್ಲಿರುವ ಸೃಷ್ಟಿಪುರಾಣಗಳು ಈ ರೀತಿಯಾಗಿವೆ.

೧. ಸೃಷ್ಟಿ ಪುರಾಣ: ತಂದೆ ಮಗಳು ಇಬ್ಬರು ಕಾಡಿನಲ್ಲಿ ಆಹಾರಕ್ಕಾಗಿ ಗಡ್ಡೆಗಳನ್ನು ಅಗೆಯುತ್ತಿರುತ್ತಾರೆ. ಆಗ ಅಲ್ಲಿಯೇ ಪಕ್ಕದಲ್ಲಿದ್ದ ಬಿದಿರು ಮೆಳೆಯಲ್ಲಿ ಕುಳಿತುಕೊಂಡಿದ್ದ ಹಂದಿಗಳು "ನಾಳೆ ಸಮುದ್ರ ಉಕ್ಕುತ್ತದೆ. ಸಮಸ್ತ ಜಗತ್ತು ನಾಶವಾಗುತ್ತದೆ. ಬದುಕಬೇಕೆನ್ನುವವರು ಸೋರೆ ಬುರುಡೆಯಲ್ಲಿ ಅಡಗಿ ಕೊಳ್ಳಬೇಕು" ಎಂದು ತಮ್ಮ ತಮ್ಮೊಳಗೆ ಮಾತನಾಡುತ್ತವೆ. ಹಂದಿಗಳ ಮಾತನ್ನು ಆಲಿಸಿದ ತಂದೆ ಮಗಳು ಒಂದು ವಾರಕ್ಕೆ ಆಗುವಷ್ಟು ಆಹಾರವನ್ನು ಶೇಖರಿಸಿಕೊಂಡು ಸೋರೆಕಾಯಿಯ ಬುರುಡೆಯಲ್ಲಿ ಅಡಗಿಕೊಳ್ಳುತ್ತಾರೆ. ಸಮುದ್ರ ಉಕ್ಕಿ ಇಳಿದ ಮೇಲೆ ಅವರು ಹೊರಗೆ ಬಂದು ನೋಡುತ್ತಾರೆ. ಹಂದಿಗಳ ಮಾತು ನಿಜವಾಗಿರುತ್ತದೆ. ಸಮುದ್ರದ ಅಲೆಗೆ ಇಡೀ ಜಗತ್ತು ನಾಶಗೊಂಡಿರುತ್ತದೆ. ಭೂಮಿಯ ಮೇಲೆ ಉಳಿದ ತಂದೆ-ಮಗಳು ಅನಿವಾರ್ಯವಾಗಿ ಸಂಸಾರ ಆರಂಭಿಸಿದರು. ಪಾರ್ವತಿದೇವಿ ಅವರಿಗೆ ಗಡ್ಡೆಗೆಣಸು ಅಗೆಯಲು ಹಾರೆ ಕುಡುಗೋಲು ಮತ್ತು ಬೆಂಕಿಗಾಗಿ ಚಕಮಕಿ ಕಲ್ಲು ಕೊಟ್ಟಳು"[೧೧]. ಈ ತಂದೆ ಮಗಳಿಗೆ ಹುಟ್ಟಿದ ಮಕ್ಕಳೇ ಇರುಳಿಗರಾದರು

೨. ಸೃಷ್ಟಿ ಪುರಾಣ: ಮಹದೇಶ್ವರ ಸ್ವಾಮಿಯ ಪರಮಭಕ್ತರಾದ ಕಾರಯ್ಯ ಮತ್ತು ಬಿಲ್ಲಯ್ಯ ಎಂಬ ಸಹೋದರರು ದನ ಮೇಯಿಸುವ ಕಾಯಕದಲ್ಲಿ ನಿರತರಾಗಿದ್ದರು. ದಟ್ಟ ಅರಣ್ಯದ ನಡುವೆ ಇದ್ದ ಮಹದೇಶ್ವರನು ಬಿಲ್ಲಯ್ಯನ ಬಳಿ ಬಂದು ಬಿಲ್ಲಯ್ಯ.. ಬಿಲ್ಲಯ್ಯ... ಎಂದು ಕೂಗಿ ಕರೆದನು. ಮಹದೇಶ್ವರನ ಧ್ವನಿ ಕೇಳಿದ ಬಿಲ್ಲಯ್ಯನು ಅವನ ಬಳಿಗೆ ಬೇಗ ಬರಲಿಲ್ಲ. ಇದರಿಂದ ಕೋಪಗೊಂಡ ಮಹದೇಶ್ವರನು 'ಬಿಲ್ಲಯ್ಯ, ನಾನು ಕರೆದ ತಕ್ಷಣ ಮಾರುತ್ತರ ನೀಡಬೇಕು. ಆ ರೀತಿ ಮಾಡದಿದ್ದರೆ ತನ್ನ ಬಳಿಗೆ ಬಿಲ್ಲಯ್ಯನು ಬರುವ ಅವಶ್ಯಕತೆ ಇಲ್ಲವೆಂದು ತಿಳಿಸಿದನು. ಬಿಲ್ಲಯ್ಯನು ಮಹದೇಶ್ವರನಲ್ಲಿ ಕ್ಷಮೆ ಕೇಳಿ ಎತ್ತಿನ ಇರುಳಿನಲ್ಲಿ ಸೇರಿಕೊಂಡನು.

ಬಿಲ್ಲಯ್ಯನನ್ನು ಪರೀಕ್ಷಿಸಲೆಂದು ಮಹದೇಶ್ವರನು ಮತ್ತೊಮ್ಮೆ ಕೂಗಿದನು. ಮಹದೇಶ್ವರನ ಕರೆಗೆ ಎತ್ತಿನ ಇರುಳಿನಲ್ಲಿದ್ದ ಬಿಲ್ಲಯ್ಯನು ಮಹಾಸ್ವಾಮಿ ಅಪ್ಪಣೆ ಎಂದು ಮಾರುತ್ತರ ನೀಡಿದನು. ಇದರಿಂದ ಸುಪ್ರೀತನಾದ ಮಹದೇಶ್ವರನು ಎಂತಹ ಮಹಾಭಕ್ತನಯ್ಯಾ ನೀನು, ನನ್ನ ಮಾತಿನ ಆಜ್ಞೆಯ ಮೇಲೆ ಎಂತಹ ನಂಬಿಕೆ ನೀನು ಇರಿಸಿಕೊಂಡಿರುವಿ, ಇವತ್ತಿನಿಂದ ಎತ್ತಿನ ಇರುಳಿನಲ್ಲಿ ವಾಸ ಮಾಡುವುದರಿಂದ ನಿನ್ನ ಮುಂದಿನ ಸಂತಾನಕ್ಕೆ ಇರುಳಿಗ ಎಂದು ಹೆಸರು ಬರಲಿ ಎಂದು ಅಪ್ಪಣೆ ನೀಡಿದನು. ನನ್ನ ಮೊದಲ ಪೂಜೆ ನಿಮ್ಮಿಂದಲೇ ಆಗಲಿ, ಎರಡನೇ ಪೂಜೆ ಎಡೆ ನಿನಗಾಗಲಿ, ಮೂರನೆಯ ಪೂಜೆ ಕಳ್ಳಕಾಕರಿಗಾಗಲಿ ಎಂದು ಆಜ್ಞೆ ಮಾಡಿದ್ದರಿಂದ ತಮಗೆ ಇರುಳಿಗರು ಎಂದು ಹೆಸರು ಬಂದಿದೆ ಎಂದು ಹೇಳಲಾಗುತ್ತದೆ"[೧೨]

ಅಂದರೆ ಇರುಳಿಗರ ಪ್ರಕಾರ, ಅವರ ಸೃಷ್ಟಿ ಪುರಾಣದ ಪ್ರಕಾರ ಇರುಳಿಗರ ಮೂಲಕ್ಕೆ ತಂದೆ ಮಗಳ ದೈಹಿಕ ಸಂಬಂಧಗಳು ಕಾರಣ ಹಾಗೂ ಅವರ ಮೂಲ ಪುರುಷ ಬಿಲ್ಲಯ್ಯ ಎಂದು ಹೇಳುತ್ತಾರೆ.

ತಮಿಳುನಾಡಿನ ನೀಲಗಿರಿ ಜಿಲ್ಲೆ ಮತ್ತು ಸುತ್ತಮುತ್ತಲಿನ ಅರಣ್ಯಗಳಲ್ಲಿ ನೆಲೆಸಿದ್ದ ಇರುಳರಿಗೂ ಪಾಂಡ್ಯ ರಾಜವಂಶದ ಜೊತೆ ಅನನ್ಯವಾದ ಸಂಬಂಧ ಇದ್ದಿತು"[೧೩] ಎಂಬ ಅಭಿಪ್ರಾಯ ಅಧ್ಯಯನದಿಂದ ತಿಳಿದುಬರುತ್ತದೆ. ಆಳರಸರಿಗೆ ಬೇಕಾದ ಕಾಡಿನ ಉತ್ಪನ್ನಗಳು ಹಾಗೂ ಅವರ ಆಸ್ಥಾನದ ರಾಜವೈದ್ಯರಿಗೆ ಔಷಧಿಗೆ ಬೇಕಾದ ಗಿಡಮೂಲಿಕೆಗಳನ್ನು ಇರುಳಿಗರು ಒದಗಿಸುವುದು ಹಾಗೂ ರಾಜರು ಬೇಟೆಗಾಗಿ ಅರಣ್ಯಕ್ಕೆ ಬರುವ ಸಂದರ್ಭದಲ್ಲಿ ಅವರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸುತ್ತಿದ್ದರು ಎಂದು ಅಭಿಪ್ರಾಯವನ್ನು ವಿದ್ವಾಂಸರಾದ ಜಕ್ಕಾಪಾರ್ಥಸಾರಥಿ ವ್ಯಕ್ತಪಡಿಸುತ್ತಾರೆ.

ತಂಜಾವೂರು ಪ್ರಾಂತ್ಯದಲ್ಲಿ ಇರುಳಿಗ ಸಮುದಾಯದ ಜನರು ಬೃಹದೇಶ್ವರ ದೇವಾಲಯದ ನಿರ್ಮಾಣ ಕಾರ್ಯದಲ್ಲಿ ಅರಸನಿಗೆ ಸಹಕರಿಸಿದ್ದರೆಂಬ ವಿವರಗಳನ್ನು ಅಧ್ಯಯನಕಾರರು ಉಲ್ಲೇಖಿಸುತ್ತಾರೆ.

ಮನುಷ್ಯನಿಗೆ ಹಾವು ಕಚ್ಚಿದಾಗ ಅದರ ವಿಷ ತೆಗೆದು ಮನುಷ್ಯರನ್ನು ಗುಣಪಡಿಸುವ ವಿದ್ಯೆಯಲ್ಲಿ ಇರುಳಿಗರು ಪರಿಣಿತರಾಗಿದ್ದರೆಂದು ಪಲ್ಲವ ಅರಸರು ನೀಡಿದ ತಾಮ್ರ ಪತ್ರದ ಮೂಲಕ ತಿಳಿದುಬರುತ್ತದೆ. ಈ ತಾಮ್ರ ಪತ್ರವನ್ನು ಮದ್ರಾಸಿನ "Archives Department Library"[14]ಯಲ್ಲಿ ಕಾಯ್ದಿರಿಸಲಾಗಿದೆ.

ಮಾಗಡಿ ಪಾಳೇಗಾರರ ಆಡಳಿತಕ್ಕೆ ಒಳಪಟ್ಟ ಪ್ರದೇಶವಾಗಿದ್ದಲ್ಲಿದ್ದ ರಾಮಗಿರಿದುರ್ಗ ಹಾಗೂ ಸಾವನದುರ್ಗದ ಕೋಟೆಯನ್ನು ಕಟ್ಟುವ ಕೆಲಸದಲ್ಲಿ ಸ್ಥಳೀಯ ಇರುಳಿಗರು ಸಹಾಯಕರಾಗಿ ಕಾರ್ಯ ನಿರ್ವಹಿದ್ದರೆಂಬ ವಿವರಗಳನ್ನು ಇಂದಿಗೂ ಇರುಳಿಗರು ತಿಳಿಸುತ್ತಾರೆ. ಹಾಗೆಯೇ ಸಾವನದುರ್ಗದಲ್ಲಿನ ಸಾವಂದಿವೀರಭದ್ರ ದೇವಾಲಯದ ಮುಂಭಾಗದ ಗರುಡಗಂಭ ನಿಲ್ಲಿಸಲು ಸ್ಥಳೀಯ ಕುಶಲ ಕರ್ಮಿಗಳಿಂದ ಸಾಧ್ಯವಾಗದೇ ಇದ್ದಾಗ ಇರುಳಿಗ ಸಮುದಾಯದ ಜನರು ಗರುಡಗಂಭವನ್ನು ನೇರವಾಗಿ ನಿಲ್ಲಿಸಿದರು ಎಂಬ ಐತಿಹ್ಯ ಇರುಳಿಗರಲ್ಲಿ ಪ್ರಚಲಿತವಿದೆ.

ಕೆಂಪೇಗೌಡನ ಆಳ್ವಿಕೆಯ ಕಾಲದಲ್ಲಿ ಮಾಗಡಿ ಪ್ರಾಂತ್ಯದ ವೀರಶೈವ ಮಠಗಳಿಗೆ ಜೇನು ಮತ್ತು ಔಷಧಿಯ ಮೂಲಿಕೆಗಳನ್ನು ನೀಡುವುದು ಹಾಗೂ ಪಾಳೇಗಾರರಿಗೆ ಗೂಢಚಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರೆಂದೂ ಹೇಳಲಾಗುತ್ತದೆ.

೩.೩. ಭಾರತದ ವಿವಿಧ ರಾಜ್ಯಗಳಲ್ಲಿ ನೆಲೆಗೊಂಡಿರುವ ಇರುಳಿಗ ಬುಡಕಟ್ಟು

ಭಾರತದಲ್ಲಿಯೇ ಮಧ್ಯಪ್ರದೇಶ, ಒಡಿಶಾ ಹಾಗೂ ಈಶಾನ್ಯ ರಾಜ್ಯಗಳು ಅತಿ ಹೆಚ್ಚು ಬುಡಕಟ್ಟು ಜನರನ್ನು ಹೊಂದಿರುವ ರಾಜ್ಯಗಳೆಂದು ಗುರುತಿಸಲಾಗುತ್ತಿದೆ. ದಕ್ಷಿಣ ಭಾರತದಲ್ಲಿಯೂ ಸಹ ಪಶ್ಚಿಮ ಘಟ್ಟ ಹಾಗೂ ಇತರ ಅರಣ್ಯ ಪ್ರದೇಶಗಳಲ್ಲಿ ಬುಡಕಟ್ಟು ಸಮುದಾಯಗಳು ನೆಲೆಗೊಂಡಿವೆ. ದಕ್ಷಿಣ ಭಾರತದ ಪ್ರಮುಖ ಬುಡಕಟ್ಟೆಂದು ಗುರುತಿಸಲಾಗಿರುವ ಇರುಳಿಗ ಬುಡಕಟ್ಟಿನ ಮೂಲ ನೆಲೆ ತಮಿಳ್ನಾಡಿನ ನೀಲಗಿರಿ ಬೆಟ್ಟ ಪ್ರದೇಶವೆಂದು ಹೇಳಲಾಗುತ್ತಿದೆ. ತಮಿಳ್ನಾಡಿನ ಹೊರತಾಗಿ ಕರ್ನಾಟಕ, ಕೇರಳ, ಕೇಂದ್ರಾಡಳಿತ ಪ್ರದೇಶವಾದ ಪಾಂಡಿಚೇರಿ, ಆಂಧ್ರಪ್ರದೇಶ, ಮುಂತಾದ ರಾಜ್ಯಗಳಲ್ಲಿ ಇರುಳಿಗ ಬುಡಕಟ್ಟು ಕಂಡುಬರುತ್ತಿದ್ದು ಇವರನ್ನು ಬೇರೆ ಬೇರೆ ರಾಜ್ಯಗಳಲ್ಲಿ ವಿವಿಧ ಹೆಸರುಗಳಿಂದ ಗುರುತಿಸುತ್ತಾರೆ.

ಇರುಲ, ಇರುವನ್, ಇರುಲನ್, ಇರುಲರ್, ಇರುಳಿಗರು, ಇರುಲಿಗಾನ್, ಪೂಸಾರಿ, ಕಸುಬ ಶಿಕಾರಿ, ಎರುಕುಲ, ಕಾಡುಪುಜಾರಿ, ಇಲ್ಲಿಗ, ಕಾಡುಚೆಂಚು, ಕಾಡುಪುಸಾರಿ, ವೆಲ್ಲೈಯನ್ ಇತ್ಯಾದಿ ಹೆಸರುಗಳಿಂದ ಗುರುತಿಸುತ್ತಾರೆ.

ತಮಿಳುನಾಡು ರಾಜ್ಯ

ತಮಿಳುನಾಡಿನ ರಾಜ್ಯದ ನೀಲಗಿರಿ ಪ್ರಾಂತ್ಯಕ್ಕೆ ಹತ್ತಿರವಿರುವ ಕೊಯಮುತ್ತೂರು, ಸೇಲಂ, ಧರ್ಮಪುರಿ ಪ್ರದೇಶಗಳಲ್ಲಿ ತಮಿಳ್ನಾಡಿನ ಶೇ. ೬೦ರಷ್ಟು ಇರುಳಿಗ ಸಮುದಾಯದ ಜನರು ವಾಸಿಸುತ್ತಿರುವುದಾಗಿ ಅಧ್ಯಯನಗಳ ಮೂಲಕ ತಿಳಿದುಬರುತ್ತದೆ. ವೈಷ್ಣವ ಸಂಪ್ರದಾಯವನ್ನು ಅನುಸರಿಸುವ ಇವರು ನೀಲಗಿರಿ ಜಿಲ್ಲೆಯ ಕೂತಗಿರಿ ತಾಲೂಕಿನಲ್ಲಿರುವ ಶ್ರೀರಂಗನಾಥಸ್ವಾಮಿ ದೇವರ ಆರಾಧಕರಾಗಿದ್ದಾರೆ. ಹಾಗೆಯೇ ಈ ದೇವರ ಅರ್ಚಕರಾಗಿಯೂ ಇಂದಿಗೂ ಸಹ ಇವರು ಸೇವೆಸಲ್ಲಿಸುತ್ತಿದ್ದಾರೆ.

ತಂಜಾವೂರು ಪ್ರಾಂತ್ಯದ ಶ್ರೀರಂಗ, ತಿರುವಾಯೂರು, ತಂಜಾವೂರು ಪ್ರದೇಶಗಳಲ್ಲಿ ನೆಲೆಸಿರುವ ಇರುಳಿಗ ಸಮುದಾಯದ ಜನರು ಶೈವ ಮತಾವಲಂಬಿಗಳು.

ಕಾಂಚಿಪುರ ಪ್ರಾಂತ್ಯದ ತಿರುವಣ್ಣಾಮಲೈ, ತಿರುವಳ್ಳುವರ್, ಚೆಂಗಲಪೇಟೆ, ಕಾಂಚಿಪುರಂ ಪ್ರದೇಶಗಳಲ್ಲಿ ಚದುರಿದಂತೆ ಇರುಳಿಗರು ಕಾಣಸಿಗುತ್ತಾರೆ.

ಕೃಷ್ಣಗಿರಿ ಪ್ರಾಂತ್ಯದ ಕೃಷ್ಣಗಿರಿ ಹಾಗೂ ಹೊಸೂರು ಪ್ರದೇಶಗಳು ಕರ್ನಾಟಕದ ಗಡಿಯಲ್ಲಿರುವ ತಮಿಳುನಾಡಿನ ಗಡಿ ಜಿಲ್ಲೆಗಳಾಗಿ ರಾಮನಗರ ಪ್ರದೇಶದ ಇರುಳಿಗರಿಗೂ ಹಾಗೂ ತಮಿಳುನಾಡಿನ ಈ ಜಿಲ್ಲೆಗಳ ಇರುಳಿಗರ ನಡುವೆ ವೈವಾಹಿಕ ಸಂಬಂಧಗಳು ನಡೆಯುತ್ತವೆ. ಒಟ್ಟಾರೆಯಾಗಿ ತಮಿಳುನಾಡಿನ ಸುಮಾರು ೯ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಕಂಡುಬರುತ್ತಾರೆ.

ಕೇರಳ ರಾಜ್ಯ

೧೯೨೧ರಲ್ಲಿ ಬ್ರಿಟಿಷರಿಗೂ ಮತ್ತು ನೀಲಗಿರಿ ಪ್ರದೇಶದ ಇರುಳಿಗ ಸಮುದಾಯದ ಜನರಿಗೂ ಸಂಘರ್ಷ ಉಂಟಾಗಿತ್ತೆಂದು ಇತಿಹಾಸದ ಮೂಲಕ ತಿಳಿಯುತ್ತದೆ. ಇರುಳಿಗ ಸಮುದಾಯದವರು ತಮ್ಮ ಸತ್ತ ವ್ಯಕ್ತಿಯ ಕುರುಹಾಗಿ 'ಮಕ್ಕೆಕಲ್ಲು' ನಿಲ್ಲಿಸುವ ಪ್ರದೇಶವನ್ನು ಅತಿಕ್ರಮಿಸಿ ಬ್ರಿಟೀಷ್ ಅಧಿಕಾರಿಗಳು ಟೀ ತೋಟಗಳನ್ನು ನಿರ್ಮಾಣ ಮಾಡುವುದಕ್ಕೆ ತೊಡಗಿದ ಸಂದರ್ಭದಲ್ಲಿ ಇರುಳಿಗ ಬುಡಕಟ್ಟಿನ ಜನರು ಪ್ರತಿರೋಧ ವ್ಯಕ್ತಪಡಿಸುತ್ತಾರೆ. ಈ ಪ್ರತಿರೋಧವನ್ನು ಹತ್ತಿಕ್ಕಲೆಂದೇ ೧೯೨೧ ರಲ್ಲಿಯೇ ಬ್ರಿಟೀಷರು ಇರಳಿಗರನ್ನು 'ಅಪರಾಧಿ ಬುಡಕಟ್ಟು' ಪಟ್ಟಿಗೆ ಸೇರಿಸುತ್ತಾರೆ. ಬ್ರಿಟೀಷರ ಈ ಕುತಂತ್ರದಿಂದಾಗಿ ಇರಳಿಗ ಬುಡಕಟ್ಟು ಜನ ಅನಿವಾರ್ಯವಾಗಿ ತಮ್ಮ ಪ್ರತಿಭಟನೆಯಿಂದ ಹಿಂದೆ ಸರಿದು ಕೇರಳದ ಅಟ್ಟಪಾಡಿ ಅರಣ್ಯ ಪ್ರದೇಶದಲ್ಲಿ ಆಶ್ರಯ ಪಡೆಯುತ್ತಾರೆ.

ಕೇರಳದ ಅಟ್ಟಪ್ಪಾಡಿ ಅರಣ್ಯ ಪ್ರದೇಶದಲ್ಲಿ ನೆಲೆಸಿರುವ ಇರುಳಿಗರು ಇಂದಿಗೂ ತಮಿಳು ಮಿಶ್ರಿತ ಕನ್ನಡ ಭಾಷೆಯಲ್ಲಿ ಮಾತನಾಡುವುದನ್ನು ಕಾಣಬಹುದು.

ಕೇರಳ ರಾಜ್ಯದಲ್ಲಿ ೨೦೦೧ರ ಜನಗಣತಿಯ ಪ್ರಕಾರ ಪರಿಶಿಷ್ಟ ಪಂಗಡಕ್ಕೆ ಸೇರಿದ ಜನಸಂಖ್ಯೆಯು ೩,೬೪,೧೮೯ ರಷ್ಟಿತ್ತು. ಕೇರಳದಲ್ಲಿಯೇ ವೈನಾಡು ಅತಿ ಹೆಚ್ಚು ಪರಿಶಿಷ್ಟ ಪಂಗಡದವರನ್ನು ಹೊಂದಿರುವುದು ಕಂಡುಬರುತ್ತದೆ. ವೈನಾಡಿನ ನಂತರದ ಸ್ಥಾನವನ್ನು ಫಾಲ್ಫಾಟ್ ಹೊಂದಿದೆ.

ಅಟ್ಟಪಾಡಿ, ಮುನ್ನರು ಕಾಡಿನಲ್ಲಿ ಅತಿ ಹೆಚ್ಚು ಇರುಳ ಸಮುದಾಯದ ಬುಡಕಟ್ಟು ಜನರು ನೆಲೆಸಿದ್ದಾರೆ.

ನೀಲವತ್ತು, ಪೊತ್ತವಾಡಿ, ಮಾಯಾಮುಡಿ, ಪಾಲಕಪಾಡಿ ಕೊನ್ನಪಾಲಂ, ಬೆಂಟ್ಟೂರು ಮತ್ತು ಲಾನಮಾನ ಪ್ರದೇಶಗಳಲ್ಲಿ ಚದುರಿದಂತೆ ವಿರಳವಾಗಿ ಇರುಳಿಗರು ನೆಲೆಸಿದ್ದಾರೆ.

ಪಾಂಡಿಚೇರಿ (ಕೇಂದ್ರಾಡಳಿತ ಪ್ರದೇಶ)

ಇರುಳಿಗರು ವಾಸಿಸುವ ಏಕೈಕ ಕೇಂದ್ರಾಡಳಿತ ಪ್ರದೇಶ ಪಾಂಡಿಚೇರಿಯಾಗಿದ್ದು ಕಾರಿಕಲ್ಲು, ಯಾನಂ ಮುಂತಾದ ಪ್ರದೇಶಗಳಲ್ಲಿ ಬಡತನದ ಕನಿಷ್ಠ ಜೀವನ ನಡೆಸುತ್ತಿದ್ದಾರೆ.

ಆಂಧ್ರ ಪ್ರದೇಶ (ರಾಜ್ಯ)

ಆಂಧ್ರಪ್ರದೇಶ ರಾಜ್ಯದಲ್ಲಿನ ಚಿತ್ತೂರು ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇರುಳಿಗರು ವಾಸವಾಗಿದ್ದಾರೆ. ತೆಲುಗು ಭಾಷೆಯನ್ನು ಹೆಚ್ಚಾಗಿ ಮಾತನಾಡುವ ಈ ಪ್ರದೇಶದ ಇರುಳಿಗರನ್ನು 'ಯನಾದಿಗಳು' ಎಂದು ಕರೆಯಲಾಗುತ್ತದೆ.

ಕರ್ನಾಟಕ

ಕರ್ನಾಟಕದಲ್ಲಿನ ದಕ್ಷಿಣ ಭಾಗದಲ್ಲಿ ಅತಿ ಹೆಚ್ಚಾಗಿ ಕಂಡುಬರುವ ಈ ಸಮುದಾಯವನ್ನು ಇರುಳರು, ಇಲಿಗರು, ಕಾಡುಪೂಜಾರಿಗಳೆಂದು ಕರೆಯಲಾಗುತ್ತದೆ. ರಾಜ್ಯದ ಸುಮಾರು ೨೫ ರಿಂದ ೨೬ ಜಿಲ್ಲೆಯ ವ್ಯಾಪ್ತಿಯ ಪ್ರದೇಶದಲ್ಲಿ ಕಂಡುಬರುವ ಈ ಸಮುದಾಯ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಬಾಗಲಕೋಟೆ, ಬಳ್ಳಾರಿ, ಬೆಳಗಾವಿ, ಬೀದರ್, ವಿಜಯಪುರ, ಚಿಕ್ಕಮಗಳೂರು, ದಾವಣಗೆರೆ, ಧಾರವಾಡ, ಗದಗ, ಕಲಬುರ್ಗಿ(ಗುಲಬರ್ಗಾ), ಹಾಸನ, ಹಾವೇರಿ, ಕೊಡಗು, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ಶಿವಮೊಗ್ಗ, ತುಮಕೂರು, ಉಡುಪಿ, ಉತ್ತರ ಕನ್ನಡ, ರಾಮನಗರ ಜಿಲ್ಲೆಗಳಲ್ಲಿ ಇರುಳಿಗರಿರುವುದಾಗಿ ೨೦೦೧ರ ಜನಗಣತಿ ವರದಿ ತಿಳಿಸುತ್ತದೆ. ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಇರುಳಿಗರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಹಾಗೆಯೇ ಶಿವಮೊಗ್ಗ ಹಾಗೂ ಮೈಸೂರು ಜಿಲ್ಲೆಗಳ ದಟ್ಟ ಅರಣ್ಯ ಪ್ರದೇಶ ಹಾಗೂ ಬೆಟ್ಟಗುಡ್ಡಗಳ ಇಳಿಜಾರು ಪ್ರದೇಶಗಳನ್ನು ಇಂದಿಗೂ ತಮ್ಮ ನೆಲೆಗಳಾಗಿ ಆಯ್ದುಕೊಂಡು ಇರುಳಿಗರು ಜೀವನ ನಡೆಸುತ್ತಿದ್ದಾರೆ.

೨೦೦೧ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ ಇರುಳಿಗರ ಜಿಲ್ಲಾವಾರು ಜನಸಂಖ್ಯೆ ಈ ರೀತಿ ಇದೆ.

ಕೋಷ್ಟಕ ೩.೨. ಕರ್ನಾಟಕದ ಇರುಳಿಗರ ಜಿಲ್ಲಾವಾರು ಜನಸಂಖ್ಯೆ (೨೦೦೧)

ಕ್ರಸಂ.	ಜಿಲ್ಲೆ	ಇರುಳಿಗರ ಜನಸಂಖ್ಯೆ		
		ಗಂಡು	ಹೆಣ್ಣು	ಒಟ್ಟು
೧.	ಬೆಂಗಳೂರು ಗ್ರಾಮಾಂತರ	೨೯೩೯	೨೭೦೬	೫೬೪೫
೨.	ಬೆಂಗಳೂರು ನಗರ	೭೩೮	೬೫೧	೧೩೮೯
೩.	ಬಾಗಲಕೋಟೆ	೧೫	೧೫	೩೦
೪.	ಬಳ್ಳಾರಿ	೫	೮	೧೩
೫.	ಬೆಳಗಾವಿ(ಬೆಳಗಾಂ)	೪೪	೪೦	೮೪
೬.	ಬೀದರ್	೯೦	೮೫	೧೭೫
೭	ವಿಜಯಪುರ(ಬಿಜಾಪುರ)	೦೩	೮	೧೧
೮.	ಚಿಕ್ಕಮಗಳೂರು	೦೨	೦೨	೦೪
೯.	ದಾವಣಗೆರೆ	೦೧	೦೨	೦೩
೧೦.	ಧಾರವಾಡ	೨೯	೨೭	೫೬
೧೧.	ಗದಗ	೧೯	೧೩	೩೨
೧೨.	ಕಲಬುರ್ಗಿ(ಗುಲಬರ್ಗಾ)	೧೮೯	೧೮೭	೩೭೬
೧೩.	ಹಾಸನ	೦೫	೦೯	೧೪
೧೪.	ಹಾವೇರಿ	೪೦	೪೧	೮೧
೧೫.	ಕೊಡಗು	೦೧	೦೨	೦೩
೧೬.	ಕೋಲಾರ	೪೩	೪೩	೮೬
೧೭.	ಕೊಪ್ಪಳ	೬೬	೭೮	೧೪೪
೧೮.	ಮಂಡ್ಯ	೦೭	೦೭	೧೪
೧೯.	ಮೈಸೂರು	೦೪	೦೧	೦೫
೨೦.	ರಾಯಚೂರು	೩೪	೫೨	೮೬
೨೧.	ಶಿವಮೊಗ್ಗ	೧೦	೦೨	೧೨

೨೨.	ತುಮಕೂರು	೧೦೩	೧೦೩	೨೦೬
೨೩.	ಉಡುಪಿ	೦೩	೦೩	೦೬
೨೪.	ಉತ್ತರ ಕನ್ನಡ	೦೨	೦೮	೧೦
	ಒಟ್ಟು	**೪೩೬೨**	**೪೧೯೪**	**೮೪೮೬**

ಕೃಪೆ: ಜನಗಣತಿ ವರದಿ ೨೦೦೧[೧೫]

೨೦೦೧ರ ಜನಗಣತಿ ನಡೆದಾಗ ರಾಮನಗರವು ಇನ್ನೂ ಬೆಂಗಳೂರು ಗ್ರಾಮಾಂತರದಲ್ಲಿಯೇ ಇದ್ದಿತು. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಗಳ ಹೊರತಾಗಿ ಬೇರೆ ಜಿಲ್ಲೆಗಳಲ್ಲಿ ಇರಳಿಗ ಬುಡಕಟ್ಟು ಇದೆ ಎಂದು ಜನಗಣತಿ ವರದಿ ತಿಳಿಸುವುದಾದರೂ ಈ ಜಿಲ್ಲೆಗಳ ಹೊರತಾಗಿ ಇತರ ಜಿಲ್ಲೆಗಳಲ್ಲಿ ಕಂಡುಬಂದ ಇರುಳಿಗರು ತಾತ್ಕಾಲಿಕವಾಗಿ ಕೆಲಸ ಹುಡುಕಿಕೊಂಡು ಹೊದಾಗ ಗಣತಿಗೆ ಸಿಕ್ಕವರೇ ಹೊರತು ಆಯಾ ಜಿಲ್ಲೆಗಳಲ್ಲಿ ಖಾಯಂ ಆಗಿ ನೆಲೆನಿಂತವರಲ್ಲ ಎಂಬುದು ಮಾತ್ರ ಸ್ಪಷ್ಟ.

ರಾಮನಗರ ಜಿಲ್ಲೆಯಲ್ಲಿ ಇರುಳಿಗರ ನೆಲೆಗಳು

ರಾಮನಗರ ಜಿಲ್ಲೆಯಲ್ಲಿ ಇರುಳಿಗರ ನೆಲೆಗಳ ವಿವರಗಳನ್ನು ಡಾ. ಎಂ. ಭೈರೇಗೌಡ ಅವರು ತಮ್ಮ 'ಇರುಳಿಗರ ಜಾನಪದ ಅಧ್ಯಯನ' ಎಂಬ ಕೃತಿಯಲ್ಲಿ ಈ ಕೆಳಗಿನಂತೆ ಗುರುತಿಸಿದ್ದಾರೆ.

ಕೋಷ್ಟಕ ३.३. ಎಂ. ಭೈರೇಗೌಡ ಗುರುತಿಸಿದ ರಾಮನಗರ ಜಿಲ್ಲೆಯ ತಾಲೂಕುವಾರು

		ಇರುಳಿಗರ ನೆಲೆಗಳ ವಿವರ[೧೬]
ಕ್ರಸಂ	**ತಾಲೂಕು**	**ನೆಲೆಗಳು**
೧.	**ರಾಮನಗರ**	೧. ಅಂಕನಹಳ್ಳಿ, ೨. ಅಚ್ಚಲು, ೩. ಅಣೆದೊಡ್ಡಿ (ಆನೆದೊಡ್ಡಿ), ೪. ಬಸವನಪುರ, ೫. ಬಿಳಿಗುಂಬ, ೬. ಬಸವಲಿಂಗನದೊಡ್ಡಿ, ೭. ದಾಸರಹಳ್ಳಿ, ೮. ಮೆಟ್ಟರೆಬಯಲು ೯. ವಡ್ಡರಹಳ್ಳಿ ೧೦.ದೊಡ್ಡಗಂಗವಾಡಿ, ೧೧. ಮಾದಾಪುರ ೧೨. ತೆಂಗಿನಕಲ್ಲು ೧೩. ಗಂಗರಾಜನಹಳ್ಳಿ, ೧೪. ಹನುಮಂತೇಗೌಡನದೊಡ್ಡಿ ೧೫. ಮದರಸಾಬರದೊಡ್ಡಿ, ೧೬. ಕೊತ್ತಿಪುರ ೧೭. ಚಾಮುಂಡಿ ಪುರ, ೧೮. ಕೊನಮುದ್ದನಹಳ್ಳಿ, ೧೯. ಚಿಕ್ಕಸೊಲಿಗೆರೆ, ೨೦. ಕಾಡನಕುಪ್ಪೆ, ೨೧. ನೆಲಮಲೆ, ೨೨. ಕಟುಕನಪಾಳ್ಯ, ೨೩. ನಂಜಾಪುರ ೨೪. ಕರಡಿಗವಿದೊಡ್ಡಿ, ೨೫. ವಡೇರಹಳ್ಳಿ ೨೬. ಮಟಕಯ್ಯನದೊಡ್ಡಿ ೨೭. ರಾಮದೇವರಪಾದ

೨.	ಮಾಗಡಿ	೧. ಅಜ್ಜನಹಳ್ಳಿ, ೨. ಜೋಡಿಗಟ್ಟೆ, ೩. ಸೊಣ್ಣೇನಹಳ್ಳಿ ೪. ಬಂಟರಕುಪ್ಪೆ, ೫. ಏಳಿಗೆಹಳ್ಳಿ, ೬. ಸಿದ್ಧೇಶ್ವರ ಕಾಲೋನಿ, ೭. ಗೊಲ್ಲರಪಾಳ್ಯ, ೮. ಮಾನಗಲ್ಲು, ೯. ರಾಮಕಲ್ಲುಪಾಳ್ಯ, ೧೦. ಗೇರಹಳ್ಳಿ, ೧೧, ಮಾರೇಗೌಡನದೊಡ್ಡಿ, ೧೨. ಕೊಟ್ಲು ೧೩. ಜೇನುಕಲ್ಲುಪಾಳ್ಯ ೧೪. ಮತ್ತ
೩.	ಕನಕಪುರ	೧. ಅಣಕಡಬೂರು, ೨. ಹೊಂಗಾಣಿದೊಡ್ಡಿ, ೩. ಮಾದೇ ಗೌಡನದೊಡ್ಡಿ, ೪. ಆಂಚುಗುಳಿ, ೫. ಜಕ್ಕೇಗೌಡನದೊಡ್ಡಿ ೬. ನೆಹರುದೊಡ್ಡಿ, ೭. ಬಿಳಿದಾಳೆ ೮. ಜಟ್ಟಿದೊಡ್ಡಿ ೯. ರಂಗ ನಾಥಪುರ ೧೦. ಬಸವನಹಳ್ಳಿ, ೧೧. ಕೊತಗೊಂಡನಹಳ್ಳಿ, ೧೨. ಸುಂಢಘಟ್ಟ, ೧೩. ಬುಡಗಯ್ಯನದೊಡ್ಡಿ, ೧೪. ಕೊಕ್ಕೆದೊಡ್ಡಿ ೧೫ ಶಿವನಹಳ್ಳಿ, ೧೬. ಬಳೆಚನ್ನರಸೆ, ೧೭. ಕೆಬ್ಬರೆ, ೧೮.ಶ್ರೀನಿವಾಸ ಪುರ, ೧೯. ಚಾಮುಂಡಿಪುರ, ೨೦. ಕೆಂಪಲಾಪುರ ೨೧.ಸೋಲಿಗ ಗೇರಿ ೨೨. ಚಿಕ್ಕಏರಂಗೆರೆ, ೨೩. ಕೆಬ್ಬೆದೊಡ್ಡಿ, ೨೪.ಸಾಲುಬನ್ನಿ, ೨೫. ದೊಡ್ಡಬೆಟ್ಟಹಳ್ಳಿ, ೨೭. ಕೊಳಗೊಂಡನಹಳ್ಳಿ ೨೮. ಶೀತಲ ವಾಡಿ, ೨೯. ಗೊಲ್ಲರದೊಡ್ಡಿ, ೩೦. ಕಪನೀಗೌಡನದೊಡ್ಡಿ, ೨೬. ತಿಮ್ಮೇಗೌಡನದೊಡ್ಡಿ, ೨೭. ಗುಳವಾಡಿ, ೨೮. ಮುತ್ತ ರಾಯನದೊಡ್ಡಿ, ೨೯. ತೇರುಬೀದಿ, ೩೦. ಗಿನಿಗಿದೊಡ್ಡಿ ೩೧. ಮುನೇಶ್ವರದೊಡ್ಡಿ, ೩೨. ತಟ್ಟಕೆರೆ, ೩೩. ಹೊಸಕೋಟೆ, ೩೪. ಮಾರಣ್ಣನದೊಡ್ಡಿ, ೩೫. ಉಳ್ಯ, ೩೬. ಹುಣಸನಹಳ್ಳಿ, ೩೭. ಮಕಳಂದ ೩೮. ಉರುಗನದೊಡ್ಡಿ ೩೯. ಹನುಮನಹಳ್ಳಿ, ೪೦.ಮಡಿವಾಳ, ೪೧. ವಡ್ಡರಕುಪ್ಪೆ, ೪೨. ಹೆಮ್ಮಗಾನಹಳ್ಳಿ, ೪೩. ಮೂಗ್ಗೂರು ೪೪. ಹಲಸಿನಮರದದೊಡ್ಡಿ, ೪೫.ಮಂಡಲಹಳ್ಳಿ
೪.	ಚನ್ನಪಟ್ಟಣ	–

ಕೋಷ್ಟಕ ೩.೪. ಈ ಅಧ್ಯಯನ ಕ್ಷೇತ್ರಕಾರ್ಯದಲ್ಲಿ ಹೊಸದಾಗಿ ಗುರುತಿಸಿದ ರಾಮನಗರ ಜಿಲ್ಲೆಯ ತಾಲೂಕುವಾರು ಇರುಳಿಗರ ನೆಲೆಗಳ ವಿವರ

ಕ್ರಸಂ	ತಾಲೂಕು	ನೆಲೆಗಳು
೧.	ರಾಮನಗರ	ಆದಿಶಕ್ತಿಹಳ್ಳಿ, ೨. ಬಾರೆದೊಡ್ಡಿ, ೩. ಭೈರಮಂಗಲತೋಟ ೪. ಚಿಕ್ಕಕೆಂಪಯ್ಯನದೊಡ್ಡಿ, ೫. ಚಿಕ್ಕೇಗೌಡನದೊಡ್ಡಿ ೬. ಚಿಕ್ಕ ಅಂಕನಹಳ್ಳಿ ೭. ದೊಡ್ಡಸೂಲಿಗೆರೆ ೮. ಗೊಲ್ಲರದೊಡ್ಡಿ

		೯. ಹನುಮಂತನಗರ ೧೦. ಜೋಗಿದೊಡ್ಡಿ ೧೧. ಕೆಂಪಶೆಟ್ಟಿದೊಡ್ಡಿ ೧೨. ಕೃಷ್ಣಾಪುರದೊಡ್ಡಿ, ೧೩. ಕೋಡಿಪುರ ೧೪.ಮುನಿಯಪ್ಪನ ದೊಡ್ಡಿ, ೧೫. ಮಂಜುನಾಥನಗರ ೧೬. ನಾಗೋಹಳ್ಳಿ ೧೭. ರಾಯರದೊಡ್ಡಿ ೧೮. ಲಕ್ಕೋಜನಹಳ್ಳಿ ೧೯. ತಿಮ್ಮಸಂದ್ರ ೨೦. ಯರೇಹಳ್ಳಿ ಇರುಳಿಗರ ಕಾಲೋನಿ ೨೧. ಯರೇಹಳ್ಳಿ ಫಾರೆಸ್ಟ್‌ದೊಡ್ಡಿ
೨.	**ಮಾಗಡಿ ತಾಲೂಕು**	೧. ದೊಡ್ಡಪಾಳ್ಯ, ೨. ಹೊಸೂರು, ೩. ಹೂಜಿಗಲ್ಲು ೪. ಕಾಳಯ್ಯನಪಾಳ್ಯ ೫. ಕೆಂಚಹುಣಸೇಪಾಳ್ಯ
೩.	**ಕನಕಪುರ ತಾಲೂಕು**	೧. ಏಲಚವಾಡಿ, ೨. ಹೊಸದೊಡ್ಡಿ ೩. ಲಿಂಗನಾಪುರ, ೪. ಬಿಜ್ಜನಹಳ್ಳಿ ೫, ಹೂಳ್ಯಹೊಸದೊಡ್ಡಿ, ೬. ನೌಕಲ್‌ದೊಡ್ಡಿ, ೭. ಬೊಮ್ಮಸಂದ್ರ, ೮ ಕರೀಗೌಡನದೊಡ್ಡಿ ೯. ಶಿವನೇಗೌಡನ ದೊಡ್ಡಿ, ೧೦. ಚಿಕ್ಕಬೆಟ್ಟಹಳ್ಳಿ, ೧೧. ಕಲ್ಲಹಳ್ಳಿ, ೧೨.ರಾಮನಹಳ್ಳಿ ೧೩. ದೊಳ್ಳಿಹಳ್ಳಿ, ೧೪.ಮರಳುವಾಡಿ, ೧೫. ಸರಸ್ವತಿಪುರ, ೧೬. ಗಟ್ಟಿಗುಂದ,೧೭. ೨ಮಹಾರಾಜರಕಟ್ಟೆ, ೧೮. ಗುರಿಕಾರ ದೊಡ್ಡಿ, ೧೯ ವಡೇರಹಳ್ಳಿ, ೨೦ ಇಂದಿರಾನಗರ
೪.	**ಚನ್ನಪಟ್ಟಣ**	ಇರುಳಿಗರ ಕಾಲೋನಿ (ಮಾಕಳಿ ಅರಣ್ಯ ಸಮೀಪ)

ಇರುಳಿಗರು ಆಗಾಗ್ಗೆ ಅನುಕೂಲಕ್ಕೆ ತಕ್ಕಂತೆ ತಮ್ಮ ನೆಲೆಗಳನ್ನು ಬದಲಿಸಿಕೊಳ್ಳುವುದುಂಟು. ಪ್ರಾಯಶಃ ಭೈರೇಗೌಡರು ಕ್ಷೇತ್ರ ಕಾರ್ಯ ನಡೆಸಿದಾಗ ಈ ಸಮುದಾಯದ ಜನ ಈ ಅಧ್ಯಯನದಲ್ಲಿ ಗುರುತಿಸಿದ ಕ್ಷೇತ್ರದಲ್ಲಿ ಕಂಡಿರುವ ಸಾಧ್ಯತೆಗಳು ಕಡಿಮೆ ಇರಬಹುದು. ಹೀಗಾಗಿ ಭೈರೇಗೌಡರಿಗೆ ಈ ನೆಲೆಗಳನ್ನು ಗುರುತಿಸಲು ಸಾಧ್ಯವಾಗದಿರಬಹುದು ಎಂದು ತಿಳಿಯಲಾಗಿದೆ. ಅಥವಾ ಈ ನೆಲೆಯಲ್ಲಿ ನೆಲೆಸಿದ ಇರುಳಿಗರು ಇಲ್ಲಿಗರಿರಬೇಕು, ಇರುಳಿಗ ಹಾಗೂ ಇಲ್ಲಿಗ ಬೇರೆ ಬೇರೆ ಎಂದು ಭಾವಿಸಿಯೂ ಈ ನೆಲೆಗಳನ್ನು ಭೈರೇಗೌಡರು ತಮ್ಮ ಕ್ಷೇತ್ರಕಾರ್ಯ ವ್ಯಾಪ್ತಿಯಿಂದ ಹೊರಗಿಟ್ಟಿರುವ ಸಾಧ್ಯತೆಗಳೂ ಇರುವುದುಂಟು.

ಆದರೆ ರಾಮನಗರ ಜಿಲ್ಲಾ ವ್ಯಾಪ್ತಿಯ ಪ್ರದೇಶದಲ್ಲಿ ಇರುಳಿಗರು ಮತ್ತು ಇಲ್ಲಿಗ ಪ್ರತ್ಯೇಕವಾದ ಪಂಗಡಗಳು ಎಂದು ಎಲ್ಲಿಯೂ ಕಂಡುಬಂದಿರುವುದಿಲ್ಲ. ಕರ್ನಾಟಕದಲ್ಲಿ ಇರುಳಿಗರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿದ್ದು, ಮಾಗಡಿ, ರಾಮನಗರ, ಕನಕಪುರ, ಚನ್ನಪಟ್ಟಣ ತಾಲೂಕುಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಇವರ ವಾಸಸ್ಥಳಗಳು ಬೆಟ್ಟ, ಕಣಿವೆ ಪ್ರದೇಶಗಳಾಗಿದ್ದು, ಕಬ್ಬಾಳುದುರ್ಗ, ರೇವಣಸಿದ್ದೇಶ್ವರ ಬೆಟ್ಟ ಪ್ರದೇಶ ಹಾಗೂ ಸಾವನದುರ್ಗ, ಮಾನಕಲ್ಲ, ಮರಳುವಾಡಿ,

ಕನಕಪುರ ವ್ಯಾಪ್ತಿ ಅರಣ್ಯ ಹಾಗೂ ಕಾವೇರಿ ನದಿಯ ತೀರ ಪ್ರದೇಶ, ಕುಮುದ್ವತಿ, ಅರ್ಕಾವತಿ, ವೃಷಭಾವತಿ, ಸುವರ್ಣಾವತಿ ನದಿಯ ತೀರ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಈ ಪ್ರದೇಶಗಳಲ್ಲದೆ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿರುವ ಬೆಂಗಳೂರು ಗ್ರಾಮಾಂತರದ ಬನ್ನೇರುಘಟ್ಟ, ಕೊಳ್ಳೆಗಾಲ, ಮಂಡ್ಯ ಜಿಲ್ಲೆಯ ಮುತ್ತತ್ತಿ ಅರಣ್ಯ ಪ್ರದೇಶ, ಮೈಸೂರು ಜಿಲ್ಲೆಯ ಹುಣಸೂರು, ಪಿರಿಯಾಪಟ್ಟಣ ತಾಲೂಕು, ಬೆಂಗಳೂರು ನಗರ ಜಿಲ್ಲೆಯ ಆನೆಕಲ್ಲು, ತುಮಕೂರು ಜಿಲ್ಲೆಯ ಕೆಲವು ಪ್ರದೇಶಗಳು, ಗುಲಬರ್ಗಾ, ಬೀದರ್ ಪ್ರದೇಶಗಳಲ್ಲಿ ಚದುರಿದಂತೆ ಕಂಡುಬರುತ್ತಾರೆ. ೧೯೭೧ರಲ್ಲಿ ಕರ್ನಾಟಕದಲ್ಲಿ ಇರುಳಿಗರ ಸಂಖ್ಯೆ ೩೦೬೨ ಎಂದು, ೧೯೮೧ರ ಜನಗಣತಿಯ ಪ್ರಕಾರ ೫೫೩೪ ಹಾಗೂ ೧೯೯೧ರಲ್ಲಿ ೬೮೪೩ ಎಂದು ತಿಳಿದುಬರುತ್ತದೆ. ಇರುಳಿಗರನ್ನು ಇರುಳರ್ ಎಂದು ಸಹ ಕರೆಯಲಾಗುತ್ತದೆ. ೨೦೦೧ರ ಜನಗಣತಿ ಪ್ರಕಾರ ಇರುಳರ್ ಪದ ಸೂಚಿತ ಸಮುದಾಯದ ಜಿಲ್ಲಾವಾರು ಜನಸಂಖ್ಯೆ ಈ ಕೆಳಗಿನಂತಿದೆ.

ಕೋಷ್ಟಕ ೩.೫. ಕರ್ನಾಟಕದಲ್ಲಿ ೨೦೦೧ರ ಜನಗಣತಿಯ ಪ್ರಕಾರ ಇರುಳರ್ ಜನಸಂಖ್ಯೆ[೧೭]

ಕ್ರ.ಸಂ.	ಜಿಲ್ಲಾವಾರು	ಜನಸಂಖ್ಯೆ		
		ಗಂಡು	ಹೆಣ್ಣು	ಒಟ್ಟು
೧.	ಬೆಂಗಳೂರು ಗ್ರಾಮಾಂತರ	೧೮೧	೧೭೫	೩೫೬
೨.	ಬೆಂಗಳೂರು ನಗರ	೧೨೭	೧೧೭	೨೪೪
೩.	ಬೆಳಗಾವಿ	೧		೧
೪.	ಬೀದರ್	೬	೧೬	೨೨
೫.	ವಿಜಯಪುರ(ಬಿಜಾಪುರ)	೧		೧
೬.	ಚಾಮರಾಜನಗರ	೨	೨	೪
೭.	ಚಿಕ್ಕಮಗಳೂರು	೪	೬	೧೦
೮.	ಧಾರವಾಡ	೬	೪	೧೦
೯.	ಗದಗ	೩	೩	೬
೧೦.	ಕಲಬುರ್ಗಿ(ಗುಲಬರ್ಗಾ)	೧೨	೮	೨೦
೧೧.	ಹಾಸನ	೨೦	೭	೨೭
೧೨.	ಕೊಡಗು	೨	೧	೩
೧೩.	ಕೋಲಾರ	೧೫	೧೭	೩೨

೧೪.	ಮಂಡ್ಯ	೫	೩	೮
೧೫.	ಮೈಸೂರು	೧	೧	೨
೧೬.	ರಾಯಚೂರು	೯	೧೪	೨೩
೧೭.	ಶಿವಮೊಗ್ಗ	೧೬	೨೨	೩೮
೧೮.	ಉತ್ತರ ಕನ್ನಡ	೬	೬	೧೨
	ಒಟ್ಟು	೪೧೫	೪೦೪	೮೧೯

(ಡಾ. ಎ.ಎಸ್.ಪ್ರಭಾಕರ್, ವಿಶ್ವವಿದ್ಯಾಲಯ ಧನಸಹಾಯ ವರದಿ, ಕವಿವಿ, ಹಂಪಿ, ಪು.೯೫-೯೬, ೨೦೦೮)

ಕರ್ನಾಟಕದ ನಾನಾ ಭಾಗಗಳಲ್ಲಿ ಇರುಳಿಗರು ಚದುರಿದಂತೆ ವಾಸ ಮಾಡುತ್ತಿರುವುದು ಕಂಡು ಬರುತ್ತದೆ. ಈ ಎಲ್ಲ ಪ್ರದೇಶಗಳಲ್ಲಿಯೂ ಸಾಮಾನ್ಯವಾಗಿ ಇವರ ವಾಸಸ್ಥಳಗಳು ಬೆಟ್ಟ ಪ್ರದೇಶ, ಕಣಿವೆ ಹಾಗೂ ಅರಣ್ಯ ಹತ್ತಿರದ ಪ್ರದೇಶ. ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ರಾಜ್ಯದಲ್ಲೆಡೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಇರುಳಿಗರು ವಾಸವಾಗಿದ್ದು, ೩೫೦೧ ಪುರುಷರು, ೩೨೯೩ ಮಹಿಳೆಯರು, ಒಟ್ಟು ೬೭೯೪ರಷ್ಟಿದ್ದಾರೆ. ಕರ್ನಾಟಕದಲ್ಲಿ ಇರುಳರು, ಇರುಳರ್, ಇಲ್ಲಿಗ, ಇಲ್ಲಿಗರು ಮುಂತಾದ ಪದಗಳಿಂದ ಈ ಸಮುದಾಯವನ್ನು ಗುರುತಿಸಲಾಗುತ್ತದೆ.

ಅಡಿಟಿಪ್ಪಣಿಗಳು

೧. Suryanath Kamath (Ed), Karnataka State Gazetter, Govt. of Karnataka, Bangalore Rural District Gazetter, P.154, 1989

೨. Thurston E. and Rangachari K., Castes and Tribes of Southern India, Vol-II, P.392, 1909

೩. ಜಕ್ಕಪಾರ್ಥಸಾರಥಿ, ನಿರ್ದೇಶಕರು, ಬುಡಕಟ್ಟು ಸಂಶೋಧನಾ ಕೇಂದ್ರ, ಉದಕಮಂಡಲ, ತಮಿಳುನಾಡು

೪. ಪ್ರಭಾಕರ ಎ.ಎಸ್. ವಿಶ್ವವಿದ್ಯಾಲಯ ಧನ ಸಹಾಯ ಆಯೋಗ, ಇರುಳಿಗರ ಸಮುದಾಯ ಅಧ್ಯಯನ ವರದಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೫. ಭೈರೇಗೌಡ ಎಂ., ಇರುಳಿಗರ ಜಾನಪದ ಅಧ್ಯಯನ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ಪು. ೩೭, ೨೦೦೦.

೬. ಮೈತ್ರಿ ಕೆ.ಎಂ., ಬುಡಕಟ್ಟು ಕುಲಕಸುಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೦, ೨೦೦೨

೭. ಸಿದ್ಧಗಂಗಯ್ಯ ಬಿ. ಕಂಬಾಳ, ಇರುಳಿಗರ ಉಪಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು. ೫, ೧೯೯೩.

೮. ಲಕ್ಕಪ್ಪಗೌಡ ಎಚ್.ಜೆ. (ಪ್ರ.ಸಂ), ಕುರುವ ಬಸವರಾಜು (ಲೇ), ಕರ್ನಾಟಕ ಬುಡಕಟ್ಟು ಸಂಪುಟ–೨, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ಪು.೫೯, ೨೦೦೦.

೯. Nanjunadaiah H.V., and Anatha Krishna Iyear L.K., The Mysore Tribes and Castes, Vol-III, P.378, 1928.

೧೦. ಶಂಕರನಾರಾಯಣ ತೀ.ನಂ., ಕಾಡುಗೊಲ್ಲರ ನಂಬಿಕೆಗಳು ಮತ್ತು ಆಚರಣೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಪು. ೭೯, ೧೯೯೮

೧೧. ತಿಳುವಳಿಕೆದಾರರು, ಬರಗಯ್ಯ (೭೫), ವಡೇರಹಳ್ಳಿ, ರಾಮನಗರ

೧೨. ತಿಳುವಳಿಕೆದಾರರು, ಪುಟ್ಟಮಾದಮ್ಮ (೬೯), ಕಾಳಯ್ಯನಪಾಳ್ಯ, ಮಾಗಡಿ ತಾಲೂಕು, ರಾಮನಗರ

೧೩. ಜಕ್ಕಪಾರ್ಥಸಾರಥಿ, ನಿರ್ದೇಶಕರು, ಬುಡಕಟ್ಟು ಸಂಶೋಧನಾ ಕೇಂದ್ರ, ಉದಕಮಂಡಲ, ತಮಿಳುನಾಡು

೧೪. Breeks J., Monuments of Nilgiri District, Archives Department Library, Chaniah

೧೫. ಜನಗಣತಿ ವರದಿ, ಕರ್ನಾಟಕ ಸರ್ಕಾರ, ಬೆಂಗಳೂರು ೨೦೦೧,

೧೬. ಭೈರೇಗೌಡ ಎಂ., ಇರುಳಿಗರ ಜಾನಪದ ಅಧ್ಯಯನ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ಪು. ೩೯, ೨೦೦೦.

೧೭. ಪ್ರಭಾಕರ ಎ.ಎಸ್. ವಿಶ್ವವಿದ್ಯಾಲಯ ಧನ ಸಹಾಯ ಆಯೋಗ, ಇರುಳಿಗರ ಸಮುದಾಯ ಅಧ್ಯಯನ ವರದಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೯೫–೯೬, ೨೦೦೮.

ಅಧ್ಯಾಯ ನಾಲ್ಕು

ಇರುಳಿಗರ ಸಾಮಾಜಿಕ ಸ್ಥಿತಿಗತಿ

ಪ್ರತಿಯೊಂದು ಜೀವಂತ ಸಮಾಜದಲ್ಲಿ ಸ್ವಾಭಾವಿಕವಾಗಿ ಚಲನಶೀಲತೆ ಎಂಬುದು ಅಂತರ್ಗತವಾಗಿರುತ್ತದೆ. ಚಲನಶೀಲತೆ ಎಂಬುದು ಜೀವಂತಿಕೆಯ ಸಹಜಗುಣ. ಇತಿಹಾಸದ ಉದ್ದಕ್ಕೂ ಬಹುತೇಕ ಸಮುದಾಯಗಳು ನಿರಂತರವಾಗಿ ಹಲವು ಒತ್ತಡಗಳಿಗೆ ಒಳಗಾಗುತ್ತಾ ಸತತವಾಗಿ ಬದಲಾವಣೆಗೊಳ್ಳುತ್ತಾ ಸಾಗುತ್ತಿವೆಯಾದರೂ ತನ್ನ ಮೂಲ ಸಂಸ್ಕೃತಿಯನ್ನು ಗುಪ್ತವಾಗಿ ಜೋಪಾನ ಮಾಡುತ್ತ ಹೋಗುತ್ತವೆ ಎಂಬುದಕ್ಕೆ ಭಾರತದ ಬಹುಪಾಲು ಬುಡಕಟ್ಟು ಸಮುದಾಯಗಳು ಸಾಕ್ಷಿಯಾಗಿವೆ.

ಇದಕ್ಕೆ ಇರುಳಿಗ ಸಮುದಾಯವು ಹೊರತಾಗಿಲ್ಲ. ಅನ್ಯ ಸಮುದಾಯ, ಜಾತಿಗಳ ಪ್ರಭಾವಕ್ಕೆ ಒಳಗಾಗಿದ್ದರೂ ಇರುಳಿಗ ಬುಡಕಟ್ಟು ತಮ್ಮದೇ ಆದ ಆಚರಣೆ, ನಂಬಿಕೆ, ವಿಧಿ ನಿಷೇಧಗಳನ್ನು ಮರೆತಿಲ್ಲ. ಕಾಡಿನೊಳಗೆ ಪ್ರತ್ಯೇಕವಾಗಿ ನೆಲೆಸುತ್ತಿದ್ದ ಇರುಳಿಗರು ಕೆಲವು ಅನಿವಾರ್ಯ ಕಾರಣಗಳಿಗಾಗಿ ಇತರ ಸಮುದಾಯಗಳೊಂದಿಗೆ ಸಹಬಾಳ್ವೆ ಮಾಡುವಂತಾಗಿದೆ. ಹೀಗಾಗಿ ಇವರ ಮೇಲೆ ಅನ್ಯ ಸಮುದಾಯಗಳ ಪ್ರಭಾವವು ಸಹಜವಾಗಿ ಆಗಿದೆ ಎಂಬುದನ್ನು ಮರೆಯಲಾಗದು.

ಮಾತೃಪ್ರಧಾನ ಸಂಸ್ಕೃತಿಯಿಂದ ಈ ಸಮುದಾಯ ಪಿತೃಪ್ರಧಾನ ಸಂಸ್ಕೃತಿಗೆ ಜಾರಿದೆ. ಹೀಗಾಗಿ ಪ್ರಸ್ತುತ ಈ ಬುಡಕಟ್ಟಿನ ಕುಟುಂಬಗಳಲ್ಲಿ ವಯಸ್ಸಿನಲ್ಲಿ ಯಾರು ಹಿರಿಯರಾಗಿತ್ತರೋ ಅವರೇ ಕುಟುಂಬದ ಮುಖ್ಯಸ್ಥರಾಗಿರುತ್ತಾರೆ. ಕುಟುಂಬದಲ್ಲಿ ನಡೆಯುವ ಪ್ರತಿ ಚಟುವಟಿಕೆ, ಆಚರಣೆಗಳಲ್ಲಿಯು ಇವರೇ ಮುಖ್ಯರಾಗಿರುತ್ತಾರೆ.

೪.೧. ಇರುಳಿಗರ ಕುಟುಂಬದ ಸ್ವರೂಪ

ಸಮುದಾಯ ಬದುಕಿನೊಳಗೆ ಕುಟುಂಬಕ್ಕೆ ಒಂದು ವಿಶೇಷ ಸ್ಥಾನವಿದೆ. ಕುಟುಂಬ ಎಂಬುದೊಂದಿಲ್ಲದಿದ್ದರೆ ಮನುಷ್ಯ ಒಬ್ಬಂಟಿಯಾಗಿಬಿಡುತ್ತಿದ್ದನು. ಮಾನವನ ಭವಿಷ್ಯವನ್ನು ವಿಶೇಷವಾಗಿ ರೂಪಿಸುವ ಮತ್ತು ಆತನನ್ನು ವಿಶಿಷ್ಟ ರೀತಿಯಲ್ಲಿ ಸಂರಕ್ಷಿಸುವ ಕೇಂದ್ರವಾಗಿ ಕುಟುಂಬವು ನಿಂತಿರುತ್ತದೆ. ಚಾರ್ಲ್ಸ್ ಹೆಚ್. ಪೇಜ್ ಮತ್ತು ಆರ್.ಎಂ. ಮೆಕ್ಕವರ್ ಅವರು "ಸಮಾಜದ ಎಲ್ಲ ದೊಡ್ಡ ಹಾಗೂ ಚಿಕ್ಕ ಸಂಘಗಳಲ್ಲಿ ಕುಟುಂಬದಷ್ಟು ಸಾಮಾಜಿಕ ಪ್ರಾಮುಖ್ಯತೆಯನ್ನು ಬೇರಾವುದೂ ಪಡೆದಿಲ್ಲ. ಕುಟುಂಬವೆಂಬುದು ಸಾಮಾಜಿಕ ಜೀವನದ ಮೇಲೆ ಬಹಳಷ್ಟು ಪ್ರಮುಖ ಪ್ರಭಾವವನ್ನು ಬೀರುತ್ತದೆ".[೧] ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಕುಟುಂಬ ಒಂದು ಸಾಮುದಾಯಿಕ ಚೌಕಟ್ಟಿನಲ್ಲಿ ಜನ್ಮತಾಳುತ್ತದೆ. ಇರುಳಿಗರಲ್ಲಿ ಕುಟುಂಬವೇ ಸಾಮಾಜಿಕ ಸಂಘಟನೆಯ ಘಟಕವಾಗಿದೆ. ಪ್ರತಿ ವ್ಯಕ್ತಿಯು ತನ್ನ ಕುಟುಂಬಕ್ಕೆ ಜವಾಬ್ದಾರನಾಗಿರುತ್ತಾನೆ. ವ್ಯಕ್ತಿಯ ಹುಟ್ಟಿನಿಂದ ಮರಣದವರೆಗೂ ಪ್ರತಿ ವಿಷಯದಲ್ಲೂ ಕುಟುಂಬದ ಜವಾಬ್ದಾರಿಯು ಮಹತ್ವದ ಪಾತ್ರವಹಿಸುತ್ತದೆ. ಇರುಳಿಗರಲ್ಲಿ ಅವಿಭಕ್ತ ಕುಟುಂಬವು ಪ್ರಧಾನವಾಗಿ ಇರುವ ಸಾಮಾಜಿಕ ವ್ಯವಸ್ಥೆಯಾಗಿದೆ, ಇತ್ತೀಚಿಗೆ ಅನ್ಯ ಸಮುದಾಯದ ಪ್ರಭಾವಕ್ಕೆ ಒಳಗಾದ ಇರುಳಿಗ ಯುವಕರು ವಿಭಕ್ತ ಕುಟುಂಬಗಳಾಗಿ ಸ್ಥಿತ್ಯಂತರಗೊಳ್ಳುತ್ತಿರುವುದನ್ನು ಕಾಣಬಹುದು.

ಹಾಗೆಯೇ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಿಂದ ಪಿತೃಪ್ರಧಾನ ಕುಟುಂಬ ವ್ಯವಸ್ಥೆಗೆ ಜಾರಿವೆ. ಎಲ್ಲ ಕುಟುಂಬಗಳಲ್ಲಿ ಪುರುಷನೇ ಮನೆಯ ಯಜಮಾನ. ಕುಟುಂಬದ ಮುಖ್ಯ ತೀರ್ಮಾನಗಳನ್ನು ತೆಗೆದುಕೊಳ್ಳುವನು ಪುರುಷನಾಗಿದ್ದಾನೆ. ಕುಟುಂಬದ ಯಜಮಾನ ತೆಗೆದುಕೊಳ್ಳುವ ತೀರ್ಮಾನಗಳಿಗೆ ಕುಟುಂಬದ ಪ್ರತಿ ಸದಸ್ಯರು ಬಾಧ್ಯಸ್ಥರನ್ನಾಗಿಸುತ್ತಿತ್ತು.

ಪ್ರತಿಯೊಂದು ನಾಗರಿಕ ಸಮಾಜವು ಸಾಮಾನ್ಯವಾಗಿ ತನ್ನ ಸುತ್ತಮುತ್ತಲಿನ ಇತರ ಸಮುದಾಯಗಳ ಜೊತೆಯಲ್ಲಿ ಜೀವನ ಸಾಗಿಸಬೇಕಾದ ಅನಿವಾರ್ಯತೆ ಇರುತ್ತದೆ. ಆದರೆ ಬಹುತೇಕ ಬುಡಕಟ್ಟುಗಳಿಗೆ ಈ ಅನಿವಾರ್ಯತೆ ಹಿಂದೆ ಇರುತ್ತಿರಲಿಲ್ಲ. ಏಕೆಂದರೆ ಹಿಂದೆ ಬುಡಕಟ್ಟುಗಳು ಕಾಡಿನಲ್ಲಿ ತಮ್ಮ ಗುಂಪಿನೊಂದಿಗೆ ಪ್ರತ್ಯೇಕವಾಗಿ ಪೋಡನ್ನೋ, ಹಟ್ಟಿಯನ್ನೋ ಕಟ್ಟಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದವು. ಆದರೆ ಕಾಡಿಗೆ ಸಂಬಂಧಿಸಿದ ಅರಣ್ಯ ನೀತಿಗಳು ಜಾರಿಯಾದ ತರುವಾಯ ಬಹುತೇಕ ಬುಡಕಟ್ಟುಗಳು ಕಾಡನ್ನು ತ್ಯಜಿಸಿ ಗುಳೆ ಹೋಗಬೇಕಾದ ಪರಿಸ್ಥಿತಿ ಉಂಟಾಯಿತು. ಹೀಗಾಗಿ ಕಾಡಿನಲ್ಲಿ ಸ್ವಚ್ಛಂದವಾಗಿ ನೆಲೆಸಿದ್ದ ಬುಡಕಟ್ಟುಗಳು ನಾಡಿನ ಜನರೊಂದಿಗೆ ಸಹಬಾಳ್ವೆ ಮಾಡಬೇಕಾದ ಅನಿವಾರ್ಯತೆ ತಲೆದೋರುವಂತಾಯಿತು. ಇಂದಿಗೂ ಕಾಡಿನಲ್ಲಿಯೇ ಬುಡಕಟ್ಟುಗಳು ನೆಲೆಸಲು ಆಪೇಕ್ಷಿಸುವವಾದರೂ ಅದಕ್ಕೆ ಸರ್ಕಾರದ ಅರಣ್ಯ ನೀತಿಗಳು ಅಡ್ಡಿಯುಂಟುಮಾಡುತ್ತವೆ ಎಂಬುದು ಮಾತ್ರ ಸ್ಪಷ್ಟ. ಇದು ಇರುಳಿಗ ಸಮುದಾಯಕ್ಕೂ ಅನ್ವಯಿಸುವ ಮಾತಾಗಿದೆ. ಇರುಳಿಗ ಬುಡಕಟ್ಟು ಸಮುದಾಯವು ತಾವು ನೆಲೆಗೊಂಡ ಪ್ರದೇಶದ ವ್ಯಾಪ್ತಿಯಲ್ಲಿ ಇತರ ಸಮುದಾಯಗಳ ಜೊತೆ ಸಾಮಾಜಿಕ ಸಹಸಂಬಂಧವನ್ನು

ಇರಿಸಿಕೊಳ್ಳಬೇಕಾಗಿದೆ. ಈ ರೀತಿಯಾಗಿ ಹೊರ ಜಗತ್ತಿನೊಂದಿಗಿನ ಒಡನಾಟದಿಂದಾಗಿಯೇ ಇರುಳಿಗರ ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ಸ್ಥಿತ್ಯಂತರಗೊಳ್ಳುತ್ತಿರುವುದನ್ನು ಕಾಣುತ್ತೇವೆ.

೪.೨. ವಿವಾಹ

ಒಂದೇ ಸೂರಿನಡಿಯಲ್ಲಿ ಪರಸ್ಪರ ಸುಖ ದುಃಖಗಳನ್ನು ಹಂಚಿಕೊಂಡು ಬದುಕುವುದು ಮಾತ್ರವಲ್ಲ ನೈಸರ್ಗಿಕವಾದ ಸಂಸರ್ಗಕ್ಕೆ ಒಂದು ಚೌಕಟ್ಟನ್ನು ಒದಗಿಸುವ ವ್ಯವಸ್ಥೆಯೇ ವಿವಾಹ. ವಿವಾಹವೆಂಬುದು ಮಾನವನ ಬದುಕಿನಲ್ಲಿ ಬಹಳ ವಿಶಿಷ್ಟವಾದ ಸ್ಥಾನವನ್ನು ಗಳಿಸಿದೆ. ಒಟ್ಟಿನಲ್ಲಿ ವಿವಾಹವು ಸ್ತ್ರೀ ಮತ್ತು ಪುರುಷ ಈ ಇಬ್ಬರು ವ್ಯಕ್ತಿಗಳ ನಡುವೆ ಆರಂಭವಾಗುವ ಒಂದು ಸಂಬಂಧಕ್ಕೆ ಸಾಮಾಜಿಕ ಮಾನ್ಯತೆ ದೊರಕಿಸಿಕೊಡುವ ಕ್ರಿಯೆಯೇ ವಿವಾಹವೆನ್ನಬಹುದು. "ವಿವಾಹ ಎಂಬುದು ಜಗತ್ತಿನ ಎಲ್ಲೆಡೆ ಪ್ರಚಲಿತವಿರುವ ಒಂದು ಸಂಸ್ಕಾರ ವಿಧಿ.[೨]

ಆದಿವಾಸಿಗಳಲ್ಲಿ ವಿವಾಹವನ್ನು ಒಂದು ಒಪ್ಪಂದವೆಂದು ಪರಿಗಣಿಸಲಾಗಿದೆ. ಅದು ಕೇವಲ ಇಬ್ಬರು ವ್ಯಕ್ತಿಗಳ ದೈಹಿಕ ಸಂಬಂಧವಾಗಿರದೆ ಎರಡು ಕುಟುಂಬಗಳ ನಡುವೆ ಉಂಟಾಗುವ ಗಾಢ ಸಂಬಂಧವಾಗಿದೆ. ಸಮಾಜಶಾಸ್ತ್ರಜ್ಞರಾದ ಮಜುಂದಾರ್ ಮತ್ತು ಮದನ್ ಅವರು ಆದಿವಾಸಿಗಳಲ್ಲಿ ವಧು-ವರರ ಆಯ್ಕೆಯ ಕ್ರಮವನ್ನು ಎಂಟು ವಿಧಗಳಿವೆಯಂದು ಹೇಳುತ್ತಾರೆ. ಅವರು ತಿಳಿಸುವ ಪ್ರಕಾರಗಳು ಈ ಕೆಳಗಿನಂತಿವೆ.

೧. ಪರೀಕ್ಷಾರ್ಥ ವಿವಾಹ

೨. ಅಪಹರಣ ವಿವಾಹ

೩. ಅರ್ಹತಾ ಪರೀಕ್ಷಾ ವಿವಾಹ

೪. ವಿಕ್ರಯ ವಿವಾಹ

೫. ಸೇವಾ ವಿವಾಹ

೬. ವಿನಿಮಯ ವಿವಾಹ

೭. ಒಪ್ಪಿಗೆ ವಿವಾಹ

೮. ಅಕ್ರಮ ಪ್ರವೇಶ ವಿವಾಹ[೩]

ಹಿಂದೆ ಈ ಆದಿವಾಸಿ ಇರುಳಿಗ ಸಮುದಾಯದಲ್ಲಿ ಆದಿಮ ಸಂಸ್ಕೃತಿಯಂತೆ ಒಬ್ಬ ಯುವಕ ಒಂದು ಯುವತಿಯನ್ನು ಒಪ್ಪಿ ಕುಲದ ಹಿರಿಯರಿಗೆ ತಿಳಿಸುತ್ತಿದ್ದ. ಈ ಇಬ್ಬರು ಕೈಹಿಡಿದು ಆಲೆ ಮರವನ್ನು ಒಂದು ಸುತ್ತು ಹಾಕಿದರೆ ವಿವಾಹ ಕಾರ್ಯವು ಸಮಾಪ್ತಿಯಾದಂತೆ. ತೀರ ಇತ್ತೀಚಿನವರೆಗೂ ವಯಸ್ಸಿಗೆ ಬಂದ ಗಂಡು ಮತ್ತು ಹೆಣ್ಣು ಕಾಡಿನೊಳಕ್ಕೆ ಓಡಿಹೋಗಿ ಕೆಲವು ದಿನಗಳು ಕಳೆದು ಮತ್ತೆ ಹಾಡಿಗೆ ಬರುತ್ತಿದ್ದರು. ಹಿರಿಯರು ಅವರನ್ನು ಮನೆಗೆ ಬರಮಾಡಿಕೊಳ್ಳುವ ಪದ್ಧತಿ ಸಾಮಾನ್ಯವಾಗಿತ್ತು.

ಆದರೆ ಈ ಪದ್ಧತಿಯ ಮದುವೆಗಳು ಇರುಳಿಗರಲ್ಲಿ ನಿಂತುಹೋಗಿವೆ. ಹೆಣ್ಣನ್ನು ಹಿರಿಯರು ನೋಡಿ ಮಕ್ಕಳಿಗೆ ಮದುವೆ ಮಾಡುವ ಸಂಪ್ರದಾಯ ಮೊದಲಾಗಿದೆ.

೪.೨.೧. ಬೆಡಗುಗಳು ಅಥವಾ ಕುಲಗಳು

ಇರುಳಿಗ ಬುಡಕಟ್ಟಿನಲ್ಲಿ ರಕ್ತಸಂಂಧ ಏರ್ಪಡುವುದೇ ಬೆಡಗುಗಳ ಮೂಲಕ. ಸಾಮಾನ್ಯವಾಗಿ ಇವರ ಬೆಡಗುಗಳೆಂದರೆ ಇವರ ಮನೆ ದೈವಗಳೇ ಆಗಿವೆ. ಇವರು ಕಬ್ಬಾಳಮ್ಮನ ಒಕ್ಕಲು, ಮಾರಮ್ಮನ ಒಕ್ಕಲು ಮುಂತಾಗಿ ಕರೆದುಕೊಳ್ಳುತ್ತಾರೆ. ಒಂದೇ ದೈವದ ಒಕ್ಕಲು ಅಣ್ಣತಮ್ಮಂದಿರೆಂದು ಭಾವಿಸುತ್ತಾರೆ. ಹೀಗಾಗಿ ಒಂದೇ ದೈವದ ಒಕ್ಕಲಿನೊಳಗೆ ವಿವಾಹ ಸಂಬಂಧಗಳು ಏರ್ಪಡುವುದಿಲ್ಲ.

ಇರುಳಿಗರ ಬೆಡಗುಗಳ ಕುರಿತು ಅನಂತಕೃಷ್ಣ ಅಯ್ಯರ್ ಅವರು ಹೀಗೆ ತಿಳಿಸುತ್ತಾರೆ.

'Some Iruligas say that they have no exogamous clans, while others assert that their clans are named after their family gods, namely , Yallamma, Mariyamma and Madamma, there are also others named after inanimate objects and trees, namely Belli, Hittale, the members of wich do not use metals, but use Kamchu instead, Chunchiga, Banni and Churi are also other names of families'[4] ಸಜಾತಿ (ಬೆಡಗು) ಕುಲದ ಮದುವೆ ನಿಷಿದ್ಧ ಹಾಗೂ ಒಂದೇ ಮನೆದೇವರನ್ನು ಹೊಂದಿರುವವರ ಜೊತೆ ವೈವಾಹಿಕ ಸಂಬಂಧಗಳನ್ನು ಬೆಳೆಸುವುದಿಲ್ಲ. ಒಂದೇ ಕುಲಕ್ಕೆ ಸೇರಿದವರು ಪರಸ್ಪರ ಸಹೋದರ ಸಂಬಂಧಿಗಳೆಂದು ಭಾವಿಸುತ್ತಾರೆ. ಹಿಂದೆ ಇವರಲ್ಲಿ ತೆರ ಪದ್ಧತಿ ಇದ್ದು ಇತ್ತೀಚಿನ ದಿನದಲ್ಲಿ ಕಾಣೆಯಾಗಿದೆ.

೪.೨.೨. ಉಗುನಿ ಶಾಸ್ತ್ರ

ಮದುವೆ ನಿಶ್ಚಯ ಮಾಡುವುದರಿಂದಲೇ ಇವರ ನಂಬಿಕೆ ಆಚರಣೆಗಳು ಪ್ರಾರಂಭವಾಗುತ್ತವೆ. ಹಿರಿಯರು ವಧುವನ್ನು ನೋಡಿ ಬರಲು ತೆರಳುವ ಹಿಂದಿನ ದಿನ ಮುಂಜಾನೆ ಮನೆಯ ಹಿರಿಯ ಸುಮಂಗಲಿ ಅಥವಾ ಮನೆಯ ಯಜಮಾನನು ಈಶಾನ್ಯ ದಿಕ್ಕಿಗೆ ಮುಖ ಮಾಡಿರುವ ಉಗುನಿ ಗಿಡದ ಚಿಗುರಿಗೆ ಅರಿಷಿಣ, ಕುಂಕುಮ ಹಚ್ಚಿ ಮನೆದೇವರ ಪ್ರಾರ್ಥನೆ ಮಾಡಿ ಊದಿನಕಡ್ಡಿ ಬೆಳಗಿ ಪೂಜೆ ಸಲ್ಲಿಸಿ ಈ ಗಿಡದ ಕುಡಿಯನ್ನು ಚಿವುಟಿ ಬಿಳಿಯ ಬಟ್ಟೆಯೊಂದರಲ್ಲಿ ಕಟ್ಟಿಬರುತ್ತಿದ್ದರು. ಮಾರನೆ ದಿನ ಹೋಗಿ ಉಗಿನಿ ಹಂಬು ಚಿಗತಿದಯೋ ಹೇಗೋ ಎಂದು ಪರೀಕ್ಷಿಸುತ್ತಾರೆ. ಉಗನಿ ಹಂಬು ಸೊರಗದೆ ಚಿಗರೊಡೆದಿದ್ದರೆ ಹುಡುಗಿ ನೋಡಲು ಹೋಗುತ್ತಾರೆ. ಆಕಸ್ಮಾತ್ ಉಗನಿ ಹಂಬು ಕಪ್ಪಾಗಿದ್ದರೆ ಆ ಸಂಬಂಧ ಕೂಡಿಬರುವುದಿಲ್ಲವೆಂದು ಸುಮ್ಮನಾಗಿಬಿಡುತ್ತಾರೆ. ಇತ್ತೀಚಿನ ದಿನಮಾನದಲ್ಲಿ ಇಂತಹ ಆಚರಣೆಗಳು ಕಣ್ಮರೆಯಾಗುತ್ತಿವೆ.

೪.೨.೩. ಕನ್ಯೆ ನೋಡುವ ಕಾರ್ಯ

ಬೇರೆ ಸಮುದಾಯಗಳಲ್ಲಿರುವಂತೆ ಇರುಳಿಗರಲ್ಲಿಯೂ ಹುಡಗಿ ನೋಡುವ ಶಾಸ್ತ್ರವಿದೆ. ಸಾಮಾನ್ಯವಾಗಿ ಹುಡುಗಿ ನೋಡಲು ಹೋಗುವವರು ಇಳಿಸಂಜೆ ಹೊತ್ತಿಗೆ ಪ್ರಯಾಣ ಬೆಳೆಸುತ್ತಾರೆ. ಹಿಂದೆ ಪ್ರಯಾಣವು ಕಾಲ್ನಡಿಗೆಯಾದಾದ್ದರಿಂದ ರಾತ್ರಿ ಹುಡುಗಿಯ ಮನೆಯಲ್ಲಿಯೇ ತಂಗಿ ಮಾರನೆ ದಿನ ಹುಡುಗಿಯನ್ನು

ನೋಡುತ್ತಿದ್ದರು. ಇಂದು ಪ್ರಯಾಣ ಸುಲಭವಾಗಿರುವುದರಿಂದ ಅಂದೇ ಹುಡುಗಿಯನ್ನು ನೋಡಿ ಹಿಂದಿರುಗುತ್ತಾರೆ. ಹುಡುಗಿಯನ್ನು ನೋಡಲು ಮೊದಲಿಗೆ ಮನೆಯ ಹಿರಿಯರು ಹೋಗುತ್ತಾರೆ. ಹುಡುಗಿ ಇಷ್ಟವಾದಲ್ಲಿ ತರುವಾಯ ಮದುವೆಯಾಗುವ ಹುಡುಗನನ್ನು ಹೆಣ್ಣು ನೋಡಲು ಕಳಿಸುತ್ತಾರೆ. ಹುಡುಗಿ ನೋಡಲು ಹೋಗುವಾಗ ಉಡಿ ತುಂಬಲು ಬಾಳೆಹಣ್ಣು, ಹೂವು ಒಯ್ಯುತ್ತಾರೆ.

೪.೨.೪. ವೀಳ್ಯ ಶಾಸ್ತ್ರ

ಈ ರೀತಿ ಕನ್ಯೆಯನ್ನು ಒಪ್ಪಿ ವಿವಾಹ ಮಾಡಿಕೊಳ್ಳಲು ಒಪ್ಪಿಗೆ ಸೂಚಿಸಿ ಕನ್ಯೆಯನ್ನು ತಮ್ಮದೆಂದು ಮಾಡಿಕೊಳ್ಳಲಾಗುತ್ತದೆ. ಇದಕ್ಕೆ ವೀಳ್ಯ ಶಾಸ್ತ್ರ ಅಥವಾ 'ಕನ್ಯೆ ಒಪ್ಪಂದ' ಎಂದು ಕರೆಯುತ್ತಾರೆ. ನಿಶ್ಚಯ ಮಾಡುವಾಗ ಬಾಳೆಹಣ್ಣು, ತೆಂಗಿನಕಾಯಿ, ರವಿಕೆ ಕಣ, ವೀಳ್ಯದೆಲೆ, ಅಡಿಕೆ, ಹೂವನ್ನು ಹೆಣ್ಣಿನ ಮನೆಗೆ ತರುತ್ತಾರೆ. ಕುಲಗೌಡನ ಮುಂದಾಳತ್ವದಲ್ಲಿ ಪರಸ್ಪರ ವೀಳ್ಯದೆಲೆಯನ್ನು ಬದಲಾಯಿಸಿಕೊಳ್ಳುವುದರ ಮೂಲಕ ವೀಳ್ಯ ಶಾಸ್ತ್ರ ಮುಕ್ತಾಯವಾಗುತ್ತದೆ.

ನಿಶ್ಚಯದ ದಿನವೇ ಮದುವೆ ನಡೆಯುವ ಸಮಯ ಹಾಗೂ ಸ್ಥಳಗಳನ್ನು ನಿರ್ಧರಿಸಲಾಗುತ್ತದೆ. ಅಂದೇ ವಿವಾಹಕ್ಕೆ ಬೇಕಾದ ತಾಳಿ, ಕಿವಿಯೋಲೆ, ಕಾಲುಂಗುರ, ಸೀರೆ, ಬಟ್ಟೆಗಳ ಬಗ್ಗೆ ಮಾತುಕತೆ ನಡೆಯುತ್ತದೆ.

೪.೨.೫. ಚಪ್ಪರ ಶಾಸ್ತ್ರ

ಇರುಳಿಗರಲ್ಲಿ ವಿವಾಹವು ಸಾಮಾನ್ಯವಾಗಿ ಹೆಣ್ಣಿನ ಮನೆಯಲ್ಲಿಯೇ ನಡೆಯುವುದು ವಾಡಿಕೆ. ಮದುವೆ ನಡೆಯುವ ಹಿಂದಿನ ದಿನವೇ ದೈವದ ಜನರೆಲ್ಲ ಕಾಡಿಗೆ ತೆರಳಿ ಚಪ್ಪರಕ್ಕೆ ಬೇಕಾದ ಕಂಬ, ಹೊಂಗೆಸೊಪ್ಪು, ನೇರಳೆಸೊಪ್ಪು, ತೆಂಗಿನಗರಿ ಮುಂತಾದವುಗಳನ್ನು ತರುತ್ತಾರೆ. ಸಾಮಾನ್ಯವಾಗಿ ಆರು ಅಥವಾ ಹನ್ನೆರಡು ಕಂಬಗಳ ಚಪ್ಪರವನ್ನು ಹಾಕಲಾಗುತ್ತದೆ. ಚಪ್ಪರದ ಮಧ್ಯಭಾಗದಲ್ಲಿ ಫಲವತಿಂಕೆಯ ಸಂಕೇತವಾದ ತೆಂಗಿನಕಾಯಿ ಗೊನೆ ಮತ್ತು ತೆಂಗಿನ ಹೊಂಬಾಳೆಯನ್ನು ತೂಗುಹಾಕುತ್ತಾರೆ.

೪.೨.೬. ಅರಿಶಿಣ ನೀರು ಹೊಯ್ಯುವ ಶಾಸ್ತ್ರ

ಮದುವೆಯ ಹಿಂದಿನ ದಿನ ಗಂಡು ಮತ್ತು ಹೆಣ್ಣನ್ನು ಅವರವರ ಮನೆಯಲ್ಲಿ ಪ್ರತ್ಯೇಕವಾಗಿ ಹಸೆಮಣೆಯ ಮೇಲೆ ಕೂರಿಸಿ ಅರಿಶಿನ ಎಣ್ಣೆಯನ್ನು ಹಚ್ಚುತ್ತಾರೆ. ನಂತರ ನೆರೆದ ಮುತ್ತೈದೆಯರು ನೀರೆರೆದು ಸ್ನಾನ ಮಾಡಿಸುತ್ತಾರೆ. ಈ ಕ್ರಮವನ್ನು 'ನೀರು ಹೊಯ್ಯುವ ಶಾಸ್ತ್ರ' ಎನ್ನುತ್ತಾರೆ. ಅರಿಶಿಣ ನೀರಿನ ಶಾಸ್ತ್ರದ ನಂತರ ಮದುವೆಯಾಗುವ ವಧು ವರರಿಗೆ ಹೊಸಬಟ್ಟೆಯನ್ನು ಉಡಲು ಕೊಡುತ್ತಾರೆ. ಮದುಮಕ್ಕಳಿಗೆ ಹಿರಿಯರು ಹಾಗೂ ಮುತ್ತೈದೆಯರು ಅಕ್ಷತೆ ಹಾಕಿ ಆರತಿ ಬೆಳಗುತ್ತಾರೆ. ಅರಿಶಿಣ ನೀರಿನ ಕಾರ್ಯ ಮುಗಿದ ತರುವಾಯ ಗಂಡಿನ ಮನೆಯವರು ಮದುವೆ ನಡೆಯುವ ಹೆಣ್ಣಿನ ಮನೆಯತ್ತ ದಿಬ್ಬಣ ಹೊರಡುತ್ತಾರೆ. ಮಾರನೆಯ ದಿನ ಬೆಳಿಗ್ಗೆ ಕುಲದೇವರ ಕರಗಕ್ಕೆ ತಾಳಿ, ಕಾಲುಂಗುರ, ಅರಿಶಿನ ಕೊಂಬು ಹಾಕಿ ದೇವರ ಕರಗ ಹೊತ್ತು ಮದುವೆ ಮಂಟಪಕ್ಕೆ ತರುತ್ತಾರೆ.

೪.೨.೭. ತಾಳಿ ಶಾಸ್ತ್ರ

ಮದುವೆಯಾಗುವ ಗಂಡಿನ ಸೋದರಮಾವನು ಮದುವೆ ಗಂಡನ್ನು ಮದುವೆ ಮಂಟಪಕ್ಕೆ ಕರೆತಂದು ಹುಡುಗನಿಗೆ ಕಂಕಣ, ಬಾಸಿಂಗವನ್ನು ಕಟ್ಟುತ್ತಾನೆ. ಅದೇ ರೀತಿ ಕನ್ಯೆಯ ಸೋದರ ಮಾವನು ಮದುವೆಯಾಗುವ ಹುಡುಗಿಯನ್ನು ಹೊತ್ತುಕೊಂಡು ಬಂದು ಮದುವೆ ಮಂಟಪಕ್ಕೆ ಕರೆತರುತ್ತಾನೆ. ಹುಡುಗಿಯ ಅತ್ತೆಯಾದವಳು ಹುಡುಗಿಗೆ ಕಂಕಣ ಹಾಗೂ ಬಾಸಿಂಗ ಕಟ್ಟುತ್ತಾಳೆ. ತರುವಾಯ ಮೂವರು ಗಂಡಸರು ಹಾಗೂ ಇಬ್ಬರು ಮುತ್ತೈದೆಯರು ವಿಭೂತಿ ಕುಂಕುಮ ಹಚ್ಚಿ ಅಕ್ಷತೆ ಹಾಕುತ್ತಾರೆ. ಮದುವೆಯ ಪೌರೋಹಿತ್ಯಕ್ಕೆ ವೈಷ್ಣವಾನುಯಾಯಿಗಳಾಗಿದ್ದರೆ ವೈಷ್ಣವನನ್ನು ಕರೆಯುತ್ತಾರೆ. ಶೈವ ಪಂಥಾನುಯಾಯಿಗಳು ಜಂಗಮ ಲಿಂಗಾಯತನ ಪೌರೋಹಿತ್ಯದಲ್ಲಿ ಮದುವೆ ನಡೆಯುತ್ತದೆ. ತಾಳಿ ಶಾಸ್ತ್ರ ಆಗುವವರೆಗೂ ಗಂಡು ಹೆಣ್ಣು ಪರಸ್ಪರ ಮುಖ ನೋಡುವಂತಿಲ್ಲ. ಹುಡುಗಿಯ ಅಕ್ಕನ ಕೈಯಲ್ಲಿ ದೇವರ ಗಡಿಗೆ ಇರುತ್ತದೆ. ಆ ಗಡಗಿಯಲ್ಲಿ ಎಳ್ಳು ಜೀರಿಗೆಗಳನ್ನು ಹಾಕಿರುತ್ತಾರೆ. ಹುಡುಗ ಹುಡುಗಿ ಪರಸ್ಪರ ಎಳ್ಳು ಜೀರಿಗೆಯನ್ನು ತಲೆಯ ಮೇಲೆ ಹಾಕಿಕೊಳ್ಳುವಂತೆ ಹೇಳುತ್ತಾರೆ. ಅದೇ ರೀತಿ ಎಳ್ಳು ಜೀರಿಗೆಯನ್ನು ಮದುಮಕ್ಕಳು ಪರಸ್ಪರ ತಲೆಯ ಮೇಲೆ ಹಾಕಿಕೊಳ್ಳುತ್ತಾರೆ. ನಂತರ ಕನ್ಯೆಯ ತಂದೆ-ತಾಯಿ ಮೊದಲಿಗೆ ಹಾಲು-ತುಪ್ಪಗಳನ್ನು ಎರೆಯುವುದರ ಮೂಲಕ ಧಾರೆ ಕಾರ್ಯವನ್ನು ಪ್ರಾರಂಭಿಸುತ್ತಾರೆ. ಮುಂದೆ ಕುಲದ ಗೌಡನ ನಾಯಕತ್ವದಲ್ಲಿ ಮಾಂಗಲ್ಯ ಕಟ್ಟುವ ಶಾಸ್ತ್ರವು ಜರಗುತ್ತದೆ.

ಇರುಳಿಗರಲ್ಲಿ ವಿಶೇಷವಾಗಿರುವ ತಟ್ಟಿಶಾಸ್ತ್ರ ಮಾಡುತ್ತಾರೆ. ಈ ಶಾಸ್ತ್ರದಲ್ಲಿ ಕಂಚಿನ ತಟ್ಟಿಗೆ ಚಿನ್ನದ ನಾಣ್ಯ ಒಂದನ್ನು ಅಂಟಿಸಿ ಮದುಮಕ್ಕಳ ಸುತ್ತ ದಾರವನ್ನು ಬಿಟ್ಟು ಆ ದಾರವನ್ನು ಎಳೆಎಳೆಯಾಗಿ ಜೋಡಿಸಿ ಅದರಿಂದ ದೃಷ್ಟಿ ತೆಗೆದು ಚಪ್ಪರದ ಹಸಿಕಂಬಕ್ಕೆ ಕಟ್ಟುತ್ತಾರೆ. ಇದರಿಂದ ವಿವಾಹ ಕಾರ್ಯದಲ್ಲಿ ಉಂಟಾದ ಲೋಪದೋಷಗಳು ನಿವಾರಣೆಯಾಗುತ್ತವೆ ಎಂಬ ನಂಬಿಕೆ ಇದೆ.

ನಂತರ ಕುಲದ ಹಿರಿಮೆಗೆ ಗೌರವಿಸುವ ಯಜಮಾನಿಕೆಯನ್ನು ವಿವಾಹದಲ್ಲಿ ಸಾಕ್ಷೀಕರಿಸುವ ಆಚರಣೆಯೇ ವೀಳ್ಯದೆಲೆ ಅಡಿಕೆಯನ್ನಿಟ್ಟು ಗೌರವ ಸೂಚಿಸುವುದು. ಮೊದಲಿಗೆ ಕುಲದೇವರು ಗ್ರಾಮದೇವರು ಕುಲದ ಯಜಮಾನ ಕಟ್ಟೆಮನೆ ಯಜಮಾನ, ನಾಲ್ಕು ದಿಕ್ಕಿನ ಗಡಿಯ ಯಜಮಾನರಿಗೆ ವೀಳ್ಯವನ್ನು ಹಂಚಲಾಗುತ್ತದೆ. ಇದು ಇವರ ವಿವಾಹ ಕಾರ್ಯಕ್ರಮದಲ್ಲಿ ಮಹತ್ವದ್ದು, ನಂತರ ಅಕ್ಕಿಯನ್ನು ಮೊರದಲ್ಲಿ ಹಾಕಿ ಉಂಗುರ ಮತ್ತು ನಾಣ್ಯವನ್ನು ಹಾಕಿ ಮಧುಮಕ್ಕಳ ಕೈಯಲ್ಲಿ ಹುಡುಕಿಸುವುದು, ಹೂವಿನ ಚೆಂಡಿನಾಟ, ಓಕಳಿ ಮುಂತಾದ ಆಚರಣೆಗಳು ಇತರ ಸಮುದಾಯಗಳಲ್ಲಿರುವಂತೆ ಇಲ್ಲಿಯೂ ಸಾಮಾನ್ಯವಾಗಿವೆ.

ಹಿಂದೆ ಇರುಳಿಗರಲ್ಲಿ ತಾಳಿ ಕಟ್ಟುವ ಸಂಪದ್ರಾಯವಿರಲಿಲ್ಲ. ಆದರೆ ಇತ್ತೀಚೆಗೆ ತಾಳಿ ಕಟ್ಟುವ ಶಾಸ್ತ್ರ ಇವರಲ್ಲಿ ರೂಢಿಯಾಗಿದೆ. ಇರುಳಿಗರು ತಾಳಿ ಕಟ್ಟುತ್ತಿರಲಿಲ್ಲ ಏಕೆ ಎಂಬ ಪ್ರಶ್ನೆಗೆ ಕಥೆಯೊಂದನ್ನು ಹೇಳಲಾಗುತ್ತದೆ. ಇರುಳಿಗರ ಮೂಲದಲ್ಲಿ ಏಳು ಜನ ಅಣ್ಣ ತಮ್ಮಂದಿರಿದ್ದರಂತೆ. ಏಳು ಜನರ

ಮಧ್ಯದಲ್ಲಿ ಒಮ್ಮೆ ನವಿಲಿನ ಮೊಟ್ಟೆಗಾಗಿ ಜಗಳ ಪ್ರಾರಂಭವಾಯಿತಂತೆ. ಕೊನೆಗೆ ಏಳು ಜನ ಅಣ್ಣ ತಮ್ಮಂದಿರಲ್ಲಿ ಹಟಮಾರಿಯಾದ ತಮ್ಮನನ್ನು ಮುಗಿಸಿಬಿಡಲು ಅಣ್ಣಂದಿರೆಲ್ಲ ಸಂಚನ್ನು ರೂಪಿಸಿದರಂತೆ. ಆ ಸಂಚಿನ ಪ್ರಕಾರ ತಮ್ಮನಿಗೆ ಹೆಜ್ಜೇನು ಬಿಡಿಸಲು ಮರವೇರಿಸಿದರಂತೆ. ಎತ್ತರದ ಮರವೇರಿದ ತಮ್ಮನು ಜೇನು ಬಿಡಿಸಿದ ತರುವಾಯ ಅವನನ್ನು ಕೆಳಗಿಳಿಸಿಕೊಳ್ಳದೆ ಪ್ರಪಾತಕ್ಕೆ ಬೀಳುವಂತೆ ಮಾಡಿದರಂತೆ. ತಮ್ಮನು ಪ್ರಪಾತಕ್ಕೆ ಬಿದ್ದು ಸತ್ತನಂತೆ. ತಮ್ಮನ ಹೆಂಡತಿಯು ಮೈದುನರೊಂದಿಗೆ ಹೋದ ತನ್ನ ಗಂಡ ಮನೆಗೆ ಹಿಂದುರಗದೇ ಇದ್ದುದನ್ನು ಕಂಡು ಹುಡುಕುತ್ತಾ ಹೋದಳಂತೆ. ಎಷ್ಟು ಹುಡುಕಿದರೂ ಗಂಡ ಸಿಗದಿದ್ದಾಗ ಅಳುತ್ತಿದ್ದ ತಮ್ಮನ ಹೆಂಡತಿಗೆ ಗಂಡನನ್ನು ಹುಡುಕಲು ಗರುಡ ಪಕ್ಷಿಯು ಸಹಾಯ ಮಾಡುವುದಾಗಿಯೂ ತನ್ನ ಶರತ್ತಿಗೆ ಆ ಹೆಣ್ಣು ಒಪ್ಪುವಂತೆಯೂ ಕೇಳಿತಂತೆ. ಅದರ ಶರತ್ತಿನಂತೆ ತಮ್ಮನ ಹೆಂಡತಿಯು ಗರುಡನ ಕೊರಳಿಗೆ ತನ್ನ ತಾಳಿಯನ್ನು ಹಾಕಿದಳಂತೆ. ಆ ಹೆಣ್ಣಿನ ತಾಳಿಯನ್ನು ಕೊರಳಿಗೆ ಹಾಕಿಕೊಂಡ ನಂತರ ತಮ್ಮನ ಹೆಣವನ್ನು ಅವನ ಹೆಂಡತಿಗೆ ಗರುಡವು ತೋರಿಸಿತಂತೆ. ಹೀಗೆ ಗರುಡನ ಕೊರಳಿಗೆ ಆ ಹೆಣ್ಣು ತಾಳಿ ಹಾಕಿದ್ದರಿಂದ ತಮ್ಮ ಹೆಣ್ಣುಗಳ್ಯಾವುವೂ ತಾಳಿ ಹಾಕುತ್ತಿರಲಿಲ್ಲ. ಆದರೆ ಇತ್ತೀಚೆಗೆ ಇತರ ಸಮುದಾಯಗಳ ಅನುಕರಣೆ ಯಿಂದಾಗಿ ಮರಳಿ ತಾಳಿ ಕಟ್ಟುವ ಸಂಪ್ರದಾಯ ತಮ್ಮೊಳಗೆ ಬಂದಿದೆ ಎಂದು ಇರುಳಿಗರು ತಿಳಿಸುತ್ತಾರೆ.

೪.೨.೮. ಬಾಲ್ಯವಿವಾಹ

ಇತ್ತೀಚಿನ ದಶಕದಲ್ಲಿ ಭಾರತದ ಸಾಮಾಜಿಕ ಪದ್ಧತಿಗಳಲ್ಲಿ ಪ್ರಮುಖವಾದ ವಿವಾಹ ಪದ್ಧತಿಯಲ್ಲಿ ಗಣನೀಯವಾದ ಪರಿವರ್ತನೆಗಳಾಗಿವೆ. ಭಾರತೀಯರ ವಿವಾಹ ಪದ್ಧತಿಗಳ ಮೂಲ ಸ್ವರೂಪ ಮತ್ತು ಅದರ ಹಿಂದಿನ ಮೂಲಭೂತ ಭಾವನೆಗಳು ಹಾಗೂ ನಂಬಿಕೆಗಳು ಬದಲಾಗದೇ ಇದ್ದರೂ ಅದಕ್ಕೆ ಸಂಬಂಧಿಸಿದ ಆಚರಣೆ ಹಾಗೂ ನಿಯಮಗಳಲ್ಲಿ ಬಹಳಷ್ಟು ಬದಲಾವಣೆಯಾಗಿದೆ. ಮದುವೆಯ ವಯಸ್ಸಿಗೆ ಸಂಬಂಧಿಸಿದಂತೆ ಮಹತ್ವದ ಬದಲಾವಣೆಗಳಾಗಿವೆ. ಬಾಲ್ಯವಿವಾಹಗಳು ಕಾಯ್ದೆಯ ಪ್ರಕಾರ ಮರೆಯಾಗಿವೆ ಎಂದು ಹೇಳುತ್ತಿದ್ದರು. ಕಟ್ಟುನಿಟ್ಟಾದ ನಿಯಮಗಳಿಂದ ಬಾಲ್ಯವಿವಾಹದ ಬದಲು ಪ್ರೌಢ ವಿವಾಹಗಳೇ ಹೆಚ್ಚಾಗಿ ಕಂಡುಬಂದರೂ ಕಾನೂನಿನ ಕಣ್ಣಿಗೆ ಬೀಳದಂತೆ ಬಹು ಜಾಗರೂಕತೆಯಿಂದ ಇಂದಿಗೂ ಸಹ ತಳ ಸಮುದಾಯಗಳಲ್ಲಿ ಅಪ್ರಾಪ್ತ ವಯಸ್ಸಿನ ಮಕ್ಕಳ ಬಾಲ್ಯವಿವಾಹಗಳು ನಡೆಯುತ್ತಿವೆ.

ಇಂದಿಗೂ ಇರುಳಿಗ ಬುಡಕಟ್ಟಿನ ಹೆಣ್ಣುಮಕ್ಕಳನ್ನು ಅಪ್ರಾಪ್ತ ವಯಸ್ಸಿನಲ್ಲಿಯೇ ವಿವಾಹ ಮಾಡುವ ಪ್ರವೃತ್ತಿ ಸಂಪೂರ್ಣವಾಗಿ ನಾಶವಾಗಿಲ್ಲ. ಇರುಳಿಗರ ಕಾಲೋನಿ ಅಥವಾ ನೆಲೆಗಳಲ್ಲಿ ಇಂದಿಗೂ ೧೮ ವರ್ಷಕ್ಕೆ ಕಾಲಿಡುವ ಮೊದಲೇ ಮದುವೆಯಾಗುವ ಹುಡುಗಿಯರನ್ನು ಕಾಣುತ್ತೇವೆ. ಬಾಲ್ಯ ವಿವಾಹ ಪದ್ಧತಿಯು ಇಂದಿಗೂ ಇರುಳಿಗರಲ್ಲಿ ಸಾಮಾನ್ಯವಾಗಿದೆ. ಪ್ರಾಯಶಃ ಇದಕ್ಕೆ ಇವರ ಅನಕ್ಷರತೆ, ಮೂಢನಂಬಿಕೆಗಳೇ ಕಾರಣವೆನಿಸುತ್ತದೆ.

೪.೨.೯. ವಿಧವಾ ವಿವಾಹ

ವಿಧವಾ ವಿವಾಹ ಪದ್ಧತಿ ಇರುಳಿಗರಲ್ಲಿ ಇಂದಿಗೂ ಜೀವಂತವಾಗಿದೆ. ವಿಧವೆಯರಿಗೆ ಮರು ಮದುವೆ ಮಾಡಲು ಕುಲದ ಹಿರಿಯನ ಸಮಕ್ಷಮದಲ್ಲಿ ಮಾತುಕತೆ ನಡೆಯುತ್ತದೆ. ಪುರುಷ ತನ್ನ ಹೆಂಡತಿ ತೀರಿಕೊಂಡಾಗ ಅವಿವಾಹಿತ ಹೆಣ್ಣನ್ನು ಮದುವೆಯಾಗುವುದಿಲ್ಲ. ಸಾಮಾನ್ಯವಾಗಿ ಬುಡಕಟ್ಟುಗಳಲ್ಲಿ ಕಂಡುಬರುವಂತೆ ವಿಧವೆಯನ್ನು ಎರಡನೆಯ ಮದುವೆಯಾಗುತ್ತಾನೆ. ಇದಕ್ಕೆ ಇರುಳಿಗರಲ್ಲಿ ಕೂಡಿಕೆ ಎಂದು ಕರೆಯುತ್ತಾರೆ. ಇಂತಹ ಮದುವೆಯ ಸಂದರ್ಭದಲ್ಲಿ ಮೊದಲನೆಯ ಮದುವೆಯಲ್ಲಿ ಅನುಸರಿಸುವ ಯಾವುದೇ ಶಾಸ್ತ್ರ ಸಂಪ್ರದಾಯವನ್ನು ಅನುಸರಿಸುವುದಿಲ್ಲ. ಈ ಬಗ್ಗೆ ವಿವರವನ್ನು ಕೆ.ಎಲ್. ಅನಂತಕೃಷ್ಣ ಅಯ್ಯರ್ ಅವರು ದಾಖಲಿಸಿದ್ದಾರೆ. "Widows are allowed to Re marry under Kudike from any humber of time and the confiend to a sigle day a bachelor is allowed to marry a wideo but her deceased husband and brothers are prohibited from marrying her"[5]

ಒಂದು ಬಾರಿ ಮದುವೆಯಾದ ಗಂಡು ತನ್ನ ಹೆಂಡತಿ ಬದುಕಿರುವಾಗಲೇ ಮಕ್ಕಳಾಗಲಿಲ್ಲ ಎಂಬ ಕಾರಣಕ್ಕಾಗಿ ಇನ್ನೊಂದು ಹೆಣ್ಣನ್ನು ಮದುವೆಯಾಗಬಹುದು. ವಿಧವಾ ವಿವಾಹಕ್ಕೆ ಸಂಬಂಧಿಸಿದಂತೆ ಕಟ್ಟುನಿಟ್ಟಿನ ಶಾಸ್ತ್ರ ಸಂಬಂಧಗಳು ಇರುವುದಿಲ್ಲ. ಆದರೆ ವಿಧವೆಯನ್ನು ಅವಿವಾಹಿತ ಪುರುಷರು ಮದುವೆಯಾಗುವಂತಿಲ್ಲ. ಆತನಿಗೆ ಮೊದಲು ಮದುವೆಯಾಗಿರಬೇಕೆಂಬ ಕಡ್ಡಾಯ ನಿಯಮವಿದೆ. ಕೂಡಿಕೆ ಮಾಡಿಕೊಳ್ಳುವ ಹೆಣ್ಣು ತನ್ನ ಮೊದಲ ಗಂಡ ಕಟ್ಟಿದ ತಾಳಿ, ಕಾಲುಂಗುರ ಹಾಗೂ ಮೂಗುತಿ, ಕಿವಿಯೋಲೆಗಳನ್ನು ಮರಣ ಹೊಂದಿದ ಪತಿಯ ಸಂಬಂಧಿಕರಿಗೆ ಕೊಟ್ಟು ಅವರ ಅನುಮತಿ ಪಡೆದು ಕೂಡಿಕೆ ಆಗಬೇಕು. ಹಾಗೆಯೇ ಗಂಡನೊಂದಿಗೆ ಹೊಂದಾಣಿಕೆಯಾಗದ ಹೆಣ್ಣು ಸಹ ತನ್ನ ಮೊದಲ ಗಂಡನನ್ನು ತೊರೆದು ಕುಲದ ಯಜಮಾನರ ಒಪ್ಪಿಗೆ ಮೇರೆಗೆ ಮತ್ತೊಬ್ಬ ಪುರುಷನ ಜೊತೆಯಲ್ಲಿ ಕೂಡಿಕೆ ಮಾಡಿಕೊಳ್ಳಬಹುದು. ಆಕೆಗೆ ಮೊದಲ ಗಂಡನಿಂದ ಮಕ್ಕಳಾಗಿದ್ದರೆ ತನ್ನ ಮೊದಲ ಗಂಡನ ಬಳಿಯಲ್ಲಿಯೇ ಮಕ್ಕಳನ್ನು ಬಿಟ್ಟು ಮತ್ತೊಬ್ಬನ ಜೊತೆ ಕೂಡಿಕೆ ಮಾಡಿಕೊಂಡು ಹೋಗಬಹುದು. ಈ ಸಮಯದಲ್ಲೂ ಗಂಡನ ಮನೆಯಿಂದ ಪಡೆದ ಎಲ್ಲ ವಸ್ತುಗಳನ್ನು ಹಿಂದಿರುಗಿಸಿ ಕುಲದ ಒಪ್ಪಿಗೆಯನ್ನು ಪಡೆಯುವುದು ಕಡ್ಡಾಯ. ಇಂಥವರ ಎರಡನೇ ಸಂಬಂಧದಿಂದ ಜನಿಸಿದ ಸಂತಾನಕ್ಕೆ ಕೂಡಿಕೆಬೀಡು ಸಂತಾನವೆಂದು ಕರೆಯುತ್ತಾರೆ.

ಈ ಸಮುದಾಯದಲ್ಲಿ ಗಂಡು ಮತ್ತು ಹೆಣ್ಣು ಇಬ್ಬರಿಗೂ ಸಮಾನವಾದ ವೈವಾಹಿಕ ಆಯ್ಕೆ ಸ್ವಾತಂತ್ರ್ಯ ಹಾಗೂ ಜೀವನವನ್ನು ಸುಖಮಯವಾಗಿ ನಡೆಸಿಕೊಂಡು ಹೋಗಲು ಅವಕಾಶ ನೀಡುವ ಬದುಕಿನಲ್ಲಿ ಘಟಿಸುವ ದುರ್ಘಟನೆಗಳ ಬಗ್ಗೆ ಸಕರಾತ್ಮಕವಾಗಿ ಪ್ರತಿಕ್ರಿಯಿಸಿ ಅವರ ಬದುಕನ್ನು ಕಟ್ಟಿ ಕೊಡುವ ವ್ಯವಸ್ಥೆಯು ಅತ್ಯಂತ ಆದರ್ಶಯುತವಾದದ್ದು. ಜೀವನ ಪ್ರೀತಿ, ಉತ್ಸಾಹದಿಂದ ಜೀವನ ನಡೆಸಲು ಅವಕಾಶ ನೀಡುವ ಮಾನವ ಸಹಜ ಕಾಳಜಿ ಸುಮಧುರ ಜೀವನಕ್ಕೆ ಸಹಕಾರಿಯಾಗಿದ್ದು,

ಮಾನವೀಯತೆಯಲ್ಲಿ ಮಾನವನ ಬದುಕಿನ ಸದ್ಬಳಕೆ ವಿಶೇಷವಾಗಿ ಕಂಡುಬರುತ್ತದೆ. ಜೊತೆಗೆ ಸಾಮಾಜಿಕ ಜೀವನವು ಉತ್ತಮವಾಗಿ ನಡೆಯಲು ತನ್ಮೂಲಕ ಸಮುದಾಯ ಆಂತರಿಕ ಜನಜೀವನ ತೃಪ್ತಿ ಪ್ರಜಾಪ್ರಭುತ್ವಾದಿ ವ್ಯವಸ್ಥೆ ಎದ್ದು ಕಾಣುತ್ತದೆ. ನಾಗರಿಕ ಸಮಾಜ ಎನಿಸಿಕೊಳ್ಳುವ ಇತರೆ ಎಷ್ಟೋ ಸಮುದಾಯಗಳಲ್ಲಿ ವಿಧವೆಯರ ಬದುಕನ್ನು ಅಸಹನೀಯ ಮಾಡಿ ಸಂಸ್ಕೃತಿ ಸಂಪ್ರದಾಯದ ಹೆಸರಿನಲ್ಲಿ ದಾಷ್ಟತನದಿಂದ ವರ್ತಿಸುವ ಆತಂಕ ಸಮಾಜಗಳಿಗೆ ಈ ಸಮಾಜವು ಉತ್ತಮ ಮಾರ್ಗದರ್ಶನ ನೀಡುವ ಸಾಲಿನಲ್ಲಿ ನಿಲ್ಲುತ್ತದೆ.

೪.೨.೧೦. ಅಂತರ್ಜಾತಿ ವಿವಾಹ

ಇರುಳಿಗ ಸಮುದಾಯದಲ್ಲಿ ಅಂತರ್ಜಾತಿ ಅಥವಾ ಅಂತರ್‌ಧರ್ಮಿಯ ವಿವಾಹಗಳನ್ನು ನಿಷೇಧಿಸಲಾಗುತ್ತದೆ. ಅಕಸ್ಮಾತ್ ಕುಲದ ದೈವಕ್ಕೆ ತಿಳಿಯದೆ ಪರ ಜಾತಿಯವರನ್ನು ಮದುವೆಯಾದಲ್ಲಿ ಅಂಥವರನ್ನು ಕುಲದಿಂದ ಹೊರಗಿಡಲಾಗುತ್ತದೆ.

ಆದರೆ ಇತ್ತೀಚೆಗೆ ಅಕ್ಷರಸ್ಥ ಇರುಳಿಗ ಪುರುಷರು ಅಪರೂಪಕ್ಕೆ ಬೇರೆ ಜಾತಿಯ ಹುಡುಗಿಯನ್ನು ಮದುವೆಯಾಗಿರುವುದು ಕಂಡುಬರುತ್ತಿದೆ. ಜಾತಿ ನಿರ್ಬಂಧಗಳು ತುಂಬಾ ಸಡಿಲಗೊಳ್ಳುತ್ತಿರುವ ಇಂದಿನ ದಿನಗಳಲ್ಲೂ ಸಹ ಇರುಳಿಗರು ಈ ರೀತಿ ಬೇರೆ ಜಾತಿಯವರನ್ನು ಮದುವೆಯಾಗಿ ಬಂದರೆ ಜಾತಿ ಬಹಿಷ್ಕಾರ ಹಾಕುತ್ತಾರೆ.

ಇಂತಹ ವಿವಾಹ ಸಂಬಂಧಗಳು ಹೆಚ್ಚಾಗಿ ಅನ್ಯ ಸಮುದಾಯದ ಜನರೊಂದಿಗೆ ಇರುಳಿಗರು ಸೇರಿ ವಾಸಿಸುವ ಸ್ಥಳಗಳಲ್ಲಿ ಮತ್ತು ನಗರಕ್ಕೆ ಸಮೀಪದ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

೪.೨.೧೧. ವಿವಾಹದಲ್ಲಿ ಬದಲಾವಣೆ

ನಿರಂತರ ಬದಲಾವಣೆಯಾಗುವುದೇ ಜೀವಂತ ಸಮುದಾಯದ ಗುಣವೂ ಹೌದು. ಇದರಿಂದ ಹೊರತಾಗಿರದ ಇರುಳಿಗ ಸಮುದಾಯವು ಸಹ ತನ್ನ ಆಚರಣೆ ಪದ್ಧತಿಯಲ್ಲಿ ಇತ್ತೀಚಿನ ದಿನಗಳಲ್ಲಿ ಬದಲಾವಣೆಗೆ ಒಳಗಾಗುತ್ತಿದೆ.

ಸುಮಾರು ೩ರಿಂದ ೪ ದಶಕಗಳ ಹಿಂದೆ ವಿವಾಹ ಕಾರ್ಯಕ್ರಮದಲ್ಲಿ ಕುಲದಗೌಡನಿಗೆ ಮಹತ್ವದ ಸ್ಥಾನವಿತ್ತು. ಈತನು ಎಲ್ಲ ರೀತಿಯ ಧಾರ್ಮಿಕ ಕ್ರಿಯಾವಿಧಿ ವಿಧಾನಗಳನ್ನು ನಡೆಸಿಕೊಡುತ್ತಿದ್ದನು. ಬದಲಾದ ಪರಿಸ್ಥಿತಿಯಲ್ಲಿ ಈ ಸಮುದಾಯದಲ್ಲಿರುವ ಎರಡು ಕುಲಗಳಾದ ದಾಸಕುಲದವರು ವಿವಾಹ ಕಾರ್ಯಕ್ರಮದಲ್ಲಿ ವೈಷ್ಣಣ ಸಂಪ್ರದಾಯದ ಪುರೋಹಿತರನ್ನು ಪುರೋಹಿತಿಕೆ ಮಾಡಲು ಕರೆಸುತ್ತಾರೆ. ಹಾಗೆಯೇ ಮುಳ್ಳಿ ಕುಲದವರು ಜಂಗಮ ಲಿಂಗಾಯತ ಪುರೋಹಿತರನ್ನು ಕರೆಸುತ್ತಾರೆ.

ಇರುಳಿಗರಲ್ಲಿ ವಿವಾಹಗಳು ಸಾಮಾನ್ಯವಾಗಿ ಹೆಣ್ಣಿನ ಮನೆಯ ಮುಂದೆ ನಡೆಯುತ್ತಿದ್ದಿತು. ಬದಲಾದ ಸನ್ನಿವೇಶದಲ್ಲಿ ಇರುಳಿಗರ ಮದುವೆಗಳು ಕಲ್ಯಾಣಮಂಟಪ, ಸಮುದಾಯ ಭವನ, ದೇವಸ್ಥಾನಗಳಲ್ಲಿ ನಡೆಸುವುದನ್ನು ಕಾಣಬಹುದಾಗಿದೆ. ಇವರ ಮದುವೆಗಳಲ್ಲಿ ಇರುಳಿಗ ಸಮುದಾಯದವರು

ಮಾತ್ರ ಭಾಗವಹಿಸುತ್ತಿದ್ದರು. ಆದರೆ ಇಂದು ತಮ್ಮ ಕುಲಕ್ಕೆ ಸೇರದ ಅನ್ಯ ಜಾತಿ, ಧರ್ಮೀಯರನ್ನೂ ಮದುವೆಗೆ ಆಹ್ವಾನಿಸಲಾಗುತ್ತಿದೆ ಹಾಗೂ ಇತರ ಸಮುದಾಯದ ಜನರು ಮದುವೆಯಲ್ಲಿ ಪಾಲ್ಗೊಳ್ಳುವುದನ್ನು ಅಪರಾಧ ಎಂದು ಪರಿಗಣಿಸುವುದಿಲ್ಲ. ಮದುವೆಯ ಸಾಂಪ್ರದಾಯಿಕ ಊಟವಾದ ಅವರೆಕಾಳು ಸಾರು, ರಾಗಿಮುದ್ದೆ, ಬಿದಿರಿನಕಳಲೆ ಮರೆಯಾಗಿ ನವೀನ ಆಹಾರ ಪದ್ಧತಿ ಜಾರಿಗೆ ಬಂದಿದೆ. ತೆರ ಪದ್ಧತಿಯು ಮರೆಯಾಗಿ ವರದಕ್ಷಿಣೆ ಪದ್ಧತಿಯು ಜಾಲ್ತಿಯಲ್ಲಿದೆ. ಈ ಬದಲಾವಣೆಗೆ ಅನ್ಯ ಸಮುದಾಯಗಳ ಸಂಪರ್ಕವೇ ಇವರ ವಿವಾಹದಲ್ಲಿನ ಬದಲಾವಣೆಗೆ ಕಾರಣವಾಗಿದೆ.

ಆದರೆ ಸಮುದಾಯದಲ್ಲಿರುವ ಬಾಲ್ಯವಿವಾಹ ಅನಕ್ಷರತೆ ವಿಚಾರದಲ್ಲಿ ಬದಲಾಗದೆ ಇರುವುದು ಬಹುದೊಡ್ಡ ಹಿನ್ನಡೆ ಎಂದು ಭಾವಿಸಬಹುದು. ವಿವಾಹದ ಬಗ್ಗೆ ವ್ಯಕ್ತಿ ಸಂದರ್ಶನ ಸಮಯದಲ್ಲಿ ಕೇಳಿದ ವಿವರವನ್ನು ಕೆಳಗಿನ ಕೋಷ್ಟಕದಲ್ಲಿ ಗಮನಿಸಬಹುದಾಗಿದೆ.

ಕೋಷ್ಟಕ ೪.೧. ವಿವಾಹದ ಬಗ್ಗೆ ನಿರ್ಣಯ ತೆಗೆದುಕೊಳ್ಳುವವರ ಪ್ರಮಾಣ

ತೀರ್ಮಾನ ತೆಗೆದುಕೊಳ್ಳುವವರು	**ಗಂಡು**	**ಹೆಣ್ಣು**	**ಒಟ್ಟು**
ತಂದೆ	೧೩೫	೪೫	೧೮೦
ತಾಯಿ	೨೦	೧೬	೩೬
ಸ್ವಂತ ಕುಟುಂಬ ಸದಸ್ಯರು	೧೦	೭	೧೭
ಸಂಬಂಧಿಗಳು	೫	೮	೧೩
ಒಟ್ಟು	**೧೭೦**	**೭೬**	**೨೪೬**

ಕ್ಷೇತ್ರಕಾರ್ಯ: ವ್ಯಕ್ತಿ ಸಂದರ್ಶನದ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ಮಾಹಿತಿದಾರರು ನೀಡಿದ ವಿವಾಹದ ಬಗ್ಗೆ ನಿರ್ಣಯ ತೆಗೆದುಕೊಳ್ಳುವವರ ಪ್ರಮಾಣವನ್ನು ಕೊಡಲಾಗಿದೆ. ಇರುಳಿಗ ಸಮಾಜದಲ್ಲಿ ಪ್ರತಿಶತ ಶೇ. ೭೩ರಷ್ಟು ವಿವಾಹಗಳು ತಂದೆಯ ನಿರ್ಣಯದ ಮೇರೆಗೆ ನಡೆದರೆ, ಶೇ. ೧೫ರಷ್ಟು ತಾಯಿ ನಿರ್ಣಯಕ್ಕೆ ಅವಕಾಶವಿರುವುದು ಕಂಡುಬರುತ್ತದೆ. ಶೇ. ೭ರಷ್ಟು ಕುಟುಂಬದ ಸದಸ್ಯರು ಹಾಗೂ ಶೇ. ೫ರಷ್ಟು ಸಂಬಂಧಿಕರು ವಿವಾಹ ಕುರಿತಾಗಿ ನಿರ್ಣಯವನ್ನು ತೆಗೆದುಕೊಂಡ ಮೇಲೆಯೇ ವಿವಾಹಕಾರ್ಯ ಜರುಗುತ್ತದೆ. ಇದನ್ನು ಗಮನಿಸಿದಾಗ ವಿವಾಹ ವಿಚಾರದಲ್ಲಿ ಮದುವೆಯಾಗುವ ಗಂಡು ಹೆಣ್ಣಿಗೆ ಸ್ವತಂತ್ರವಾದ ನಿರ್ಣಯವನ್ನು ತೆಗೆದುಕೊಳ್ಳಲು ಕಟ್ಟುಪಾಡುಗಳು ಇರುವುದನ್ನು ಇದರಿಂದ ಕಂಡುಕೊಳ್ಳಲಾಗಿದೆ. ಆದರೂ ಗಂಡು ಮತ್ತು ಹೆಣ್ಣಿನ ಒಪ್ಪಿಗೆಯ ತೀರ್ಮಾನವನ್ನು ಪಡೆದು ವಿವಾಹ ನಿರ್ಣಯವನ್ನು ಕೈಗೊಳ್ಳುತ್ತಿದ್ದಾರೆ. ಇರುಳಿಗ ಸಮುದಾಯದಲ್ಲಿ ವಿವಾಹದ ಬಗ್ಗೆ ತಂದೆ ತಾಯಿಯ ಪಾತ್ರ ಬಹಳ ಮುಖ್ಯವಾಗಿದೆ.

ಹೀಗೆ ಆಧುನಿಕತೆಯ ಪ್ರಭಾವಕ್ಕೆ ಒಳಗಾದ ಬುಡಕಟ್ಟುಗಳ ಸಂಸ್ಕೃತಿಯು ಬದಲಾವಣೆಗೊಳ್ಳುತ್ತಿರುವುದು ಗೋಚರಿಸುತ್ತದೆ.

೪.೩. ಜನನ

ಪ್ರತಿಯೊಂದು ಜೀವಿಗೂ ಹುಟ್ಟು ಸಾವು ಜೀವನದ ಎರಡು ಪ್ರಮುಖ ಘಟ್ಟಗಳು. ಈ ಎರಡೂ ಘಟ್ಟಗಳ ಕುರಿತು ಮನುಷ್ಯನು ತನ್ನದೇ ಆದ ಸಂಪ್ರದಾಯ, ಆಚರಣೆಗಳನ್ನು ರೂಢಿಸಿಕೊಂಡಿದ್ದಾನೆ. ಅದೇ ಪ್ರಕಾರ ಇರುಳಿಗರೂ ಸಹ ಹುಟ್ಟು ಸಾವಿಗೆ ಸಂಬಂಧಿಸಿದ ಹಲವು ವಿಧಿ ನಿಷೇಧಗಳನ್ನು ಆಚರಿಸುತ್ತಾ ಬಂದಿದೆ.

ವಿಶೇಷವಾಗಿ ಜನನಕ್ಕೆ ಸಂಬಂಧಿಸಿದಂತೆ ಇರುಳಿಗರಲ್ಲಿ ಹಲವು ಆಚರಣೆಗಳು ರೂಢಿಯಲ್ಲಿವೆ. ಇರುಳಿಗರಲ್ಲಿ ಮೊದಲ ಹೆರಿಗೆ ತವರುಮನೆಯಲ್ಲಿಯೇ ನಡೆಯಬೇಕು ಎಂಬುದು ಹಿಂದಿನಿಂದ ನಡೆದುಬಂದಿರುವ ಸಾಮಾನ್ಯ ಪದ್ಧತಿಯಾಗಿದೆ. ಇಂತಹ ಪದ್ಧತಿಯು ಬೆಳೆದು ಬರಲು ಪ್ರಮುಖ ಕಾರಣವೇನು ಎಂಬುದಕ್ಕೆ ಮಾತ್ರ ನಿರ್ದಿಷ್ಟವಾದ ಆಧಾರವು ದೊರೆಯುವುದಿಲ್ಲ. ಆದರೆ ಹುಡುಗಿ ಹೊಸದಾಗಿ ಅತ್ತೆ ಮನೆಯನ್ನು ಸೇರಿರುತ್ತಾಳೆ. ಅಲ್ಲಿ ಅವಳಿಗೊಂದು ಹೊಸ ಬಗೆಯ ವಾತಾವರಣ ಸೃಷ್ಟಿಯಾಗುತ್ತದೆ; ಹೊಸ ಜನರೊಡನೆ ಹೊಂದಾಣಿಕೆ ನಡೆದಿರುತ್ತದೆ. ಹುಡುಗಿಗೆ ಸಹಜವಾಗಿ ಅಂಜಿಕೆ, ಅಳುಕು ಇರುತ್ತದೆ. ಈ ಬಗೆಯ ಪರಿಸರದಲ್ಲಿ ಅವರ ಬಾಣಂತನ ಸರಿಯಾಗಿ ನಡೆಯದೇ ಹೋಗಬಹುದು.[೬]

ಚೊಚ್ಚಲು ಹೆರಿಗೆಯಾದುದರಿಂದ ಅದಕ್ಕೆ ಬೇಕಾದ ಮಾನಸಿಕ ಸಿದ್ಧತೆ ಹಾಗೂ ಪ್ರೀತಿ, ಆರೈಕೆ ಮಮತೆಯ ವಾತಾವರಣವು ತನ್ನ ತಾಯಿಯಿಂದ ದೊರೆಯುವುದರಿಂದ ಬಹುಶಃ ತವರಿಗೆ ಹೋಗುವ ಪದ್ಧತಿಯು ಚಾಲ್ತಿಗೆ ಬಂದಿರಬಹುದು. ಈ ಸಮುದಾಯದಲ್ಲಿ ಹೆಣ್ಣು ಗರ್ಭಧರಿಸಿದ ವಿಷಯ ತಿಳಿದನಂತರ ಆಕೆಗೆ ಗರ್ಭಿಣಿಯ ಬಯಕೆಯನ್ನು ಅತ್ಯಂತ ಕಾಳಜಿಯಿಂದ ತೀರಿಸಲಾಗುತ್ತದೆ. ಗಂಡ, ಅತ್ತೆ, ಮಾವ, ಮೈದುನ, ನಾದಿನಿ ಎಲ್ಲರೂ ಸಹಕರಿಸಿ ಬಯಕೆಯನ್ನು ತಿಳಿದು ಅವುಗಳನ್ನು ಒದಗಿಸುವ ವ್ಯವಸ್ಥೆಯನ್ನು ಮಾಡುತ್ತಾರೆ. ಮಾವಿನಕಾಯಿ, ಕಾಡುನೆಲ್ಲಿ, ಬೆಲ್ಲ, ಹುಣಸೆಕಾಯಿ ವಿಶೇಷವಾಗಿ ಈ ಸಮುದಾಯದ ಗರ್ಭಿಣಿಯು ಎಳೆ ಹುತ್ತದ ಮಣ್ಣನ್ನು ಇಷ್ಟಪಡುತ್ತಾಳೆ. ಏಳು ಅಥವಾ ಒಂಬತ್ತನೇ ತಿಂಗಳಲ್ಲಿ ಹೊಸ ಸೀರೆಯುಡಿಸಿ ಗಂಡನ ಮನೆಯಿಂದ ತವರುಮನೆಗೆ ಬಾಣಂತನಕ್ಕೆ ಕಳುಹಿಸುವ ಪದ್ಧತಿ ಇದೆ. ತವರುಮನೆಯಲ್ಲಿ ಗರ್ಭಿಣಿಗೆ ಹೆಣ್ಣುಮಗಳು ದಿನನಿತ್ಯದ ಮನೆಗೆಲಸವನ್ನು ಹೆಚ್ಚು ಸಕ್ರಿಯವಾಗಿ ಮಾಡುವಂತೆ ಪ್ರೇರೇಪಿಸುತ್ತಾರೆ. ಹೀಗೆ ಮಾಡುವುದರಿಂದ ಹೆರಿಗೆ ಸುಲಭವಾಗಿ ಆಗುತ್ತದೆ ಎಂಬ ನಂಬಿಕೆ ಇದೆ.

ಗರ್ಭಿಣಿ ಹೆಣ್ಣಿಗೆ ಹೆರಿಗೆ ನೋವು ಕಾಣಿಸಿದ ಕೂಡಲೇ ಸಮುದಾಯದ ಸೂಲಗಿತ್ತಿ ಮನೆಯ ಒಳಭಾಗದಲ್ಲಿ ಹೆರಿಗೆ ಮಾಡಿಸುತ್ತಾಳೆ. ತಾಯಿಯ ಗರ್ಭದಿಂದ ಹೊರಬಂದ ಶಿಶುವಿನ ಹೊಕ್ಕಳು ಬಳ್ಳಿಯನ್ನು ಕುಡುಗೋಲಿನಿಂದ ಕೊಯ್ದು ಗಂಟು ಹಾಕಿ ಮಾಸ ಹಾಗೂ ಮಗುವನ್ನು ಬೇರ್ಪಡಿಸುತ್ತಾಳೆ. ಹರಳೆಣ್ಣೆ ದೀಪಕ್ಕೆ ಸೂಜಿಯನ್ನು ಹಿಡಿದು ಕಾಯಿಸಿ ಮಗುವಿನ ದೇಹದ ನಾಲ್ಕುಕಡೆ ಬರೆ ಹಾಕುತ್ತಾಳೆ.

ಹೀಗೆ ಬರೆಹಾಕುವ ಪದ್ಧತಿಯ ಬಗ್ಗೆ ಪ್ರಶ್ನಿಸಿದಾಗ ಕೆಟ್ಟದೃಷ್ಟಿಯು ಮಗುವಿಗೆ ತಾಕದಿರಲಿ ಎಂದು ಹೀಗೆ ಮಾಡುತ್ತೇವೆ ಎಂದು ಹೇಳುತ್ತಾರೆ.

ಜನಿಸಿದ ಮಗುವಿಗೆ ಮೂರು ದಿವಸ ತಾಯಿಯ ಹಾಲನ್ನು ಕುಡಿಸುವುದಿಲ್ಲ. ಗಿಣ್ಣಾಲು ಕುಡಿದರೆ ಮಗುವು ಮಂದವಾಗುತ್ತದೆ; ಮುಂದೆ ಬುದ್ಧಿ ಚುರುಕಾಗುವುದಿಲ್ಲ ಮತ್ತು ಜ್ವರ ಬರುತ್ತದೆ ಎಂದು ಹೆದರುತ್ತಾರೆ. ಮೂರು ದಿವಸಗಳವರೆಗೂ ಹರಳೆಣ್ಣೆಯನ್ನು ಬೆರಳಿನಿಂದ ಅದ್ದಿ ಚೀಪಿಸುತ್ತಾರೆ. ಹೆರಿಗೆಯನ್ನು ಸುಖಕರವಾಗಿ ಮಾಡಿಸುವಲ್ಲಿ ಸೂಲಗಿತ್ತಿ ಪ್ರಮುಖ ಪಾತ್ರವಹಿಸುತ್ತಾಳೆ. ಈ ಸಮುದಾಯದಲ್ಲಿ ಇಂದಿಗೂ ಬಹುತೇಕ ಹೆರಿಗೆಗಳನ್ನು ಸಮುದಾಯದೊಳಗಿನ ಸೂಲಗಿತ್ತಿಯರೆ ಮಾಡಿಸುತ್ತಿದ್ದಾರೆ. ಇವರ ವಾಸಸ್ಥಾನ ಕಾಡಂಚಿನ ಇಳಿಜಾರು ಕಣಿವೆ ಪ್ರದೇಶವಾಗಿದ್ದು, ಸರಿಯಾದ ಸಮಯಕ್ಕೆ ಆಸ್ಪತ್ರೆಗೆ ಕರೆತರಲು ಸಾಧ್ಯವಿಲ್ಲದೇ ಇರುವುದರಿಂದ ಹೆರಿಗೆ ಮಾಡಿಸಲು ಸೂಲಗಿತ್ತಿಯರನ್ನು ಆಶ್ರಯಿಸುತ್ತಾರೆ. ಮೂರು ದಿನಗಳ ನಂತರ ಬೇವಿನಸೊಪ್ಪು ಅರಿಶಿನ ಅರೆದು ಮಗುವಿನ ಮೈಗೆ ಲೇಪಿಸಿ ಬಿಸಿನೀರು ಎರೆಯುತ್ತಾರೆ.

೪.೩.೧. ಹೊಸ ಮಡಿಕೆ ಶಾಸ್ತ್ರ

ಬಾಣಂತಿಗೆ ಐದನೆಯ ದಿನಕ್ಕೆ ಬಿಸಿನೀರು ಕಾಯಿಸಿ ನೀರಿಗೆ ನಿಂಬೆಸೊಪ್ಪು, ಸೀಬೆಸೊಪ್ಪು, ಬೇವಿನಸೊಪ್ಪು, ಚಾದಗಿಸೊಪ್ಪು, ಆಲೆಸೊಪ್ಪುಗಳನ್ನು ಸೇರಿಸಿ ಅರಿಶಿಣ, ಸೀಗೆಕಾಯಿಯಿಂದ ಸ್ನಾನ ಮಾಡಿಸಿ ಕಡಿಮೆ ಉಪ್ಪು ಖಾರ ಹಾಕಿದ ಆಹಾರವನ್ನು ನೀಡುತ್ತಾರೆ. ಮಗು ಮತ್ತು ಬಾಣಂತಿಯನ್ನು ನೋಡಲು ಮನೆಗೆ ಬರುವವರು ಕಡ್ಡಾಯವಾಗಿ ಕೈಕಾಲು ತೊಳೆದು ಹೊರಗೆ ಇಟ್ಟಿರುವ ಸಗಣಿಯನ್ನು ತುಳಿದು ಬರುವಂತೆ ಕಟ್ಟಪ್ಪಣೆ ಮಾಡುತ್ತಾರೆ. ಮಗು ಜನಿಸಿದ ಹನ್ನೆರಡನೆಯ ದಿನ ಮನೆಯನ್ನು ಸ್ವಚ್ಛಗೊಳಿಸಿ ಮುಳ್ಳಿಕುಲದವರು ಜಂಗಮರನ್ನು, ದಾಸಕುಲದವರು ವೈಷ್ಣವರನ್ನು ಕರೆಯಿಸಿ ಜನನದ ಸೂತಕವನ್ನು ಕಳೆದುಕೊಳ್ಳುತ್ತಾರೆ. ಇದಕ್ಕೆ "ಹೊಸ ಮಡಿಕೆ ಶಾಸ್ತ್ರ"ವೆಂದು ಕರೆಯುತ್ತಾರೆ.

೪.೩.೨. ತೊಟ್ಟಿಲಿಗೆ ಹಾಕುವ ಶಾಸ್ತ್ರ

"ಹೊಸ ಮಡಿಕೆ ಶಾಸ್ತ್ರ'ವಾದ ಸಂಜೆಯೇ ಮಗುವನ್ನು ತೊಟ್ಟಿಲಿಗೆ ಹಾಕುವ ಶಾಸ್ತ್ರವನ್ನು ಮಾಡುತ್ತಾರೆ. ವಿಶೇಷವಾಗಿ ಅಲಂಕರಿಸಿದ ಬಿದಿರಿನ ತೊಟ್ಟಿಲನ್ನು ಆಲೆಮರದ ಹೂವುಗಳಿಂದ ಸಿಂಗರಿಸುತ್ತಾರೆ. ಆಲೆಮರದ ಹೂವಿಗೆ ವಿಶೇಷ ಸ್ಥಾನವಿದೆ. ಆಲೆಮರವು ತಮ್ಮ ಹಿರಿಯರು ಹಾಗೂ ದೈವಗಳು ನೆಲೆಯಾಗಿರುವುದರಿಂದ ಆ ಹೂವನ್ನು ತೊಟ್ಟಿಲಿಗೆ ಕಟ್ಟಿದರೆ ಹಿರಿಯರ ಆಶೀರ್ವಾದ ಹುಟ್ಟಿದ ಮಗುವಿಗೆ ದೊರಕುತ್ತದೆ"[೭] ಎಂಬ ನಂಬಿಕೆ ಇವರಲ್ಲಿದೆ.

ಮನೆಯ ಹಿರಿಯ ಮಹಿಳೆ ಮಗುವನ್ನು ಪ್ರಥಮಬಾರಿಗೆ ತೊಟ್ಟಿಲಲ್ಲಿ ಮಲಗಿಸುತ್ತಾರೆ. ಬಂದ ನೆಂಟರು, ಸಮುದಾಯದವರು ಜೇನುತುಪ್ಪವನ್ನು ಮಗುವಿಗೆ ನೆಕ್ಕಿಸಿ ತೊಟ್ಟಿಲನ್ನು ತೂಗುತ್ತಾರೆ. ಹಿಂದೆ ಬೆಲ್ಲಗೆಣಸು, ಮುಳ್ಳಿ ಗೆಣಸನ್ನು ಮಗುವಿಗೆ ಕಾಣಿಕೆಯಾಗಿ ನೀಡುವ ಪದ್ಧತಿ ಇತ್ತು. ಬದಲಾದ ಆಧುನಿಕ ಕಾಲದಲ್ಲಿ ಮಗುವಿಗೆ ಹಣ ನೀಡುವ ಪದ್ಧತಿ ಚಾಲ್ತಿಗೆ ಬಂದಿದೆ. ಅಂದೇ ಮಗುವಿಗೆ ಅವರ ಕುಲದೈವಗಳ ಅಥವಾ ಸತ್ತ ತಾತಾ, ಅಜ್ಜಿ ಅಥವಾ ಕುಲದ ಹಿರಿಯರ ಹೆಸರನ್ನಿಡುವ ಪದ್ಧತಿ ಇದೆ.

ಆದರೆ ಇತ್ತೀಚೆಗೆ ಮಕ್ಕಳಿಗೆ ಆಧುನಿಕ ಹೆಸರುಗಳನ್ನು ಇಡುತ್ತಿರುವುದರ ಬಗ್ಗೆ ಕುಲದ ಹಾಗೂ ಕುಟುಂಬದ ಹಿರಿಯರು ಅಸಮಾಧಾನವನ್ನು ವ್ಯಕ್ತಪಡಿಸುತ್ತಾರೆ.

೪.೩.೩. ತೊಟ್ಟಿಲು ಮುನಿಶಾಸ್ತ್ರ

ಇರುಳಿಗರ ಹೆಣ್ಣುಮಗಳು ಬಾಣಂತನವನ್ನು ಮುಗಿಸಿ ಗಂಡನ ಮನೆಗೆ ತೆರಳುವ ಮುನ್ನ ತವರು ಮನೆಯವರು ಆಚರಿಸುವ ಒಂದು ವಿಶಿಷ್ಟ ಆಚರಣೆ ತೊಟ್ಟಿಲು ಮುನಿಶಾಸ್ತ್ರ. ಮಗು ಮತ್ತು ತಾಯಿಯನ್ನು ಅರಣ್ಯಕ್ಕೆ ಕರೆತಂದು ಆಲೆ, ಅಂಕೋಲೆ, ಲಕ್ಕಿಮರ ಇತ್ಯಾದಿ ಯಾವುದಾದರೂ ಒಂದು ಮರದ ಬುಡದಲ್ಲಿ ಮಗುವನ್ನು ಮಲಗಿಸಿ ಮೂರು ಕಲ್ಲುಗಳನ್ನಿಟ್ಟು ಕಾಡು ಮುನೇಶ್ವರನೆಂದು ಪೂಜಿಸುವ ಆಚರಣೆಯಿದೆ. ಮುನೇಶ್ವರನ ಆರಾಧನೆಯಲ್ಲಿ ಮೇಕೆಯನ್ನು ಬಲಿ ನೀಡುವ ಪದ್ಧತಿ ಇದೆ. ಬಲಿ ನೀಡಿದ ಮೇಕೆಯ ಮಾಂಸದಿಂದ ಅಡುಗೆ ತಯಾರಿಸಿ ಮುನೇಶ್ವರನಿಗೆ ನೈವೇಧ್ಯ ಮಾಡಿ ಕುಟುಂಬದ ಸದಸ್ಯರೆಲ್ಲ ಅಲ್ಲಿಯೇ ಊಟ ಮಾಡಿ ವಾಪಾಸ್ಸಾಗುತ್ತಾರೆ.

ಮಗುವು ದೊಡ್ಡವನಾದ ನಂತರ ಕಾಡಿಗೆ ಬಂದಾಗ ದುಷ್ಟಶಕ್ತಿಗಳಿಂದ ಕಾಡುಮುನೇಶ್ವರನು ಇವನನ್ನು ಕಾಪಾಡಲಿ, ಕಾಡಿನಲ್ಲಿರುವ ಗಡ್ಡೆಗೆಣಸು ಔಷಧಿಯ ಗಿಡಮೂಲಿಕೆಗಳು ಇವನಿಗೆ ಗೋಚರಿಸಲಿ, ಮಗುವನ್ನು ಕಾಡಿಗೆ ಒಪ್ಪಿಸಲು ಮಾಡುವ ಆಚರಣೆ ಇದಾಗಿದೆಯೆಂದು ವಿವರ ನೀಡುತ್ತಾರೆ.

ಈ ಆಚರಣೆಯಿಂದ ಗೋಚರಿಸುವ ಸಂಗತಿಯೆಂದರೆ ಮಾನವ ಕೂಡ ಪ್ರಕೃತಿಯ ಒಂದು ಭಾಗ. ಅಂತಹ ಮಾನವ ಸಂತತಿಯನ್ನು ನಿಸರ್ಗಕ್ಕೆ ಅರ್ಪಿಸುವ ಮೂಲಕ ಪ್ರಕೃತಿ ಮತ್ತು ಮಾನವ ಸಂಬಂಧವನ್ನು ಪುನಃ ನೆನಪಿಸುವ ಇವರ ಪ್ರಕೃತಿ ಆರಾಧನೆಯು ಅನುಕರಣಿಯವಾದದ್ದು. ತಮ್ಮ ಸಮುದಾಯಕ್ಕೆ ಕಾನನಕ್ಕೆ ಇರುವ ನೈಜವಾದ ಸಂಬಂಧವನ್ನು ಸಾಬೀತುಪಡಿಸುವಲ್ಲಿ ಈ ಆಚರಣೆ ಪ್ರಮುಖ ಎನಿಸುತ್ತದೆ.

೪.೪. ಋತುಮತಿ

ಋತುಮತಿಯಾದ ಹೆಣ್ಣನ್ನು ಇರುಳಿಗರು 'ದೊಡ್ಡವಳಾದಳು' ಎನ್ನುತ್ತಾರೆ. ಆಕೆಗೆ ಪ್ರತ್ಯೇಕವಾದ ಒಂದು ಬೂಡು ನಿರ್ಮಿಸುತ್ತಾರೆ. ಈ ಪ್ರತ್ಯೇಕವಾದ ವ್ಯವಸ್ಥೆಯನ್ನು ಹುಡುಗಿಯ ಸೋದರಮಾವನೇ ವ್ಯವಸ್ಥೆ ಮಾಡಬೇಕು. ಬೇವಿನಸೊಪ್ಪು, ಅಂಕೋಲೆ ಸೊಪ್ಪು, ಆಲೆಸೊಪ್ಪು, ಹೊಂಗೆಸೊಪ್ಪು, ಲಕ್ಕಿಸೊಪ್ಪುಗಳಿಂದ ಬೂಡು ನಿರ್ಮಾಣವಾಗುತ್ತದೆ. ಈ ಬೂಡಿನಲ್ಲಿ ೧೬ ದಿವಸಗಳವರೆಗೆ ಆಕೆಯ ವಾಸ್ತವ್ಯ. ಆ ಸಮಯದಲ್ಲಿ ಆಕೆಗೆ ಪೌಷ್ಠಿಕ ಆಹಾರಗಳಾದ ಬೆಲ್ಲ, ಕೊಬ್ಬರಿ ಮತ್ತು ಕಾಡಿನಲ್ಲಿ ದೊರೆಯುವ ವಿವಿಧ ಜಾತಿಯ ಹಣ್ಣು, ಮಾಂಸದ ಅಡುಗೆಯನ್ನು ನೀಡುತ್ತಾರೆ. ಈ ಸಮಯದಲ್ಲಿ ಆಕೆಯನ್ನು ಯಾರು ಸ್ಪರ್ಶಿಸುವಂತಿಲ್ಲ. ಆಕೆ ಅಶುದ್ಧಳು ಎಂಬ ಮನೋಭಾವನೆ ಇದೆ. ೧೭ನೇ ದಿವಸಕ್ಕೆ ಆಕೆಗೆ ಸ್ನಾನ ಮಾಡಿಸಿ ಐದು ಜನ ಮುತ್ತೈದೆಯರಿಂದ ಅರಿಶಿನ, ಸೀಗೆಕಾಯಿ ನೀರು ಹಾಕಿಸಿ ಆರತಿ ಮಾಡಿ ಹಿರಿಯರು ಸಂಬಂಧಿಕರು ಸಿಹಿ ಊಟವನ್ನು ಮಾಡುತ್ತಾರೆ. ಹೀಗೆ ಹೆಣ್ಣಿನ ಪ್ರಥಮ ಸಂಭ್ರಮದ ಘಟ್ಟವನ್ನು ಇರುಳಿಗರು ಆದರಪೂರ್ವಕವಾಗಿ ಆಚರಿಸುತ್ತಾರೆ. ಈ ರೀತಿಯ ಆಚರಣೆಯ ನಡುವೆಯಲ್ಲಿಯೇ

ಆಕೆಗೆ ಕೆಲವು ನಿಯಮ ನಿಬಂಧನೆಗಳನ್ನು ಕುಲಸ್ಥ ಸಮುದಾಯದ ಹಿರಿಯ ಮಹಿಳೆಯರು ಕಿವಿಮಾತುಗಳನ್ನು ಹೇಳುತ್ತಾರೆ. ಋತುಮತಿಯಾದ ಹೆಣ್ಣುಮಕ್ಕಳು ಪರಪುರುಷನನ್ನು ಹೊಸ್ತಿಲಲ್ಲಿ ನಿಂತು ನೋಡಬಾರದು. ಒಂಟಿಯಾಗಿ ಹೊರಕ್ಕೆ ಹೋಗಬಾರದು, ಗಂಡಸರ ಮುಂದೆ ತಲೆ ಬಾಚಿಕೊಳ್ಳಬಾರದು, ಹೆಚ್ಚು ಮಾತನಾಡುವುದನ್ನು ನಿಯಂತ್ರಿಸುವಂತೆ ಕಿವಿಮಾತು ಹೇಳುವ ವಾಡಿಕೆ ಇದೆ. ಬಹುಶಃ ಇದು ಹೆಣ್ಣಿನ ಫಲವಂತಿಕೆಯನ್ನು ರಕ್ಷಿಸುವ, ಕಾಯ್ದಿರಿಸುವ ಸಲುವಾಗಿ ಹಾಕಿರುವ ಪದ್ಧತಿಯಾಗಿದೆ. ಈ ಕಿವಿಮಾತಿನ ಬಗ್ಗೆ ಕುಲದ ಹಿರಿಯ ಹೆಂಗಸರನ್ನು ಪ್ರಶ್ನಿಸಿದರೆ ಗೂಢಾರ್ಥವಾಗಿ ಒಗಟಿನ ರೂಪದಲ್ಲಿ ಹೀಗೆ ತಿಳಿಸುತ್ತಾರೆ. "ಬಿತ್ತನೆ ಬೀಜ ಜಳ್ಳ ಆಗದ್ದಂಗೆ, ಭೂಮಿ ಬಂಜಾರಾಗದ್ದಂಗೆ, ಮುತ್ತಿನಸರ ಕೈ ತಪ್ಪದ್ದಂಗೆ ನೋಡಿಕೊಳ್ಳಬೇಕು ಸ್ವಾಮಿ"[೮] ಸ್ತ್ರೀಗೆ ಶೀಲವೇ ಮುಖ್ಯ; ಅದನ್ನು ಜೋಪಾನ ಮಾಡುವುದು ಹಿರಿಯರ ಕರ್ತವ್ಯ ಎಂಬ ಮಾತು ಸ್ಪಷ್ಟವಾಗುತ್ತದೆ.

೪.೫. ಶವಸಂಸ್ಕಾರ ಪದ್ಧತಿ

ಇರುಳಿಗರ ಸಾಮಾಜಿಕ ವ್ಯವಸ್ಥೆಯಲ್ಲಿ ಶವಸಂಸ್ಕಾರ ಪದ್ಧತಿಯು ವಿಶೇಷ. ಇವರು ಸರ್ವಚೇತನವಾದಿಗಳು, ಆತ್ಮ, ಭೂತ, ಪಿಶಾಚಿಗಳಲ್ಲಿ ನಂಬಿಕೆಯುಳ್ಳವರು. ಸತ್ತ ನಂತರ ಮೃತರ ಆತ್ಮಗಳು ತಮ್ಮ ಸುತ್ತಲೂ ಸುಳಿಯುತ್ತವೆ ಎಂಬ ನಂಬಿಕೆಯುಳ್ಳವರು. ಅರಣ್ಯದಲ್ಲಿ ಗಿಡಬಳ್ಳಿಗಳಲ್ಲಿ ವಿಶೇಷವಾಗಿ ಆಲೆಮರದಲ್ಲಿ ತಮ್ಮ ಹಿರಿಯರ ಆತ್ಮಗಳು ವಾಸ ಮಾಡುತ್ತವೆ ಎಂದು ನಂಬುವರು. ಸಮುದಾಯದಲ್ಲಿ ಹಿರಿಯರನ್ನು ಪೂಜಿಸುವ, ಗೌರವಿಸುವ ಆಚರಣೆ ಜಾರಿಯಲ್ಲಿದೆ. "ಮಾನವನ ಜೀವಿತ ಕಾಲದಲ್ಲಿ ಆಚರಿಸುವ ಕೆಲವು ಆಚರಣೆಗಳಿಗೆ ಕೊರತೆಯಾದರೂ ನಡೆಯುತ್ತದೆ. ಆದರೆ ಸತ್ತ ವ್ಯಕ್ತಿಗೆ ಸಂಬಂಧಿಸಿದ ಆಚರಣೆಗಳಲ್ಲಿ ಹೆಚ್ಚು ಕಡಿಮೆಯಾದರೆ ಆತನ ಆತ್ಮ ಇದ್ದವರನ್ನು ಕಾಡುತ್ತದೆ ಎಂಬ ಬಲವಾದ ನಂಬಿಕೆ ಇದೆ".[೯]

ಎಷ್ಟೇ ಕಷ್ಟವಾದರೂ ಶವ ಸಂಸ್ಕಾರವನ್ನು ಪರಂಪರೆಯಂತೆ ನಡೆಸುತ್ತಾರೆ. ಅಂತ್ಯ ಸಂಸ್ಕಾರವು ಪ್ರದೇಶದಿಂದ ಪ್ರದೇಶಕ್ಕೆ ಸಮುದಾಯದಿಂದ ಸಮುದಾಯಕ್ಕೆ ವಿಭಿನ್ನವಾಗಿರುತ್ತದೆ. ಈ ರೀತಿಯ ಶವಸಂಸ್ಕಾರ ಆಚರಣೆಯಲ್ಲಿ ಅಲ್ಪಸ್ವಲ್ಪ ಬದಲಾವಣೆಗಳು ಇತ್ತೀಚಿನ ದಶಕದಲ್ಲಿ ಸಂಭವಿಸುತ್ತಿವೆ. ಆದರೂ ಬುಡಕಟ್ಟುಗಳು ತಮ್ಮ ಸಂಪ್ರದಾಯವನ್ನು ಬಹುಬೇಗ ಕಳೆದುಕೊಳ್ಳಲು ಸಾಧ್ಯವಿಲ್ಲ. ಯಾವುದೇ ಸಮುದಾಯವು ತನ್ನ ನಡವಳಿಕೆಯನ್ನು ಬದಲಾಯಿಸಿಕೊಳ್ಳುತ್ತದೆ ಹೊರತು ತಮ್ಮ ಸಂಪ್ರದಾಯವನಲ್ಲ. ಅದು ಬದಲಾವಣೆ ಬಯಸಿದರೂ ಆ ಸಮಯದಲ್ಲಿನ ಸನ್ನಿವೇಶ, ಅಗಲಿಕೆಯ ನೋವು ಇಂತಹ ಆಚರಣೆಯನ್ನು ಆಚರಿಸಲು ಪ್ರೇರಣೆ ನೀಡುತ್ತದೆ. "ನಾಗರಿಕ ಸಮಾಜದ ಕೆಲವು ಆಚರಣೆಗಳನ್ನು ಅನುಸರಿಸುತ್ತಿದ್ದರೂ ಮೂಲ ಸಂಸ್ಕೃತಿಯನ್ನು ಬಿಟ್ಟುಕೊಡುತ್ತಾರೆಂದು ಅಷ್ಟೇ ಸುಲಭವಾಗಿ ಒಪ್ಪಗಲಾರದು".[೧೦]

ಇರುಳಿಗರು ಶವಸಂಸ್ಕಾರ ಪದ್ಧತಿಯಲ್ಲಿ ಇತರೆ ಬುಡಕಟ್ಟುಗಳಿಗಿಂತ ವಿಭಿನ್ನವಾದ ಸಂಪ್ರದಾಯ ಆಚರಣೆಯನ್ನು ರೂಢಿಸಿಕೊಂಡಿದ್ದಾರೆ. ವ್ಯಕ್ತಿ ಮೃತನಾದ ನಂತರ ಶವವನ್ನು ಮನೆಯ ಮುಂದೆ ಇರಿಸಿ ಕುಲದ ಯಜಮಾನನಿಗೆ ಮೊದಲು ಸುದ್ದಿ ಮುಟ್ಟಿಸುತ್ತಾರೆ. ಈತನು ಕೋಲ್ಕಾರನ ಮೂಲಕ

ಸಂಬಂಧಿಗಳಿಗೆ ವಿಷಯವನ್ನು ಮುಟ್ಟಿಸುವ ಕಾರ್ಯ ಮಾಡುತ್ತಾನೆ. ಶವಕ್ಕೆ ಸ್ನಾನ ಮಾಡಿಸಿ ಬಿದಿರಿನಿಂದ ಕಟ್ಟಿದ ಚಟ್ಟದ ಮೇಲೆ ಆಲೆಸೊಪ್ಪು ಒಣಗಿದ ರಾಗಿಹುಲ್ಲು, ಕಕ್ಕೆಸೊಪ್ಪು ಹಾಕಿ ಒಂಟಿ ತೆಂಗಿನ ಗರಿಯಿಂದ ಚಟ್ಟವನ್ನು ಸಿದ್ಧಪಡಿಸುತ್ತಾರೆ. ನಂತರ ಶವಯಾತ್ರೆ ಪ್ರಾರಂಭವಾಗುತ್ತದೆ. ಶವ ಹೋಗುವ ದಾರಿಯುದ್ದಕ್ಕೂ ಪುರಿ, ಎಳ್ಳು, ಜೀರಿಗೆ, ಸಾಸಿವೆ (ಕೆಲವು ಪ್ರದೇಶದಲ್ಲಿ ಕೀರೆಸೊಪ್ಪಿನ ಬೀಜವನ್ನು) ಎರಚುತ್ತಾರೆ. ಸತ್ತವ್ಯಕ್ತಿಯು ಮರಳಿ ಬರುವುದಾದರೆ ಬಿದ್ದಿರುವ ಎಳ್ಳು ಜೀರಿಗೆ ಸಾಸಿವೆ ಮತ್ತು ಕೀರೆಬೀಜವನ್ನು ಆರಿಸುತ್ತಾ ಬರುತ್ತಾನೆ. ಅವುಗಳನ್ನು ಆರಿಸುತ್ತ ಬರಲು ಬಹಳ ಸಮಯ ಹಿಡಿಯುತ್ತದೆ; ಆದ್ದರಿಂದ ಬರಲಾಗದು ಎಂಬ ನಂಬಿಕೆ ಇದೆ.

೪.೫.೧. ತಲೆಕಲ್ಲುಗುಡ್ಡೆ

ಸ್ಮಶಾನಕ್ಕೆ ಹೋಗುವ ಮೊದಲು ಮಧ್ಯದಲ್ಲಿ ಶವವನ್ನು ಇಳಿಸುತ್ತಾರೆ. ಸ್ಮಶಾನಕ್ಕೆ ಬರುವಾಗ ಬಂಧುಬಾಂಧವರೆಲ್ಲ ದಾರಿಯಲ್ಲಿ ಬಿದ್ದ ಒಂದೊಂದು ಕಲ್ಲನ್ನು ತಂದಿರುತ್ತಾರೆ. ಆ ಕಲ್ಲನ್ನು ಹೆಣದ ತಲೆಯ ಹತ್ತಿರ ರಾಶಿ ಹಾಕುತ್ತಾರೆ. ಇದನ್ನು 'ತಲೆಕಲ್ಲುಗುಡ್ಡೆ' ಎಂದು ಕರೆಯುತ್ತಾರೆ. ಸತ್ತ ವ್ಯಕ್ತಿಯ ಮಗ ನೀರಿನ ಕುಂಬವನ್ನು ಹೊತ್ತು ಮೂರು ಪ್ರದಕ್ಷಿಣೆ ಹಾಕಿ ಕುಂಬವನ್ನು ಎತ್ತಿ ತಲೆಕಲ್ಲು ಗುಡ್ಡೆ ಹತ್ತಿರ ಹಾಕುತ್ತಾನೆ. ಹಬ್ಬ ಹಾಗೂ ವಿಶೇಷ ದಿನಗಳಲ್ಲಿ ಈ ತಲೆಕಲ್ಲು ಗುಡ್ಡೆಗೆ ಪೂಜೆ ಸಲ್ಲಿಸುತ್ತಾರೆ. ಈ ಸ್ಥಳದಲ್ಲಿ ಕಷ್ಟವನ್ನು ಹೇಳಿಕೊಂಡು ಪ್ರಾರ್ಥನೆ ಸಲ್ಲಿಸಿದರೆ ಸಮಸ್ಯೆಗಳು ಪರಿಹಾರವಾಗುತ್ತದೆ ಎಂಬ ನಂಬಿಕೆ ಇರುಳಿಗರಲ್ಲಿದೆ.

೪.೫.೨. ಕಲ್ಲುಸೇವೆ / ಶವ ಸಂಸ್ಕಾರ

ತರುವಾಯ ಶವವನ್ನು ಸ್ಮಶಾನಕ್ಕೆ ತಂದು ವಿಶಿಷ್ಟವಾದ ಶವಸಂಸ್ಕಾರ ಪದ್ಧತಿಯಾದ ಕಲ್ಲುಸೇವೆ ಮಾಡುತ್ತಾರೆ. ಅಂದರೆ ಊರಿನ ಹೊರಗೆ ಗುಡ್ಡದ ಮೇಲೆ ಕಲ್ಲುಸೇವೆಗೆ ಬೇಕಾದ ಕಲ್ಲುಗೂಡನ್ನು ಮಾಡಿರುತ್ತಾರೆ. ಇಂತಹ ಕಲ್ಲು ಗೂಡುಗಳು ಆರು ಅಡಿ ಉದ್ದ ಮೂರು ಅಡಿ ಅಗಲ ಮತ್ತು ಎರಡು ಅಡಿ ಎತ್ತರವಾಗಿರುತ್ತದೆ. ಮೇಲಿನ ಭಾಗಕ್ಕೆ ಮುಚ್ಚಲು ಅದೇ ಅಳತೆಯ ಚಪ್ಪಡಿಕಲ್ಲನ್ನು ಬಳಸುತ್ತಾರೆ. ಹೆಣವನ್ನು ಕಲ್ಲುಗೂಡಿನಲ್ಲಿ ಮಲಗಿಸಿ ನಂತರ ಕಲ್ಲು ಚಪ್ಪಡಿಯಿಂದ ಮುಚ್ಚುತ್ತಾರೆ. ಹಿಂದೆ ಕಲ್ಲುಸೇವೆ ಮಾಡಿದ ಹೆಣದ ಎಲುಬುಗಳನ್ನು ಪಕ್ಕಕ್ಕೆ ಸರಿಸಿ ಹೊಸದಾದ ಮತ್ತೊಂದು ಶವವನ್ನು ಆ ಗೂಡಿನಲ್ಲಿ ಮಲಗಿಸುತ್ತಾರೆ. ಈ ರೀತಿಯ ಕಲ್ಲುಸೇವೆಯ ಶವ ಸಂಸ್ಕಾರ ಪದ್ಧತಿ ಇಂದು ಇರುಳಿಗರಲ್ಲಿ ಕಾಣುವುದು ಅಪರೂಪವಾಗಿದೆ.

ಇತ್ತೀಚೆಗೆ ಇರುಳಿಗರು ಇತರ ಸಮುದಾಯದವರಂತೆ ಶವವನ್ನು ಹೂಳುವ ಮತ್ತು ಸುಡುವ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಆದರೆ ಹಿರಿಯರ ಅಪೇಕ್ಷೆಯ ಮೇರೆಗೆ ಇಂದಿಗೂ ಕೆಲವರು ಅಪರೂಪಕ್ಕೆ ಕಲ್ಲುಸೇವೆಯನ್ನು ಮಾಡುತ್ತಾರೆ.

ಮಕ್ಕಳು ಸತ್ತರೆ ಹುತ್ತದ ಬಳಿ ಮಣ್ಣು ಮಾಡುತ್ತಾರೆ. ಗರ್ಭಿಣಿಯರು ಸತ್ತರೆ ಕಲ್ಲು ಸೇವೆ ಅಥವಾ ಮಣ್ಣಿನಲ್ಲಿ ಹಾಕದೆ ಶವವನ್ನು ಬೆಟ್ಟದ ಬಂಡೆಗಳ ಮಧ್ಯದಲ್ಲಿ ಕುಳ್ಳಿರಿಸಿ ಶವಸಂಸ್ಕಾರಕ್ಕೆ ಬಂದವರೆಲ್ಲ

ಒಂದೊಂದು ಕಲ್ಲನ್ನು ಶವವು ಕಣ್ಣಿಗೆ ಕಾಣದಂತೆ ಕಲ್ಲು ಜೋಡಿಸುತ್ತಾರೆ. ಗರ್ಭಿಣಿ ಸತ್ತಿದ್ದರೆ ಹೊಟ್ಟೆಯೊಳಗಿನ ಕೂಸಿಗೆ ಜೀವವಿರುತ್ತದೆ ಎಂಬ ನಂಬಿಕೆಯಿಂದ ಈ ರೀತಿ ಮಾಡುತ್ತೇವೆ ಎಂದು ಹೇಳುತ್ತಾರೆ.

ಶವವನ್ನು ಸ್ಮಶಾನಕ್ಕೆ ತಂದು ಐದು ಅಡಿ ಉದ್ದ, ಮೂರು ಅಡಿ ಅಗಲವಿರುವ ಗುಂಡಿಯನ್ನು ತೆಗೆದು ಗುಂಡಿಯಲ್ಲಿ ಶವವನ್ನು ಪೂರ್ವದಿಕ್ಕಿಗೆ ಮುಖ ಮಾಡಿ ಕೂಡಿಸುತ್ತಾರೆ. ಹೆಣಕ್ಕೆ ವಿಭೂತಿ, ಬಿಲ್ವಪತ್ರೆ, ಆಲೆಮರದ ಸೊಪ್ಪನ್ನು ಶವದ ಮೇಲೆ ಹಾಕುತ್ತಾರೆ. ಬಂದ ಬಂಧುಬಾಂಧವರು ಮೂರು ಹಿಡಿ ಮಣ್ಣನ್ನು ಹಾಕುತ್ತಾರೆ. ಇರುಳಿಗರು ಮಣ್ಣು ಮಾಡುವ ಸಂಪ್ರದಾಯದ ಮೇಲೆ ವೀರಶೈವ ಪದ್ಧತಿಯ ಪ್ರಭಾವ ಬೀರಿದಂತೆ ಕಂಡುಬರುತ್ತಿದೆ. ಮಣ್ಣುಮಾಡಿದ ನಂತರ ಕೈಕಾಲು ತೊಳೆದು ಸತ್ತ ವ್ಯಕ್ತಿಯ ಮನೆಯೊಳಗೆ ತೆರಳಿ ದೀಪಕ್ಕೆ ವಂದಿಸಿ ಬೂಡುಗಳಿಗೆ ಹಿಂದಿರುಗುತ್ತಾರೆ. ಶವಸಂಸ್ಕಾರದ ನಂತರ ಸ್ನಾನ ಮಾಡುವುದಿಲ್ಲ. ಸತ್ತವರನ್ನು ಕಳುಹಿಸಿ ತಲೆ ತೊಳೆದುಕೊಳ್ಳಬಾರದೆಂಬ ನಂಬಿಕೆ ಇದೆ.

ಕುಲಗೌಡನ ಸಲಹೆಯ ಮೇರೆಗೆ ಮುಂದಿನ ದಿವಸದ ಕಾರ್ಯಕ್ರಮನ್ನು ರೂಪಿಸುತ್ತಾರೆ. ಸತ್ತ ಹನ್ನೊಂದು ದಿನಕ್ಕೆ ಅಂತ್ಯಕ್ರಿಯೆಯ ವಿಧಿ ವಿಧಾನಗಳನ್ನು ಪೂರೈಸಲಾಗುತ್ತದೆ. ಉತ್ತರಕ್ರಿಯೆಯ ದಿವಸ ಹಾಲು-ತುಪ್ಪವನ್ನು ತಿಂಡಿ-ತಿನಿಸನ್ನು ತಲೆಕಲ್ಲು ಬಳಿ ತೆಂಗಿನ ಹೊಂಬಾಳೆ, ಎಳನೀರು ಇಟ್ಟು ಮನೆಯಲ್ಲಿ ಮಾಡಿರುವ ಆಹಾರವನ್ನು ತಲೆಕಲ್ಲಿನ ಮುಂಭಾಗದಲ್ಲಿ ಇಟ್ಟು ಪೂಜೆ ಮಾಡುತ್ತಾರೆ.

ಸ್ಮಶಾನದಿಂದ ಬಂದ ನಂತರ ಹಿಮ್ಮಡಿಯನ್ನು ತೊಳೆದುಕೊಂಡು ಮನೆಯೊಳಗೆ ಹೋಗುತ್ತಾರೆ. ಮನೆಯಲ್ಲಿ ನೀರು ತುಂಬಿದ ತಂಬಿಗೆಯನ್ನಿಟ್ಟು ಸತ್ತವನಿಗೆ 'ಮನೆ ಎಡೆ' ಹಾಕುತ್ತಾರೆ. ಮನೆ ಎಡೆಗೆ ಮನೆಯಲ್ಲಿ ಮಾಡಿರುವ ಪದಾರ್ಥಗಳನ್ನು ಎಲೆಯ ಮೇಲೆ ಬಡಿಸಿ ತುಂಬಿದ ನೀರಿನ ತಂಬಿಗೆಗೆ ಪೂಜೆ ಮಾಡಿ ಮನೆಯಿಂದ ಹೊರಕ್ಕೆ ಎಲ್ಲರೂ ಬರುತ್ತಾರೆ. ಸತ್ತವರ ಆತ್ಮ ಸೂಕ್ಷ್ಮ ಶರೀರದಲ್ಲಿ ಬಂದು ಆಹಾರವನ್ನು ಭಕ್ಷಿಸುತ್ತದೆ ಎಂಬ ನಂಬಿಕೆ ಇದೆ.

೪.೫.೩ ಹೆಗಲು ತೊಳೆಯುವ ಶಾಸ್ತ್ರ

ಶವಯಾತ್ರೆಯಲ್ಲಿ ಶವವನ್ನು ಹೊತ್ತಿದ್ದ ನಾಲ್ಕು ಜನರಿಗೆ "ಹೆಗಲು ತೊಳೆಯುವ ಶಾಸ್ತ್ರ" ಇರುಳಿಗರಲ್ಲಿ ಕಂಡುಬರುತ್ತದೆ. ಹಸುವಿನ ಗಂಜಲ, ಸೀಗೆಕಾಯಿ, ಅರಿಶಿಣ, ತುಪ್ಪವನ್ನು ಗರಿಕೆಯಿಂದ ಅದ್ದಿ ಹೆಗಲಿಗೆ ಕುಲದ ಯಜಮಾನ ಮುಟ್ಟಿಸುತ್ತಾನೆ. ಇದರಿಂದ ಸತ್ತವರ ಋಣ ಮುಗಿಯಿತು ಎಂಬ ನಂಬಿಕೆ ಇದೆ. ನಂತರ ಶವಸಂಸ್ಕಾರಕ್ಕೆ ಬಂದ ಬಂಧುಗಳೆಲ್ಲರೂ ಊಟ ಮಾಡುತ್ತಾರೆ. ಹಾಲು ತುಪ್ಪದ ರಾತ್ರಿ ಸತ್ತವ್ಯಕ್ತಿಯ ಆತ್ಮವನ್ನು 'ಕಣಿಗಾರನ' ಮೇಲೆ ಆಹ್ವಾನಿಸಿ ಮುಂದಿನ ಆಗು-ಹೋಗುಗಳನ್ನು ಅವನ ಬಾಯಿಂದ ಕೇಳುವ ವಿಶಿಷ್ಟವಾದ ಆಚರಣೆಯು ಈ ಸಮುದಾಯದಲ್ಲಿ ಇಂದಿಗೂ ಉಳಿದುಕೊಂಡು ಬಂದಿದೆ.

೪.೫.೪. ಕಲ್ಲು ಸೇವೆ ಪ್ರಾರಂಭಿಸಲು ಇರಬಹುದಾದ ಕಾರಣಗಳು

* ಮನುಷ್ಯ ಬದುಕಿದ್ದಾಗ ಎಷ್ಟು ಜನರಿಗೆ ಉಪಯುಕ್ತನಾಗಿದ್ದನು ಇಲ್ಲವೋ ತಿಳಿಯದು ಸತ್ತ ನಂತರವಾದರೂ ಪ್ರಾಣಿ–ಪಕ್ಷಿ ಕೀಟಗಳಿಗೆ ಆಹಾರವಾಗಿ ಸದ್ಬಳಕೆಯಾಗಬೇಕು ಎಂಬ ಉದಾತ್ತ ಮನೋಭಾವನೆ ಕಲ್ಲುಸೇವೆಗೆ ಪೂರಕವಾಗಿರಬಹುದು.

* ಮನುಷ್ಯ ಜೀವನದಲ್ಲಿ ಏನೆಲ್ಲ ಮಾಡಿದರೂ ಕಡೆಗೊಮ್ಮೆ ಎಲ್ಲವನ್ನು ಬಿಟ್ಟು ಬರಿ ಮೂಳೆ ಯಾಗಿ ಹೋಗುತ್ತಾನೆ ಎಂಬ ಸತ್ಯವನ್ನು ಪುನರ್‌ಜ್ಞಾಪಿಸುವುದಕ್ಕೆ ಕಲ್ಲುಸೇವೆ ಪ್ರಾರಂಭ ವಾಗಿರಬಹುದು.

* ತಮ್ಮ ಪೂರ್ವಜರ ನೆನಪು ಸದಾ ಇರಲಿ ಎಂಬ ಮನೋಭಾವನೆಯಿಂದ ಕಲ್ಲುಗುಡಿಗಳಲ್ಲಿ ಅವರ ಮೂಳೆಗಳನ್ನು ನೋಡಿದಾಗ ಅವರ ನೋಡಿದಷ್ಟು ತೃಪ್ತಿ ಪಟ್ಟುಕೊಳ್ಳಲು ಸತ್ತವರ ನೆನಪು ಶಾಶ್ವತವಾಗಿ ಇರಲಿ ಎಂಬ ಕಾರಣಕ್ಕಾಗಿ ಈ ಆಚರಣೆ ಪ್ರಾರಂಭಿಸಿರಬಹುದು.

* ಇವರು ಮೂಲತಃ ಕಾಡಿನ ವಾಸಿಗಳಾದ್ದರಿಂದ ಸತ್ತವ್ಯಕ್ತಿಗಳನ್ನು ಹೂಳಲು ಮತ್ತು ಸುಡಲು ತಿಳಿಯದ ಕಾಲಘಟ್ಟದಲ್ಲಿ ಇಂತಹ ಆಚರಣೆ ಪ್ರಾರಂಭವಾಗಿರಬಹುದು.

೪.೫.೬ ಇರುಳಿಗರ ಶವಸಂಸ್ಕಾರದ ವೈಶಿಷ್ಟ್ಯಗಳು

* ಕಲ್ಲುಸೇವೆಯಂತಹ ವಿಶಿಷ್ಟವಾದ ಶವಸಂಸ್ಕಾರ ಪದ್ಧತಿ.
* ಸತ್ತವ್ಯಕ್ತಿಯನ್ನು ಹೊತ್ತುಕೊಂಡ ವ್ಯಕ್ತಿಗಳಿಗೆ ಹೆಗಲು ತೊಳೆಯುವ ಸಂಪ್ರದಾಯ
* ಶವವನ್ನು ಪ್ರಾರಂಭದಿಂದ ಅಂತ್ಯಸಂಸ್ಕಾರದವರೆಗೂ ನಾಲ್ಕು ಜನ ಮಾತ್ರ ಹೊರುವುದು.
* ತಲೆಕಲ್ಲು ಗುಡ್ಡ ಸಮುದಾಯದ ಮತ್ತೊಂದು ವಿಶೇಷ
* ಶವಸಂಸ್ಕಾರದ ನಂತರ ಸ್ನಾನ ಮಾಡದೆ ಇರುವುದು.
* ಶವಯಾತ್ರೆಯ ಜೊತೆಯಲ್ಲಿ ಕೀರೆಬೀಜ, ಜೀರಿಗೆ, ಎಳ್ಳನ್ನು ಎರಚುವುದು.
* ಹನ್ನೊಂದನೇ ದಿನ ಸತ್ತವರ ಆತ್ಮವನ್ನು ಕಣೆಗಾರನ ಮೇಲೆ ಆಹ್ವಾನಿಸಿ ಮಾತನಾಡುವುದು.

೪.೫.೭ ಶವಸಂಸ್ಕಾರ ಪದ್ಧತಿಯಲ್ಲಿನ ಬದಲಾವಣೆ

ಇರುಳಿಗ ಬುಡಕಟ್ಟಿನ ಸಮುದಾಯದಲ್ಲಿ ತಮ್ಮ ಮೂಲ ನೆಲೆಗಳು ಬದಲಾವಣೆ ಹೊಂದಿ ಇತರೆ ಸಮುದಾಯದವರು ವಾಸಿಸುವ ಸ್ಥಳಗಳಲ್ಲಿ ಇವರು ವಾಸಿಸುತ್ತಿರುವುದರಿಂದ ಇಂತಹ ಸ್ಥಳಗಳಲ್ಲಿ ಶವವನ್ನು ಕಲ್ಲುಗೂಡಿನಲ್ಲಿ ಇಡುವುದರಿಂದ ಶವಕೊಳೆತ ವಾಸನೆ ಬರುವುದರಿಂದ ಇತರೆ ಸಮುದಾಯದವರ ಟೀಕೆ ಟಿಪ್ಪಣಿಗಳಿಂದ ಶವಸಂಸ್ಕಾರ ಪದ್ಧತಿಯನ್ನು ಬದಲಾಯಿಸಿಕೊಂಡಿದ್ದಾರೆ. ಅರಣ್ಯ ಇಲಾಖೆವರು ಇವರು ಶವಸಂಸ್ಕಾರ ನಡೆಸುತ್ತಿದ್ದ ಪ್ರದೇಶಕ್ಕೆ ಹೋಗಲು ಅವಕಾಶ ನೀಡಿದ ಕಾರಣ ಹಾಗೂ ಹಿಂದೆ

ಶವಸಂಸ್ಕಾರ ಸ್ಥಳಗಳಲ್ಲಿ ಕಲ್ಲು ಗಣಿಗಾರಿಕೆ ನಡೆಯುತ್ತಿರುವುದರಿಂದ ಕಲ್ಲುಗುಡಿಗಳು ನಾಶವಾಗಿದ್ದ ಇವರು ತಮ್ಮ ಹಿಂದಿನ ಕಲ್ಲುಸೇವೆಯನ್ನು ಕೈಬಿಡಲು ಕಾರಣವಾಗಿದೆ.

ಹಿಂದೆ ಕುಲದ ಯಜಮಾನನ ಮುಖಂಡತ್ವದಲ್ಲಿ ನಡೆಯುತ್ತಿದ್ದ ಉತ್ತರಕ್ರಿಯಾಧಿಗಳು ಇಂದು ಪುರೋಹಿತರ ಆಗಮನದೊಂದಿಗೆ ಪ್ರಾರಂಭವಾಗುತ್ತಿದೆ. ಅನ್ಯ ಸಮುದಾಯದ ಸಂಸ್ಕೃತಿ ಮತ್ತು ಸಂಪ್ರದಾಯಗಳ ಅನುಕರಣೆ ಹಾಗೂ ತಮ್ಮ ಸಮುದಾಯದ ಶ್ರಮ ಸಂಸ್ಕೃತಿಯ ಬಗ್ಗೆ ಉದಾಸೀನತೆ ಇಂದಿನ ಯುವಪೀಳಿಗೆಯ ಇರುಳಿಗರಲ್ಲಿ ಕಂಡುಬರುತ್ತಿದೆ. ವಿಶಿಷ್ಟವಾದ ಕಲ್ಲುಸೇವೆಯಂತಹ ಒಂದು ಸಾಂಸ್ಕೃತಿಕ ಸಂಪ್ರದಾಯ ಕಣ್ಮರೆಯಾಗುತ್ತಿದ್ದು, ರಾಮನಗರದ ಬೆಟ್ಟದ ಪ್ರದೇಶದಲ್ಲಿ ಮತ್ತು ಮಾಗಡಿ ಸಾವನದುರ್ಗದ ಅರಣ್ಯಕ್ಕೆ ಹತ್ತಿರವಿರುವ ಪ್ರದೇಶದಲ್ಲಿ ಅಲ್ಪಸ್ವಲ್ಪ ಕಾಣಸಿಗುತ್ತದೆ. ಕನಕಪುರ ಮತ್ತು ಚನ್ನಪಟ್ಟಣದಲ್ಲಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹಾಗೂ ವ್ಯಕ್ತಿ ಅಧ್ಯಯನದ ಸಮಯದಲ್ಲಿ ಅಲ್ಲಿನ ಸಮುದಾಯದ ಜನರಿಗೆ ಈ ಆಚರಣೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇರುವುದು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಮುಂದಿನ ತಲೆಮಾರಿಗೆ ಸಂಪೂರ್ಣವಾಗಿ ನಶಿಸುವ ಎಲ್ಲಾ ಲಕ್ಷಣಗಳು ಗೋಚರಿಸುತ್ತಿದೆ.

೪.೬. ವಾರ್ಷಿಕಾವರ್ತನ ಆಚರಣೆಗಳು

ಪ್ರಕೃತಿಯ ಮಡಿಲಲ್ಲಿ ಬದುಕುವ ಬುಡಕಟ್ಟು ಸಮುದಾಯಗಳು ತಾವು ವಾಸಿಸುವ ಸ್ಥಳದಲ್ಲಿ ಕಾಣುವ ಮರ-ಗಿಡ, ನೆಲ-ಜಲ, ಕಲ್ಲು-ಮಣ್ಣು, ಪ್ರಾಣಿ-ಪಕ್ಷಿ ಮೊದಲಾದ ನೈಸರ್ಗಿಕ ಚರಾಚರ ವಸ್ತುಗಳಲ್ಲಿ ಒಂದು ಶಕ್ತಿ ಅಡಗಿದೆ ಎಂದು ನಂಬಿದವರು. ರೋಗ ಪೀಡಿತರಾದಾಗ, ಕಷ್ಟಗಳು ಒದಗಿದಾಗ ಬೆಳೆ ನಾಶವಾದಾಗ ರಕ್ಷಣೆ ಪಡೆಯಲು ಆ ಶಕ್ತಿಯ ಮೊರೆಹೋಗುತ್ತಾರೆ. ಇದಲ್ಲದೆ ಪೂರ್ವಜರ ಆತ್ಮಗಳು ತಮ್ಮನ್ನು ಪೊರೆಯುತ್ತವೆ ಎಂದು ನಂಬಿದವರು ಇವರು. ಬುಡಕಟ್ಟು ಜನರು ಮಾತ್ರ ದೈವಾರಾಧನೆಗಳಿಗೆ ಪ್ರಮುಖ ಸ್ಥಾನ ನೀಡಿದ್ದಾರೆ. ಇದಕ್ಕೆ ಇರುಳಿಗರು ಹೊರತಾಗಿಲ್ಲ. ಇರುಳಿಗರು ತಮ್ಮದೇ ಆದ ಹಬ್ಬ ಆಚರಣೆಗಳ ಜೊತೆಗೆ ಇತರ ಸಮುದಾಯಗಳು ಸಾಮಾನ್ಯವಾಗಿ ಆಚರಿಸುವ ಯುಗಾದಿ, ದಸರಾ ಮುಂತಾದ ಹಬ್ಬಗಳನ್ನೂ ಆಚರಿಸುತ್ತಾರೆ.

೪.೬.೧. ಗದ್ದಿಗೆ ಪೂಜೆ / ಹಿರಿಯರ ಹಬ್ಬ

ಪ್ರಕೃತಿಗೂ ಯುಗಾದಿಗೂ ಸಹ ಸಂಬಂಧ ಇರುವಂತೆ ಇರುಳಿಗ ಸಮುದಾಯದ ಜನರಿಗೂ ಈ ಹಬ್ಬಕ್ಕೂ ಅನ್ಯೋನ್ಯ ಸಂಬಂಧ ಇದೆ. ಯುಗಾದಿ ಹಬ್ಬದ ಸಂದರ್ಭದಲ್ಲಿ ಕಾಲವಾದ ಹಿರಿಯ ಚೇತನಗಳ ಸಮಾದಿ ಕಲ್ಲಿನ ಗದ್ದಿಗೆ ಪೂಜೆ ಸಲ್ಲಿಸುವ ಸಂಪ್ರದಾಯ ಹಿಂದಿನಿಂದಲೂ ಪಾಲಿಸಿಕೊಂಡು ಬಂದಿದ್ದಾರೆ. "ಇರುಳಿಗರ ಆಚರಣೆಗಳಲ್ಲಿ ಪ್ರಥಮ ಹಂತ ಅವರ ಹಿರಿಯರ ಪೂಜೆಯೇ ಆಗಿದೆ"[೧೧] ಯುಗಾದಿಯಂದು ತಮ್ಮ ಹಿರಿಯರ ಸಮಾಧಿ ಸ್ಥಳಕ್ಕೆ ಹೋಗಿ ಪೂಜೆ ಸಲ್ಲಿಸಿ ಬರುತ್ತಾರೆ. ಮನೆಯಲ್ಲಿ ಹಿರಿಯರ ಹೆಸರಿನಲ್ಲಿ ಎಡೆಯನ್ನು ಹಾಕಿ ಆರಾಧನೆ ಮಾಡಿ ಎಡೆಯನ್ನು ಹಾಕಿರುವ ಸ್ಥಳದಿಂದ ಸ್ವಲ್ಪ ಸಮಯ ಎಲ್ಲರೂ ಹೊರಗೆ ಬರುತ್ತಾರೆ. ಈ ಸಮಯದಲ್ಲಿ ಆತ್ಮಗಳು ಬಂದು ಎಡೆ ಹಾಕಿರುವ

ಆಹಾರ ಸೇವಿಸುತ್ತವೆ ಎಂಬ ನಂಬಿಕೆ ಇದೆ. ಹಿರಿಯರಿಗೆ ಅಂದು ಅರ್ಪಿಸಿದ ಹೊಸ ಬಟ್ಟೆಯನ್ನು ಮನೆಯವರೆಲ್ಲ ಪೂಜೆ ಸಲ್ಲಿಸಿ ಧರಿಸುತ್ತಾರೆ. ಯುಗಾದಿಯ ಮೂರನೇ ದಿನವನ್ನು "ವರ್ಷದ ತೊಡಕು" ಎಂದು ಆಚರಿಸಿ ಮಾಂಸಾಹಾರವನ್ನು ತಂದು ಹಿರಿಯರಿಗೆ ಎಡೆ ಹಾಕುವ ಸಂಪ್ರದಾಯವಿದೆ. ಯುಗಾದಿ ಹಬ್ಬವು ಇರುಳಿಗರ ಸಮುದಾಯದಲ್ಲಿ ಹಿರಿಯರನ್ನೇ ಸ್ಮರಿಸುವ ಹಬ್ಬವಾಗಿ ಪರಿಗಣಿಸಲ್ಪಟ್ಟಿದೆ.

೪.೬.೨. ಗೌರಿ ಹಬ್ಬ

ಗೌರಿ ಹಬ್ಬದಲ್ಲಿ ನಾಗಾರಾಧನೆ ಆಚರಣೆ ಮಾಡಲಾಗುತ್ತದೆ. ಈ ಆಚರಣೆಯ ಕುರಿತು ಹಿ.ಚಿ. ಬೋರಲಿಂಗಯ್ಯನವರು ಹೀಗೆ ಅಭಿಪ್ರಾಯಪಡುತ್ತಾರೆ "ಒಂದು ಕಾಲಕ್ಕೆ ಇರುಳಿಗರು ನಾಗಾರಾಧಕರೂ ಆಗಿರಬಹುದು ಎಂದೆನಿಸುತ್ತದೆ."[೨] ಗೌರಿ ಹಬ್ಬದಲ್ಲಿ ಇರುಳಿಗರು ನಾಗನ ಪ್ರತೀಕವಾಗಿ ಮುನೇಶ್ವರನಿಗೆ ಪೂಜೆ ಸಲ್ಲಿಸುವುದು ಕಂಡುಬರುತ್ತದೆ. ಇವರ ನಾಗಸಂಬಂಧಿ ದೇವರುಗಳೆಂದರೆ ಕಾಡುಮುನಿ. ಬೇಟೆಮುನಿ, ರಕ್ತಮುನಿ, ಗಣಮುನಿ, ಕಾಚಕ್ಕೆಮುನಿ, ಕುಯ್ಲಿಮುನಿ ಹಾಗೂ ತೊಟ್ಟಿಲುಮುನಿ, ಗಣಮುನಿ, ತೋಟದಮುನಿ ಹೀಗೆ ಎಲ್ಲಾ ಮುನಿಗಳ ಆಚರಣೆಗಳು ನಾಗಾರಾಧನೆಯ ಇತರ ರೂಪಗಳಾಗಿ ಗೋಚರಿಸುತ್ತದೆ.

೪.೬.೩. ಈರಬ್ಬ / ಕುಲದ ಹಿರಿಯರ ಹಬ್ಬ

ಸಮುದಾಯದಲ್ಲಿ ಕುಲದ ಹಿರಿಯರ ಆರಾಧನೆಗೆ ಮೊದಲ ಪ್ರಾಶಸ್ತ್ಯವಾದರೂ ಬೇರೆ-ಬೇರೆ ಕಡೆಗೆ ಮಾತೃದೇವತಾ ಆರಾಧನೆಯು ಪ್ರಮುಖ ಸ್ಥಾನ ಪಡೆದಿದೆ. ಬರೆಯಮ್ಮ, ಏಳೆಯಮ್ಮ ಇರುಳಿಗ ಸಮುದಾಯದ ಮಾತೃದೇವತೆಯರಾಗಿದ್ದು ಬಹುತೇಕರು ಇಂದಿಗೂ ಈ ದೇವತೆಯ ಹೆಸರನ್ನು ಇಟ್ಟುಕೊಂಡಿರುವುದು ದೇವತೆಯ ಆರಾಧನೆಯ ಗಾಢತೆಯನ್ನು ತೋರಿಸುತ್ತದೆ. ಈ ಹಬ್ಬವನ್ನು ಮೂರು ವರ್ಷಗಳಿಗೊಮ್ಮೆ ಆಚರಿಸುತ್ತಾರೆ. ಹಬ್ಬಕ್ಕೆ ದೊಡ್ಡ ಹಬ್ಬ ಅಥವಾ ದೊಡ್ಡದೇವರ ಹಬ್ಬ ಎಂದು ಸಹ ಕರೆಯಲಾಗುತ್ತದೆ. ಈರಬ್ಬವನ್ನು ಸಮುದಾಯದ ಎಲ್ಲಾ ಜನರು ಒಟ್ಟಾಗಿ ಸೇರಿ ಆಚರಣೆ ಮಾಡುವ ಸಂಪ್ರದಾಯ ಉಳಿಸಿಕೊಂಡು ಬಂದಿದ್ದಾರೆ. ಸತ್ತವರು ಸ್ವರ್ಗದಲ್ಲಿ ಸುಖವಾಗಿರಲು ಪ್ರತಿ ವರ್ಷಕ್ಕೊಮ್ಮೆ ಆಚರಣೆ ನಡೆಸಲಾಗುತ್ತದೆ. ಈರಬ್ಬ ಮಾಡದೇ ಹೋದರೆ ಸತ್ತವರು ಭೂತಗಳಾಗಿ ಕಾಡುತ್ತಾರೆ ಎಂಬ ನಂಬಿಕೆಯಿದೆ.

ಪಿತೃಪೂಜೆ ಮತ್ತು ಮಾತೃದೇವರ ಆರಾಧನೆಯು ವಿಶಿಷ್ಟವಾಗಿದೆ. ಈ ಹಬ್ಬವನ್ನು ಸಮುದಾಯದ ಎಲ್ಲಾ ಜನರು ಸೇರಿ ಮಾಗಡಿ ತಾಲೂಕಿನ ಜೋಡಿಗಟ್ಟೆಯಲ್ಲಿ ಆಚರಿಸುತ್ತಾರೆ. ಮೂರು ವರ್ಷಗಳಿಗೊಮ್ಮೆ ಈ ಹಬ್ಬ ಆಚರಿಸಲಾಗುತ್ತದೆ. ಹಬ್ಬಕ್ಕೆ ಮೊದಲು ಕಣಿಶಾಸ್ತ್ರ ಹೇಳುವ ಕಣಿಗಾರನಿಂದ ಹಬ್ಬ ಎಂದು ಮಾಡಬೇಕು ಎಂದು ದೈವದ ಹಿರಿಯರು ಕೇಳುತ್ತಾರೆ. ಹಬ್ಬ ಇಂಥ ದಿನ ಮಾಡಬೇಕು ಎಂದು ಕಣಿಗಾರನಿಂದ ಸೂಚನೆ ದೊರೆತ ನಂತರ ಕುಲಸ್ಥರೆಲ್ಲರೂ ಕುಲ ಪಂಚಾಯಿತಿ ಸೇರಿ ಹಬ್ಬದ ತಯಾರಿಗೆ ತೀರ್ಮಾನ ಕೈಗೊಳ್ಳುತ್ತಾರೆ. ಹಿಂದೆ ಜೋಡಿಗಟ್ಟೆ ಒಂದರಲ್ಲೇ ನಡೆಯುತ್ತಿದ್ದ ಆಚರಣೆಯು ಇಂದು ಇರುಳಿಗರ ಬೇರೆ ನೆಲೆಗಳಲ್ಲಿಯೂ ಆಚರಿಸಲಾಗುತ್ತದೆ. ಸಮುದಾಯದ ಕುಟುಂಬಗಳಲ್ಲಿ ಹಬ್ಬದ ಸಿದ್ಧತೆ ಪ್ರಾರಂಭವಾಗುವುದರ ಹಿನ್ನೆಲೆಗೆ ಕೆಲವು ನಿಯಮಗಳು ಜಾರಿಯಾಗುತ್ತವೆ.

ಹಬ್ಬ ಘೋಷಣೆಯಾದ ನಂತರ ಸಮುದಾಯದ ಯಾವ ಮನೆಗಳಲ್ಲಿ ಮಾಂಸಾಹಾರ ಮಾಡುವುದನ್ನು ನಿಷೇಧಿಸಲಾಗುತ್ತದೆ. ಹಾಗೆಯೇ ಮೆಣಸಿನಕಾಯಿ ಸುಡುವುದು ಹಾಗೂ ಘಾಟು ವಾಸನೆ ಉಂಟು ಮಾಡುವ ಯಾವ ಪದಾರ್ಥವನ್ನೂ ಕರಿಯುವುದನ್ನು ಮಾಡಬಾರದು.

ದೇವಿಯನ್ನು ಪೂಜಿಸುವ ಗುಡ್ಡನು ಹಬ್ಬಕ್ಕೆ ಏಳು ದಿನಗಳ ಮೊದಲು ಉಪವಾಸವಿದ್ದು ಪ್ರಕೃತಿಯಿಂದ ನೇರವಾಗಿ ದೊರೆಯುವ ಹಣ್ಣು, ಹಾಲು, ಎಳನೀರು, ಹಸಿಗೆಣಸು ಮಾತ್ರ ಸೇವಿಸಬಹುದು. ದೇವರ ಗುಡ್ಡನು ಮೈಲಿಗೆಗೆ ಒಳಗಾಗಬಾರದು.

ಹಬ್ಬದ ದಿನದಂದು ಕಣಿಗಾರನ ಮನೆಯಲ್ಲಿನ ದೇವಿಯ ಮೂರ್ತಿಗಳು ಕಳಸ ಕನ್ನಡಿಯ ಸಮೇತವಾಗಿ ಬೂಡಿನ ಹೊರಭಾಗಕ್ಕೆ ಅರೆಬಂಡೆಯ ಬಳಿ ತರಲಾಗುತ್ತದೆ. ಅತ್ತಿಮರ ಅಥವಾ ಆಲೆ ಮರದ ಬಳಿ ದೇವರ ಮೂರ್ತಿಗಳನ್ನು ಸ್ಥಾಪಿಸಲಾಗುತ್ತದೆ. ದೇವಿಯ ಮೂರ್ತಿಯ ಮುಂಭಾಗದಲ್ಲಿ ಅಡಿಕೆ ಹೊಂಬಾಳೆ, ಹೂಗಳಿಂದ ಅಲಂಕರಿಸಿದ ಕುಂಬವನ್ನು ಇರಿಸುತ್ತಾರೆ. ಈ ದೇವತೆಗಳ ಪೂಜೆಗಾಗಿ ಥಳಿಗೆ ಪ್ರಸಾದ ತಯಾರಿಸುತ್ತಾರೆ. ಪ್ರಸಾದ ಸಿದ್ಧಪಡಿಸುವಾಗ ಹಲವು ನೀತಿ ನಿಯಮಾವಳಿಗಳು ಇದ್ದು ಹಚ್ಚಿರುವ ಒಲೆ ಆರಿದರೆ ಬಾಯಿಯಿಂದ ಊದದೆ ಸೊಪ್ಪಿನಿಂದ ಗಾಳಿ ಬಿಸಿ ಒಲೆ ಉರಿಯುವಂತೆ ಮಾಡಬೇಕು. ಪ್ರಸಾದ ತಯಾರಿಸುವವರ ನೆರಳು ಅಡುಗೆ ಮೇಲೆ ಬೀಳದಂತೆ ಎಚ್ಚರ ವಹಿಸಬೇಕು ಈ ಸ್ಥಳಕ್ಕೆ ಅನ್ಯ ಸಮುದಾಯದ ಜನರು ಪ್ರವೇಶಿಸಬಾರದು. ಇತರರು ಬರುವುದರಿಂದ ಸೂತಕವಾಗುತ್ತದೆ ಎಂಬ ನಂಬಿಕೆ ಇದೆ. ಪೂಜೆ ನೆರವೇರಿಸುವ ಕಣಿಗಾರ ಬಾಯಿ ಮತ್ತು ಮೂಗಿಗೆ ಬಟ್ಟೆ ಕಟ್ಟಿಕೊಂಡು ಪೂಜೆ ನೆರವೇರಿಸುತ್ತಾನೆ. ಪೂಜಾಕಾರ್ಯ ಮುಗಿಯುತ್ತಿದ್ದಂತೆ ಈತನ ಮೇಲೆ ದೇವರ ಆವಾಹನೆಯಾಗಿ ಭಕ್ತರಿಗೆ ಹೇಳಿಕೆ ಹೇಳುತ್ತಾನೆ. ಈ ದೇವಿಗೆ ಪ್ರಾಣಿ ಬಲಿ ನಿಷಿದ್ಧವಿದ್ದು ಈಕೆಯನ್ನು 'ಚೊಕ್ಕ ಭೋಜನದ ಅಮ್ಮ' ಎಂದು ಹೇಳುತ್ತಾರೆ.

ನಂತರ ಮತ್ತೊಂದು ಅರೆ ಬಂಡೆಯ ಮೇಲೆ ದೂತರೆಂಬ ದೇವತೆಗಳನ್ನು ಸ್ಥಾಪಿಸಿರುತ್ತಾರೆ. ಈ ದೇವತೆಗಳನ್ನು ಸಮುದಾಯದ ಹಿರಿಯ ಪಿತೃದೇವತೆಗಳೆಂದು ಕರೆಯುತ್ತಾರೆ. ಇವು ಕುಲದ ಹಿರಿಯ ದೇವತೆಗಳಾಗಿರುವುದರಿಂದ ಹಬ್ಬಕ್ಕೆ ಬಂದಿರುವ ಸಮುದಾಯದ ಪ್ರತಿ ಊರಿನ ಕೋಲು ಗೌಡರು ಬಂದು ಗೌರವ ಸಲ್ಲಿಸುತ್ತಾರೆ. ಅನಂತರ ಈ ದೇವತೆಗಳಿಗೆ ಕುರಿಯನ್ನು ಬಲಿ ಕೊಡುವ ಪದ್ಧತಿಯಿದೆ. ಬಲಿ ನೀಡುವ ಮೊದಲು ಕುರಿಯ ಮೈಮೇಲೆ ನೀರು ಮತ್ತು ಹೂ ಹಾಕಿ ಪೂಜಿಸುತ್ತಾರೆ. ಬಲಿಯಾಗುವ ಪ್ರಾಣಿ ಮೈ ಕೊಡದಿದ್ದರೆ ನಾಡಗೌಡ, ಕೋಲುಕಾರ ಮತ್ತು ಸಮುದಾಯದ ಹಿರಿಯರು ಪಿತೃದೇವತೆಗಳ ಮುಂದೆ ತಿಳಿಯದೇ ಆಗಿರುವ ಪ್ರಮಾದಕ್ಕೆ ಕ್ಷಮಿಸುವಂತೆ ಪ್ರಾರ್ಥಿಸಿ ಬಲಿಯಾಗುವ ಪ್ರಾಣಿಯ ಮೈಮೇಲೆ ನೀರು, ಹೂ ಹಾಕಿ ಪ್ರಾಣಿಯು ಮೈ ಕೊಡವಿದ ನಂತರ ಪಿತೃದೇವತೆಗಳು ಸಮ್ಮತಿ ಸೂಚಿಸಿವೆ ಎಂದು ತಿಳಿದು ಬಲಿ ಸಿದ್ಧತೆ ಮಾಡಿಕೊಳ್ಳುತ್ತಾರೆ. ಬಲಿ ಸಮಯದಲ್ಲಿ ಕುರಿಯ ತಲೆಯ ಭಾಗದಿಂದ ಬರುವ ರಕ್ತವನ್ನು ಪಾತ್ರೆಯೊಂದರಲ್ಲಿ ಸಂಗ್ರಹಿಸುತ್ತಾರೆ. ಬಲಿ ನೀಡಿದ ಪ್ರಾಣಿಯ ಸುತ್ತ ಹಲವು ಯುವಕರು ಒಬ್ಬರ ಹೆಗಲ ಮೇಲೆ ಒಬ್ಬರು ಕೈಹಾಕಿ ಪಿತೃದೇವತೆಗಳನ್ನು ನೋಡುತ್ತಾ

ನೃತ್ಯ ಮಾಡುತ್ತಾರೆ. ಈ ಸಂದರ್ಭದಲ್ಲಿ ಈ ಗುಂಪಿನ ಯಾರಾದರೂ ಇಬ್ಬರು ಅಥವಾ ಮೂವರು ಯುವಕರಿಗೆ ಹಿರಿಯರ ಆತ್ಮಗಳು ಪ್ರವೇಶವಾಗುತ್ತವೆ. ಪಾತ್ರೆಯಲ್ಲಿ ರಕ್ತ ಹಿಡಿದು ನಿಂತಿರುವವನ ಬಳಿ ತೆರಳಿ ಕ್ಷಣಾರ್ಧದಲ್ಲಿ ರಕ್ತವನ್ನು ಹೀರುತ್ತಾರೆ. ಈ ಸಂದರ್ಭದಲ್ಲಿ ಸಮುದಾಯದ ಜನರು ತಮ್ಮ ಹಿರಿಯರ ಆತ್ಮಗಳಿಗೆ ಗೌರವವನ್ನು ಸಮರ್ಪಿಸುತ್ತಾರೆ.

೪.೬.೪. ಪರ

ಪೂಜಾ ವಿಧಿವಿಧಾನಗಳು ಮುಗಿದ ನಂತರ ಸಾಮೂಹಿಕ ಭೋಜನದ ವ್ಯವಸ್ಥೆ ಮಾಡಿರುತ್ತಾರೆ. ಇದನ್ನು 'ಪರ' ಎಂದು ಕರೆಯುತ್ತಾರೆ. ಪರ ಎಂದರೆ ದೇವರ ಹೆಸರಿನಲ್ಲಿ ಸಾರ್ವಜನಿಕವಾಗಿ ಭೋಜನ ಮಾಡುವ ವ್ಯವಸ್ಥೆ. "A yearly feast at wich villegers, forit bailed and heaped up out side of villege is frent of an hidol, and eat it it he common"[13] ಎಂದು ಹೇಳುತ್ತಾರೆ.

ಪೂಜಾ ವಿಧಿವಿಧಾನಗಳು ಮುಗಿದು ಬಲಿಪ್ರಾಣಿಯಿಂದ ಬಂದ ಮಾಂಸವನ್ನು ಅಡುಗೆ ಮಾಡಿ ಹಿರಿಯರ ಪ್ರಸಾದವೆಂದು ಹಬ್ಬಕ್ಕೆ ಬಂದ ಸಮುದಾಯದ ಎಲ್ಲಾ ನೆಂಟರಿಷ್ಟರೊಡನೆ ಸಾಮೂಹಿಕವಾಗಿ ಊಟ ಮಾಡುತ್ತಾರೆ. ಇದಾದ ತರುವಾಯ ಕೊನೆಗೆ ಸೀಗೆಕಲ್ಲು ಮುನೇಶ್ವರ ಆರಾಧನೆ ನಡೆಯುತ್ತದೆ. ಇದು ನಾಗಾರಾಧನೆಯ ಮತ್ತೊಂದು ರೂಪ. ಚಪ್ಪಟೆ ಕಲ್ಲಿನಾಕಾರದ ನಾಗಶಿಲ್ಪ ಹೋಲುವ ಕಲ್ಲಿಗೆ ಹಾಲು ಎರೆದು ಪೂಜಿಸುತ್ತಾರೆ. ಇರುಳಿಗರಲ್ಲಿ ಪ್ರತಿ ಹಂತದಲ್ಲಿ ನಾಗಾರಾಧನೆಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿರುವುದು ಇದರಿಂದ ತಿಳಿಯುತ್ತದೆ.

೪.೬.೫. ಇರುಳಿಗರ ಮಾತೃದೇವತಾ ಆಚರಣೆಗಳು

ಇರುಳಿಗ ಸಮುದಾಯದಲ್ಲಿ ಹಿರಿಯರ ಪೂಜೆಗೆ ಕೊಡುವಷ್ಟೇ ಮಹತ್ವವನ್ನು ಮಾತೃದೇವತಾ ಆರಾಧನೆಗೂ ನೀಡುತ್ತಾರೆ. ಬಹುತೇಕ ತಮ್ಮ ನೆಲೆಗಳ ಸಮೀಪದಲ್ಲೇ ಇಂತಹ ಆಚರಣೆಯನ್ನು ಆಚರಿಸುತ್ತಿರುವುದು ಗೋಚರಿಸುತ್ತದೆ. ಮಾತೃದೇವತಾ ಆರಾಧನೆಯು ಮಾತೃಕುಟುಂಬ ಪದ್ಧತಿಯ ಕುರುಹು. ಇವರು ಆರಾಧಿಸುವ ಮಾತೃ ದೇವತೆಗಳೆಂದರೆ ಮಾರಮ್ಮ, ಬಾಣಾಂತಮ್ಮ, ಮದ್ದೂರಮ್ಮ, ಆದಿಶಕ್ತಿ, ಸಿಡಿದೇವಮ್ಮ, ಕಬ್ಬಾಳಮ್ಮ, ಬಿಸಿಲಮ್ಮ, ಬರಗಮ್ಮ, ಕರಗದಮ್ಮ ಡಾ. ಶಂಬಾಜೋಷಿ ಅವರ ಅಭಿಪ್ರಾಯದಂತೆ "ಮಾರಿಯು ಉಗ್ರದೇವತೆ; ಮಹಾರಾಷ್ಟ್ರದಲ್ಲಿನ ಮಹಾಮಾಯ ಮಾಯಮ್ಮಾ ದೇವಿಯಾಗಿದ್ದಾಳೆ. ಮರಿ ಆಯಿ ಕನ್ನಡಿಗರ ಮಾತಿನಲ್ಲಿ ಮಾರಿ ಆಗಿದ್ದಾಳೆ ಹೇಳುತ್ತಾರೆ".[೧೪] ಆದರೆ ಬುಡಕಟ್ಟು ಸಮುದಾಯದಲ್ಲಿ ಮಾತೃಕುಟುಂಬ ಪದ್ಧತಿಯ ಕುರುಹೇ ಈ ಆಚರಣೆಯಾಗಿ ಪರಿವರ್ತನೆ ಹೊಂದಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

೪.೬.೬. ಮಾರಿಹಬ್ಬ

ಇರುಳಿಗ ಸಮುದಾಯದ ಜನರು ವರ್ಷಂಪ್ರತಿ ಆಚರಿಸುವ ಹಬ್ಬ ಮಾರಿಹಬ್ಬವಾಗಿದೆ ಬೇಸಿಗೆ ಸಮಯದಲ್ಲಿ ಗ್ರಾಮದ ಮಕ್ಕಳಿಗೆ ಬರುವ ಕಾಯಿಲೆಗಳಾದ ಗದ್ದಿಕಟ್ಟಿ, ಗದ್ದಿಮೂರೆ, ಅಮ್ಮ ಆಗುವುದು, ಮೈಮೇಲೆ ಕೆಂಪು ಚಿಕ್ಕ ಆಕಾರದ ಕಲೆ ಮೂಡುವುದು ಇತ್ಯಾದಿಗಳನ್ನು ಊರಿಗೆ ಅಮ್ಮನ ಪ್ರವೇಶವಾಗಿದೆ

ಎಂದು ನಂಬುತ್ತಾರೆ. ಇದರ ನಿವಾರಣೆಗಾಗಿ ಹಸಿ ಜೇಡಿಮಣ್ಣಿನಿಂದ ಎರಡು ಮೂರ್ತಿಗಳನ್ನು ತಯಾರಿಸುತ್ತಾರೆ. ಒಂದು ಊರಮಾರಮ್ಮ, ಮತ್ತೊಂದು ನಾಡಮಾರಮ್ಮ. ಈ ಮೂರ್ತಿಗಳಿಗೆ ಬೇವಿನಸೊಪ್ಪು, ಚೆಂಡುಹೂ, ಕುಂಕುಮ, ಅರಿಶಿಣದಿಂದ ಅಲಂಕರಿಸಿ ಗ್ರಾಮದ ಮಧ್ಯದಲ್ಲಿ ಸ್ಥಾಪಿಸಿ ಮೊಸರನ್ನದ ಬುತ್ತಿಯ ಎಡೆಯನ್ನು ಕೊಡುತ್ತಾರೆ. ಹಾಗೆಯೇ ದೇವಿಗೆ ಕುರಿ ಬಲಿಯನ್ನು ನೀಡಿ ದೇವಿಯನ್ನು ಶಾಂತಗೊಳಿಸಿ ಕೊನೆಗೆ ಊರಿನ ಗಡಿ ದಾಟಿಸಿ ಬರುತ್ತಾರೆ. ಇದರಿಂದ ತಾವು ವಾಸಿಸುವ ಪ್ರದೇಶದಲ್ಲಿ ಮಕ್ಕಳಿಗೆ ಯಾವುದೇ ರೋಗರುಜಿನಗಳು ಬರುವುದಿಲ್ಲ ಎಂಬ ನಂಬಿಕೆ ಇವರಲ್ಲಿದೆ.

೪.೬.೭. ಮಡಿವಾಳದ ಸೂಲಗಿತ್ತಮ್ಮ

ಇರುಳ ಸಮುದಾಯದಲ್ಲಿ ಜನಿಸಿ ದೈವತ್ವಕ್ಕೆ ಏರಿದವಳೇ ಸೂಲಗಿತ್ತಮ್ಮ. ತಮ್ಮ ಬುಡಕಟ್ಟಿನ ಹೆಣ್ಣುಮಗಳೊಬ್ಬಳು ದೈವತ್ತಕ್ಕೆ ಏರಿದ ಬಗ್ಗೆ ಸಮುದಾಯದಲ್ಲಿ ಗೌರವ ಅಭಿಮಾನಗಳು ತುಸು ಹೆಚ್ಚಾಗಿಯೇ ಇದೆ. ಪ್ರತಿವರ್ಷ ಶಿವರಾತ್ರಿಯ ಸಂದರ್ಭದಲ್ಲಿ ಕನಕಪುರ ಮತ್ತು ತಮಿಳುನಾಡಿನ ಡೆಂಕಣಕೋಟೆಯ ಸರಹದ್ದಿನಲ್ಲಿ ವಾಸಿಸುವ ಇರುಳಿಗರು ಮಡಿವಾಳಕ್ಕೆ ಬಂದು ದೇವಿಯ ದರ್ಶನ ಮಾಡಿ ಭಕ್ತಿ ಗೌರವ ಸಲ್ಲಿಸುವ ವಾಡಿಕೆ ಇದೆ. "ಕೆಳಜಾತಿಯ ಸೂಲಗಿತ್ತಿಗೆ ಒಲಿದ ದೇವಮಾನವ ಸಂಬಂಧಗಳು ಕುಲದ ಕಟ್ಟುಪಾಡಿಗೆ ಒಳಗಾಗುವುದಿಲ್ಲ"[೧೫] ಎಂಬ ಮಾತು ದೇವರಿಗೆ ಜಾತಿಕುಲಗಳ ಕಟ್ಟುಪಾಡುಗಳಿಲ್ಲ ಎಂಬುದನ್ನು ಸಾಬೀತು ಮಾಡುತ್ತದೆ.

ಮಡಿವಾಳದ ಸೂಲಗಿತ್ತಮ್ಮ ದೈವತ್ವಕ್ಕೆ ಏರಿದ ಬಗ್ಗೆ ಒಂದು ಐತಿಹ್ಯ ಇದೆ.

ಕಾವೇರಿ–ಅರ್ಕಾವತಿ ನದಿಗಳ ಸಂಗಮಸ್ಥಳದಲ್ಲಿ ದಟ್ಟ ಅರಣ್ಯ ಕಾಡಿನ ಮಧ್ಯಭಾಗದಲ್ಲಿ ಮಡಿವಾಳ ಗ್ರಾಮವಿದೆ. ವಿರಳ ಜನವಸತಿ ಇರುವ ಈ ಗ್ರಾಮದ ಇರುಳಿಗ ಸಮುದಾಯದಲ್ಲಿ ಜನಿಸಿದ ಸೂಲಮ್ಮ ಎಂಬ ಹೆಣ್ಣುಮಗಳು ದಿನ ನಿತ್ಯ ಅರ್ಕಾವತಿ ನದಿ ತೀರದಲ್ಲಿರುವ ಶಿವನಂಕೇಶ್ವರನಿಗೆ ಭಕ್ತಿಯಿಂದ ಪೂಜೆ ಮಾಡುತ್ತಿದ್ದಳು. ದಿನವೂ ತಾನು ಸಂಗ್ರಹಿಸಿದ ಮುಳ್ಳಿಗೆಣಸು, ನೂಲುಗೆಣಸು, ಕಾಡುಹಣ್ಣು, ಜೇನುತುಪ್ಪ ಇವುಗಳನ್ನು ಮೊದಲಿಗೆ ಶಿವನಂಕೇಶ್ವರನಿಗೆ ಎಡೆ ನೀಡಿ ನಂತರ ತಾನು ಆಹಾರ ಸೇವಿಸಿ ಮನೆಗೆ ತೆರಳುತ್ತಿದ್ದಳು. ಪ್ರತಿ ದಿವಸ ತಪ್ಪದೆ ನಡೆಯುತ್ತಿದ್ದ ಈ ಆಚರಣೆಯನ್ನು ಸೋಜಿಗದಿಂದ ಗಮನಿಸುತ್ತಿದ್ದ ಶಿವನು ಒಂದು ದಿನ ಈಕೆಯ ದಿಟ್ಟ ಭಕ್ತಿಯನ್ನು ಪರೀಕ್ಷಿಸಲು ಸನ್ಯಾಸಿ ರೂಪದಲ್ಲಿ ಸೂಲಮ್ಮನನ್ನು ಎದುರುಗೊಳ್ಳುತ್ತಾನೆ. ಹಸಿವಿನಿಂದ ಬಳಲಿದವನಂತೆ ಕಾಣಿಸಿಕೊಳ್ಳುತ್ತಾನೆ. ಸನ್ಯಾಸಿಯು ತಾನು ಬಹಳ ದೂರದಿಂದ ಬಳಲಿ ಬಂದಿದ್ದೇನೆ; ಹಸಿವು, ನೀರಡಿಕೆಯಾಗಿದೆ ಏನನ್ನಾದರೂ ಆಹಾರ ನೀಡು ಎಂದು ಸೂಲಮ್ಮನನ್ನು ಕೇಳುತ್ತಾನೆ. ಹಸಿದವರಿಗೆ ಆಹಾರ ನೀಡುವುದು ಪುಣ್ಯದ ಕೆಲಸ ವೆಂದು ತಿಳಿದು ದೇವರ ಎಡಗೆ ತೆಗೆದುಕೊಂಡು ಹೋಗುತ್ತಿದ್ದ ಆಹಾರವನ್ನೇ ಸನ್ಯಾಸಿಗೆ ಕೊಡುತ್ತಾಳೆ. ಸೂಲಮ್ಮನ ಹೃದಯವಂತಿಕೆಗೆ ಮೆಚ್ಚಿದ ಸನ್ಯಾಸಿ ವೇಷಧಾರಿ ಶಿವನು ಸೂಲಮ್ಮನಿಗೆ ಮತ್ತೊಂದು ಸತ್ವಪರೀಕ್ಷೆ ಒಡ್ಡುತ್ತಾನೆ. ನಾವು ಸನ್ಯಾಸಿಗಳು ಪ್ರತಿ ದಿವಸ ಮಜ್ಜನ ಶಿವಪೂಜೆಗೆ ಗಂಧ ಇಲ್ಲದೆ

ಆಹಾರ ಸ್ವೀಕರಿಸುವಂತಿಲ್ಲ; ನೀನು ಮಜ್ಜನಕ್ಕೆ ನೀರು, ಹಣೆಗೆ ಗಂಧ ನೀಡಿದರೆ ಆಹಾರ ಸ್ವೀಕರಿಸುತ್ತೇನೆ ಎನ್ನುತ್ತಾನೆ.

ಸ್ವಾಮಿಗಳೇ, ನೀವು ಇರುವ ಸ್ಥಳ ಮೃಗಗಳಿಗೆ ನೀರು ದೊರೆಯುವುದು ಕಷ್ಟ. ಇನ್ನು ಹೇಗೆ ನಿಮಗೆ ಮಜ್ಜನಕ್ಕೆ ನೀರು ಗಂಧ ಎಲ್ಲಿಂದ ತರಲಿ. ಇಲ್ಲಿಂದ ದೂರ ಕ್ರಮಿಸಿದರೆ ಮಾತ್ರ ಮಜ್ಜನಕ್ಕೆ ನೀರು ದೊರೆಯುತ್ತದೆ ಎಂದು ಹೇಳುತ್ತಾಳೆ. ಸನ್ಯಾಸಿ ನಿನ್ನಲ್ಲಿ ಅಂಥ ಸಾಮರ್ಥ್ಯವಿದೆ ಹೋಗಿ ಪ್ರಯತ್ನಿಸಿ ನೋಡು. ನೀನು ಬರುವವರೆಗೆ ನಾನು ಕಾಯುತ್ತೇನೆ ಎಂದು ಹೇಳಿ ಸೂಲಮ್ಮನನ್ನು ಕಳುಹಿಸಿಕೊಡುತ್ತಾನೆ. ಸನ್ಯಾಸಿಯೊಬ್ಬರ ಹಸಿವನ್ನು ತಣಿಸಲು ತನಗೆ ಸಾಧ್ಯವಾಗಲಿಲ್ಲವಲ್ಲ ಎಂಬ ನೋವಿನಿಂದ ತಾನಿನ್ನು ಬದುಕಿ ಪ್ರಯೋಜನವಿಲ್ಲವೆಂದು ನಿಶ್ಚಯಿಸಿದ ಸೂಲಮ್ಮನು ಶಿವನಂಕೇಶ್ವರ ದೇವಸ್ಥಾನದ ಎದುರಿನ ಬೆಟ್ಟದ ಮೇಲಿಂದ ಕೆಳಗೆ ಹಾರಿ ಪ್ರಾಣ ಬಿಡಬೇಕೆಂದು ನಿಶ್ಚಯಿಸಿ ಶಿವನಿಗೆ ಭಕ್ತಿಯಿಂದ ನಮಿಸಿ ಕೈಯಲ್ಲಿದ್ದ ಹಾರೆಕೋಲನ್ನು ಕೆಳಗೆ ಬಿಡುತ್ತಾಳೆ. ಹಾರೆ ಬಿದ್ದ ರಭಸಕ್ಕೆ ಒಂದು ಗುಳಿಯಾಗಿ ಅಲ್ಲಿಂದಲೇ ನೀರು ಚಿಮ್ಮಲು ಪ್ರಾರಂಭವಾಗುತ್ತದೆ. ಮತ್ತೊಂದೆಡೆಯಿಂದ ಗಂಧದ ಸುವಾಸನೆ ಮೂಗಿಗೆ ಬಡಿಯುತ್ತದೆ. ಇದರಿಂದ ಸಂತೋಷಗೊಂಡು ಸನ್ಯಾಸಿಯನ್ನು ಇಲ್ಲಿಗೆ ಕರೆತರುತ್ತಾಳೆ. ಈಕೆಯ ನಿಜ ಭಕ್ತಿಗೆ ಒಲಿದ ಶಿವನಂಕೇಶ್ವರನು ಶಿವನ ರೂಪದಲ್ಲಿ ಪ್ರತ್ಯಕ್ಷನಾಗುತ್ತಾನೆ. ನಿನ್ನ ನಿಜ ಭಕ್ತಿಗೆ ಒಲಿದಿದ್ದೇನೆ. ಇಂದಿನಿಂದ ಸೋಲು ಇಲ್ಲದ ಭಕ್ತಿಯಿಂದ ಭಗವಂತನನ್ನು ಗೆದ್ದರಿಂದ "ಸೋಲೆ ಇಲ್ಲದ ಗಿತ್ತಿ" ಸೂಲಗಿತ್ತಮ್ಮನಾಗಿ ನನ್ನ ಗುಡಿಯೊಳಗೆ ನೆಲೆಸು ಎಂಬ ವರವನ್ನು ನೀಡಿ ತನ್ನ ಪಕ್ಕದಲ್ಲಿಯೇ ನೆಲೆ ನೀಡುತ್ತಾನೆ. ಅಂದಿನಿಂದ ಸೂಲಗಿತ್ತೆಮ್ಮ ಆರಾಧನೆಗೆ ಒಳಗಾಗುತ್ತಿದ್ದಾಳೆ. ಇರುಳಿಗ ಹೆಣ್ಣುಮಗಳೊಬ್ಬಳು ದೈವತ್ವಕ್ಕೆ ಏರಿದ ಬಗ್ಗೆ ಆಧಾರಾಭಿಮಾನಗಳಿದ್ದು ಪ್ರತಿ ವರ್ಷ ಶಿವರಾತ್ರಿಯ ಸಂದರ್ಭದಲ್ಲಿ ಹೆಣ್ಣುಮಗಳಿಗೆ ಭಕ್ತಿ ಗೌರವದಿಂದ ಆರಾಧಿಸುತ್ತಾರೆ.

ಕೋಷ್ಟಕ ೪.೨. ಇರುಳಿಗರು ಆರಾಧಿಸುವ ದೇವತೆಗಳು

ಕ್ರಸಂ	ದೇವತೆಗಳು	ಸ್ಥಳ	ತಾಲೂಕು
೧.	ಕಬ್ಬಾಳಮ್ಮ	ಇರುಳಿಗರದೊಡ್ಡಿ	ಚನ್ನಪಟ್ಟಣ
೨.	ಆದಿಶಕ್ತಿ	ಬುಡಗಯ್ಯನದೊಡ್ಡಿ	ಕನಕಪುರ
೩.	ಬಾಣಂತಮಾರಮ್ಮ	ಕೊತಗೊಂಡನಹಳ್ಳಿ	ಕನಕಪುರ
೪.	ಸಡ್ರದೇವಳಮ್ಮ	ಚನ್ನವಲಸೆ	ಕನಕಪುರ
೫.	ಮದ್ದೂರಮ್ಮ	ಜಟ್ಟಿದೊಡ್ಡಿ	ಕನಕಪುರ
೬.	ಕಾಳಯ್ಯತಾತನ ಸಮಾಧಿ	ಉರುಗನದೊಡ್ಡಿ	ಕನಕಪುರ
೭.	ಏಳೆಯಮ್ಮ ಬರಗಮ್ಮ	ಜೋಡಿಗಟ್ಟೆ	ಮಾಗಡಿ

೮.	ಸೀಗೆಕಲ್ಲು ಮುನೇಶ್ವರ	ಜೋಡಿಗಟ್ಟೆ	ಮಾಗಡಿ
೯.	ಮಹಾಮಾಯ ಆದಿಶಕ್ತಿ	ಕಾಳಯ್ಯನಪಾಳ್ಯ	ಮಾಗಡಿ
೧೦.	ಕರಗದಮ್ಮ	ಮಟಕಯ್ಯನದೊಡ್ಡಿ	ರಾಮನಗರ

ಆಧಾರ: ಅಧ್ಯಯನ ಕ್ಷೇತ್ರಕಾರ್ಯ ಮಾಹಿತಿ.

ಇರುಳಿಗ ಸಮುದಾಯದವರು ಮಾತೃದೇವತಾ ಆರಾಧನೆಗೆ ಹೆಚ್ಚು ಮಹತ್ವ ನೀಡುತ್ತಾರೆ ಎಂಬುದಕ್ಕೆ ಪೂರಕವಾಗಿ ಅವರು ವಾಸಿಸುವ ಸ್ಥಳಲ್ಲಿರುವ ಎಲ್ಲಾ ಆರಾದ್ಯ ದೈವಗಳಲ್ಲೆ ಹೆಚ್ಚಿನವು ಸ್ತ್ರೀ ದೇವತೆಗಳು ಆಗಿವೆ. ಈ ಎಲ್ಲಾ ದೇವರ ಪೂಜಾರಿಗಳು ಇರುಳಿಗ ಬುಡಕಟ್ಟಿಗೆ ಸೇರಿದವರಾಗಿದ್ದು ಪ್ರಾಯಶಃ ಈ ಕಾರಣಕ್ಕಾಗಿಯೇ ಇರುಳಿಗರನ್ನು ಕಾಡು ಪೂಜಾರಿಗಳೆಂದು ಅನ್ಯ ಸಮುದಾಯದವರು ಕರೆದಿರಬಹುದು.

೪.೬.೮ ಕಣಿಶಾಸ್ತ್ರ

ಇರುಳಿಗರು ಕಣಿಶಾಸ್ತ್ರವನ್ನು ಹೇಳುತ್ತಾರೆ. ಇವರ ಜೀವನಾವರ್ತನ ಆಚರಣೆ ಹಾಗೂ ವಾರ್ಷಿಕಾವರ್ತನ ಆಚರಣೆಗಳಲ್ಲಿ ಕಣಿಗೆ ಮಹತ್ವದ ಸ್ಥಾನವಿದೆ. ತಮ್ಮ ಕುಟುಂಬದ ಯಾವುದೇ ಆಚರಣೆಯಿರಲಿ ಅಂದರೆ ಮದುವೆ, ಋತುಮತಿ, ಜನನ, ಸಾವು, ಹಬ್ಬ ಮುಂತಾದ ಪ್ರತಿಯೊಂದರ ಆಚರಣೆಯಲ್ಲಿ ಕಣಿಶಾಸ್ತ್ರದ ಪಾತ್ರ ಮಹತ್ವವಾಗಿದೆ.

ತಮ್ಮ ಹಿರಿಯರ ಆತ್ಮಗಳ ಜೊತೆಯಲ್ಲಿ ಸಂವಾದ ನಡೆಸಿ ಕಷ್ಟ-ನಷ್ಟಗಳು, ನೋವು ನಲಿವುಗಳನ್ನು ನಿವೇದಿಸಿಕೊಂಡು ಅದಕ್ಕೆ ತಕ್ಕಂತೆ ಪರಿಹಾರೋಪಾಯಗಳನ್ನು ಪಡೆಯುವ ಒಂದು ಕ್ರಿಯೆಯೇ ಕಣಿಯಾಗಿದೆ.

ಸಮಾಜದ ಪ್ರತಿಯೊಂದು ಆಗುಹೋಗುಗಳ ಸಂದರ್ಭದಲ್ಲಿ ತಮ್ಮ ಹಿರಿಯರನ್ನು ನೆನೆದು ಮಾರ್ಗದರ್ಶನ ಪಡೆಯುವುದು ಸಾಮಾನ್ಯ. ಈ ಕ್ರಿಯೆಯು ಬುಡಕಟ್ಟು ಜೀವನದ ಸಮಗ್ರ ಅಭಿವ್ಯಕ್ತಿಯ ಪ್ರತೀಕವಾಗಿ ಕಂಡುಬರುತ್ತದೆ. ಬಹುಮುಖ್ಯವಾಗಿ ಬುಡಕಟ್ಟು ಪಂಗಡಗಳಲ್ಲಿ ಸಾಂದರ್ಭಿಕವಾಗಿರುವ ಅನೇಕ ಆಚರಣೆಗಳಿರುತ್ತವೆ. ಹುಟ್ಟು, ಮೈನೆರೆಯುವುದು, ಸಾವು, ಸಾವಿನ ನಂತರ ಕ್ರಿಯಾವಿಧಿಗಳಲ್ಲಿ 'ಗಾಳಿ' ಕರೆಯುವ ಪದ್ಧತಿ ಸಾಮಾನ್ಯವಾಗಿ ಎಲ್ಲ ಪಂಗಡಗಳಲ್ಲಿಯೂ ಇವೆ. ಈ ಆಚರಣೆಯಲ್ಲಿಯೂ ತಮ್ಮ ಕಲ್ಪನಾಶಕ್ತಿ ಹಾಗೂ ನಿಗೂಢತೆಯನ್ನು ಅರಸುವುದು ಪ್ರಮುಖವಾಗಿರುತ್ತದೆ".[೯]

ಇರುಳಿಗ ಸಮುದಾಯವು ತಮ್ಮ ಸಾಮಾಜಿಕ ಹಾಗೂ ಧಾರ್ಮಿಕ ಆಚರಣೆಗಳನ್ನು ಕಣಿಗಾರನು ಹೇಳುವ ಕಣಿಯ ಮೇಲೆ ನಿರ್ಧರಿಸುತ್ತಾರೆ. ಕಣಿ ಹೇಳುವ ವ್ಯಕ್ತಿಯು ಸಮುದಾಯದ ಹಿರಿಯನಾಗಿರುತ್ತಾನೆ. ಕಣಿಗಾರಿಕೆಯು ವಂಶಪಾರಂಪರ್ಯವಾಗಿ ಬರುತ್ತದೆ. ಸಮುದಾಯದ ಒಳಗೆ ಘಟಿಸುವ ರೋಗ ರುಜಿನಗಳು, ಸಾವು-ನೋವುಗಳ ಸಂದರ್ಭ, ಯುಗಾದಿ ಹೊಸವರ್ಷದ ಆಚರಣೆಯ ಸಮಯದಲ್ಲಿ, ಆ ವರ್ಷದ ಮಳೆ, ಬೆಳೆ ಭವಿಷ್ಯವನ್ನು, ಅಂದಿನ ವರ್ಷದ ಲೋಕ ವ್ಯವಹಾರವನ್ನು ತಿಳಿಯಲು ಹಾಗೂ ತಮ್ಮ

ಸಮುದಾಯದಲ್ಲಿ ಮುಂದೆ ನಡೆಯಬಹುದಾದ ಪ್ರಮುಖ ಘಟನೆಗಳ ಬಗ್ಗೆ ಕಣಿಯನ್ನು ಹಾಕಿಸಿ ತಿಳಿದುಕೊಳ್ಳುತ್ತಾರೆ. ಬೇರೆ ಸಮುದಾಯದವರು ಯುಗಾದಿ ಭವಿಷ್ಯವನ್ನು ತಿಳಿಯಲು ಪಂಚಾಂಗದಂತಹ ಬರಹ ಲಿಪಿಯ ಮೊರೆಹೋದರೆ ಈ ಬುಡಕಟ್ಟು ಸಮುದಾಯವು ನೇರವಾಗಿ ಕಣಿಯ ಮೂಲಕ ಆ ವರ್ಷದ ಭವಿಷ್ಯ ಕೇಳುತ್ತಾರೆ. ಹಾಗೆಯೇ ತಮ್ಮ ಕುಲದಲ್ಲಿ ಸಂಬಂಧಿಸಿದ ಸಾವಿನ ಬಗ್ಗೆ ತಿಳಿಯಲು ಕಣಿಯನ್ನು ಹಾಕಿಸುತ್ತಾರೆ. ಸತ್ತವ್ಯಕ್ತಿಯ ಉತ್ತರಕ್ರಿಯೆ ಮುಗಿದ ರಾತ್ರಿ ಹನ್ನೊಂದನೆ ದಿವಸ ಕಡ್ಡಾಯವಾಗಿ ಕಣಿಯನ್ನು ಹಾಕಿಸುವ ಸಂಪ್ರದಾಯ ಇವರಲ್ಲಿದೆ. ಸತ್ತ ವ್ಯಕ್ತಿಯ ಮನೆಯ ಬಳಿ ಕಣಿ ಹಾಕಿಸುತ್ತಾರೆ. ಇತರೆ ಸಮಯದಲ್ಲಿ ದೇವಸ್ಥಾನ ಮತ್ತು ತೋಪಿನ ಬಳಿ ಮಾತ್ರ ಕಣಿಹಾಕುವ ಪದ್ಧತಿ ಇದೆ. ಕಣಿಗಾರ ಬೆಳಗಿನಿಂದ ಉಪವಾಸವಿದ್ದು ಶುಚಿಯಾಗಿ ದಟ್ಟಿಯೊಂದನ್ನು ಉಟ್ಟುಕೊಂಡು ಹಣೆ ಮತ್ತು ಮೈಕೈಗಳಿಗೆ ಭಸ್ಮವನ್ನು ಧರಿಸಿಕೊಳ್ಳುತ್ತಾನೆ. ಕಣಿ ಹೇಳುವಾಗ ಚರ್ಮದಿಂದ ತಯಾರಿಸಿರುವ ಕಣಿವಾದ್ಯವಾದ ತಮಟೆಯನ್ನು ಬಳಸುತ್ತಾನೆ. ತಮಟೆಯ ಮೇಲೆ ಸೂರ್ಯ, ಚಂದ್ರ, ತ್ರಿಶೂಲ ಮುಂತಾದ ಚಿಹ್ನೆಗಳು ಇರುತ್ತವೆ. ಚಾಪೆಯೊಂದರ ಮೇಲೆ ಮಂಡಿಯೂರಿ ತನ್ನ ಎರಡು ಕಾಲುಗಳಿಗೂ ದಿಂಬುಗಳನ್ನು ಒತ್ತುಕೊಟ್ಟು ಗೋಡೆಗೆ ಒರಗಿ ತಮಟೆಯನ್ನು ಬಾರಿಸುತ್ತಾ ಎಲ್ಲಾ ದಿಕ್ಕುಗಳಿಗೂ ವಂದಿಸುತ್ತಾ ಭೂತಾಯಿ ಮತ್ತು ಆಕಾಶವನ್ನು ಒಮ್ಮೆ ದೃಷ್ಟಿಸಿ ನೋಡಿ ದೈವಗಳ ಹೆಸರನ್ನು ಗಟ್ಟಿಯಾಗಿ ಪಠಿಸುತ್ತಾ ಊರುದೇವ, ಮನೆದೈವ, ಗಡಿದೈವಗಳನ್ನು ಹಾಗೂ ಕಣಿ ಹಾಕಿಸುವವರ ಕುಲದೇವತೆಯನ್ನು ಪ್ರಾರ್ಥಿಸುತ್ತಾನೆ. ತಮಟೆ ಸದ್ದು ಹೆಚ್ಚುತ್ತಾ ಹೋದಂತೆಲ್ಲಾ ಕಣಿಕಾರನ ಮೈಮೇಲೆ ಆವೇಶ ಹೆಚ್ಚಾಗುತ್ತಾ ಹೋಗುತ್ತದೆ. ಆವೇಶ ಹೆಚ್ಚಾದಂತೆಲ್ಲ ಕಣಿಗಾರ ತನ್ನದೇ ಆದ ಹಾಡುಗಾರಿಕೆಯ ದಾಟಿಯಲ್ಲಿ ರಾಗ ವಾಗಿ ಹಾಡುತ್ತಾ ಪರಿಹಾರಗಳನ್ನು ಸೂಚಿಸುತ್ತಾನೆ. ಜನರು ಭಯಭಕ್ತಿಯಿಂದ ತಮ್ಮ ಕಷ್ಟ–ನಷ್ಟಗಳಿಗೆ ಪರಿಹಾರ ಬೇಡುತ್ತಾರೆ. ಕಣಿಗಾರ ಹೇಳುವ ಉತ್ತರಗಳು ದೈವವಾಣಿ ಎಂಬಂತೆ ಚಾಚು ತಪ್ಪದೇ ಅನುಸರಿಸುತ್ತಾರೆ. ರೋಗ, ಕೌಟುಂಬಿಕ ಸಮಸ್ಯೆ, ಕಳೆದುಹೋದ ವಸ್ತುಗಳ ಬಗ್ಗೆ ಪ್ರಶ್ನಿಸಿ ಪರಿಹಾರಗಳನ್ನು ಕಣಿಗಾರನಿಂದ ಪಡೆಯುತ್ತಾರೆ.

ಒಟ್ಟಾರೆ ಇರುಳಿಗ ಸಮುದಾಯದೊಳಗೆ ಒಬ್ಬ ವೈದ್ಯ, ಮಾರ್ಗದರ್ಶಿ, ಆಪ್ತ ಸಲಹೆಗಾರ, ಉತ್ತಮ ಚಿಕಿತ್ಸಕನಾಗಿ ಕಣಿಗಾರನು ಕೆಲಸ ಮಾಡುತ್ತಾನೆ. ಇಡೀ ಸಮುದಾಯದಲ್ಲಿ ದೈವಿ ಸ್ವರೂಪದ ವ್ಯಕ್ತಿಯಾಗಿ ಸಮಾಜದ ಸಾಮಾಜಿಕ ಬದುಕನ್ನು ನಿಯಂತ್ರಿಸುವ ಹಾಗೂ ಮುನ್ನಡೆಸುವ ವಿಶೇಷ ಗೌರವದ ಸ್ಥಾನದಲ್ಲಿ ಕಣಿಗಾರನು ನಿಲ್ಲುತ್ತಾನೆ.

ಇತ್ತೀಚೆಗೆ ಇತರೆ ಸಮುದಾಯದ ಜನರು ಸಹ ಇರುಳಿಗರ ಕಣಿಯನ್ನು ದೈವವಾಣಿ ಎಂಬಂತೆ ನಂಬುತ್ತಾರೆ. ಈ ಆಚರಣೆಗೆ ಸಾರ್ವಜನಿಕವಾಗಿ ವಿಶೇಷ ಮನ್ನಣೆಯು ದೊರೆಯುತ್ತಿರುವುದು ಕಂಡು ಬಂದಿದೆ. ಕ್ಷೇತ್ರಕಾರ್ಯದ ಸಮಯದಲ್ಲಿ ಇತರೆ ಸಮುದಾಯದವರನ್ನು ಕಣಿ ಕುರಿತು ಅಭಿಪ್ರಾಯ ಕೇಳಿದಾಗ "ಕಣಿ ಬಹು ಹಿಂದಿನ ಸನಾತನ ಸಂಪ್ರದಾಯ. ಭವಿಷ್ಯ ಹೇಳುವ ಪೌರಾಣಿಕ ಗ್ರಂಥಗಳಲ್ಲಿ ಈ ಶಾಸ್ತ್ರದ ಬಗ್ಗೆ ಉಲ್ಲೇಖವಿದೆ. ಇದನ್ನು ಉಳಿಸಿಕೊಂಡು ಬಂದಿರುವ ಏಕೈಕ ಸಮುದಾಯ

ಇರುಳಿಗರು".[೧೭] ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಕಣಿಯು ಜಾಗತಿಕರಣ, ನಗರಿಕರಣ ಆಧುನಿಕರಣದ ಸಂದರ್ಭದಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಜನ ಸಮುದಾಯದ ಮಧ್ಯೆ ಮನ್ನಣೆಗೆ ಪಾತ್ರವಾಗಿರುವುದು ಈ ಸಮುದಾಯದ ಪಾರಂಪರಿಕ ಜೀವನ ಶೈಲಿಯೇ ಸಾಕ್ಷಿಯಾಗಿದೆ.

೪.೬.೯ ವಿಧಿ ನಿಷೇಧಗಳು

ಪ್ರತಿಯೊಂದು ಬುಡಕಟ್ಟು ಸಮುದಾಯದೊಳಗಿರುವಂತೆ ಇರುಳಿಗ ಬುಡಕಟ್ಟಿನಲ್ಲಿಯೂ ವಿಧಿ ನಿಷೇಧಗಳು ಆಚರಣೆಯಲ್ಲಿವೆ. ಮುಖ್ಯವಾಗಿ ವಾರ್ಷಿಕಾವರ್ತನ ಆಚರಣೆಗಳಲ್ಲಿ ಹಿರಿಯರ ಹಬ್ಬಕ್ಕೆ ಮಹತ್ವದ ಸ್ಥಾನವಿದೆ.

* ಈ ಹಬ್ಬದಲ್ಲಿ ಪ್ರತಿಯೊಂದು ಕ್ರಿಯೆಯನ್ನೂ ಕಟ್ಟುನಿಟ್ಟಾಗಿ ಪಾಲಿಸಬೇಕು.
* ಊಟದ ಪಂಕ್ತಿಯಲ್ಲಿ ಕೋಲುಕಾರನ ಅನುಮತಿ ಇಲ್ಲದೆ ಊಟದಿಂದ ಎದ್ದೇಳುವಂತಿಲ್ಲ.
* ಊಟದ ಪಂಕ್ತಿಯಲ್ಲಿ ದೊನ್ನೆಯಲ್ಲಿ ಸಾರನ್ನು ಬಿಡುವಂತಿಲ್ಲ.
* ಅನ್ಯ ಸಮುದಾಯದವರ ಜೊತೆ ಅನೈತಿಕ ಸಂಬಂಧವನ್ನು ಬೆಳೆಸುವಂತಿಲ್ಲ.
* ಕುಲದ ಸಭೆ ನಡೆಯುತ್ತಿದ್ದಾಗ ಮಧ್ಯದಲ್ಲಿ ಎದ್ದು ಹೋಗಬಾರದು.
* ಸಕಾರಣವಿಲ್ಲದೆ ವಿವಾಹ ವಿಚ್ಛೇದನವನ್ನು ಪಡೆಯುವಂತಿಲ್ಲ.
* ದನದ ಮಾಂಸ ಮತ್ತು ಎಮ್ಮೆಯ ಮಾಂಸವನ್ನು ತಿನ್ನುವಂತಿಲ್ಲ.

ಇವು ಸಮುದಾಯದ ಒಳಗೆ ಸಾರ್ವತ್ರಿಕವಾಗಿ ಪಾಲಿಸಬೇಕಾದ ಮುಖ್ಯವಾದ ನಿರ್ಬಂಧಗಳಾಗಿವೆ. ಜಗತ್ತಿನಲ್ಲಿ ಬಹಳ ಹಿಂದಿನಿಂದಿಲೂ ಮನುಷ್ಯ ಅವನದೇ ಆದ ನಂಬಿಕೆ ನಿಷೇಧಗಳನ್ನು ನಂಬಿ ಬಂದವನು. ತನ್ನ ಸಮುದಾಯದಲ್ಲಿ ಹಿರಿಯರು ನಡೆಸಿಕೊಂಡು ಬಂದ ಕೆಲವು ಆಚರಣೆಗಳನ್ನು ಸಂರಕ್ಷಿಸಿಕೊಳ್ಳುವುದಕ್ಕೆ ಇಂತಹ ನಂಬಿಕೆ ವಿಧಿ–ನಿಷೇಧಗಳು ಅವಶ್ಯಕ. ಇಂತಹ ನಂಬಿಕೆ ವಿಧಿ ನಿಷೇಧಗಳು ಯಾವಾಗ ಯಾರಿಂದ ಪ್ರಾರಂಭವಾದವು ಎಂಬುದನ್ನು ಪತ್ತೆ ಹಚ್ಚುವುದು ತುಂಬಾ ಕಷ್ಟ. ಆದರೆ ಜಾನಪದ ವಿದ್ವಾಂಸರು ಹೇಳುವಂತೆ "ಜನರ ಬಾಯಿಂದ ಬಾಯಿಗೆ, ಕಿವಿಯಿಂದ ಕೇಳಿ ನಡೆಯಲ್ಲಿ ತಂದರು. ಮುಂದಿನವರೂ ಮತ್ತೊಬ್ಬರು ಅವುಗಳನ್ನು ಕಣ್ಣಾರೆ ಕಂಡು ತನ್ನ ಮನಸ್ಸಿನ ತೃಪ್ತಿಗೆ ಆಚರಿಸಿಕೊಂಡು ಬಂದಿರಬಹುದಾದವುಗಳೇ"[೧೮] ವಿಧಿ–ನಿಷೇಧಗಳು ಎಂಬ ಅಭಿಪ್ರಾಯ ಕೇಳಿಬರುತ್ತದೆ.

ನಂಬಿಕೆ ಎಂದರೆ ಭರವಸೆ ಎಂದರ್ಥ. ಒಂದು ಗ್ರಾಮದ ವ್ಯಕ್ತಿ ಸಮಾಜದಲ್ಲಿನ ಆಚರಣೆ ಸಂಪ್ರದಾಯ ಮುಂತಾದ ವಿಷಯಗಳ ಮೇಲೆ ಗೋಚರಿಸುವ ಹಾಗೂ ಅಗೋಚರವಾಗಿ ಕಾಣುವ ವಿಚಾರಗಳ ಬಗ್ಗೆ ನಂಬಿಕೆ ಇಡುವುದೇ ಆಗಿದೆ. ಅಂತೆಯೇ ವ್ಯಕ್ತಿಯ ಮನಸ್ಸಿನಲ್ಲಿ ಹುಟ್ಟುವ ಭಯ, ದುಗುಡ, ಅನಾರೋಗ್ಯ ಮುಂತಾದವುಗಳಿಂದ ಕಾಪಾಡಿಕೊಳ್ಳುವುದಕ್ಕೋಸ್ಕರ ವಿಧಿನಿಷೇಧಗಳು ಹುಟ್ಟಿಕೊಂಡಿವೆ.

ಇರುಳಿಗ ಸಮುದಾಯದಲ್ಲಿ ಇರುವ ನಂಬಿಕೆ ವಿಧಿ-ನಿಷೇಧಗಳ ಗುಣ ಸ್ವಭಾವಗಳನ್ನು ಆಧರಿಸಿ ಹತ್ತು ಗುಂಪುಗಳನ್ನಾಗಿ ವಿಂಗಡಿಸಿ ವಿಶ್ಲೇಷಿಸಲಾಗಿದೆ.

ಮದುವೆಗೆ ಸಂಬಂಧಿಸಿದ ನಂಬಿಕೆ-ನಿಷೇಧಗಳು

೧. ಒಂದೇ ಕುಲ ಒಂದೇ ಮನೆದೈವ ಹೊಂದಿರುವವರರು ವಿವಾಹವಾಗಬಾರದು.

೨. ಅರಿಶಿನ ನೀರು ಹಾಕಿಸಿಕೊಂಡ ವಧು-ವರರು ಮುಸ್ಸಂಜೆಯಲ್ಲಿ ಒಬ್ಬರೇ ಹೊರಗೆ ಹೋಗಬಾರದು.

೩. ಇರುಳಿಗರ ಮದುವೆ ಸಂಪ್ರದಾಯಗಳೆಲ್ಲ ರಾತ್ರಿಯ ವೇಳೆಯಲ್ಲಿಯೇ ನಡೆಯಬೇಕು.

೪. ಮದುವೆ ಆಗದೆ ಮೋಕ್ಷ ಹೊಂದುವುದಿಲ್ಲ. ಆದಕಾರಣ ಮದುವೆ ಆಗುವುದು ಕಡ್ಡಾಯ.

೫. ಮದುವೆಯ ಸಂದರ್ಭದಲ್ಲಿ ಬಿಲ್ವಪತ್ರೆ, ಕಣಗಲೆ ಹೂವು, ಆಲೆಮರದ ಪತ್ರೆ ಕಡ್ಡಾಯವಾಗಿ ಇರಲೇಬೇಕು.

ಸಾಮಾನ್ಯವಾಗಿ ಒಂದೇ ಕುಲ ಮತ್ತು ಒಂದೇ ಮನೆದೇವರನ್ನು ಹೊಂದಿರುವವರು ಒಂದೇ ಕುಲ ಮೂಲಕ್ಕೆ ಸೇರಿದವರಾಗಿರುತ್ತಾರೆ. ಆದುದರಿಂದ ಇಂಥವರ ಮಧ್ಯದಲ್ಲಿ ಮದುವೆ ಸಂಬಂಧ ಏರ್ಪಡುವಂತಿಲ್ಲ. ಮದುವೆ ಎಂಬುದು ಜೀವನದ ಒಂದು ಪ್ರಮುಖ ಕಾಲಘಟ್ಟ, ಇಂತಹ ಸಮಯದಲ್ಲಿ ಅಡತಡೆಗಳು ಬಾರದಿರಲಿ ಎಂದು ಈ ವಿಧಿ ನಿಷೇಧಗಳನ್ನು ಜಾರಿಗೊಳಿಸಲಾಗಿದೆ. ಇರುಳಿಗರ ಮದುವೆಯ ಪ್ರಧಾನ ಸಂಪ್ರದಾಯಗಳೆಲ್ಲವು ರಾತ್ರಿಯೇ ಮುಗಿಸುವುದಕ್ಕೂ ಇವರ ಹೆಸರಿನ ಮೂಲಕ್ಕೆ ಸಂಬಂಧವಿದ್ದಂತೆ ಕಾಣುತ್ತದೆ. ಹಾಗಾಗಿ ಈ ಮೂರನೇ ವಿಧಿ ನಿಷೇಧವನ್ನು ಜಾರಿಗೆ ತರಲಾಗಿದೆ ಎನಿಸುತ್ತದೆ. ಜೀವನವು ಪರಿಪೂರ್ಣವಾಗಬೇಕಾದರೆ ಹುಟ್ಟಿದ ಪ್ರತಿಯೊಂದು ವ್ಯಕ್ತಿಯು ಜೀವನದಲ್ಲಿ ಬರುವ ಎಲ್ಲಾ ಹಂತಗಳನ್ನು ಕಷ್ಟ-ಸುಖಗಳನ್ನು ಅನುಭವಿಸಿದರೆ ಮಾತ್ರ ಮೋಕ್ಷಕ್ಕೆ ದಾರಿ ಎಂಬ ಕಾರಣಕ್ಕಾಗಿ ಈ ನಿಯಮ ಜಾರಿಯಲ್ಲಿದೆ. ಹಾಗೆಯೇ ಬಿಲ್ವಪತ್ರೆ ಶಿವನಿಗೆ ಪ್ರಿಯವಾಗಿದ್ದು, ಕಣಗಲೆ ಹೂವು ಪಾರ್ವತಿಗೆ ಪ್ರಿಯವಾಗಿದ್ದು, ಆಲೆಮರ ಕುಲದ ವೃಕ್ಷವಾಗಿದೆ. ಹಾಗಾಗಿ ಮದುವೆಯ ದಿನ ವಧುವರರಿಬ್ಬರೂ ಶಿವಪಾರ್ವತಿಯರ ಸ್ವರೂಪರು; ಆದುದರಿಂದ ಇದಕ್ಕೆ ಬಹಳ ಮಹತ್ವವಿದ್ದು, ಈ ವಿಧಿನಿಷೇಧವು ಜಾರಿಗೆ ಬಂದಿರುತ್ತದೆ.

ಹೆಣ್ಣು ನೋಡುವುದಕ್ಕೆ ಸಂಬಂಧಿಸಿದ ನಂಬಿಕೆ ನಿಷೇಧಗಳು

೧. ಹೆಣ್ಣು ನೋಡಲು ಹೋಗುವಾಗ ಒಕ್ಕಲಿಗರು ಎದುರಿಗೆ ಬರಬಾರದು.

೨. ಹೆಣ್ಣು ನೋಡಲು ಹೋಗುವಾಗ ಖಾಲಿ ಕೊಡಗಳು ಎದುರಿಗೆ ತರಬಾರದು.

೩. ಹೆಣ್ಣು ನೋಡಲು ಹೋಗುವಾಗ ಸೌದೆ ಎದುರಾಗಬಾರದು.

೪. ಹೆಣ್ಣಿನ ಮನೆಯವರು ನಿಂಬೆಹಣ್ಣಿನ ಪಾನಕ ಕೊಡಬಾರದು.

೫. ಹೆಣ್ಣು ನೋಡಲು ಹೋಗುವ ಪೂರ್ವದಲ್ಲಿ ಉಗನಿ ಕುಡಿಯನ್ನು ಕಿತ್ತಿ ಬಿಳಿಯ ಬಟ್ಟೆಯಲ್ಲಿ ಅರಿಷಿಣ ಕೊಂಬಿನೊಂದಿಗೆ ಇರಿಸಲಾಗುತ್ತದೆ. ಉಗನಿ ಕುಡಿಯು ಚಿಗರೊಡೆದಿರಬೇಕು. ಕಪ್ಪಾಗಬಾರದು

ಹಾಗಿದ್ದಾಗ ಮಾತ್ರ ಹೆಣ್ಣನ್ನು ನೋಡಬಹುದು. ಅಕಸ್ಮಾತ್ ಉಗನಿ ಕುಡಿ ಕಪ್ಪಾದರೆ ಹೆಣ್ಣನ್ನು ನೋಡಬಾರದೆಂಬ ನಿಷೇಧ ಇಂದಿಗೂ ಜಾರಿಯಲ್ಲಿದೆ.

ಹೆಣ್ಣು ನೋಡಲು ಹೋಗುವಾಗ ಅಡ್ಡಲಾಗಿ ಒಕ್ಕಲಿಗರು ಬಂದರೆ ಅಪಶಕುನವೆಂದು ಇರುಳಿಗರು ನಂಬುತ್ತಾರೆ. ಕಾರಣ ಇವರು ಶ್ರಮಜೀವಿಗಳು ಯಾವಾಗಲೂ ಚಿಂತೆಯಲ್ಲಿ ಇರುವವರು ಇವರನ್ನು ನೋಡಿ ಹೆಣ್ಣು ನೋಡಲು ಹೋದರೆ ಸಂಸಾರವು ಚಿಂತೆಯಲ್ಲಿಯೇ ಮುಳುಗಿರುತ್ತದೆ ಎಂಬ ಚಿಂತನೆಯಿಂದಲೇ ಮೊದಲನೆಯ ವಿಧಿನಿಷೇಧ ಹುಟ್ಟಿಕೊಂಡಿರಬಹುದು.

ಖಾಲಿ ಕೊಡ ವ್ಯಯದ ಸಂಕೇತ, ನಷ್ಟದ ಕುರುಹು; ಇದನ್ನು ನೋಡಿ ಹೋದರೆ ಕಾರ್ಯವು ಕೈಗೂಡುವುದಿಲ್ಲ ಎಂಬ ನಂಬಿಕೆ ಇದೆ. ಇರುಳಿಗರರು ಅಶುಭ ಎಂದು ನಿರ್ಧರಿಸುವ ಪ್ರಾಣಿ ಪಕ್ಷಿಗಳು ಶುಭಕಾರ್ಯಕ್ಕೆ ಹೋಗುವಾಗ ಅಡ್ಡಬಂದರೆ ಅದನ್ನೇ ಅಶುಭವೆಂದು ಪರಿಗಣಿಸುತ್ತಾರೆ. ಸಾಮಾನ್ಯವಾಗಿ ಹುಳಿ ಎಂಬುದು ಶುಭಸೂಚಕವಲ್ಲ. ಅದುದರಿಂದ ಹೆಣ್ಣು ನೋಡಲು ಹೋದಾಗ ಹುಳಿ ಪದಾರ್ಥ ಕೊಡಬಾರದು ಎಂಬ ನಂಬಿಕೆಯಿಂದ ವಿಧಿನಿಷೇಧ ರೂಢಿಗೆ ಬಂದಿದೆ.

ಜನನಕ್ಕೆ ಸಂಬಂಧಿಸಿದ ವಿಧಿ–ನಿಷೇಧಗಳು

೧. ಮೊದಲ ಹೆರಿಗೆ ಕಡ್ಡಾಯವಾಗಿ ತವರುಮನೆಯಲ್ಲಿಯೇ ಆಗಬೇಕು.

೨. ಮಗು ಹುಟ್ಟಿದ ಮೂರು ದಿವಸದವರೆಗೂ ತಾಯಿ ಹಾಲನ್ನು ಮಗುವಿಗೆ ಕುಡಿಸಬಾರದು.

೩. ಜನನ ಸಂದರ್ಭದಲ್ಲಿನ ಮಾಸನ್ನು ಮಡಿಕೆ(ಗಡಿಗೆ)ಯಲ್ಲಿ ತುಂಬಿ ಮಣ್ಣಿನಲ್ಲಿ ಹೂತು ಹಾಕಬೇಕು.

೪. ಮಗುವಿನ ತೊಟ್ಟಿಲ ಕೆಳಗೆ ಕಸ ಗುಡಿಸುವ ಪೊರಕೆಯನ್ನು ಹಾಕಬೇಕು.

೫. ಮಗು ಜನನದ ಸೂತಕ ಕಳೆಯುವವರೆಗೂ ಬೇರೆಯವರು ಹೆರಿಗೆ ಮನೆಗೆ ಬರಬಾರದು.

ಮದುವೆಯಾದ ಹೆಣ್ಣು ತಂದೆ–ತಾಯಿ, ಬಂಧು–ಬಾಂಧವರನ್ನು ಬಿಟ್ಟು, ಅತ್ತೆ–ಮಾವ, ಅತ್ತಿಗೆ, ಮೈದುನರಂತಹ ಅಪರಿಚಿತರ ವಾತಾವರಣದಲ್ಲಿ ಸನ್ನಿವೇಶದಲ್ಲಿ ಬದುಕಬೇಕಾಗುತ್ತದೆ. ಇಂತಹ ಅನಿವಾರ್ಯತೆಯಲ್ಲಿ ಗರ್ಭವತಿಯಾದ ಹೆಣ್ಣು ಹೆರಿಗೆಯಂತಹ ಅಪಾಯಕಾರಿ ಸಮಯದಲ್ಲಿ ತನ್ನವರು ಎನಿಸಿದ ಬಂಧುಗಳ ಜೊತೆ ಇರಬಯಸುತ್ತಾಳೆ. ಹೀಗಾಗಿ ಆಕೆಯ ಮಾನಸಿಕ ಆರೋಗ್ಯ ಮತ್ತು ನೆಮ್ಮದಿಯಿಂದ ಸುಖ ಪ್ರಸವವಾಗಲು ಇಂತಹ ಸನ್ನಿವೇಶ ಮುಖ್ಯ ಎಂಬ ಹಿನ್ನೆಲೆಯಲ್ಲಿ ಮೊದಲ ನಂಬಿಕೆ ಹುಟ್ಟಿಕೊಂಡಿದೆ. ಇರುಳಿಗ ಸಮುದಾಯದಲ್ಲಿ ಪ್ರೇತಭೂತಗಳ ಬಗ್ಗೆ ವಿಶೇಷವಾದ ನಂಬಿಕೆ ಇದೆ. ಹುಟ್ಟಿದ ಎಳೆಯ ಮಗುವಿಗೆ ಇಂತಹ ದುಷ್ಟಶಕ್ತಿಗಳಿಂದ ತೊಂದರೆ ಉಂಟಾಗದಿರಲಿ ಎಂಬ ಮುಂಜಾಗ್ರತೆಯ ಕ್ರಮ ಇದಾಗಿರಬಹುದು. ಹುಟ್ಟಿದ ಹಸಿಕೂಸಿಗೆ ರೋಗ ನಿರೋಧಕ ಶಕ್ತಿ ಕಡಿಮೆ ಇರುತ್ತದೆ. ಹೆರಿಗೆ ಮನೆಗೆ ಹೆಚ್ಚು ಜನರು ಬಂದರೆ ಮಗುವಿಗೆ ಯಾವುದಾದರೂ ರೋಗದ ಸೊಂಕು ತಗಲಬಹುದು, ಅದುದರಿಂದ ಇಂತಹ ವಿಧಿ ನಿಷೇಧ ಜಾರಿಗೆ ಬಂದಿದೆ.

ಮಹಿಳೆಯರಿಗೆ ಸಂಬಂಧಿಸಿದ ವಿಧಿ-ನಿಷೇಧಗಳು

೧. ಗರ್ಭವತಿ ಮಹಿಳೆ ಶಾಸ್ತ್ರದಲ್ಲಿ ಭಾಗವಹಿಸುವಂತಿಲ್ಲ.

೨. ಗರ್ಭಿಣಿಯ ಬಯಕೆಯನ್ನು ನೆರವೇರಿಸಲೇಬೇಕು.

೩. ಬಂಜೆ ಹೆಣ್ಣಿಗೆ ಮಗುವನ್ನು ಕೊಡಬಾರದು.

೪. ಗರ್ಭಿಣಿ ಹೆಂಗಸು ಹೆಚ್ಚು ಕೆಲಸ ಮಾಡಬೇಕು.

ಗರ್ಭವತಿ ಮಹಿಳೆಯ ಮದುವೆ ಮತ್ತು ಇತರೆ ಕಾರ್ಯಕ್ರಮದಲ್ಲಿ ಶಾಸ್ತ್ರಕ್ಕೆ ಸಂಬಂಧಿಸಿದ ಕೆಲಸದಲ್ಲಿ ಭಾಗವಹಿಸಿದರೆ ಸಂಖ್ಯೆಯಲ್ಲಿ ಇಬ್ಬರ ಲೆಕ್ಕದಲ್ಲಿ ಬರುತ್ತಾರೆ. ಹೀಗಾಗಿ ಅವರಿಗೆ ಶಾಸ್ತ್ರದಲ್ಲಿ ಭಾಗವಹಿಸಬಾರದು ಎಂಬ ವಿಧಿ-ನಿಷೇಧ ಜಾರಿಗೆ ಬಂದಿದೆ. ಗರ್ಭಿಣಿಯ ಬಯಕೆಯನ್ನು ತೀರಿಸಿದೆ ಹೋದರೆ ಹುಟ್ಟುವ ಮಗುವಿನಲ್ಲಿ ಯಾವುದಾದರೂ ಒಂದು ಕೊರತೆ ಕಂಡುಬರುತ್ತದೆ ಎಂಬ ನಂಬಿಕೆ. ಬಂಜೆಯನ್ನು ಅಶುಭ ಸೂಚಕವೆಂದು ಜನರ ದೃಷ್ಟಿಯಲ್ಲಿ ನತದೃಷ್ಟೆಯಾಕೆ. ಆಕೆಗೆ ಮಗುವನ್ನು ಎತ್ತಿಕೊಟ್ಟರೆ ಮಗುವು ರಚ್ಚೆ ಹಿಡಿಯುತ್ತದೆ ಎಂಬ ನಂಬಿಕೆಯಿಂದ ತೊಟ್ಟಿಲ ಕೆಳಗೆ ಕಸಪೊರಕೆಯನ್ನು ಇಡುವ ವಿಧಿನಿಷೇದ ಜಾರಿಗೆ ಬಂದಿದೆ. ಹೆರಿಗೆ ಸುಲಭವಾಗಿ ನಡೆಯಬೇಕೆಂದರೆ ಆರೋಗ್ಯದ ದೃಷ್ಟಿಯಿಂದ ಗರ್ಭಿಣಿಗೆ ಹೆಚ್ಚು ಹೆಚ್ಚು ಕೆಲಸ ಮಾಡಬೇಕು ಎಂಬ ಹಿನ್ನೆಲೆಯಿಂದ ಈ ನಂಬಿಕೆ ನಿಷೇಧ ರೂಢಿಯಲ್ಲಿದೆ.

ಊಟಕ್ಕೆ ಸಂಬಂಧಿಸಿದ ನಂಬಿಕೆ-ನಿಷೇಧಗಳು

೧. ಕೈ ಕಾಲು ತೊಳೆದೇ ಊಟಕ್ಕೆ ಕೂಡಬೇಕು.

೨. ಕುಟುಂಬ ಸಮೇತವಾಗಿ ಕೂಡಬೇಕು.

೩. ಊಟದ ಸಮಯಕ್ಕೆ ಯಾರಾದರೂ ಬಂದರೆ ಕಡ್ಡಾಯವಾಗಿ ಅವರಿಗೆ ಊಟ ಬಡಿಸಬೇಕು.

ಶುಚಿತ್ವದ ದೃಷ್ಟಿಯಿಂದ ಹಾಗೂ ಆರೋಗ್ಯದ ದೃಷ್ಟಿಯಿಂದ ಊಟಕ್ಕೆ ಮೊದಲು ಕೈ ಕಾಲು ತೊಳೆದು ಊಟಕ್ಕೆ ಕೂಡಬೇಕು ಎಂಬ ನಂಬಿಕೆ ಸಹಜವಾದದ್ದೇ. ತಯಾರು ಮಾಡಿದ ಆಹಾರವು ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು ಎಂಬ ಕಾರಣಕ್ಕಾಗಿ ಕುಟುಂಬಸಮೇತರಾಗಿ ಊಟಕ್ಕೆ ಕುಳಿತುಕೊಳ್ಳಬೇಕು ಎಂಬ ನಿಯಮ ಜಾರಿಗೆ ಬಂದಿದೆ. ಊಟದ ಸಮಯದಲ್ಲಿ ಬರುವ ಅತಿಥಿಗಳು ದೈವೀ ಸ್ವರೂಪ ಎಂಬ ನಂಬಿಕೆಯ ಜೊತೆಗೆ ಬುಡಕಟ್ಟು ಆದರ್ಶ, ಹಂಚಿ ತಿನ್ನುವುದು. ಇದನ್ನು ಕಾಯ್ದುಕೊಂಡು ವಿಧಿನಿಷೇಧ ಜಾರಿಗೆ ಬಂದಿದೆ.

ಪ್ರಯಾಣಕ್ಕೆ ಸಂಬಂದಿಸಿದ ನಂಬಿಕೆ-ನಿಷೇಧಗಳು

೧. ಮುಂಗುಸಿ ಅಡ್ಡ ಬಂದರೆ ಕಾರ್ಯ ಕೈಗೂಡುವುದಿಲ್ಲ.

೨. ಭೂಮಿಯನ್ನು ನೋಡಿ ನಾಯಿ ಗೀಳಿಡಬಾರದು.

೩. ಹೋಗುವ ಸಂದರ್ಭದಲ್ಲಿ ಎಲ್ಲಿಗೆ ಎಂದು ಕೇಳಬಾರದು.

ಮುಂಗುಸಿಯು ದ್ವೇಷ ಮತ್ತು ಜಗಳದ ಸ್ವರೂಪ ಹಾಗೂ ಈ ಸಮುದಾಯದಲ್ಲಿ ನಾಗಾರಾಧನೆಗೆ ಹೆಚ್ಚು ಪ್ರಾಶಸ್ತ್ಯದಿಂದ ಇಂತಹ ನಂಬಿಕೆ-ನಿಷೇಧ ಹುಟ್ಟಿದೆ. ನಾಯಿಯು ಭೂಮಿಯನ್ನು ನೋಡಿ ಗೀಳಿಟ್ಟರೆ ಪ್ರಯಾಣದ ಸಂದರ್ಭದಲ್ಲಿ ಸಾವಿನ ಸುದ್ದಿ ಬರುತ್ತದೆ ಎಂಬ ನಂಬಿಕೆ. ಹೊರ ಹೋಗುವರನ್ನು ಆ ಸಂದರ್ಭದಲ್ಲಿ ಎಲ್ಲಿಗೆ ಹೋಗುತ್ತೀರಿ ಎಂದು ಕೇಳಿದರೆ ಹೋದ ಕೆಲಸವು ಕೈಗೂಡುವುದಿಲ್ಲ ಎಂಬ ವಿಧಿನಿಷೇಧ ಜಾರಿಯಲಿದೆ.

ಪ್ರಾಣಿ-ಪಕ್ಷಿ-ಗಿಡಮರಕ್ಕೆ ಸಂಬಂಧಿಸಿದ ನಂಬಿಕೆ-ನಿಷೇಧಗಳು

೧. ಹಲ್ಲಿಯ ಶಕುನದಲ್ಲಿ ನಂಬಿಕೆ.

೨. ಗೂಬೆಯು ಮನೆಯ ಮೇಲೆ ಕುಳಿತುಕೊಳ್ಳಬಾರದು. ಹಾಗೆ ಕಾಗೆ ಮನೆಯ ಒಳಗೆ ಪ್ರವೇಶ ಮಾಡಬಾರದು.

೩. ನರಿಯ ಮುಖ ನೋಡಿದರೆ ಒಳ್ಳೆದಾಗುತ್ತದೆ.

೪. ಆಲೆ ಮರವನ್ನು ಕಡಿಯಬಾರದು.

೫. ಅರಳಿ ಮರದ ಸೌದೆಯನ್ನು ಮನೆಯಲ್ಲಿ ಉರಿಸಬಾರದು.

ಹಲ್ಲಿಯ ಶಕುನವನ್ನು ಗೌಳಿಯ ಶಕುನ ಎಂದು ತಾವು ತಮ್ಮ ಸಂಭಾಷಣೆಯಲ್ಲಿ ಪೂರಕವಾಗಿ ಗ್ರಹಿಸಿ ಆ ಮಾತುಗಳು ಸತ್ಯವೆಂದು ನಂಬುತ್ತಾರೆ. ಗೂಬೆಯು ಸ್ಮಶಾನದಲ್ಲಿ ಹೆಚ್ಚಾಗಿ ವಾಸ ಮಾಡುವ ಜೀವಿ. ಇದು ಮನೆಯ ಒಳಕ್ಕೆ ಹೊಕ್ಕರೆ ದೆವ್ವಗಳು ಮನೆಗೆ ಪ್ರವೇಶಿಸಿವೆ ಎಂಬ ನಂಬಿಕೆ ಇದೆ. ಕಾಗೆಯು ಒಳಕ್ಕೆ ಹೊಕ್ಕರೆ ಮುಂದೆ ಯಾವುದೋ ಕೆಟ್ಟ ಘಟನೆಯು ಸಂಭವಿಸುವ ಮುನ್ಸೂಚನೆ ಎಂಬ ನಂಬಿಕೆ ನಿಷೇಧ ಜಾರಿಗೆ ಬಂದಿದೆ. ನರಿಯು ಅಪರೂಪದ ಪ್ರಾಣಿ; ಬಹಳ ಬುದ್ಧಿವಂತ ಪ್ರಾಣಿ ಎಂಬ ಜನಜನಿತವಾಗಿದ್ದು ಇದನ್ನು ನೋಡಿದರೆ ಶುಭವಾಗುತ್ತದೆ ಎಂಬ ನಂಬಿಕೆ ಇರುಳಿಗರಲ್ಲಿದೆ. ಆಲೆ ಮರವು ಇವರ ಸಮುದಾಯದಲ್ಲಿ ಹುಟ್ಟಿನಿಂದ ಸಾವಿನ ತನಕ ನಡೆಯುವ ಎಲ್ಲ ಕಾರ್ಯದಲ್ಲೂ ಸಾಂಪ್ರದಾಯಿಕವಾಗಿ ಬಳಸುವ ವೃಕ್ಷ ಹಾಗೂ ಇವರ ಕುಲದ ಪೂರ್ವಜರ ಆತ್ಮಗಳು ಮತ್ತು ದೇವಿಯು ಈ ವೃಕ್ಷದಲ್ಲಿ ನೆಲೆಸಿರುವುದರಿಂದ ವೃಕ್ಷವನ್ನು ಕಡಿದರೆ ಅವರ ಶಾಪಕ್ಕೆ ಗುರಿಯಾಗಬೇಕಾಗುತ್ತದೆ ಎಂಬ ನಂಬಿಕೆಯಿಂದ ಈ ವಿಧಿನಿಷೇಧ ಜಾರಿಗೆ ಬಂದಿದೆ. ಆರಳಿ ಮರವನ್ನು ಕಡಿದರೆ ನಾಗನಿಗೆ ಅಪಚಾರ ಮಾಡಿದಂತೆ ಎಂಬ ನಂಬಿಕೆಯೂ ಇದೆ.

ಕೃಷಿಗೆ ಸಂಬಂಧಿಸಿದ ವಿಧಿ-ನಿಷೇಧ

೧. ಭೂಮಿಗೆ ಪೂಜೆ ಸಲ್ಲಿಸಿಯೇ ಬಿತ್ತನೆ ಮಾಡುವುದು.

೨. ಸೋಮವಾರ ಏರುಕಟ್ಟಿ ಹೊಲ ಉಳಬಾರದು.

೩. ಪಾದರಕ್ಷೆ ಧರಿಸಿ ರಾಶಿ ಕಣಕ್ಕೆ ಹೋಗಬಾರದು.

೪. ಕೃಷಿಗೆ ಬಳಸುವ ಸಾಮಗ್ರಿಗಳಿಗೆ ಕಾಲು ತಾಗಿಸಬಾರದು.

ಪ್ರಕೃತಿ ಆರಾಧಕವಾದ ಬುಡಕಟ್ಟು ಜನರಲ್ಲಿ ಭೂಮಿಯನ್ನು ದೈವ, ತಾಯಿ ಸಮಾನ ಎಂಬ ಭಾವನೆ ಇದೆ. ಈ ಹಿನ್ನೆಲೆಯಲ್ಲಿ ವ್ಯವಸಾಯದ ಪ್ರಾರಂಭಕ್ಕೆ ಮೊದಲು ಪೂಜೆ ಸಲ್ಲಿಸುವ ರೂಢಿ ಸಂಪ್ರದಾಯ ಚಾಲ್ತಿಯಲ್ಲಿದೆ. ಸೋಮವಾರ ಶಿವನಿಗೆ ಪ್ರಿಯವಾದ ವಾರವಾಗಿದ್ದು ಶಿವನ ವಾಹನವಾದ ನಂದಿಗೆ ಅಂದು ಶ್ರಮದಾಯಕ ಕೆಲಸ ನೀಡಬಾರದು ಎಂಬ ನಂಬಿಕೆ ಮತ್ತು ವಾರದಲ್ಲಿ ಒಂದು ದಿನ ವಿಶ್ರಾಂತಿ ನೀಡಬೇಕು ಎಂಬ ತತ್ವ ಇದರಲ್ಲಿ ಅಡಗಿದೆ. ಭೂತಾಯಿಯ ಸಿರಿ ಧಾನ್ಯವನ್ನು ಹಸನು ಮಾಡುವ ಸ್ಥಳ ಕಣ; ಇಂತಹ ಪವಿತ್ರ ಸ್ಥಳಕ್ಕೆ ಪಾದರಕ್ಷೆಯನ್ನು ಹಾಕಿಕೊಂಡು ಹೋಗಿ ಅಪವಿತ್ರ ಗೊಳಿಸಬಾರದು. ಹಾಗೆಯೇ ಸ್ವಚ್ಛತೆಯ ದೃಷ್ಟಿಯಿಂದ ಈ ನಿಷೇಧ ಜಾರಿಗೆ ಬಂದಿದೆ. ಕೃಷಿ ಚಟುವಟಿಕೆಗೆ ಬಳಸುವ ಸಲಕರಣೆಗಳೂ ದೈವ ಸಮಾನ ಹಾಗಾಗಿ ಅದಕ್ಕೆ ಅಪಚಾರ ಮಾಡಬಾರದು ಎಂಬ ನಂಬಿಕೆ ಇದೆ.

ಬುಡಕಟ್ಟು ವೈದ್ಯಕ್ಕೆ ಸಂಬಂಧಿಸಿದ ನಂಬಿಕೆ–ನಿಷೇಧಗಳು

೧. ಔಷಧಿ ಸಸ್ಯದ ಹೆಸರನ್ನು ಬಹಿರಂಗಪಡಿಸಬಾರದು

೨. ಸಸ್ಯದಿಂದ ಔಷಧಿಯನ್ನು ನಿಗಧಿತ ಸಮಯದೊಳಗೆ ಸಂಗ್ರಹಿಸಬೇಕು.

೩. ಮದ್ದನ್ನು ಲಾಭಕ್ಕಾಗಿ ಮಾರಾಟ ಮಾಡಬಾರದು.

ಔಷಧಿ ಗಿಡದ ಹೆಸರು ಮತ್ತು ದೊರೆಯುವ ಸ್ಥಳಗಳನ್ನು ತಿಳಿಸಬಾರದು, ಸಂಗ್ರಹಿಸುವಾಗ ಬೇರೊಬ್ಬರು ನೋಡಬಾರದು, ಹಾಗೇ ನೋಡಿದರೆ ಔಷಧಿಯು ರೋಗದ ವಿರುದ್ಧ ಪರಿಣಾಮಕಾರಿಯಾಗಿ ಕೆಲಸ ಮಾಡುವುದಿಲ್ಲ ಎಂಬ ನಂಬಿಕೆ ಇರುಳಿಗರಲ್ಲಿದೆ. ಔಷಧಿಯನ್ನು ಸಂಗ್ರಹಿಸುವ ಇರುಳಿಗರು ಮುಸ್ಸಂಜೆ ಅಥವಾ ಮುಂಜಾನೆ ಸಮಯದಲ್ಲಿ ಸಂಗ್ರಹಿಸಿದ ಔಷಧಿಗಳಿಗೆ ಹೆಚ್ಚಿನ ಶಕ್ತಿ ಇರುತ್ತದೆ ಎಂಬ ನಂಬಿಕೆ ಹೊಂದಿದ್ದಾರೆ. ಮದ್ದನ್ನು ಜನೋಪಯೋಗದ ದೃಷ್ಟಿಯಿಂದ ಮಾತ್ರ ಬಳಸಬೇಕು, ಲಾಭದ ದೃಷ್ಟಿಯಿಂದ ಬಳಸಿದರೆ ಮದ್ದು ಪರಿಣಾಮಕಾರಿಯಾಗಿ ಕೆಲಸ ಮಾಡುವುದಿಲ್ಲವೆಂಬ ನಂಬಿಕೆ ಇದೆ.

ಸಾವಿಗೆ ಸಂಬಂಧಿಸಿದ ನಂಬಿಕೆ–ನಿಷೇಧಗಳು

೧. ಅಸಹಜ ಸಾವು ಸಂಭವಿಸಿದರೆ ಅಂಥವರನ್ನು ಸುಡಬೇಕು.

೨. ತೊನ್ನು ಮತ್ತು ಬಿಳಿಮಚ್ಚೆ ಇರುವ ವ್ಯಕ್ತಿಗಳು ಮರಣಹೊಂದಿದಾಗ ಸುಡಬೇಕು.

೩. ಸಾವು ಸಂಭವಿಸಿದವರ ಮನೆಯಲ್ಲಿ ಅಡುಗೆ ಮಾಡಬಾರದು.

೪. ಅಂತ್ಯಸಂಸ್ಕಾರ ಮುಗಿಸಿದ ನಂತರ ಹಿಂದಕ್ಕೆ ತಿರುಗಿ ನೋಡಬಾರದು.

ಆತ್ಮಹತ್ಯೆ, ರೋಗ, ಅಪಘಾತಗಳಿಂದ ಅಪ್ರಾಪ್ತ ವಯಸ್ಸಿನಲ್ಲಿ ಸತ್ತವರು ಪ್ರೇತಾತ್ಮಗಳಾಗಿ ಕಾಡುತ್ತಾರೆ ಎಂಬ ಕಾರಣಕ್ಕಾಗಿ ಅವರನ್ನು ಹೂಳದೆ ಸುಡಬೇಕು. ಸುಟ್ಟರೆ ಪ್ರೇತಾತ್ಮಗಳಾಗಿ ಕಾಡುವುದಿಲ್ಲವೆಂಬ ನಂಬಿಕೆಯೇ ಈ ವಿಧಿನಿಷೇಧ ಹುಟ್ಟಲು ಕಾರಣವಾಗಿದೆ. ತೊನ್ನು ರೋಗ ಇದ್ದ ವ್ಯಕ್ತಿ ಸತ್ತರೆ

ಅವರನ್ನು ಸುಡದೇ ಹೂಳಿದರೆ ಆ ದೇಹಗಳು ಪಂಚಭೂತಗಳಲ್ಲಿ ಲೀನವಾಗದೆ ಹಾಗೆಯೇ ಉಳಿಯುತ್ತವೆ. ಗೆದ್ದಲು ಸಹ ಇವರನ್ನು ಮುಟ್ಟುವುದಿಲ್ಲ. ಹಾಗಾಗಿ ಹೂಳಿದ ಸುತ್ತಮುತ್ತಲಿನ ಪ್ರದೇಶದಲ್ಲಿ ಮಳೆ ಬಾರದೆ ಬರದ ಛಾಯೆ ಕಾಣಿಸಿಕೊಳ್ಳುತ್ತದೆ ಎಂಬ ನಂಬಿಕೆಯಿದೆ. ಇದಕ್ಕೆ ವೈಜ್ಞಾನಿಕವಾಗಿ ಯಾವುದೇ ಆಧಾರಗಳು ಇರುವುದಿಲ್ಲ. ಮೂರನೆಯ ವಿಧಿನಿಷೇಧಕ್ಕೆ ಮುಖ್ಯವಾದ ಕಾರಣ ಸಾವು ಸಂಭವಿಸಿದ ಮನೆಯವರು ದುಃಖದಲ್ಲಿ ಇರುತ್ತಾರೆ. ಅಂತಹ ಸಮಯದಲ್ಲಿ ಊಟ, ನೀರಡಿಕೆಯ ಪರಿವೆಯೇ ಇರುವುದಿಲ್ಲ. ಮನೆಯಲ್ಲಿರುವ ವೃದ್ಧರು ಮತ್ತು ಚಿಕ್ಕಮಕ್ಕಳನ್ನು ಆರೈಕೆ ಮಾಡಲು ಸಾಧ್ಯವಾಗುವುದಿಲ್ಲವೆಂಬ ದೃಷ್ಟಿಯಿಂದ ಅಂದು ಸಾವು ಸಂಭವಿಸಿದ ಮನೆಯಲ್ಲಿ ಅಡುಗೆ ಮಾಡಬಾರದು ಎಂಬ ನಂಬಿಕೆ ಬೆಳೆದುಬಂದಿದೆ. ಸ್ಮಶಾನದಲ್ಲಿ ಅಂತ್ಯಸಂಸ್ಕಾರ ಮುಗಿಸಿದ ನಂತರ ಹಿಂದಕ್ಕೆ ತಿರುಗಿ ನೋಡಿದರೆ ಸತ್ತವರು ಇವರನ್ನು ಹಿಂಬಾಲಿಸಿ ಮನೆಗೆ ಬರುತ್ತಾರೆ ಎಂಬ ನಂಬಿಕೆಯಿದೆ. ಹಾಗೆಯೇ ಸತ್ತ ವ್ಯಕ್ತಿಯು ಸಂಸ್ಕಾರವಾದ ನಂತರ ದುಃಖವನ್ನು ಮರೆಯಬೇಕು. ಮತ್ತೆ ಮತ್ತೆ ಆ ಸ್ಥಳವನ್ನು ನೋಡುತ್ತಿದ್ದರೆ ದುಃಖ ಹೆಚ್ಚುತ್ತದೆ ಎಂಬ ಕಲ್ಪನೆಯಿಂದ ಈ ನಿಯಮ ಜಾರಿಗೆ ಬಂದಿರಬಹುದು. ಹೀಗೆ ಜಗತ್ತಿನ ಪ್ರತಿಯೊಂದು ಸಮುದಾಯದಲ್ಲಿ ತನ್ನದೇ ಆದ ರೂಢಿ-ಸಂಪ್ರದಾಯಗಳಿರುವಂತೆ ವಿಧಿನಿಷೇಧಗಳು ಜಾರಿಯಲ್ಲಿ ಇವೆ.

೪.೭. ಒಳಾಡಳಿತ ವ್ಯವಸ್ಥೆ

ಪ್ರತಿಯೊಂದು ಬುಡಕಟ್ಟು ಸಮುದಾಯವು ತಮ್ಮ ತಮ್ಮೊಳಗೆ ನ್ಯಾಯ ನಿರ್ಣಯ ಮಾಡಿಕೊಳ್ಳುವ ವ್ಯವಸ್ಥೆಯನ್ನು ಹೊಂದಿವೆ. ಬುಡಕಟ್ಟುಗಳಲ್ಲಿ ಕುಲ ಪಂಚಾಯಿತಿಗಳು ಇಂದಿಗೂ ಕಾರ್ಯನಿರ್ವಹಿಸುತ್ತಿವೆ. ಬುಡಕಟ್ಟುಗಳ ಜೀವನ ನಿರ್ವಹಣೆಯಲ್ಲಿ ಬಹುಮುಖ್ಯವಾದ ಒಳಾಡಳಿತ ವ್ಯವಸ್ಥೆಯು ಮುಖ್ಯ ಪಾತ್ರವನ್ನು ವಹಿಸುತ್ತದೆ.

"ಪ್ರತಿಯೊಂದು ಸಮುದಾಯವು ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಯ್ದುಕೊಂಡು ಹೋಗಲು ತಮ್ಮದೇ ಆದ ಪ್ರತ್ಯೇಕ ನ್ಯಾಯ ಪಂಚಾಯಿತಿ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತದೆ. ತನ್ನ ಸಮುದಾಯದಲ್ಲಿ ಉದ್ಭವಿಸುವ ಸಮಸ್ಯೆಗಳಿಗೆ ಸರಿಯಾದ ನಿರ್ಣಯಗಳನ್ನು ತೆಗೆದುಕೊಂಡು ಆ ಸಮುದಾಯದ ಐಕ್ಯತೆಯನ್ನು ಕಾಪಾಡಿಕೊಂಡು ಬರುವುದೇ ಇಂತಹ ಕುಲ ಪಂಚಾಯಿತಿಗಳ ಪ್ರಮುಖ ಉದ್ದೇಶವಾಗಿದೆ.

ಇರುಳಿಗರು ತಮ್ಮ ನಡುವೆ ಉದ್ಭವಿಸುವ ವ್ಯಾಜ್ಯ ಮತ್ತು ಇತರ ಸಮಸ್ಯೆಗಳನ್ನು ಬೇರೆ ಬುಡಕಟ್ಟು ಸಮುದಾಯದವರಂತೆ ತಾವೇ ಕುಲ ಪಂಚಾಯಿತಿಯ ಮೂಲಕ ತೀರ್ಮಾನಿಸಿಕೊಳ್ಳುತ್ತಾರೆ.

ಇರುಳಿಗರು ಒಳಾಡಳಿತ ವ್ಯವಸ್ಥೆಯ ನಿರ್ವಹಣೆಗಾಗಿ ನಾಡಗೌಡ, ಕುಲದಗೌಡ, ಕಟ್ಟೆಗೌಡ, ಗಡಿಗೌಡ ಹಾಗೂ ಕೋಲಕಾರ ಎಂಬ ಐದು ಜನ ಪಂಚರನ್ನೊಳಗೊಂಡ ಸಮಿತಿಯನ್ನು ಮಾಡಿ ಕೊಂಡಿದ್ದಾರೆ. ಪ್ರತಿಯೊಂದು ಬೂಡಿಗೂ ಒಂದು ಕಟ್ಟೆ ಗೌಡನಿದ್ದು ಅದರ ಪೂರ್ಣ ನಿರ್ವಹಣೆಯು ಈ ಐದು ಪಂಚರನ್ನೊಳ ಗೊಂಡಿರುತ್ತದೆ. ಈ ಪಂಚರಲ್ಲಿ ಪ್ರಮುಖನಾದವನು ನಾಡಗೌಡನಾಗಿರುತ್ತಾನೆ. ಇವನಿಗೆ ಹೆಚ್ಚಿನ ಅಧಿಕಾರ ಗೌರವಗಳಿರುತ್ತದೆ. ಎರಡನೇ ಸ್ಥಾನದಲ್ಲಿ ಕಟ್ಟೆಗೌಡನಿರುತ್ತಾನೆ. ತರುವಾಯ

ಕುಲದ ಗೌಡ ಹಾಗೂ ಗಡಿಗೌಡರಿರುತ್ತಾರೆ. ಇವರಿಬ್ಬರೂ ಸಮಾನವಾದ ಗೌರವವನ್ನು ಪಡೆದಿರುತ್ತಾರೆ. ಕೊನೆಯಲ್ಲಿ ಕೋಲುಕಾರ ಇರುತ್ತಾನೆ. ಅವನು ಎಲ್ಲರ ಆಜ್ಞೆಯನ್ನು ಪಾಲಿಸುವವನಾಗಿರುತ್ತಾನೆ. ಈ ಸಮಿತಿಯೊಳಗೆ ಸ್ತ್ರೀಗೆ ಯಾವುದೇ ಸ್ಥಾನವಿರುವುದಿಲ್ಲ. ಅವಶ್ಯವಿದ್ದರೆ ಮಾತ್ರ ಮಹಿಳೆಯನ್ನು ಕರೆಯಿಸಿ ಕೊಳ್ಳುತ್ತಾರೆ.

ಸಮುದಾಯದಲ್ಲಿ ನಾಡಗೌಡ ಪರಮಾಧಿಕಾರವನ್ನು ಹೊಂದಿರುತ್ತಾನೆ. ಮದುವೆ, ಶವಸಂಸ್ಕಾರ, ಹಬ್ಬ-ಹರಿದಿನ, ಕುಲ ಪಂಚಾಯತಿ ಪ್ರತಿಯೊಂದು ಒಳ್ಳೆಯ, ಕೆಟ್ಟ ಕ್ರಿಯಾದಿಗಳೆಲ್ಲಾ ಇವನ ಅಪ್ಪಣೆಯಂತೆ ನಡೆಯುತ್ತವೆ. ಇರುಳಿಗ ದೈವಕ್ಕೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ನೀಡುವ ಜವಾಬ್ದಾರಿಯು ಈ ಕಟ್ಟೆಮನೆಯ ಯಜಮಾನರ ಸಮ್ಮುಖದಲ್ಲಿಯೇ ಜರಗುತ್ತದೆ.

ಇಡೀ ಕುಲದ ಎಲ್ಲರೂ ಒಂದೆಡೆ ಸೇರಿ ನಾಡಗೌಡನ ಅಪ್ಪಣೆಯ ಮೇರೆಗೆ ಕಟ್ಟೆಗೌಡನನ್ನು ಆಯ್ಕೆ ಮಾಡುತ್ತಾರೆ. ಈತನು ಕುಲಸಂಬಂಧಿ ಕಟ್ಟು-ಕಟ್ಟಳೆಗಳನ್ನು ವಿವರಿಸುವ, ದೈವದಲ್ಲಿ ನಡೆಯುವ ಕುಲಪಂಚಾಯತಿ ಇತ್ಯಾದಿಗಳನ್ನು ಎಲ್ಲ ಗಡಿಗೂ ಕೋಲುಕಾರನ ಮೂಲಕ ತಿಳಿಸುವ ಅಧಿಕಾರ ಹೊಂದಿರುತ್ತಾನೆ. ಈತನ ಮುಂದೆ ತಪ್ಪು ಮಾಡಿದ ವ್ಯಕ್ತಿ ತಪ್ಪನ್ನು ಒಪ್ಪಿಕೊಳ್ಳುವಾಗ ದಂಡದ ಹಣದ ಜೊತೆಯಲ್ಲಿ ವೀಳ್ಯದೆಲೆ, ಅಡಿಕೆ, ಆಲೆಮರದಪತ್ರೆ, ಕಣಗಲೆಹೂವುಗಳನ್ನು ನೀಡಬೇಕಾಗುತ್ತದೆ. ನ್ಯಾಯ ಪಂಚಾಯಿತಿಯ ಮೂರನೇ ಅಧಿಕಾರಿ ಕುಲದ ಗೌಡರದ್ದಾಗಿರುತ್ತದೆ. ಕುಲಕ್ಕೆ ಸಂಬಂದಿಸಿದ ನೀತಿ-ನಿಯಮ, ಆಚಾರ, ಸಂಪ್ರದಾಯಗಳನ್ನು ಚಾಚು ತಪ್ಪದಂತೆ ನೋಡಿಕೊಳ್ಳುವುದರ ಮೂಲಕ ತಮ್ಮ ಕುಲದ ಸಮಸ್ಯೆಗಳನ್ನು ಈತನೇ ತೀರ್ಮಾನಿಸುವ ಅಧಿಕಾರ ಪಡೆದಿರುತ್ತಾನೆ.

ಕುಲ ಪಂಚಾಯಿತಿಯ ನಾಲ್ಕನೇ ಪ್ರಮುಖ ಗಡಿಗೌಡನಾಗಿರುತ್ತಾನೆ. ಹೆಸರೇ ಸೂಚಿಸುವಂತೆ ಸೀಮೆಗೆ ಒಬ್ಬರಂತೆ ಗಡಿಗೌಡರಿರುತ್ತಾರೆ. "ಒಂದೇ ಪರಿಸರದಲ್ಲಿನ ವ್ಯಾಪ್ತಿಯ ಗಡಿ ಊರುಗಳಲ್ಲಿನ ಒಬ್ಬೊಬ್ಬ ಮನುಷ್ಯನನ್ನು ಆಯ್ಕೆ ಮಾಡುತ್ತಾರೆ. ಅವರನ್ನೇ ಗಡಿಗೌಡ"[೧೯] ಎನ್ನುತ್ತಾರೆ. ಸಮುದಾಯದಲ್ಲಿನ ನೀತಿ ನಿಯಮ ಉಲ್ಲಂಘಿಸುವವರನ್ನು ಪಂಚಾಯಿತಿಗೆ ಹಾಜರುಪಡಿಸಿ ಶಿಕ್ಷೆ ಕೊಡಿಸುವುದು ಗಡಿಗೌಡನ ಮೂಲ ಕರ್ತವ್ಯವಾಗಿರುತ್ತದೆ.

ಕೋಲಕಾರನದು ಕೊನೆಯ ಸ್ಥಾನ. ಇವನು ಕಟ್ಟೆಮನೆಯ ಕುಲಪಂಚಾಯ್ತಿ, ಮದುವೆ, ಸಾವು ಮುಂತಾಗಿ ತಮ್ಮ ಕಟ್ಟೆಮನೆ ವ್ಯಾಪ್ತಿಯಲ್ಲಿ ನಡೆಯುವ ಪ್ರತಿಯೊಂದು ವಿಚಾರವನ್ನೂ ದೈವಕ್ಕೆ ತಲುಪಿಸುವ ಕೆಲಸವನ್ನು ನಿರ್ವಹಿಸುವವನಾಗಿರುತ್ತಾನೆ. ಸಮುದಾಯದಲ್ಲಿನ ಮದುವೆ ಸಮಯದಲ್ಲಿ ರಾತ್ರಿಯ ವೇಳೆ ನಡೆಯುವ ಎಲ್ಲಾ ಶಾಸ್ತ್ರ ಸಂಪ್ರದಾಯಗಳಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಾನೆ. ಮದುವೆ ಮನೆಯಲ್ಲಿನ ಗದ್ದಿಗೆ ಪೂಜೆ, ಊಟದ ಉಸ್ತುವಾರಿ ಈ ಎಲ್ಲಾ ಕಾರ್ಯಕ್ರಮವನ್ನು ನಿರ್ವಹಿಸುವ ಜವಬ್ದಾರಿ ಕೋಲಕಾರನದಾಗಿರುತ್ತದೆ. ಪಂಚಾಯಿತಿ ವಿಧಿಸಿದ ಶಿಕ್ಷೆಯನ್ನೂ ಜಾರಿಗೆ ತರುವ ಕೆಲಸವು ಕೋಲುಕಾರನದೇ ಆಗಿರುತ್ತದೆ.

ಒಟ್ಟಾರೆಯಾಗಿ ಸಮುದಾಯದಲ್ಲಿ ನಡೆಯುವ ಶುಭ-ಅಶುಭ ಕಾರ್ಯಭಾರ ನಿರ್ವಹಿಸುವುದು ಈ ಕಟ್ಟೆಮನೆಯ ಜವಾಬ್ದಾರಿಯಾಗಿರುತ್ತದೆ. ಇರುಳಿಗರ ನ್ಯಾಯ ಪಂಚಾಯಿತಿ ವ್ಯವಸ್ಥೆಯು ಆಧುನಿಕ ಸರ್ಕಾರದ ನ್ಯಾಯಾಲಯವನ್ನು ಹೋಲುವ ಕಾರ್ಯವನ್ನು ನಡೆಸುತ್ತದೆ. ಸಮುದಾಯದ ಬಗ್ಗೆ ಕಾಳಜಿ ಹಾಗೂ ರೂಢಿ ಸಂಪ್ರದಾಯಗಳು ಚಾಚು ತಪ್ಪದಂತೆ ನಿಗಾವಹಿಸುತ್ತದೆ.

೪.೭.೧. ನ್ಯಾಯಪದ್ಧತಿ ಮತ್ತು ಶಿಕ್ಷೆ

ಇರುಳಿಗ ಸಮುದಾಯದ ನ್ಯಾಯ ಪಂಚಾಯಿತಿ ಸಭೆ ದೈವಗಳ ಆರಾಧನಾ ಸ್ಥಳಗಳಲ್ಲಿ ನಡೆಯುತ್ತದೆ. ಎತ್ತರವಾದ ಕಟ್ಟೆಯ ಮೇಲೆ ಕರಿಯ ಕಂಬಳಿ ಗದ್ದಿಗೆಗೆ ಪೂಜೆ ಸಲ್ಲಿಸಿದ ನಂತರ ನ್ಯಾಯ ಪಂಚಾಯತಿಯು ಪ್ರಾರಂಭವಾಗುತ್ತದೆ. ಕೋಲುಕಾರನು ನ್ಯಾಯ ಪಂಚಾಯಿತಿ ಸೇರುವ ವಿಚಾರವನ್ನು ಎಲ್ಲರ ಮುಂದೆ ಘೋಷಿಸುತ್ತಾನೆ. ಕುಲಪಂಚಾಯಿತಿಗೆ ನ್ಯಾಯ ಕೇಳಿ ಬಂದವರು ಬಲಗಡೆ ನಿಂತರೆ ಅಪರಾಧಿ ಸ್ಥಾನದಲ್ಲಿರುವವರು ಎಡಗಡೆ ನಿಲ್ಲುತ್ತಾರೆ. ತಪ್ಪು ಸಾಬೀತಾದರೆ ಶಿಕ್ಷೆಯ ಪ್ರಮಾಣ, ಕುಲಕ್ಕೆ ಸೇರಿಸಿಕೊಳ್ಳಬೇಕಾದ ಪರ್ಯಾಯಗಳ ಬಗ್ಗೆ ಚರ್ಚೆ ಮಾಡಲಾಗುತ್ತದೆ.

ತಪ್ಪಿತಸ್ಥ ಎಂದು ನ್ಯಾಯ ಪಂಚಾಯಿತಿ ತೀರ್ಮಾನಿಸಿದ ವ್ಯಕ್ತಿಯು ಪಂಚಾಯಿತಿ ತೀರ್ಮಾನವನ್ನು ಧಿಕ್ಕರಿಸಿದರೆ ಆತನನ್ನು ಕುಲದಿಂದ ಸಾಮೂಹಿಕವಾಗಿ ಬಹಿಷ್ಕರಿಸಿ ಹೊರಹಾಕಲಾಗುತ್ತದೆ. ಕುಲದಲ್ಲಿ ನಡೆಯುವ ಯಾವುದೇ ಕಾರ್ಯಕ್ರಮದಲ್ಲಿ ಆತನಿಗೆ ಪ್ರವೇಶವಿರುವುದಿಲ್ಲ. ಸಾಮಾನ್ಯ ಕುಲ ಪಂಚಾಯಿತಿಯಲ್ಲಿ ತೀರ್ಮಾನವಾಗದ ವಿಷಯಗಳು ಬೇರೆ ಕಟ್ಟೆಯ ಮನೆಯಲ್ಲಿ ಆಗುತ್ತದೆ. ಇರುಳಿಗರಲ್ಲಿ ಒಟ್ಟು ಐದು ಕಟ್ಟೆಮನೆಗಳು ಇವೆ. ಅವುಗಳು ಈ ಕೆಳಗಿನಂತಿವೆ.

೧. ಬೂದಿಗುಪ್ಪೆ	–	ಕನಕಪುರ ತಾಲೂಕು
೨. ಅಚ್ಚಲು	–	ಕನಕಪುರ ತಾಲೂಕು
೩. ತಿಮ್ಮೇಗೌಡನದೊಡ್ಡಿ	–	ಕನಕಪುರ ತಾಲೂಕು
೪. ಕೆರೆಗೂಡು	–	ಮಂಡ್ಯ ಜಿಲ್ಲೆ
೫. ನೆಲಮಾರು	–	ತಮಿಳುನಾಡಿನ ಡೆಂಕನಕೋಟೆ ತಾಲೂಕು.

ಆಧಾರ: ಕ್ಷೇತ್ರಕಾರ್ಯದ ಮಾಹಿತಿ

ಇವುಗಳಲ್ಲಿ ಬೂದಿಗುಪ್ಪೆಯ ಕಟ್ಟೆಮನೆಯನ್ನು ಹಿರಿಯ ಕಟ್ಟೆಮನೆ ಎಂದು ಕರೆಯುತ್ತಾರೆ. ಇದು ಸರ್ವೋಚ್ಚ ನ್ಯಾಯಾಲಯದಂತೆ ಕಾರ್ಯನಿರ್ವಹಿಸುತ್ತದೆ. ಅಪರಾಧಿಯು ನ್ಯಾಯ ಪಂಚಾಯಿತಿಯಲ್ಲಿ ವಿಧಿಸಿದ ದಂಡ ಮತ್ತು ಶಿಕ್ಷೆಯನ್ನು ಪುನರ್‌ವಿಮರ್ಶೆಗೆ ಇಲ್ಲಿಗೆ ಹೋಗಬಹುದು. ಅಚ್ಚಲು ಕಟ್ಟಿಮನೆಯಲ್ಲಿ ಕುಲಚಾರಕ್ಕೆ ಸಂಬಂಧಿಸಿದ ಕುಲಶುದ್ಧಿ ಕಾರ್ಯವನ್ನು ನಡೆಸಿದರೆ ತಿಮ್ಮೇಗೌಡನ ದೊಡ್ಡಿಯ ಕಟ್ಟೆಮನೆ ಕೋಲಾಕಾರ ಮತ್ತು ನಾಡಗೌಡನ ಮೇಲೆ ಬಂದ ಗುರುತರ ಆಪಾದನೆಗಳ ಬಗ್ಗೆ ವಿಮರ್ಶೆ

ನಡೆಸುತ್ತದೆ. ಕರೆಗೊಡಿನ ಕಟ್ಟೆಮನೆಯಲ್ಲಿ ಪಂಚಾಯಿತಿಯ ಮುಖ್ಯಸ್ಥರ ಮತ್ತು ಇತರೆ ಕಟ್ಟೆಮನೆಯವರ ಸಮಸ್ಯೆ ಹಾಗೂ ಕುಲ ಶುದ್ಧೀಕರಣ ಕಾರ್ಯಗಳು ನಡೆಯುತ್ತವೆ. ತಲೆಮಾರು ಕಟ್ಟೆಮನೆಯಲ್ಲಿ ಕಟ್ಟೆಮನೆಯ ಮುಖ್ಯಸ್ಥರಿಗೂ ಶುದ್ಧೀಕರಣ ಕಾರ್ಯವನ್ನು ನಡೆಸುತ್ತದೆ. ಇರುಳಿಗರಲ್ಲಿನ ಕುಲಪಂಚಾಯಿತಿ ಕಟ್ಟೆಮನೆಗಳು, ಆಧುನಿಕ ನ್ಯಾಯಾಲಯಗಳು ನಡೆಸುವ ನ್ಯಾಯ ವಿಮರ್ಶೆಯಂತೆ ಕಾರ್ಯನಿರ್ವಹಿಸುತ್ತವೆ.

ದಾಯಾದಿಗಳ ಜಗಳ: ಒಂದೇ ಕುಟುಂಬದಲ್ಲಿ ಅಣ್ಣ–ತಮ್ಮಂದಿರು, ಆಸ್ತಿ ವಿಷಯದಲ್ಲಿ ಕಲಹಗಳಾಗಿ ನ್ಯಾಯದ ಕಟ್ಟೆಗೆ ಬಂದರೆ ವಿವಾದವನ್ನು ಪರಿಶೀಲಿಸಿ ತೀರ್ಪು ನೀಡಲಾಗುತ್ತದೆ. ಸಾಮಾನ್ಯವಾಗಿ ಇಂತಹ ವಿಚಾರಗಳಲ್ಲಿ ರಾಜಿ ಮಾಡುವ ಕಾರ್ಯ ಮಾಡುತ್ತಾರೆ. ಇದಕ್ಕೆ ಒಪ್ಪಿದಾಗ ಕಟ್ಟೆಮನೆಯ ಯಜಮಾನರು ಆಸ್ತಿ ವಿಭಜನೆ ಮಾಡುತ್ತಾರೆ. ಈ ರೀತಿ ನ್ಯಾಯ ಪಂಚಾಯತಿ ತೀರ್ಪು ಒಪ್ಪದ, ಆಸ್ತಿ ವಿಭಜನೆ ಮಾಡಿದ್ದಕ್ಕಾಗಿ ಎರಡು ಕಡೆಯವರು ದಂಡವನ್ನು ಹಣದ ರೂಪದಲ್ಲಿ ನ್ಯಾಯ ಪಂಚಾಯತಿಗೆ ಕಟ್ಟಬೇಕಾಗುತ್ತದೆ.

ಚಪ್ಪಲಿಯಲ್ಲಿ ಹೊಡೆದಾಡಿದರೆ: ಬುಡಕಟ್ಟುಗಳಲ್ಲಿ ಇಂತಹ ಕೃತ್ಯವನ್ನು ಕೊಲೆ ಮಾಡಿದ ಪಾಪಕ್ಕಿಂತಲೂ ದೊಡ್ಡ ಕೃತ್ಯವೆಂದು ಪರಿಗಣಿಸಲಾಗುತ್ತದೆ. ಈ ಕೃತ್ಯದಲ್ಲಿ ಭಾಗವಹಿಸಿದ ಇಬ್ಬರನ್ನು ಮೊದಲಿಗೆ ಕುಲದಿಂದ ಹೊರಗೆ ಹಾಕುತ್ತಾರೆ. ಒಂದು ವೇಳೆ ಅಪರಾಧಿಗಳು ಮತ್ತೆ ಕುಲಕ್ಕೆ ಸೇರಿಕೊಳ್ಳಲು ಬಯಸಿದರೆ ಕೋಲುಕಾರನ ಜೊತೆಯಲ್ಲಿ ಅಚ್ಚಲು ಕಟ್ಟೆಮನೆಗೆ ಹೋಗಿ ದಂಡ ಕಟ್ಟಿ ಕುಲಶುದ್ಧೀಕರಣ ಹೊಂದಬೇಕಾಗುತ್ತದೆ. ಹೊಡೆದವನು ಕುಲಶುದ್ಧೀಕರಣ ಮಾಡಿಸಿಕೊಂಡು ಬಂದ ನಂತರ ಇಡೀ ಸಮುದಾಯಕ್ಕೆ ದೇವರ ಕಾರ್ಯ ಮಾಡಿ ಊಟ ಹಾಕಬೇಕಾಗುತ್ತದೆ. ಈ ರೀತಿಯ ತಪ್ಪುಗಳನ್ನು ಮಾಡಿದವನು ಹಿರಿಯರ ಹಬ್ಬ, ದೈವಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ಕಾರ್ಯಕ್ರಮದಲ್ಲಿ ನೇರವಾಗಿ ಭಾಗವಹಿಸುವ ಅವಕಾಶವನ್ನೇ ಇಡೀ ಜೀವನಪೂರ್ತಿ ಕಳೆದುಕೊಳ್ಳುತ್ತಾರೆ.

ವೈವಾಹಿಕ ಜೀವನದ ಜಗಳ: ವೈವಾಹಿಕ ಬದುಕಿನಲ್ಲಿ ಗಂಡ–ಹೆಂಡತಿಗೆ ಹೊಂದಾಣಿಕೆಯಾಗದಿದ್ದ ಸಂದರ್ಭದಲ್ಲಿ ಕಟ್ಟೆಮನೆಗೆ ಇಬ್ಬರನ್ನೂ ಕರೆಯಿಸಿ ಬುದ್ಧಿವಾದ ಹೇಳಿ ಸರಿಪಡಿಸಲು ಪ್ರಯತ್ನ ಮಾಡಲಾಗುತ್ತದೆ. ಹೊಂದಾಣಿಕೆಗೆ ಸಮಯ ನೀಡುತ್ತಾರೆ. ಇಲ್ಲಿಯೂ ಹೊಂದಾಣಿಕೆ ಆಗದಿದ್ದಾಗ ಗಂಡು ಮದುವೆಯನ್ನು ಮುರಿದುಕೊಳ್ಳಲು ಬಯಸಿದರೆ ಹೆಣ್ಣಿನ ಜೀವನಕ್ಕೆ ಬೇಕಾದ ಪರಿಹಾರದ ಹಣವನ್ನು ಕಟ್ಟಬೇಕಾಗುತ್ತದೆ. ಒಂದು ವೇಳೆ ಹೆಣ್ಣು ಬಯಸಿದರೆ ಮದುವೆ ಸಂದರ್ಭದಲ್ಲಿ ಕೊಟ್ಟ ವಸ್ತುಗಳನ್ನು ವರನ ಮನೆಗೆ ಕೊಡಬೇಕು ಮತ್ತು ನ್ಯಾಯ ಪಂಚಾಯಿತಿಗೆ ದಂಡವನ್ನು ಕೊಡಬೇಕಾಗುತ್ತದೆ.

ಅನೈತಿಕ ಸಂಬಂಧ: ಇರುಳಿಗ ಸಮುದಾಯದಲ್ಲಿ ಅವಿವಾಹಿತ ಗಂಡು ವಿವಾಹವಾದ ಹೆಣ್ಣಿನ ಜೊತೆ ಅನೈತಿಕ ಸಂಬಂಧ ಹೊಂದಿದರೆ ಅವನನ್ನು ಕುಲದಿಂದ ಶಾಶ್ವತವಾಗಿ ಹೊರಹಾಕುವ ಉಗ್ರವಾದ ಶಿಕ್ಷೆಯನ್ನು ನೀಡುತ್ತಾರೆ. ಹಾಗೆಯೇ ತಮ್ಮದೇ ಸಮುದಾಯಕ್ಕೆ ಸೇರಿದ ಹೆಣ್ಣು ಅದೇ ಸಮುದಾಯದ ಗಂಡಿನಿಂದ ಅಕ್ರಮ ಸಂಬಂಧ ಮೂಲಕ ಗರ್ಭಿಣಿಯಾದರೆ ಇದಕ್ಕೆ ಕಾರಣವಾದವನನ್ನು ಪತ್ತೆಹಚ್ಚಿ ಮಗುವು ಜನನವಾಗುವವರೆಗೆ ಕಾಯ್ದು ನಂತರ ಆ ವ್ಯಕ್ತಿಯೊಡನೆ ವಿವಾಹ ಮಾಡಿಸುತ್ತಾರೆ.

ಈ ರೀತಿಯ ಸನ್ನಿವೇಶಗಳು ಬಹಳ ಕಡಿಮೆ; ಕಾರಣ ಸಮುದಾಯದಲ್ಲಿ ಬಾಲ್ಯವಿವಾಹ ಪದ್ಧತಿ ಜಾರಿಯಲ್ಲಿರುವುದರಿಂದ ಇಂತಹ ಘಟನೆಗಳು ತುಂಬಾ ವಿರಳ. ವಿವಾಹಿತ ಸ್ತ್ರೀ, ವಿವಾಹಿತ ಪುರುಷನ ಜೊತೆ ಅಕ್ರಮಸಂಬಂಧ ಇಟ್ಟುಕೊಂಡಿದ್ದರೆ ಆಕೆಯ ಮೊದಲ ಪತಿಗೆ ವಿವಾಹ ವಿಚ್ಛೇದನೆ ಕೊಡಿಸಲಾಗುತ್ತದೆ. ಈ ಸಂದರ್ಭದಲ್ಲಿ ಮೊದಲ ಪತಿಗೆ ಆಕೆ ಪರಿಹಾರವನ್ನು ನೀಡಬೇಕಾಗುತ್ತದೆ. ಈಕೆಯನ್ನು ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸದಂತೆ ನಿರ್ಬಂಧ ಹಾಕುತ್ತಾರೆ. ಇಂತಹ ಸಂಬಂಧದಿಂದ ಜನಿಸಿದ ಮಕ್ಕಳಿಗೆ "ಕೈಕೊಳಕಾರ" ಪೀಳಿಗೆ ಎಂದು ಕರೆಯುತ್ತಾರೆ. ಹೀಗೆ ಇರುಳಿಗರ ಒಳಾಡಳಿತ ವ್ಯವಸ್ಥೆಯು ಇದೆ.

ಇತ್ತೀಚಿನ ದಿನದಲ್ಲಿ ಇರುಳಿಗರಲ್ಲಿಯೂ ಕುಲ ಪಂಚಾಯಿತಿಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ಇವರು ಆಧುನಿಕ ನ್ಯಾಯ ಪದ್ಧತಿಗೆ ಮುಖಾಮುಖಿಯಾಗುತ್ತಾ ಕುಲ ಪಂಚಾಯಿತಿ ನೀಡುವ ನಿರ್ಣಯಗಳನ್ನು ಧಿಕ್ಕರಿಸಿ ಪೊಲೀಸ್ ಠಾಣೆಗೆ ಹೋಗುತ್ತಿದ್ದಾರೆ.

ಅಡಿಟಿಪ್ಪಣಿಗಳು

೧. ಭೈರಪ್ಪ ಕೆ., ಭಾರತದಲ್ಲಿನ ಸಾಮಾಜಿಕ ಸಮಸ್ಯೆಗಳು, ಶ್ರೀಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರ್ಗಿ, ಪು–೧೫೧, ೨೦೦೨.

೨. ಚಂದ್ರಶೇಖರ ಬಿ. ದಾಮ್ಲೆ, ಭಾರತೀಯ ಸಾಮಾಜಿಕ ಅಧ್ಯಯನ, ದ್ರವಣ ಪ್ರಕಾಶನ, ಮಂಗಳೂರು, ಪು ೫೩, ೧೯೯೯.

೩. ಕವಿತಾ ರೈ., ಭಾರತೀಯ ಕುಟುಂಬದ ಪರಿಕಲ್ಪನೆ, ಪ್ರಸಾರಾಂಗ, ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು, ಪು–೧೨–೧೫, ೨೦೧೨

೪. Ananth Krishna Iyer L.K., The Mysore Tribal and Caste, Vol-3, Mittel Publication, New Delhi, P.381, 1922.

5. Nanjundaiah H.V., and Ananth Krishna Iyer L.K., The Mysore Tribal and Caste, Vol-3, Mittel Publication, New Delhi, P.383, 1922.

೬. ಚಂದ್ರಕಾಳೇನಹಳ್ಳಿ, ಸೋಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು–೬೫, ೧೯೯೩.

೭. ತಿಳುವಳಿಕೆದಾರರು, ಕೆಂಚಪ್ಪ (೯೧), ಕಾಳಯ್ಯನಪಾಳ್ಯ, ಮಾಗಡಿ ತಾಲೂಕು, ರಾಮನಗರ ಜಿಲ್ಲೆ.

೮. ತಿಳುವಳಿಕೆದಾರರು, ಬರಗಮ್ಮ (೯೫), ಮಾನಗಲ್ಲು, ಮಾಗಡಿ ತಾಲೂಕು, ರಾಮನಗರ ಜಿಲ್ಲೆ.

೯. ಭೈರೇಗೌಡ ಎಂ., ಇರುಳಿಗರ ಜಾನಪದ ಅಧ್ಯಯನ, ಸಿವಿಜಿ ಪಬ್ಲಿಕೇಷನ್, ಬೆಂಗಳೂರು, ಪು-೧೯೧, ೨೦೦೧.

೧೦. ಅದೇ, ಪು-೧೯೩, ೨೦೦೧.

೧೧. ಬೋರಲಿಂಗಯ್ಯ ಹಿ.ಚಿ., ಬುಡಕಟ್ಟು ದೈವರಾಧನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೬೬, ೨೦೧೧

೧೨. ಅದೇ, ಪು-೬೮, ೨೦೧೧

13. Mariyappa Bhat M., Kittles Kannada, English Dictionary in Vol-4, University of Madras, P-1009-1010, 1975

೧೪. ಶಂಬಾಜೋಶಿ, ಕರ್ನಾಟಕ ಸಾಂಸ್ಕೃತಿಕ ಪೂರ್ವಪೀಠಿಕೆ, ಭಾಗ-೧, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು-೧೨೯, ೧೯೯೯.

೧೫. ಭೈರೇಗೌಡ ಎಂ., ಇರುಳಿಗರ ಜಾನಪದ ಅಧ್ಯಯನ, ಸಿವಿಜಿ ಪಬ್ಲಿಕೇಷನ್, ಬೆಂಗಳೂರು, ಪು-೨೯೭, ೨೦೦೧.

೧೬. ಪ್ರಭಾಕರ ಎ.ಎಸ್. (ಸಂ), ಸೇತುಮಾಧವ ಜೋಡಿದಾರ್, ಆದಿವಾಸಿಗಳ ತಾಂತ್ರಿಕ ಚಿಕಿತ್ಸಾ ವಿಧಾನಗಳು, (ಲೇಖನ) ಆದಿವಾಸಿ ಅಖ್ಯಾನ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ ಪು. ೬೬-೬೭, ೨೦೦೯.

೧೭. ತಿಳುವಳಿಕೆದಾರರು, ಬಸವರಾಜಪ್ಪ (೬೭), ಲಕ್ಷ್ಮೀಪುರ, ರಾಮನಗರ ತಾಲೂಕು, ಜಿಲ್ಲೆ.

೧೮. ಮಂಜುನಾಥ ಬೇವಿನಕಟ್ಟಿ, ಜನಪದ ನಂಬಿಕೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೨೩, ೧೯೯೬

೧೯. ಭೈರೇಗೌಡ ಎಂ., ಇರುಳಿಗರ ಜಾನಪದ ಅಧ್ಯಯನ, ಸಿವಿಜಿ ಪಬ್ಲಿಕೇಷನ್, ಬೆಂಗಳೂರು, ಪು-೧೯೩, ೨೦೦೧.

ಅಧ್ಯಾಯ ಐದು

ಇರುಳಿಗರ ಆರ್ಥಿಕ ಸ್ಥಿತಿಗತಿ

ಮಾನವ ನಾಗರಿಕತೆಯ ಇತಿಹಾಸವನ್ನು ವಿದ್ವಾಂಸರು ಹಲವು ಭಾಗಗಳಾಗಿ ವಿಂಗಡಿಸಿದ್ದಾರೆ. ಬೇಟೆಯುಗ, ಆಹಾರ ಸಂಸ್ಕರಣೆ ಯುಗ, ಪಶುಪಾಲನೆಯ ಯುಗ, ಕೃಷಿಯುಗ, ಕೈಗಾರಿಕ ಯುಗ. ಈ ಎಲ್ಲಾ ಹಂತಗಳನ್ನು ದಾಟಿ ಬಂದ ಮನುಷ್ಯ ಇಂದು ಆರ್ಥಿಕವಾಗಿ ಸಬಲನಾಗುವ ಧಾವಂತದಲ್ಲಿ ಎಲ್ಲವನ್ನೂ ಮರೆತು ಆರ್ಥಿಕವಾಗಿ ಸಬಲನಾಗುವುದೇ ತನ್ನ ಪರಮ ಧ್ಯೇಯ ಎಂಬ ಧೋರಣೆಗೆ ಒಳಗಾಗಿದ್ದಾನೆ. ಆದರೆ ಬುಡಕಟ್ಟು ಸಮುದಾಯಗಳು ಇಂದಿಗೂ ಬಡತನದ ಬೇಗೆಯನ್ನು ಏಕೆ ಅನುಭವಿಸುತ್ತಿವೆ. ಆಧುನಿಕವಾದ ಹಣದ ವ್ಯಾಮೋಹ ಇವರಿಗಿಲ್ಲವೆ? ಇದ್ದರೂ ಅದನ್ನು ಪೂರೈಸಿಕೊಳ್ಳುವಲ್ಲಿ ಇರುಳಿಗರಂಥ ಬುಡಕಟ್ಟುಗಳು ಎಷ್ಟರಮಟ್ಟಿಗೆ ಸಫಲವಾಗಿವೆ ಎಂಬುದನ್ನು ಇಲ್ಲಿ ಅವಲೋಕಿಸಲಾಗಿದೆ.

ಬಹುತೇಕ ಬುಡಕಟ್ಟುಗಳು ಕಾಡನ್ನು ಅವಲಂಭಿಸಿಯೇ ಜೀವನ ನಿರ್ವಹಣೆ ಮಾಡುತ್ತಿದ್ದವು. ಆಹಾರಕ್ಕಾಗಿ ಕಾಡಿನಲ್ಲಿ ಅಲೆದಾಡುತ್ತಾ ಪ್ರಕೃತಿಯಲ್ಲಿ ದೊರೆಯುವ ಪ್ರಾಣಿಗಳ ಬೇಟೆ ಇಲ್ಲವೆ ಗೆಡ್ಡೆ ಗೆಣಸು, ಸೊಪ್ಪು ಸೆದೆಗಳನ್ನು ತಿಂದು ಹಸಿವನ್ನು ನೀಗಿಸಿಕೊಳ್ಳುವ ಗುಣ ಬುಡಕಟ್ಟುಗಳದು. ಅಲೆಮಾರಿ ಬದುಕಿಗೆ ಅಂಟಿಕೊಂಡ ಬುಡಕಟ್ಟುಗಳು ತಮ್ಮ ಸಾಮಾನು ಸರಂಜಾಮುಗಳನ್ನು ಹೊತ್ತೊಯ್ಯುವುದಕ್ಕಾಗಿ ದನ, ಕತ್ತೆಯಂತಹ ಪ್ರಾಣಿಗಳನ್ನು ಆಶ್ರಯಿಸುತ್ತಿದ್ದರು.

ಹೀಗೆ ಆರಂಭವಾದ ಮಾನವ ಜೀವನ ನಿಧಾನಕ್ಕೆ ಕೃಷಿಯತ್ತ ವಾಲಿತು. ಹೀಗೆ ಒಂದು ಕಾಲಕ್ಕೆ ಕಾಡನ್ನು ನಂಬಿ ಕಾಡಿನಲ್ಲಿ ಸ್ವತಂತ್ರವಾಗಿ ಬದುಕುತ್ತಿದ್ದ ಬುಡಕಟ್ಟುಗಳು ವಸಾಹತುಶಾಹಿಗಳ ಆರ್ಥಿಕ

ನೀತಿಯಿಂದಾಗಿ ದೇಶಿಯ ಮೂಲದ ಕುಶಲಕರ್ಮಿಗಳ ಪಾರಂಪರಿಕ ಕಸುಬನ್ನು ತುಳಿದು ಆ ಸಮುದಾಯಗಳನ್ನು ಆರ್ಥಿಕವಾಗಿ ದುರ್ಬಲಗೊಳ್ಳುವಂತಾಯಿತು. ಹಾಗೆಯೇ ಅರಣ್ಯವಾಸಿ ಜನರನ್ನು ನಿಯಂತ್ರಿಸಲು ಬ್ರಿಟೀಷರು ಅರಣ್ಯ ಹಕ್ಕು ನಿರ್ಬಂಧ ಕಾಯ್ದೆಯನ್ನು ಜಾರಿಗೊಳಿಸುವ ಮೂಲಕ ಅವರ ಆರ್ಥಿಕ ಮೂಲಗಳನ್ನು ಸಹ ಅತಂತ್ರಗೊಳಿಸಿದರು.

ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿ ತನಗೆ ಬೇಕಾದ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವಲ್ಲಿ ಆರ್ಥಿಕ ಪರಿಸ್ಥಿತಿಯು ಮಹತ್ವದ ಪಾತ್ರವಹಿಸುತ್ತದೆ. ಆತನ ಸಾಮಾಜಿಕ ಸ್ಥಾನಮಾನದ ಮೇಲೆಯೂ ಇದು ಪ್ರಭಾವ ಬೀರುತ್ತದೆ. ಹಿಗೆಯೇ ಒಂದು ಬುಡಕಟ್ಟು ಸಮುದಾಯದ ಆರ್ಥಿಕ ಸ್ಥಿತಿಯನ್ನು ಗಮನಿಸಿದಾಗ ಅಥವಾ ಇತರೆ ಸಮುದಾಯದವರೊಂದಿಗೆ ಹೋಲಿಸಿ ನೋಡಿದಾಗ ಇರುಳಿಗರ ಜೀವನ ನಿರ್ವಹಣೆ, ನೈರ್ಮಲ್ಯವು ಇತರೆ ಸಮುದಾಯದವರಿಗಿಂತ ಬಹಳ ಹಿಂದಿದೆ. ಆಧುನಿಕ ಆರ್ಥಿಕತೆಯ ಬೆನ್ನು ಬಿದ್ದವರಿಗೂ ಹಾಗೂ ಪಾರಂಪರಿಕ ಆರ್ಥಿಕ ಮೂಲವನ್ನು ನಂಬಿ ಜೀವನ ನಡೆಸುತ್ತಿರುವ ಬುಡಕಟ್ಟುಗಳ ನಡುವೆ ದೊಡ್ಡ ಕಂದಕವಿರುವುವನ್ನು ನೋಡಬಹುದಾಗಿದೆ. "ವರ್ತಮಾನ ಎನ್ನುವುದು ಬುಡಕಟ್ಟು ಸಮುದಾಯಗಳಿಗೆ ಭೂತವೇ ಆಗಿದೆ. ನಿರ್ದಿಷ್ಟ ಧೋರಣೆ, ಸಮರ್ಪಕ ಸಂಘಟನೆ ಇಲ್ಲದೆ ಈ ಸಮುದಾಯಗಳ ಸಾಮಾಜಿಕ, ಆರ್ಥಿಕ ಬದುಕು ಚೆಲ್ಲಾಪಿಲ್ಲಿಯಾಗಿದೆ. ಸರ್ಕಾರದ ಯೋಜನೆಗಳಿಂದ ಪ್ರಯೋಜನವಾಗುತ್ತಿಲ್ಲ. ಉತ್ಪಾದನೆಯ ಪಾರಂಪರಾಗತ ನೆಲೆಗಳನ್ನು ಕಳೆದುಕೊಂಡು ಹೊಸ ಉತ್ಪಾದನಾ ನೆಲೆಗಳನ್ನು ಪಡೆಯಲಾಗದೆ ನರಳುವ ಈ ಸಮುದಾಯಗಳದ್ದು ಕತ್ತಲೆಯ ತೀರ, ಅಸ್ಥಿರವಾದ ನೆಲೆಗಳು, ದುರ್ಬಲ ಆರ್ಥಿಕ ಹಿನ್ನೆಲೆ, ಬುಡಕಟ್ಟುಗಳ ನಡುವೆಯೇ ಇರುವ ಶ್ರೇಣೀಕರಣ, ಊಳಿಗಮಾನ್ಯ, ಜಾತಿಪದ್ಧತಿಯೊಳಗೆ ಇರಬೇಕಾದ ಅನಿವಾರ್ಯತೆ, ಹೀಗೆ ಹತ್ತು ಹಲವು ಸಿಕ್ಕುಗಳಲ್ಲಿ ಸಿಕ್ಕಿ ಹಾಕಿಕೊಂಡು ನರಳುತ್ತಿರುವ ಎಲ್ಲಾ ಬುಡಕಟ್ಟುಗಳಿಗೆ ಸಲ್ಲುವ ಅಭಿವೃದ್ಧಿ ಮೀಮಾಂಸೆ ಸಾಧ್ಯವೇ? ಸಾಧ್ಯವಾದರೆ ಎಲ್ಲಿದೆ? ಈ ಸವಾಲುಗಳಿಗೆ ಉತ್ತರ ಕಷ್ಟ"[7]. ಆದರೂ ಅಲ್ಪ ಸ್ವಲ್ಪ ಭಾರತದ ಬುಡಕಟ್ಟು ಸಮುದಾಯಗಳು ಬದಲಾವಣೆಯ ಹಂತಕ್ಕೆ ಬಂದು ನಿಂತಿವೆ. ಆಧುನಿಕ ಸರ್ಕಾರಗಳು ನೀಡುವ ಬ್ಯಾಂಕ್‌ನ ಹಣಕಾಸು ನೆರವು, ಆಧುನಿಕ ಶಿಕ್ಷಣ ಇವರ ಜೀವನ ಶೈಲಿಯನ್ನು ಬದಲಿಸಲು ಸಹಕಾರಿಯಾಗಿವೆಯೆನಿಸಿದರೂ ಅದು ಪರಿಪೂರ್ಣವಾಗಿ ಬದಲಿಸಲು ಸಹಕಾರಿಯಾಗಿಲ್ಲ ಎಂಬುದು ಮಾತ್ರ ಸತ್ಯ.

ಭಾರತದಲ್ಲಿ ಸಾಮಾನ್ಯವಾಗಿ ಬುಡಕಟ್ಟು ಸಮುದಾಯಗಳ ಅರ್ಥವ್ಯವಸ್ಥೆಯು ಅವರ ಪಾರಂಪರಿಕ ವೃತ್ತಿಗಳನ್ನು ಮತ್ತು ಅರಣ್ಯೋತ್ಪನ್ನಗಳ ಸಂಗ್ರಹಣೆಯನ್ನು ಅವಲಂಬಿಸಿದೆ. ಬುಡಕಟ್ಟು ಜನರು ಕುಮ್ರಿ ಬೇಸಾಯದಂತಹ ಅನಿಶ್ಚಿತ ಕೃಷಿಯನ್ನು ಮಾಡಲು ಸರ್ಕಾರದ ಅರಣ್ಯ ಕಾಯ್ದೆ ಅಡ್ಡ ಬರುತ್ತಿದೆ. ಈ ಪರಿಸ್ಥಿಗೆ ಇರುಳಿಗ ಬುಡಕಟ್ಟು ಹೊರತಾಗಿಲ್ಲ.

೫.೧. ಇರುಳಿಗ ಬುಡಕಟ್ಟಿನ ಪಾರಂಪರಿಕ ಆರ್ಥಿಕ ಚಟುವಟಿಕೆಗಳು

ಹಿಂದಿನಿಂದಲೂ ಅರಣ್ಯದಲ್ಲಿ ವಾಸಿಸುತ್ತಿರುವ ಬುಡಕಟ್ಟು ಸಮುದಾಯಗಳಲ್ಲಿ ಇರುಳಿಗ ಸಮುದಾಯವು ಒಂದು. ಕಾಡನ್ನೇ ಅವಲಂಭಿಸಿದ ಇರುಳಿಗರು ಕಾಡನ್ನು ತಾತ್ಕಾಲಿಕವಾಗಿ ಸವರಿ ಆ ಸ್ಥಳದಲ್ಲಿ ಕುಮ್ರಿ ಬೇಸಾಯ ಮಾಡುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಈ ಪರಿಸ್ಥಿತಿ ಬದಲಾಗಿದೆ.

ವಸಾಹತುಶಾಹಿಗಳು ಭಾರತಕ್ಕೆ ಕಾಲಿಡುವ ಪೂರ್ವದಲ್ಲಿ ಅಲ್ಪವಾದರೂ ನೆಮ್ಮದಿಯ ಜೀವನ ಸಾಗಿಸಲು ಬುಡಕಟ್ಟುಗಳಿಗೆ ಅವಕಾಶವಿತ್ತು. ಆದರೆ ವಸಾಹತುಶಾಹಿಗಳ ಪ್ರವೇಶದಿಂದಾಗಿ ಎಷ್ಟೋ ಬುಡಕಟ್ಟುಗಳು ನೆಲೆ ಕಳೆದುಕೊಳ್ಳುವಂತಾಯಿತು. ವಸಾಹತುಶಾಹಿ ಕಾಲಘಟ್ಟದಲ್ಲಿ ಅರಣ್ಯಗಳನ್ನು ವಾಣಿಜ್ಯ ಉದ್ದೇಶಗಳಿಗಾಗಿ ಬಳಸಿಕೊಳ್ಳಲಾಗುತ್ತಿತ್ತು. ಇಂತಹ ಕ್ರಿಯೆಯಿಂದ ಕುಪಿತರಾಗಿ ವಿರೋಧಿಸುತ್ತಿದ್ದ ಬುಡಕಟ್ಟುಗಳಿಗೆ ಅಪರಾಧಿಗಳೆಂದು ಆರೋಪಿಸುವ ಮಟ್ಟವನ್ನು ವಸಾಹತುಶಾಹಿ ವ್ಯವಸ್ಥೆ ತಲುಪಿತು. ಅದರ ಪರಿಣಾಮವೇ ಅಪರಾಧಿ ಬುಡಕಟ್ಟು ಎಂಬ ಒಂದು ಹೊಸ ವರ್ಗವೇ ಸೃಷ್ಟಿಯಾಗುವಂತಾಯಿತು. ವಸಾಹತುಶಾಹಿಗಳ ಜಾಡನ್ನೇ ಅನುಸರಿಸುತ್ತಿರುವ ಆಧುನಿಕ ಸರ್ಕಾರಗಳು ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿರುವ ಸಮುದಾಯಗಳನ್ನು ಒಕ್ಕಲೆಬ್ಬಿಸುತ್ತ ಅವರ ಆರ್ಥಿಕ ಮೂಲವನ್ನು ನಾಶ ಮಾಡಲು ಹೊರಟಿವೆ. "ಅಷ್ಟಕ್ಕೂ ಸ್ಥಿತ್ಯಂತರವೆಂದರೆ ಸಂಸ್ಕೃತಿ ನಾಶವೆಂದೇ ಅರ್ಥೈಸಬೇಕಿಲ್ಲ"[೨] ಅದು ಕಾಲದ ವಿವಿಧ ಪರ-ವಿರುದ್ಧದ ಪ್ರಭಾವಗಳೊಂದಿಗಿನ ಮುಖಾಮುಖಿಯಾಗಿದೆ. "ಸ್ಥಿರೀಕರಿಸುವಾಗ ಸಮುದಾಯದ ಆಳದಲ್ಲಿನ ಚಾರಿತ್ರಿಕ ಹಸಿವು ಪ್ರತಿರೋಧಿಸುವಾಗ ಕಾಡುವ ಅನನ್ಯತೆಯ ಭಯ ಇವೆರಡೂ ಒಂದು ಸಮುದಾಯದ ಸಂಸ್ಕೃತಿ ಕೋಶದ ಮಿಡಿತವನ್ನು ಒಂದು ಅರ್ಥಪೂರ್ಣ ಲಯಕ್ಕೆ ಹೊಂದಿಸಿವೆ"[೩]. ಬಾಹ್ಯ ಪ್ರಭಾವದಿಂದ ಸಮುದಾಯಗಳಲ್ಲಿ ಬದಲಾವಣೆಗಳು ಅನಿವಾರ್ಯವಾದರೂ ಕೆಲವು ಅಂಶಗಳು ತಕ್ಷಣಕ್ಕೆ ಬದಲಾದರೂ ಇನ್ನೂ ಕೆಲವು ಬದಲಾಗದೇ ಹಾಗೆಯೇ ಉಳಿಯಲು ತಮ್ಮ ಅಸ್ಮಿತೆಯನ್ನು ಕಾಪಾಡಿಕೊಳ್ಳಲು ಕಾರಣಗಳಿವೆ ಎನ್ನುವುದು ಆಸಕ್ತಿದಾಯಕ ಪ್ರಶ್ನೆ. ಹೀಗಿದ್ದರೂ ಬುಡಕಟ್ಟುಗಳ ಜೀವನ ನಿರ್ವಹಣೆಯನ್ನು ಈ ಹಂತಗಳ ಮೂಲಕ ನೋಡಬಹುದಾಗಿದೆ.

೧. ಆಹಾರ ಸಂಗ್ರಹಣೆ

೨. ಬೇಟೆ

೩. ಕೇತ್ಲು ಬೇಸಾಯ/ಕುಮ್ರಿ ಬೇಸಾಯ

೪. ಪಶುಪಾಲನೆ

೫.೨. ಆಹಾರ ಸಂಗ್ರಹಣೆ

ನೈಸರ್ಗಿಕವಾಗಿ ಕಾನನದಲ್ಲಿ ದೊರೆಯುವ ಸಣ್ಣಪುಟ್ಟ ಅರಣ್ಯ ಉತ್ಪನ್ನಗಳಾದ ಗೆಡ್ಡೆಗೆಣಸು, ಹಣ್ಣು ಹಂಪಲು ಹಾಗೂ ಗಿಡಮೂಲಿಕೆಗಳನ್ನು ಇರುಳಿಗರು ಸಂಗ್ರಹಿಸುತ್ತಿದ್ದರು. ಜೊತೆಜೊತೆಯಲ್ಲಿ ಒಣ ಸೌದೆ, ಬಿದಿರು, ಅರಗು, ಜೇನುತುಪ್ಪ, ಮಾಕಳಿಬೇರು ಮುಂತಾದ ವಸ್ತುಗಳು ಕಾಡಿನಲ್ಲಿ ಹೇರಳವಾಗಿ ದೊರೆಯುತ್ತಿದ್ದವು. ಇವೇ ಇರುಳಿಗ ಸಮುದಾಯದ ಜೀವನ ನಿರ್ವಹಣೆಗೆ ಪೂರಕ

ವಾಗಿದ್ದವು. ತಮ್ಮ ದಿನನಿತ್ಯ ಜೀವನ ನಿರ್ವಹಣೆಗೆ ಬೇಕಾದ ಉರುವಲು, ವಾಸಕ್ಕೆ ಬೇಕಾದ ಬಿದಿರು, ಹುಲ್ಲು, ಕೃಷಿ ಉಪಕರಣಗಳನ್ನು ಕಾಡಿನಿಂದಲೇ ಪಡೆಯುತ್ತಿದ್ದರು. ಪಾರಂಪರಿಕ ವೈದ್ಯಕ್ಕೆ ಬೇಕಾದಂತಹ ಅತೀ ಅಮೂಲ್ಯವಾದ ಔಷಧೀಯ ಸಸ್ಯಗಳಾದ ನಾರು ಬೇರುಗಳನ್ನು ಸಂದರ್ಭಕ್ಕೆ ತಕ್ಕಂತೆ ಸಂಗ್ರಹಿಸುತ್ತಿದ್ದರು. ಇತರ ಬುಡಕಟ್ಟುಗಳಂತೆ ಅತ್ಯಂತ ಸೀಮಿತ ಬಯಕೆಗಳನ್ನು ಹೊಂದಿದವರು ಇರುಳಿಗರು. ಭವಿಷ್ಯದ ಬಗ್ಗೆ ಚಿಂತಿಸದೆ, ಸದ್ಯದ ಅವಶ್ಯಕತೆಗಳನ್ನು ಮಾತ್ರ ಯೋಚಿಸಿ ತಮಗೆ ಅವಶ್ಯವಿದ್ದಷ್ಟು ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸುವ ಗುಣಗಳನ್ನು ರೂಢಿಸಿಕೊಂಡಿದ್ದರು.

ಜೇನು ಶೇಖರಣೆ

ಇರುಳಿಗರು ಅರಣ್ಯ ಉಪ ಉತ್ಪನ್ನವಾದ ಜೇನನ್ನು ಸಂಗ್ರಹಣೆ ಮಾಡುತ್ತಾರೆ. ಸಾಮಾನ್ಯವಾಗಿ ತಂಪು ಹೊತ್ತಿನಲ್ಲಿ ಮಾತ್ರ ಹೆಜ್ಜೇನನ್ನು ಹೆಚ್ಚಾಗಿ ಸಂಗ್ರಹಿಸುವ ಚತುರತೆಯನ್ನು ಹೊಂದಿದ್ದಾರೆ. ಆಳವಾದ ಕಂದಕದಲ್ಲಿ, ಎತ್ತರವಾದ ಮರಗಳ ಟೊಂಗೆಗಳಲ್ಲಿ, ದೊಡ್ಡ ದೊಡ್ಡ ಹೆಬ್ಬಂಡೆಗಳಲ್ಲಿರುವ ಜೇನು ಸಂಗ್ರಹಿಸುವ ಕೌಶಲ್ಯವನ್ನು ಹೊಂದಿದ್ದಾರೆ. ಸಾಮಾನ್ಯವಾಗಿ ೩ರಿಂದ ೪ ಜನರ ಗುಂಪು ಹಿಂದಿನ ದಿನವೇ ಜೇನಿರುವ ಸ್ಥಳಗಳನ್ನು ಗುರುತಿಸಿಕೊಂಡು ಅದಕ್ಕೆ ಬೇಕಾದ ಸಾಧನ ಸಲಕರಣೆಗಳಾದ ಬಕೀಟು, ಹಗ್ಗ ಮತ್ತು ಏಣಿ ಮುಂತಾದ ಸಲಕರಣೆಗಳೊಂದಿಗೆ ಜೇನು ಇರುವ ಸ್ಥಳಕ್ಕೆ ಹೋಗುತ್ತಾರೆ. ಜೇನು ನೋಣಗಳನ್ನು ಕದಲಿಸಲು ಕಾಡುಮೆಣಸಿನಸೊಪ್ಪು, ಬೇವಿನಸೊಪ್ಪು, ಹೊಂಗೆಸೊಪ್ಪುಗಳನ್ನು ಬಳಸಿ ದಟ್ಟವಾಗಿ ಹೊಗೆ ಬರುವಂತೆ ಮಾಡುತ್ತಾರೆ. ಜೇನು ಹುಳಗಳು ತಟ್ಟೆಯನ್ನು ಬಿಟ್ಟು ಹೋದ ನಂತರ ಜೇನನ್ನು ಬಿಡಿಸುತ್ತಾರೆ. ಈ ಜೇನನ್ನು ಪೇಟೆಯಲ್ಲಿ ಮಾರಿ ಬಂದ ಹಣವನ್ನು ಸಮನಾಗಿ ಹಂಚಿಕೊಳ್ಳುತ್ತಾರೆ ಅಥವಾ ದಿನನಿತ್ಯ ಜೀವನಕ್ಕೆ ಬೇಕಾದ ವಸ್ತುಗಳನ್ನು ಕೊಳ್ಳುತ್ತಾರೆ.

ಇಂದು ಇರುಳಿಗರು ಸಂಗ್ರಹಿಸಿದ ಜೇನನ್ನು ಅರಣ್ಯ ಇಲಾಖೆಯಿಂದ ಗುತ್ತಿಗೆ ಪಡೆದ ಏಜೆಂಟ್ ಅಥವಾ ಲ್ಯಾಂಪ್ಸ್ ಮೂಲಕ ಮಾರಾಟ ಮಾಡಬೇಕಾಗಿದೆ. ಇವರ ಪರಿಶ್ರಮಕ್ಕೆ ಅವರು ನೀಡುವ ಪ್ರತಿಫಲ ತುಂಬಾ ಕಡಿಮೆಯಂದೇ ಹೇಳಬಹುದು. ಮಧ್ಯವರ್ತಿ ವ್ಯಾಪಾರಿಗಳು ನೀಡುವ ಅಲ್ಪ ಸ್ವಲ್ಪ ಹಣಕ್ಕಾಗಿ ತಮ್ಮ ಜೀವದ ಹಂಗು ತೊರೆದು ಜೇನು ಸಂಗ್ರಹಿಸುವ ಸ್ಥಿತಿ ಇವರದಾಗಿದೆ. ಇತ್ತೀಚಿನ ಯುವ ಸಮುದಾಯ ಇದರಿಂದ ದೂರ ಸರಿಯುತ್ತಿದ್ದು, ಇದರಿಂದಾಗಿ ಈ ಸಮುದಾಯದಲ್ಲಿ ಜೇನು ಸಂಗ್ರಹಣೆ ಕೌಶಲ್ಯ ಕಲಿಯುವ ಆಸಕ್ತಿ ಇರದಿರುವುದು ಕಂಡುಬರುತ್ತಿದೆ.

ಇರುಳಿಗರು ಸಂಗ್ರಹಿಸುವ ಬಿದಿರು ಕಳಲೆ, ಮರಗೆಣಸು, ಹಾಲುಗೆಣಸು, ಕೆಸುವು, ಸೋಗಡೆ ಬೇರು, ಮಾಕಳಿಬೇರು, ನಲ್ಲೆಕುಡಿ, ಕೊನ್ನಾರೆಗೆಡ್ಡೆ, ಕೀರೆಸೊಪ್ಪು, ಒಂದೆಲಗದಸೊಪ್ಪು, ನುಗ್ಗೆಸೊಪ್ಪು, ಹೊನ್ನಗೂನೆಸೊಪ್ಪು, ದೊಗಳಕೀರೆ, ದೊಡ್ಡಪತ್ರೆ ಇನ್ನು ಕೆಲವು ಬಗೆಯ ಸೊಪ್ಪು, ಹಲಸು, ಬೇಲದಕಾಯಿ, ಊಜಿಹಣ್ಣು, ಬೆಟ್ಟದನೆಲ್ಲಿಕಾಯಿ, ಕಾಡುತೊಂಡೆಕಾಯಿ, ಕಾಡುಹಾಗಲಕಾಯಿ, ಅಣಬೆ, ಪುನರ್‌ಪುಳಿ, ಕಾಳುಮೆಣಸು, ಕಾಡುಶುಂಠಿ, ಸೀಗೆಕಾಯಿ, ಅಂಟುವಾಳಕಾಯಿ, ಚುಂಜಲಿಕಾಯಿ, ತಾರೆಕಾಯಿ, ಗೋಂದು, ಜೇನು, ಮೇಣ, ಸೀಗೆಸೊಪ್ಪು, ಕಾಡುಅರಿಶಿನ, ಮುತ್ತಗದಎಲೆ, ಆಲದಎಲೆ, ಧೂಪ, ಅಳಲೆಕಾಯಿ

ಇತ್ಯಾದಿ ಪ್ರಕೃತಿಯಲ್ಲಿ ದೊರೆಯುವ ಅರಣ್ಯ ಉತ್ಪನ್ನಗಳನ್ನು ತಮ್ಮ ಅವಶ್ಯಕತೆಗೆ ತಕ್ಕಷ್ಟು ಬಳಸಿ ಮಿಕ್ಕಿದ್ದನ್ನು ಬೇರೆಯವರಿಗೆ ಮಾರುತ್ತಾರೆ.

ಇಂದಿಗೂ ಸಮುದಾಯದ ಕೆಲವು ಜನರು ಇಂತಹ ಉತ್ಪನ್ನಗಳನ್ನು ಸಂಗ್ರಹಿಸುತ್ತಿದ್ದರೂ ಅರಣ್ಯಾಧಿಕಾರಿಗಳ ಕಿರುಕುಳದಿಂದಾಗಿ ಸಂಗ್ರಹಣೆ ಕಷ್ಟಸಾಧ್ಯದ ಕೆಲಸವಾಗಿದೆ ಮತ್ತು ಅರಣ್ಯ ಉತ್ಪನ್ನಗಳನ್ನು ಮುಕ್ತವಾಗಿ ಮಾರಾಟ ಮಾಡುವ ಅಧಿಕಾರ ಇರುಳಿಗರಿಗೆ ಇಲ್ಲವಾಗಿದೆ.

೫.೩. ಬೇಟೆ

ಇರುಳಿಗರಿಗೆ ಇಷ್ಟವಾದ ಮತ್ತೊಂದು ಹವ್ಯಾಸ ಬೇಟೆಯಾಗಿದೆ. ಬೇಟೆ ಕೇವಲ ಹವ್ಯಾಸವಾಗದೆ ಆಹಾರವನ್ನು ನೀಡುವ ಮತ್ತೊಂದು ಆಹಾರ ಮೂಲವಾಗಿದೆ. ಇಂದಿನ ನಾಗರಿಕ ಸಮಾಜವಾಗಿ ಬೆಳೆದು ನಿಂತಿರುವ ಬಹುತೇಕ ಸಮುದಾಯಗಳು ಬೇಟೆ ಹಂತವನ್ನು ದಾಟಿಯೇ ಆಧುನಿಕ ವ್ಯವಸ್ಥೆಗೆ ಬಂದು ತಲುಪಿವೆ. ಇರುಳಿಗರಿಗೆ ತುಂಬಾ ಪ್ರಿಯವಾದ ಆಹಾರ ಇಲಿ ಮತ್ತು ತೋಡ(ಹೆಗ್ಗಣ)ಗಳಾಗಿವೆ. ಇಲಿಯ ಬೇಟೆಯ ಕಾರಣಕ್ಕಾಗಿಯೇ ಇವರಿಗೆ ಇಲ್ಲಿಗರು > ಇರುಳಿಗರು ಎಂದು ಕರೆಯಲಾಗುತ್ತಿದೆ ಎಂಬ ವಾದ ಕೇಳಿಬರುತ್ತಿದೆ.

ಇಲಿ ಬೇಟೆಯನ್ನು ಇವರು ಮೂರು ರೀತಿಯಲ್ಲಿ ಮಾಡುತ್ತಾರೆ. ಮಳೆಗಾಲದ ಸಮಯದಲ್ಲಿ ಬಿಲವನ್ನು ಪತ್ತೆ ಹಚ್ಚಿ ಹಾರೆಯಿಂದ ಅಗೆಯುತ್ತಾರೆ. ಐದು-ಆರು ಜನರು ಅಗೆಯುತ್ತಿದ್ದ ಸಮಯದಲ್ಲಿ ಹೊರಬರುವ ಇಲಿಯನ್ನು ಕೋಲಿನಿಂದ ಬಡಿದು ಕೊಲ್ಲುತ್ತಾರೆ.

ಮತ್ತೊಂದು ರೀತಿಯೆಂದರೆ, ಭತ್ತದ ಗದ್ದೆಯ ಬದುವಿನ ಮೇಲೆ ಹಾರೆಯಿಂದ ರಂಧ್ರ ಮಾಡಿ ಸುತ್ತಲೂ ಕೋಲು ನಿಲ್ಲಿಸಿ ಬಲೆ ಬಿಡುತ್ತಾರೆ. ಮಧ್ಯದಲ್ಲಿ ಇರುವ ಇಲಿಯ ರಂಧ್ರದ ಮೇಲ್ಭಾಗದಲ್ಲಿ ಹಾರೆಯಿಂದ ಸದ್ದು ಮಾಡುತ್ತಾರೆ. ಇದರಿಂದ ಹೆದರಿದ ಇಲಿಗಳು ಹೊರ ಬಂದು ಬಲೆಗೆ ಸಿಕ್ಕಿ ಹಾಕಿ ಕೊಳ್ಳುತ್ತವೆ.

ಮೂರನೆಯ ವಿಧಾನ, ಇಲಿಯ ಬೇಟೆಯ ಹಿಂದಿನ ದಿನ ರಂಧ್ರವನ್ನು ಗುರುತಿಸಿ ಕಲ್ಲುಗಳಿಂದ ಮುಚ್ಚುತ್ತಾರೆ. ರಂಧ್ರದಲ್ಲಿ ಇಲಿಗಳಿದ್ದ ಸ್ಥಳದಲ್ಲಿ ಬೆರಣಿಯಿಂದ ಹಸಿಸೊಪ್ಪಿನಿಂದ ಹೊಗೆಯನ್ನು ಇಲಿಯ ಬಿಲದೊಳಕ್ಕೆ ಹೋಗುವಂತೆ ಹೊಗೆ ಹಾಕುತ್ತಾರೆ. ಹೊಗೆಯಿಂದ ಸತ್ತ ಇಲಿಗಳನ್ನು ಬಿಲ ಅಗೆದು ಸಂಗ್ರಹಿಸುತ್ತಾರೆ.

ಹಿಂದೆ ಕಾಡು ಮೃಗಗಳಾದ ಕಾಡುಹಂದಿ, ಉಡ, ಕಾಡುಕೋಳಿ, ಮೊಲ, ಮುಂಗುಸಿ ಮುಂತಾದ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಇಂದು ಈ ಬೇಟೆಯು ಸಂಪೂರ್ಣವಾಗಿ ನಿಷೇಧಿಸಲ್ಪಟ್ಟಿರುವುದರಿಂದ ಇಲಿ ಬೇಟೆಗೆ ಇವರು ಸೀಮಿತಗೊಳ್ಳಬೇಕಾಗಿದೆ. ಇಲಿ ಬೇಟೆಯಿಂದ ಇವರಿಗೆ ಎರಡು ರೀತಿಯ ಲಾಭ ವಾಗುತ್ತದೆ. ಗದ್ದೆಗಳಲ್ಲಿ ರೈತರ ಬೆಳೆ ಹಾನಿ ಮಾಡುವ ಇಲಿಗಳನ್ನು ಹಿಡಿದರೆ ಇಲಿಯೊಂದಕ್ಕೆ ಇಂತಿಷ್ಟು ದುಡ್ಡು ಎಂದು ರೈತರು ಕೊಡುತ್ತಾರೆ. ಇಲಿ ಹಿಡಿಯುವುದರಿಂದ ರೈತರಿಂದ ದುಡ್ಡೂ ಸಿಗುತ್ತದೆ, ಇತ್ತ

ಆಹಾರವಾಗಿ ಇಲಿಗಳೂ ಸಿಗುತ್ತವೆ. ಆದರೆ ಇಂದಿನ ಯುವ ಪೀಳಿಗೆಯು ಇಲಿ ಬೇಟೆಯಾಡುವುದರಿಂದ ತಮಗೆ ಅವಮಾನವಾಗುತ್ತದೆ ಎಂದು ಭಾವಿಸಿ ಇಲಿ ಬೇಟೆಯಿಂದ ದೂರ ಸರಿಯುತ್ತಿದ್ದಾರೆ.

೫.೪. ಕೇತ್ಲು ಬೇಸಾಯ

ಯಾವುದೇ ಆದಿಮ ಸಂಸ್ಕೃತಿ ರೂಪುಗೊಂಡಿರುವುದೇ ಭೂಮಿಯ ಜೊತೆಗಿನ ಅನನ್ಯ ಅನುಸಂಧಾನದಿಂದ. ಅವರ ಆಚರಣೆ, ಅಭಿವ್ಯಕ್ತಿಗಳು ಇದೇ ಭೂಮಿಯ ಜೊತೆಗಿನ ಅನುಸಂಧಾನದ ಫಲಗಳಾಗಿವೆ. ಹಾಗಾಗಿ ಭೂಮಿ ಕೇವಲ ಆರ್ಥಿಕ ಸಂಪನ್ಮೂಲ ಮಾತ್ರವಲ್ಲದೆ ಜೀವನದ ಎಲ್ಲಾ ಆಯಾಮಗಳನ್ನು ಸೃಷ್ಟಿಸುವ, ನಿರ್ದೇಶಿಸುವ ಒಂದು ಜೀವಂತ ಶಕ್ತಿಯಾಗಿದೆ. ಪ್ರಕೃತಿಯ ಯಾವುದೇ ಸೃಷ್ಟಿಯ ಮೇಲೂ ಮಾಲೀಕತ್ವ ಹೊಂದುವುದು ಪಾಪ ಮತ್ತು ಪ್ರಕೃತಿ ವಿರೋಧಿ ಎಂಬ ಅವರ ನಂಬಿಕೆಯೇ ವರ್ತಮಾನದಲ್ಲಿ ಇವರನ್ನು ಇಂದಿನ ಕಷ್ಟಕ್ಕೆ ಗುರಿ ಮಾಡಿತು. ಅಂದಿನ ಅವರ ಆದರ್ಶ ಸಮಾಜವಾದಿ ನಡವಳಿಕೆಯು ಇಂದಿನ ಇವರ ಸಮುದಾಯಕ್ಕೆ ಸೊಂಕು ತರುವ ನೀತಿಯಾಗಿ ಮಾರ್ಪಾಡಾಗಿರುವುದು ವಿಪರ್ಯಾಸವೇ ಸರಿ.

ಇರುಳಿಗರು ನಡೆಸಿಕೊಂಡು ಬಂದ ಸಾಂಪ್ರದಾಯಿಕ ಬೇಸಾಯ ಪದ್ಧತಿಯೇ ಕೇತ್ಲು ಬೇಸಾಯ. ಅರಣ್ಯದ ಬೆಟ್ಟ ಪ್ರದೇಶದಲ್ಲಿ ವ್ಯವಸಾಯದ ಸಲಕರಣೆಗಳಾದ ನೇಗಿಲು ಮತ್ತಿತರ ಸಲಕರಣೆಯನ್ನು ಬಳಸದೇ ರಾಗಿ, ಇತರೆ ಕಾಳು ಕಡ್ಡಿಗಳನ್ನು ಬೆಳೆಯುತ್ತಿದ್ದರು. ಮಳೆಗಾಲದಲ್ಲಿ ಬಿತ್ತಿ ಬೇರೆ ವಿವಿಧ ಇತರೆ ಕಳೆಗಳೊಂದಿಗೆ ಸಹಜವಾಗಿ ಬೆಳೆಯುವ ವಿಶಿಷ್ಟ ಸಾಂಪ್ರದಾಯಿಕ ಬೇಸಾಯವೇ ಕೇತ್ಲು ಬೇಸಾಯ ಪದ್ಧತಿ. ಈ ಕೃಷಿ ಪದ್ಧತಿಯು ಇರುಳಿಗರ ಸಂಸ್ಕೃತಿ, ಆರ್ಥಿಕತೆ ಪ್ರತಿಬಿಂಬಿಸುವಂತಹದ್ದು. ಅನಾದಿ ಕಾಲದಿಂದಲೂ ಇರುಳಿಗರು ಈ ಕೃಷಿಯನ್ನು ಬೆಟ್ಟದ ಇಳಿಜಾರು ಪ್ರದೇಶ ಹಾಗೂ ಕಾಡಿನ ಮಧ್ಯ ಭಾಗದಲ್ಲಿ ಮಾಡಿಕೊಂಡು ಬಂದಿದ್ದಾರೆ. ವಿವಿಧ ಕಳೆಗಳನ್ನು ಸುಟ್ಟು ಸಾವಯವ ರೀತಿಯಲ್ಲಿ ಬಿತ್ತನೆ ಮಾಡಿ ಬೆಳೆ ಬೆಳೆಯುತ್ತಿದ್ದರು. ಒಮ್ಮೆ ಒಂದು ಸ್ಥಳದಲ್ಲಿ ಬೆಳೆ ಬೆಳೆದರೆ ಮರು ವರ್ಷ ಅದೇ ಸ್ಥಳದಲ್ಲಿ ಬೇಸಾಯ ಮಾಡದೆ ಮತ್ತೊಂದು ಸ್ಥಳಕ್ಕೆ ಹೋಗಿ ಅಲ್ಲಿ ಇದೇ ರೀತಿಯ ಬೇಸಾಯ ಮುಂದುವರೆಸುತ್ತಿದ್ದರು. ಯಾವುದೇ ಗೊಬ್ಬರ ಬಳಸದೇ ಭೂಮಿಯನ್ನು ನೈಸರ್ಗಿಕವಾಗಿ ಫಲವತ್ತುಗೊಳಿಸುವ ಸಹಜ ಕೃಷಿ ಇದಾಗಿತ್ತು.

ಈ ಕೇತ್ಲು ಬೇಸಾಯವನ್ನು ಈ ಸಮುದಾಯ ರೂಢಿಸಿಕೊಂಡಿರುವುದಕ್ಕೆ ನೈಸರ್ಗಿಕ ಕಾರಣಗಳಿವೆ. ಸದಾ ಮಳೆಯಾಗುವ ಹಾಗೂ ಹೆಚ್ಚು ಇಳುವರಿ ನೀಡುವ ಕಾಡಿನ ಭಾಗಗಳನ್ನು ಮತ್ತು ಕಾಡು ಮೃಗಗಳು ದಾಳಿ ಇಡದ ಸ್ಥಳಗಳನ್ನು ಗುರುತಿಸಿ ಬೇಸಾಯವನ್ನು ರೂಡಿಸಿಕೊಳ್ಳುತ್ತಿದ್ದರು. ತಾವು ಬೆಳೆಯುತ್ತಿದ್ದ ರಾಗಿ, ಗೆಡ್ಡೆ-ಗೆಣಸುಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸದೆ ತಮ್ಮ ದಿನನಿತ್ಯದ ಬಳಕೆಗೋಸ್ಕರ ಬಳಸಿಕೊಳ್ಳುತ್ತಿದ್ದರು. ಸಮುದಾಯದ ಹಿರಿಯರನ್ನು ಕೇತ್ಲು ಬೇಸಾಯದ ಬಗ್ಗೆ ಕೇಳಿದಾಗ "ಪುರಾತನ ಕಾಲದಿಂದಲೂ ಕೇತ್ಲು ಬೇಸಾಯ ಮಾಡಿಕೊಂಡು ಬರುತ್ತಿದ್ದೆವು. ಪರಂಗಿಯವರ ಕಾಲದಲ್ಲಿ ಈ ಜಮೀನುಗಳ ಮೇಲೆ ಕಂದಾಯ ಕಟ್ಟುವಂತೆ ಒತ್ತಾಯಿಸಿದರು. ಹಣ ಇಲ್ಲದಿದ್ದರಿಂದ ನಾವು ಹಸನು

ಮಾಡಿದ ಜಾಗಕ್ಕೆ ಕಲ್ಲು ನೆಟ್ಟು ಬೇರೆಯವರಿಗೆ ನೀಡಿದರು"[೪] ಎಂದು ಬಹಳ ನೋವಿನಿಂದ ಅಳಲು ತೊಡಿಕೊಳ್ಳುತ್ತಾರೆ.

ಹಾಗೇಯೇ ೧೯೮೬ರ ನಂತರ ಅರಣ್ಯ ಇಲಾಖೆ ಇನ್ನು ಕೇತ್ಲು ಬೇಸಾಯ ಮಾಡಬೇಡಿ ಅರಣ್ಯದ ಒಳಕ್ಕೆ ಬರಬೇಡಿ ಎಂದು ನಿರ್ಬಂಧ ಹಾಕಿತು. ಅಲ್ಲಿಯವರೆಗೆ ಅಲ್ಪಸ್ವಲ್ಪ ಕೇತ್ಲು ಬೇಸಾಯ ಪದ್ಧತಿ ಜಾರಿಯಲ್ಲಿತ್ತು. ಕಳೆದ ೨ ದಶಕಗಳಿಂದ ಗ್ರಾಮ ಅರಣ್ಯ ಸಮಿತಿಗಳನ್ನು ರಚಿಸಿ ಜನರ ಸಹಕಾರದಿಂದ ಅರಣ್ಯವನ್ನು ಉಳಿಸಿ ಬೆಳೆಸುತ್ತೇವೆ ಎಂದು ಹೇಳಿ ಅರಣ್ಯಕ್ಕೆ ಈ ಜನರು ಬರದಂತೆ ನಿರ್ಬಂಧಿಸಿ ಬೇಲಿ ಹಾಕಲಾಗಿದೆ. ಇರುಳಿಗರು ತಿನ್ನುವ ಆಹಾರಕ್ಕೆ ಕಲ್ಲು ಹಾಕಿ ಅವರ ಕಾಡಿನ ಜಾಗಕ್ಕೆ ನೀಲಗಿರಿ, ಅಕೇಶಿಯಾ ಗಿಡ ನೆಟ್ಟು ಸುತ್ತಲಿನ ಪರಿಸರದಲ್ಲಿ ನೀರಿಲ್ಲದಂತೆ ಮಾಡಲಾಗಿದೆ. ಹೀಗೆ ಅನಾದಿ ಕಾಲದಿಂದ ರೂಢಿಸಿಕೊಂಡಿದ್ದ ಕೇತ್ಲುವಿನಂತಹ ನೈಸರ್ಗಿಕವಾದ ಬೇಸಾಯ ಪದ್ಧತಿಯು ಕಣ್ಮರೆಯಾಗಿದೆ. ಇರುಳಿಗರಲ್ಲಿ ಇದ್ದ ದೇಶಿಯ ರಾಗಿ ಮತ್ತು ಇತರೆ ತಳಿಗಳನ್ನು ಕಾಯ್ದೆ, ಕಾನೂನಿನ ಮೂಲಕ ಭೂಮಿಯಿಂದಲೇ ನೈಪಥ್ಯಕ್ಕೆ ಸರಿಸುವಂತಹ ಕೆಲಸ ಮಾಡಿರುವುದು ನೋವಿನ ಸಂಗತಿಯಾಗಿದೆ.

ಹೀಗೆ ಆಧುನಿಕ ಹಾಗೂ ಕೈಗಾರಿಕ ಬೆಳೆವಣಿಗೆಯ ಪ್ರವಾಹದಲ್ಲಿ ಇರುಳಿಗರು ಅಲ್ಪಸ್ವಲ್ಪ ಜಮೀನನ್ನು ಸಾಗುವಳಿ ಮಾಡುತ್ತಿದ್ದು, ತಮ್ಮ ಹಕ್ಕುಪತ್ರಕ್ಕಾಗಿ ದಿನವೂ ಕಛೇರಿಯಿಂದ ಕಛೇರಿಗೆ ಅಲೆಯುವ ಸ್ಥಿತಿ ಇರುಳಿಗರದಾಗಿದೆ. ಇವರ ಬದುಕು, ಮುಗ್ಧತೆ, ಸಹಜ ಕೃಷಿ ಜೀವನ ಎಲ್ಲವೂ ಆಧುನಿಕ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿವೆ. ಹಣದ ಲಾಲಸೆಯಿಂದ, ಅಭಿವೃದ್ಧಿಯ ಹೆಸರಿನಲ್ಲಿ ಇವರ ಜಾಗಗಳನ್ನು ಆಕ್ರಮಿಸುತ್ತಿರುವ ಬಲಾಢ್ಯರ ನಡುವೆ ತಮ್ಮ ಬದುಕಿನ ಮೂಲವನ್ನು ಕಳೆದುಕೊಂಡು ಬಡತನದ ಬೇಗೆಯಲ್ಲಿ ಇರುಳಿಗರು ನರಳುತ್ತಿದ್ದಾರೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಆಗಲೇ ಕೊಚ್ಚಿ ಹೋಗಿರುವ ಹಲವು ಸಮುದಾಯಗಳ ಸಾಲಿಗೆ ಇವರನ್ನು ಸೇರಲು ಬಿಡದೆ ಇವರ ಆರ್ಥಿಕ ಪುನರ್‌ಚೇತನಕ್ಕೆ ಬೇಕಾದ ಬೇಸಾಯದ ಭೂಮಿಯ ಹಕ್ಕು ಪತ್ರ ನೀಡುವುದರ ಮೂಲಕ ಕೇತ್ಲು ಬೇಸಾಯದಂತಹ ನೈಸರ್ಗಿಕ ಬೇಸಾಯದ ಕೊನೆಯ ಕೊಂಡಿ ಕಳಚಿ ಇತಿಹಾಸ ಸೇರದಂತೆ ಸರ್ಕಾರ ಮತ್ತು ಅರಣ್ಯ ಇಲಾಖೆ ಕಣ್ಣು ತೆರೆದು ನ್ಯಾಯ ಒದಗಿಸಬೇಕಾಗಿದೆ.

ಕೇತ್ಲು ಬೇಸಾಯದ ವೈಶಿಷ್ಟ್ಯಗಳು

- ಅರಣ್ಯದ ಮಧ್ಯದಲ್ಲಿ ಅಥವಾ ಬೆಟ್ಟ ಗುಡ್ಡಗಳ ಇಳಿಜಾರು ಪ್ರದೇಶದಲ್ಲಿ ಮಾತ್ರ ಕೃಷಿ ಭೂಮಿಯನ್ನು ಆಯ್ಕೆ ಮಾಡಿಕೊಳ್ಳುವುದು.
- ಕೃಷಿಗಾಗಿ ಹಾರೆ, ಗುದ್ದಲಿಗಳನ್ನು ಮಾತ್ರ ಬಳಸುವುದು.
- ವ್ಯವಸಾಯದ ಪ್ರದೇಶವನ್ನು ಪ್ರತಿ ಬಾರಿಯೂ ಬದಲಾಯಿಸುವ ಮೂಲಕ ಭೂಮಿ ಬಂಜರಾಗುವುದನ್ನು ತಪ್ಪಿಸುವುದು.
- ಕೇತ್ಲು ಬೇಸಾಯದಲ್ಲಿ ಬೆಳೆದ ಬೆಳೆಯನ್ನು ಬೇಸಾಯದಲ್ಲಿ ಭಾಗವಹಿಸಿದ ಎಲ್ಲಾ ಕುಟುಂಬಗಳಲ್ಲಿ ಸಮಾನ ಹಂಚಿಕೆ.

- ❖ ವಾಣಿಜ್ಯ ಬೆಳೆಗಳನ್ನು ಬೆಳೆಯದೆ ಜೀವನ ನಿರ್ವಹಣೆಗೆ ಬೇಕಾದ ಬೆಳೆಗಳನ್ನು ಮಾತ್ರ ಬೆಳೆಯುವುದು.
- ❖ ದೇಶಿಯ ಬೆಳೆ ಮತ್ತು ಪಾರಂಪರಿಕ ಬೆಳೆಗಳನ್ನು ಮಾತ್ರ ಬೆಳೆಯುವುದು.
- ❖ ಔಷಧಿಯ ಸಸ್ಯ ಹಾಗೂ ದಿನನಿತ್ಯದ ಬಳಕೆಯ ಗೆಡ್ಡೆ ಗೆಣಸುಗಳನ್ನು ಬೆಳೆಯಲು ಸಹಕಾರಿ.
- ❖ ಭೂ ಒಡೆತನದ ಸೋಂಕು ಇಲ್ಲದೆ ಇರುವುದು ಇದರ ಮುಖ್ಯ ವೈಶಿಷ್ಟ್ಯವಾಗಿದೆ.

ಪಶುಪಾಲನೆ

ಪಾರಂಪರಿಕ ಕೃಷಿಕ ಸಮುದಾಯಗಳು ಒಂದು ಕಾಲಕ್ಕೆ ಸಾಮಾನ್ಯವಾಗಿ ಪಶುಪಾಲನ ಸಮುದಾಯಗಳೇ ಆಗಿದ್ದವು. ಇಂದಿಗೂ ಸಹ ಈ ಕಸುಬು ಪ್ರಮುಖ ಆಹಾರ ಉತ್ಪದನಾ ಚಟುವಟಿಕೆಯಾಗಿದೆ. "ಪಶುಪಾಲನೆ ಮಾನವನ ಎರಡನೇ ಕಸುಬಾಗಿತ್ತು. ಹಾಗಾದ ಮಾತ್ರಕ್ಕೆ ಎಲ್ಲಾ ಮೂಲ ಬೆಳೆಗಾರರು ಪಶುಪಾಲಕರಾದಂತೆ ಅರ್ಥವಲ್ಲ. ಬೇಟೆಗಾರರಲ್ಲಿಯೂ ಹಲವರು ಪಶುಪಾಲಕರಾದರೆಂದು ತಿಳಿದರೆ ಸಾಕು. ಕುರಿ ಸಾಕಣೆ, ಮೇಕೆ ಸಾಕಣೆ, ದನಕರುಗಳ ಪಾಲನೆ ಮುಂದುವರೆದು ವಿಸ್ತಾರಗೊಂಡಿತು. ಮೇಕೆ ಪಾಲನೆಗಿಂತಲೂ ತಮ್ಮ ದನಗಳ ಪಾಲನೆ ಸ್ವಲ್ಪ ಸರಳ ಹಾಗೂ ಹೆಚ್ಚಿನ ಲಾಭದಾಯಕವಾಗಿತ್ತು."[೫] ಬುಡಕಟ್ಟುಗಳಲ್ಲಿ ಪಾರಂಪರಿಕ ಪಶುಪಾಲನೆ ಚಟುವಟಿಕೆ ಒಂದು ಆಚರಣೆಯಾಗಿ, ಆರಾಧನೆಯಾಗಿ ಮುಂದುವರೆಯುತ್ತಿದೆ. ಇವರಲ್ಲಿ ಹಿಂದಿನಿಂದ ಪ್ರಾಣಿಗಳನ್ನು ಪಾರಂಪರಿಕ ದೈವವಾಗಿ ಪೂಜಿಸುವ ಆಚರಣೆ ಇದೆ. ಈ ಸಮುದಾಯದಲ್ಲಿ ನಡೆಯುವ ಶುಭಕಾರ್ಯಗಳಲ್ಲಿ ಗೋ ಪೂಜೆಯಂತಹ ಧಾರ್ಮಿಕ ಆಚರಣೆಗಳು ಪ್ರಧಾನವಾಗಿರುತ್ತವೆ. ಬುಡಕಟ್ಟುಗಳಲ್ಲಿ ಪಶುಪಾಲನೆ ಮಹಿಳೆಯರನ್ನು ಹೆಚ್ಚಾಗಿ ಅವಲಂಬಿಸಿರುತ್ತದೆ. ಕಾರಣ ದೈಹಿಕ ಶ್ರಮವು ಕಡಿಮೆ ವ್ಯಯವಾಗುತ್ತದೆ. ಪಶುಗಳ ಪಾಲನೆ, ಪೋಷಣೆ, ಹೈನುಗಾರಿಕೆಯಂತಹ ಕೌಶಲ್ಯಪೂರ್ಣ ಚಟುವಟಿಕೆಗಳಲ್ಲಿ ಮಹಿಳೆ ಬಹುಮುಖ್ಯವಾದ ಸ್ಥಾನವನ್ನು ವಹಿಸುತ್ತಾಳೆ. ಇರುಳಿಗ ಸಮುದಾಯದಲ್ಲಿ ಇಂದಿಗೂ ಪಶುಪಾಲನೆ ಮಹಿಳೆಯನ್ನು ಅವಲಂಬಿಸಿದೆ. ಹಾಲು, ಮೊಸರು ಮತ್ತು ಇತರೆ ಉತ್ಪನ್ನಗಳನ್ನು ಸಂಗ್ರಹಿಸುವ ಹೊಣೆ ಮಹಿಳೆಯದ್ದು. ಹೈನೋತ್ಪಾದನೆಯಿಂದ ಬಂದ ಹಣವನ್ನು ದಿನನಿತ್ಯದ ಕುಟುಂಬದ ಆರ್ಥಿಕ ವ್ಯವಹಾರಕ್ಕೆ ವೆಚ್ಚ ಮಾಡುವುದು ಆಕೆಗೆ ಸಂಬಂಧಪಟ್ಟ ವಿಷಯವಾಗಿದ್ದು, ಈ ಕಾರ್ಯದಲ್ಲಿ ಪುರುಷನಷ್ಟೇ ಮಹಿಳೆಯು ತನ್ನನ್ನು ತೊಡಗಿಸಿಕೊಳ್ಳುತ್ತಾಳೆ.

೫.೫. ಕುಶಲ ಕಲೆ ವಸ್ತುಗಳು

ಇರುಳಿಗರು ಕಾಡಿನಲ್ಲೇ ಹುಟ್ಟಿ ಬೆಳೆದವರು. ಕಾಡಿನಲ್ಲಿ ದೊರೆಯುವ ಉತ್ಪನ್ನಗಳಿಂದ ಕರಕುಶಲ ವಸ್ತುಗಳನ್ನು ತಯಾರಿಸುವ ಪರಿಣಿತಿಯನ್ನು ಪರಂಪರೆಯಿಂದ ಮುಂದುವರೆಸಿಕೊಂಡು ಬಂದವರು. "ಸ್ಥಳೀಯ ಅಗತ್ಯತೆಗಳಿಗಾಗಿ ಸ್ಥಳೀಯ ಸಂಪನ್ಮೂಲಗಳಿಂದಾಗುವ ಉತ್ಪಾದನೆಯು ಆರ್ಥಿಕ ಜೀವನದ ಅತ್ಯಂತ ವಿವೇಚನಾಯುಕ್ತ ಮಾರ್ಗವಾಗಿದೆ"[೬]. ಸ್ಥಳೀಯವಾಗಿ ದೊರೆಯುವ ಬಿದಿರು ಇತರೆ ವಸ್ತುಗಳನ್ನು ಬಳಸಿಕೊಂಡು ಕರಕುಶಲ ಕಲೆಯಲ್ಲಿ ನಿರತರಾಗುತ್ತಾರೆ. ಇದು ಒಂದು ಗುಡಿ ಕೈಗಾರಿಕೆಯಾಗಿದೆ.

ಇಂತಹ ವಿಶಿಷ್ಟ ಕಲೆಯನ್ನು ಬುಡಕಟ್ಟು ಸಮುದಾಯಗಳು ಸಾಂಪ್ರದಾಯಿಕ ಮತ್ತು ಭಾವನಾತ್ಮಕವಾಗಿ ಕಾಪಾಡಿಕೊಂಡು ಬಂದಿರುತ್ತವೆ. ಇರುಳಿಗರು ಈ ಕರಕುಶಲ ಕಲೆಯನ್ನು ವಾತಾವರಣಕ್ಕೆ ತಕ್ಕಂತೆ ಬದಲಾಯಿಸಿಕೊಂಡು ಬರುತ್ತಿದ್ದಾರೆ. ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಹೇರಳವಾಗಿ ಬೆಳೆಯುವ ರೇಷ್ಮೆ ಕೃಷಿ ಚಟುವಟಿಕೆಗೆ ಬೇಕಾದ ಅನೇಕ ಪರಿಕರಗಳನ್ನು ಇರುಳಿಗರು ತಯಾರಿಸುತ್ತಾರೆ. ರೇಷ್ಮೆ ಹುಳುಗಳಿಗೆ ಸೊಪ್ಪು ಸಂಗ್ರಹಿಸುವ ಬಿದಿರಿನಗುಡೆ, ಹುಳು ಸಾಗಾಣಿಕೆಗೆ ಬೇಕಾದ ಬಿದಿರಿನ ತಟ್ಟೆ, ರೇಷ್ಮೆ ಗೂಡು ಕಟ್ಟಲು ಬೇಕಾದ ಚಂದ್ರಿಕೆ ಮುಂತಾದವುಗಳನ್ನು ತಯಾರಿಸುತ್ತಾರೆ. ಹಾಗೆಯೇ ಆಹಾರ ಪದಾರ್ಥಗಳನ್ನು ಸಂಗ್ರಹಿಸುವ ಬಿದಿರಿನ ವಾಡೆ, ಈಚಲು ಚಾಪೆ, ತೆಂಗಿನ ಗರಿಯ ಪೊರಕೆ, ಹಾಗೂ ಮನೆ ಗುಡಿಸಲುಗಳಿಗೆ ಬೇಕಾದ ತೆಂಗಿನ ಗರಿಯ ಛಾವಣಿಗಳನ್ನು ತಯಾರಿಸುತ್ತಾರೆ. ಈ ಕಾರ್ಯದಲ್ಲಿ ಇರುಳಿಗರ ಪುರುಷರು ಮತ್ತು ಮಹಿಳೆಯರು ಇಬ್ಬರು ಸಮಾನವಾಗಿ ಪಾಲ್ಗೊಳ್ಳುತ್ತಾರೆ. ಈ ಜಿಲ್ಲಾ ವ್ಯಾಪ್ತಿಯಲ್ಲಿ ರೇಷ್ಮೆ ಕೃಷಿ ಹೆಚ್ಚಾಗಿ ಇರುವುದರಿಂದ ಇಂತಹ ವಸ್ತುಗಳಿಗೆ ಬೇಡಿಕೆ ಹೆಚ್ಚು.

ಇಂದು ಬಹುತೇಕ ಬಿದಿರಿನ ಪರಿಕರಗಳ ಬದಲು ರೇಷ್ಮೆ ಕೃಷಿಕಾರರು ಪ್ಲಾಸ್ಟಿಕ್ ಪರಿಕರಗಳನ್ನು ಹೆಚ್ಚಾಗಿ ಅವಲಂಭಿಸುತ್ತಿದ್ದಾರೆ. ಇದರಿಂದಾಗಿ ಇರುಳಿಗರು ತಯಾರಿಸುವ ಪರಿಕರಗಳಿಗೆ ಬೇಡಿಕೆ ಇಲ್ಲದಂತಾಗಿದೆ.

೫.೬. ಪಾರಂಪರಿಕ ಕಸುಬುಗಳ ಸ್ಥಿತಿಗತಿ

ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿನ ಇರುಳಿಗರು ಇಂದಿಗೂ ತಮ್ಮ ಪಾರಂಪರಿಕ ವೃತ್ತಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಇಂದಿನ ಆಧುನಿಕ ಪೈಪೋಟಿ ಜಗತ್ತಿನಲ್ಲಿ ಪರಂಪರಿಕ ವೃತ್ತಿಗಳನ್ನು ಅವಲಂಭಿಸಿ ಆರ್ಥಿಕ ಮುನ್ನಡೆ ಸಾಧಿಸುವುದು ಕಷ್ಟಸಾಧ್ಯವಾದ ಕೆಲಸವಾಗಿದೆ. ಅರಣ್ಯವನ್ನು ಅವಲಂಬಿಸಿ ತಮ್ಮ ಕಸುಬು ಮಾಡುತ್ತಿದ್ದವರು ಆಧುನೀಕರಣದ ಫಲವಾಗಿ ಆರ್ಥಿಕವಾಗಿ ದಿವಾಳಿಯಾಗ ತೊಡಗಿದ್ದಾರೆ. ಇವರ ಇಂತಹ ಪರಿಸ್ಥಿತಿಗೆ ಬಹುಮುಖ್ಯವಾದ ಕಾರಣ ಆಧುನಿಕತೆ ಹಾಗೂ ಜಾಗತೀಕರಣಗಳಾಗಿವೆ, ತಮ್ಮ ಮೂಲ ವೃತ್ತಿಯನ್ನು ಅವಲಂಭಿಸಿದ್ದ ಬುಡಕಟ್ಟುಗಳು ಪ್ರಸ್ತುತ ತಮ್ಮ ವೃತ್ತಿಗಳನ್ನು ಬದಲಿಸಿ ಆಧುನಿಕ ಆಶೋತ್ತರಗಳಿಗೆ ಇಂಬುಕೊಡುವಂತಹ ವೃತ್ತಿಗಳನ್ನು ಅವಲಂಬಿಸಬೇಕಾದ ದುಸ್ಥಿತಿ ಉಂಟಾಗಿದೆ. ಅರಣ್ಯ ಪ್ರದೇಶದಲ್ಲಿ ಮೂಲ ವೃತ್ತಿ ಕಸುಬುಗಳನ್ನು ಮಾಡುವುದಿರಲಿ, ಇಂದು ವಾಸ ಮಾಡುತ್ತಿರುವ ತಮ್ಮ-ತಮ್ಮ ನೆಲೆಗಳನ್ನು ಕಳೆದುಕೊಳ್ಳುವ ಹಂತಕ್ಕೆ ಇರುಳಿಗರು ತಲುಪಿದ್ದಾರೆ.

ತಮ್ಮ ಪಾರಂಪರಿಕ ಇಲಿ ಬೇಟೆಯಂತಹ ಕಸುಬು ಸಾಮಾಜಿಕವಾಗಿ ಕೀಳು ಎಂಬ ಮನೋಭಾವ ಇರುಳಿಗರ ಯುವ ಸಮುದಾಯದಲ್ಲಿ ಮೂಡಿದೆ. ಹೀಗಾಗಿ ತಮ್ಮ ವೃತ್ತಿಯ ಕಾರಣಕ್ಕೆ ಈ ಸಮುದಾಯ ಕೀಳರಿಮೆಗೆ ಒಳಗಾಗುತ್ತಿದೆ. ನಗರೀಕರಣದಿಂದಾಗಿ ಪಶುಪಾಲನಾ ವೃತ್ತಿಯು ದೂರವಾಗುತ್ತಿದೆ. ಅರಣ್ಯ ಕಾಯ್ದೆಯಿಂದಾಗಿ ಪಶುಗಳು ಕಾಡಿನೊಳಗೆ ಹೋಗದಂತೆ ನಿರ್ಬಂಧ ಉಂಟಾಗುತ್ತಿದೆ ಹಾಗೆಯೇ ಪಶುಪಾಲನೆಗೆ ಅವಶ್ಯವಾದ ಮೇವಿನ ಕೊರತೆಯಿಂದಾಗಿ ಪಶುಪಾಲನೆಯನ್ನೂ ತ್ಯಜಿಸಬೇಕಾಗಿದೆ.

ತಮ್ಮ ಪಾರಂಪರಿಕ ವೃತ್ತಿಯನ್ನು ಮುಂದುವರೆಸಲು ಇಷ್ಟಪಡದೆ ವ್ಯಾಪಾರ, ಕೂಲಿಯಂತಹ ಉದ್ಯೋಗವನ್ನು ಮುಂದುವರೆಸಬೇಕಾದ ಅನಿವಾರ್ಯತೆ ಇರುಳಿಗರಿಗಿದೆ.

೫.೭. ಇರುಳಿಗ ಸಮುದಾಯದ ಆರ್ಥಿಕ ಸಂಕಷ್ಟಗಳು

ನಿಸರ್ಗವನ್ನು ದೈವವೆಂದು ನಂಬಿ ಆರಾಧಿಸಿ ಬದುಕಿಕೊಂಡು ಬಂದ ಬುಡಕಟ್ಟುಗಳು ಸ್ವಾತಂತ್ರ್ಯದ ನಂತರ ದೇಶದಲ್ಲಿನ ನಗರೀಕರಣ, ಕೈಗಾರಿಕರಣದಂಥ ಹಲವು ಕ್ಷಿಪ್ರ ಬೆಳವಣಿಗೆಗಳು ತಲ್ಲಣಗೊಳಿಸಿದವು. ಬುಡಕಟ್ಟು ಪ್ರದೇಶದಲ್ಲಿ ಕಾಲಿಟ್ಟ ರಸ್ತೆಗಳು, ಕಾರ್ಖಾನೆಗಳು, ಅಣೆಕಟ್ಟುಗಳ ಪ್ರವೇಶದಿಂದಾಗಿ ಬುಡಕಟ್ಟು ಜನರು ತಮ್ಮ ಮೂಲ ನೆಲೆಗಳನ್ನು ತೊರೆದು ಹೋಗುವಂತಾಯಿತು. ಅಲ್ಲದೇ ಅವರ ಸಾಂಪ್ರದಾಯಿಕ ಹಬ್ಬ, ಉತ್ಸವ, ಆಚರಣೆಗಳು, ನ್ಯಾಯ ಪದ್ಧತಿಗಳು ಮೂಲೆಗುಂಪಾಗಿ ಮಹತ್ವ ಕಳೆದುಕೊಂಡವು. ಈ ಜನರ ಜೀವನಕ್ರಮ ಮತ್ತು ಅವರ ಸೂಕ್ಷ್ಮ ಆರ್ಥಿಕ, ಸಾಮಾಜಿಕ ವ್ಯವಸ್ಥೆಯಲ್ಲಿ ಏರುಪೇರಾಯಿತು. ಪ್ರಕೃತಿಯೊಂದಿಗೆ ತಳಕುಹಾಕಿಕೊಂಡಿದ್ದ ಇವರ ಜೀವನ ವಿಧಾನಗಳು, ತಲೆಮಾರಿನಿಂದ ಬಂದ ವೃತ್ತಿಗಳು ಸಡಿಲಾಗತೊಡಗಿದವು. ವಿಷಾದವೆಂದರೆ ಸಂಕಷ್ಟದಲ್ಲಿರುವ ಈ ಬುಡಕಟ್ಟುಗಳ ದಯನೀಯ ಕೂಗು ಸರ್ಕಾರದ ಕಿವಿಗೆ ತಲುಪದೆ ಹೋಯಿತು. "ಯೋಜನಾ ಆಯೋಗದ ಪ್ರಕಾರ ೨೧.೩ ಮಿಲಿಯನ್ ಜನರನ್ನು ೧೯೫೧ರಿಂದ ೧೯೯೦ರವರೆಗೆ ಸ್ಥಳಾಂತರಗೊಳಿಸಲಾಗಿದೆ. ಇವರಲ್ಲಿ ೮.೫೪ ಮಿಲಿಯನ್ ಜನ (ಶೇ. ೪೦ರಷ್ಟು) ಬುಡಕಟ್ಟು ಜನರಾಗಿದ್ದಾರೆ. ಬೇರೆ ಬೇರೆ ಅಧ್ಯಯನಗಳು ಈ ಸಂಖ್ಯೆಯನ್ನು ೨ ಮಿಲಿಯನ್‌ನಿಂದ ೫೬ ಮಿಲಿಯನ್ ತನಕ ಇದೆ ಎಂಬ ಅಭಿಪ್ರಾಯವಿದೆ".[೭]

ಹೀಗೆ ನಿರಾಶ್ರಿತರಾದ ಇರುಳಿಗ ಬುಡಕಟ್ಟುಗಳ ಜೀವನ ನಿರ್ವಹಣೆಗೆ ಅವಶ್ಯವಾದ ಜಮೀನನ್ನು ನೀಡಬೇಕು. ಆದರೆ ಆಳುವ ಪ್ರಭುತ್ವವು ಬುಡಕಟ್ಟುಗಳಿಗೆ ವಿಶೇಷ ಯೋಜನೆಯ ಹೆಸರಿನಲ್ಲಿ ವ್ಯವಸಾಯಕ್ಕೆ ಯೋಗ್ಯವಲ್ಲದ ಬರಡುಭೂಮಿ ನೀಡಿದ ಉದಾಹರಣೆಗಳು ಇವೆ. ಅನಕ್ಷರತೆ, ಬಡತನ ಇವರ ಬದುಕನ್ನು ಒಂದು ರೀತಿಯ ಜೀತದಾಳುಗಳಾಗಿ ದುಡಿಯುವಂತೆ ಮಾಡಿವೆ. ಇವರು ಬಡತನರೇಖೆಯಿಂದ ಕೆಳಗೆ ಉಳಿದಿದ್ದು ಬಡತನ ಉಗ್ರರೂಪ ತಲುಪಿದೆ. ಮೂಲ ವೃತ್ತಿಯೂ ಇಲ್ಲ, ಬೇರೆ ಕೆಲಸ ಮಾಡುವ ಕೌಶಲ್ಯವೂ ಇಲ್ಲದೆ ಇವರು ಮತ್ತಷ್ಟು ಸಂಕಷ್ಟಕ್ಕೆ ಈಡಾಗುವಂತಾಗಿದೆ. ಹೀಗಾಗಿ ಇರುಳಿಗ ಸಮುದಾಯವು ಆರ್ಥಿಕವಾಗಿ ಅನೇಕ ಸಮಸ್ಯೆಗಳ ನಡುವೆ ಬದುಕು ಸವೆಸುವಂತಾಗಿದೆ.

ಪ್ರಸ್ತುತ ಇಲ್ಲಿ ಇರುಳಿಗರು ನಿರ್ವಹಿಸುತ್ತಿರುವ ಅವಲಂಬಿತ ವೃತ್ತಿಗಳು, ಭೂ ಒಡೆತನ ಮುಂತಾದವುಗಳ ಹಿನ್ನೆಲೆಯಲ್ಲಿ ಅವರ ಆರ್ಥಿಕ ಸ್ಥಿತಿ–ಗತಿಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ.

೫.೮. ಇರುಳಿಗ ಸಮುದಾಯದ ಜನಸಂಖ್ಯೆ

ರಾಮನಗರ ಜಿಲ್ಲೆಯ ಚನ್ನಪಟ್ಟಣ, ರಾಮನಗರ, ಮಾಗಡಿ, ಕನಕಪುರ ತಾಲೂಕುಗಳಲ್ಲಿ ಹೋಬಳಿವಾರು ವಾಸಿಸುವ ಇರುಳಿಗ ಸಮುದಾಯದ ಕೌಟುಂಬಿಕ ಸಮೀಕ್ಷೆಯಿಂದ ತಿಳಿದುಬಂದ ಜನಸಂಖ್ಯೆಯ ವಿವರ ಈ ಕೆಳಗಿನಂತಿದೆ.

ಕೋಷ್ಟಕ ೫.೧. ಸಮೀಕ್ಷೆಗೊಳಪಟ್ಟ ಇರುಳಿಗ ಸಮುದಾಯದ ತಾಲೂಕುವಾರು ಕುಟುಂಬವಾರು, ಲಿಂಗವಾರು ಜನಸಂಖ್ಯೆ ಪ್ರಮಾಣ

ಕ್ರಸಂ.	ತಾಲೂಕು	ಕುಟುಂಬ	ಜನಸಂಖ್ಯೆ		
			ಗಂಡು	ಹೆಣ್ಣು	ಒಟ್ಟು
೧.	ಕನಕಪುರ	೮೦೦	೧೮೦೩	೧೬೭೫	೩೪೭೮
೨.	ಚನ್ನಪಟ್ಟಣ	೫೩	೧೨೬	೧೨೮	೨೫೪
೩.	ಮಾಗಡಿ	೧೬೩	೩೮೩	೩೬೯	೭೫೨
೪.	ರಾಮನಗರ	೫೪೯	೧೧೮೯	೧೧೨೧	೨೩೧೦
ಒಟ್ಟು		೧೫೬೫	೩೫೦೧	೩೨೯೩	೬೭೯೪

ರಾಮನಗರ ಜಿಲ್ಲೆಯಲ್ಲಿ ನೆಲೆಸಿದ ಇರುಳಿಗ ಸಮುದಾಯದ ಒಟ್ಟು ಕುಟುಂಬಗಳು ೧೫೬೫ ಇವೆ. ಒಟ್ಟು ಜನಸಂಖ್ಯೆಯು ೬೭೯೪ ಇದೆ. ಇದರಲ್ಲಿ ಪುರುಷರು ೩೫೦೧ (ಶೇ. ೫೧.೮೪) ಮಹಿಳೆಯರು ೩೨೯೩(ಶೇ. ೪೮.೧೯)ರಷ್ಟಿದ್ದಾರೆ. ತಾಲೂಕುವಾರು ನೋಡಿದಾಗ ಕನಕಪುರ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಉಯ್ಯಂಬಳ್ಳಿ, ಕಸಬಾ, ಕೋಡಿಹಳ್ಳಿ, ಮರಳವಾಡಿ, ಸಾತನೂರು ಹೋಬಳಿ ವ್ಯಾಪ್ತಿಯಲ್ಲಿ ೮೦೦ ಇರುಳಿಗ ಕುಟುಂಬಗಳಿವೆ. ಈ ತಾಲೂಕಿನ ಒಟ್ಟು ಜನಸಂಖ್ಯೆಯು ೩೪೭೮ ಇದೆ. ಇದರಲ್ಲಿ ಪುರುಷರು ೧೮೦೩, ಮಹಿಳೆಯರು ೧೬೭೫ರಷ್ಟಿದ್ದಾರೆ. ಜಿಲ್ಲೆಯ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಈ ತಾಲೂಕಿನಲ್ಲಿ ನೆಲೆಸಿದ ಇರುಳಿಗರ ಪ್ರಮಾಣವು ಶೇಕಡ ೫೧.೧೯ರಷ್ಟಿದೆ. ಜಿಲ್ಲೆಯ ಇರುಳಿಗರ ಒಟ್ಟು ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚಿನ ಪಾಲು ಇದೊಂದೇ ತಾಲೂಕಿನೊಳಗಿದೆ.

ಇದೇ ರೀತಿ ಚನ್ನಪಟ್ಟಣ ತಾಲೂಕಿನ ಮೂರು ಹೋಬಳಿಗಳಲ್ಲಿ ಮಳೂರು, ಮಾಗಡಿ ತಾಲೂಕಿನ ಕಸಬಾ, ಮಾಡಬಾಳ್, ಸೋಲೂರು ಹೋಬಳಿಗಳ ವ್ಯಾಪ್ತಿಯಲ್ಲಿ ೫೩ ಇರುಳಿಗ ಕುಟುಂಬಗಳಿವೆ. ಈ ತಾಲೂಕಿನ ಒಟ್ಟು ಜನಸಂಖ್ಯೆಯು ೨೫೪ ಇದೆ. ಇದರಲ್ಲಿ ಪುರುಷರು ೧೨೬, ಮಹಿಳೆಯರು ೧೨೮ ರಷ್ಟಿದ್ದಾರೆ. ಜಿಲ್ಲೆಯ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಈ ತಾಲೂಕಿನಲ್ಲಿ ನೆಲೆಸಿದ ಇರುಳಿಗರ ಪ್ರಮಾಣವು ಶೇಕಡ ೩.೭೩ರಷ್ಟಿದೆ. ಜಿಲ್ಲೆಯ ಇರುಳಿಗರು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಈ ತಾಲೂಕಿನಲ್ಲಿ ನೆಲೆಸಿದ್ದಾರೆ.

ಮಾಗಡಿ ತಾಲೂಕಿನ ವ್ಯಾಪ್ತಿಯಲ್ಲಿ ೧೬೩ ಇರುಳಿಗ ಕುಟುಂಬಗಳಿವೆ. ಈ ತಾಲೂಕಿನ ಒಟ್ಟು ಜನಸಂಖ್ಯೆಯು ೭೫೨ ಇದೆ. ಇದರಲ್ಲಿ ಪುರುಷರು ೩೮೩, ಮಹಿಳೆಯರು ೩೬೯ರಷ್ಟಿದ್ದಾರೆ. ಜಿಲ್ಲೆಯ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಈ ತಾಲೂಕಿನಲ್ಲಿ ನೆಲೆಸಿದ ಇರುಳಿಗರ ಪ್ರಮಾಣವು ಶೇಕಡ ೧೧.೬ರಷ್ಟಿದೆ.

ರಾಮನಗರ ತಾಲೂಕಿನ ವ್ಯಾಪ್ತಿಯಲ್ಲಿ ೫೮೯ ಇರುಳಿಗ ಕುಟುಂಬಗಳಿವೆ. ಈ ತಾಲೂಕಿನ ಒಟ್ಟು ಜನಸಂಖ್ಯೆಯು ೨೩೧೦ ಇದೆ. ಇದರಲ್ಲಿ ಪುರುಷರು ೧೧೮೯, ಮಹಿಳೆಯರು ೧೧೨೧ ರಷ್ಟಿದ್ದಾರೆ. ಜಿಲ್ಲೆಯ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಈ ತಾಲೂಕಿನಲ್ಲಿ ನೆಲೆಸಿದ ಇರುಳಿಗರ ಪ್ರಮಾಣವು ಶೇಕಡ ೩೪ ರಷ್ಟಿದೆ. ಅಂದರೆ ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಈ ತಾಲೂಕಿನಲ್ಲಿಯೂ ಹೆಚ್ಚಿನ ಪ್ರಮಾಣದಲ್ಲಿ ಇರುಳಿಗರು ನೆಲೆಸಿದ್ದಾರೆ.

ರಾಮನಗರ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ೧೪ ಹೋಬಳಿಗಳಲ್ಲಿನ ಇವರ ನೆಲೆಗಳಲ್ಲಿ ಕ್ಷೇತ್ರಕಾರ್ಯವನ್ನು ಮಾಡಲಾಗಿದೆ. ಇಲ್ಲಿ ತಿಳಿಸಿರುವ ನೆಲೆ ಮತ್ತು ಕುಟುಂಬಗಳ ಸಂಖ್ಯೆಯೇ ಅಂತಿಮವೆಂದು ಭಾವಿಸಬಾರದು. ಏಕೆಂದರೆ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಎಷ್ಟೋ ಇರುಳಿಗ ಸಮುದಾಯದ ಕುಟುಂಬಗಳು ಜೀವನೋಪಾಯಕ್ಕಾಗಿ ವಲಸೆ ಹೋಗಿರುವುದಾಗಿ ತಿಳಿದುಬಂದಿತು. ಆ ರೀತಿ ವಲಸೆ ಹೋದವರನ್ನು ಗಣತಿಗೆ ತೆಗೆದುಕೊಳ್ಳಲಾಗಿಲ್ಲ. ಕ್ಷೇತ್ರಕಾರ್ಯಕ್ಕೆ ಹೋದ ಸಂದರ್ಭದಲ್ಲಿ ದೊರೆತ ಇರುಳಿಗ ಕುಟುಂಬಗಳನ್ನು ಮಾತ್ರ ಗಣತಿಗೆ ತೆಗೆದುಕೊಳ್ಳಲಾಗಿದೆ.

೫.೯. ಇರುಳಿಗ ಸಮುದಾಯದ ವಯೋಗುಂಪುವಾರು ಜನಸಂಖ್ಯೆ

ಯಾವುದೇ ಸಮುದಾಯದ ಶೈಕ್ಷಣಿಕ ಹಾಗೂ ಆರ್ಥಿಕ ಅಂಶಗಳನ್ನು ಅರಿಯಲು ಆ ಸಮುದಾಯದ ಜನರ ವಯೋಮಾನಗಳನ್ನು ತಿಳಿಯುವುದು ಅತ್ಯಾವಶ್ಯಕವಾಗಿರುತ್ತದೆ. ಇರುಳಿಗ ಸಮುದಾಯದ ಈ ಅಂಶಗಳನ್ನು ಅರಿಯಲು ಈ ಕೆಳಗಿನಂತೆ ೫ ಭಾಗಗಳಲ್ಲಿ ವಯೋಮಾನದ ವಿಂಗಡಣೆಯನ್ನು ಮಾಡಿಕೊಳ್ಳಲಾಗಿದೆ. ಮೊದಲನೆಯದಾಗಿ ಹುಟ್ಟಿದ ಮಗುವಿನಿಂದ ಆರು ವರ್ಷದೊಳಗಿನ ಮಕ್ಕಳು, ಎರಡನೆಯದಾಗಿ ಆರು ವರ್ಷದ ಮೇಲ್ಪಟ್ಟ ಹಾಗೂ ಹದಿನೇಳು ವರ್ಷದೊಳಗಿನ ಮಕ್ಕಳು, ಮೂರನೆಯದಾಗಿ ಹದಿನೇಳು ವರ್ಷಗಳ ಮೇಲ್ಪಟ್ಟ ಹಾಗೂ ನಲ್ವತ್ತು ವರ್ಷದೊಳಗಿನ ಜನರನ್ನು, ನಾಲ್ಕನೆಯದಾಗಿ ೪೦ ವರ್ಷ ಮೇಲ್ಪಟ್ಟ ಹಾಗೂ ೬೦ರೊಳಗಿನವರನ್ನು ಕೊನೆಯದಾಗಿ ೬೦ ವರ್ಷ ಮೇಲ್ಪಟ್ಟ ವೃದ್ಧರು ಹೀಗೆ ಐದು ಹಂತದಲ್ಲಿ ವಯೋಗುಂಪುಗಳನ್ನು ವರ್ಗೀಕರಿಸಲಾಗಿದೆ.

ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ನೆಲೆಸಿದ ಇರುಳಿಗರಲ್ಲಿ ೦-೧೭ರ ವಯೋಮಾನದ ಮಕ್ಕಳು ಒಟ್ಟು ೧೦೩೭ ಇವೆ. ಇದರಲ್ಲಿ ಗಂಡುಮಕ್ಕಳು ೫೩೭ ಹಾಗೂ ಹೆಣ್ಣುಮಕ್ಕಳು ೫೦೦ರಷ್ಟಿದ್ದಾರೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ೦-೬ರ ವಯೋಮಾನದ ಮಕ್ಕಳ ಪ್ರಮಾಣವು ಶೇಕಡ ೧೫.೨೬ರಷ್ಟಿದೆ.

೬ರ ಮೇಲ್ಪಟ್ಟು ಹಾಗೂ ೧೭ರ ಒಳಗಿನ ವಯೋಮಾನದ ಮಕ್ಕಳು ಒಟ್ಟು ೧೩೪೨ ಇವೆ. ಇದರಲ್ಲಿ ಗಂಡುಮಕ್ಕಳು ೭೧೩ ಹಾಗೂ ಹೆಣ್ಣುಮಕ್ಕಳು ೬೨೯ರಷ್ಟಿದ್ದಾರೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ೦-೬ರ ವಯೋಮಾನದ ಮಕ್ಕಳ ಪ್ರಮಾಣವು ಶೇಕಡ ೧೯.೭೬ರಷ್ಟಿದೆ.

೧೭ರ ಮೇಲ್ಪಟ್ಟು ಹಾಗೂ ೪೦ರ ಒಳಗಿನ ವಯೋಮಾನದವರು ಒಟ್ಟು ೩೦೮೨ ಇದ್ದಾರೆ. ಇದರಲ್ಲಿ ಪುರುಷರು ೧೫೦೬ ಹಾಗೂ ಹೆಣ್ಣುಮಕ್ಕಳು ೧೫೭೬ರಷ್ಟಿದ್ದಾರೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ೦-೬ರ ವಯೋಮಾನದ ಮಕ್ಕಳ ಪ್ರಮಾಣವು ಶೇಕಡ ೪೫.೩೬ ರಷ್ಟಿದೆ.

ಕೋಷ್ಟಕ ೫.೨. ಸಮೀಕ್ಷೆಗೊಳಪಟ್ಟ ರಾಮನಗರ ಜಿಲ್ಲೆಯ ಇರುಳಿಗರ ವಯೋಗುಂಪುವಾರು ಜನಸಂಖ್ಯೆ ವಿವರ

ಕ್ರಸಂ	ಜಿಲ್ಲೆ	ವಯೋಗುಂಪು	ಜನಸಂಖ್ಯೆ		
			ಗಂಡು	ಹೆಣ್ಣು	ಒಟ್ಟು
	ರಾಮನಗರ	೦-೬	೫೩೭	೫೦೦	೧೦೩೭
		+೬-೧೭	೭೧೩	೬೨೯	೧೩೪೨
		+೧೭-೪೦	೧೫೦೬	೧೫೭೬	೩೦೮೨
		+ ೪೦-೬೦	೫೧೬	೪೩೮	೯೫೪
		೬೧ರ ಮೇಲ್ಪಟ್ಟು	೨೨೯	೧೫೦	೩೭೯
		ಒಟ್ಟು	**೩೫೦೧**	**೩೨೯೩**	**೬೭೯೪**

೪೦ರ ಮೇಲ್ಪಟ್ಟು ಹಾಗೂ ೬೦ರ ಒಳಗಿನ ವಯೋಮಾನದವರು ಒಟ್ಟು ೯೫೪ ಇದ್ದಾರೆ. ಇದರಲ್ಲಿ ಪುರುಷರು ೫೧೬ ಹಾಗೂ ಹೆಣ್ಣುಮಕ್ಕಳು ೪೩೮ ರಷ್ಟಿದ್ದಾರೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ೪೦ರ ಮೇಲ್ಪಟ್ಟು ಹಾಗೂ ೬೦ರ ಒಳಗಿನ ವಯೋಮಾನದವರ ಪ್ರಮಾಣವು ಶೇಕಡ ೧೪.೦೪ ರಷ್ಟಿದೆ.

೬೦ರ ಮೇಲ್ಪಟ್ಟು ವಯೋಮಾನದವರು ಒಟ್ಟು ೩೭೯ ಇದ್ದಾರೆ. ಇದರಲ್ಲಿ ಪುರುಷರು ೨೨೯ ಹಾಗೂ ಹೆಣ್ಣು ಮಕ್ಕಳು ೧೫೦ರಷ್ಟಿದ್ದಾರೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ೪೦ರ ಮೇಲ್ಪಟ್ಟು ಹಾಗೂ ೬೦ರ ಮೇಲ್ಪಟ್ಟ ವಯೋಮಾನದವರ ಪ್ರಮಾಣವು ಶೇಕಡ ೫.೫೧ರಷ್ಟಿದೆ.

೫.೧೦. ಕಾಯಕರ್ಹವಲ್ಲದ ಗುಂಪು

ಕೋಷ್ಟಕ ೫.೩. ಸಮೀಕ್ಷೆಗೊಳಪಟ್ಟ ರಾಮನಗರ ಜಿಲ್ಲೆಯ ಇರುಳಿಗರ ಕಾಯಕರ್ಹವಲ್ಲದ ವಿವರ

ಕ್ರಸಂ	ಜಿಲ್ಲೆ	ವಯೋಗುಂಪು	ಕಾಯಕರ್ಹವಲ್ಲದ ಜನಸಂಖ್ಯೆ		
			ಗಂಡು	ಹೆಣ್ಣು	ಒಟ್ಟು
೧	ರಾಮನಗರ	೦-೧೭	೧೨೫೦	೧೧೨೯	೨೩೭೯
		+ ೬೦	೨೨೯	೧೫೦	೩೭೯
		ಒಟ್ಟು	೧೪೭೯	೧೨೭೯	೨೭೫೮

೦-೧೭ ವರ್ಷದೊಳಗಿನ ಮಕ್ಕಳು ಹಾಗೂ ಅರವತ್ತು ವರ್ಷಗಳನ್ನು ಪೂರೈಸಿದ ವೃದ್ಧರನ್ನು ಕಾಯಕಾರ್ಹರಲ್ಲ ಎಂದು ಪರಿಗಣಿಸಲಾಗುತ್ತದೆ. ಏಕೆಂದರೆ ಭಾರತೀಯ ಕಾನೂನಿನಲ್ಲಿ ಮಗು ಹದಿನೇಳು ವರ್ಷ ಪೂರ್ಣಗೊಳಿಸದೆ ಯಾವುದೇ ಆರ್ಥಿಕ ಮೂಲವನ್ನು ಕೊಡುವ ಹುದ್ದೆಯಲ್ಲಿ ತೊಡಗಬಾರದೆಂದಿದೆ. ಅದೇ ರೀತಿಯಾಗಿ ಯಾವುದೇ ಹುದ್ದೆಯಿಂದ ನಿವೃತ್ತಿಗೊಳ್ಳುವ ವಯಸ್ಸು ೬೦ ಎಂದು ಪರಿಗಣಿಸಲಾಗಿದೆ. ಹೀಗಾಗಿ ಈ ಎರಡೂ ಗುಂಪುಗಳನ್ನು ಕಾಯಕಾರ್ಹವಲ್ಲದ ಗುಂಪೆಂದು ಪರಿಗಣಿಸಲಾಗಿದೆ. ಈ ರೀತಿ ಕಾಯಕಾರ್ಹವಲ್ಲದ ಇರುಳಿಗರು ಒಟ್ಟು ೨೭೫೮ ಇದೆ. ಇದರಲ್ಲಿ ಪುರುಷರು ೧೪೭೯ ಹಾಗೂ ಮಹಿಳೆಯರು ೧೨೭೯ರಷ್ಟಿದ್ದಾರೆ. ಅಂದರೆ ಸಮೀಕ್ಷೆಗೆ ಒಳಪಡಿಸಿದ ಇರುಳಿಗರಲ್ಲಿ ಕಾಯಕಾರ್ಹವಲ್ಲದವರ ಪ್ರಮಾಣವು ಶೇಕಡ ೪೦.೫೯ರಷ್ಟಿದ್ದಾರೆ. ಅಂದರೆ ಇದರಾಚೆಗೆ ಶೇಕಡ ೫೦.೪೨ ರಷ್ಟು ಜನರು ಕಾಯಕಾರ್ಹರಾದವರೆಂದು ಪರಿಗಣಿಸಬಹುದು.

ಕೋಷ್ಟಕ ೫.೪. ಸಮೀಕ್ಷೆಗೊಳಪಟ್ಟ ತಾಲೂಕುವಾರು ಇರುಳಿಗರ ಕಾಯಕಾರ್ಹರಲ್ಲದವರ ಹಾಗೂ ಕಾಯಕಾರ್ಹರ ವಿವರ

ಕ್ರಸಂ	ತಾಲೂಕು	ಕಾಯಕಾರ್ಹರಲ್ಲದವರು			ಕಾಯಕಾರ್ಹರು		
		ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
೧	ಕನಕಪುರ	೬೫೧	೬೩೦	೧೨೮೧	೧೧೫೨	೧೦೪೫	೨೧೯೭
೨	ಚನ್ನಪಟ್ಟಣ	೫೦	೫೩	೧೦೩	೭೬	೭೫	೧೫೧
೩	ಮಾಗಡಿ	೧೬೯	೧೫೬	೩೨೫	೨೧೪	೨೧೬	೪೩೦
೪	ರಾಮನಗರ	೫೧೯	೪೯೯	೧೦೦೮	೬೮೦	೬೩೦	೧೩೧೦
	ಒಟ್ಟು	**೧೩೭೯**	**೧೩೩೮**	**೨೭೧೭**	**೨೧೨೨**	**೧೯೬೬**	**೪೦೮೮**

ಇರುಳಿಗರ ತಾಲೂಕುವಾರು ಜನಸಂಖ್ಯೆಯನ್ನು ನೋಡಿದಾಗ ಕನಕಪುರ ತಾಲೂಕಿನ ಒಟ್ಟು ಇರುಳಿಗರಲ್ಲಿ ಕಾಯಕಾರ್ಹವಾದವರು ೨೧೯೭ ಇದ್ದಾರೆ. ಇದರಲ್ಲಿ ಪುರುಷ ಕಾಯಕಾರ್ಹರು ೧೧೫೨ ಇದ್ದರೆ ಮಹಿಳಾ ಕಾಯಕಾರ್ಹರು ೧೧೪೫ರಷ್ಟಿದ್ದಾರೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಕಾಯಕಾರ್ಹವಾದವರ ಪ್ರಮಾಣವು ಶೇಕಡ ೬೩.೧೭ರಷ್ಟಿದೆ. ಇದರಲ್ಲಿ ಕಾಯಕಾರ್ಹರಲ್ಲದವರು ಶೇಕಡ ೩೬.೮೩ರಷ್ಟಿದೆ.

ಚನ್ನಪಟ್ಟಣ ತಾಲೂಕಿನ ಒಟ್ಟು ಇರುಳಿಗರಲ್ಲಿ ಕಾಯಕಾರ್ಹವಾದವರು ೧೫೧ ಇದ್ದಾರೆ. ಇದರಲ್ಲಿ ಪುರುಷ ಕಾಯಕಾರ್ಹರು ೭೬ ಇದ್ದರೆ ಮಹಿಳಾ ಕಾಯಕಾರ್ಹರು ೭೫ರಷ್ಟಿದ್ದಾರೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಕಾಯಕಾರ್ಹವಾದವರ ಪ್ರಮಾಣವು ಶೇಕಡ ೫೯.೪೪ರಷ್ಟಿದೆ. ಇದರಲ್ಲಿ ಕಾಯಕಾರ್ಹರಲ್ಲದವರು ಶೇಕಡ ೪೦.೫೬ರಷ್ಟಿದೆ.

ಮಾಗಡಿ ತಾಲೂಕಿನ ಒಟ್ಟು ಇರುಳಿಗರಲ್ಲಿ ಕಾಯಕಾರ್ಹವಾದವರು ೪೩೦ ಇದ್ದಾರೆ. ಇದರಲ್ಲಿ ಪುರುಷ ಕಾಯಕಾರ್ಹರು ೨೧೪ ಇದ್ದರೆ ಮಹಿಳಾ ಕಾಯಕಾರ್ಹರು ೨೧೬ರಷ್ಟಿದ್ದಾರೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಕಾಯಕಾರ್ಹವಾದವರ ಪ್ರಮಾಣವು ಶೇಕಡ ೫೬.೯೫ರಷ್ಟಿದೆ. ಇದರಲ್ಲಿ ಕಾಯಕಾರ್ಹರಲ್ಲದವರು ಶೇಕಡ ೪೩.೦೫ರಷ್ಟಿದೆ.

ರಾಮನಗರ ತಾಲೂಕಿನ ಒಟ್ಟು ಇರುಳಿಗರಲ್ಲಿ ಕಾಯಕಾರ್ಹವಾದವರು ೧೩೧೦ ಇದ್ದಾರೆ. ಇದರಲ್ಲಿ ಪುರುಷ ಕಾಯಕಾರ್ಹರು ೬೮೦ ಇದ್ದರೆ ಮಹಿಳಾ ಕಾಯಕಾರ್ಹರು ೬೩೦ ರಷ್ಟಿದ್ದಾರೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಕಾಯಕಾರ್ಹವಾದವರ ಪ್ರಮಾಣವು ಶೇಕಡ ೫೬.೫೧ ರಷ್ಟಿದೆ. ಇದರಲ್ಲಿ ಕಾಯಕಾರ್ಹರಲ್ಲದವರು ಶೇಕಡ ೪೩.೪೯ರಷ್ಟಿದೆ.

ರಾಮನಗರ ಜಿಲ್ಲೆಯ ಒಟ್ಟು ಇರುಳಿಗರಲ್ಲಿ ಕಾಯಕಾರ್ಹವಾದವರು ೪೦೮೮ ಇದ್ದಾರೆ. ಇದರಲ್ಲಿ ಪುರುಷ ಕಾಯಕಾರ್ಹರು ೨೧೨೨ ಇದ್ದರೆ ಮಹಿಳಾ ಕಾಯಕಾರ್ಹರು ೧೯೬೬ರಷ್ಟಿದ್ದಾರೆ. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಕಾಯಕಾರ್ಹವಾದವರ ಪ್ರಮಾಣವು ಶೇಕಡ ೫೩.೧೩ರಷ್ಟಿದೆ. ಇದರಲ್ಲಿ ಕಾಯಕಾರ್ಹರಲ್ಲದವರು ಶೇಕಡ ೪೬.೮೭ರಷ್ಟಿದೆ.

೫.೧೧. ಇರುಳಿಗರ ಶ್ರಮಶಕ್ತಿ ಹಾಗೂ ಕಸುಬುಗಳು

ಬುಡಕಟ್ಟುಗಳ ಮುಖ್ಯ ಉತ್ಪಾದನಾ ಮೂಲವಾದ ಶ್ರಮ ಮತ್ತು ಕಸುಬುಗಳನ್ನು ಅವಲೋಕಿಸುವುದು ಸೂಕ್ತವಾಗಿದೆ. ಇಲ್ಲಿ ಶ್ರಮವೆಂದರೆ ಕಷ್ಟಪಟ್ಟು ದುಡಿಯುವುದಷ್ಟೇ ಹಾಗೂ ಜನಸಂಖ್ಯಾವಾರು ವಯೋಮಾನ ಪ್ರಮಾಣ ಎಷ್ಟು? ದುಡಿಯುವವರ ಸಂಖ್ಯೆ ಎಷ್ಟು ಹಾಗೂ ಅವಲಂಬಿತರೆಷ್ಟು ಎನ್ನುವುದಾಗಿದೆ.

ಕಾನೂನಿನ ಪ್ರಕಾರ ೦–೧೬ ವಯೋಮಾನದ ಒಳಗಿನವರು ಯಾವುದೇ ವೃತ್ತಿಯನ್ನು ಮಾಡದ, ೬೧ರ ಮೇಲ್ಪಟ್ಟವರು ದೈಹಿಕ ದೌರ್ಬಲ್ಯದಿಂದಾಗಿ ಶ್ರಮಿಕವರ್ಗಕ್ಕೆ ಅಸಮರ್ಥರೆಂದು ಭಾವಿಸಲಾಗಿದೆ. ಹೀಗಾಗಿ ಈ ವಯೋಮಾನದವರನ್ನು ಅವಲಂಬಿತರೆಂದು ಭಾವಿಸಲಾಗಿದೆ. ಆದರೆ ಇರುಳಿಗ ಸಮುದಾಯದಲ್ಲಿ ಇದು ಅಪವಾದವೆಂಬಂತೆ ತೋರುತ್ತದೆ. ಶಿಕ್ಷಣ ಪಡೆಯಬೇಕಿದ್ದ ಮಕ್ಕಳು ಹಾಗೂ ವೃದ್ಧರು ಒಂದಿಲ್ಲೊಂದು ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದರಿಂದ ನಿರುದ್ಯೋಗಿಗಳು ಕಾಣಸಿಗರು. ಮತ್ತು ಕಾಯಕಾರ್ಹರಿಗಿಂತ ಹೆಚ್ಚಿನ ಕೆಲಸ ಮಾಡುವುದನ್ನು ಗಮನಿಸಬಹುದು. ಕುಟುಂಬ ನಿರ್ವಹಣೆಗೆ ಲಿಂಗಭೇದ ಮತ್ತು ವಯೋಮಿತಿಯ ಭೇದವಿಲ್ಲದೆ ಇವರು ವೃತ್ತಿಯಲ್ಲಿ ತೊಡಗುವುದು ಸಹಜ. ದುಡಿಯುವ ವರ್ಗದೊಂದಿಗೆ ಕೈಜೋಡಿಸಿ ಕಾಯಕಾರ್ಹರಲ್ಲದ ವಯೋಮಾನದವರು ಸಹ ಗಣನೀಯವಾಗಿ ಕೆಲಸ ನಿರ್ವಹಿಸುತ್ತಿರುವುದು ಕಂಡುಬರುತ್ತದೆ.

ಒಟ್ಟಾರೆ ಕನಕಪುರ, ಚನ್ನಪಟ್ಟಣ, ಮಾಗಡಿ ಹಾಗೂ ರಾಮನಗರ ತಾಲೂಕು ವ್ಯಾಪ್ತಿಯ ಇರುಳಿಗ ಸಮುದಾಯಗಳ ಕಾಯಕಾರ್ಹರಲ್ಲಿ ಲಿಂಗವಾರು ಪ್ರಮಾಣವನ್ನು ಗಮನಿಸಿದಾಗ ಪುರುಷರು ಮತ್ತು ಮಹಿಳೆಯರು ಸಮಾನ ಸ್ಥಾನಮಾನದಲ್ಲಿರುವುದು ಕಂಡುಬರುತ್ತದೆ. ಕೌಟುಂಬಿಕ

ಜೀವನೋಪಾಯಕ್ಕಾಗಿ ಮೇಲೆ ತಿಳಿಸಿದಂತೆ ದುಡಿಯುವ ಹಾಗೂ ಅವಲಂಬಿತ ವರ್ಗವು ಸೇರಿಕೊಂಡಿರುವುದರಿಂದ ಇಲ್ಲಿ ಕಾಯಕಾರ್ಹರ ಪ್ರಮಾಣಕ್ಕಿಂತ ಕಾಯಕಸ್ಥರ ಪ್ರಮಾಣ ಹೆಚ್ಚಾಗಿರುವುದು ಕಂಡುಬರುತ್ತದೆ. ಈ ಒಂದು ಅಂಕಿ-ಅಂಶವು ಸಮುದಾಯದಲ್ಲಿ ಎಲ್ಲರೂ ಸೇರಿ ಕೆಲಸ ಮಾಡಿದರೆ ಮಾತ್ರ ತುತ್ತಿನ ಚೀಲಕ್ಕೆ ಸಾಕಾಗುವಷ್ಟು ಹಣ ದುಡಿಯಬಹುದು ಇಲ್ಲದಿದ್ದರೆ ಅರೆ ಹೊಟ್ಟೆಯಲ್ಲಿ ಬದುಕು ಸಾಗಿಸಬೇಕಾಗುತ್ತದೆ ಎಂಬುದನ್ನು ತೋರಿಸುತ್ತದೆ. ಇದು ಇರುಳಿಗರ ಸಮುದಾಯದ ಆರ್ಥಿಕ ವ್ಯವಸ್ಥೆಯನ್ನು ಪ್ರತಿಬಿಂಬಿಸುವಲ್ಲಿ ಪ್ರಮುಖವಾದ ಆಧಾರವಾಗಿದೆ. ಕೋಷ್ಟಕದಿಂದ ತಿಳಿದುಬರುವ ಮುಖ್ಯವಾದ ಅಂಶವೆಂದರೆ ಜೀವನ ನಿರ್ವಹಣೆಯಲ್ಲಿ ಶ್ರಮದ ಅನಿವಾರ್ಯತೆ ಹಾಗೂ ಪ್ರಾಮುಖ್ಯತೆಯನ್ನು ಹಾಗೂ ಕೂತು ಉಣ್ಣುವ ಸಂಸ್ಕೃತಿ ಇರುಳಿಗರಲ್ಲಿ ಇಲ್ಲದಿರುವುದನ್ನು ಇದು ಪ್ರತಿಫಲಿಸುತ್ತದೆ. ಬುಡಕಟ್ಟಿನ ಆರ್ಥಿಕ ಮೂಲ ಶ್ರಮಿಕ ಸಂಸ್ಕೃತಿ ಎಂಬುದನ್ನು ತೋರಿಸುತ್ತದೆ. ಒಟ್ಟಾರೆ ಕಾಯಕಾರ್ಹರ ಪ್ರಮಾಣ ಶೇ. ೯೬.೫ರಷ್ಟಿದ್ದಾರೆ. ಲಿಂಗವಾರು ಗಮನಿಸಿದಾಗ ಪುರುಷರು ಶೇ. ೫೨ರಷ್ಟು, ಮಹಿಳೆಯರು ಶೇ. ೪೮ರಷ್ಟಿದ್ದಾರೆ. ಅವಲಂಬಿತ ವರ್ಗದ ಪ್ರಮಾಣ ಶೇ. ೦೩.೦೫ರಷ್ಟಿರುವುದು ಕಂಡುಬರುತ್ತದೆ.

ಕೋಷ್ಟಕ ೫.೫. ಸಮೀಕ್ಷೆಗೊಳಪಟ್ಟ ರಾಮನಗರ ಜಿಲ್ಲೆಯ ಇರುಳಿಗ ಸಮುದಾಯದ ತಾಲೂಕುವಾರು ಮತ್ತು ಲಿಂಗವಾರು ಕಾರ್ಯದ ವಿವಿಧ ಹಂತಗಳು

ಹೋಬಳಿಗಳು	ಕುಟುಂಬ	ಕಾಯಕರ್ಹರು			ಕಾಯಕಸ್ಥರು			ಅವಲಂಬಿತ ವರ್ಗ		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಉಯ್ಯಂಬಳ್ಳಿ	೪೮	೭೪	೭೦	೧೪೪	೬೮	೬೭	೧೩೫	೬	೩	೯
ಕಸಬಾ	೨೭೮	೩೭೨	೩೬೬	೭೩೮	೩೫೬	೩೧೧	೬೬೭	೧೬	೫೫	೭೧
ಕೋಡಿಹಳ್ಳಿ	೨೦೬	೨೬೭	೨೭೮	೫೪೫	೨೭೧	೨೧೮	೪೮೮	-೪	೬೦	೫೭
ಮರಳವಾಡಿ	೧೪೪	೧೮೧	೧೮೨	೩೬೩	೨೦೦	೧೯೪	೩೯೦	-೧೯	-೧೨	-೨೭
ಸಾತನೂರು	೧೨೪	೧೫೮	೧೪೯	೩೦೭	೧೫೭	೧೪೭	೩೦೪	೧	೨	೩
ಕನಕಪುರ ತಾಲೂಕು	೮೦೦	೧೦೫೨	೧೦೪೫	೨೦೯೭	೧೦೫೨	೯೩೭	೧೯೮೪	೦	೧೦೮	೧೧೩
ಚನ್ನಪಟ್ಟಣ ತಾಲೂಕು (ಮಳೂರು)	೫೩	೭೬	೭೫	೧೫೧	೮೦	೭೫	೧೫೩	-೪	೦	-೨
ಕಸಬಾ	೭	೭	೭	೧೪	೯	೭	೧೬	-೨	೦	-೨
ಮಾಡಬಾಳ್	೧೩೩	೧೭೧	೧೬೯	೩೪೦	೧೭೬	೧೫೦	೩೨೪	-೫	೧೯	೧೬
ಸೋಲೂರು	೨೩	೩೬	೩೭	೭೩	೨೧	೧೬	೩೭	೧೫	೨೧	೩೬
ಮಾಗಡಿ ತಾಲೂಕು	೧೬೩	೨೧೪	೨೧೩	೪೨೭	೨೦೬	೧೭೩	೩೭೭	೮	೪೦	೫೦
ಕಸಬಾ	೧೩೬	೧೫೯	೧೬೬	೩೨೫	೧೬೯	೧೫೯	೩೨೬	-೧೦	೭	-೧
ಕೂಟಗಲ್	೨೫೦	೩೧೪	೩೦೭	೬೨೧	೩೨೪	೩೧೧	೬೩೫	-೧೦	-೪	-೧೪
ಕೈಲಂಚ	೧೬೧	೨೦೦	೨೧೦	೪೧೦	೨೧೪	೨೧೭	೪೩೧	-೧೪	-೭	-೨೧
ಬಿಡದಿ	೨	೨	೩	೫	೪	೩	೭	-೨	೦	-೨
ರಾಮನಗರ ತಾಲೂಕು	೫೪೯	೬೮೦	೬೮೧	೧೩೬೧	೭೧೧	೬೯೦	೧೩೯೯	-೩೧	-೯	-೩೮

ಕೋಷ್ಟಕ ೫.೫ನ್ನು ಗಮನಿಸಿದಾಗ ಒಟ್ಟು ಜನಸಂಖ್ಯೆಯಲ್ಲಿ ಕಾಯಕರ್ಹರಲ್ಲದ ಹಾಗೂ ದೈಹಿಕ ದೌರ್ಬಲ್ಯದ ವಯೋಮಾನದವರನ್ನು ಹೊರಗಿಸಲಾಗಿ ಕಾಯಕಾರ್ಹರ ಅಂದರೆ ದುಡಿಯುವ ವರ್ಗದವರೆಂದು ಗಣಿಸಲಾಗಿದೆ. ಆದರೆ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ದೊರೆತಿರುವ ಮಾಹಿತಿಯ ಅಂಕಿಅಂಶಗಳನ್ವಯ ಕಾಯಕಾರ್ಹರ ಪ್ರಮಾಣಕ್ಕಿಂತ ಹೆಚ್ಚಿನ ಕಾಯಕಸ್ಥರ ವರ್ಗದ ಲಿಂಗವಾರು ಪ್ರಮಾಣ ಕಾಣಸಿಗುತ್ತದೆ. ಕಾರಣ ಹೆಚ್ಚಿನ ಕುಟುಂಬವರ್ಗಗಳು ಲಿಂಗವಾರು ತಾರತಮ್ಯವಿಲ್ಲದೇ ಕುಟುಂಬದ ಎಲ್ಲ ಸದಸ್ಯರನ್ನೊಳಗೊಂಡಂತೆ ಕೆಲಸ ಕಾರ್ಯಗಳನ್ನು ಮಾಡುತ್ತಿರುವುದು ಕಂಡುಬರುತ್ತದೆ. ಉದಾಹರಣೆಗೆ ವ್ಯವಸಾಯದಲ್ಲಿ ಬಿತ್ತನೆ, ಹೊಲ ಉಳುಮೆ, ಕಳೆ ತೆಗೆಯುವುದು, ಹೀಗೆ ಅನೇಕ ಕೃಷಿ ಕೆಲಸಗಳಲ್ಲಿ ಸಹಕಾರಿಯಾಗಿ ಕಾರ್ಯನಿರ್ವಹಿಸುತ್ತಾರೆ. ಪಶುಪಾಲನೆ ಇರುಳಿಗರ ಎರಡನೇ ಜೀವನ ನಿರ್ವಹಣೆಯ ಆಧಾರವಾಗಿದ್ದು, ದನ, ಕರು, ಎತ್ತು, ಎಮ್ಮೆಗಳನ್ನು ಮೇಯಿಸುವ, ದನಕರುಗಳಿಗೆ ಮೇವು ತರುವ ಹೈನುಗಾರಿಕೆ ಉದ್ಯಮಗಳ ಇತರೆ ಕೆಲಸ ಕಾರ್ಯಗಳಲ್ಲಿ ಅವರ ಜೊತೆ ಕೈಜೋಡಿಸುವ ಕಾರ್ಯ ಮಾಡುತ್ತಿದೆ. ಹೀಗೆ ಇವುಗಳ ಪಾಲನೆ ಪೋಷಣೆಯಲ್ಲಿ ತೊಡಗಿರುವುದು ಮತ್ತು ಕುರಿ, ಮೇಕೆ ಸಾಕಣಿಕೆಗಳು ಸಮುದಾಯದ ಆರ್ಥಿಕ ಭದ್ರತೆಯ ಮೂಲ ರೂಪದಾಗಿದ್ದು, ಅವುಗಳ ಪಾಲನೆಯಲ್ಲಿಯೂ ಈ ಅವಲಂಬಿತ ವರ್ಗದವರು ಸಹಾಯಕರಾಗಿ ಹಾಗೂ ದುಡಿಯುವ ವರ್ಗದೊಂದಿಗೆ ಕೈಜೋಡಿಸಿ ಕೆಲಸಗಳನ್ನು ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಕಾಯಕಸ್ಥರ ಪ್ರಮಾಣದಲ್ಲಿ ದುಡಿಯುವ ಹಾಗೂ ಅವಲಂಬಿತ ವರ್ಗವು ಸೇರಿಕೊಂಡಿರುವುದರಿಂದ ಇಲ್ಲಿ ಕಾಯಕಾರ್ಹರ ಪ್ರಮಾಣಕ್ಕಿಂತ ಕಾಯಕಸ್ಥರ ಪ್ರಮಾಣ ಗಣನೀಯವಾಗಿರುವುದು ಮೇಲಿನ ಕೋಷ್ಟಕದಿಂದ ತಿಳಿದುಬರುತ್ತದೆ.

೫.೧೨. ಕೃಷಿ ಮತ್ತು ಇರುಳಿಗರು

ಕೃಷಿ ಎನ್ನುವುದು ಬುಡಕಟ್ಟು ಜನರ ಮಟ್ಟಿಗೆ ಕೇವಲ ಹೊಟ್ಟೆಪಾಡಿನ ವೃತ್ತಿಯಾಗಿರದೇ ಅದೊಂದು ಜೀವನ ವಿಧಾನ. ಈ ಕಾರಣದಿಂದಾಗಿಯೇ ಕೃಷಿಭೂಮಿ ಎನ್ನುವುದು ಇವರ ಪಾಲಿಗೆ ಬರೀ ಮಣ್ಣಲ್ಲ ತನ್ನ ಪೊರೆವ ತಾಯಿ ಇದ್ದಂತೆ ಎಂಬ ಮನೋಭಾವನೆ ಹೊಂದಿದ್ದ ಅಂದಿನ ಸಮಯವಾದರೆ, ಇಂದಿನ ಬದುಕು ಆರ್ಥಿಕ ಚಟುವಟಿಕೆಗಳು ಒಂದು ಸಮುದಾಯದ ಹಾಗೂ ವ್ಯಕ್ತಿಯ ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುತ್ತದೆ. 'ಕೃಷಿತೋನಾಸ್ತಿ ದುರ್ಭಿಕ್ಷಂ' ಎಂಬ ಲೋಕೋಕ್ತಿ ಕೃಷಿಯು ಎಷ್ಟು ಮಹತ್ವದ್ದು ಎನ್ನುವುದನ್ನು ಸೂಚಿಸುತ್ತದೆ.

ಇರುಳಿಗರಲ್ಲಿ ಸ್ತ್ರೀ ಮತ್ತು ಪುರುಷ ಇಬ್ಬರು ದುಡಿಯುತ್ತಾರೆ. ಇವರಲ್ಲಿ ಕುಟುಂಬ ನಿರ್ವಹಣೆಗೆ ಕಂಡುಕೊಂಡ ಪರ್ಯಾಯ ವ್ಯವಸ್ಥೆಗಳಲ್ಲಿ ಕೃಷಿ ಮುಖ್ಯವಾಗಿದೆ. ಬಹುತೇಕ ಎಲ್ಲಾ ಬುಡಕಟ್ಟುಗಳು ಕಾಡಿನ ಉತ್ಪನ್ನಗಳನ್ನು ಅವಲಂಬಿಸಿ ಬದುಕುತ್ತಿದ್ದರು. ಮುಖ್ಯವಾಗಿ ಅರಣ್ಯವನ್ನು ಆಶ್ರಯಿಸಿದ್ದರು. ನಂತರದಲ್ಲಿ ಕೃಷಿಯನ್ನು ರೂಢಿಸಿಕೊಂಡು ಆಹಾರ ಉತ್ಪಾದನೆಯಲ್ಲಿ ತೊಡಗಿಸಿಕೊಂಡರು. ಇವರಲ್ಲಿ ಕೃಷಿಗೆ ಬೇಕಾದಷ್ಟು ಭೂಮಿಯಿಲ್ಲದೆ ಇದ್ದರೂ ಭೂಮಾಲೀಕರಿಂದ ಭೂಮಿಯನ್ನು ಗುತ್ತಿಗೆಗೆ ಪಡೆದು ಒಂದು ನಿರ್ದಿಷ್ಟ ಅವಧಿಯಲ್ಲಿ ಮಳೆಯಾಶ್ರಿತ ಬೇಸಾಯ ಮಾಡುತ್ತಾರೆ. ಇರುಳಿಗ ಸಮುದಾಯದ

ಕುಟುಂಬದಲ್ಲಿನ ಆರ್ಥಿಕ ವ್ಯವಸ್ಥೆಯಲ್ಲಿ ಮಹಿಳೆಯರ ಪಾತ್ರವು ಪ್ರಧಾನವಾಗಿದೆ. ಇವರು ದುಡಿಮೆಯಲ್ಲಿ ಪುರುಷರಿಗಿಂತ ಕಡಿಮೆಯಿಲ್ಲ; ಇವರ ಗಟ್ಟಿಮುಟ್ಟಾದ ಮೈಕಟ್ಟು ದುಡಿಮೆಗೆ ಸಹಾಯಕವಾಗಿದೆ. ಋತುಮಾನಗಳಿಗೆ ತಕ್ಕಂತೆ ದುಡಿಯುತ್ತ ಮಕ್ಕಳ ಪಾಲನೆ, ಪೋಷಣೆ, ಕುಟುಂಬ ನಿರ್ವಹಣೆ ಜೊತೆಗೆ ವ್ಯವಸಾಯದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿರುತ್ತಾರೆ. ಕೃಷಿ ಕ್ಷೇತ್ರದ ಬೆನ್ನೆಲುಬು ಮಹಿಳೆ; ಪುರುಷನಿಗಿಂತ ಹೆಚ್ಚು ದುಡಿಯುತ್ತಾಳೆ. ಇವರ ವ್ಯವಸಾಯದಲ್ಲಿ ಜೀವನ ನಿರ್ವಹಣೆಗೆ ಬೇಕಾದ ಆಹಾರ ಬೆಳೆಗಳನ್ನು ಮಾತ್ರ ಬೆಳೆಯುತ್ತಾರೆಯೇ ಹೊರತು ಮತ್ಯಾವುದೇ ವಾಣಿಜ್ಯ ಬೆಳೆಗಳನ್ನು ಬೆಳೆಯದೆ ಇರುವುದು ಜಿಲ್ಲೆಯಾದ್ಯಂತ ಕಂಡುಬರುತ್ತದೆ.

೫.೧೩. ಭೂಹಿಡುವಳಿ ಹಾಗೂ ಕೃಷಿ ಚಟುವಟಿಕೆಗಳು

ಇರುಳಿಗ ಸಮುದಾಯದ ಜನರು ತಮ್ಮ ಪ್ರದೇಶದ ನೆಲೆಗಳಲ್ಲಿ ಗುತ್ತಿಗೆ ಭೂಮಿ ಕೃಷಿಕರಾಗಿ ಮತ್ತು ಸ್ವಂತ ಹಿಡುವಳಿದಾರರಾಗಿ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಬುಡಕಟ್ಟು ಜೀವನ ಸಂಸ್ಕೃತಿಯಲ್ಲಿ ಭೂಮಿಯ ಜೊತೆಗಿನ ಸಂಬಂಧ ತಂದೆ–ತಾಯಿ ಸಂಬಂಧದಂತೆ. "ಭೂಮಿ ನಮಗೆ ಸೇರಿದ್ದಲ್ಲ ನಾವು ಭೂಮಿಗೆ ಸೇರಿದ್ದೇವೆ ಎಂಬ ರೆಡ್ ಇಂಡಿಯನ್ ನಾಯಕನ ಮಾತು ಎಲ್ಲಾ ಬುಡಕಟ್ಟುಗಳಿಗೂ ಅನ್ವಯಿಸುತ್ತದೆ"[೮]. ಹೀಗೆ ಭೂಮಿಯನ್ನು ತಲೆತಲಾಂತರಗಳಿಂದ ಕೇತ್ಲು ಬೇಸಾಯ ಮಾಡುತ್ತಾ ಬಂದವರ ಜಮೀನಿಗೆ ಸರಹದ್ದು ರೂಪಿಸಿ ಬೇಲಿಹಾಕಿಕೊಂಡು ದಾಖಲೆ ಇಟ್ಟುಕೊಳ್ಳಬೇಕೆಂದು ಅಂದುಕೊಂಡವರಲ್ಲ. ಸಾಮೂಹಿಕ ಒಡೆತನದಲ್ಲಿ ಅರಣ್ಯದಲ್ಲಿನ ಗಿಡಗಂಟಿಗಳನ್ನು ಶುದ್ಧಮಾಡಿ ಸುಟ್ಟು ನಂತರ ಉತ್ತು–ಬಿತ್ತಿ ಬಂದ ಬೆಳೆಯನ್ನು ಹಂಚಿ ತಿನ್ನುತ್ತಿದ್ದರು. ತಾವೇ ಉತ್ತು ಬಿತ್ತಿ ಮಾಡುತ್ತಿದ್ದ ಜಮೀನನ್ನು ತಮ್ಮ ಕಣ್ಮುಂದೆಯೇ ಬಲಾಢ್ಯರು ಹಾಗೂ ಭೂಮಾಲೀಕರು ವಶಪಡಿಸಿಕೊಂಡದ್ದು ಅತ್ಯಂತ ಅಮಾನವೀಯ. ಅವರಿಗೆ ಹೆದರಿ ದೌರ್ಜನ್ಯದಿಂದ ಬೇಸತ್ತು ತಮ್ಮ ಒಡೆತನದ ಭೂಮಿಯ ಹಕ್ಕನ್ನು ಬಿಟ್ಟುಕೊಟ್ಟು ಹಿಂದೆ ಸರಿದು ಬೇರೆ ಪ್ರದೇಶಕ್ಕೆ ವಲಸೆ ಹೋಗಬೇಕಾಯಿತು ಎಂಬ ಮಾತನ್ನು ಸಮುದಾಯದ ವೈಯಕ್ತಿಕ ಸಮೀಕ್ಷೆ ಮತ್ತು ಸಂದರ್ಶನದ ಅವಧಿಯಲ್ಲಿ ಹೇಳಿದ್ದಾರೆ. ಪಡೆದ ಭೂಮಿಗಿಂತ ಕಳೆದುಕೊಂಡ ಸಾಗುವಳಿಯ ಭೂಮಿಯೇ ಹೆಚ್ಚು ಎನ್ನುತ್ತಾರೆ. ಇತ್ತೀಚೆಗೆ ಸಮುದಾಯದಲ್ಲಿನ ವ್ಯವಸಾಯಗಾರರು ಸಾಗುವಳಿಯ ಭೂಮಿಯೇ ಹೆಚ್ಚು ಎನ್ನುತ್ತಾರೆ. ಇತ್ತೀಚೆಗೆ ಸಮುದಾಯದಲ್ಲಿನ ವ್ಯವಸಾಯಗಾರರು ಇದಕ್ಕೆ ಸಂಬಂಧಿಸಿದ ವಿಷಯದಲ್ಲಿ ಪರಿಣಿತಿ ಹೊಂದಿದ್ದು ಖಾಯಂ ಕೃಷಿಕರಾಗಿ ನೆಲೆಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಕೃಷಿ ಉತ್ಪನ್ನಗಳಾದ ರಾಗಿ, ಭತ್ತ, ನೆಲೆಗಡಲೆ, ಹುರುಳಿಬೇಸಾಯ ಮಾಡುತ್ತಿದ್ದಾರೆ. ಕೆಲವರು ಜಿಲ್ಲೆಯ ಜನಪ್ರಿಯ ತೋಟಗಾರಿಕೆ ಬೆಳೆಯಾದ ರೇಷ್ಮೆ ಕೃಷಿಯನ್ನು ಸಹ ಮುಂದುವರೆಸುತ್ತಿರುವುದು ಕಂಡುಬರುತ್ತಿದೆ. ಮಹಿಳೆಯರು ಪಶುಪಾಲನೆ ಹಾಗೂ ಇತರೆ ವ್ಯವಸಾಯದಲ್ಲಿ ತೊಡಗಿಸಿಕೊಂಡಿರುತ್ತಾರೆ.

೫.೧೪. ಭೂ ಹಿಡುವಳಿ

ಇರುಳಿಗ ಸಮುದಾಯದವರು ಹೊಂದಿರುವ ಭೂಮಿ ಸಣ್ಣ ಹಿಡುವಳಿಯ ತುಂಡು ಭೂಮಿಗಳಾಗಿವೆ. ಅದರಲ್ಲೂ ಇವರ ಸಾಗುವಳಿ ಮಾಡುವ ಕೃಷಿ ಭೂಮಿಗಳಲ್ಲಿ ಕಡಿಮೆ ಮಟ್ಟದ ಉತ್ಪಾದನೆ ನೀಡುವ ಭೂಮಿಗಳೇ ಹೆಚ್ಚಾಗಿದೆ. ಇಂತಹ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಿಬೇಕಾದ ಆರ್ಥಿಕ ಮೂಲವಾಗಲಿ ಪರಿಜ್ಞಾನದ ಕೊರತೆಯು ಹಾಗೂ ವೃತ್ತಿ ಕೌಶಲ್ಯದ ಕೊರತೆ, ಅಕ್ಷರತೆ ಹಾಗೂ ನವನವೀನ ಸಾಗುವಳಿ ತಳಿ ಮತ್ತು ಮಣ್ಣು ಪರೀಕ್ಷೆಯಂತಹ ವಿಚಾರಧಾರೆಗಳಿಂದ ದೂರವೇ ಉಳಿದಿರುವುದು ಹಾಗೂ ವ್ಯವಸಾಯದ ಭೂಮಿಯಲ್ಲಿ ತೊಡಗಿಸಲು ಬೇಕಾದ ಆರ್ಥಿಕ ಮೂಲವನ್ನು ಪಡೆಯಲು ಹೆಚ್ಚಿನ ಆದಾಯ ತರುವ ಇತರೆ ಯಾವ ಹುದ್ದೆಯನ್ನು ಹೊಂದದೆ ಇರುವುದು, ಕಡಿಮೆ ಸಂಭಾವನೆ ಬರುವಂಥ ಕೆಲಸಗಳಲ್ಲಿ ತೊಡಗಿಸಿಕೊಂಡಿರುವುದು ಇವರ ತಲಾವಾರು ಮಾಸಿಕ ವೆಚ್ಚವು ತಮ್ಮ ಅಗತ್ಯಕ್ಕಿಂತಲೂ ಕಡಿಮೆ ಕೂಲಿ ಪಡೆಯುತ್ತಿರುವುದು. ಇವು ತಮ್ಮ ತುಂಡು ಭೂಮಿಯಲ್ಲಿ ಯಾವುದೇ ರೀತಿಯ ಉತ್ಪಾದನೆ ಮಾಡುವಲ್ಲಿ ಆಗುತ್ತಿರುವ ತೊಂದರೆಗಳಾಗಿವೆ.

ಕ್ಷೇತ್ರಕಾರ್ಯದ ಸಮೀಕ್ಷೆಯು ತಿಳಿಸುವಂತೆ ಗ್ರಾಮೀಣ ಪ್ರದೇಶದ ಇರುಳಿಗರ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಿದಾಗ ಶೇಕಡ ೪೫.೧೮ರಷ್ಟು ಕುಟುಂಬಗಳು ಭೂ ಒಡೆತನ ಹೊಂದಿವೆ. ಅದರಲ್ಲಿ ಶೇಕಡ ೯೮.೪೮ರಷ್ಟು ಒಣಭೂಮಿ ಆಗಿದೆ. ನೀರಾವರಿ ಕೃಷಿಭೂಮಿಯು ಶೇಕಡ ೧.೫೨ರಷ್ಟು ಮಾತ್ರ.


ಹೋಬಳಿವಾರು ಪ್ರದೇಶಗಳಲ್ಲಿ ನೆಲೆಸಿರುವ ಇರುಳಿಗರು ತಮ್ಮ ಜೀವನ ನಿರ್ವಹಣೆಗಾಗಿ ಕೃಷಿ ಕೂಲಿ ಮತ್ತು ಕೃಷಿಯನ್ನೇ ಆಧರಿಸಿರುವುದರಿಂದ ಅವರ ಮಾಸಿಕ ತಲಾವಾರು ವೆಚ್ಚವು ಕಡಿಮೆ ಯಾಗಿರುವುದು ಸಹಜವಾಗಿದೆ.

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ನಾಲ್ಕು ತಾಲೂಕುಗಳ ಹೋಬಳಿವಾರುಗಳಲ್ಲಿ ಬರುವ ನೆಲೆಗಳನ್ನು ಕ್ಷೇತ್ರಕಾರ್ಯದ ಮೂಲಕ ಅಂಕಿ-ಅಂಶಗಳನ್ನು ಪಡೆಯಲಾಗಿದ್ದು, ಇದರಲ್ಲಿ ಒಟ್ಟಾರೆ ೧೫೬೫ ಕುಟುಂಬಗಳನ್ನು ಹೊಂದಿದ್ದು, ಇವರ ಒಟ್ಟಾರೆ ಕೌಟುಂಬಿಕ ಭೂಹಿಡುವಳಿ ಮತ್ತು ಭೂರಹಿತ ಕುಟುಂಬ ಶ್ರೇಣಿಗಳ ಪ್ರಮಾಣವನ್ನು ನೋಡಬಹುದು.

ಕೋಷ್ಟಕ ೫.೬. ಸಮೀಕ್ಷೆಗೊಳಪಟ್ಟ ಇರುಳಿಗ ಸಮುದಾಯದ ಒಟ್ಟಾರೆ ಕೌಟುಂಬಿಕ ಭೂಹಿಡುವಳಿ ಮತ್ತು ಭೂರಹಿತ ಕುಟುಂಬ ಶ್ರೇಣಿಗಳ ಪ್ರಮಾಣ

ತಾಲೂಕು	ಹೋಬಳಿಗಳು	ಕುಟುಂಬಗಳು	ಭೂ ಹಿಡುವಳಿ (ಎಕರೆಗಳಲ್ಲಿ)			೨೫ರ ಮೇಲ್ಪಟ್ಟು	೧೦.೧–೨೫	೫.೧–೧೦	೨.೫೧–೫	೦.೫–೨.೫೦	ಭೂರಹಿತ
			ಒಣಭೂಮಿ	ನೀರಾವರಿ	ಒಟ್ಟು	ಎ	ಬಿ	ಸಿ	ಡಿ	ಇ	ಎಫ್
ಕನಕಪುರ	ಉಯ್ಯಂಬಳ್ಳಿ	೪೮	೧೪೪೦	೦	೧೪೪೦				೧	೨೧	೨೬
	ಕಸಬಾ	೨೭೮	೧೧೭೯೭	೨೮೦	೧೨೦೭೭			೭	೯	೧೫೮	೧೦೪
	ಕೋಡಿಹಳ್ಳಿ	೨೦೬	೮೬೭೯	೩೧೦	೮೯೮೯			೩	೧೪	೧೦೯	೮೦
	ಮರಳವಾಡಿ	೧೪೪	೭೨೧೫	೨೦	೭೨೩೫			೧೫	೧೦	೫೪	೬೫
	ಸಾತನೂರು	೧೨೪	೬೪೩೦	೦	೬೪೩೦				೮	೭೯	೩೭
	ಕನಕಪುರ ತಾಲೂಕು	**೮೦೦**	**೩೫೪೯೧**	**೬೧೦**	**೩೬೧೦೧**			**೨೫**	**೪೨**	**೪೨೧**	**೩೧೨**
ಚನ್ನಪಟ್ಟಣ	ಮಳೂರು	**೫೩**	**೯೩೭**	**೦**	**೯೩೫**					**೨೦**	**೩೩**
ಮಾಗಡಿ	ಕಸಬಾ	೭	೪೦	೦	೪೦					೧	೬
	ಮಾಡಬಾಳ್	೧೩೩	೧೭೩೦	೮೦	೧೮೧೦					೩೯	೯೪
	ಸೋಲೂರು	೨೩	೫೧೦	೦	೫೧೦					೧೬	೭
	ಮಾಗಡಿ ತಾಲೂಕು	**೧೬೩**	**೨೨೮೦**	**೮೦**	**೨೩೬೦**					**೫೬**	**೧೦೭**
ರಾಮನಗರ	ಕಸಬಾ	೧೩೬	೭೬೦	೦	೭೬೦				೧	೧೨	೧೨೩
	ಕೂಟಗಲ್	೨೫೦	೫೮೪೬	೪೦	೫೮೮೬			೧	೫	೮೫	೧೫೯
	ಕೈಲಂಚ	೧೬೧	೧೭೯೮		೧೭೯೮			೧		೩೮	೧೨೨
	ಬಿಡದಿ	೨									೨
	ರಾಮನಗರ ತಾಲೂಕು	**೫೪೯**	**೮೪೦೪**	**೪೦**	**೮೪೪೪**			**೨**	**೬**	**೧೩೫**	**೪೦೬**

ವೃತ್ತಚಿತ್ರ ೫.೧. ರಾಮನಗರ ಜಿಲ್ಲೆಯ ಒಟ್ಟಾರೆ ಇರುಳಿಗ ಸಮುದಾಯದ ಭೂಹಿಡುವಳಿ ಪ್ರಮಾಣ



ಎ* = ದೊಡ್ಡ ಭೂಹಿಡುವಳಿದಾರರು (೧೫.೧ ಎಕರೆ ಮೇಲ್ಪಟ್ಟವರು)

ಬಿ* = ಮಧ್ಯಮ ಭೂಹಿಡುವಳಿದಾರರು (೧೦.೧ ಎಕರೆಯಿಂದ ೧೫.೦೦ ಎಕರೆಗೊಳಪಟ್ಟವರು)

ಸಿ* = ಅರೆಮಧ್ಯಮ ಭೂಹಿಡುವಳಿದಾರರು (೫.೧ ಎಕರೆಯಿಂದ ೧೦ ಎಕರೆಗೊಳಪಟ್ಟವರು)

ಡಿ* = ಸಣ್ಣ ಭೂಹಿಡುವಳಿದಾರರು (೨.೫೧ ಎಕರೆಯಿಂದ ೫ ಎಕರೆಗೊಳಪಟ್ಟವರು)

ಇ* = ಅತಿ ಸಣ್ಣ ಭೂಹಿಡುವಳಿದಾರರು (೦.೫ ಎಕರೆಯಿಂದ ೨.೫ ಎಕರೆಗೊಳಪಟ್ಟವರು)

ಎಫ್* = ಭೂರಹಿತ ಕುಟುಂಬಗಳು

ಇರುಳಿಗರ ೧೫೬೫ ಕುಟುಂಬಗಳನ್ನು ಅವಲೋಕಿಸಲಾಗಿ ಒಣಭೂಮಿಗಳನ್ನು ಕೃಷಿಭೂಮಿಗಳನ್ನಾಗಿ ೭೦೭ ಕುಟುಂಬಗಳು ಜೀವನ ನಿರ್ವಹಣೆಯ ಆರ್ಥಿಕತೆಯ ಮೂಲವಾಗಿ ಕಂಡುಕೊಂಡರೆ, ೮೫೮ ಕುಟುಂಬಗಳು ಭೂರಹಿತ ಕುಟುಂಬಗಳಾಗಿವೆ. ಒಟ್ಟಾರೆ ರಾಮನಗರ ಜಿಲ್ಲೆಯನ್ನೊಳಗೊಂಡಂತೆ ಕನಕಪುರ, ಮಾಗಡಿ, ಚನ್ನಪಟ್ಟಣ ತಾಲೂಕುಗಳ ಹೋಬಳಿವಾರು ಒಟ್ಟಾರೆ ಭೂಹಿಡುವಳಿಯನ್ನು ಶ್ರೇಣಿವಾರುಗಳಲ್ಲಿ ಗಮನಿಸಿದಾಗ ಸಿ* (ಅರೆಮಧ್ಯಮ ಭೂಹಿಡುವಳಿದಾರರಲ್ಲಿ ೨೭ ಕುಟುಂಬಗಳಿದ್ದು) = ಶೇ. ೧.೭೨ರಷ್ಟು, ಡಿ* (ಸಣ್ಣ ಭೂಹಿಡುವಳಿದಾರರಲ್ಲಿ ೪೮ ಕುಟುಂಬಗಳಿದ್ದು) = ಶೇ. ೩.೦೭ರಷ್ಟು, ಇ* (ಅತಿ ಸಣ್ಣ ಭೂಹಿಡುವಳಿದಾರರಲ್ಲಿ ೬೩೨ ಕುಟುಂಬಗಳಿದ್ದು) = ಶೇ. ೪೦.೩೮ರಷ್ಟಾಗಿದ್ದು, ಎಫ್* = ಶೇ. ೫೪.೮೨ರಷ್ಟು (೮೫೮ ಕುಟುಂಬಗಳು) ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ. ಮೇಲಿನಂತೆ ಒಟ್ಟಾರೆ ತಾಲೂಕುವಾರು ಭೂಶ್ರೇಣಿಯಲ್ಲಿ ಒಡುವಳಿದಾರರನ್ನು ಗಮನಿಸಿದಾಗ ಎ* (ದೊಡ್ಡ ಭೂಹಿಡುವಳಿದಾರರು) ಹಾಗೂ ಬಿ*(ಮಧ್ಯಮ ಭೂಹಿಡುವಳಿದಾರರು) ಶ್ರೇಣಿಗಳಲ್ಲಿ ಯಾವುದೇ ಕುಟುಂಬಗಳಿರುವುದು ಕಂಡುಬರುವುದಿಲ್ಲ.

ರಾಮನಗರ ಜಿಲ್ಲೆಯಲ್ಲಿ ಎರಡು ರೀತಿಯ ಕೃಷಿ ಚಟುವಟಿಕೆಗಳನ್ನು ಕಾಣುತ್ತೇವೆ. ಜಿಲ್ಲೆಯ ಕನಕಪುರ, ಮಾಗಡಿ, ರಾಮನಗರ ತಾಲೂಕುಗಳಲ್ಲಿ ಕೆರೆಗಳನ್ನು ಆಶ್ರಯಿಸಿ ಕೃಷಿ ಚಟುವಟಿಕೆ ನಡೆಸುತ್ತಾರೆ. ಆದರೂ ಈ ಸಮುದಾಯದ ಜನರು ಮಾಡುವ ಸಾಗುವಳಿ ಪ್ರದೇಶದಲ್ಲಿ ಕೆರೆ ನೀರಾವರಿ ಆಶ್ರಯ ಕಂಡುಬರುವುದಿಲ್ಲ. ಬರೀ ಮಳೆಯನ್ನಾಶ್ರಯಿಸಿ ಕೃಷಿ ಚಟುವಟಿಕೆ ನಡೆಯುತ್ತದೆ. ಕೆಲವು ಪ್ರದೇಶಗಳಲ್ಲಿ ದೊಡ್ಡ ಭೂಹಿಡುವಳಿ ಹೊಂದಿರುವ ಇತರೆ ಸಮುದಾಯದವರ ಕೊಳವೆ ಬಾವಿಗಳಿಂದ ನೀರನ್ನು ಪಡೆದು ಬೇಸಾಯವನ್ನು ಮಾಡುತ್ತಾರೆ. ಸಾಮಾನ್ಯವಾಗಿ ಮಳೆಯಾಶ್ರಿತ ಕೃಷಿ ಚಟುವಟಿಕೆಗಳು ವರ್ಷದಲ್ಲಿ ಕೇವಲ ಆರು ತಿಂಗಳು ಮಾತ್ರ ಚುರುಕಾಗಿರುತ್ತದೆ. ಇನ್ನುಳಿದ ಆರು ತಿಂಗಳು ಕೃಷಿಕರಿಗೆ ಬೇರೆ ಯಾವುದೇ ಕೆಲಸವಿರುವುದಿಲ್ಲ. ಅದೂ ಮಳೆ ಬಂದರೆ ಮಾತ್ರ ಕೃಷಿ ಚಟುವಟಿಕೆಗಳು ನಡೆಯುತ್ತವೆ. ಮಳೆ ಸರಿಯಾಗಿ ನಿಗದಿತ ಸಮಯಕ್ಕೆ ಬಾರದೇ ಇದ್ದರಂತೂ ಮುಂದಿನ ಆರು ತಿಂಗಳು ಯಾವುದೇ ರೀತಿಯ ಕೃಷಿ ಚಟುವಟಿಕೆಗಳು ನಡೆಯುವುದಿಲ್ಲ. ಕೆಲಸವು ಇರುವುದಿಲ್ಲ. ಹೀಗಾಗಿ ಅನಿಶ್ಚಿತವಾದ ದುಡಿಮೆಯನ್ನೇ ಇಲ್ಲಿಯ ಜನರು ನೆಚ್ಚಿಕೊಂಡಿರಬೇಕಾಗುತ್ತದೆ. ಬಹುತೇಕ ಈ ತಾಲೂಕುಗಳಲ್ಲಿ ಕೃಷಿ ಚಟುವಟಿಕೆ ಪೂರ್ಣಗೊಂಡ ತರುವಾಯ ಸಣ್ಣ ಹಿಡುವಳಿದಾರ ಕೃಷಿಕರು ಮತ್ತು ಕೃಷಿ ಕಾರ್ಮಿಕರು ಜೀವನೋಪಾಯಕ್ಕಾಗಿ ನಗರಗಳ ಕಡೆ ಕೂಲಿಗಳಾಗಿ ದುಡಿಯಲು ಹೋಗುತ್ತಾರೆ. ಇಲ್ಲವಾದರೆ ಕೂಲಿ ಕೆಲಸವನ್ನು ಹುಡುಕಿಕೊಂಡು ಇತರೆ ಊರದ ಕಡೆ ವಲಸೆ ಹೋಗುತ್ತಾರೆ.

ಮಳೆಯಾಗದೆ ಬಿತ್ತಿದ ಬೆಳೆಯೆಲ್ಲ ಹಾನಿಯಾಗಿ ಆರ್ಥಿಕ ಸಂಕಷ್ಟ ಅನುಭವಿಸುತ್ತಿದ್ದಾರೆ. ಬೇರೆ ವೃತ್ತಿಯನ್ನಾದರೂ ಮಾಡಲು ಅದಕ್ಕೆ ಬೇಕಾದ ಬಂಡವಾಳವಿಲ್ಲ. ಕೌಶಲ್ಯಗಳಿಲ್ಲದೆ ಆರ್ಥಿಕ ವ್ಯವಸ್ಥೆಯಲ್ಲಿ ಅಸ್ಥಿರತೆ ಉಂಟಾಗುತ್ತಿದೆ. ಇದರ ಪರಿಣಾಮ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಜೀವನ ಕ್ರಮದ ಮೇಲೆ ಏರುಪೇರುಗಳು ಉಂಟಾಗುತ್ತಿವೆ. ಜೊತೆಗೆ ಸರ್ಕಾರವು ನೀಡುವ ಹಲವು ರೀತಿಯ ಕೃಷಿ ಸೌಲಭ್ಯಗಳಾದ ಗಂಗಾಕಲ್ಯಾಣ ಯೋಜನೆ, ತೋಟಗಾರಿಕೆ ಯೋಜನೆ, ಕೃಷಿ ಪರಿಕರಗಳ ಸಾಮಗ್ರಿ, ಬೆಳೆಸಾಲ, ಬೆಳೆ ವಿಮೆಯಾಗಲಿ, ರಿಯಾಯಿತಿಯ ಇತರ ಉಪಕರಣಗಳಾಗಲಿ ಇದುವರೆವಿಗೂ ಈ ಸಮುದಾಯ ಜನರಿಗೆ ತಲುಪಿಲ್ಲ. ಇದಕ್ಕೆ ಮುಖ್ಯವಾದ ಕಾರಣ ಇವರಲ್ಲಿನ ಶೈಕ್ಷಣಿಕ ಕೊರತೆ, ರಾಜಕೀಯ ಅರಿವು, ಸಾಮಾಜಿಕ ಪರಿಜ್ಞಾನ ಮುಂದಾಳತ್ವದ ಗುಣಗಳು ಇಲ್ಲದೆ ಇರುವುದು ಬಹುಮುಖ್ಯವಾದ ಕಾರಣವಾಗಿದೆ. ಜೊತೆಗೆ ಸರ್ಕಾರವು ನೀಡುವ ಕೃಷಿಗೆ ಸಂಬಂಧಿಸಿದ ಪರಿಕರ, ವಸ್ತುಗಳು ಈ ಸಮುದಾಯಕ್ಕೆ ವಿತರಣೆಯಾಗಿರುವ ಬಗ್ಗೆ ದಾಖಲಾಗಿರುತ್ತವೆ ವಿನಃ ವಿತರಣೆ ಮಾತ್ರ ಇಲ್ಲ. ಇರುಳಿಗರ ಹೆಸರಿನಲ್ಲಿ ಪ್ರಬಲ ಸಮುದಾಯಗಳಿಗೆ ವಿತರಣೆ ಆಗುತ್ತಿರುವುದು ಸಹ ಹಲವು ಕಡೆ ಕಂಡುಬಂದಿದೆ. ಈ ಎಲ್ಲಾ ಸಮಸ್ಯೆಗಳನ್ನು ಕಂಡ ಇರುಳಿಗ ಸಮುದಾಯದ ಯುವಕರು ಇರುವ ತುಂಡು ಭೂಮಿಯಲ್ಲಿ ಸಾಗುವಳಿ ಮಾಡುವುದನ್ನು ಬಿಟ್ಟು ಕೂಲಿ ಕೆಲಸವನ್ನು ಹುಡುಕಿಕೊಂಡು ಬೆಂಗಳೂರು, ಮಂಡ್ಯ ಹಾಗೂ ತುಮಕೂರುಗಳಂತಹ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ.

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕನಕಪುರ ತಾಲೂಕಿನ ಹೋಬಳಿವಾರು ೮೦೦ ಕುಟುಂಬಗಳ ಅಂಕಿಅಂಶಗಳನ್ನು ಪ್ರತ್ಯೇಕವಾಗಿ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ಗಮನಿಸಿದಾಗ ಉಯ್ಯಂಬಳ್ಳಿ ಹೋಬಳಿವಾರು ೪೮ ಕುಟುಂಬಗಳು ಒಣಭೂಮಿಯ ಭೂ ಒಡೆತನ ಹೊಂದಿವೆ. ಅದರಲ್ಲಿ ಶ್ರೇಣಿವಾರು ನೋಡಿದಾಗ ಡಿ* (ಸಣ್ಣ ಭೂಹಿಡುವಳಿದಾರರು) = ಶೇ. ೨ರಷ್ಟು, ಇ* (ಅತಿ ಸಣ್ಣ ಭೂಹಿಡುವಳಿದಾರರು) = ಶೇ. ೪೪ರಷ್ಟಿದ್ದಾರೆ. ಎಫ್* = ಶೇ. ೫೪ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ.

ಕಸಬಾ ಹೋಬಳಿವಾರು ೨೭೮ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಿದಾಗ ಶೇಕಡ ೯೭.೬೮ರಷ್ಟು ಕುಟುಂಬಗಳು ಒಣಭೂಮಿ ಆಗಿದೆ. ನೀರಾವರಿ ಕೃಷಿಭೂಮಿಯು ಶೇಕಡ ೨.೩೨ರಷ್ಟು ಮಾತ್ರ ಇದೆ. ಅದರಲ್ಲಿ ಶ್ರೇಣಿವಾರು ನೋಡಿದಾಗ ಸಿ* (ಅರೆಮಾದ್ಯಮ ಭೂಹಿಡುವಳಿದಾರರು) = ಶೇ. ೩ರಷ್ಟು, ಡಿ* (ಸಣ್ಣ ಭೂಹಿಡುವಳಿದಾರರು) = ಶೇ. ೩ರಷ್ಟು, ಇ* (ಅತಿ ಸಣ್ಣ ಭೂಹಿಡುವಳಿದಾರರು) = ಶೇ. ೫೭ರಷ್ಟಿದ್ದಾರೆ. ಎಫ್* = ಶೇ. ೩೭ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ.

ಕೋಡಿಹಳ್ಳಿ ಹೋಬಳಿವಾರು ೨೦೬ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಿದಾಗ ಶೇಕಡ ೯೬.೫೨ರಷ್ಟು ಕುಟುಂಬಗಳು ಒಣಭೂಮಿ ಆಗಿದೆ. ನೀರಾವರಿ ಕೃಷಿಭೂಮಿಯು ಶೇಕಡ ೩.೪೮ರಷ್ಟು ಮಾತ್ರ ಇದೆ. ಅದರಲ್ಲಿ ಶ್ರೇಣಿವಾರು ನೋಡಿದಾಗ ಸಿ* (ಅರೆಮಧ್ಯಮ ಭೂಹಿಡುವಳಿದಾರರು) = ಶೇ. ೧ರಷ್ಟು, ಡಿ* (ಸಣ್ಣ ಭೂಹಿಡುವಳಿದಾರರು) = ಶೇ. ೭ರಷ್ಟು, ಇ* (ಅತಿ ಸಣ್ಣ ಭೂಹಿಡುವಳಿದಾರರು) = ಶೇ. ೫೩ರಷ್ಟಿದ್ದಾರೆ. ಎಫ್* = ಶೇ. ೩೯ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ.

ಮರಳವಾಡಿ ಹೋಬಳಿವಾರು ೧೪೪ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಿದಾಗ ಶೇಕಡ ೯೯.೭೨ರಷ್ಟು ಕುಟುಂಬಗಳು ಒಣಭೂಮಿ ಆಗಿದೆ. ನೀರಾವರಿ ಕೃಷಿಭೂಮಿಯು ಶೇಕಡ ೦.೨೮ರಷ್ಟು ಮಾತ್ರ ಇದೆ. ಅದರಲ್ಲಿ ಶ್ರೇಣಿವಾರು ನೋಡಿದಾಗ ಸಿ* (ಅರೆಮಧ್ಯಮ ಭೂಹಿಡುವಳಿ ದಾರರು) = ಶೇ. ೧೦ರಷ್ಟು, ಡಿ* (ಸಣ್ಣ ಭೂಹಿಡುವಳಿದಾರರು) = ಶೇ. ೭ರಷ್ಟು, ಇ* (ಅತಿ ಸಣ್ಣ ಭೂಹಿಡುವಳಿದಾರರು) = ಶೇ. ೩೮ರಷ್ಟಿದ್ದಾರೆ. ಎಫ್* = ಶೇ. ೪೫ರಷ್ಟು ಭೂರಹಿತ ಕುಟುಂಬ ಗಳಿರುವುದು ಕಂಡುಬರುತ್ತದೆ.

ಸಾತನೂರು ಹೋಬಳಿವಾರು ೧೨೪ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಿದಾಗ ೧೨೪ ಕುಟುಂಬಗಳು ಒಣಭೂಮಿಯ ಭೂ ಒಡೆತನ ಹೊಂದಿವೆ. ಅದರಲ್ಲಿ ಶ್ರೇಣಿವಾರು ನೋಡಿದಾಗ ಡಿ* (ಸಣ್ಣ ಭೂಹಿಡುವಳಿದಾರರು) = ಶೇ. ೬ರಷ್ಟು, ಇ* (ಅತಿ ಸಣ್ಣ ಭೂಹಿಡುವಳಿ ದಾರರು) = ಶೇ. ೬೪ರಷ್ಟಿದ್ದಾರೆ. ಎಫ್* = ಶೇ. ೩೦ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ. ಚನ್ನಪಟ್ಟಣ ತಾಲೂಕಿನ ಹೋಬಳಿವಾರು ೫೩ ಕುಟುಂಬಗಳ ಅಂಕಿಅಂಶಗಳನ್ನು ಪ್ರತ್ಯೇಕವಾಗಿ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ಗಮನಿಸಿದಾಗ ಮಳೂರು ಹೋಬಳಿವಾರು ೫೩ ಕುಟುಂಬಗಳು ಒಣಭೂಮಿಯ ಭೂ ಒಡೆತನ ಹೊಂದಿವೆ. ಅದರಲ್ಲಿ ಶ್ರೇಣಿವಾರು ನೋಡಿದಾಗ ಇ* (ಅತಿ ಸಣ್ಣ

ಭೂಹಿಡುವಳಿದಾರರು) = ಶೇ. ೩೮ರಷ್ಟಿದ್ದಾರೆ. ಎಫ್* = ಶೇ. ೬೨ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ.

ಈ ಪ್ರದೇಶದಲ್ಲಿನ ಭೂಮಿಯು ಮಾಕಳಿ ಅರಣ್ಯ ಪ್ರದೇಶಕ್ಕೆ ಸೇರಿದ್ದು, ಬಹುತೇಕ ಜನರಿಗೆ ಜಮೀನು ಹಿಡುವಳಿ ತಮ್ಮದೆಂದು ಹೇಳಿಕೊಳ್ಳಲು ಯಾವುದೇ ರೀತಿಯ ಪುರಾವೆಗಳು ಇಲ್ಲ.

ಮಾಗಡಿ ತಾಲೂಕಿನ ಹೋಬಳಿವಾರು ೧೬೩ ಕುಟುಂಬಗಳ ಅಂಕಿಅಂಶಗಳನ್ನು ಪ್ರತ್ಯೇಕವಾಗಿ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ಗಮನಿಸಿದಾಗ ಕಸಬಾ ಹೋಬಳಿವಾರು ೭ ಕುಟುಂಬಗಳು ಒಣಭೂಮಿಯ ಭೂ ಒಡೆತನ ಹೊಂದಿವೆ. ಅದರಲ್ಲಿ ಶ್ರೇಣಿವಾರು ನೋಡಿದಾಗ ಇ* (ಅತಿ ಸಣ್ಣ ಭೂಹಿಡುವಳಿದಾರರು) = ಶೇ. ೧೪ರಷ್ಟಿದ್ದಾರೆ. ಎಫ್* = ಶೇ. ೮೬ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ.

ಮಾಡಬಾಳ್ ಹೋಬಳಿವಾರು ೧೩೩ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಿದಾಗ ಶೇಕಡ ೯೫.೫೮ರಷ್ಟು ಕುಟುಂಬಗಳು ಒಣಭೂಮಿ ಆಗಿದೆ. ನೀರಾವರಿ ಕೃಷಿಭೂಮಿಯು ಶೇಕಡ ೪.೪೨ರಷ್ಟು ಮಾತ್ರ. ಅದರಲ್ಲಿ ಶ್ರೇಣಿವಾರು ನೋಡಿದಾಗ ಇ* (ಅತಿ ಸಣ್ಣ ಭೂಹಿಡುವಳಿದಾರರು) = ಶೇ. ೨೯ರಷ್ಟಿದ್ದಾರೆ. ಎಫ್* = ಶೇ. ೭೧ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ.

ಸೋಲೂರು ಹೋಬಳಿವಾರು ೨೩ ಕುಟುಂಬಗಳು ಒಣಭೂಮಿಯ ಭೂ ಒಡೆತನ ಹೊಂದಿವೆ. ಅದರಲ್ಲಿ ಶ್ರೇಣಿವಾರು ನೋಡಿದಾಗ ಇ* (ಅತಿ ಸಣ್ಣ ಭೂಹಿಡುವಳಿದಾರರು) = ಶೇ. ೭೦ರಷ್ಟಿದ್ದಾರೆ. ಎಫ್* = ಶೇ. ೩೦ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ.

ರಾಮನಗರ ತಾಲೂಕಿನ ಹೋಬಳಿವಾರು ೫೪೯ ಕುಟುಂಬಗಳ ಅಂಕಿಅಂಶಗಳನ್ನು ಪ್ರತ್ಯೇಕವಾಗಿ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ಗಮನಿಸಿದಾಗ ಕಸಬಾ ಹೋಬಳಿವಾರು ೧೩೬ ಕುಟುಂಬಗಳು ಒಣಭೂಮಿಯ ಒಡೆತನ ಹೊಂದಿವೆ. ಅದರಲ್ಲಿ ಶ್ರೇಣಿವಾರು ನೋಡಿದಾಗ ಡಿ* (ಸಣ್ಣ ಭೂಹಿಡುವಳಿದಾರರು) = ಶೇ. ೧ರಷ್ಟು, ಇ* (ಅತಿ ಸಣ್ಣ ಭೂಹಿಡುವಳಿದಾರರು) = ಶೇ. ೯ರಷ್ಟಿದ್ದಾರೆ. ಎಫ್* = ಶೇ. ೯೦ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ.

ಕೂಟಗಲ್ ಹೋಬಳಿವಾರು ೨೫೦ ಕೌಟುಂಬಿಕ ಭೂಹಿಡುವಳಿಗಳ ಶ್ರೇಣಿಗಳನ್ನು ನೋಡಿದಾಗ ಶೇಕಡ ೯೯.೩೨ರಷ್ಟು ಕುಟುಂಬಗಳು ಒಣಭೂಮಿ ಇದೆ. ನೀರಾವರಿ ಕೃಷಿಭೂಮಿಯು ಶೇಕಡ ೦.೬೮ರಷ್ಟು ಮಾತ್ರವಾಗಿದೆ. ಅದರಲ್ಲಿ ಶ್ರೇಣಿವಾರು ನೋಡಿದಾಗ ಡಿ* (ಸಣ್ಣ ಭೂಹಿಡುವಳಿದಾರರು) = ಶೇ. ೨ರಷ್ಟು, ಇ* (ಅತಿ ಸಣ್ಣ ಭೂಹಿಡುವಳಿದಾರರು) = ಶೇ. ೩೪ರಷ್ಟಿದ್ದಾರೆ. ಎಫ್* = ಶೇ. ೬೪ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ.

ಕೈಲಂಚ ಹೋಬಳಿವಾರು ೧೬೧ ಕುಟುಂಬಗಳು ಒಣಭೂಮಿಯ ಒಡೆತನ ಹೊಂದಿವೆ. ಅದರಲ್ಲಿ ಶ್ರೇಣಿವಾರು ನೋಡಿದಾಗ ಸಿ* (ಅರೆಮಧ್ಯಮ ಭೂಹಿಡುವಳಿದಾರರು) = ಶೇ. ೧ರಷ್ಟು, ಇ*

(ಅತಿ ಸಣ್ಣ ಭೂಹಿಡುವಳಿದಾರರು) = ಶೇ. ೨೩ರಷ್ಟಿದ್ದಾರೆ. ಎಫ್* = ಶೇ. ೭೬ರಷ್ಟು ಭೂರಹಿತ ಕುಟುಂಬಗಳಿರುವುದು ಕಂಡುಬರುತ್ತದೆ.

ಕೊನೆಯದಾಗಿ ಬಿಡದಿ ಹೋಬಳಿವಾರು ೨ ಕುಟುಂಬಗಳು ಭೂರಹಿತ ಕುಟುಂಬಗಳಾಗಿವೆ.

ಮುಂಗಾರು ಮತ್ತು ಹಿಂಗಾರು ಮಳೆಯನ್ನು ಆಶ್ರಯಿಸಿ ಬೆಳೆಗಳನ್ನು ಬೆಳೆದುಕೊಳ್ಳುತ್ತಾರೆ. ಹೆಚ್ಚಿನ ಲಾಭವನ್ನು ಕಾಣದ ಈ ಭೂಮಿಗಳ ಕೃಷಿಯನ್ನು ಬಿಟ್ಟು ಇತರೆ ಪಶುಪಾಲನೆಗಳನ್ನು ಹೊಂದಿದ್ದರು. ಇವರ ಬಡತನದ ಸ್ವರೂಪ, ಆರ್ಥಿಕ ಮಟ್ಟ ಇವರ ಬದುಕನ್ನು ಈ ಭೂಹಿಡುವಳಿಗಳ ಪ್ರಮಾಣವನ್ನು ಕೋಷ್ಟಕ ೫.೬ರಲ್ಲಿ ತೋರಿಸಲಾಗಿದೆ.

ಇರುಳಿಗರ ಸಮುದಾಯದ ಹೆಚ್ಚಿನ ಜನ ಭೂಮಿಯ ಬಗ್ಗೆ ನಿಖರವಾದ ಮಾಹಿತಿ ನೀಡಲು ಹಿಂಜರಿಯುತ್ತಾರೆ. ಭೂಮಿ ಹೆಚ್ಚಿದೆ ಎಂದರೆ ಸರ್ಕಾರದ ಸೌಲಭ್ಯ ದೊರೆಯದೆ ಹೋಗಬಹುದು ಅಥವಾ ತಮ್ಮ ಒತ್ತುವರಿ ಸಾಗುವಳಿ ಮಾಡಿರುವ ಜಮೀನಿನಿಂದ ಒಕ್ಕಲೆಬ್ಬಿಸಬಹುದು ಎಂಬ ಆತಂಕವೂ ಇವರನ್ನು ಕಾಡುತ್ತಿರಬಹುದು. ಭೂಹಿಡುವಳಿಗಳಲ್ಲಿ ಒಣಭೂಮಿ ಹೊಂದಿರುವ ಹೆಚ್ಚು ಕುಟುಂಬಗಳನ್ನು ಗಮನಿಸಿದರೆ ಇರುಳಿಗ ಸಮುದಾಯವು ನೀರಾವರಿ ಮತ್ತು ಒಣಭೂಮಿಗಳ ಗಾತ್ರವು ಅಜಗಜಾಂತರವಾಗಿರುವುದು ಒಂದು ಕಡೆಯಾದರೆ ಒಟ್ಟಾರೆ ೧೫೬೫ ಕುಟುಂಬಗಳಲ್ಲಿ ಶೇ. ೫೪.೮೨(೮೫೪೮)ರಷ್ಟು ಕುಟುಂಬಗಳು ಭೂರಹಿತ ಕುಟುಂಬಗಳಾಗಿದ್ದು ಇತರೆ ವೃತ್ತಿಗಳಲ್ಲಿ ತೊಡಗಿಕೊಳ್ಳುವ ಮೂಲಕ ಆರ್ಥಿಕ ಭದ್ರತೆಯನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿರುವುದು ಕಂಡುಬರುತ್ತದೆ. ರೈತನಿಗೆ ಸಕಾಲಕ್ಕೆ ಮಳೆಗಳು ಬಾರದೇ, ಬಂದ ಮಳೆಯನ್ನಾಶ್ರಯಿಸಿ ಬೆಳೆದ ಬೆಳೆಗೆ ತಕ್ಕ ಬೆಲೆ ಸಿಗದಿರುವುದು ಒಂದು ಕಾರಣವಾಗಿದೆ. ಭೂಹಿಡುವಳಿಗಳನ್ನು ಹೊಂದಿರುವ ಕುಟುಂಬಗಳು ತಮ್ಮ ಆದಾಯವಲ್ಲದ ಭೂಮಿಯಾಗಿದ್ದರೂ ಸಾಧ್ಯವಾದ ರೀತಿಯಲ್ಲಿ ಉಳಿಸಿಕೊಂಡು ಅದನ್ನೇ ಮುಂದುವರಿಸಿಕೊಂಡು ಉಳುಮೆಯನ್ನು ಮಾಡುತ್ತಿದ್ದಾರೆ. ಜೊತೆಗೆ ಆಧುನಿಕತೆಯ ಭರಟೆಯಲ್ಲಿ ಇಂದಿನ ದಿನನಿತ್ಯದ ಬೆಲೆ ಏರಿಕೆಯಿಂದ ಇತರೆ ವೃತ್ತಿಗಳನ್ನು ಅಳವಡಿಸಿಕೊಂಡು ಜೀವನ ನಿರ್ವಹಣೆಯನ್ನು ನಿಭಾಯಿಸುವುದಾಗಿದೆ. ಭೂಮಿಯ ಉಳುಮೆಯ ಜೊತೆಗೆ ಉಪಕಸುಬಾಗಿ ಪಶುಪಾಲನೆಗಳನ್ನು ಹೊಂದಿದ್ದಾರೆ.

೫.೧೫. ವೃತ್ತಿಗಳು

ಅಲೆಮಾರಿಯಾದ ಮಾನವ ಕೃಷಿ ಆವಿಷ್ಕಾರದೊಡನೆ ನಿಸರ್ಗದ ರಹಸ್ಯಗಳನ್ನು ಹೆಚ್ಚು ಹೆಚ್ಚು ಅರಿಯುತ್ತ ಪ್ರಾಕೃತಿಕ ಸಂಪನ್ಮೂಲಗಳ ಅಧ್ಯಯನದ ಬಳಿಕ ಇದರ ಮೇಲಿನ ನಿಯಂತ್ರಣ ಅವನಿಗೆ ಸಾಧ್ಯವಾಯಿತು. ಕೃಷಿಯ ಅಧ್ಯಯನದೊಡನೆ ಅವನಿಗೆ ಶಾಶ್ವತ ನೆಲೆ ಸಿಕ್ಕು ಆಹಾರ ಪಡೆಯಲು ಸಾಧ್ಯವಾಯಿತು. ಆಹಾರ ಪೂರೈಕೆಯೇ ಕೃಷಿಯ ಮೂಲಭೂತ ಉದ್ದೇಶ. ಆಹಾರದ ಬೇಡಿಕೆ ಬೆಳೆದಂತೆ ಅದನ್ನು ಪೂರೈಸಲು ಮಾನವನ ಸತತ ಪ್ರಯತ್ನ ಸಾಗಿದೆ. ಬಡತನ ರೇಖೆಗಿಂತ ಕೆಳಗೆ ಜೀವಿಸುವ ಈ ಬುಡಕಟ್ಟು ಸಮುದಾಯ ಪಶುಪಾಲನೆ ಮತ್ತು ವ್ಯವಸಾಯ ಮುಂದುವರಿಸಿಕೊಂಡು

ಬಂದಿದ್ದಾರೆ. ವ್ಯವಸಾಯ ಪಶುಪಾಲನೆಯಿಂದ ಆರಂಭವಾದ ಇವರ ವೃತ್ತಿಗಳು ವ್ಯವಸಾಯ, ಕೂಲಿ ಹಾಗೂ ಸಮಾಜದ ಇತರೆ ವಿವಿಧ ವೃತ್ತಿಗಳನ್ನರಸಿ ಜೀವನೋಪಾಯಕ್ಕಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ದುಡಿಮೆಗಾಗಿ ವಲಸೆ ಹೋಗುವುದು ಅನಿವಾರ್ಯವಾಗಿದೆ. ಮಾನವನ ಪ್ರಮುಖ ಕಸುಬು ಕೃಷಿ. ಅಲೆಮಾರಿತನದ ಬದುಕಿನಿಂದ ವಿಮುಕ್ತಿಗೊಳ್ಳಲು ವ್ಯವಸಾಯ ವೃತ್ತಿ ಆರಂಭವಾಗಿ ಕೃಷಿಭೂಮಿ ಎಲ್ಲರಿಗೂ ದೊರಕದ ಸಂದರ್ಭದಲ್ಲಿ ಸೃಷ್ಟಿಯಾದದ್ದು ಇತರ ವೃತ್ತಿಗಳು. ಇಂತಹ ಹಲವು ವೃತ್ತಿಯಲ್ಲಿ ತೊಡಗಿಸಿಕೊಂಡವರೇ ಬಡುಕಟ್ಟು ಸಮುದಾಯಗಳು. ಇಂದಿಗೂ ಸಹ ಇಂತಹ ವೃತ್ತಿಗಳನ್ನು ಮುಂದುವರೆಸಿಕೊಂಡು ಹೋಗುತ್ತಿವೆ.

೫.೧೬. ಇರುಳಿಗರು ಅವಲಂಬಿಸಿದ ವೃತ್ತಿಗಳು


ಪ್ರಸ್ತುತ ರಾಮನಗರ ಜಿಲ್ಲೆಯ ಕನಕಪುರ, ಚನ್ನಪಟ್ಟಣ, ಮಾಗಡಿ, ರಾಮನಗರ ತಾಲೂಕಿನ ಹೋಬಳಿವಾರು ಇರುಳಿಗ ಸಮುದಾಯವು ತಮ್ಮ ಜೀವನ ನಿರ್ವಹಣೆಗೆ ಪರಂಪರಾಗತವಾದ ಮತ್ತು ಆಧುನಿಕವಾದ ಹಲವು ಬಗೆಯ ವೃತ್ತಿಗಳನ್ನು ಅಳವಡಿಸಿಕೊಂಡಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಬದಲಾದ ಆರ್ಥಿಕ ಪರಿಸ್ಥಿತಿಯಲ್ಲಿ ಇವರ ಜೀವನಕ್ರಮವು ಬದಲಾವಣೆಗೆ ಒಳಪಡುತ್ತಿದೆ. ಇತ್ತೀಚಿನ ದಿನಮಾನದಲ್ಲಿ ಸ್ವಲ್ಪ ಪ್ರಜ್ಞಾವಂತರಾದ ಇರುಳಿಗರಲ್ಲಿ ಸಾಮಾನ್ಯವಾಗಿ ಕಂಡುಬರುವ ವೃತ್ತಿಗಳು ಪಶುಪಾಲನೆ, ಕೃಷಿಕೂಲಿ, ಕೃಷಿ, ತೋಟಕಾವಲು, ರೇಷ್ಮೆಗಾರಿಕೆ ಇತ್ಯಾದಿ. ಇರುಳಿಗರು ಪಶುಪಾಲನೆಯನ್ನು ಕೇವಲ ದನಗಳಿಗೆ ಸೀಮಿತಗೊಳಿಸಿಕೊಳ್ಳದೆ ಅದನ್ನು ಸಣ್ಣ ಪ್ರಮಾಣದ ಕುರಿ ಸಾಕಾಣಿಕೆ ಹಾಗೂ ಆಡುಗಳ ಸಾಕಾಣಿಕೆಗೆ ವಿಸ್ತರಿಸಿಕೊಂಡಿರುವುದು ಕಂಡುಬರುತ್ತದೆ. ಇನ್ನು ಕುರಿ, ಮೇಕೆಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚು. ಹೀಗಾಗಿ ಅವುಗಳನ್ನು ತಮ್ಮ ಆರ್ಥಿಕತೆಯ ರಕ್ಷಣೆಯ ದೃಷ್ಟಿಯಿಂದ ಸಾಕುತ್ತಾರೆ.

ಕೃಷಿಯೊಂದಿಗೆ ಇತರೆ ವೃತ್ತಿಗಳಾದ ಗಾರೆಕೆಲಸ, ಇಟ್ಟಿಗೆಭಟ್ಟಿ, ಮರಳುಗಾರಿಕೆ ಹಾಗೂ ಇತರೆ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಹಾಗೆಯೇ ಗೃಹಕೃತ್ಯ ಮುಂತಾದವುಗಳಲ್ಲಿ ಮಹಿಳೆಯರು ತೊಡಗಿರುವುದನ್ನು ಕಾಣುತ್ತೇವೆ. ಒಟ್ಟಾರೆಯಾಗಿ ಈ ಕೆಳಗೆ ತಾಲೂಕುವಾರು ಮತ್ತು ರಾಮನಗರ ಜಿಲ್ಲೆಯನ್ನೊಳಗೊಂಡಂತೆ ಹೋಬಳಿವಾರು ಇರುಳಿಗರು ಅವಲಂಬಿಸಿದ ವೃತ್ತಿಗಳು ಯಾವುವು ಎಂಬುದನ್ನು ಕೋಷ್ಟಕ ೫.೭ರಲ್ಲಿ ಕಾಣಬರುತ್ತದೆ.

ಕೋಷ್ಟಕ ೫.೭. ಸಮೀಕ್ಷೆಗೊಳಪಟ್ಟ ರಾಮನಗರ ಜಿಲ್ಲೆಯ ಇರುಳಿಗ ಸಮುದಾಯದ ತಾಲೂಕುವಾರು ಮತ್ತು ಲಿಂಗವಾರು ಕಸುಬುಗಳು

ಕಸುಬುಗಳು	ಕನಕಪುರ ತಾಲೂಕು			ಚನ್ನಪಟ್ಟಣ ತಾಲೂಕು			ಮಾಗಡಿ ತಾಲೂಕು			ರಾಮನಗರ ತಾಲೂಕು		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಕೃಷಿ	೧೭೦	೧೨೯	೨೯೯	೧	೧	೨	೮	೫	೧೩	೩೪	೩೫	೬೯
ಕೃಷಿಕೂಲಿ	೨೫೯	೨೩೮	೪೯೬	೨೩	೨೭	೫೦	೧೬೪	೧೪೧	೩೦೫	೫೨೮	೫೪೧	೧೦೬೯
ತೋಟ ಕಾವಲು	೧೩೦	೯೭	೨೨೭				೮	೪	೧೨	೪೬	೪೧	೮೫
ರೇಷ್ಮೆಗಾರಿಕೆ	೧೪೯	೧೬೪	೩೧೩							೧		೧
ಗಾರೆಕೆಲಸ	೯೭	೧೦೪	೨೦೧	೧೬	೧೨	೨೮	೨	೧	೩	೨೭	೧೬	೪೩
ಇಟ್ಟಿಗೆಭಟ್ಟಿ	೧೬೨	೧೪೯	೩೦೭	೧೮	೧೮	೩೬	೧೬	೭	೨೩	೧೮	೧೫	೩೩
ಮರಳುಗಾರಿಕೆ	೬೬	೫೪	೧೨೦	೧೦	೭	೧೫						
ಸರ್ಕಾರಿ	೧		೧	೧		೧		೧	೧	೧		೧
ಖಾಸಗಿ	೩		೩		೧	೧				೩	೧	೪
ಇತರೆ	೧೫	೨	೧೭	೧೧	೯	೨೦	೮	೧೪	೨೨	೫೩	೪೧	೯೪
ಒಟ್ಟು	೧೦೫೨	೯೩೭	೧೯೮೪	೮೦	೭೫	೧೫೩	೨೦೬	೧೭೩	೩೭೯	೭೧೧	೬೯೦	೧೩೯೯

ವೃತ್ತಚಿತ್ರ ೫.೨. ರಾಮನಗರ ಜಿಲ್ಲೆಯ ಕನಕಪುರ ತಾಲೂಕಿನ ಹೋಬಳಿವಾರು ಇರುಳಿಗ ಸಮುದಾಯದ ಲಿಂಗವಾರು ಕಸುಬುಗಳು




ರಾಮನಗರ ತಾಲೂಕನ್ನೊಳಗೊಂಡಂತೆ ಕನಕಪುರ, ಚನ್ನಪಟ್ಟಣ, ಮಾಗಡಿ ತಾಲೂಕುವಾರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಇರುಳಿಗರ ಗ್ರಾಮಗಳ ಹೋಬಳಿವಾರು ವಿವಿಧ ಕಸುಬುಗಳನ್ನು ನೋಡಲಾಗಿ ಕಂಡುಬಂದ ಅಂಶಗಳು ಈ ಕೆಳಗಿನಂತಿವೆ. ಕೃಷಿ, ಕೃಷಿಕೂಲಿ, ದಿನಗೂಲಿ, ಮನೆಕೆಲಸ, ವ್ಯಾಪಾರ, ಸರ್ಕಾರಿ, ಖಾಸಗಿ ಮತ್ತು ಇತರೆ ವೃತ್ತಿಗಳು. ಒಟ್ಟಾರೆ ರಾಮನಗರ ಜಿಲ್ಲೆಯನ್ನು ಸೇರಿದಂತೆ ವ್ಯಾಪ್ತಿಯಲ್ಲಿ ಬರುವ ತಾಲೂಕಿನ ಇರುಳಿಗ ಸಮುದಾಯದ ೧೫೬೫ ಕುಟುಂಬಗಳ ಲಿಂಗವಾರನ್ನು ಅವಲೋಕಿಸಲಾಗಿ ಒಟ್ಟಾರೆ ರಾಮನಗರ ಜಿಲ್ಲಾವಾರು ಪುರುಷರು ಶೇ. ೫೨.೦೮ರಷ್ಟು, ಮಹಿಳೆಯರು ಶೇ. ೪೭.೯೨ರಷ್ಟು ವಿವಿಧ ಬಗೆಬಗೆಯ ವೃತ್ತಿಗಳಲ್ಲಿ ತೊಡಗಿದ್ದಾರೆ.

ಪ್ರತ್ಯೇಕವಾಗಿ ತಾಲೂಕುವಾರು ಇರುಳಿಗ ಸಮುದಾಯದ ಕೌಟುಂಬಿಕ ವೃತ್ತಿಗಳನ್ನು ಲಿಂಗವಾರು ನೋಡಲಾಗಿ ಕನಕಪುರ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಉಯ್ಯಂಬಳ್ಳಿ, ಕಸಬಾ, ಕೋಡಿಹಳ್ಳಿ, ಮರಳವಾಡಿ, ಸಾತನೂರು ಐದು ಹೋಬಳಿಗಳ ಒಟ್ಟಾರೆ ೮೦೦ ಕುಟುಂಬವು ಹೊಂದಿರುವ ಕಸುಬುಗಳನ್ನು ನೋಡಿದಾಗ ಕೃಷಿಯಲ್ಲಿ ಪುರುಷರು ಶೇ. ೧೬.೧೬ರಷ್ಟಾಗಿದ್ದು, ಮಹಿಳೆಯರು ಶೇ. ೧೩.೭೭ರಷ್ಟು ಇದ್ದಾರೆ. ಕೃಷಿಕೂಲಿಯಲ್ಲಿ ಪುರುಷರು ಶೇ. ೨೪.೬೨ರಷ್ಟು, ಮಹಿಳೆಯರು ಶೇ. ೨೫.೪೮ರಷ್ಟಾಗಿದ್ದು, ತೋಟ ಕಾವಲುನಲ್ಲಿ ಪುರುಷರು ಶೇ. ೧೨.೩೬ರಷ್ಟಾಗಿದ್ದು, ಮಹಿಳೆಯರು ಶೇ. ೧೦.೩೫ರಷ್ಟಾಗಿದ್ದು, ರೇಷ್ಮೆಗಾರಿಕೆಯಲ್ಲಿ ಪುರುಷರು ಶೇ. ೧೪.೧೬ರಷ್ಟಾಗಿದ್ದು, ಮಹಿಳೆಯರು ಶೇ. ೧೭.೫೮ರಷ್ಟಾಗಿದೆ. ಗಾರೆಕೆಲಸದಲ್ಲಿ ಪುರುಷರು ಶೇ. ೯.೨೨ರಷ್ಟಾಗಿದ್ದು, ಮಹಿಳೆಯರು ಶೇ. ೧೧.೧೮ರಷ್ಟಿದೆ. ಮಹಿಳೆಯರು ಇಟ್ಟಿಗೆಭಟ್ಟಿಯಲ್ಲಿ ಪುರುಷರು ಶೇ. ೧೫.೪ರಷ್ಟಾಗಿದ್ದು, ಮಹಿಳೆಯರು ಶೇ. ೧೫.೯೦ರಷ್ಟಾಗಿದ್ದು,

ಮರಳುಗಾರಿಕೆಯ ಕೆಲಸದಲ್ಲಿ ಪುರುಷರು ಶೇ. ೬.೨೭ರಷ್ಟಾಗಿದ್ದು, ಮಹಿಳೆಯರು ಶೇ. ೫.೭೬ರಷ್ಟಾಗಿದ್ದು, ಪುರುಷರು ಶೇ. ೬.೨೭ರಷ್ಟು ಸರ್ಕಾರಿ ನೌಕರಸ್ಥರಾಗಿರುವುದು, ಶೇ. ೦.೯೫ರಷ್ಟು ಪುರುಷರು ಖಾಸಗಿ ನೌಕರಸ್ಥರಲ್ಲಿ ಕಂಡುಬಂದರೆ, ಪುರುಷರು ಶೇ. ೧.೪೨ರಷ್ಟಾಗಿದ್ದು, ಮಹಿಳೆಯರು ಶೇ. ೦.೨೧ರಷ್ಟಾಗಿ ಇತರೆ ಕೆಲಸಗಳಲ್ಲಿದ್ದಾರೆ.

ಕನಕಪುರ ತಾಲೂಕಿನ ಹೋಬಳಿವಾರು ಇರುಳಿಗ ಸಮುದಾಯದ ಕೌಟುಂಬಿಕ ವೃತ್ತಿಯನ್ನು ವಿಶ್ಲೇಷಿಸಿದಾಗ ಇಡೀ ಜಿಲ್ಲೆಯಲ್ಲಿ ಅತಿಹೆಚ್ಚು ಕೃಷಿ ಮಾಡುತ್ತಿರುವವರು ಕಂಡುಬರುತ್ತಾರೆ. ಹಾಗೆ ಪುರುಷರು ಮತ್ತು ಮಹಿಳೆಯರು ಸಮಾನವಾಗಿ ಕೃಷಿಕೂಲಿಯನ್ನು ಮಾಡುತ್ತಿರುವುದು ಅಂಕಿ ಅಂಶಗಳಿಂದ ತಿಳಿದುಬರುತ್ತದೆ.

ವೃತ್ತಚಿತ್ರ ೫.೩. ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಹೋಬಳಿವಾರು ಇರುಳಿಗ ಸಮುದಾಯದ ಲಿಂಗವಾರು ಕಸುಬುಗಳು




ಚನ್ನಪಟ್ಟಣ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಮಳೂರು ಹೋಬಳಿಯ ಒಟ್ಟಾರೆ ೫೩ ಕುಟುಂಬವು ಹೊಂದಿರುವ ಕಸುಬುಗಳನ್ನು ನೋಡಲಾಗಿ ಕೃಷಿಯಲ್ಲಿ ಪುರುಷರು ಶೇ. ೧.೨೫ರಷ್ಟಾಗಿದ್ದು, ಮಹಿಳೆಯರು ಶೇ. ೧.೩೩ರಷ್ಟು, ಕೃಷಿಕೂಲಿಯಲ್ಲಿ ಪುರುಷರು ಶೇ. ೨೮.೭೫ರಷ್ಟು, ಮಹಿಳೆಯರು ಶೇ. ೩೬.೦೦ರಷ್ಟಾಗಿದ್ದು, ಗಾರೆಕೆಲಸದಲ್ಲಿ ಪುರುಷರು ಶೇ. ೨೦.೦೦ರಷ್ಟಾಗಿದ್ದು, ಮಹಿಳೆಯರು ಶೇ. ೧೬.೦೦ರಷ್ಟಾಗಿದ್ದು, ಇಟ್ಟಿಗೆಭಟ್ಟಿಯಲ್ಲಿ ಪುರುಷರು ಶೇ. ೨೨.೫೦ರಷ್ಟಾಗಿದ್ದು, ಮಹಿಳೆಯರು ಶೇ. ೨೪.೦೦ರಷ್ಟಾಗಿದ್ದು, ಮರಳುಗಾರಿಕೆಯ ಕೆಲಸಲ್ಲಿ ಪುರುಷರು ಶೇ. ೧೨.೫೦ರಷ್ಟಾಗಿದ್ದು, ಮಹಿಳೆಯರು

ಶೇ. ೯.೩೩ರಷ್ಟಾಗಿದ್ದು, ಪುರುಷರು ಶೇ. ೧.೨೫ರಷ್ಟು ಸರ್ಕಾರಿ ನೌಕರಸ್ಥರಾಗಿರುವುದು, ಶೇ. ೧.೩೩ರಷ್ಟು ಮಹಿಳೆಯರು ಖಾಸಗಿ ನೌಕರಸ್ಥರಲ್ಲಿ ಕಂಡುಬಂದರೆ, ಪುರುಷರು ಶೇ. ೧೩.೭೫ರಷ್ಟಾಗಿದ್ದು, ಶೇ. ೧೨.೦೦ರಷ್ಟು ಮಹಿಳೆಯರು ಇತರೆ ಕೆಲಸಗಳಲ್ಲಿದ್ದಾರೆ.

ಈ ಮೇಲಿನ ಅಂಕಿಅಂಶಗಳನ್ನು ಗಮನಿಸಿದಾಗ ಕಂಡುಬರುವ ಮುಖ್ಯ ಅಂಶಗಳೆಂದರೆ ಚನ್ನಪಟ್ಟಣ ತಾಲೂಕಿನಲ್ಲಿ ಇರುಳಿಗರು ಗಾರೆಕೆಲಸದಲ್ಲಿ ಜಿಲ್ಲೆಯಲ್ಲಿ ಅತಿಹೆಚ್ಚು ಸಂಖ್ಯೆಯಲ್ಲಿ ದುಡಿಯುತ್ತಿರುವುದು ಕಂಡುಬರುತ್ತದೆ. ಹಾಗೆಯೇ ಇಟ್ಟಿಗೆಭಟ್ಟಿ ಕಾರ್ಯದಲ್ಲಿ ಮತ್ತು ಇತರೆ ವಿವಿಧ ರೀತಿಯ ವೃತ್ತಿಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿರುವುದು ಈ ತಾಲೂಕಿನಲ್ಲಿ ಕಂಡುಬರುತ್ತದೆ. ಜೊತೆಗೆ ಲಿಂಗವಾರು ಗಮನಿಸಿದಾಗ ಕೃಷಿಕೂಲಿ, ಇಟ್ಟಿಗೆಭಟ್ಟಿಗಳಲ್ಲಿ ಪುರುಷರಿಗಿಂತ ಮಹಿಳೆಯರು ಅಧಿಕ ಪ್ರಮಾಣದಲ್ಲಿ ದುಡಿಯುತ್ತಿರುವುದು ಅಂಕಿ ಅಂಶಗಳಿಂದ ತಿಳಿಯುತ್ತದೆ.

ವೃತ್ತಚಿತ್ರ ೫.೪. ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನ ಹೋಬಳಿವಾರು ಇರುಳಿಗ ಸಮುದಾಯದ ಲಿಂಗವಾರು ಕಸುಬುಗಳು




ಮಾಗಡಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಕಸಬಾ, ಮಾಡಬಾಳ್, ಸೋಲೂರು, ಮೂರು ಹೋಬಳಿಗಳ ಒಟ್ಟಾರೆ ೧೬೩ ಕುಟುಂಬವು ಹೊಂದಿರುವ ಕಸುಬುಗಳನ್ನು ನೋಡಲಾಗಿ ಕೃಷಿಯಲ್ಲಿ ಪುರುಷರು ಶೇ. ೩.೮೮ರಷ್ಟಾಗಿದ್ದು, ಮಹಿಳೆಯರು ಶೇ. ೨.೮೯ರಷ್ಟು, ಕೃಷಿಕೂಲಿಯಲ್ಲಿ ಪುರುಷರು ಶೇ. ೭೯.೬೧ರಷ್ಟು, ಮಹಿಳೆಯರು ಶೇ. ೮೧.೫೦ರಷ್ಟಾಗಿದ್ದು, ತೋಟ ಕಾವಲುನಲ್ಲಿ ಪುರುಷರ ಪ್ರಮಾಣ ಶೇ. ೩.೮೮ರಷ್ಟಾಗಿದ್ದು, ಮಹಿಳೆಯರು ಶೇ. ೨.೩೧ರಷ್ಟಾಗಿದ್ದು, ಗಾರೆಕೆಲಸದಲ್ಲಿ ಪುರುಷರು

ಶೇ. ೦.೯೭ರಷ್ಟಾಗಿದ್ದು, ಮಹಿಳೆಯರು ಶೇ. ೦.೫೭ರಷ್ಟಾಗಿದ್ದು, ಇಟ್ಟಿಗೆಭಟ್ಟಿಯಲ್ಲಿ ಪುರುಷರು ಶೇ. ೭.೭೬ರಷ್ಟಾಗಿದ್ದು, ಮಹಿಳೆಯರು ಶೇ. ೪.೦೪ರಷ್ಟಾಗಿದ್ದು, ಮಹಿಳೆಯರು ಶೇ. ೦.೫೭ರಷ್ಟು ಸರ್ಕಾರಿ ನೌಕರಸ್ಥರಲ್ಲಿ ಕಂಡುಬಂದರೆ, ಪುರುಷರು ಶೇ. ೩.೮೮ರಷ್ಟಾಗಿದ್ದು, ಮಹಿಳೆಯರು ಶೇ. ೮.೦೯ರಷ್ಟಾಗಿ ಇತರೆ ಕೆಲಸಗಳಲ್ಲಿದ್ದಾರೆ.

ಮೇಲಿನ ಅಂಕಿ-ಅಂಶಗಳಲ್ಲಿ ಮಾಗಡಿ ತಾಲೂಕಿನ ಹೋಬಳಿವಾರು ಕಸುಬುಗಳನ್ನು ನೋಡಿದಾಗ ಹೊಸ ರೀತಿಯ ವೃತ್ತಿಗಳ ಕಡೆಗೆ ತೆರೆದುಕೊಳ್ಳದೆ ಇಂದಿಗೂ ಪಾರಂಪರಿಕ ವೃತ್ತಿಗೆ ಹೆಚ್ಚು ಒತ್ತು ನೀಡುತ್ತಿರುವುದು ಕಾಣಸಿಗುತ್ತದೆ. ಸಮುದಾಯದ ಜಿಲ್ಲೆಯಲ್ಲಿ ಅತಿಹೆಚ್ಚು ಕೃಷಿಕಾರ್ಮಿಕರಾಗಿ ದುಡಿಯುತ್ತಿರುವುದು ಕಂಡುಬರುತ್ತದೆ. ಕೃಷಿಕೂಲಿಗಳಲ್ಲಿ ಪುರುಷರಿಗಿಂತ ಮಹಿಳೆಯರು ಹೆಚ್ಚಾಗಿರುವುದು ಕಂಡುಬರುತ್ತದೆ.

ವೃತ್ತಚಿತ್ರ ೫.೫. ರಾಮನಗರ ಜಿಲ್ಲೆಯ ರಾಮನಗರ ತಾಲೂಕಿನ ಹೋಬಳಿವಾರು ಇರುಳಿಗ ಸಮುದಾಯದ ಲಿಂಗವಾರು ಕಸುಬುಗಳು



ರಾಮನಗರ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಕಸಬಾ, ಕೂಟಗಲ್, ಕೈಲಂಚ, ಬಿಡದಿ, ನಾಲ್ಕು ಹೋಬಳಿಗಳ ಒಟ್ಟಾರೆ ೫೪೯ ಕುಟುಂಬವು ಹೊಂದಿರುವ ಕಸುಬುಗಳನ್ನು ನೋಡಲಾಗಿ ಕೃಷಿಯಲ್ಲಿ ಪುರುಷರು ಶೇ. ೪.೭೮ರಷ್ಟಾಗಿದ್ದು, ಮಹಿಳೆಯರು ಶೇ. ೫.೦೭ರಷ್ಟು ಇದ್ದಾರೆ. ಕೃಷಿಕೂಲಿಯಲ್ಲಿ ಪುರುಷರು ಶೇ. ೭೪.೩೦ರಷ್ಟು, ಮಹಿಳೆಯರು ಶೇ. ೭೮.೪೦ರಷ್ಟಾಗಿದ್ದು, ತೋಟ ಕಾವಲುನಲ್ಲಿ ಪುರುಷರು ಶೇ. ೬.೪೭ರಷ್ಟಾಗಿದ್ದು, ಮಹಿಳೆಯರು ಶೇ. ೫.೯೪ರಷ್ಟಾಗಿದ್ದು, ರೇಷ್ಮೆಗಾರಿಕೆಯಲ್ಲಿ ಪುರುಷರು

ಶೇ. ೦.೧೪ರಷ್ಟಾಗಿದ್ದು, ಗಾರೆಕೆಲಸದಲ್ಲಿ ಪುರುಷರು ಶೇ. ೩.೮೦ರಷ್ಟಾಗಿದ್ದು, ಮಹಿಳೆಯರು ಶೇ. ೨.೩೨ರಷ್ಟಾಗಿದ್ದು, ಇಟ್ಟಿಗೆಭಟ್ಟಿಯಲ್ಲಿ ಪುರುಷರು ಶೇ. ೨.೫೩ರಷ್ಟಾಗಿದ್ದು, ಮಹಿಳೆಯರು ಶೇ. ೨.೧೭ರಷ್ಟಾಗಿದ್ದು, ಶೇ. ೦.೧೪ರಷ್ಟು ಪುರುಷರು ಸರ್ಕಾರಿ ನೌಕರಸ್ಥರಾಗಿದ್ದರೆ. ಶೇ. ೦.೪೨ರಷ್ಟು ಪುರುಷರು, ಮಹಿಳೆಯರು ಶೇ. ೦.೧೪ರಷ್ಟಾಗಿದ್ದು ಖಾಸಗಿ ನೌಕರಸ್ಥರಲ್ಲಿ ಕಂಡುಬಂದರೆ, ಪುರುಷರು ಶೇ. ೭.೪೫ರಷ್ಟಾಗಿದ್ದು, ಮಹಿಳೆಯರು ಶೇ. ೫.೯೪ರಷ್ಟಾಗಿ ಇತರೆ ಕೆಲಸಗಳಲ್ಲಿದ್ದಾರೆ.

ರಾಮನಗರ ಜಿಲ್ಲೆ ವ್ಯಾಪ್ತಿಯಲ್ಲಿ ಕೃಷಿಕಾರ್ಮಿಕರಾಗಿ ಮಹಿಳೆಯರು ೭೮೮೦ ಅತಿಹೆಚ್ಚಾಗಿ ದುಡಿಯುತ್ತಾರೆ ಹಾಗೂ ಇತರೆ ಕಸುಬುಗಳಲ್ಲಿ ದುಡಿಯುವವರ ಸಂಖ್ಯೆ ರಾಮನಗರ ತಾಲೂಕಿನ ವ್ಯಾಪ್ತಿಯಲ್ಲಿ ಅಧಿಕವಾಗಿದೆ.

ಇರುಳಿಗ ಸಮುದಾಯದವರಲ್ಲಿ ಆರ್ಥಿಕ ಸುಭದ್ರತೆ ದೃಷ್ಟಿಯಿಂದ ಕೂಲಿಯನ್ನರಸಿ ವಲಸೆ ಹೋಗುವುದು ಕಂಡುಬರುವುದಾದರೂ ಅದರಿಂದ ಆರ್ಥಿಕ ಮಟ್ಟದ ಪ್ರಮಾಣ ತುಂಬಾ ಕಡಿಮೆಯಾಗಿದೆ. ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ದುಡಿಯುವವರು ತಮ್ಮ ಮೂಲ ಗ್ರಾಮಗಳನ್ನು ತ್ಯಜಿಸಿ ಹತ್ತಿರದ ಪಟ್ಟಣಗಳಿಗೆ ಇಲ್ಲವೇ ಹುದ್ದೆಯನ್ನು ನಿರ್ವಹಿಸಬೇಕಾದ ಸ್ಥಳಗಳಿಗೆ ವಲಸೆ ಹೋಗಿದ್ದಾರೆ.

ಒಟ್ಟಾರೆ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ರಾಮನಗರ ಜಿಲ್ಲೆಯ ಕನಕಪುರ, ಚನ್ನಪಟ್ಟಣ, ಮಾಗಡಿ ತಾಲೂಕುಗಳ ಇರುಳಿಗ ಸಮುದಾಯದ ಹೋಬಳಿವಾರುಗಳಲ್ಲಿ ಕಂಡುಬರುವ ಕೆಲವು ಬಹು ಬಗೆಯ ವೃತ್ತಿಗಳನ್ನು ಅವಲೋಕಿಸಿದಾಗ ತಮಗಿರುವ ಅಲ್ಪಸ್ವಲ್ಪ ಭೂಮಿಗಳನ್ನೇ ಹೊಂದಿರುವ ಕೆಲವು ಕುಟುಂಬಗಳು ಕೃಷಿಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಕೃಷಿಕೂಲಿಗಳಾಗಿ ದುಡಿಮೆ ಮಾಡುವ ಕುಟುಂಬಗಳ ಸಂಖ್ಯೆ ಅತಿಯಾಗಿದ್ದು, ಇಂದು ಗ್ರಾಮಗಳು ನಗರಕ್ಕೆ ಹತ್ತಿರವಾಗುತ್ತಿರುವುದರಿಂದ ನಗರಗಳಲ್ಲಿ ದಿನಗೂಲಿಗಳಾಗಿ ಇಟ್ಟಿಗೆ ಭಟ್ಟಿಗಳಲ್ಲಿ, ಮಣ್ಣು ಹೊರುವ, ಇಟ್ಟಿಗೆ ಜೋಡಿಸುವ ಇತ್ಯಾದಿ ಕೃಷಿಯೇತರ ಕೂಲಿ ಕೆಲಸಗಳನ್ನು ಅವಲಂಬಿಸಿದ್ದಾರೆ.

೫.೧೭. ಇರುಳಿಗರು ಅವಲಂಬಿಸಿದ ಪಶುಪಾಲನೆ

ಪಶುಪಾಲನೆ ಕೃಷಿಗಿಂತ ಮೊದಲು ಮತ್ತು ಅನಂತರವೂ ಸಹ ಸಂಪತ್ತು, ಆಸ್ತಿ ಎಂದು ಪರಿಗಣಿಸಲ್ಪಟ್ಟಿದೆ. ಇದು ಇಂದಿಗೂ ಗ್ರಾಮೀಣ ಬದುಕಿನ ಅವಿಭಾಜ್ಯ ಅಂಗ. ಬೇಟೆ ಹಾಗೂ ಕೃಷಿಯಂತೆ ಪಶುಪಾಲನೆ ಬುಡಕಟ್ಟುಗಳ ಪಾರಂಪರಿಕ ಕಸುಬಾಗಿದೆ.

ಪಶುಪಾಲನೆ ಮಾನವನ ಎರಡನೇ ಕಸುಬಾಗಿತ್ತು. ಹಾಗೆಂದ ಮಾತ್ರಕ್ಕೆ ಎಲ್ಲ ಮೂಲ ಬೇಟೆಗಾರರು ಪಶುಪಾಲಕರೆ ಎಂದರ್ಥವಲ್ಲ. "ಬೇಟೆಗಾರರದಲ್ಲಿಯೂ ಹಲವಾರು ಪಶುಪಾಲಕ ರಾದರೆಂದು ತಿಳಿದರೆ ಸಾಕು. ಕುರಿಸಾಕಣೆ, ಮೇಕೆ ಸಾಕಣೆ, ದನಕರುಗಳ ಪಾಲನೆ, ಎಮ್ಮೆ, ಕರುಗಳ ಪಾಲನೆಯತ್ತ ಮುಂದುವರೆದು ವಿಸ್ತಾರಗೊಂಡಿತು. ಮೇಕೆ, ಕುರಿ ಪಾಲನೆಗಿಂತಲೂ ಎಮ್ಮೆ ದನಗಳ ಪಾಲನೆ ಸ್ವಲ್ಪ ಸರಳ ಹಾಗೂ ಹೆಚ್ಚಿನ ಲಾಭದಾಯಕವಾಗಿತ್ತು".

ಇರುಳಿಗ ಸಮುದಾಯದಲ್ಲಿ ಇಂದಿಗೂ ಸಹ ಪಶುಸಂಪತ್ತು ಹೇರಳವಾಗಿ ಇದೆ. ಪಶುಪಾಲನೆ ಮಹಿಳೆಯರ ಮತ್ತು ಕುಟುಂಬದಲ್ಲಿನ ವೃದ್ಧರ ಕೆಲಸವಾಗಿದ್ದು ಹಿಂದೆ ಇವರು ದನಗಳನ್ನು ಹಿಂಡು ಹಿಂಡಾಗಿ ಹುಲ್ಲು ಮತ್ತು ನೀರು ದೊರೆಯುವ ಸ್ಥಳಗಳಿಗೆ ಹೋಗಿ ಬೀಡುಬಿಟ್ಟ ೨-೩ ತಿಂಗಳ ಸಮಯ ದನ ಮೇಯಿಸಿಕೊಂಡು ಬರುತ್ತಿದ್ದ ಪದ್ಧತಿ ಚಾಲ್ತಿಯಲ್ಲಿತ್ತು.

ಬೇಟೆಗಾರಿಕೆಯಿಂದ ವಿಮುಖರಾದ ಇರುಳಿಗರು ಗುಡ್ಡಗಾಡಿನ ಕಾಡುಗಳಲ್ಲಿ ಸುಲಭವಾಗಿ ಜೀವನ ನಿರ್ವಹಣೆ ಮಾಡಲು ಅನುಕೂಲವಾಗುವ ಪಶುಪಾಲನೆಯನ್ನು ಜೀವನಾಧಾರ ವೃತ್ತಿಯಾಗಿ ಆಯ್ಕೆ ಮಾಡಿಕೊಂಡರು. ಬಹುತೇಕ ಇರುಳಿಗರು ಪಶುಪಾಲನೆಯನ್ನು ನೆಚ್ಚಿಯೇ ಜೀವನ ನಿರ್ವಹಣೆ ಮಾಡತೊಡಗಿರುವುದು ಕ್ಷೇತ್ರಕಾರ್ಯದಿಂದ ತಿಳಿದುಬರುತ್ತದೆ.

ಬಹುತೇಕ ಇರುಳಿಗರು ಭೂಮಿಗಳಲ್ಲಿ ಕೃಷಿ ಕೆಲಸ ನಿರ್ವಹಿಸುವುದರ ಜೊತೆಗೆ ಪಶುಪಾಲನೆ ಭಾಗವಾಗಿ ದನ, ಆಕಳು, ಎಮ್ಮೆಗಳನ್ನು ತಮ್ಮ ಕೃಷಿಯ ಉಳುಮೆಗಾಗಿ ಬಳಸಿಕೊಂಡಿದ್ದಾರೆ. ಅದರೊಂದಿಗೆ ಕುರಿ, ಮೇಕೆ, ಕೋಳಿ, ಹಂದಿ ಸಾಕಾಣಿಕೆಯನ್ನು ಸಹ ಮಾಡುತ್ತಿರುವುದು ಕ್ಷೇತ್ರ ಕಾರ್ಯದಲ್ಲಿ ತಿಳಿದುಬರುತ್ತದೆ. ಇವುಗಳ ಪಾಲನೆಯಲ್ಲಿ ಹೆಣ್ಣು ಗಂಡು ಭೇದವಿಲ್ಲದೆ ಅನುಸರಿಸುತ್ತಿದ್ದಾರೆ. ಮಹಿಳೆಯರು ಸಹ ಪಶುಪಾಲನಾ ವೃತ್ತಿಯಲ್ಲಿ ತೊಡಗಿದ್ದು ಅವರೆಲ್ಲಾ ತಮ್ಮ ಕುಟುಂಬ ನಿರ್ವಹಣೆಗೆ ಸಹಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇರುಳಿಗ ಸಮುದಾಯವು ಪಶುಪಾಲನೆಯನ್ನು ಹೊಂದಿರುವ ಅಂಕಿಅಂಶಗಳನ್ನು ಮುಂದಿನಂತೆ ನೋಡಬಹುದು.


ರಾಮನಗರ ತಾಲೂಕನ್ನೊಳಗೊಂಡಂತೆ ಕನಕಪುರ, ಚನ್ನಪಟ್ಟಣ, ಮಾಗಡಿ ತಾಲೂಕು ಹೋಬಳಿವಾರಾಗಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಗಳ ಪಶುಪಾಲನೆಗಳನ್ನು ನೋಡಲಾಗಿ ಕಂಡುಬಂದ ಅಂಶಗಳು ಈ ಕೆಳಗಿನಂತಿವೆ. ಒಟ್ಟಾರೆ ರಾಮನಗರ ಜಿಲ್ಲೆಯ ಇರುಳಿಗರ ೧೫೬೫ ಕುಟುಂಬಗಳನ್ನು ಅವಲೋಕಿಸಲಾಗಿ ಪಶುಸಂಗೋಪನೆಯಿಂದ ಕುಟುಂಬಗಳು ಜೀವನ ನಿರ್ವಹಣೆಯ ಆರ್ಥಿಕ ಭದ್ರತೆಯ ಮೂಲವನ್ನು ಕಂಡುಕೊಂಡಿರುವುದು ಕೋಷ್ಟಕ ಮತ್ತು ವೃತ್ತಚಿತ್ರದಲ್ಲಿ ಗಮನಿಸಬಹುದು.

ರಾಮನಗರ ಜಿಲ್ಲೆಯನ್ನೊಳಗೊಂಡಂತೆ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಇರುಳಿಗ ಸಮುದಾಯದ ಒಟ್ಟಾರೆ ೧೫೬೫ ಕುಟುಂಬಗಳಲ್ಲಿ ವಿವಿಧ ಪಶುಸಂಗೋಪನೆಯನ್ನು ನೋಡಲಾಗಿ ಕನಕಪುರ ತಾಲೂಕಿನ ಹೋಬಳಿವಾರಲ್ಲಿ ಶೇ. ೪೬.೯೩(೧೯೮೬)ರಷ್ಟಾಗಿದ್ದು, ಚನ್ನಪಟ್ಟಣ ತಾಲೂಕು ಹೋಬಳಿವಾರಲ್ಲಿ ಶೇ. ೫.೧೫(೨೧೮)ರಷ್ಟಾಗಿದ್ದು, ಮಾಗಡಿ ತಾಲೂಕು ಹೋಬಳಿವಾರಾಗಿ ಶೇ. ೧೩.೫೨(೫೭೨)ರಷ್ಟಾಗಿದ್ದು, ರಾಮನಗರ ತಾಲೂಕು ಹೋಬಳಿವಾರಾಗಿ ಶೇ. ೩೪.೪೦(೧೪೫೬) ರಷ್ಟಿದ್ದಾರೆ. ಇದೇ ರೀತಿ ಒಟ್ಟಾರೆ ವಿವಿಧ ಬಗೆಯ ಪಶು ಸಾಕಾಣಿಕೆಯನ್ನು ಗಮನಿಸಿದಾಗ ಎತ್ತು ಶೇ. ೧೧.೮ರಷ್ಟು, ಆಕಳು ಶೇ. ೧೭.೨೭ರಷ್ಟು, ಎಮ್ಮೆ ಶೇ. ೬.೪೩ರಷ್ಟು, ಕುರಿ ಶೇ. ೧೯.೨೩ರಷ್ಟಾಗಿದ್ದು, ಮೇಕೆ ಶೇ. ೨೫.೦೭ರಷ್ಟು, ಕೋಳಿ ಶೇ. ೧೫.೭೬ರಷ್ಟು, ಹಂದಿ ಸಾಕಾಣಿಕೆ ಶೇ. ೪.೩೪ರಷ್ಟಿರುವುದು ಕೋಷ್ಟಕ ಮತ್ತು ವೃತ್ತಚಿತ್ರದಿಂದ ತಿಳಿದುಬರುತ್ತದೆ.

ಕೋಷ್ಟಕ ೫.೮. ಸಮೀಕ್ಷೆಗೊಳ್ಳಪಟ್ಟ ರಾಮನಗರ ಜಿಲ್ಲೆಯ ಇರುಳಿಗ ಸಮುದಾಯದ ತಾಲೂಕುವಾರು, ಹೋಬಳಿವಾರಿರು ಮತ್ತು ಕುಟುಂಬವಾರು ಪಶುಸಂಗೋಪನೆ

ತಾಲೂಕು	ಹೋಬಳಿಗಳು	ಕುಟುಂಬಗಳು	ಪಶುಸಂಪತ್ತು						
			ಎತ್ತು	ಆಕಳು	ಎಮ್ಮೆ	ಕುರಿ	ಮೇಕೆ	ಕೋಳಿ	ಹಂದಿ
ಕನಕಪುರ	ಉಯ್ಯಂಬಳ್ಳಿ	೪೮	೧೧	೨೬		೪೮	೬೯	೧೬	
	ಕಸಬಾ	೨೭೮	೩೪	೧೨೮	೬	೯೦	೧೬೯	೬೪	
	ಕೋಡಿಹಳ್ಳಿ	೨೦೬	೩೧	೨೫೩	೪	೧೧೪	೧೫೭	೪೮	೧೦
	ಮರಳವಾಡಿ	೧೪೪	೧೮	೮೧	೨	೨೭	೫೧	೫೭	
	ಸಾತನೂರು	೧೨೪	೨೬	೮೩	೧೫	೯೯	೨೧೫	೩೩	೧
	ಕನಕಪುರ ತಾಲೂಕು	**೮೦೦**	**೧೨೦**	**೫೭೧**	**೨೭**	**೩೭೮**	**೬೬೧**	**೨೧೮**	**೧೧**
ಚನ್ನಪಟ್ಟಣ	ಮಳೂರು	೫೩	೫೩	೭	೨೬		೧೯	೭೭	೩೬
ಮಾಗಡಿ	ಕಸಬಾ	೭	೭		೨			೬	
	ಮಾಡಬಾಳ್	೧೩೩	೧೩೩	೬	೭೮		೩೫	೧೮೯	೩೯
	ಸೋಲೂರು	೨೩	೨೩	೮	೮	೨	೫	೧೯	೧೨
	ಮಾಗಡಿ ತಾಲೂಕು	**೧೬೩**	**೧೬೦**	**೧೪**	**೮೮**	**೨**	**೪೦**	**೨೧೪**	**೫೧**
ರಾಮನಗರ	ಕಸಬಾ	೧೩೬			೧೫	೧೭	೧೧೭	೨೭	೨೬
	ಕೂಟಗಲ್	೨೫೦	೬	೧೩೯	೪೫	೪೧೬	೭೧	೯೮	
	ಕೈಲಂಚ	೧೬೧	೧೬೧		೭೧	೧	೧೫೩	೩೩	೬೦
	ಬಿಡದಿ	೨							
	ರಾಮನಗರ ತಾಲೂಕು	**೫೪೯**	**೫೪೯**	**೬**	**೨೨೫**	**೬೩**	**೬೮೬**	**೧೩೧**	**೧೮೪**

ವೃತ್ತಚಿತ್ರ ೫.೬. ರಾಮನಗರ ಜಿಲ್ಲೆಯ ಇರುಳಿಗ ಸಮುದಾಯದ ತಾಲೂಕುವಾರು ಮತ್ತು ಕುಟುಂಬವಾರು ಪಶುಸಂಗೋಪನೆ ಪ್ರಮಾಣ



ಮಾನವನ ಬೇಟೆಯ ಹಂತದಿಂದ ಮುಂದುವರೆದ ಹಂತವೇ ಪಶುಪಾಲನಾ ಹಂತ. ಇರುಳಿಗರಲ್ಲಿ ಪಶುಸಂಪತ್ತನ್ನು ಗಮನಿಸಿದಾಗ ಪಶುಗಳೇ ಆದಾಯ ತರುವಂತಹ ಬಂಡವಾಳದ ಮೂಲಗಳಾಗಿವೆ. ಅದರಲ್ಲೂ ಮುಖ್ಯವಾಗಿ ಭೂಮಿಯನ್ನು ಉಳುಮೆ ಮಾಡಲು ಒಂದೆಡೆ ಎತ್ತುಗಳು ಇವರ ಜೀವನಾಡಿಯಾಗಿವೆ. ಆಕಳು, ಎಮ್ಮೆಗಳಿಂದ ಹೈನುಗಾರಿಕೆಯ ಉಪಯೋಗದೊಂದಿಗೆ ಜೀವನ ಸಾಗಿಸುತ್ತಿದ್ದಾರೆ, ಕುರಿಗಳು ಮೇಕೆಗಳ ಹಾಗೂ ಹಂದಿಸಾಕಣೆಯಿಂದ ಈ ಕುಟುಂಬಗಳು ತಕ್ಕಮಟ್ಟಿಗೆ ಆರ್ಥಿಕ ಭದ್ರತೆಯ ಭರವಸೆಯೊಂದಿಗೆ ಹಾಗೂ ಧಾರ್ಮಿಕಾಚರಣೆಗಳಲ್ಲಿ, ಆಹಾರವನ್ನಾಗಿ ಉಪಯೋಗಿಸುವ ದೃಷ್ಟಿಯಿಂದ ಸಾಕಾಣಿಕೆಯೊಂದಿಗೆ ಕೌಟುಂಬಿಕ ಜೀವನ ನಿರ್ವಹಣೆ ಹೊಂದಿದ್ದವರಾಗಿದ್ದಾರೆ. ಅಲ್ಲದೇ ಹಿಂದೆ ಸಿಗುತ್ತಿದ್ದ ಹೈನುಗಾರಿಕೆ ಸಂಪತ್ತು ಅವನತಿಯತ್ತ ಸಾಗಿ ತನ್ನ ದೇಶೀಯ ಮೌಲ್ಯವನ್ನು ಕಳೆದುಕೊಳ್ಳುತ್ತಿದೆ ಎಂಬ ಅಂಶವೂ ಕಂಡುಬರುತ್ತದೆ.

೫.೧೮. ಇರುಳಿಗ ಸಮುದಾಯದ ವರ್ತಮಾನದ ವೃತ್ತಿ ಮತ್ತು ಆರ್ಥಿಕ ಸ್ಥಿತಿಗತಿ

ಆಧುನಿಕರಣಗೊಳ್ಳುತ್ತಿರುವ ಇಂದಿನ ಸಮಾಜದಲ್ಲಿ ಆರ್ಥಿಕತೆಗೆ ಹೆಚ್ಚಿನ ಮಹತ್ವವನ್ನು ನೀಡಲಾಗುತ್ತಿದೆ. ಇರುಳಿಗ ಸಮುದಾಯವು ಇಂತಹ ಹೊಸಬಗೆಯ ಆರ್ಥಿಕ ಬದಲಾವಣೆಗೆ ತನ್ನನ್ನು ತಾನು ಆಮೆನಡಿಗೆಯಲ್ಲಿ ಒಳಗಾಗುತ್ತಿದ್ದು ಕಳೆದ ೩೦-೪೦ ವರ್ಷಗಳ ಹಿಂದೆ ಇವರ ಆರ್ಥಿಕ ಪರಿಸ್ಥಿತಿ ತುಂಬಾ ಹಿಂದುಳಿದಿತ್ತು. ಇತ್ತೀಚಿನ ದಿನಗಳಲ್ಲಿ ಸುಧಾರಣೆಯ ಹಂತಕ್ಕೆ ಕುಂಟುತ್ತಾಸಾಗಿದೆ. ಆರ್ಥಿಕತೆಗೆ ಮೂಲವಾದ ಕಸುಬುಗಳಲ್ಲಿ ಬದಲಾವಣೆಗಳು ಕಾಣಬರುತ್ತಿದೆ. ಹೊರ ಜಗತ್ತಿನ ಇತರೆ ಸಮುದಾಯದ ಜನರ ಜೊತೆ ಒಡನಾಟದ ಪ್ರಭಾವದಿಂದ ಹಾಗೂ ಸಮಾಜದ ಮುಖ್ಯವಾಹಿನಿಯಲ್ಲಿ ಉಂಟಾಗುತ್ತಿರುವ ಆಧುನಿಕ ರೀತಿಯ ಬದಲಾವಣೆಗಳು ಇವರನ್ನು ಪ್ರಭಾವಿಸಿವೆ. ಸಾರಿಗೆ ಮಾಧ್ಯಮಗಳ ಪ್ರಭಾವ ಈ ಬುಡಕಟ್ಟಿನ ಮೇಲೆ ಉಂಟಾಗಿದೆ. ಜೊತೆಗೆ ತಮ್ಮ ಅಕ್ಕಪಕ್ಕದಲ್ಲೇ ನಡೆಯುತ್ತಿರುವ ನಗರೀಕರಣ, ಕೈಗಾರಿಕರಣದಿಂದ ತಾವು ವಾಸಿಸುತ್ತಿರು ಪ್ರದೇಶಗಳನ್ನು ತೆರವು ಮಾಡಿಸಿ ರಾಜಕೀಯ ಅಧಿಕಾರವುಳ್ಳ ಆರ್ಥಿಕವಾಗಿ ಸಬಲ ಹೊಂದಿರುವ ಜನರು ಆಕ್ರಮಿಸುತ್ತಿರುವುದು, ಈ ಜನರನ್ನು ಹೊಸಬಗೆಯ ಆಲೋಚನೆಯ ಕಡೆಗೆ ಕಣ್ಣು ತೆರೆಯುವಂತೆ ಮಾಡುತ್ತಿದೆ. ಕೆಲವು ಬುಡಕಟ್ಟುಗಳು ಇಂತಹ ವ್ಯವಸ್ಥೆಗೆ ಕಠೋರವಾಗಿ ಪ್ರತಿಕ್ರಿಯಿಸುತ್ತಿದ್ದರೆ ಇರುಳಿಗ ಸಮುದಾಯಗಳು ಇವುಗಳ ಬಗ್ಗೆ ಪ್ರತಿಕ್ರಿಯಿಸುವುದು ಇರಲಿ ಗಮನಿಸುವ ಗೋಜಿಗೂ ಹೋಗಿಲ್ಲ. ತಮ್ಮ ದಿನನಿತ್ಯದ ಬದುಕಿಗೆ ಬೇಕಾದಂತಹ ವೃತ್ತಿಗಳಲ್ಲಿ ಕೊಂಚ ಬದಲಾವಣೆ ಮಾಡಿಕೊಂಡಿದ್ದಾರೆ. ಹೊಸಬಗೆಯ ಒಂದೆರಡು ವೃತ್ತಿಗಳ ಕಡೆಗೆ ಮುಖಮಾಡಿ ಆ ವೃತ್ತಿಗಳ ಮೂಲಕ ಹೊಸಬಗೆಯ ಆರ್ಥಿಕ ಚಟುವಟಿಕೆಗೆ ನಿಧಾನವಾಗಿ ತೆರೆದುಕೊಳ್ಳುತ್ತಿದ್ದು ಅಂತಹ ವೃತ್ತಿಗಳ ಬಗ್ಗೆ ಮುಂದೆ ಅಂಕಿ-ಸಂಖ್ಯೆಗಳೊಡನೆ ತಿಳಿಯುವ ಪ್ರಯತ್ನ ಮಾಡಲಾಗಿದೆ.

೧. ಕೃಷಿ

ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಇರುಳಿಗ ಸಮುದಾಯದವರಿಗೆ ತಮ್ಮ ಪೂರ್ವಜರಿಂದ ಬಂದ ಕೃಷಿಭೂಮಿ ಇಲ್ಲ. ಇವರಲ್ಲಿ ಬಹುತೇಕ ಕುಟುಂಬಗಳು ಕೃಷಿಕೂಲಿಗಳಾಗಿ ಬದುಕುತ್ತಿದ್ದಾರೆ. ನದಿ,

ಹಳ್ಳ, ಕಣಿವೆ, ನಿರ್ಜನ ಪ್ರದೇಶದಲ್ಲಿ ಅಲ್ಪಸ್ವಲ್ಪ ಪ್ರಮಾಣದ ಭೂಮಿಯನ್ನು ಇವರು ಕೃಷಿ ಯೋಗ್ಯ ಭೂಮಿಯಾಗಿ ಪರಿವರ್ತಿಸಿಕೊಂಡಿದ್ದಾರೆ. ಇಂತಹ ಸಾಗುವಳಿ ಭೂಮಿಗೆ ಯಾವುದೋ ಪಹಣಿ ಪಟ್ಟಗಳು ಸರಿಯಿಲ್ಲದೆ ನಿರಂತರ ಸಂಘರ್ಷದ ಹಾದಿಯಲ್ಲಿ ಕೃಷಿಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೆ. ಅದೇನಿದ್ದರೂ ಗುಂಟೆಗಳಲ್ಲಿ ಮಾತ್ರವೆ. ಇಂತಹ ಭೂಹಿಡುವಳಿಯಿಂದ ಇರುಳಿಗರ ಕುಟುಂಬಗಳು ಆರ್ಥಿಕವಾಗಿ ಸಬಲೀಕರಣಗೊಳ್ಳಲು ಸಾಧ್ಯವಿಲ್ಲದಾಗಿದೆ. ಆದರೂ ಇಂತಹ ಜಮೀನಿನಲ್ಲಿ ಇರುಳಿಗರು ರಾಗಿ, ಜೋಳ, ನೆಲೆಗಡಲೆ ಇತ್ಯಾದಿಗಳನ್ನು ಬೆಳೆಯುತ್ತಿದ್ದಾರೆ.

ನಾಲ್ಕು ತಾಲೂಕುಗಳ ೧೫೬೫ ಕುಟುಂಬಗಳಲ್ಲಿ ೭೦೭ ಕುಟುಂಬಗಳು ಭೂಹಿಡುವಳಿಯನ್ನು ಹೊಂದಿದ್ದು ಶೇ. ೪೫.೧೮ರಷ್ಟು ಕುಟುಂಬಗಳು ಭೂಒಡೆತನ ಹೊಂದಿವೆ. ಅದರಲ್ಲಿ ಶೇ. ೯೮.೪೮ರಷ್ಟು ಒಣಭೂಮಿ ಆಗಿದೆ. ನೀರಾವರಿ ಕೃಷಿಭೂಮಿ ಶೇ. ೧.೫೨ರಷ್ಟು ಮಾತ್ರ. ಜಿಲ್ಲೆಯಲ್ಲಿ ಉಳಿದ ೮೫೮ ಕುಟುಂಬಗಳಲ್ಲಿ ಶೇ. ೫೪.೮೨ರಷ್ಟು ಭೂರಹಿತ ಕುಟುಂಬಗಳಾಗಿವೆ. ಈ ಸಮುದಾಯ ಬಹುತೇಕ ಜನರು ಕೃಷಿಗೆ ಸಂಬಂಧಿಸಿದ ವೃತ್ತಿಯನ್ನು ಬಿಟ್ಟು ಬೇರಾವುದೇ ಕಸುಬಿಗೆ ಮನಸ್ಸು ಮಾಡಿದವರಲ್ಲ. ದಿನದ ಆಹಾರಕ್ಕೆ ಬೇಕಾದಷ್ಟಾದರೂ ಕೃಷಿ ಕಸುಬು ಮಾಡುವುದರಲ್ಲೇ ಅವರಿಗೆ ನಂಬಿಕೆ. ಹೆಣ್ಣುಮಕ್ಕಳು ಕೂಡ ಕೃಷಿ ಕಸುಬಿನಲ್ಲಿಯೇ ಹೆಚ್ಚು ತೊಡಗಿಸಿಕೊಂಡು ಮುಂದುವರಿಯುತ್ತಿದ್ದಾರೆ. ಜಿಲ್ಲಾ ವ್ಯಾಪ್ತಿಯಲ್ಲಿ ಅತಿಹೆಚ್ಚು ಕೃಷಿಯಲ್ಲಿ ತೊಡಗಿರುವ ತಾಲೂಕು ಕನಕಪುರವಾಗಿದ್ದರೆ, ಇತರ ತಾಲೂಕುಗಳಲ್ಲಿ ಸಾಮಾನ್ಯವಾಗಿ ಕೃಷಿ ಚಟುವಟಿಕೆಗಳು ಕಂಡುಬರುತ್ತದೆ.

ಒಟ್ಟಿನಲ್ಲಿ ಪಾರಂಪರಿಕ ಕೃಷಿಕರಾದ ಇರುಳಿಗರು ವರ್ತಮಾನದಲ್ಲಿ ಕೃಷಿಕೂಲಿಗಳಾಗಿ ಬದುಕುತ್ತಿದ್ದಾರೆ. ಕೇತ್ಲು ಬೇಸಾಯದ ಸಂದರ್ಭದಲ್ಲಿ ಸ್ವತಂತ್ರವಾಗಿ ಎಲ್ಲೆಂದರಲ್ಲಿ ಕಾನನ ಒಡಲಲಿ ಕೃಷಿ ಮಾಡುತ್ತಿದ್ದ ಇರುಳಿಗರು ಅದಕ್ಕೆ ನಿರ್ಬಂಧವಾದ ನಂತರ ತಮ್ಮ ಅಲೆಮಾರಿ ಕೃಷಿಯನ್ನು ನಿಲ್ಲಿಸಬೇಕಾಯಿತು. ನಂತರದ ಕಾಲಘಟ್ಟದಲ್ಲಿ ಕೃಷಿಭೂಮಿಗೆ ದಾಖಲೆಗಳು ಸೃಷ್ಟಿಯಾದವು. ಜೊತೆಗೆ ಸ್ಥಳೀಯ ಬಲಾಢ್ಯ ಸಮುದಾಯವು ತನಗೆ ಬೇಕಾದ ಭೂಮಿಯ ದಾಖಲೆಗಳನ್ನು ಸೃಷ್ಟಿಸಿ ಕೃಷಿಭೂಮಿಯನ್ನು ತಮ್ಮದಾಗಿಸಿ ಕೊಂಡರು. ಹೀಗಾಗಿ ರಾಮನಗರ ಪ್ರದೇಶದ ದಟ್ಟ ಕಾಡುಗಳು ರಾಜಧಾನಿಗೆ ಸಮೀಪವಿರುವುದರಿಂದ ಪ್ರಬಲ ಭೂಮಾಫಿಯಗಳ ಕೈಗೆ ಸಿಕ್ಕಿ ಕಾಡುಗಳಲ್ಲಿ ಇರುಳಿಗರಂತಹ ಆದಿವಾಸಿ ಸಮುದಾಯಗಳು ಶಾಶ್ವತವಾಗಿ ತಮ್ಮ ಕೃಷಿ ಭೂಮಿ ಕಳೆದುಕೊಂಡರು. ಅನಂತರ ನೆಲೆನಿಂತ ಕಡೆಯಲ್ಲಿ ಸಿಕ್ಕ ತುಂಡು ಭೂಮಿಯನ್ನು ಕೃಷಿಯೋಗ್ಯವಾಗಿಸಿಕೊಂಡು ದುಡಿಯುತ್ತಿದ್ದಾರೆ.

೨. ಕೃಷಿಕೂಲಿ

ಕೃಷಿಕೂಲಿ ಎಂದರೆ ಬೇರೆಯವರ ಜಮೀನಿನಲ್ಲಿ ಗೊತ್ತುಪಡಿಸಿದ ಕೆಲಸಕ್ಕಾಗಿ ಸಂಬಳದ ರೂಪದಲ್ಲಿ ಹಣ ಇಲ್ಲವೇ ಧಾನ್ಯಗಳನ್ನು ಪರ್ಯಾಯವಾಗಿ ಪಡೆಯುವುದು. ರಾಷ್ಟ್ರೀಯ ಕಾರ್ಮಿಕ ಆಯೋಗದ ಪ್ರಕಾರ "ಮೂಲಭೂತವಾಗಿ ನಿಪುಣರಲ್ಲದ ಮತ್ತು ಅಸಂಘಟಿತರಾದ ಹಾಗೂ ಜೀವನೋಪಾಯಕ್ಕಾಗಿ ಶ್ರಮವನ್ನೇ ಹೊರತುಪಡಿಸಿ ಬೇರೇನೂ ಇಲ್ಲದ ವ್ಯಕ್ತಿ ಕೃಷಿಕಾರ್ಮಿಕ"[೧೦].

ಇರುಳಿಗ ಸಮುದಾಯದಲ್ಲಿ ಕೃಷಿಕೂಲಿಯನ್ನು ಹೆಚ್ಚಾಗಿ ಜಿಲ್ಲಾದ್ಯಂತ ಮಾಡುತ್ತಿರುವುದು ಅಂಕಿ ಅಂಶಗಳಿಂದ ಕಂಡುಬಂದಿದೆ. ಪುರುಷರಷ್ಟೇ ಮಹಿಳೆಯರು ಕೃಷಿಕೂಲಿ ಮಾಡಲು ಹೋಗುವುದು ಇರುಳಿಗರಲ್ಲಿ ಕಂಡುಬರುತ್ತದೆ. ಈ ಕಸುಬು ಮಹತ್ವದ ಆರ್ಥಿಕ ಚಟುವಟಿಕೆಯಾಗಿದೆ. ಶ್ರಮದ ಪ್ರತಿಫಲವಾಗಿ ಇವರು ಪಡೆಯುವ ಕೂಲಿಯು ಅವರ ಆರ್ಥಿಕ ಸ್ಥಿತಿಗತಿಯ ಜೊತೆಗೆ ಇವರ ಸಾಮಾಜಿಕ ಜೀವನ ವಿಧಾನವನ್ನು ಸಹ ತೋರಿಸುತ್ತದೆ. ಕೂಲಿ ಕಸುಬು ನಿರ್ವಹಿಸಲು ಬಲಾಢ್ಯ ಸಮುದಾಯದ ಹಾಗೂ ಸುತ್ತಮುತ್ತಲಿನ ಭೂಮಾಲೀಕರ ಕೃಷಿ ಜಮೀನುಗಳಿಗೆ, ತೋಟಗಳಿಗೆ ಹೋಗುತ್ತಾರೆ. ಯಾವ ಯಾವ ಬೆಳೆಗಳು ಕಟಾವಿಗೆ ಬರುತ್ತದೋ ಅಂತಹ ಸುಗ್ಗಿಯ ಕಾಲದಲ್ಲಿ ಕೂಲಿ ಮಾಡುತ್ತಾರೆ. ನಾಟಿ, ಕಟಾವು, ಕಳೆ ತೆಗೆಯುವುದು, ತೆನೆ ತೆಗೆಯುವುದು, ಒಕ್ಕಣೆ ಮಾಡುವುದು ಮುಂತಾದ ಕೃಷಿ ಸಂಬಂಧಿ ಕಾರ್ಯಗಳಲ್ಲಿ ದುಡಿಯುತ್ತಾರೆ. ಕೂಲಿ ಬೆಳಿಗ್ಗೆಯಿಂದ ಸಂಜೆಯವರೆಗೆ ನಿಗದಿಯಾಗಿದ್ದು ದಿನದ ಕೂಲಿ ಮಾಡುವುದು ಜಿಲ್ಲೆಯಲ್ಲಿ ಕಂಡುಬರುತ್ತದೆ. ಆದರೆ ಕೃಷಿ ಕೂಲಿಯಲ್ಲಿ ಲಿಂಗತಾರತಮ್ಯ ವ್ಯವಸ್ಥೆಯು ಎದ್ದು ಕಾಣಿಸುತ್ತದೆ. ಮಹಿಳೆ ಮತ್ತು ಪುರುಷ ಕೃಷಿಕೂಲಿಗಳು ನಿಗದಿತ ಸಮಯದಲ್ಲಿ ಕೆಲಸವನ್ನು ಪ್ರಾರಂಭ ಮಾಡಿ ಸಂಜೆ ಕೆಲಸವನ್ನು ಪೂರ್ಣಗೊಳಿಸುವ ಸಮಯ ಒಂದೇ ಆಗಿದ್ದರೂ ಕೊಡುವ ಕೂಲಿ ಹಣದಲ್ಲಿ ಮಾತ್ರ ವ್ಯತ್ಯಾಸ ಕಂಡುಬರುತ್ತದೆ. ಇದರ ಬಗ್ಗೆ ಪ್ರಶ್ನಿಸಿದರೆ ಗಂಡು ಆಳುಗಳಿಗೆ ಬೇರೆ ಕೂಲಿ, ಹೆಣ್ಣು ಆಳುಗಳಿಗೆ ಬೇರೆ ರೀತಿಯ ಕೂಲಿ ಇದೆ. ಇದು ಹಿಂದಿನಿಂದಲೂ ಬಂದಿರುವ ಪದ್ಧತಿ ಎಂಬ ಉತ್ತರ ಬರುತ್ತದೆ. ನಾವೇನಾದರೂ ಹೆಚ್ಚು ಕೂಲಿ ಅಥವಾ ಸಮಾನ ಕೂಲಿ ಕೇಳಿದರೆ ನಾಳೆಯಿಂದ ಕೆಲಸಕ್ಕೆ ಬರಬೇಡಿ ಎಂಬ ಉತ್ತರ ಬರುತ್ತದೆ ಎಂಬ ತಮ್ಮ ಆಳಲನ್ನು ತೋಡಿಕೊಳ್ಳುತ್ತಾರೆ.

ಕನಕಪುರ ತಾಲೂಕಿನಲ್ಲಿ ಕೃಷಿಕೂಲಿಗಳನ್ನು ನೋಡಿದಾಗ ಪುರುಷರು ಶೇ. ೨೪.೭೮ರಷ್ಟು ಮಹಿಳೆಯರು ಶೇ. ೨೫.೪೦ರಷ್ಟಿದ್ದಾರೆ. ಪುರುಷರಿಗಿಂತ ಮಹಿಳಾ ಕೃಷಿಕೂಲಿಗಳು ಅಧಿಕವಾಗಿರುವುದು ಕಂಡುಬರುತ್ತದೆ. ಚನ್ನಪಟ್ಟಣದಲ್ಲಿ ಪುರುಷರು ಶೇ. ೨೮.೭೫ರಷ್ಟು, ಮಹಿಳೆಯರು ೩೬.೦೦ರಷ್ಟಾಗಿದೆ. ಮಾಗಡಿ ತಾಲೂಕಿನಲ್ಲಿ ಪುರುಷರು ಶೇ. ೭೯.೬೧ರಷ್ಟು ಮಹಿಳೆಯರು ಶೇ. ೮೧.೫೦ರಷ್ಟಿದ್ದಾರೆ. ರಾಮನಗರ ತಾಲೂಕಿನಲ್ಲಿ ಪುರುಷರು ಶೇ. ೭೪.೩೦ರಷ್ಟಿದ್ದು, ಮಹಿಳೆಯರು ಶೇ. ೭೮.೪೦ರಷ್ಟಿದ್ದಾರೆ. ಪ್ರತಿ ತಾಲೂಕಿನ ಅಂಕಿಸಂಖ್ಯೆಯನ್ನು ಗಮನಿಸಿದರೆ ಪುರುಷ ಕೃಷಿಕೂಲಿಗಳಿಗಿಂತ ಮಹಿಳಾ ಕೃಷಿಕೂಲಿಗಳೇ ಅಧಿಕವಾಗಿದ್ದಾರೆ. ಇದಕ್ಕೆ ಬಹುಮುಖ್ಯ ಕಾರಣ ಇರುಳಿಗರಲ್ಲಿ ಪುರುಷರಿಗಿಂತ ಮಹಿಳಾ ಸಾಕ್ಷರತಾ ಪ್ರಮಾಣ ಕಡಿಮೆಯಾಗಿರುವುದು ಹಾಗೂ ಕೌಟುಂಬಿಕ ಹೊಣೆಗಾರಿಕೆಯಲ್ಲಿ ಹೆಚ್ಚು ಮಹಿಳೆಯರೇ ತೊಡಗಿಸಿಕೊಂಡಿರುವುದೇ ಆಗಿದೆ. ಜಿಲ್ಲೆಯಲ್ಲಿನ ಕಸುಬುಗಳಲ್ಲಿ ಅತಿಹೆಚ್ಚು ಶೇ. ೪೮.೯ರಷ್ಟು ಜನರು ಕೃಷಿಕೂಲಿಯನ್ನು ಅವಲಂಬಿಸಿದ್ದು ಇತರೆ ಎಲ್ಲಾ ಕಸುಬುಗಳಿಗಿಂತ ಇದೇ ವೃತ್ತಿಯಲ್ಲಿ ಈ ಸಮುದಾಯದ ಜನರು ತೊಡಗಿಸಿಕೊಂಡಿರುವುದು ವಿಶೇಷವಾಗಿದೆ.

೩. ತೋಟದ ಕಾವಲು

ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಎರಡು ರೀತಿಯ ತೋಟದ ಕಾವಲುಗಳು ಕಂಡುಬರುತ್ತದೆ. ತೋಟಗಾರಿಕೆ ಬೆಳೆಯಾದ ಮಾವಿನತೋಟವು ಜಿಲ್ಲೆಯ ವ್ಯಾಪ್ತಿಯಲ್ಲಿ ಅಧಿಕವಾಗಿದ್ದು ಮಾವಿನ ಫಸಲು ಬರುವ ಸಮಯದಲ್ಲಿ ವರ್ಷದಲ್ಲಿ ಮೂರು ತಿಂಗಳಿಗೂ ಹೆಚ್ಚು ಸಮಯ ಮಾವಿನ ತೋಟಗಳಲ್ಲಿ ಫಸಲು ಕಾವಲಿನ ಕೆಲಸಕ್ಕೆ ಇರುಳಿಗರು ಕುಟುಂಬ ಸಮೇತರಾಗಿ ಹೋಗುತ್ತಾರೆ. ಮತ್ತೊಂದು ರೀತಿಯ ತೋಟದ ಕಾವಲು ರಾಮನಗರ, ಮಾಗಡಿ, ಕನಕಪುರ ಪ್ರದೇಶದಲ್ಲಿ ಬೆಂಗಳೂರು ನಗರದ ಶ್ರೀಮಂತರು ತೋಟಗಳನ್ನೇ ಎಸ್ಟೇಟ್‌ಗಳಾಗಿ ಮಾಡಿಕೊಂಡಿರುವುದರಿಂದ ಇಂತಹ ಎಸ್ಟೇಟ್‌ಗಳ ಕಾವಲಿನ ಕೆಲಸಕ್ಕೆ ಇರುಳಿಗರ ಸಮುದಾಯದ ಬಹುತೇಕ ಕುಟುಂಬಗಳು ಹೋಗುತ್ತವೆ. ಕನಕಪುರ ತಾಲೂಕಿನಲ್ಲಿ ಎಸ್ಟೇಟ್ ಮಾಲೀಕರ ತೋಟಗಳಲ್ಲಿನ ಕಾವಲಿಗೆ ತಾತ್ಕಾಲಿಕ ವಲಸಿಗರಾಗಿ ನೆಲೆಸಿರುವ ಇರುಳಿಗ ಸಮುದಾಯದ ಪುರುಷರ ಪ್ರಮಾಣ ಶೇ. ೧೨.೩೬ರಷ್ಟು, ಮಹಿಳೆಯರು ಶೇ. ೧೦.೩೫ರಷ್ಟು, ರಾಮನಗರ ತಾಲೂಕಿನ ವ್ಯಾಪ್ತಿಯಲ್ಲಿ ಕಂಡುಬರುತ್ತದೆ. ಪುರುಷರು ಶೇ. ೬.೪೭ರಷ್ಟಿದ್ದಾರೆ. ಶೇ. ೫.೯೪ರಷ್ಟು ಮಹಿಳೆಯರಿದ್ದಾರೆ. ಮಾಗಡಿ ತಾಲೂಕಿನಲ್ಲಿ ಶೇ. ೩.೮೮ರಷ್ಟು ಪುರುಷರು, ಶೇ. ೨.೩೧ರಷ್ಟು ಮಹಿಳೆಯರು ತೋಟದ ಕಾವಲಿನ ಕಾರ್ಯನಿರ್ವಹಿ ಸುತ್ತಿದ್ದಾರೆ. ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು ಸಮುದಾಯದಲ್ಲಿ ಶೇ. ೮.೩೧ರಷ್ಟು ಜನರು ಈ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದು, ಜಿಲ್ಲೆಯಲ್ಲಿನ ಮೂರನೇ ಅತಿ ದೊಡ್ಡ ಕಸುಬಾಗಿದೆ. ಈ ವೃತ್ತಿಯಿಂದ ತಾತ್ಕಾಲಿಕವಾದ ಆರ್ಥಿಕ ಹಾಗೂ ಸಾಮಾಜಿಕ ನೆಲೆ ದೊರೆತರೂ ಇವರ ಮಕ್ಕಳ ಶಿಕ್ಷಣ ವ್ಯವಸ್ಥೆಯ ಮೇಲೆ ಕರಾಳ ಪರಿಣಾಮ ಬೀರುತ್ತಿರುವುದು ಕಂಡುಬಂದಿದೆ. ಪ್ರತಿ ಶೈಕ್ಷಣಿಕ ವರ್ಷದ ಪರೀಕ್ಷೆಯ ಸಮಯಕ್ಕೆ ಸರಿಯಾಗಿ ಫೆಬ್ರವರಿ–ಏಪ್ರಿಲ್ ತಿಂಗಳಲ್ಲಿ ಮಾವಿನ ಫಸಲು ಬರುವುದರಿಂದ ಈ ಸಮಯದಲ್ಲಿಯೇ ಕುಟುಂಬ ಸಮೇತರಾಗಿ ತೋಟದ ಕಾವಲಿನ ದೂರದ ಪ್ರದೇಶಗಳಿಗೆ ಹೋಗುವುದರಿಂದ ಶೈಕ್ಷಣಿಕವಾಗಿ ಪರಿಣಾಮ ಬೀರಿದೆ. ಹಾಗೆಯೇ ಎಸ್ಟೇಟ್‌ಗಳಲ್ಲಿ ತೋಟದ ಕಾವಲು ಮಾಡುವ ಈ ಸಮುದಾಯವು ಕುಟುಂಬ ಸಮೇತರಾಗಿ ಅಲ್ಲಿ ವಾಸಿಸುವಾಗಲೂ ಶಾಲೆಯಿಂದ ದೂರದ ಪ್ರದೇಶಗಳಲ್ಲಿ ಎಸ್ಟೇಟ್‌ಗಳು ಇರುವುದರಿಂದ ಇವರ ಮಕ್ಕಳು ಶಾಲೆಗೆ ಹೋಗಲು ಸಾಧ್ಯವಾಗದೆ ಮಕ್ಕಳ ಶೈಕ್ಷಣಿಕ ಪ್ರಗತಿ ಕುಂಠಿತವಾಗುತ್ತಿದೆ. ತಮ್ಮ ಮೂಲ ಸ್ಥಳಗಳಲ್ಲಿ ಬದುಕು ನಡೆಸಲು ಸಾಧ್ಯವಾಗದೆ, ಕೆಲಸ ಅರಸಿಬಂದ ಸ್ಥಳಗಳಲ್ಲಿ ಮಕ್ಕಳ ಭವಿಷ್ಯದ ಬಗ್ಗೆ ಚಿಂತಿಸಲು ಸಾಧ್ಯವಾಗದಂತಹ ಅನಿವಾರ್ಯತೆ ಇರುಳಿಗರದ್ದು.

೪. ರೇಷ್ಮೆಗಾರಿಕೆ

ರೇಷ್ಮೆ ಕೃಷಿಯು ರಾಮನಗರ ಜಿಲ್ಲೆಯ ಬಹುಮುಖ್ಯವಾದ ತೋಟಗಾರಿಕೆ ಬೆಳೆಯಾಗಿದೆ. ಈ ಬೆಳೆ ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಜನಪ್ರಿಯ ತೋಟಗಾರಿಕ ಬೆಳೆಯಾಗಿದೆ. ಐತಿಹಾಸಿಕವಾದ ನೆಲೆಯನ್ನು ಹೊಂದಿದ್ದು, ರಾಮನಗರ ರಾಜ್ಯದಲ್ಲೇ ಅತಿಹೆಚ್ಚು ರೇಷ್ಮೆ ಉತ್ಪಾದನೆ ಮಾಡುವ ಜಿಲ್ಲೆಯಾಗಿದೆ. ಏಷ್ಯಾದಲ್ಲೇ ಅತಿದೊಡ್ಡ ರೇಷ್ಮೆಗೂಡಿನ ಮಾರುಕಟ್ಟೆಯನ್ನು ಹೊಂದಿರುವ ಹೆಗ್ಗಳಿಕೆಯನ್ನು

ರಾಮನಗರ ಪಡೆದಿದೆ. ಭಾರತದಲ್ಲೇ ಅತಿಹೆಚ್ಚು ರೇಷ್ಮೆ ಉತ್ಪಾದನೆ ಮಾಡುವ ರಾಜ್ಯ ಕರ್ನಾಟಕವಾಗಿದ್ದು, ಅದರಲ್ಲೂ ರಾಜ್ಯದಲ್ಲಿ ಹೆಚ್ಚು ರೇಷ್ಮೆಗೂಡು ಬಿಚ್ಚುವ ಹಾಗೂ ಮಾರುಕಟ್ಟೆಯ ಕೇಂದ್ರದಿಂದ ಈ ಜಿಲ್ಲೆ ಹೆಸರು ಉಳಿಸಿಕೊಂಡಿದೆ.

ರೇಷ್ಮೆ ಕೃಷಿಗೆ ಬೇಕಾದ ಅತಿ ಉತ್ತಮವಾದ ವಾತಾವರಣ ಹಾಗೂ ನೈಸರ್ಗಿಕ ಮಣ್ಣನ್ನು ಈ ಜಿಲ್ಲೆಯು ಹೊಂದಿದೆ. ಇತರೆ ಸಮುದಾಯವರು ಅತಿಹೆಚ್ಚು ಬೆಳೆಯುವ ತೋಟಗಾರಿಕೆ ಬೆಳೆ ರೇಷ್ಮೆಕೃಷಿಯಾಗಿದ್ದು ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಕನಕಪುರ ತಾಲೂಕಿನಲ್ಲಿ ವಾಸಿಸುವ ಇರುಳಿಗರ ಸಮುದಾಯದ ಜನರು ರೇಷ್ಮೆ ಕೃಷಿ ಕಸುಬಿನಲ್ಲಿ ತೊಡಗಿಸಿಕೊಂಡ ಪುರುಷರು ಶೇ. ೧೪.೧೬ರಷ್ಟಾಗಿದ್ದು, ಮಹಿಳೆಯರು ಶೇ. ೧೭.೫೦ರಷ್ಟಿದ್ದಾರೆ. ಈ ಸಮುದಾಯ ಮಹಿಳೆಯರು ಹೆಚ್ಚಾಗಿ ಕೃಷಿಗೆ ಒತ್ತು ನೀಡಿರುವುದು ಕಾಣಸಿಗುತ್ತದೆ. ಚನ್ನಪಟ್ಟಣ, ರಾಮನಗರ, ಮಾಗಡಿ ಪ್ರದೇಶಗಳಲ್ಲಿ ಇರುಳಿಗರ ಸಮುದಾಯದ ಜನರು ರೇಷ್ಮೆ ಕೃಷಿಯಲ್ಲಿ ತೊಡಗಿಸಿಕೊಳ್ಳದಿದ್ದರೂ ಕೃಷಿಕೂಲಿಗಳಾಗಿ ರೇಷ್ಮೆ ಕೃಷಿಯಲ್ಲಿ ಪಾಲ್ಗೊಳ್ಳುತ್ತಿರುವುದನ್ನು ಕಾಣಬಹುದು. ರೇಷ್ಮೆ ಕೃಷಿಗೆ ಬೇಕಾದ ಉತ್ತಮವಾದ ವಸತಿ ಸೌಲಭ್ಯಗಳು ನೀರಾವರಿ ಹಿಡುವಳಿ ಭೂಮಿಯನ್ನು ಹೊಂದಲು ಸಾಧ್ಯವಾಗದ ಕಾರಣ ಇತರೆ ಮೂರು ತಾಲೂಕಿನಲ್ಲಿ ಈ ಕೃಷಿಗೆ ಅತಿ ಪ್ರಾಮುಖ್ಯತೆ ಸಿಕ್ಕಿರುವುದಿಲ್ಲ ಎನಿಸುತ್ತದೆ. ಒಟ್ಟಾರೆ ಜಿಲ್ಲಾ ವ್ಯಾಪ್ತಿಯಲ್ಲಿ ಈ ಸಮುದಾಯದ ಜನರು ಶೇ. ೮.೧೨ರಷ್ಟು ರೇಷ್ಮೆಕೃಷಿಯಲ್ಲಿ ತೊಡಗಿಸಿಕೊಂಡಿರುವುದು ಅಂಕಿ ಅಂಶಗಳಿಂದ ತಿಳಿದುಬರುತ್ತದೆ.

೫. ಗಾರೆಕೆಲಸ

ರಾಮನಗರ ಜಿಲ್ಲಾ ವ್ಯಾಪ್ತಿಯು ಬೆಂಗಳೂರು ನಗರಕ್ಕೆ ಹತ್ತಿರವಾಗಿದ್ದು ನಗರೀಕರಣ ಹೊಂದುವ ನಗರವಾಗಿದೆ. ಸಾಮಾನ್ಯವಾಗಿ ಇದರ ಛಾಯೆ ಈ ಜಿಲ್ಲೆಯ ಪ್ರದೇಶಗಳ ಮೇಲೆ ಉಂಟಾಗುತ್ತಿದ್ದು ಕಟ್ಟಡದ ಕಾಮಗಾರಿಕೆ ಕೆಲಸಗಳು ಬಹಳಷ್ಟು ನಡೆಯುತ್ತವೆ. ಇರುಳಿಗರು ಜೀವನ ನಿರ್ವಹಣೆಗಾಗಿ ಗಾರೆಕೆಲಸವನ್ನು ಅವಲಂಬಿಸಿದ್ದು ಕನಕಪುರ ತಾಲೂಕಿನ ಪ್ರದೇಶದಲ್ಲಿನ ಶೇ. ೯.೨೨ರಷ್ಟು ಪುರುಷರು ಹಾಗೂ ಶೇ. ೧೧.೧೦ರಷ್ಟು ಮಹಿಳೆಯರು ಕಂಡುಬರುತ್ತಾರೆ. ಚನ್ನಪಟ್ಟಣ ತಾಲೂಕಿನಲ್ಲಿ ಪುರುಷರು ಶೇ. ೨೦.೦೦ರಷ್ಟು, ಶೇ. ೨೪ರಷ್ಟು ಮಹಿಳೆಯರು ಗಾರೆಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ರಾಮನಗರ ಮತ್ತು ಮಾಗಡಿ ತಾಲೂಕುಗಳ ವ್ಯಾಪ್ತಿಯಲ್ಲಿ ಈ ಸಮುದಾಯದ ಜನರು ಗಾರೆಕೆಲಸವನ್ನು ಮಾಡುತ್ತಿರುವುದು ಕಂಡುಬರುವುದಿಲ್ಲವಾದರೂ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು ಶೇ. ೭.೧೭ರಷ್ಟು ಜನರು ಗಾರೆಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ.

ಚನ್ನಪಟ್ಟಣ ಮತ್ತು ಕನಕಪುರ ಪ್ರದೇಶದ ವ್ಯಾಪ್ತಿಯಲ್ಲಿ ಮಹಿಳೆಯರು ಹೆಚ್ಚಾಗಿ ಈ ಕೆಲಸಗಳಲ್ಲಿ ತೊಡಗಿರುವುದು ಕಾಣಸಿಗುತ್ತದೆ. ಕೃಷಿಕೂಲಿಗಿಂತ ಹೆಚ್ಚು ಕೂಲಿ ಗಾರೆಕೆಲಸದಲ್ಲಿ ದೊರೆಯುವುದರಿಂದ ಮಹಿಳೆಯರು ಇದೇ ವೃತ್ತಿಯನ್ನು ಅವಲಂಬಿಸಿದ್ದಾರೆ. ಜೊತೆಗೆ ತಮ್ಮ ಕುಟುಂಬದಲ್ಲಿ ಆರ್ಥಿಕ ಮುಗ್ಗಟ್ಟಿನ ಸಮಯದಲ್ಲಿ ಮುಂಗಡ ಹಣವನ್ನು ಪಡೆದು ಕೆಲಸ ಮಾಡುವ ಪದ್ಧತಿಯು ಈ ಕೆಲಸದಲ್ಲಿರುವುದರಿಂದ ಹಾಗೂ ವರ್ಷದ ಎಲ್ಲಾ ಸಮಯದಲ್ಲಿ ನಿರಂತರವಾಗಿ ಕೂಲಿ ಸಿಗುತ್ತದೆ.

೬. ಇಟ್ಟಿಗೆ ಭಟ್ಟಿ

ನಗರೀಕರಣದ ಪ್ರಭಾವದಿಂದ ನಗರಗಳಲ್ಲಿ ಕಟ್ಟಡಗಳು ಬಹಳ ವೇಗವಾಗಿ ನಿರ್ಮಾಣವಾಗುತ್ತಿವೆ. ಗೃಹ ಮತ್ತು ಕೈಗಾರಿಕರಣ ನಿರ್ಮಾಣಕ್ಕೆ ಅತಿಅವಶ್ಯವಾಗಿದ್ದು ಕಟ್ಟಡ ಹಾಗೆಯೇ ಇದಕ್ಕೆ ಬೇಕಾದ ಪೂರಕ ಸಾಮಗ್ರಿ ಇಟ್ಟಿಗೆ. ಹೀಗಾಗಿ ಇಟ್ಟಿಗೆ ಭಟ್ಟಿಗಳು ಈ ಜಿಲ್ಲಾ ವ್ಯಾಪ್ತಿಯಲ್ಲಿ ಒಂದು ಉದ್ಯಮವಾಗಿ ರೂಪುಗೊಂಡಿರುವುದನ್ನು ಕಾಣಬಹುದು. ಬೆಂಗಳೂರು, ಮಂಡ್ಯ ಹಾಗೂ ಹೊಸೂರುಗಳಲ್ಲಿ ಈ ಜಿಲ್ಲೆಯ ಇಟ್ಟಿಗೆಗಳಿಗೆ ಅಪಾರವಾದ ಬೇಡಿಕೆ ಇದ್ದು ಇಂತಹ ಉದ್ಯಮದಲ್ಲಿ ಇರುಳಿಗ ಸಮುದಾಯದ ಯುವಕರು ಮತ್ತು ಮಧ್ಯವಯಸ್ಕರು ಹೆಚ್ಚಾಗಿ ತೊಡಗಿಸಿಕೊಂಡಿದ್ದಾರೆ. ಕನಕಪುರ ತಾಲೂಕಿನ ವ್ಯಾಪ್ತಿಯಲ್ಲಿ ಪುರುಷರು ಶೇ. ೧೫.೪ರಷ್ಟು, ಮಹಿಳೆಯರು ಶೇ. ೧೫.೯೦ರಷ್ಟಿದ್ದಾರೆ. ಚನ್ನಪಟ್ಟಣದ ವ್ಯಾಪ್ತಿಯಲ್ಲಿ ಪುರುಷರು ಶೇ. ೨೨.೫೦ರಷ್ಟು, ಮಹಿಳೆಯರು ಶೇ. ೨೪ರಷ್ಟು ಕಂಡುಬಂದರೆ, ಮಾಗಡಿ ತಾಲೂಕಿನ ವ್ಯಾಪ್ತಿಯಲ್ಲಿ ಪುರುಷರು ಶೇ. ೭.೭ರಷ್ಟಾಗಿದ್ದಾರೆ. ಮಹಿಳೆಯರು ಶೆ. ೪.೦೪ರಷ್ಟು ಕಂಡುಬರುತ್ತಾರೆ. ರಾಮನಗರ ವ್ಯಾಪ್ತಿಯಲ್ಲಿ ಪುರುಷರು ಶೇ. ೨.೫೩ರಷ್ಟಿದ್ದರೆ, ಮಹಿಳೆಯರು ಶೇ. ೨.೩೨ರಷ್ಟು ಈ ವೃತ್ತಿಯಲ್ಲಿ ತೊಡಗಿಸಿಕೊಂಡಿರುವುದು ಅಂಕಿಅಂಶಗಳಿಂದ ತಿಳಿದುಬರುತ್ತದೆ. ಈ ವೃತ್ತಿಯಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳಲು ಬಹುಮುಖ್ಯವಾದ ಕಾರಣ ವರ್ಷಪೂರ್ತಿ ಕೆಲಸ ದೊರೆಯುವಿಕೆ ಹಾಗೂ ಕೃಷಿಕೂಲಿಗಿಂತ ಅಧಿಕ ಕೂಲಿ ದೊರೆಯುವುದು. ಹಾಗೆಯೇ ಜಿಲ್ಲಾ ವ್ಯಾಪ್ತಿ ಪ್ರದೇಶಗಳಲ್ಲಿದ್ದ ಈ ಸಮುದಾಯದ ಕುಟುಂಬಗಳು ಇಟ್ಟಿಗೆ ಕಾರ್ಖಾನೆಯ ಬಳಿಯಲ್ಲೇ ಕುಟುಂಬ ಸಮೇತರಾಗಿ ತಾತ್ಕಾಲಿಕವಾಗಿ ವಾಸಿಸುತ್ತಿರುವುದನ್ನು ನೋಡಬಹುದಾಗಿದೆ.

೭. ಮರಳುಗಾರಿಕೆ

ಮರಳು ಕಟ್ಟಡ ನಿರ್ಮಾಣಕ್ಕೆ ಅಗತ್ಯವಾಗಿ ಬೇಕಾದ ಒಂದು ಕಚ್ಚಾವಸ್ತು. ಜಿಲ್ಲೆಯ ವ್ಯಾಪ್ತಿಯಲ್ಲಿ ಅತ್ಯಂತ ಬೇಡಿಕೆಯ ಬಹುಚರ್ಚಿತ ವಿಷಯವಾಗಿ ರೂಪುಗೊಂಡಿದೆ. ಬೆಂಗಳೂರು ಮಹಾನಗರದ ಕಟ್ಟಡ ಕಾಮಗಾರಿಗೆ ಈ ಜಿಲ್ಲಾ ವ್ಯಾಪ್ತಿಯಿಂದಲೇ ಸರಬರಾಜು ಆಗುತ್ತದೆ. ನೈಸರ್ಗಿಕವಾದ ಮರಳಿಗೆ ಬೇಡಿಕೆ ಮತ್ತು ಕಸುಬಿಗೆ ಅಪಾರ ಬೆಲೆ ಬಂದಿದ್ದು ಇದರಿಂದ ಜಿಲ್ಲೆಯ ಪ್ರಕೃತಿ ಮೇಲೆ ನಿರಂತರ ದಾಳಿಯಾಗುತ್ತಿದೆ. ಇದು ಅತಿಹೆಚ್ಚು ಕೂಲಿ ದೊರೆಯುವ ಅಪಾಯಕಾರಿಯಾದ ಉದ್ಯಮವಾಗಿದೆ. ಅಧಿಕ ಕೂಲಿಯ ಆಸೆಗಾಗಿ ಬಹಳಷ್ಟು ಜನರು ತಮ್ಮ ಪ್ರಾಣವನ್ನು ಕಳೆದುಕೊಂಡಿರುವ ಉದಾಹರಣೆಗಳು ಇವೆ. ಮರಳು ದಿಬ್ಬಗಳನ್ನು ಅಗೆಯುವ ಸಂದರ್ಭಗಳಲ್ಲಿ ಮರಳು ಒಮ್ಮೆಲೇ ಕೂಲಿನಿರತ ಕಾರ್ಮಿಕರ ಮೇಲೆ ಬಿದ್ದು ಸಾವು ಸಂಭವಿಸಿರುವ ಹಲವು ಪ್ರಸಂಗಗಳು ನಡೆದಿವೆ. ಕನಕಪುರ ತಾಲೂಕಿನ ವ್ಯಾಪ್ತಿಯ ಅರ್ಕಾವತಿ, ಕಾವೇರಿ ನದಿ ಪ್ರದೇಶ, ಚನ್ನಪಟ್ಟಣ ತಾಲೂಕಿನ ಕಣ್ವ ನದಿಯ ಪ್ರದೇಶಲ್ಲಿನ ಹಳ್ಳ, ತೊರೆ, ಕಣವೆ ಪ್ರದೇಶಗಳಲ್ಲಿ ಮರಳುಗಾರಿಕೆ ನಡೆಯುತ್ತಿದೆ. ಇಂತಹ ಪ್ರದೇಶಗಳಲ್ಲಿಯೇ ಇರುಳಿಗರ ವಾಸಸ್ಥಳಗಳು ಇರುವುದರಿಂದ ಸಹಜವಾಗಿ ಈ ವೃತ್ತಿಯಲ್ಲಿ ನಿರತರಾಗಿದ್ದಾರೆ. ಕನಕಪುರ ವ್ಯಾಪ್ತಿಯಲ್ಲಿ ಇರುಳಿಗರ ಪುರುಷರು ಶೇ. ೬.೨೬ರಷ್ಟು, ಮಹಿಳೆಯರು ಶೇ. ೫.೨೬ರಷ್ಟು

ತೊಡಗಿಸಿಕೊಂಡಿದ್ದಾರೆ. ಚನ್ನಪಟ್ಟಣ ಪ್ರದೇಶದಲ್ಲಿ ಪುರುಷರು ಶೇ. ೧೨.೫೦ರಷ್ಟು ಹಾಗೂ ಮಹಿಳೆಯರು ಶೇ. ೯.೩೩ರಷ್ಟು ತೊಡಗಿಸಿಕೊಂಡಿದ್ದಾರೆ. ಜಿಲ್ಲಾ ವ್ಯಾಪ್ತಿಯಲ್ಲಿ ಸಮುದಾಯದ ಜನರು ಒಟ್ಟಾರೆ ಶೇ. ೩.೪೯ರಷ್ಟು ಮರಳುಗಾರಿಕೆಯ ವೃತ್ತಿಯಲ್ಲಿ ತೊಡಗಿಸಿಕೊಂಡಿರುವುದು ಅಂಕಿಅಂಶಗಳಿಂದ ಕಂಡುಬರುತ್ತದೆ. ಈ ವೃತ್ತಿಯಲ್ಲಿ ಇತರೆ ಎಲ್ಲಾ ಕೂಲಿಗಳಿಗಿಂತ ಅಧಿಕ ಕೂಲಿ ದೊರೆಯುತ್ತದೆ. ಇತರೆ ಕೂಲಿಯಿಂದ ವಾರಪೂರ್ತಿ ದುಡಿದರೆ ಪಡೆಯುವಷ್ಟು ಹಣವನ್ನು ಒಂದು ದಿನ ಈ ವೃತ್ತಿಯಿಂದ ಸಂಪಾದಿಸುತ್ತಾರೆ. ಜೀವದ ಹಂಗನ್ನು ತೊರೆದು ಇಂತಹ ವೃತ್ತಿಯಲ್ಲಿ ತೊಡಗುವುದನ್ನು ನೋಡಿದರೆ ಇವರ ಆರ್ಥಿಕತೆಯು ಎಷ್ಟು ಶೋಚನೀಯ ಪರಿಸ್ಥಿತಿಯಲ್ಲಿರುವುದು ಎಂಬ ಅರಿವು ಆಗುತ್ತದೆ.

೮. ಸರ್ಕಾರಿ ನೌಕರಿ

ಇರುಳಿಗರಂಥ ಸಮುದಾಯಗಳಿಗೆ ಸರ್ಕಾರಿ ನೌಕರಿ ಎಂಬುದು ಗಗನಕುಸುಮವೇ ಸರಿ. ಸರ್ಕಾರಿ ಉದ್ಯೋಗಕ್ಕೆ ಕೆಲವೊಂದು ನಿರ್ದಿಷ್ಟಪಡಿಸಿದ ಮಾನದಂಡಗಳಿವೆ. ಶಿಕ್ಷಣ ತರಬೇತಿ ಹೊಂದಿದವರಿಗೆ ಇರುವ ಸರ್ಕಾರಿ ಉದ್ಯೋಗ ಇಂತಹ ತಳಸಮುದಾಯಗಳಿಗೆ ದೊರಕುವುದು ಕನಸಿನ ಮಾತಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ಶಿಕ್ಷಣ ಪಡೆಯಬೇಕೆಂದರೆ ಲಕ್ಷಾಂತರ ರೂಪಾಯಿ ಹಣವನ್ನು ವೆಚ್ಚ ಮಾಡಬೇಕು. ವ್ಯಾಸಂಗ ಮುಗಿಯವ ಹೊತ್ತಿಗೆ ಪೋಷಕರು ತಮ್ಮ ಬಳಿಯಿರುವ ಹಣ, ಆಸ್ತಿಯನ್ನೆಲ್ಲ ವೆಚ್ಚ ಮಾಡಬೇಕಾಗಿದೆ. ಇದು ಸಮಾಜದಲ್ಲಿನ ಶ್ರೀಮಂತ ಮತ್ತು ಮಧ್ಯಮ ವರ್ಗ ಸಮುದಾಯಗಳ ವ್ಯವಸ್ಥೆಯಾಗಿದ್ದು, ಇನ್ನು ದಿನಕ್ಕೆ ರೂ. ೧೦೦ ರಿಂದ ೧೫೦ ರೂಪಾಯಿ ಗಳಿಸಿ ಕೂಲಿ ಮಾಡಿ ಪ್ರತಿದಿನದ ತುತ್ತಿನ ಚೀಲವನ್ನು ತುಂಬಿಸಿಕೊಳ್ಳಲು ಹೆಣಗುತ್ತಿರುವ ಶ್ರಮಿಕ ಬುಡಕಟ್ಟು ಸಮುದಾಯಗಳಿಗೆ ಇಂತಹ ವಿಶೇಷ ಶಿಕ್ಷಣ ಪಡೆಯುವುದು ಅಸಾಧ್ಯದ ಮಾತಾಗಿದೆ.

ಇರುಳಿಗ ಸಮುದಾಯದಲ್ಲಿ ಉನ್ನತ ಶಿಕ್ಷಣ ಪಡೆದವರಂತು ಅತ್ಯಂತ ವಿರಳ ಹಾಗೂ ಅತ್ಯಲ್ಪ. ಶಿಕ್ಷಣ ಪಡೆದವರಿಗೆ ಸರ್ಕಾರಿ ನೌಕರಿ ಸಿಗುವುದು ದುರ್ಲಭದ ಮಾತೇ ಸರಿ. ಬಡತನದ ಕಾರಣದಿಂದಾಗಿ ಪ್ರೌಢಶಿಕ್ಷಣ ಪಡೆಯುವ ಹಂತಕ್ಕೆ ಬರುವ ಹೊತ್ತಿಗೆ ತಮ್ಮ ಮಕ್ಕಳನ್ನು ದುಡಿಮೆಗೆ ಕಳುಹಿಸಿ ಕುಟುಂಬ ನಿರ್ವಹಣೆಗೆ ಆರ್ಥಿಕವಾಗಿ ಕೈಜೋಡಿಸುವ ಅನಿವಾರ್ಯ ಪರಿಸ್ಥಿತಿ ಇರುವುದರಿಂದ ಉನ್ನತ ವಿದ್ಯಾಭ್ಯಾಸ ಮಾಡುವವರ ಸಂಖ್ಯೆ ವಿರಳವಾಗಿದೆ. ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದರೂ ಪಟ್ಟಿಯಲ್ಲಿರುವ ಇತರೆ ಪ್ರಭಾವಿ ಬಹುಸಂಖ್ಯಾತ ಸಮುದಾಯಗಳ ಜೊತೆ ಸ್ಪರ್ಧಿಸಬೇಕಾಗಿದೆ. ರಾಜಕೀಯವಾಗಿ ಯಾವುದೇ ಬಲವಿಲ್ಲದೆ ಇರುವುದರಿಂದ ಇತರೆ ಸಮುದಾಯಗಳ ಜೊತೆ ಪೈಪೋಟಿ ನಡೆಸುವುದು ಕಷ್ಟಸಾಧ್ಯವಾಗಿದೆ. ಕನಕಪುರ ಮತ್ತು ಚನ್ನಪಟ್ಟಣಗಳಲ್ಲಿ ತಲಾ ಒಬ್ಬರಂತೆ ಅರಣ್ಯ ಇಲಾಖೆಯಲ್ಲಿ ಪರಿಚಾರಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಮಾಗಡಿ ತಾಲೂಕಿನಲ್ಲಿ ಅಂಗನವಾಡಿ ಶಿಕ್ಷಕಿಯಾಗಿ, ರಾಮನಗರ ತಾಲೂಕಿನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಒಬ್ಬರು ಕಾರ್ಯನಿರ್ವಹಿಸುತ್ತಿದ್ದಾರೆ. ಜಿಲ್ಲಾ ವ್ಯಾಪ್ತಿಯಲ್ಲಿ ಸಮುದಾಯವು ಶೇ. ೦.೧೧೦ರಷ್ಟು ಸರ್ಕಾರಿ ನೌಕರಿ ಪಡೆದಿರುವುದು ಅಂಕಿ ಅಂಶಗಳಿಂದ ತಿಳಿದುಬರುತ್ತದೆ.

೯. ಖಾಸಗಿ ನೌಕರಿ

ರಾಮನಗರ ಜಿಲ್ಲಾದ್ಯಂತ ಇರುಳಿಗ ಸಮುದಾಯದಲ್ಲಿ ಭೂರಹಿತರೇ ಅಧಿಕವಾಗಿರುವುದು ಅಂಕಿ ಅಂಶಗಳಿಂದ ನೋಡಿದ್ದೇವೆ. ಇದರಿಂದಾಗಿ ಜೀವನ ನಿರ್ವಹಣೆಗಾಗಿ ಕೆಲಸ ಹುಡುಕಿಕೊಂಡು ತಾವು ವಾಸಿಸುವ ನೆಲೆಗಳಿಂದ ದೂರದ ನಗರ ಪ್ರದೇಶಗಳಿಗೆ ವಲಸೆ ಹೋಗಿರುವುದು ಸಾಮಾನ್ಯವಾಗಿದೆ. ಕಡಿಮೆ ಶಿಕ್ಷಣ ಪಡೆದ ಇರುಳಿಗ ಹೆಣ್ಣುಮಕ್ಕಳು ನಗರ ಪ್ರದೇಶದ ಖಾಸಗಿ ಆಸ್ಪತ್ರೆಗಳಲ್ಲಿ ಶುಶ್ರೂಷಿಕಿಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಿದ್ಧ ಉಡುಪುಗಳ ಕಾರ್ಖಾನೆಗಳಲ್ಲಿ ನೌಕರರಾಗಿ, ಬಟ್ಟೆ ಅಂಗಡಿ, ಖಾಸಗಿ ಸಹಭಾಗಿತ್ವ ಹಣಕಾಸು ಸಂಸ್ಥೆಗಳಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ ಪರಿಚಾರಕರಾಗಿ, ಹೊಟೇಲ್ ಮತ್ತು ಹಾಸ್ಟೇಲ್‌ಗಳಲ್ಲಿ ಅಡುಗೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವುದು ಕಂಡುಬಂದಿದೆ. ಮತ್ತೆ ಕೆಲವರು ಪಟ್ಟಣಗಳಲ್ಲಿನ ಶ್ರೀಮಂತರ ಮನೆಗಳಲ್ಲಿ ಮನೆಗೆಲಸದಲ್ಲಿ ಇರುವುದು ಕಂಡುಬಂದಿದೆ. ಜಿಲ್ಲಾದ್ಯಂತ ಶೇ. ೦.೨೦ರಷ್ಟು ಇರುಳಿಗರು ಖಾಸಗಿ ನೌಕರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಮುದಾಯದ ಜನರು ಪಾರಂಪರಿಕ ವೃತ್ತಿಗಳಿಂದ ಹೊರಬಂದು ಇತರೆ ಕೆಲಸದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತೊಡಗಿಸಿ ಕೊಂಡಿರುವುದು ಕಂಡುಬರುವುದಿಲ್ಲ.

೧೦. ಇತರೆ ವೃತ್ತಿಗಳು

ಜಿಲ್ಲೆಯಲ್ಲಿ ಮೇಲೆ ವಿವರಿಸಿದ ವೃತ್ತಿಗಳು ಮಾತ್ರವಲ್ಲದೇ ಇರುಳಿಗರು ಇತರೆ ವೃತ್ತಿಗಳಾದ ತೋಟದಲ್ಲಿ ಕಾಯಿ ಕೀಳುವುದು, ಗಣಿಗಾರಿಕೆ, ಸೌದೆ, ಬಿದಿರಿನ ಉತ್ಪನ್ನ ಮತ್ತು ಸಣ್ಣಪುಟ್ಟ ವ್ಯಾಪಾರಗಳನ್ನು ಮಾಡುತ್ತಿದ್ದಾರೆ.

ರಾಮನಗರ ಜಿಲ್ಲೆಯ ತೆಂಗಿನ ತೋಟಗಳಲ್ಲಿ ಹಾಗೂ ಮಾವಿನ ತೋಟಗಳಲ್ಲಿ ಕಾಯಿಗಳನ್ನು ಕೀಳುವ ವೃತ್ತಿಯಲ್ಲಿ ಚನ್ನಪಟ್ಟಣ ಮತ್ತು ಮಾಗಡಿ ರಾಮನಗರ ಪ್ರದೇಶದಲ್ಲಿನ ಇರುಳಿಗ ಸಮುದಾಯದ ಜನರು ಮಾಡುತ್ತಾರೆ. ಮಹಿಳೆಯರು ತೆಂಗಿನಕಾಯಿ ಮತ್ತು ಮಾವಿನ ಕಾಯಿಗಳನ್ನು ಸಾಗಿಸುವ ಕೆಲಸದಲ್ಲಿ ನಿರತರಾಗಿರುತ್ತಾರೆ. ಕನಕಪುರ ತಾಲೂಕಿನ ವ್ಯಾಪ್ತಿಯಲ್ಲಿ ಅತಿಹೆಚ್ಚು ಕಲ್ಲುಗಣಿಗಾರಿಕೆ ನಡೆಯುತ್ತಿದ್ದು ಈ ಕೆಲಸದಲ್ಲಿ ಸಮುದಾಯದ ಬಹುತೇಕ ಯುವಕರು ಮತ್ತು ಮಧ್ಯವಯಸ್ಸಿನ ಪುರುಷರು ದುಡಿಯುತ್ತಾರೆ. ಕೋಡಿಹಳ್ಳಿ, ಹುಣಸನಹಳ್ಳಿ, ಸಾತನೂರು ದೊಡ್ಡಆಲಹಳ್ಳಿಯ ಸುತ್ತಮುತ್ತಲಿನ ಪ್ರದೇಶ ಹಾಗೂ ರಾಮನಗರ ಪ್ರದೇಶ ಕಲ್ಲುಗೋಪನಹಳ್ಳಿ, ಚನ್ನಪಟ್ಟಣ ವ್ಯಾಪ್ತಿ ಮಂಗಹಳ್ಳಿ ಅರಣ್ಯ ಪ್ರದೇಶದಲ್ಲಿ ನಡೆಯುವ ಗಣಿಗಾರಿಕೆಯಲ್ಲಿ ಇವರು ಕೆಲಸ ಮಾಡುತ್ತಾರೆ. ಈ ವೃತ್ತಿಯಲ್ಲಿ ಪುರುಷರು ಮಾತ್ರ ಭಾಗವಹಿಸುತ್ತಿದ್ದಾರೆ. ರಾಮನಗರ ರಾಮದೇವರಬೆಟ್ಟ, ಏರೆಹಳ್ಳಿಫಾರೆಸ್ಟ್, ಮಾಗಡಿ ತಾಲೂಕಿನ ಜೇನುಕಲ್ಲಪಾಳ್ಯ, ಸಾವನದುರ್ಗದ ಪ್ರದೇಶದಲ್ಲಿ ಹೆಚ್ಚಾಗಿ ಸೌದೆ ಶೇಖರಣೆ ಕೆಲಸದಲ್ಲಿ ಈ ಸಮುದಾಯದ ಮಹಿಳೆಯರು ಹೆಚ್ಚಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮಾಕಳಿಬೇರು, ರೇಷ್ಮೆಚಂದ್ರಿಕೆ, ಬೆಟ್ಟದನೆಲ್ಲಿಕಾಯಿ ಮುಂತಾದ ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸಿ ವ್ಯಾಪಾರ ಮಾಡುತ್ತಾರೆ. ಜಿಲ್ಲೆಯ ವ್ಯಾಪ್ತಿಯಲ್ಲಿ ಇಂತಹ ಸಣ್ಣಪುಟ್ಟ ಕೆಲಸವನ್ನು ಅವಲಂಬಿಸಿರುವವರು ಶೇ. ೩.೯೦ರಷ್ಟು ಕಾಣಸಿಗುತ್ತಾರೆ.

ಒಟ್ಟಾರೆಯಾಗಿ ಇರುಳಿಗ ಸಮುದಾಯದ ಎಲ್ಲಾ ವೃತ್ತಿಗಳ ಅಂಕಿಸಂಖ್ಯೆಗಳನ್ನು ಗಮನಿಸಿದಾಗ ಜಿಲ್ಲೆಯಾದ್ಯಂತ ಈ ಸಮುದಾಯದ ಜನರು ದುಡಿಯುವ ವರ್ಗವಾಗಿದ್ದಾರೆ. ಪ್ರತಿದಿನದ ದುಡಿಮೆ ಅವರ ದಿನನಿತ್ಯದ ಜೀವನಕ್ಕೆ ಸಾಲದೆ ನಿರಂತರ ಜೀವನ ನಿರ್ವಹಣೆಗಾಗಿ ಹೆಣಗುತ್ತಿರುವುದು ಕಂಡುಬರುತ್ತದೆ. ಯಾವುದೇ ಹೊಸ ರೀತಿಯ ವೃತ್ತಿ ಕೌಶಲ್ಯವಾಗಲಿ ಹಾಗೂ ಜಾಗತೀಕರಣ ಸಂದರ್ಭದಲ್ಲಿ ತೆರೆದುಕೊಂಡಿರುವ ಹಲವು ಹತ್ತು ಹೊಸ ವೃತ್ತಿ ಆಧಾರಿತ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲಾಗದೆ ಇಂದಿಗೂ ಸಹ ಪಾರಂಪರಿಕ ತಮ್ಮ ಹಳೆಯ ವೃತ್ತಿಗಳನ್ನು ಬಿಡಲಾರದೆ ಸಂಘರ್ಷದಲ್ಲಿ ಇರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ. ಆದರೂ ಕಳೆದ ೩೦-೪೦ ವರ್ಷಗಳ ಹಿಂದೆ ಇದ್ದ ವೃತ್ತಿಗಳಿಂದ ಸ್ವಲ್ಪಮಟ್ಟಿಗೆ ಹೊಸ ವೃತ್ತಿಗಳ ಕಡೆಗೆ ಮುಖಮಾಡುತ್ತಿರುವುದು ಉತ್ತಮವಾದ ಬೆಳವಣಿಗೆಯಾಗಿದೆ.

೫.೧೯. ವಸತಿ ವ್ಯವಸ್ಥೆ

ಮನುಷ್ಯ ಅಲೆಮಾರಿ ಜೀವನದ ಸಮಯದಲ್ಲಿ ಪೊದೆ, ಗವಿ, ಬೆಟ್ಟದ ಬುಡ, ಮರದ ಪೊಟರೆಗಳಲ್ಲಿ ವಾಸಿಸುತ್ತಿದ್ದ. ಈ ಹಂತದಲ್ಲಿ ಬೇಟೆಯೇ ಅವನ ಜೀವನ ಸಾಗಿಸುವ ಮಾರ್ಗವಾಗಿತ್ತು. ನಂತರ ಕೃಷಿ ಅನ್ವೇಷಣೆಯೊಡನೆ ದೈಹಿಕ ರಚನೆಯೊಂದಿಗೆ ವಸತಿ ವ್ಯವಸ್ಥೆಯು ಬದಲಾವಣೆಯಾಯಿತು. ಯಾವಾಗ ಒಂದೆಡೆ ನೆಲೆನಿಂತು ಒಂದೇ ಭೂಮಿಯಲ್ಲಿ ಉಳುಮೆ ಮಾಡಲು ಪ್ರಾರಂಭಿಸಿದನೋ ಅಂದಿನಿಂದ ವಸತಿ ವ್ಯವಸ್ಥೆಯನ್ನು ಮಾಡಿಕೊಂಡ. "ವಸತಿ ವ್ಯವಸ್ಥೆ ಎಂದರೆ ವ್ಯಕ್ತಿ ತನ್ನ ಮತ್ತು ಕುಟುಂಬದವರಿಗೆ ನಿರ್ಮಿಸಿಕೊಂಡ ರಕ್ಷಣಾ ವ್ಯವಸ್ಥೆ"[೧೧].

ಇರುಳಿಗರು ಸರ್ಕಾರದಿಂದ ವಸತಿ ಸೌಲಭ್ಯಗಳು ಇತ್ತೀಚೆಗೆ ದೊರೆತ ಹಿನ್ನೆಲೆಯಲ್ಲಿ ಹಂಚಿನಮನೆ, ತಗಡಿನ ಮನೆ ಅಥವಾ ಟಿನ್ ಮನೆಗಳನ್ನು ಕಟ್ಟಿಕೊಳ್ಳುವಷ್ಟರ ಮಟ್ಟಿಗೆ ಬದಲಾಗಿದ್ದಾರೆ. ಸರ್ಕಾರದ ವಸತಿ ಯೋಜನೆಯಡಿಯಲ್ಲಿ ಬರುವ ಮನೆಗಳ ಭಾಗ್ಯ ಸ್ವಲ್ಪಮಟ್ಟಿಗೆ ಬಂದು ತಲುಪಿದೆ.

ಇರುಳಿಗ ಸಮುದಾಯದಲ್ಲಿ ಹಿಂದೆ ಕೇವಲ ಗುಡಿಸಲುಗಳು ಅಧಿಕವಾಗಿದ್ದವು. ದಾಭಾ, ಆರ್.ಸಿ.ಸಿ., ಹೆಂಚಿನ ಮತ್ತು ಟಿನ್ ಮನೆಗಳು ಅತ್ಯಲ್ಪವಾಗಿತ್ತು. ಇತ್ತೀಚಿನ ದಶಕಗಳಿಂದ ಸರ್ಕಾರ ಕೊಡುವ ವಸತಿ ಯೋಜನೆಗಳಾದ ಆಶ್ರಯ ಮನೆಗಳು, ಅಂಬೇಡ್ಕರ್, ಬಸವ, ಇಂದಿರಾ ಆವಾಸ್ ಯೋಜನೆಗಳ ಫಲಾನುಭವಿಗಳಾಗಿ ತಮ್ಮ ಗುಡಿಸಲು ಮನೆಯ ಬದಲಾಗಿ ಹೊಸ ಮಾದರಿ(ಹೆಂಚಿನ ಮನೆ, ಟಿನ್‌ಮನೆ)ಯನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ.

ಈ ಸಮುದಾಯದ ಸ್ಥಿತಿಗೂ ಮತ್ತು ಇತರೆ ಬುಡಕಟ್ಟುಗಳ ವಸತಿ ಸ್ಥಿತಿಗೂ ಅಂತಹ ಹೇಳಿಕೊಳ್ಳುವಂತಹ ವ್ಯತ್ಯಾಸಗಳೇನೂ ಕಂಡುಬರುವುದಿಲ್ಲವಾದರೂ ಇತರೆ ಅಭಿವೃದ್ಧಿ ಹೊಂದಿರುವ ಬುಡಕಟ್ಟುಗಳಂತೆ ಇರುಳಿಗರು ಸರ್ಕಾರದ ಯೋಜನೆಗಳಿಗೆ ಸ್ಪಂದಿಸಿದಂತೆ ಕಾಣಿಸುವುದಿಲ್ಲ. ಪ್ರಾಯಶಃ ಈ ಕಾರಣಕ್ಕಾಗಿ ಇರುಳಿಗ ಬುಡಕಟ್ಟು ಸಹ ಇತರೆ ಬುಡಕಟ್ಟುಗಳಂತೆ ಪ್ರಗತಿ ಹೊಂದಲು ಸಾಧ್ಯವಾಗುತ್ತಿಲ್ಲ. ಹಿಂದೆ ಕೇವಲ ಗುಡಿಸಲುಗಳಲ್ಲಿ ಜೀವನ ನಡೆಸುತ್ತಿದ್ದ ಇವರು ಇಂದು ಅಲ್ಪ ಪ್ರಮಾಣದಲ್ಲಿ ಸ್ವಂತ


ಮನೆಗಳನ್ನು ಹೊಂದುವಲ್ಲಿ ಯಶಸ್ವಿಯಾಗಿದ್ದಾರೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಒಟ್ಟಾರೆ ೧೫೬೫ ಇರುಳಿಗರ ಕುಟುಂಬಗಳಲ್ಲಿ ಗುಡಿಸಲು, ಟಿನ್, ದಾಭಾಮಾಳಿಗೆ, ಆರ್.ಸಿ.ಸಿ., ಹೆಂಚಿನ ಮನೆಗಳಲ್ಲಿ ಹಾಗೂ ಕೆಲವು ಕುಟುಂಬಗಳು ಸರ್ಕಾರ ನೀಡಿರುವ ಆಶ್ರಯ, ಬಸವ ವಸತಿ ಯೋಜನೆಗಳ ಅಡಿಯಲ್ಲಿ ಮಂಜೂರಾಗಿರುವ ವಸತಿಗೃಹಗಳಲ್ಲಿ ವಾಸವಾಗಿರುವುದು ಕಂಡುಬಂದಿದೆ. ಸರ್ಕಾರಿ ಯೋಜನೆಯ ಲಾಭ ಪಡೆದು ನಿರ್ಮಾಣಗೊಂಡಿದ್ದ ಇವನ್ನು ಸರ್ಕಾರಿ ವಸತಿಯೋಜನೆ ಮನೆಗಳೆಂದೇ ಪರಿಗಣಿಸಿದೆ. ಕೆಲವು ಕುಟುಂಬಗಳು ಗುಡಿಸಲುಗಳಲ್ಲಿ ವಾಸವಾಗಿದ್ದು ಇವುಗಳನ್ನು ಮನೆಗಳಂತಲೇ ಸಂಬೋಧಿಸುತ್ತಾರೆ. ಇವರ ಈ ಗುಡಿಸಲುಗಳು ಚೌಕಾಕಾರವಾಗಿದ್ದು, ಮೇಲಿನ ಹೊದಿಕೆಯು ತ್ರಿಕೋನಾಕಾರದಲ್ಲಿ ಇರುತ್ತದೆ. ಮನೆಯ ನೆಲ ಮಣ್ಣಿನಿಂದ ಕೂಡಿದ್ದು ದನದ ಸಗಣಿಯಿಂದ ಸಾರಿಸಿ ಸ್ವಚ್ಛವಾಗಿಟ್ಟುಕೊಂಡಿರುತ್ತಾರೆ. ಅರಣ್ಯದಲ್ಲಿ ದೊರೆಯುವ ನಾಲೆಹುಲ್ಲು, ಜೊಂಡು, ತೆಂಗಿನಗರಿಗಳನ್ನು ಬಳಸಿ ಗುಡಿಸಲು ಛಾವಣಿಯನ್ನು ಅತ್ಯಂತ ನೈಪುಣ್ಯತೆಯಿಂದ ಹೊಂದಿಸುತ್ತಾರೆ. ಎಷ್ಟೇ ಗಾಳಿ, ಮಳೆ ಬಂದರೂ ಜಗ್ಗದ ರೀತಿಯಲ್ಲಿ ನಿರ್ಮಾಣ ಮಾಡುತ್ತಾರೆ. ಹಾಗೂ ಸುತ್ತಲು ನೀರು ನಿಲ್ಲದಂತೆ ಮುಂಜಾಗ್ರತೆ ವಹಿಸುತ್ತಾರೆ. ಗುಡಿಸಲಿಗೆ ಒಂದೇ ಒಂದು ಕಿಂಡಿಯನ್ನು ಬಿಟ್ಟುಕೊಂಡು ಕಿಟಕಿಯಂತೆ ಅದನ್ನು ಬಳಸುತ್ತಾರೆ. ಗುಡಿಸಲಿಗೆ ಅರಣ್ಯದಲ್ಲಿ ಸಿಗುವ ಬಿದಿರಿನ ಹಚ್ಚೆಯ ಬಾಗಿಲು ಇಲ್ಲವೆ ನದಿಯ ದಡದಲ್ಲಿ ಸಿಗುವ ಲಾಳದ ಕಡ್ಡಿಯ ಬಾಗಿಲನ್ನು ತಯಾರಿಸುತ್ತಾರೆ. ಸಾಮಾನ್ಯವಾಗಿ ಸ್ನಾನದ ಮನೆಯು ಈ ಗುಡಿಸಲಲ್ಲಿ ಪ್ರತ್ಯೇಕವಾಗಿ ಇರುವುದಿಲ್ಲ. ಹೊರಗೆ ತಡಿಕೆಯಿಂದ ಕಟ್ಟಿಕೊಂಡಿರುತ್ತಾರೆ.

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಕನಕಪುರ, ಚನ್ನಪಟ್ಟಣ, ಮಾಗಡಿ, ರಾಮನಗರ ತಾಲೂಕಿನ ಇರುಳಿಗ ಸಮುದಾಯದ ಒಟ್ಟಾರೆ ೧೫೬೫ ಕುಟುಂಬವಾರು ವಸತಿ ಸ್ವರೂಪಗಳನ್ನು ನೋಡಲಾಗಿ ಕನಕಪುರ ತಾಲೂಕಿನ (ಉಯ್ಯಂಬಳ್ಳಿ, ಕಸಬಾ, ಕೋಡಿಹಳ್ಳಿ, ಮರಳವಾಡಿ, ಸಾತನೂರು) ಹೋಬಳಿವಾರಾಗಿ (೮೦೦) ಕುಟುಂಬಗಳು ಶೇ. ೫೧.೧೨ರಷ್ಟು, ಚನ್ನಪಟ್ಟಣ ತಾಲೂಕಿನ(ಮಳೂರು) ಹೋಬಳಿವಾರಾಗಿ (೫೩) ಕುಟುಂಬಗಳು ಶೇ. ೩.೩೮ರಷ್ಟು, ಮಾಗಡಿ ತಾಲೂಕಿನ(ಕಸಬಾ, ಮಾಡಬಾಳ್, ಸೋಲೂರು) ಹೋಬಳಿವಾರಾಗಿ (೧೬೩) ಕುಟುಂಬಗಳು ಶೇ. ೧೦.೪೨ರಷ್ಟು, ರಾಮನಗರ ತಾಲೂಕಿನ (ಕಸಬಾ, ಕೂಟಗಲ್, ಕೈಲಂಚ, ಬಿಡದಿ) ಹೋಬಳಿವಾರಾಗಿ (೫೪೯) ಕುಟುಂಬಗಳು ಶೇ. ೩೫.೦೮ರಷ್ಟು, ಕೋಷ್ಟಕ ಮತ್ತು ವೃತ್ತಚಿತ್ರದಿಂದ ತಿಳಿದುಬರುತ್ತದೆ.

ಕೋಷ್ಟಕ ೫.೯. ಸಮೀಕ್ಷೆಗೊಳಪಟ್ಟ ರಾಮನಗರ ಜಿಲ್ಲೆಯ ಇರುಳಿಗ ಸಮುದಾಯದ ತಾಲೂಕುವಾರು, ಹೋಬಳಿವಾರು ಮತ್ತು ಕುಟುಂಬವಾರು ವಸತಿ ಸ್ವರೂಪ ವಿವರ


ಹೋಬಳಿಗಳು	ಕುಟುಂಬಗಳು	ಮನೆ ಮಾದರಿಗಳು						
		ಗುಡಿಸಲು	ಟಿನ್	ಮಾಳಿಗೆ	ಆರ್.ಸಿ.ಸಿ.	ಹೆಂಚಿನ	ಜನತಾ	ಬಾಡಿಗೆ
ಉಯ್ಯಂಬಳ್ಳಿ	೪೮	೧೬	೧೨			೪	೧೪	೨
ಕಸಬಾ	೨೭೮	೬೩	೭೩		೩	೭೩	೫೭	೯
ಕೋಡಿಹಳ್ಳಿ	೨೦೬	೩೬	೩೨	೬	೩	೭೬	೪೫	೮
ಮರಳವಾಡಿ	೧೪೪	೪೯	೫೧	೧	೮	೩೦	೩	೨
ಸಾತನೂರು	೧೨೪	೨೬	೩೭	೧೩		೩೫	೮	೫
ಕನಕಪುರ ತಾಲೂಕು	**೮೦೦**	**೧೯೦**	**೨೦೫**	**೨೦**	**೧೪**	**೨೧೮**	**೧೨೭**	**೨೬**
ಚನ್ನಪಟ್ಟಣ ತಾ. (ಮಳೂರು)	**೫೩**		**೬**	**೧೬**			**೧೯**	**೧೨**
ಕಸಬಾ	೭		೪	೨			೧	
ಮಾಡಬಾಳ್	೧೩೩		೨೩	೫೨		೫೩	೩	೨
ಸೋಲೂರು	೨೩		೭	೫			೧೧	
ಮಾಗಡಿ ತಾಲೂಕು	**೧೬೩**		**೩೪**	**೫೯**		**೫೩**	**೧೫**	**೨**
ಕಸಬಾ	೧೩೬		೫೬	೨೨		೧೯	೭	೩೨
ಕೂಟಗಲ್	೨೫೦	೫೩	೧೯		೧೭	೭೭	೬೯	೧೫
ಕೈಲಂಚ	೧೬೧		೪೪	೭೮		೨೦	೪	೧೫
ಬಿಡದಿ	೨							೨
ರಾಮನಗರ ತಾಲೂಕು	**೫೪೯**	**೫೩**	**೧೧೯**	**೧೦೦**	**೧೭**	**೧೧೬**	**೮೦**	**೬೪**

ಲಂಬಚಿತ್ರ ೫.೧. ರಾಮನಗರ ಜಿಲ್ಲೆಯ ಇರುಳಿಗ ಸಮುದಾಯದ ತಾಲೂಕುವಾರು ಮತ್ತು ಕುಟುಂಬವಾರು ವಸತಿ ಸ್ವರೂಪ ಪ್ರಮಾಣ



	ಗುಡಿಸಲು	ಟಿನ್	ಮಾಳಿಗೆ	ಆರ್.ಸಿ.ಸಿ.	ಹೆಂಚಿನ	ಜನತಾ	ಬಾಡಿಗೆ
ಕನಕಪುರ	೧೯೦	೨೦೫	೨೦	೧೪	೨೧೮	೧೨೭	೨೬
ಚನ್ನಪಟ್ಟಣ		೬	೧೬			೧೯	೧೨
ಮಾಗಡಿ		೩೪	೫೯		೫೩	೧೫	೨
ರಾಮನಗರ	೭	೧೬೫	೧೦೦	೧೭	೧೧೬	೮೦	೬೪

ವೃತ್ತಚಿತ್ರ ೫.೭. ರಾಮನಗರ ಜಿಲ್ಲೆಯ ಇರುಳಿಗ ಸಮುದಾಯದ ತಾಲೂಕುವಾರು ಮತ್ತು ಕುಟುಂಬವಾರು ವಸತಿ ಸ್ವರೂಪ ಪ್ರಮಾಣ



ಒಟ್ಟಾರೆ ರಾಮನಗರ ಜಿಲ್ಲೆಯ ತಾಲೂಕುವಾರು ವಸತಿ ಸ್ವರೂಪಗಳನ್ನು ಗಮನಿಸಲಾಗಿ ಕಂಡುಬಂದ ಅಂಶಗಳು ಈ ಕೆಳಗಿನಂತಿವೆ. ಅಧ್ಯಯನಕ್ಕೆ ಆಯ್ಕೆ ಮಾಡಿರುವ ಇರುಳಿಗರ ಕುಟುಂಬಗಳನ್ನು ಅವಲೋಕಿಸಲಾಗಿ ಅವುಗಳಲ್ಲಿ ಶೇಕಡ ೧೫.೫೩ (೨೪೩)ಕುಟುಂಬಗಳು ಗುಡಿಸಲು; ಶೇಕಡ ೨೩ರಷ್ಟು (೩೬೪)ಕುಟುಂಬಗಳು ಟಿನ್; ಶೇಕಡ ೧೨.೫೦ರಷ್ಟು (೧೯೫)ಕುಟುಂಬಗಳು ದಾಬಾ ಮಳಿಗೆ; ಶೇಕಡ ೧.೯೮ರಷ್ಟು (೩೧)ಕುಟುಂಬಗಳು ಆರ್.ಸಿ.ಸಿ. ಶೇಕಡಾ ೨೪.೭೦ರಷ್ಟು (೩೮೭)ಕುಟುಂಬಗಳು ಹೆಂಚಿನ ಮನೆಗಳು ಕಂಡುಬಂದರೆ, ಶೇಕಡ ೧೫ರಷ್ಟು(೨೪೧)ಕುಟುಂಬಗಳು ಸರ್ಕಾರ ಆಶ್ರಯ ಯೋಜನೆಯಡಿಯಲ್ಲಿ ನೀಡುವ ವಸತಿ ಗೃಹಗಳನ್ನು ಅವಲಂಬಿಸಿವೆ. ೬.೬೫ರಷ್ಟು (೧೦೪)ಕುಟುಂಬಗಳು ಬಾಡಿಗೆ ಮನೆಗಳನ್ನು ಆಶ್ರಯಿಸಿರುವುದು ಕೋಷ್ಟಕ ೪.೧೦ರಲ್ಲಿ ಕಾಣಬಹುದು.

ಪ್ರತ್ಯೇಕವಾಗಿ ಹೋಬಳಿವಾರು ಮನೆ ಸ್ವರೂಪಗಳು ಹಾಗೂ ವಸ್ತುಸ್ಥಿತಿಯನ್ನು ನೋಡಿದಾಗ ಕನಕಪುರ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ೮೦೦ ವಸತಿಗಳ ಮಾದರಿಗಳಲ್ಲಿ ಗುಡಿಸಲು ಶೇ. ೨೩.೭೫ರಷ್ಟಿದ್ದು, ಟಿನ್‌ಮನೆ ಶೇ. ೨೫.೬ರಷ್ಟಿದ್ದು, ದಾಬಾಮಾಳಿಗೆ ಶೇ. ೨.೫ರಷ್ಟು, ಆರ್.ಸಿ.ಸಿ. ಶೇ. ೧.೭೫ರಷ್ಟು, ಹೆಂಚಿನ ಮನೆ ಶೇ. ೨೭.೨೫ರಷ್ಟು, ಮತ್ತು ಶೇ. ೩.೨೫ರಷ್ಟು ಬಾಡಿಗೆ ಮನೆಗಳಲ್ಲಿ ವಾಸಿಸುವ ಪ್ರಮಾಣ ಕಂಡುಬರುತ್ತದೆ.

ಚನ್ನಪಟ್ಟಣ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ೫೩ ವಸತಿಗಳ ಮಾದರಿಗಳಲ್ಲಿ ಟಿನ್‌ಮನೆ ಶೇ. ೧೧.೩ರಷ್ಟಿದ್ದು, ದಾಬಾಮಾಳಿಗೆ ಶೇ. ೩೦.೧೮ರಷ್ಟು, ಸರ್ಕಾರದ ಯೋಜನಾಶ್ರಿತ ಮನೆ ಶೇ. ೩೫.೮೫ರಷ್ಟು, ಬಾಡಿಗೆ ಮನೆಯಲ್ಲಿ ಶೇ. ೨೨.೬೪ರಷ್ಟು ವಾಸಿಸುವ ಪ್ರಮಾಣ ಕಂಡುಬರುತ್ತದೆ.

ಮಾಗಡಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ೧೬೩ ವಸತಿಗಳ ಮಾದರಿಗಳಲ್ಲಿ ಟಿನ್‌ಮನೆ ಶೇ. ೨೦.೯೦ರಷ್ಟಿದೆ. ದಾಬಾಮಾಳಿಗೆ ಶೇ. ೩೬.೧೯ರಷ್ಟು, ಹೆಂಚಿನ ಮನೆ ಶೇ. ೩೨.೫೧ರಷ್ಟು, ಸರ್ಕಾರದ ಯೋಜನಾಶ್ರಿತ ಮನೆ ಶೇ. ೯.೨೦ರಷ್ಟು ಮತ್ತು ಬಾಡಿಗೆ ಮನೆಯಲ್ಲಿ ಶೇ. ೧.೨೨ರಷ್ಟು ವಾಸಿಸುವ ಪ್ರಮಾಣ ಕಂಡುಬರುತ್ತದೆ.

ರಾಮನಗರ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ೫೪೯ ವಸತಿಗಳ ಮಾದರಿಗಳಲ್ಲಿ ಗುಡಿಸಲು ಶೇ. ೯.೬೫ರಷ್ಟಿದ್ದು, ಟಿನ್‌ಮನೆ ಶೇ. ೨೧.೭೦ರಷ್ಟಿದೆ. ದಾಬಾಮಾಳಿಗೆ ಶೇ. ೧೮.೨೧ರಷ್ಟು, ಆರ್.ಸಿ.ಸಿ. ಶೇ. ೩.೦೯ರಷ್ಟು, ಹೆಂಚಿನ ಮನೆ ಶೇ. ೨೧.೧೨ರಷ್ಟು, ಸರ್ಕಾರದ ಯೋಜನಾಶ್ರಿತ ಮನೆ ಶೇ. ೧೪.೫೭ರಷ್ಟು, ಬಾಡಿಗೆ ಮನೆಯಲ್ಲಿ ಶೇ. ೧೧.೬೬ರಷ್ಟು ವಾಸಿಸುವ ಪ್ರಮಾಣ ಕಂಡುಬರುತ್ತದೆ.

ಪ್ರಸ್ತುತ ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ಇರುಳಿಗರು ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿ ಸರ್ಕಾರ ನೀಡುವ ವಸತಿ ಯೋಜನೆಗಳಾದ ಅಂಬೇಡ್ಕರ್ ಯೋಜನೆ, ಇಂದಿರಾ ಆವಾಸ್ ಯೋಜನೆ, ಜವಾಹರಲಾಲ್ ವಸತಿ ಯೋಜನೆಗಳ ಲಾಭ ಪಡೆದು ಶೇ. ೧೫ರಷ್ಟು ಮನೆಗಳನ್ನು ಪಡೆದಿದ್ದಾರೆ.

ಕೋಷ್ಟಕ ೫.೧೦: ಸಮೀಕ್ಷೆಗೊಳಪಟ್ಟ ಇರುಳಿಗ ಸಮುದಾಯದವರು ಉಪಯೋಗಿಸುತ್ತಿರುವ ಗೃಹಪಯೋಗಿ ವಸ್ತುಗಳ ವಿವರ

ಕ್ರಸಂ.	ವಸ್ತುಗಳು	ಸಂಖ್ಯೆ	ಪ್ರತಿಶತ
೧.	ರೇಡಿಯೋ	೧೧	೧%
೨.	ಟೇಪ್‌ರೆಕಾರ್ಡರ್	೩೯	೫%
೩.	ದೂರದರ್ಶನ	೧೮೯	೨೫%
೪.	ಸೈಕಲ್	೭೦	೧೦%
೫.	ದ್ವಿಚಕ್ರ ವಾಹನ	೧೧೫	೧೫%
೬.	ದೂರವಾಣಿ	೩೩೩	೪೪%
	ಒಟ್ಟು	೭೫೭	೧೦೦%

ಮಾನವನ ಜೀವನ ಶೈಲಿ ಮತ್ತು ಜೀವನ ಮಟ್ಟವನ್ನು ಸಾಮಾಜಿಕ ಆರ್ಥಿಕ ಪ್ರತಿಷ್ಠೆಯ ಸಂಕೇತವೇ. ಇಂದು ಬಳಸುವ ಗೃಹಪಯೋಗಿ ವಸ್ತುಗಳು ಸಮುದಾಯದ ಜೀವನ ಮಟ್ಟವನ್ನು ನಿರ್ಧರಿಸುವ ಆಧುನಿಕ ಅಳತೆಗೋಲು. ಒಂದು ಸಮುದಾಯವು ಬಳಸುತ್ತಿರುವ ಗೃಹಪಯೋಗಿ ವಸ್ತುಗಳು ಸಹ ಆ ಸಮುದಾಯದ ಜೀವನ ಮಟ್ಟದ ಆರ್ಥಿಕ ವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಪಾತ್ರೆ-ಪಗಡೆಗಳು ದಿನನಿತ್ಯ ಅಡುಗೆ ಮನೆಯಲ್ಲಿ ಬಳಸುವಂಥ ಪ್ಲಾಸ್ಟಿಕ್, ಮಣ್ಣಿನ ಮಡಿಕೆ, ಗೃಹಪಯೋಗಿ ಸಲಕರಣೆಗಳು ಹಾಗೂ ಪಾತ್ರೆ-ಪಗಡೆಗಳಿಗೆ ಅದರದ್ದೇ ಆದಂಥ

ಮೌಲ್ಯಗಳಿವೆ. ಇರುಳಿಗ ಸಮುದಾಯ ಅಡುಗೆ ಮನೆಯಲ್ಲಿ ಮಣ್ಣಿನಮಡಿಕೆ ಕುಡಿಕೆಗಳನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಆಹಾರ ಧಾನ್ಯಗಳ ಸಂಗ್ರಹಣೆಗೆ ಮಣ್ಣಿನ ಗಡಿಗೆ ಗುಡಾಣಗಳನ್ನು ಬಳಸುತ್ತಾರೆ. ಈ ಮಣ್ಣಿನ ಪಾತ್ರೆಗಳನ್ನು ಸ್ಥಳೀಯ ಕುಂಬಾರರು ತಯಾರು ಮಾಡುತ್ತಾರೆ. ಈಗ ಇರುಳಿಗರು ಅಲ್ಯೂಮಿನಿಯಂ ಪಾತ್ರೆ, ಸ್ಟೀಲ್, ಟೇಬಲ್, ಚೆಂಬು, ರೇಡಿಯೊ ಮುಂತಾದವುಗಳ ಬಳಕೆಯನ್ನು ಆರಂಭಿಸಿದ್ದಾರೆ. ನೀರು ಸಂಗ್ರಹಕ್ಕಾಗಿ ವಿವಿಧ ಬಗೆಯ ಪ್ಲಾಸ್ಟಿಕ್ ಡ್ರಮ್‌ಗಳನ್ನು, ಪ್ಲಾಸ್ಟಿಕ್ ಬಿಂದಿಗೆಗಳನ್ನು ಬಳಸುತ್ತಾರೆ. ಪ್ರತಿಯೊಂದು ಮನೆಯಲ್ಲೂ ಬೀಸುವ ಕಲ್ಲು ಹಾಗೂ ರುಬ್ಬುವ ಕಲ್ಲುಗಳು ಇಂದಿಗೂ ಬಳಕೆಯಲ್ಲಿ ಇವೆ. ಇತ್ತೀಚೆಗೆ ಅವರ ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿದ್ದು, ವಿದ್ಯುತ್ ಖೋತಾ ಉಂಟಾದಾಗ ಇಂದಿಗೂ ತಗಡಿನ ಚಿಮಣಿ ಎಣ್ಣೆಯ ದೀಪಗಳನ್ನು ಬಳಸುತ್ತಾರೆ. ಮಳೆಯ ಸಂದರ್ಭಗಳಲ್ಲಿ ಕೊಡೆ(ಛತ್ರಿ)ಯನ್ನು ಬಳಸದೆ ಗೋಣಿ ಚೀಲಗಳನ್ನು ರಕ್ಷಣೆಗಾಗಿ ಬಳಸುವ ಹಲವಾರು ಕುಟುಂಬಗಳು ಇನ್ನೂ ಸಹ ಇರುವುದು ಕಂಡುಬಂದಿದೆ. ಆಧುನಿಕ ಜೀವನ ಶೈಲಿಯ ಅಲಂಕಾರಿಕ ಸಾಮಗ್ರಿಗಳಾದ ಕನ್ನಡಿ, ಸೋಪು, ಸ್ನೋ, ಪೌಡರ್, ಪೇಸ್ಟ್‌ಗಳು ಕೆಲವು ಕುಟುಂಬಗಳಲ್ಲಿ ಬಳಕೆಯಾಗುತ್ತಿವೆ. ವಿದ್ಯುತ್ ಸಂಪರ್ಕ ಪಡೆದಿರುವ ಕೆಲವು ಕುಟುಂಬಗಲ್ಲಿ ಟಿ.ವಿ. ಟೇಪ್ ರೆಕಾರ್ಡರ್‌ಗಳು ಮುಂತಾದ ಆಧುನಿಕ ಗೃಹಪಯೋಗಿ ವಸ್ತುಗಳು ಕಂಡುಬರುತ್ತಿವೆ.

ಕೋಷ್ಟಕವನ್ನು ಗಮನಿಸಿದಾಗ ಅಧ್ಯಯನವನ್ನು ಕೈಗೊಂಡ ಸಾವಿರದ ಐದು ನೂರಾ ಅರವತ್ತೈದು (೧೫೬೫) ಇರುಳಿಗ ಸಮುದಾಯದ ಗೃಹಪಯೋಗಿ ವಸ್ತುಗಳ ವಿವರವನ್ನು ಕಲೆ ಹಾಕಿದಾಗ ಸಮುದಾಯವು ಹೊಂದಿರುವ ಚರಾಸ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿನ ಸ್ತಿರಾಸ್ತಿಗಳು ಸಂಪರ್ಕ ಸಾಧನ ಗಳಾಗಿವೆ. ದ್ವಿಚಕ್ರ ವಾಹನಗಳು ಮತ್ತು ದೂರವಾಣಿ(ಮೊಬೈಲ್)ಗಳನ್ನು ಪ್ರತಿಶತ ೨೫ರಷ್ಟು ಜನರು ಹೊಂದಿದ್ದಾರೆ.

ಆಧುನಿಕ ಸಂಪರ್ಕ ಮಾಧ್ಯಮಗಳಾದ ರೇಡಿಯೋ, ಟೇಪ್ ರೆಕಾರ್ಡರ್ ದೂರದರ್ಶನವನ್ನು ಹೊಂದಿದ್ದಾರೆ. ಇರುಳಿಗರು ಅರಣ್ಯದ ಅಂಚಿನ ಪ್ರದೇಶದಲ್ಲಿ ವಾಸವಾಗಿದ್ದರು ಕೂಡ ದೂರದರ್ಶನವನ್ನು (ಪ್ರತಿಶತ ೨೫ರಷ್ಟು) ಹೊಂದಿರುವುದು ಕಂಡುಬರುತ್ತಿವೆ.

ಹಾಗೆಯೇ ಸಂಚಾರಿ ದೂರವಾಣಿಯನ್ನು ಪ್ರತಿಶತ ೪೪ರಷ್ಟು ಹೊಂದಿದ್ದು, ಖಾಸಗಿ ಸಂಪರ್ಕ ಸಾಧನ ಕಂಪನಿಗಳು ಇಂತಹ ಹಿಂದುಳಿದ ಪ್ರದೇಶಗಳಲ್ಲಿಯೂ ಸಹ ವ್ಯವಸ್ಥಿತ ಸಂಪರ್ಕ ಜಾಲವನ್ನು ಜನರಿಗೆ ಮಾಹಿತಿ ತಲುಪುವಂತೆ ಮಾಡುವುದರ ಮೂಲಕ ಬಡ ಜನರ ಆಶೋತ್ತರಗಳನ್ನು ಬಂಡವಾಳ ಮಾಡಿಕೊಂಡು ಹಣ ಸಂಪಾದಿಸುತ್ತಿರುವುದನ್ನು ನಿಚ್ಚಳವಾಗಿ ಕಾಣಬಹುದು. ಹಾಗೆಯೇ ದ್ವಿಚಕ್ರ ವಾಹನಗಳ ಪ್ರತಿಶತ ೧೫ರಷ್ಟು ಜನರು ಹೊಂದಿದ್ದು ತಮ್ಮ ಸಾಮಾಜಿಕ ಪರಿವರ್ತನೆಯಲ್ಲಿ ತಮ್ಮ ಸ್ಥಾನಮಾನ ಅಂತಸ್ತುಗಳನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಇರುಳಿಗರಲ್ಲಿ ಬದಲಾವಣೆಯ ಮೇಲ್ನೋಟಕ್ಕೆ ಕಂಡುಬಂದರೂ ಒಳಸೂಕ್ಷ್ಮತೆ ಬೇರೆಯಾಗಿದೆ. ದ್ವಿಚಕ್ರ ವಾಹನ ಹೊಂದಿದವರಲ್ಲಿ ಅರ್ಧಕ್ಕೆ ಹೆಚ್ಚು ವಾಹನಗಳು ಮಾಲೀಕರು ಸಮಯಕ್ಕೆ ಸರಿಯಾಗಿ ಕೆಲಸಕ್ಕೆ ಹಾಜರಾಗಲು ಈ ಸಮುದಾಯದ ಯುವಕರಿಗೆ ನೀಡಿರುವ ಆಮಿಷವಾಗಿದೆ. ಇದರಿಂದ ತಮ್ಮ ಬಳಿಯಲ್ಲಿಯೇ ಪ್ರತಿ ದಿವಸ ಕೆಲಸಕ್ಕೆ

ಬರುತ್ತಾರಲ್ಲದೆ ಸಂಜೆಯ ಸಮಯದಲ್ಲಿ ಹೆಚ್ಚಾಗಿ ಕೆಲಸ ನಿರ್ವಹಿಸುವಂತೆ ಪ್ರೇರೇಪಿಸುವ ತಂತ್ರಗಾರಿಕೆಯು ಇದರಲ್ಲಡಗಿದೆ. ಈ ವಾಹನಗಳೆಲ್ಲವೂ ಹಳೆಯ ವಾಹನಗಳಾಗಿದ್ದು ರಿಪೇರಿ ಮತ್ತು ಅದಕ್ಕೆ ಬೇಕಾದ ಇಂಧನವನ್ನು ಈ ಕೂಲಿ ಕಾರ್ಮಿಕರೇ ಭರಿಸಬೇಕು. ಇದು ಮತ್ತೊಂದು ರೀತಿಯಲ್ಲಿ ಇವರ ಸುಲಿಗೆಗೆ ಕಾರಣವಾಗಿದೆ. ಸಮುದಾಯದ ಬಹುತೇಕ ಯುವಕರ ಪಾಲಿಗಂತು ವಾಹನದಲ್ಲಿ ಓಡಾಡುವುದೆಂದರೆ ಮೋಜಿನ ವಿಷಯವಾಗಿದ್ದು, ಇವರ ದುಡಿಮೆಯ ಬಹುಪಾಲು ಹಣ ಇಂತಹ ಹಳೆಯ ವಾಹನ ದುರಸ್ತಿ ಮತ್ತು ಇಂಧನಕ್ಕೆ ವೆಚ್ಚವಾಗುತ್ತಿರುವುದು ತಿಳಿಯದು. ಆರ್ಥಿಕ ದುಡಿಮೆಯ ಕೈಗಳು ಮತ್ತೊಂದು ರೀತಿಯಲ್ಲಿ ದೈಹಿಕ ಶ್ರಮ ಮತ್ತು ಕುಟುಂಬದ ಕೌಟುಂಬಿಕ ನೆಮ್ಮದಿಗೆ ಭಂಗಬರುತ್ತಿರುವುದು ಕಂಡು ಬರುತ್ತದೆ. ಇವರ ಮುಗ್ಧತೆಯನ್ನು ಆಧುನಿಕ ಸಮಾಜದ ಸಮುದಾಯಗಳು ತಮ್ಮ ಸ್ವಂತ ಹಿತಾಸಕ್ತಿಗೆ ಬಳಸಿಕೊಳ್ಳುತ್ತಿರುವ ನವನವೀನ ಶೋಷಣೆಯ ಪರಮಾವಧಿ ಅನ್ನಿಸದೆ ಇರದು? ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಆತ್ಮೀಯವಾಗಿ ಸಮುದಾಯ ಹಿರಿಯರನ್ನು ಮಾತನಾಡಿಸಿದಾಗ ಗೋಚರಿಸಿದ ಸತ್ಯಗಳು ಬಹಳ ರೋಚಕ ಹಾಗೂ ಭಯಂಕರವಾಗಿ ಕಂಡುಬರುತ್ತವೆ.

ಸಂಚಾರಿ ದೂರವಾಣಿಗಳು ಬಹುಮುಖ್ಯವಾಗಿ ತಮ್ಮ ಸಮುದಾಯದ ಕೌಟುಂಬಿಕ ಸಂಬಂಧಗಳನ್ನು ಗಟ್ಟಿಗೊಳಿಸಲು ಹಾಗೂ ಕ್ಷೇಮಸಮಾಚಾರವನ್ನು ತಿಳಿಯುವುದಕ್ಕೆ ಉಪಯೋಗವಾಗುವುದಕ್ಕಿಂತ ಹೆಚ್ಚಾಗಿ ದಿನನಿತ್ಯದ ಕೂಲಿ ಹಾಗೂ ಹೆಚ್ಚು ಕೂಲಿಕೆಲಸ ದೊರೆಯುವ ಬಗ್ಗೆ ವಿವರವನ್ನು ಪಡೆಯುವುದೇ ಆಗಿದೆ. ಇದು ಮತ್ತೊಂದು ರೀತಿಯಲ್ಲಿ ಕಾರ್ಮಿಕರಿಗೆ ಕೆಲಸ ಒದಗಿಸುವ ಮಾಹಿತಿ ಮಾಧ್ಯಮವಾಗಿ ಇರುಳಿಗರಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಬಹುತೇಕ ಕುಟುಂಬಗಳಲ್ಲಿ ಶಾಲೆಗೆ ಹೋಗುತ್ತಿರುವ ಮಕ್ಕಳಿಗೆ ಸರ್ಕಾರವು ನೀಡುತ್ತಿರುವ ಸೈಕಲ್‌ಗಳಿವೆ. ತಮ್ಮ ಸ್ವಂತ ದುಡ್ಡಿನಿಂದ ಕೊಂಡ ಸೈಕಲ್‌ಗಳು ಬಹಳ ಅಲ್ಪ ಪ್ರಮಾಣದಲ್ಲಿವೆ. ಒಟ್ಟಿನಲ್ಲಿ ಇರುಳಿಗ ಸಮುದಾಯವು ಆಧುನಿಕ ಗೃಹಪಯೋಗಿ ವಸ್ತುಗಳನ್ನು ಬಳಸುವ ತರಾತುರಿಯಲ್ಲಿ ಮತ್ತೊಂದು ರೂಪದ ಮೋಹಕ್ಕೆ ಸಿಲುಕುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ. ಅದರೂ ಸಮುದಾಯ ಆಧುನಿಕ ಬದಲಾವಣೆ ಕಂಡು ಕೊಳ್ಳುವಲ್ಲಿ ಸಮಾಜದ ಇತರ ಸಮುದಾಯದವರಂತೆ ಜೀವನ ನಡೆಸಲು ಸಾಧ್ಯತೆವಿಲ್ಲದಿರುವುದು ಕಂಡುಬರುತ್ತದೆ.

ಕೋಷ್ಟಕ ೫.೧೧. ಸಮೀಕ್ಷೆಗೊಳಪಟ್ಟ ಇರುಳಿಗ ಸಮುದಾಯದ ಮನೆಯ ಮಾಲೀಕತ್ವ ವಿವರ

ಕ್ರಸಂ.	ಮಾಲೀಕತ್ವ	ಕುಟುಂಬಗಳು	ಪ್ರತಿಶತ
೧.	ಸ್ವಂತದ್ದು	೫೨೨	೩೩%
೨.	ಸರಕಾರದ್ದು	೭೯	೪೭%
೩.	ಬೇರೆಯವರ ಸ್ಥಳ	೩೧೪	೨೦%

ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ವಸತಿ ಅತ್ಯಂತ ಪ್ರಮುಖವಾದದ್ದು. ೧೫೬೫ ಕುಟುಂಬಗಳನ್ನು ಅಧ್ಯಯನಕ್ಕೆ ಜಿಲ್ಲಾದ್ಯಂತ ಅಧ್ಯಯನ ಕೈಗೊಂಡಿದ್ದು, ಇದರಲ್ಲಿ ಸ್ವಂತ ಮಾಲೀಕತ್ವ ಹೊಂದಿರುವ ೫೨೨ ಕುಟುಂಬಗಳು ಕಂಡು ಬಂದಿದ್ದು ಶೇ.೩೩% ರಷ್ಟಿದೆ. ಸರಕಾರ ಕೊಡ ಮಾಡುವ ಮನೆಗಳಲ್ಲಿ ವಾಸ ಮಾಡುವ ಕುಟುಂಬಗಳ ಸಂಖ್ಯೆ ೭೪೯ ಕುಟುಂಬಗಳಿದ್ದು ಶೇ.೪೭ ಇಂತಹ ಮನೆಗಳಲ್ಲಿ ವಾಸವಾಗಿದ್ದಾರೆ. ಉಳಿದ ೩೧೪ರಲ್ಲಿ ಕುಟುಂಬಗಳು ಬೇರೆಯವರ ಜಮೀನು ಹಾಗೂ ಸ್ಥಳಗಳಲ್ಲಿ, ಸರ್ಕಾರದ ಜಾಗಗಳಲ್ಲಿ ಗುಡಿಸಲು, ಇತರೆ ಜೋಪಡಿಗಳಲ್ಲಿ (ಶೇ. ೨೦ರಷ್ಟು ಜನರು) ಇಂದಿಗೂ ವಾಸಿಸುತ್ತಿದ್ದಾರೆ. ಇರುಳಿಗ ಸಮುದಾಯದ ಜನರು ಜಿಲ್ಲೆಯ ವ್ಯಾಪ್ತಿಯಲ್ಲಿ ವಾಸಯೋಗ್ಯ ಮನೆಗಳಿಲ್ಲದೆ ಹಲವು ಕುಟುಂಬಗಳು ಇವೆ. ಬೆಟ್ಟದ ಮೇಲೆ ಹಾಗೂ ನಿರ್ಜನ ಪ್ರದೇಶದಲ್ಲಿ ಹಲವು ಮನೆಗಳು ಇಲ್ಲಿ ಇವೆ. ಮಾಗಡಿ ತಾಲ್ಲೂಕಿನ ಮಾನಗಲ್ಲ ಪ್ರದೇಶ ಮತ್ತು ಕನಕಪುರ ತಾಲ್ಲೂಕಿನ ಮತ್ತು ತಮಿಳನಾಡು ರಾಜ್ಯದಲ್ಲಿನ ಗಡಿಯಲ್ಲಿ ಹಲವು ಕುಟುಂಬಗಳು ಇಂತಹ ಪರಿಸ್ಥಿತಿಯಲ್ಲಿ ವಾಸಿಸುತ್ತಿವೆ.

೫.೨೦. ಇರುಳಿಗರ ದುಡಿಮೆಯ ಲಿಂಗಸಂಬಂಧಿ ಆಯಾಮಗಳು

ವಾಸ್ತವವಾಗಿ ಲಿಂಗಸಂಬಂಧಿಯಾಗಿ ಎದುರಿಸುತ್ತಿರುವ ಸಮಸ್ಯೆಗಳನ್ನು ಸಾಮಾಜಿಕ ಮತ್ತು ಆರ್ಥಿಕ ಎಂದು ವರ್ಗೀಕರಿಸುವುದು ಕೇವಲ ಸಮಸ್ಯೆಗಳೆಂದು ಗುರುತಿಸುವುದು ಸರಿಯಾದ ಕ್ರಮವಾದೀತು. ಇರುಳಿಗರಲ್ಲಿ ಪಿತೃ ಪ್ರಧಾನ ಕುಟುಂಬವಿದ್ದು ಗಳಿಕೆ ಮತ್ತು ಕೌಟುಂಬಿಕ ಸಮಸ್ಯೆಗಳನ್ನು ನಿಭಾಯಿಸುವುದರಲ್ಲಿ ಹೆಚ್ಚಿನ ಪಾಲಿರುವುದನ್ನು ಬಿಟ್ಟರೆ ಇರುಳಿಗರ ಮಹಿಳೆಯರಿಗೆ ಯಾವುದೇ ಇನ್ನಿತರ ಸ್ವಾತಂತ್ರ್ಯ ಸಮಾನತೆ ಹಾಗೂ ಪ್ರಮುಖ ನೀತಿ ನಿರ್ಧಾರಗಳಲ್ಲಿ ಪಾಲು ಮರೀಚಿಕೆಯಾಗಿಯೇ ಇದೆ. ವಿವಾಹದ ನಂತರ ಬೇರೆ ಮನೆ ಮಾಡಿಕೊಂಡು ಹೋಗಬೇಕಾದದ್ದು ಪುರುಷರ ಕರ್ತವ್ಯವಾಗಿದೆ. ಹೀಗೆ ಮಾಡುವುದರಿಂದ ಪತಿ ಪತ್ನಿಯರಲ್ಲಿ ಕೌಟುಂಬಿಕ ಹೊಣೆಗಾರಿಕೆಯ ಹಂಚಿಕೆಯಾಗಿ ಜವಾಬ್ದಾರಿಯ ಜೊತೆಗೆ ಒಬ್ಬರನ್ನೊಬ್ಬರು ಅರಿತುಕೊಳ್ಳಲು ಮುಕ್ತ ಅವಕಾಶ ಸಿಗುವುದಲ್ಲದೆ, ಸ್ವತಂತ್ರವಾಗಿ ಬದುಕು ನಡೆಸುವ ಅವಕಾಶ ದೊರೆಯುತ್ತದೆ. ಆದರೂ ಇಂತಹ ಸನ್ನಿವೇಶದಲ್ಲಿ ಲಿಂಗಸಂಬಂಧಿ ಅಸಮಾನತೆ ಇರುಳಿಗ ಸಮುದಾಯದಲ್ಲಿ ಸಾಮಾನ್ಯವಾಗಿದೆ. ಬಹುತೇಕ ಇರುಳಿಗರಿಗೆ ತಮ್ಮ ದೈಹಿಕ ಶಕ್ತಿಯೇ ಮೂಲ ಬಂಡವಾಳವಾಗಿದ್ದು ಕೂಲಿಯನ್ನು ಬಿಟ್ಟರೆ ಮತ್ತೆ ಯಾವುದೇ ಉತ್ಪಾದನಾ ಮೂಲಗಳು ಇರುವುದಿಲ್ಲ. ಪತಿ–ಪತ್ನಿಯರಿಬ್ಬರೂ ಕೂಲಿ ಮಾಡಿಯೇ ಜೀವನ ಮಾಡಬೇಕಾಗಿರುವುದು ಅನಿವಾರ್ಯ. ಆದರೂ ಕೂಲಿಯಲ್ಲಿಯೂ ತಾರತಮ್ಯ ಇದೆ. ಇಲ್ಲಿಯೂ ಸಹ ಲಿಂಗ ತಾರತಮ್ಯ ಪ್ರಭಾವ ಬೀರಿದೆ. ಜೈವಿಕವಾಗಿ ಸ್ತ್ರೀಯರು ಬಲಹೀನರು, ಸಂಕೋಚ ಸ್ವಭಾವ, ಋತುಚಕ್ರ, ಗರ್ಭದಾರಣೆ, ಶಿಶುಪಾಲನೆ, ಸಾಮಾಜಿಕವಾಗಿ ಇತರ ಸಮುದಾಯಗಳ ಪ್ರಭಾವ ಹಾಗೂ ಧಾರ್ಮಿಕವಾಗಿ ಸ್ತ್ರೀಯರ ಮೇಲಿನ ಹಿಡಿತ ಇತ್ಯಾದಿ ಕಾರಣಗಳಿಂದ ಸ್ತ್ರೀಯರನ್ನು ಮೂಲೆಗುಂಪು ಮಾಡಲು ಕಾರಣಗಳಾಗಿವೆ. ಹೀಗೆ ಈ ಎಲ್ಲ ಸ್ಥಿತ್ಯಂತರಗಳು ಮಾತೃಪ್ರಧಾನ ಕುಟುಂಬದಿಂದ ಪಿತೃ ಪ್ರಧಾನ ಕುಟುಂಬಕ್ಕೆ ವರ್ಗಾವಣೆಗೊಂಡು ಪ್ರಸ್ತುತ ಸಮಸ್ಯೆಗಳಿಗೆ ಕಾರಣವಾಗಿದೆ.

ಇರುಳಿಗರಲ್ಲಿನ ಕುಟುಂಬದ ಆದಾಯದ ಮೇಲಿನ ಒಡೆತನ ಪುರುಷನ ಕೈಯಲ್ಲಿ ಕೇಂದ್ರೀಕೃತವಾಗಿದೆ. ಅಸಂಘಟಿತ ವಲಯದಲ್ಲಿ ದುಡಿಯುವ ಮಹಿಳಾ ದುಡಿಮೆಗಾರರು ಸಾಮಾಜಿಕ ಮತ್ತು ಆರ್ಥಿಕ ವಿಷಯಗಳಲ್ಲಿ ಸ್ತ್ರೀಯರಿಗೆ ಧ್ವನಿ ಇಲ್ಲದಂತಾಗಿದೆ. ಸಂಸಾರ ನಿರ್ವಹಣೆಯ ಜವಾಬ್ದಾರಿ ಸಂಪೂರ್ಣ ಪುರುಷನದ್ದೇ ಎಂದು ಕಂಡುಬಂದರೂ, ಕುಟುಂಬದ ಸದಸ್ಯರ ಅನಾರೋಗ್ಯ, ಮನೆ ದುರಸ್ತಿ, ಮಕ್ಕಳ ಓದು ಮುಂತಾದ ಸಮಸ್ಯೆಗಳು ತಲೆದೋರಿದಾಗ ಮಹಿಳೆಯರು ಸಾಲಕ್ಕೆ ಮೊರೆ ಹೋಗಲೇ ಬೇಕಾಗುತ್ತದೆ. ಅದಕ್ಕೆ ಸ್ತ್ರೀಯರೇ ಕಾರಣವೆಂದು ದೂರಲಾಗುತ್ತದೆ. ಅಂತಹ ಸಂದರ್ಭದಲ್ಲಿ ಅವರಿವರನ್ನು ಕಾಡಿ ಬೇಡಿ, ದುಡಿದು ಕುಟುಂಬದ ಸದಸ್ಯರ ಹೊಟ್ಟೆ ತುಂಬಿಸುವ ಅನಿವಾರ್ಯತೆ ಹೆಣ್ಣಿಗಿದ್ದರೂ, ಹೊರ ಸಮಾಜದ ಅಧಿಕಾರ ಗಂಡಿನದೇ ಆಗಿದೆ. ಬೆನ್ನುಮೂಳೆ ಮುರಿಯುವಂತೆ ದುಡಿಯಬೇಕಾಗಿದೆ. ಹೀಗೆ ದುಡಿದರೂ ಕೂಡ ಮನೆಯ ಖರ್ಚನ್ನು ನಿಭಾಯಿಸಲು ಮಹಿಳೆಯರು ಹರಸಾಹಸ ಪಡುತ್ತಿದ್ದಾರೆ. ಕುಟುಂಬದ ದಿನನಿತ್ಯದ ನಿರ್ವಹಣೆಗೆ ಪುರುಷರು ತಂದುಕೊಡುವ ಸಾಮಗ್ರಿ ಸಾಲದೆ ತಮ್ಮ ದುಡಿಮೆಯ ಅಲ್ಪ ಸ್ವಲ್ಪ ಹಣದಲ್ಲಿ ಅವಶ್ಯಕ ಸಾಮಗ್ರಿಗಳನ್ನು ಕೊಂಡುಕೊಳ್ಳಬೇಕಾದ ಅನಿವಾರ್ಯತೆ ಇದೆ. ಮಾರುಕಟ್ಟೆಯಲ್ಲಿ ಸರಕುಗಳ ಬೆಲೆ ಗಗನಕ್ಕೇರುತ್ತಿರುವುದು ಮಹಿಳೆಯರಿಗೆ ನುಂಗಲಾಗದ ತುತ್ತಾಗಿದೆ. ಮಹಿಳೆಯರು ಎದುರಿಸುತ್ತಿರುವ ಸಾಮಾಜಿಕ, ಆರ್ಥಿಕ ಸಮಸ್ಯೆಗಳಿಲ್ಲದೇ ಲಿಂಗ ಸಂಬಂಧಿ ಕ್ಷೇತ್ರದಲ್ಲಿಯೂ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಹೊರಗಿನ ದುಡಿಮೆಯಲ್ಲಿ ತೊಡಗಿದ ಮಹಿಳೆರಿಗೆ ತಮ್ಮ ಮನೆಯ ಕೆಲಸಗಳಿಂದೇನೋ ವಿನಾಯಿತಿ ದೊರೆಯುತ್ತಿಲ್ಲ. ಹೇಗೆ ಅಸಂಘಟಿತ ವಲಯದ ಮಹಿಳೆಯರ ಮೇಲೆ ಎರಡು ರೀತಿಯ ಹೊರೆ ಇದೆ. ಅವರ ಕೆಲಸಕ್ಕೆ ಯಾವ ಶಾಸನಾತ್ಮಕವಾದ ರಕ್ಷಣೆಯೂ ಸಿಗುತ್ತಿಲ್ಲ ಎಂಬುದನ್ನು ಈ ಮೂಲಕ ತಿಳಿಯಬಹುದು. ಇರುಳಿಗ ಮಹಿಳೆಯರು ಸಂಘಟಿತರಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಡಲು ಬೇಕಾದ ಶಿಕ್ಷಣವಾಗಲೀ ಇಲ್ಲ. ಹಾಗೆಯೇ ಸಮಯದ ಅಭಾವ ಹಾಗೂ ಸಂಘಟನೆ ಮಾಡುವ ಶಕ್ತಿ ಇವರಿಗಿಲ್ಲ. ದಿನನಿತ್ಯದ ತುತ್ತಿನ ಚೀಲ ತುಂಬಿಸಲೇಬೇಕಾದ ಅನಿವಾರ್ಯತೆ ಒಂದಡೆಯಾದರೆ ತಮ್ಮದೇ ಒಂಟಿ ಧ್ವನಿ ಎಂದು ತಿಳಿದ ಮಹಿಳೆಯರು ಅನ್ಯಾಯವನ್ನು ಮೌನವಾಗಿ ಸಹಿಸಿಕೊಂಡಿದ್ದಾರೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಿದ ಮಾಹಿತಿ ಪ್ರಕಾರ ಉತ್ತಮ ಆದಾಯವನ್ನು ತಂದುಕೊಡುವ ಕೆಲಸ ಸಿಕ್ಕರೆ ತಮ್ಮ ವೃತ್ತಿಯನ್ನು ಬದಲಾಯಿಸುವ ಯೋಚನೆ ಮಾಡುವುದರ ಜೊತೆ ತಮ್ಮ ಮುಂದಿನ ಪೀಳಿಗೆಗೆ ತಮ್ಮ ಸಮಸ್ಯೆ ಬರಬಾರದು ಎಂದು ಅಪೇಕ್ಷಿಸುತ್ತಾರೆ. ಕುಟುಂಬದ ಜವಾಬ್ದಾರಿ ನಿರ್ವಹಿಸಲು ಇಬ್ಬರ ದುಡಿಮೆಯಿಂದ ಸಾಧ್ಯವಾಗುತ್ತಿಲ್ಲ. ಹೀಗೆ ಅಧಿಕ ಆದಾಯದ ನಿರೀಕ್ಷೆಯಲ್ಲಿ ಆಗಿಂದಾಗ್ಗೆ ವೃತ್ತಿಯನ್ನು ಬದಲಾಯಿಸುವುದು ಅಸಂಘಟಿತ ವಲಯದಲ್ಲಿ ಕಂಡುಬರುತ್ತದೆ. ದುಡಿಮೆಯಲ್ಲಿ ನಿರತರಾದ ಮಹಿಳೆಯರು ಜೀವನದ ಮೂಲಭೂತ ಅವಶ್ಯಕತೆಗಳನ್ನು ಪಡೆಯಲೂ ಪರಿತಪಿಸುವ ಸ್ಥಿತಿ ಎದುರಾಗಿದೆ ಎಂಬುದು ಅಧ್ಯಯನದಿಂದ ದೃಢಪಟ್ಟಿದೆ. ಇರುಳಿಗರಲ್ಲಿ ಕೂಲಿಯು ಸಂಪತ್ತನ್ನು ಕೂಡಿಸುವುದಕ್ಕಾಗಿ ಅಲ್ಲ; ಬದುಕಿನ ಜೀವನ ಸಾಗಿಸುವಿಕೆಗೆ ಒಟ್ಟಾರೆ ದುಡಿಮೆಯ ವಲಯವು ಆದಿಮ ಹಂತದಲ್ಲಿಯೇ ಇದೆ. ಕೃಷಿ ಕೂಲಿ ಹಂತದಲ್ಲಿಯೇ ಇದೆ. ಕೃಷಿಕೂಲಿ ಹಂತದಲ್ಲಿ ಬಹುಪಾಲು ಇರುಳಿಗ ಮಹಿಳೆಗೆ ತನ್ನ

ದುಡಿಮೆಯ ಮೇಲೆ ಮಾಲೀಕತ್ವವಾಗಲೀ, ನಿಯಂತ್ರಣವಾಗಲೀ ಇಲ್ಲ. ಸಮಾನ ಕೂಲಿ, ಆರ್ಥಿಕ, ಸಾಮಾಜಿಕ ಕ್ಷೇತ್ರದಲ್ಲಿಯೂ ಲಿಂಗ ಸಂಬಂಧಿ ಪರಿಧಿಯೊಳಗೆ ಗಿರಕಿ ಹೊಡೆಯುತ್ತಿರುವುದು ಕಂಡುಬರುತ್ತದೆ.

೫.೨೧. ಸ್ತ್ರೀಶಕ್ತಿ ಮಹಿಳಾ ಸಂಘ

ಇತ್ತೀಚಿನ ಒಂದು ದಶಕಗಳಿಂದ ಮಹಿಳಾ ಸ್ವಸಹಾಯ ಸಂಘಗಳು ಮಹಿಳಾ ಆರ್ಥಿಕತೆಯಲ್ಲಿ ಗಮನಾರ್ಹವಾದ ಪರಿಣಾಮ ಬೀರುತ್ತಿವೆ. ಈ ಪರಿಣಾಮವನ್ನು ಇರುಳಿಗ ಸಮುದಾಯದ ಮಹಿಳೆಯರ ಆರ್ಥಿಕತೆಯಲ್ಲಿಯೂ ಪರಿಣಾಮ ಬೀರುತ್ತಿರುವುದು ಕಾಣಬಹುದಾಗಿದೆ. ಕರ್ನಾಟಕ ಸರ್ಕಾರವು ಸ್ತ್ರೀ ಸಬಲೀಕರಣದ ಮುಖ್ಯ ಉದ್ದೇಶದಿಂದಾಗಿ ೨೦೦೧ರಲ್ಲಿ ಸ್ತ್ರೀಶಕ್ತಿ ಯೋಜನೆಯನ್ನು ಆರಂಭಿಸಿತು. ನಾನು ಕ್ಷೇತ್ರಕಾರ್ಯ ಮಾಡಿದ ಸ್ಥಳಗಳಲ್ಲಿ ಕಬ್ಬಾಳಮ್ಮ ಸ್ತ್ರೀಶಕ್ತಿ ಸಂಘ, ಬಾಣಂತಮ್ಮ ಸ್ತ್ರೀ ಶಕ್ತಿ ಸಂಘ, ಲಕ್ಷ್ಮೀ ಸ್ತ್ರೀ ಶಕ್ತಿ ಸಂಘ ಹೀಗೆ ಬೇರೆ ಬೇರೆ ಹೆಸರುಗಳಿಂದ ೧೫ರಿಂದ ೨೫ ಮಂದಿ ಮಹಿಳಾ ಸದಸ್ಯರನ್ನು ಹೊಂದಿರುವ ಸ್ತ್ರೀ ಶಕ್ತಿ ಗುಂಪುಗಳನ್ನು ಕಾಣಬಹುದು.

ಸ್ತ್ರೀ ಶಕ್ತಿ ಗುಂಪುಗಳು ಮಾಡುತ್ತಿರುವ ಕಾರ್ಯಗಳು

೧. ಇರುಳಿಗ ಮಹಿಳೆಯರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಬಲಪಡಿಸಲು ಯೋಗ್ಯ ಪರಿಸರವನ್ನು ನಿರ್ಮಿಸುತ್ತಿವೆ.

೨. ಸಮುದಾಯ ಮಹಿಳೆಯರಲ್ಲಿ ಆತ್ಮವಿಶ್ವಾಸ ಸ್ವಾವಲಂಬನೆಯ ಭರವಸೆಯನ್ನು ಮೂಡಿಸಿವೆ.

೩. ಮಹಿಳೆಯರನ್ನು ಉತ್ಪಾದಕ ಕಾರ್ಯದಲ್ಲಿ ತೊಡಗಿಸುವುದು.

೪. ಸರ್ಕಾರದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸ್ತ್ರೀಶಕ್ತಿ ಗುಂಪಿನ ಸದಸ್ಯರಿಗೆ ಒದಗಿಸುವುದು.

ಜಿಲ್ಲೆಯ ಪ್ರತಿ ತಾಲೂಕು ಮತ್ತು ವಲಯಗಳಲ್ಲಿ ಸ್ತ್ರೀಶಕ್ತಿ ಸಂಘಗಳನ್ನು ಸ್ಥಾಪಿಸಲಾಗಿದೆ. ಕೆಲವು ಇರುಳಿಗರೇ ತಮ್ಮ ಕಾಲೋನಿಗಳಲ್ಲಿ ಸ್ವಪ್ರೇರಣೆಯಿಂದ ಗುಂಪುಗಳನ್ನು ರಚಿಸಿಕೊಂಡಿರುತ್ತಾರೆ. ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಆರಂಭದ ಆರು ತಿಂಗಳು ಮಾರ್ಗದರ್ಶನ ಪಡೆದ ನಂತರ ತಾವೇ ಸ್ವತಃ ಗುಂಪುಗಳನ್ನು ರಚಿಸಿಕೊಳ್ಳುತ್ತಾರೆ. ಬ್ಯಾಂಕಿನಲ್ಲಿ ಖಾತೆ ತೆಗೆದು ಆರು ತಿಂಗಳು ಕಾರ್ಯ ನಿರ್ವಹಿಸಿದ್ದಾರೆ. ಸರ್ಕಾರ ಇಂಥ ಪ್ರತಿ ಗುಂಪಿಗೆ ೫೦೦೦ ಸಾವಿರ ರೂಪಾಯಿಗಳ ಸಹಾಯ ಧನವನ್ನು ನೀಡುತ್ತಿದೆ. ಇಲ್ಲೂ ಸಹ ಬ್ಯಾಂಕಿನಲ್ಲಿ ಜಂಟಿಖಾತೆ, ವೈಯಕ್ತಿಕ ಉಳಿತಾಯ ಮತ್ತು ಸಾಲದ ಪುಸ್ತಕ ಹೊಂದಿರುತ್ತಾರೆ. ವಾರಕ್ಕೆ ೫೦ ರೂಪಾಯಿಂದ ೩೦೦ ರೂ.ಗಳವರೆಗೆ ಕಟ್ಟುವ ವ್ಯವಸ್ಥೆಯಿದೆ. ಇರುಳಿಗ ಮಹಿಳೆಯರಲ್ಲಿ ಒಂದು ಬಗೆಯ ಶಿಸ್ತಿನ ರೀತಿಯಲ್ಲಿ ಪ್ರತಿವಾರ ಸಭೆ ನಡೆಯುತ್ತದೆ. ಆದರೆ ನಿಮಿತವಾಗಿ ಹಾಜರಾಗಲು ಸಾಧ್ಯವಾಗುತ್ತಿಲ್ಲ. ದೂರದ ಊರುಗಳಿಗೆ ಕೂಲಿಕೆಲಸಕ್ಕೆ ಹೋಗಬೇಕಾಗಿರುವುದರಿಂದ ಹಗಲಿನ ಸಮಯದಲ್ಲಿ ಹಾಜರಾಗದೆ ದಂಡ ತುಂಬಬೇಕಾದ ಪರಿಸ್ಥಿತಿ ಇದೆ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಅನಕ್ಷರಸ್ಥರು ಇರುವುದರಿಂದ ಲೆಕ್ಕ ಬರೆಯುವ ಸಮಸ್ಯೆ ಇರುವುದು ಕ್ಷೇತ್ರಕಾರ್ಯದ ಸಮಯದಲ್ಲಿ ಕಂಡುಬಂದಿದೆ.

ರಾಜ್ಯದಲ್ಲಿ ಒಟ್ಟು ೯೩ ಸಾವಿರ ಬುಡಕಟ್ಟು ಮಹಿಳೆಯರ ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಿಕೊಂಡು ಆ ಮೂಲಕ ತಮ್ಮ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳುತ್ತಿದ್ದಾರೆ. "ರಾಮನಗರ ಜಿಲ್ಲೆಯಲ್ಲಿ ೪೬೩೫ ಸ್ತ್ರೀಶಕ್ತಿ ಗುಂಪುಗಳಿದ್ದು, ೮೦೨೯ ಸದಸ್ಯರಿರುತ್ತಾರೆ. ಜಿಲ್ಲೆಯಲ್ಲಿ ೧೩ ಗಿರಿಜನ ಸ್ತ್ರೀಶಕ್ತಿ ಗುಂಪುಗಳಿದ್ದು, ಸಹಾಯಧನವಾಗಿ ೧.೫೦ ಲಕ್ಷ ರೂಪಾಯಿಯನ್ನು ೨೦೧೩-೧೪ನೇ ಸಾಲಿಗೆ ನೀಡಲಾಗಿದೆ"[೧೨]. ತಮ್ಮ ಉಳಿತಾಯದ ಹಣದ ಜೊತೆಗೆ ಬ್ಯಾಂಕಿನಿಂದ ಪಡೆದ ಸಾಲದಿಂದ ಇರುಳಿಗ ಮಹಿಳೆಯರು ಎಮ್ಮೆ, ಕುರಿ, ಆಡು ಹಾಗೂ ವೈಯಕ್ತಿಕ ಸಾಲದ ಮೂಲಕ ಮಹಿಳೆಯರು ಮನೆಗೆ ಬೇಕಾದ ವಸ್ತುಗಳು ತೆಗೆದುಕೊಳ್ಳುತ್ತಿದ್ದಾರೆ. ಮಹಿಳೆಯರ ಬದುಕಿನಲ್ಲಿ ಆರ್ಥಿಕ ಸಬಲತೆ ನೀಡಿ ಆರ್ಥಿಕ ಜೀವನವನ್ನು ರೂಪಿಸುವಲ್ಲಿ ಸ್ತ್ರೀಶಕ್ತಿ ಸಂಘಗಳು ಸಹಕಾರಿಯಾಗಿವೆ.

ಇವರ ಆರ್ಥಿಕ ಅಧ್ಯಯನದಿಂದ ತಿಳಿದುಬಂದ ಸಂಗತಿಯೆಂದರೆ ಇರುಳಿಗ ಸಮುದಾಯದವರು ಆರ್ಥಿಕವಾಗಿ ಹಿಂದುಳಿದವರಾಗಿದ್ದಾರೆ. ಬಹುಹಿಂದಿನ ಕಾಲದಿಂದಲೂ ಅಲೆಮಾರಿಗಳು ಕೇತ್ಲು ಬೇಸಾಯ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದೆ. ಒಂದು ಕಾಡಿನಿಂದ ಮತ್ತೊಂದು ಕಾಡಿಗೆ ಅಲೆಯುತ್ತಿರುವುದು ಒಂದು ರೀತಿಯಲ್ಲಿ ಅವರ ಆರ್ಥಿಕವಾಗಿ ಹಿಂದುಳಿದಿರುವುದಕ್ಕೆ ಕಾರಣ. ಹಾಗಿದ್ದರೂ ಅವರು ನೆಲೆನಿಂತು ಇತ್ತೀಚೆಗೆ ಕೃಷಿಕರಾಗಿ, ಕೂಲಿಕಾರ್ಮಿಕರಾಗಿ ಇರುಳಿಗರು ತಮ್ಮ ಜೀವನ ನಿರ್ವಹಣೆಗೆ ಕೃಷಿ ಸಾಗುವಳಿ, ಕಾಡಿನ ಉತ್ಪನ್ನ ಸಂಗ್ರಹಣೆ, ಪ್ರಾಣಿ ಸಾಕಾಣಿಕೆ, ಔಷಧಿಯ ವನಸ್ಪತಿ ಸಂಗ್ರಹಗಳನ್ನು ಮಾರಾಟ ಮಾಡುವುದರ ಮೇಲೆ ಅವಲಂಬಿತರಾಗಿದ್ದಾರೆ. ಸರ್ಕಾರದ ಅರಣ್ಯ ನೀತಿ ಕಾಡುಗಳ ನಾಶ ಇನ್ನಿತರ ಪರಿಣಾಮದಿಂದಾಗಿ ತಮ್ಮ ಮೂಲ ವೃತ್ತಿಯಿಂದಲೂ ಬಹುದೂರ ಸಾಗಿದ್ದಾರೆ.

ಅತಿಯಾದ ನಗರೀಕರಣದಿಂದಾಗಿ ತಮ್ಮ ಮೂಲನೆಲೆಯಿಂದಲೂ ಎತ್ತಂಗಡಿ ಆಗುವ ಭಯದ ನೆರಳಲ್ಲಿ ವಾಸಿಸುತ್ತಾ ಬಿದಿರಿನಿಂದ ತಯಾರುಮಾಡುವ ರೇಷ್ಮೆ ಚಂದ್ರಿಕೆ, ಬುಟ್ಟಿ ಮತ್ತಿತರ ವಸ್ತುಗಳನ್ನು ತಯಾರಿಸುವ ಕೆಲಸಕ್ಕೆ ಬೇಕಾದ ಬಿದಿರಿಗೂ ಸಂಚಕಾರ ಒದಗಿದ್ದು, ಈ ಒಂದು ಕರಕುಶಲ ಕಲೆಯ ಕೆಲಸವನ್ನು ಕಲಿಯುವುದಕ್ಕೆ ಸಮುದಾಯದ ಯುವಕ-ಯುವತಿಯರು ಇಂದು ಆಸಕ್ತಿ ಹೊಂದಿಲ್ಲ. ಭೂಮಿಯನ್ನು ಸಾಗುವಳಿ ಮಾಡುತ್ತಿದ್ದರೂ ತಮ್ಮದು ಎಂದು ಹೇಳಿಕೊಳ್ಳಲು ಬೇಕಾದ ದಾಖಲಾತಿಗಳಾಗಲಿ, ಅದನ್ನು ಪಡೆಯುವ ಸಂಘಟನಾ ಶಕ್ತಿಯಾಗಲಿ ಇಲ್ಲದೆ ಇರುವುದನ್ನು ಕಾಣುತ್ತೇವೆ. ತಮ್ಮ ಆರ್ಥಿಕತೆಗೆ ಪೂರಕವಾದ ಬ್ಯಾಂಕು ಮತ್ತು ಇನ್ನಿತರ ವಾಣಿಜ್ಯ ಸಂಸ್ಥೆಗಳ ಜೊತೆ ಸಂಪರ್ಕದ ಕೊರತೆಯಿಂದಾಗಿ ಅದು ಸಹ ಸಾಧ್ಯವಾಗದೆ ಇದೆ ಬುಡಕಟ್ಟು ಸಮುದಾಯಗಳಲ್ಲಿ ಸರಳ ಹಾಗೂ ನಿರ್ದಿಷ್ಟ ಆರ್ಥಿಕ ಬದಲಾವಣೆಯನ್ನು ಕಾಣುವುದು ಕಠಿಣವೆನಿಸಿದರೂ ಸ್ಥಳೀಯ ಪರಿಸರದಲ್ಲಿ ತ್ವರಿತಗತಿಯ ಬದಲಾವಣೆ ಸಾಗಿದೆ. ಈ ಬದಲಾವಣೆಯನ್ನು ಸ್ಪಷ್ಟವಾಗಿ ಗುರುತಿಸುವುದೇನೆಂದರೆ ನೂತನ ಆರ್ಥಿಕ ಯೋಜನೆಗಳನ್ನು ಜಾರಿಗೊಳಿಸುವುದು. ಒಂದೆಡೆಯಾದರೆ ಇನ್ನೊಂದೆಡೆಗೆ ನೂತನ ಅರ್ಥಶಾಸ್ತ್ರದ ವ್ಯಾಖ್ಯಾನ ಉದಯವಾಗಿ ಸ್ಪಷ್ಟ ಪರಿಣಾಮಗಳು ಗೋಚರಿಸತೊಡಗಿವೆ.

ಹೀಗೆ ಸಮಗ್ರ ಚರ್ಚೆಯ ನಿರ್ದಿಷ್ಟ ಅಂಶಗಳನ್ನು ಗಮನಿಸಿದಾಗ ಸಮುದಾಯ ಅಭಿವೃದ್ಧಿ ಚಟುವಟಿಕೆಗಳ ಅನುಷ್ಠಾನ, ಭೂ ಸುಧಾರಣೆ ಕಾಯ್ದೆ ನಗರೀಕರಣ, ಶಿಕ್ಷಣ ಸೌಲಭ್ಯ, ಸಾರಿಗೆ ಸಂಪರ್ಕ ಸುಧಾರಣೆ, ವಾಣಿಜ್ಯ ಬ್ಯಾಂಕು, ಸಹಕಾರಿ ಸಂಘಗಳ ಸ್ಥಾಪನೆಯಂತಹ ಅಭಿವೃದ್ಧಿ ಯೋಜನೆಗಳ ಚಾಲನೆಯಿಂದಾಗಿ ಇರುಳಿಗರ ಜೀವನ ಶೈಲಿಯಲ್ಲಿಯೂ ಆರ್ಥಿಕ ಸುಧಾರಣೆ ಕಾಣತೊಡಗಿದದೆ. ಆದರೂ ಅವರ ಸರಾಸರಿ ಮಾಸಿಕ ಆದಾಯ ಅವರ ಬಡತನ ರೇಖೆಗಿಂತ ಕೆಳಮಟ್ಟದಲ್ಲಿ ಇರುವುದು ಕಂಡುಬರುತ್ತದೆ. ಸಮುದಾಯದಲ್ಲಿ ಆರ್ಥಿಕ, ಶೈಕ್ಷಣಿಕವಾಗಿ ಹಿಂದುಳಿದಿರುವುದು ಸಾಗುವಳಿ ಯೋಗ್ಯವಲ್ಲದ ಭೂಮಿ, ಅನಕ್ಷರತೆ ಇನ್ನಿತರ ಕಾರಣಗಳಿಂದಾಗಿ ಇವರು ಬಡತನ ರೇಖೆಗಿಂತ ಕೆಳಮಟ್ಟದಲ್ಲಿ ಇರುವುದು ಕಂಡುಬರುತ್ತದೆ.

ಅಡಿಟಿಪ್ಪಣಿಗಳು

೧. ಪ್ರಭಾಕರ ಎ.ಎಸ್., (ಸಂ), ವಿವೇಕ ರೈ ಬಿ.ಎ., ಆದಿವಾಸಿ ಆಖ್ಯಾನ ಮುನ್ನುಡಿ, ಸಿದ್ಧಾರ್ಥ ಪ್ರಕಾಶನ ಹೊಸಪೇಟೆ, ಪು-೮ ೨೦೦೯

೨. ಪ್ರಭಾಕರ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೬, ೨೦೦೪.

೩. ಅದೇ ಪು. ೧೧, ೨೦೦೮.

೪. ತಿಳುವಳಿಕೆ ನೀಡಿದವರು, ಕರಿಯಪ್ಪ ಬಿನ್ ಬರಗಯ್ಯ (೮೯), ನೆಲಮಲೆ, ರಾಮನಗರ ತಾಲೂಕು

೫. ಮೈತ್ರಿ ಕೆ.ಎಂ., ಬುಡಕಟ್ಟು ಕುಲಕಸುಬುಗಳು, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು. ೧೫, ೨೦೦೨

೬. ಶೂಮ್ಯಾಕರ್ ಇ.ಎಸ್. (ಮೂಲ), ಈಶ್ವರ ಸಿಂಪಿ (ಅನು), ಸಣ್ಣದು ಸುಂದರ, ಸ್ವಪ್ನ ಬುಕ್‌ಹೌಸ್ ಬೆಂಗಳೂರು, ಪು. ೪೩, ೨೦೦೩

೭. ಕಿಕ್ಕೇರಿ ನಾರಾಯಣ (ಸಂ), ಬುಡಕಟ್ಟು ಸಂಸ್ಕೃತಿ, ಅರುಹು-ಕುರುಹು ಪ್ರಕಾಶನ, ಮೈಸೂರು, ಪು. ೧೩೦, ೨೦೧೧

೮ ಓಬಳೇಶ್ ಕೆ.ಎಚ್., ಕಿರುಅರಣ್ಯ ಉತ್ಪನ್ನ ಸಂಗ್ರಹಿಸಲು ಅನುಮತಿ ವಿಳಂಬ ಉದ್ಯೋಗಕ್ಕಾಗಿ ಗಿರಿಜನ ವಲಸೆ, ಪು. ೬, ಪ್ರಜಾವಾಣಿ, ೨೯.೪.೨೦೧೧

೯. ಮೈತ್ರಿ ಕೆ.ಎಂ., ಬುಡಕಟ್ಟು ಕುಲಕಸುಬುಗಳು, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು. ೧೫, ೨೦೦೨

೧೦. ಎಚ್ಚಾರ್ಕೆ, ಭಾರತದ ಆರ್ಥಿಕಾಭಿವೃದ್ಧಿ, ಸ್ವಪ್ನಬುಕ್ ಹೌಸ್, ಬೆಂಗಳೂರು, ಪು. ೨೫೮, ೨೦೦೭.

೧೧. ಕೃಷ್ಣಮೂರ್ತಿ ಎನ್. (ಸಂ), ಒಡಿಗ ಬುಡಕಟ್ಟು ಸಮುದಾಯ: ಒಂದು ಅಧ್ಯಯನ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ಪು. ೬೮, ೨೦೦೯.

೧೨. Ramanagara District Socio- Economic Review 2013-14, Publication Ramanagara Dist. at a Glance 2013-14, Ramanagara Zilla Panchaitha Govt. Karnataka, P.73 2013-14.

ಅಧ್ಯಾಯ ಆರು

ಶೈಕ್ಷಣಿಕ ಹಾಗೂ ರಾಜಕೀಯ ಸ್ಥಿತಿಗತಿ

ಈ ನೆಲದಲ್ಲಿ ಶತಮಾನಗಳಿಂದ ನೆಲೆಸಿರುವ ಬುಡಕಟ್ಟುಗಳು ಶಿಕ್ಷಣದ ಆರಂಭಿಕ ಪ್ರಯತ್ನಗಳನ್ನು ತಿಳಿಯುವಾಗ ಆ ಕಾಲದ ಜನರ ಮನಸ್ಥಿತಿ, ಬುಡಕಟ್ಟು ಮತ್ತು ಬುಡಕಟ್ಟೇತರ ಜನವರ್ಗದ ನಡುವೆ ಇದ್ದ ಭಿನ್ನತೆಯನ್ನು ಅವಲೋಕಿಸಬೇಕಾಗುತ್ತದೆ. ಬುಡಕಟ್ಟಿನ ಜನರನ್ನು ಕುರಿತು ಅನೇಕ ಅಪನಂಬಿಕೆಯನ್ನು ಸೃಷ್ಟಿಸಿ ಅವರು ಅನಾಗರಿಕರೆಂದು ಬಿಂಬಿಸುತ್ತಿದ್ದುದು ನಿಜ. ಕಾಲಮಾನದಲ್ಲಿ ಅವರನ್ನು ಪಶುಗಳಿಗಿಂತ ಕನಿಷ್ಟವಾಗಿ ನಡೆಸಿಕೊಂಡ ಜನವರ್ಗ ಇದ್ದುದರಿಂದ ಇವರಲ್ಲಿದ್ದ ಹಿಂಜರಿಕೆ ಮನೋಭಾವ, ನಾಚಿಕೆಯ ಸ್ವಭಾವಗಳು ಇವರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿಯಲು ಕಾರಣವಾಯಿತು. ಆದರೂ ಅವರು ಹೊಂದಿದ್ದ ಅನೌಪಚಾರಿಕ ಶಿಕ್ಷಣ ವ್ಯವಸ್ಥೆಯು ಅದ್ಭುತವಾಗಿತ್ತು. ತಮ್ಮ ಪೋಡಿ ನಾಯಕನಿಂದ ಮತ್ತು ಹಿರಿಯರಿಂದ ಜೀವನಾನುಭವದ ಅನೌಪಚಾರಿಕ ಸಾಂಸ್ಕೃತಿಕ ಕಲಿಕೆ ಪ್ರಾಪ್ತವಾಗುತ್ತಿತ್ತು. ಇಂದಿನ ಸಾಕ್ಷರತಾ ಶಿಕ್ಷಣಕ್ಕಿಂತ ಸಂಪೂರ್ಣವಾಗಿ ವಿಭಿನ್ನವಾಗಿದ್ದು ತಲೆತಲಾಂತರಗಳಿಂದ ಮೌಖಿಕವಾಗಿ ನಡೆದುಬಂದ ಜಾನಪದೀಯ ಶಿಕ್ಷಣ ಪರಂಪರೆ. ಬೇಟೆ, ಆಹಾರ ಹುಡುಕಾಟದ ವಿಧಾನ, ವೈದ್ಯಪದ್ಧತಿ ಪ್ರಾಣಿಗಳ ಚಲನವಲನದ ಜ್ಞಾನ, ನೀರಿನ ಮೂಲ ಪತ್ತೆ, ನಿಸರ್ಗದ ಪ್ರಾಕೃತಿಕ ವಿಕೋಪಗಳ ಬಗ್ಗೆ ಪೂರ್ವಜ್ಞಾನ, ಸ್ವಯಂ ರಕ್ಷಣಾ ಕಲೆ, ವಾಸನೆ, ಶಕ್ತಿಯಿಂದಲೇ ಮೃಗಗಳ ಬರುವಿಕೆಯ ಗುರುತಿಸುವಿಕೆಯ ಜ್ಞಾನ, ದೈಹಿಕ ಕಸರತ್ತು, ಕಾಡಿನ ಪ್ರಾಣಿ, ಪಕ್ಷಿಗಳ ನಡೆಗಳ ಕುರಿತ ಪಾರಂಪರಿಕ ಅರಿವು ಹಾಗೂ ತಮ್ಮ ಸಮುದಾಯದ ಒಳಗೆ ಆಚರಿಸಲೇಬೇಕಾದ ಸಂಪ್ರದಾಯದ ಶಿಕ್ಷಣವು ಅವರಿಗೆ ದೊರೆಯುತಿತ್ತು. ತಮ್ಮ ಸಮುದಾಯದಲ್ಲಿ ಪಾಲಿಸಲೇಬೇಕಾದ ವಿಧಿನಿಷೇಧಗಳ ತಿಳುವಳಿಕೆ ಜೀವನದ ಭಾಗವೇ ಆಗಿರುತಿತ್ತು.

ಸ್ವಾತಂತ್ರ್ಯಪೂರ್ವದ ಭಾರತದಲ್ಲಿ ಆದಿವಾಸಿಗಳನ್ನು ಕುರಿತಾಗಿ ಇದ್ದ ತೀವ್ರ ನಿರ್ಲಕ್ಷ್ಯ ಧೋರಣೆ, ಅಲೆಮಾರಿತನ, ನೇರವಾಗಿ ಇತರರ ಜೊತೆ ಬೆರೆಯದೇ ಮುಜುಗರ ಪಡುವ ಮನೋಭಾವನೆಗಳು ಇವರನ್ನು ಶಿಕ್ಷಣದಿಂದ ಮತ್ತಷ್ಟು ದೂರ ಇರಿಸುವಂತೆ ಮಾಡಿತು. ಜೊತೆ ಜೊತೆಗೆ ವ್ಯಾಪಾರಿಗಳು, ಜಮೀನ್ದಾರರು, ವಿದೇಶಿ ಬಂಡವಾಳಶಾಹಿ ವರ್ಗಗಳು ಇವರನ್ನು ಮತ್ತಷ್ಟು ಅನ್ಯಾಯಕ್ಕೆ ಒಳಪಡಿಸಿದರು. ಇಂತಹ ಸಂದರ್ಭದಲ್ಲಿ ಬುಡಕಟ್ಟು ಜನರ ಶಿಕ್ಷಣಕ್ಕೆ ದಾರಿದೀಪವಾಗಿ ಬಂದವರು ಕ್ರಿಶ್ಚಿಯನ್ ಮಿಶಿನರಿಗಳು. ಇವರನ್ನು ಶಿಕ್ಷಣಕ್ಕೆ ಪ್ರೇರೇಪಿಸಿದ ಮೊದಲಿಗರು. ಇಲ್ಲಿಯೂ ಸಹ ಶೋಷಿತರನ್ನು ತಮ್ಮ ಧರ್ಮಕ್ಕೆ ಮತಾಂತರಗೊಳಿಸುವ ಉದ್ದೇಶವನ್ನು ಮಿಷನರಿಗಳು ಹೊಂದಿದ್ದರು. ದೇಶಿಯ ಜನವರ್ಗದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಬುಡಕಟ್ಟು ಜನರು ಸಹಜವಾಗಿ ಕ್ರೈಸ್ತರ ಅನುಕಂಪಕ್ಕೆ ಮಾರುಹೋಗಿ ಮತಾಂತರ ಹೊಂದಿದ್ದು ಈಗ ಇತಿಹಾಸ. ಹಾಗೆಯೇ ಸ್ವಾತಂತ್ರ್ಯಪೂರ್ವದಲ್ಲಿ ಮಹಾರಾಷ್ಟ್ರದಲ್ಲಿನ ಗೋದಾವರಿ ಪುರಲೇಕರ್ ಅವರು ಮುಂಬೆಳಕಾಗಿ ಬುಡಕಟ್ಟು ಸಮುದಾಯಗಳ ಶಿಕ್ಷಣಕ್ಕೆ ಸಾಂಸ್ಕೃತಿಕ ಸ್ವರೂಪ ನೀಡಿದರು. ಸ್ವಾತಂತ್ರ್ಯ ನಂತರದ ದಿನಮಾನದಲ್ಲಿ ಬುಡಕಟ್ಟು ಸಮುದಾಯಗಳ ಜೀವನಾಭಿವೃದ್ಧಿ ಹಾಗೂ ಶಿಕ್ಷಣ, ಸಂಸ್ಕೃತಿಯನ್ನು ಕುರಿತು ಭಾರತದ ಪ್ರಧಾನಿಯಾಗಿದ್ದ ನೆಹರು ಅವರ ಮಾತುಗಳು ಹೀಗಿವೆ. ಆಧುನಿಕ ಹಾಗೂ ಸುಧಾರಣವಾದದ ನೆಲೆಯಲ್ಲಿ ಬುಡಕಟ್ಟುಗಳ ಸಂಸ್ಕೃತಿಯನ್ನು ನಿರ್ಲಕ್ಷಿಸುವ ಹಾಗಿಲ್ಲ, ಶಿಕ್ಷಣ ಪಠ್ಯಕ್ರಮ ಹಾಗೂ ಬುಡಕಟ್ಟು ಸಮುದಾಯಗಳ ಸಂಸ್ಕೃತಿಯ ಪೂರಕ ವ್ಯವಸಾಯ ಅಷ್ಟು ಸುಲಭ ಕಾರ್ಯವಲ್ಲ. ಔಪಚಾರಿಕ ಶಿಕ್ಷಣದಿಂದಲೇ ನಾವು ಬುಡಕಟ್ಟುಗಳ ಶಿಕ್ಷಣ ಅಭಿವೃದ್ಧಿ ಸಾಧಿಸಲು ಸಾಧ್ಯವಿಲ್ಲ. ಅದಕ್ಕಾಗಿ ವಿಶೇಷ ಶಿಕ್ಷಣದ ಕ್ರಮಗಳನ್ನು ಅವರ ಅಗತ್ಯಗಳ ಅನುಸಾರ ರೂಪಿಸಬೇಕಾದ ತುರ್ತು ಅಗತ್ಯವಾಗಿದೆ".[೧]

ಇದು ನೆಹರು ಅವರಿಗೆ ಬುಡಕಟ್ಟು ಜನರ ಕುರಿತಾಗಿ ಕಳಕಳಿಯನ್ನು ತೋರಿಸುತ್ತದೆ. ೨೦೧೦ರಲ್ಲಿ ಐದನೆಯ ಅಖಿಲ ಭಾರತ ಶಿಕ್ಷಣ ಸರ್ವೇಕ್ಷಣಾಲಯವು ಬುಡಕಟ್ಟು ಸಮುದಾಯಗಳ ಶಿಕ್ಷಣ ಸ್ಥಿತಿಗತಿಯನ್ನು ಕುರಿತು ಅಂಕಿ-ಅಂಶಗಳನ್ನು ನೀಡುತ್ತದೆ. ಅದರಲ್ಲಿ ಶೇ. ೮೩ರಷ್ಟು ಬುಡಕಟ್ಟುಗಳು ಒಂದು ಕಿ.ಮೀ. ಅಂತರದಲ್ಲಿ ಶಾಲೆಯನ್ನು ಹೊಂದಿದ್ದು ಶೇ. ೧೩.೯ರಷ್ಟು ಈ ಜನ ಸಮುದಾಯಕ್ಕೆ ೧.೫ ಕಿ.ಮೀ. ಅಂತರದಲ್ಲಿ ಶಾಲೆ ಇದೆ. ಹಾಗೆಯೇ ಶೇ. ೮.೩ರಷ್ಟು ಬುಡಕಟ್ಟು ಜನವರ್ಗಕ್ಕೆ ೨ ಕಿ.ಮೀ. ಅಂತರದಲ್ಲಿ ಶಾಲೆಗಳ ಲಭ್ಯತೆ ಇಲ್ಲ ಎಂದು ಸೂಚಿಸುತ್ತದೆ. ೨೫,೦೦೦ ದಷ್ಟು ಬುಡಕಟ್ಟು ನೆಲೆಗಳು ಇಂದಿಗೂ ಶಾಲಾ ನೆಲೆಗಳನ್ನು ಹೊಂದಿಲ್ಲವೆಂದು ಈ ವರದಿ ತಿಳಿಸುತ್ತದೆ. ಶಿಕ್ಷಣದ ಸಾಧನೆಯಲ್ಲಿ ಸಾಕ್ಷರತೆಯು ಅಪರಿಮಿತವಾದ ಪ್ರಾಮುಖ್ಯತೆಯನ್ನು ಹೊಂದಿದ್ದು, ಮಕ್ಕಳು ಒಂದು ನಿರ್ದಿಷ್ಟ ವಯಸ್ಸಿನವರೆಗೆ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಬೇಕಾಗುತ್ತದೆ. ನಮ್ಮ ದೇಶದ ಸಂವಿಧಾನದ ೪ನೆಯ ಪರಿಚ್ಛೇದದ ನಿರ್ದೇಶಕ ಸೂತ್ರಗಳಲ್ಲಿ ಬರುವ ೪ನೇ ವಿಧಿಯ ಪ್ರಕಾರ ೬ ರಿಂದ ೧೪ ವರ್ಷದೊಳಗಿನ ಎಲ್ಲ ಮಕ್ಕಳಿಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಒದಗಿಸಲು ಶ್ರಮವಹಿಸುತ್ತದೆ. ಜೊತೆಗೆ ಇತ್ತೀಚಿನ ಸಂವಿಧಾನ ತಿದ್ದುಪಡಿಯಲ್ಲಿ ಶಿಕ್ಷಣವನ್ನು ಹಕ್ಕು ಎಂಬ ಮಹತ್ವದ ನಿರ್ಣಯ

ತೆಗೆದುಕೊಳ್ಳಲಾಗಿದೆ. ಸಾಕ್ಷರತೆಯು ಮಾನವ ಬಂಡವಾಳವನ್ನು ಅಭಿವೃದ್ಧಿಪಡಿಸುವ ಸಾಧನ. ಸಾಕ್ಷರತೆಯು ಜನರನ್ನು ಸುಶಿಕ್ಷಿತರನ್ನಾಗಿಸುವ ಮೂಲಕ ಅವರ ಉತ್ಪಾದನಾ ಕ್ಷಮತೆಯನ್ನು, ಕುಶಲತೆಯನ್ನು ಉತ್ತಮವಾಗಿ ರೂಪಿಸುತ್ತದೆ. ಇದರಿಂದ ಅವರ ಆರ್ಥಿಕ ದುಡಿಮೆ ಹೆಚ್ಚಾಗುತ್ತದೆ. ಸಾಕ್ಷರತೆಯು ಆಧುನಿಕರಣ, ಕೈಗಾರಿಕರಣ ಪ್ರಕ್ರಿಯೆಗಳ ಸಾಮಾಜೀಕರಣವನ್ನು ಹೇಳಿಕೊಡುವ ಒಂದು ಪ್ರಮುಖ ಸಾಧನವೆಂದು ಹೇಳಲಾಗುತ್ತದೆ".[೨]

ಹೀಗೆ ಶಿಕ್ಷಣವು ಆಧುನಿಕ ಸಮಾಜದ ಮೂಲಭೂತ ಚಟುವಟಿಕೆಗಳಲ್ಲಿ ಒಂದು. ಶಿಕ್ಷಣ ಹೊರತುಪಡಿಸಿ ವರ್ತಮಾನದ ಜೀವನವನ್ನು ಕಲ್ಪಿಸುವುದು ಅಸಾಧ್ಯವೆನಿಸುತ್ತದೆ. ಶಿಕ್ಷಣ ಹೊಂದಿದವರನ್ನು ಸಮಾಜ ಇಂದು ಹೆಚ್ಚು ಗೌರವದಿಂದ ಕಾಣುತ್ತದೆ.

ರವೀಂದ್ರನಾಥ್ ಟಾಗೂರ್‌ರವರ ಪ್ರಕಾರ ನಮ್ಮ ದೇಶದಲ್ಲಿ ಜನಸಮುದಾಯ ಅನುಭವಿಸುತ್ತಿರುವುದು ಮೂಲ ಶಿಕ್ಷಣದ ಕೊರತೆ. ಸಾಕ್ಷರತೆ ಮತ್ತು ಶಿಕ್ಷಣಗಳು ಕೇವಲ ಅಭಿವೃದ್ಧಿಯ ಸಾಧನಗಳು ಮಾತ್ರವಲ್ಲ ಅವು ಅಭಿವೃದ್ಧಿಯ ಅವಿಭಾಜ್ಯ ಅಂತರ್ಗತ ಭಾಗಗಳು. ಬರೀ ವರಮಾನದ ಬೆಳವಣಿಗೆಗೆ ಆದ್ಯತೆ ನೀಡಿ ಸಾಕ್ಷರತೆ ಮತ್ತು ಆರೋಗ್ಯದ ಕಡೆ ಗಮನ ನೀಡದ ಯಾವುದೇ ಸಮುದಾಯವಾಗಲಿ, ದೇಶವಾಗಲಿ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ರಾಜಪ್ರಭುತ್ವದ ಕಾಲ-ಶೌರ್ಯವಾದರೆ, ಬ್ರಿಟೀಷರ ಕಾಲ-ಯುಕ್ತಿಯ ಯುಗವಾಗಿತ್ತು. ಪ್ರಜಾಪ್ರಭುತ್ವದ ಇಂದಿನ ಕಾಲಮಾನ ಶಿಕ್ಷಣವೇ ಶಕ್ತಿಯ ಯುಗವಾಗಿ ನಮ್ಮ ಮುಂದೆ ಗೋಚರಿಸುತ್ತಿದ್ದು, ಒಂದು ದೇಶದ ಅಭಿವೃದ್ಧಿಗೆ ಅಸಮಾನತೆ, ಅನಾರೋಗ್ಯ, ಅಭದ್ರತೆ, ಬಡತನ, ಹಸಿವು ಇವುಗಳನ್ನು ನಿರ್ಮೂಲನೆ ಮಾಡುವಲ್ಲಿ ಶಿಕ್ಷಣವು ಪ್ರಮುಖ ಅಸ್ತ್ರವಾಗಿ ಕಾರ್ಯನಿರ್ವಹಿಸುತ್ತದೆ. ಉತ್ತಮ ಮಟ್ಟದ ಶಿಕ್ಷಣವು ದುಡಿಮೆಗಾರರ ಉತ್ಪಾದಕತೆಯಲ್ಲಿ ಉತ್ತಮ ಮಟ್ಟದ ಉತ್ಪಾದನೆಗಾಗಿ ಮಹಿಳೆಯರನ್ನು ಉತ್ತಮ ತಾಯಂದಿರಾಗಿ ರೂಪಿಸುತ್ತದೆ. ಸಾಮಾಜಿಕ ಮೌಢ್ಯ, ಮೂಢನಂಬಿಕೆ, ಸಮುದಾಯದ ಆರೋಗ್ಯವನ್ನು ಉತ್ತಮಪಡಿಸಲು ದಿವ್ಯ ಔಷಧವಾಗಿ ಶಿಕ್ಷಣ ಕಾರ್ಯ ನಿರ್ವಹಿಸುತ್ತದೆ. ಸರ್ವಜ್ಞ ಕವಿ ಹೇಳುವಂತೆ "ವಿದ್ಯೆ ಇದ್ದವನ ಮುಖ ಎದ್ದುಬರುವಂತೆ ಇತ್ತು ವಿದ್ಯೆ ಇಲ್ಲದವನ ಮುಖ ಹಾಳೂರ ಹದ್ದಿನಂತೆ ಇತ್ತು ಸರ್ವಜ್ಞ" ಹೀಗೆ ಶಿಕ್ಷಣದ ಮಹತ್ವ ಅಂದಿನಿಂದ-ಇಂದಿನವರೆಗೂ ಮಾನವ ಕುಲದ ಸರ್ವತೋಮುಖ ಅಭಿವೃದ್ಧಿಯ ಸೂಚಕವಾಗಿ ಬಿಂಬಿತವಾಗಿದೆ.

ಮಾನವನ ಏಳಿಗೆಗೆ ಸಾಕ್ಷರತೆ ಮತ್ತು ಶಿಕ್ಷಣ ಬೇಕು. ಸಾಕ್ಷರತೆಯಿಂದ ವಂಚಿತರಾದ ಜನರ ಸಂಖ್ಯೆ ಕರ್ನಾಟಕದಲ್ಲಿ ಅಪಾರವಾಗಿದೆ. ಅಕ್ಷರ ಸಂಸ್ಕೃತಿಯಿಂದ ವಂಚಿತರಾದ ಜನರಲ್ಲಿ ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಂಖ್ಯೆ ಅಧಿಕವಾಗಿದೆ. ಯಾವುದೇ ಅಭಿವೃದ್ಧಿಯಿಂದ ವಂಚಿತರಾದ ಜನರ ಪ್ರಮಾಣವನ್ನು ಲೆಕ್ಕ ಹಾಕಿದರೆ ನಮಗೆ ದುಸ್ಥಿತಿಯ ಪೂರ್ಣ ಚಿತ್ರಣ ದೊರೆಯುವುದಿಲ್ಲ. ಈ ಅಭಿವೃದ್ಧಿಯಿಂದ ವಂಚಿತರಾಗಲು ಕಾರಣವಾದ ಸಾಮಾಜಿಕ ನೆಲೆಯನ್ನು ಪರಿಶೀಲಿಸಿದಾಗ ಅಕ್ಷರಸ್ಥರು ಮತ್ತು ಅನಕ್ಷರಸ್ಥರ ಸಾಮಾಜಿಕ ನೆಲೆಗಳನ್ನು ಹಾಗೂ ಮಹಿಳೆಯರ

ಪ್ರಮಾಣವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಪ್ರಮಾಣ ಶೇ. ೧೭.೧೪ರಷ್ಟಿದೆ. ೨೦೧೧ರ ಪ್ರಕಾರ ಪರಿಶಿಷ್ಟ ಪಂಗಡ ಪ್ರಮಾಣ ಶೇ. ೬.೧೫ ರಷ್ಟಿದೆ. ಅಕ್ಷರಸ್ಥರಲ್ಲಿ ಪರಿಶಿಷ್ಟ ಜಾತಿ ಪ್ರಮಾಣ ಶೇ. ೧೪.೬೫ರಷ್ಟಕ್ಕಿದೆ. ಪರಿಶಿಷ್ಟ ಪಂಗಡದ ಪ್ರಮಾಣ ಶೇ. ೫.೬೩ರಷ್ಟಿದೆ. ಅದರೆ ರಾಜ್ಯದ ಒಟ್ಟು ಅನಕ್ಷರಸ್ಥರಲ್ಲಿ ಅವರ ಪ್ರಮಾಣ ಕ್ರಮವಾಗಿ ಶೇ. ೨೩.೭೯ ಮತ್ತು ಶೇ. ೧೦.೫೨ರಷ್ಟಿದೆ. ಸಾಕ್ಷರತೆಗೆ ಸಂಬಂಧಿಸಿದಂತೆ ನಮ್ಮ ರಾಜ್ಯ ಸಾಧಿಸಿರುವ ಅಭಿವೃದ್ಧಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯ ಪ್ರಮಾಣಕ್ಕೆ ಅನುಸಾರವಾಗಿಲ್ಲ. ಅಕ್ಷರಸ್ಥರ ವಿಷಯ ಬಂದರೆ ಅವರ ಪ್ರಮಾಣ ಅವರ ಜನಸಂಖ್ಯೆಯ ಪ್ರಮಾಣಕ್ಕಿಂತ ಕಡಿಮೆಯಿದೆ. ಮತ್ತು ಅನಕ್ಷರಸ್ಥರ ವಿಷಯ ಬಂದರೆ ಅವರ ಪ್ರಮಾಣ ಅವರ ಜನಸಂಖ್ಯೆಯ ಪ್ರಮಾಣಕ್ಕಿಂತ ಅಧಿಕವಾಗಿದೆ.

ಇನ್ನು ಮಹಿಳಾ ಸಾಕ್ಷರತೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸಂಬಂಧಿಸಿದಂತೆ ಮಹಿಳಾ ಅಕ್ಷರಸ್ಥರ ಪ್ರಮಾಣ ಕ್ರಮವಾಗಿ ಶೇ. ೪೩.೧೭ ಮತ್ತು ಶೇ. ೪೨.೫೩ರಷ್ಟಿದೆ. ಅದೇ ರೀತಿಯಲ್ಲಿ ಒಟ್ಟು ಜನಸಂಖ್ಯೆಗೆ ಸಂಬಂಧಿಸಿದಂತೆ ಮಹಿಳಾ ಅನಕ್ಷರಸ್ಥರ ಪ್ರಮಾಣ ಶೇ. ೬೪ರಷ್ಟಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಅದು ಕ್ರಮವಾಗಿ ೬೨.೪೧ ಮತ್ತು ಶೇ. ೬೧.೮೩ರಷ್ಟಿದೆ. ಒಟ್ಟಾರೆ ಜನಸಂಖ್ಯೆಯಲ್ಲಿ ಮಹಿಳೆಯರ ಸಾಕ್ಷರತೆಯ ಪ್ರಮಾಣವು ಪುರುಷರ ಸಾಕ್ಷರತೆಯ ಪ್ರಮಾಣಕ್ಕಿಂತ ಕಡಿಮೆ ಇದೆ.

ಭಾರತೀಯ ಸಮಾಜದಲ್ಲಿ ಜಾತಿ ವ್ಯವಸ್ಥೆಯಲ್ಲಿ ಸಮಾನತೆ ಬರಬೇಕಾದರೆ ಮುಖ್ಯವಾಗಿ ತಳಜಾತಿಗಳು ಶಿಕ್ಷಣವನ್ನು ಪಡೆಯಲೇಬೇಕೆಂದು ಅಂಬೇಡ್ಕರ್‌ರವರು ತಿಳಿಸುತ್ತಾರೆ. ಆ ಕಾರಣಕ್ಕಾಗಿಯೇ ಸಂವಿಧಾನದಲ್ಲಿ ಹಿಂದುಳಿದ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಶಿಕ್ಷಣದಲ್ಲಿ ಹಾಗೂ ಉದ್ಯೋಗದಲ್ಲಿ ಮೀಸಲಾತಿ ನೀಡಬೇಕೆಂದು ತಿಳಿಸಲಾಗಿದೆ. ಶಿಕ್ಷಣ ಮನುಷ್ಯನ ಆತ್ಮ ಗೌರವವನ್ನು ಹೆಚ್ಚಿಸುತ್ತದೆ ಹಾಗೂ ಅವನು/ಳು ಸ್ವಾಭಿಮಾನದ ಬದುಕನ್ನು ಸಾಗಿಸಲು ಅದು ಆತ್ಮ ಸ್ಥೈರ್ಯವನ್ನು ನೀಡುತ್ತದೆ. ಹೀಗಾಗಿ ಪ್ರತಿಯೊಬ್ಬರಿಗೂ ಕಡ್ಡಾಯ ಶಿಕ್ಷಣದ ಅವಶ್ಯಕತೆಯನ್ನು ಮನಗಂಡ ಸರ್ಕಾರ ಭಾರತದ ಪ್ರತಿಯೊಬ್ಬ ಪ್ರಜೆಗೂ ಕಡ್ಡಾಯ ಶಿಕ್ಷಣ ನೀತಿಯನ್ನು ಅನುಸರಿಸುವಂತೆ ತಿಳಿಸುತ್ತದೆ. ಆದರೆ ಯಾವುದೇ ನೀತಿ ಅಥವಾ ನಿಯಮಗಳು, ಒತ್ತಡಗಳು ಮನುಷ್ಯನಿಗೆ ಆ ಮುಖವಾಗಿ ಮುನ್ನಡೆಸಲು ಸಾಧನವಾಗುವುದಿಲ್ಲ. ಮುಖ್ಯವಾಗಿ ಹಿಂದುಳಿದ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಲು ಹಿಂಜರಿಯುವುದೇಕೆ, ಶಾಲೆಗೆ ಸೇರಿಸಿದರೂ ಆ ಮಕ್ಕಳು ಶಾಲೆಯನ್ನು ಪೂರೈಸಲು ಏಕೆ ಸಾಧ್ಯವಾಗುತ್ತಿಲ್ಲ ಎಂಬುದರ ಆಳಕ್ಕೆ ಇಳಿದು ನೋಡಿದರೆ ಬೇರೆ ಸತ್ಯಗಳೇ ಹೊರಬೀಳುತ್ತವೆ. ಭಾರತೀಯರ ಮೂಲಭೂತ ಸಮಸ್ಯೆಗಳಲ್ಲಿ ಬಡತನವೂ ಒಂದು, ಕೇವಲ ಬಡತನ ವೊಂದೇ ಶಿಕ್ಷಣಕ್ಕೆ ಅಡ್ಡಿ ಎಂದು ನಾವು ತಿಳಿಯಬಾರದು ಅದರಾಚೆಗೂ ಹಲವಾರು ಸಾಮಾಜಿಕ ಕಾರಣಗಳು ಮಕ್ಕಳು ಶಾಲೆಗೆ ಹೋಗದಂತೆ ತಡೆಯುತ್ತವೆ. ಉದಾಹರಣೆಗೆ ಕರ್ನಾಟಕದಲ್ಲಿ ಅನುಸೂಚಿತ ಪಟ್ಟಿಯಲ್ಲಿರುವ ಪರಿಶಿಷ್ಟ ಪಂಗಡಗಳ ಸಂಖ್ಯೆ ಐವತ್ತಿದೆ ಆದರೆ ಈ ಐವತ್ತು ಸಮುದಾಯಗಳಲ್ಲಿ

ನಿಜಕ್ಕೂ ಶಿಕ್ಷಣಕ್ಕೆ ತೆರೆದುಕೊಂಡಿರುವ ಸಮುದಾಯಗಳು ಕೇವಲ ಬೆರಳೆಣಿಕೆಯಷ್ಟಿವೆ. ಈ ಐವತ್ತು ಸಮುದಾಯಗಳಲ್ಲಿ ನಲವತ್ತೆಂಟರಷ್ಟು ಪರಿಶಿಷ್ಟ ಪಂಗಡದ ಸಮುದಾಯಗಳಲ್ಲಿ ಶೇಕಡ ನಾಲ್ಕರಷ್ಟು ಶಿಕ್ಷಣ ಪಡೆಯಲು ಸಾಧ್ಯವಾಗಿಲ್ಲವೆಂದರೆ ಆಶ್ಚರ್ಯವಾಗಬಹುದು. ಜನಸಮುದಾಯಗಳ ಮಧ್ಯ ಇದ್ದು ನಾಗರೀಕ ಬದುಕನ್ನು ಕಂಡ ಪರಿಶಿಷ್ಟ ಪಂಗಡದಲ್ಲಿರುವ ವಾಲ್ಮೀಕಿಯಂತಹ ಸಮುದಾಯಗಳು ಮಾತ್ರ ಇಂದು ಶಿಕ್ಷಣದಲ್ಲಿ ಅಲ್ಪಮಟ್ಟಿಗೆ ಮುಂದಿವೆ. ಇಂದು ಸಾರ್ವಾತ್ರಿಕವಾಗಿ ಕರ್ನಾಟಕದ ಶೈಕ್ಷಣಿಕ ಸ್ಥಿತಿಗತಿಗಳನ್ನು ನೋಡುವಾಗ ಸಾಮಾನ್ಯವಾಗಿ ಕರ್ನಾಟಕದ ಒಟ್ಟು ಶೈಕ್ಷಣಿಕ ಪ್ರಗತಿ, ಅದರಲ್ಲಿ ಪರಿಶಿಷ್ಟ ಜಾತಿಗಳ ಶೈಕ್ಷಣಿಕ ಪ್ರಗತಿ ಹಾಗೂ ಪರಿಶಿಷ್ಟ ಪಂಗಡಗಳ ಶೈಕ್ಷಣಿಕ ಪ್ರಗತಿ, ಹಾಗೂ ಇತರರ ಶೈಕ್ಷಣಿಕ ಪ್ರಗತಿ ಈ ಮಾದರಿಯಲ್ಲಿ ನೋಡುವುದು ವಾಡಿಕೆ. ಅಂದರೆ ಇಂದು ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳ ಒಟ್ಟು ಶೈಕ್ಷಣಿಕ ಪ್ರಗತಿ ಎಂಬುದು ಕೇವಲ ಕೆಲವೇ ಸಮುದಾಯಗಳಿಗೆ ಮಾತ್ರ ಸೀಮಿತವಾಗಿದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಇಂದು ಉದ್ಯೋಗ, ಶಿಕ್ಷಣ ಹಾಗೂ ಇತರ ಸವಲತ್ತುಗಳನ್ನು ಈ ಸಮುದಾಯಗಳು ಮಾತ್ರ ಅಲ್ಪ ಮಟ್ಟಿಗಾದರೂ ಪಡೆಯಲು ಸಾಧ್ಯವಾಗಿದೆ. ಆದರೆ ಇದರಲ್ಲಿಯೇ ಅಲ್ಪ ಸಂಖ್ಯಾತವಾದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳು ಶಿಕ್ಷಣದಂತಹ ಮೂಲಭೂತ ಸೌಲಭ್ಯವನ್ನು ಪಡೆಯಲು ಸಾಧ್ಯವಾಗಿಲ್ಲವೆಂಬುದನ್ನು ತಿಳಿಸಲೇಬೇಕಾದ ಅನಿವಾರ್ಹತೆ ಇದೆ. ಈ ಮಾತನ್ನು ಹೇಳಲು ಮುಖ್ಯ ಕಾರಣವೇನೆಂದರೆ ಅವಕಾಶ ದೊರೆಯುವ ಸಮುದಾಯಗಳೊಂದಿಗೆ ಅವಕಾಶ ವಂಚಿತ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರಿಗೆ ಮೂಲಭೂತ ಸೌಲಭ್ಯಗಳು ದೊರೆಯಬೇಕೆಂದೇ ಇದರ ಆಶಯವಾಗಿದೆ.

ದಲಿತರಲ್ಲಿಯೇ ದಲಿತರೆಂದು ಪರಿಗಣಿತದಾದ ಮಹಿಳೆಯರು ಶೈಕ್ಷಣಿಕ ಪ್ರಗತಿಯಲ್ಲಿ ತುಂಬಾ ಹಿಂದುಳಿದಿದ್ದಾರೆ. ಮುಖ್ಯವಾಗಿ ಮೇಲ್ವರ್ಗಗಳಲ್ಲಿ ಸಾಮಾಜಿಕ ಕಾರಣಗಳಿಗಾಗಿ ಮಹಿಳೆಯರನ್ನು ಮನೆಯಿಂದ ಹೊರಗೆ ವಿದ್ಯಾಭ್ಯಾಸಕ್ಕಾಗಿ ಕಳಿಸುವುದು ತುಂಬಾ ಅಪರೂಪವಾಗಿದೆ. ಹುಡುಗಿಯರು ಹದಿಮೂರು ವರ್ಷದಿಂದ ಹದಿನಾರು ವರ್ಷದೊಳಗೆ ಋತಿಮತಿಯಾಗುವುದು ಪ್ರಕೃತಿ ನಿಯಮ, ಹೀಗೆ ಮೈನೆರೆದ ಮಕ್ಕಳನ್ನು ಶಾಲೆಗೆ, ಅದರಲ್ಲೂ ಊರಿನಾಚೆಗೆ ಇರುವ ಶಾಲೆಗಳಿಗೆ ಕಳಿಸುವುದು (ಸಾಮಾಜಿಕ ಕಾರಣಗಳಿಗಾಗಿ) ಅಪಾಯವೆಂದೇ ಭಾವಿಸುವ ಪಾಲಕರು ಸಾಮಾನ್ಯವಾಗಿ ಉನ್ನತ ಶಿಕ್ಷಣಕ್ಕೆ ಹುಡುಗಿಯರನ್ನು ಕಳಿಸುವುದು ಅಪರೂಪ.

ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ, ಅವಳಿಗೆ ಬಂಡವಾಳ ತೊಡಗಿಸಿ ಓದುಸುವುದಕ್ಕಿಂತ ಅದೇ ಹಣವನ್ನು ವರದಕ್ಷಿಣೆಯಾಗಿ ನೀಡಿ ಮದುವೆ ಮಾಡಿಕೊಟ್ಟರೆ ಪಾಲಕರಾದ ತಮ್ಮ ಜವಾಬ್ದಾರಿ ಮುಗಿಯುತ್ತದೆ ಎಂದೇ ಭಾವಿಸುವ ಪಾಲಕರ ಪ್ರಮಾಣವೇ ಹೆಚ್ಚು, ಹೀಗಾಗಿ ಮಹಿಳೆಯರಿಗೆ ಉನ್ನತ ಶಿಕ್ಷಣ ಕೊಡಿಸುವುದರಲ್ಲಿ ಪಾಲಕರು ಹಿಂಜರಿಯುತ್ತಾರೆ.

೬.೧. ಶಾಲೆಯಿಂದ ಹೊರಗುಳಿದ ೭-೧೪ ವಯೋಮಾನದ ಮಕ್ಕಳ ವಿವರ

ಆರ್ಥಿಕ ಹಾಗೂ ಸಾಂಖ್ಯಿಕ ನಿರ್ದೇಶನಾಲಯವು ೨೦೦೪ರಲ್ಲಿ ಪರಿಶಿಷ್ಟ ಪಂಗಡದ ಕುಟುಂಬಗಳ ಕುರಿತು ಮಾದರಿ ಸಮೀಕ್ಷೆಯನ್ನು ಕೈಗೊಂಡಿತ್ತು. ಅದು ೯-೩೫ ವಯೋಮಾನದೊಳಗಿನ ಜನರ ಮಾಹಿತಿಯನ್ನು ಪಡೆದಿದೆ. ಈ ಸಮೀಕ್ಷೆಯು ಹೆಣ್ಣು ಮಕ್ಕಳು ಶಾಲೆಯನ್ನು ಬಿಡಲು ಕೆಲವು ಕಾರಣಗಳನ್ನು ಗುರುತಿಸಿದೆ. ಅವುಗಳಾವುವೆಂದರೆ ಕ್ರಮವಾಗಿ

೧. ಮನೆಯಲ್ಲಿ ಗೃಹಕೃತ್ಯದ ಕೆಲಸಗಳಲ್ಲಿ ತೊಡಗುವುದು.

೨. ಪಾಲಕರಿಗೆ ಮಕ್ಕಳ ಶಿಕ್ಷಣದ ಹೊರೆ ಭರಿಸಲು ಸಾಧ್ಯವಾಗದೇ ಇರುವುದು.

೩. ಮಕ್ಕಳ ಪಾಲನೆ ಪೊಷಣೆಗಾಗಿ ಶಾಲೆ ತೊರೆಯುವುದು.

೪. ಹೊರಗೆ ಕೂಲಿ ಕೆಲಸಗಳಲ್ಲಿ ತೊಡಗುವುದು, ಮುಂತಾದವುಗಳಾಗಿವೆ.[೩]

ಪ್ರೌಢ ಶಿಕ್ಷಣದಲ್ಲಿಯ ದಾಖಲಾತಿ ಪ್ರಮಾಣವು ಪ್ರಾಥಮಿಕ ಹಂತಕ್ಕಿಂತಲೂ ಕಡಿಮೆಯಾಗಿದೆ. ಹಾಗೇ ಉನ್ನತ ಶಿಕ್ಷಣ ಹಂತದಲ್ಲಿ ಈ ಪ್ರಮಾಣ ಇನ್ನು ಕುಗ್ಗುತ್ತದೆ. ತಾಂತ್ರಿಕ ಶಿಕ್ಷಣದಲ್ಲಂತೂ (ಡಿಪ್ಲೋಮಾ, ಬಿ.ಇ, ಬಿಟೆಕ್, ವೈದ್ಯಕೀಯ ಇತ್ಯಾದಿ) ಪರಿಶಿಷ್ಟ ಪಂಗಡದ ಮಕ್ಕಳ ಪಾಲು ೨೦೦೦ ದಲ್ಲಿ ಶೇಕಡ ೦.೧ ರಷ್ಟು ಇದ್ದು ೨೦೦೨-೦೩ ರ ಹೊತ್ತಿಗೆ ಅದು ಶೇಕಡ ೧.೭ ರಷ್ಟು ಏರಿಕೆ ಕಂಡಿದೆ. ಡಿಪ್ಲೊಮೋ ಕೋರ್ಸ್‌ಗಳಲ್ಲಿ ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ದಾಖಾಲಾತಿಯು ಕನಿಷ್ಟ ಶೇಕಡ ೦.೭ ರಷ್ಟು ಕಂಡು ಬಂದಿದೆ (ಮಾನವಾಭಿವೃದ್ಧಿ ವರದಿ ೨೦೦೫: ೨೫೯) ಅಂದರೆ ತಾಂತ್ರಿಕ ಶಿಕ್ಷಣವನ್ನು ಪಡೆಯುವಲ್ಲಿ ಪರಿಶಿಷ್ಟ ಪಂಗಡಗಳು ಸೋತಿವೆ ಎಂದೇ ಇದರರ್ಥ.

ಸರ್ಕಾರದ ಹೊಸ ಹೊಸ ಯೋಜನೆಗಳಾದ ವಿದ್ಯಾರ್ಥಿವೇತನ, ಉಚಿತ ವಸತಿ ನಿಲಯಗಳ ಸೌಲಭ್ಯ ಇತ್ಯಾದಿಗಳು ಇಂದು ಪರಿಶಿಷ್ಟ ಪಂಗಡದ ಮಕ್ಕಳಿಗೆ ದೊರೆಯುತ್ತಿವೆಯಾದರೂ ಸಹ ಆ ಸಮುದಾಯಗಳು ನಿರೀಕ್ಷಿತ ಮಟ್ಟದಲ್ಲಿ ಶೈಕ್ಷಣಿಕ ಪ್ರಗತಿಯನ್ನು ಪಡೆಯಲು ಸಾಧ್ಯವಾಗುತ್ತಿಲ್ಲ.

೬.೨. ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರ ಸಾಕ್ಷರತೆಯ ಪ್ರಮಾಣ

ಕೋಷ್ಟಕ ೬.೧. ಕರ್ನಾಟಕದಲ್ಲಿ ಅಕ್ಷರಸ್ಥರು ಮತ್ತು ಅನಕ್ಷಸ್ಥರು ೨೦೧೧ (ಲಕ್ಷಗಳಲ್ಲಿ)

ಕ್ರಸಂ.	ವಿವರ	ಒಟ್ಟು	ಪುರುಷ	ಮಹಿಳೆ
೧.	ಒಟ್ಟು ಅಕ್ಷರಸ್ಥರು	೪೦೬.೪೭	೨೨೫.೦೮	೧೮೧.೩೦
೨.	ಒಟ್ಟು ಸಾಕ್ಷರತಾ ಪ್ರಮಾಣ	ಶೇ.೭೫.೩೬	ಶೇ.೮೨.೪೭	ಶೇ.೬೮.೦೮
೩.	ಒಟ್ಟು ಅಕ್ಷರಸ್ಥರಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆ	೫೯೫೬ (೧೪.೬೫)	೩೩೮೫ (೧೫.೦೪)	೨೫.೭೧ (೧೪.೧೭)

೪.	ಒಟ್ಟು ಪರಿಶಿಷ್ಟ ಜಾತಿ ಸಾಕ್ಷರತಾ ಪ್ರಮಾಣ	ಶೇ.೬೫.೩೨	ಶೇ.೭೪.೦೨	ಶೇ.೫೬.೫೮
೫.	ಒಟ್ಟು ಅಕ್ಷರಸ್ಥರ ಪರಿಶಿಷ್ಟ ಪಂಗಡ ಜನಸಂಖ್ಯೆ	೨೨.೯೦ (೫.೬೩)	೧೩.೧೬ (೫.೮೪)	೯.೭೪ (೪.೩೨)
೬.	ಒಟ್ಟು ಪರಿಶಿಷ್ಟ ಪಂಗಡ ಸಾಕ್ಷರತಾ ಪ್ರಮಾಣ	ಶೇ.೬೨.೦೮	ಶೇ.೭೧.೧೩	ಶೇ.೫೨.೯೬
೭.	ಒಟ್ಟು ಅನಕ್ಷರಸ್ಥರು	೧೩೨.೮೭	೪೭.೮೩	೮೫.೦೪
೮.	ಒಟ್ಟು ಅನಕ್ಷರಸ್ಥರು ಪರಿಶಿಷ್ಟ ಜಾತಿ ಜನಸಂಖ್ಯೆ	೩೧.೬೭ (೨೩.೭೯)	೧೧.೮೮ (೫.೨೭)	೧೯.೭೩ (೮.೭೬)
೯.	ಒಟ್ಟು ಅನಕ್ಷರಸ್ಥರಲ್ಲಿ ಪರಿಶಿಷ್ಟ ಪಂಗಡ ಜನಸಂಖ್ಯೆ	೧೩೯೯ (೧೦.೫೨)	೫೩೪ (೨.೩೭)	೮.೬೫ (೩.೮೪)

ಮೂಲ: ಸೆನ್ಸಸ್ ಆಫ್ ಇಂಡಿಯಾ ೨೦೧೧, ಪ್ರೈಮರಿ ಸೋರ್ಸ್ ಅಬ್ಜೆಕ್ಟ್ ಕರ್ನಾಟಕ ಸೀರಿಸ್ ಭಾರತ ಸರ್ಕಾರ, ೩೦(ಅವರಣದಲ್ಲಿನ ಅಂಕಿಗಳಿಗೆ ಸಂಬಂಧಿಸಿದ ಒಟ್ಟು ಸಂಖ್ಯೆ ಶೇ. ಪ್ರಮಾಣ) ೨೦೧೧.

ಕೋಷ್ಟಕ ೬.೨. ಸಮೀಕ್ಷೆಗೊಳಪಟ್ಟ ರಾಮನಗರ ಜಿಲ್ಲೆಯ ಇರುಳಿಗ ಸಮುದಾಯದ ತಾಲೂಕುವಾರು, ಲಿಂಗವಾರು ಸಾಕ್ಷರ ಪ್ರಮಾಣ

ಕ್ರ.ಸಂ.	ತಾಲೂಕುಗಳು	ಒಟ್ಟು ಜನಸಂಖ್ಯೆ			೦-೬ ವಯೋಮಾನದವರು			ಸಾಕ್ಷರರ್ಹರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಕನಕಪುರ	೧೮೦೩	೧೬೭೫	೩೪೭೮	೨೭೫	೨೩೯	೫೧೪	೧೫೨೮	೧೪೩೬	೨೯೬೪
೨	ಚನ್ನಪಟ್ಟಣ	೧೨೬	೧೨೮	೨೫೪	೨೦	೨೫	೪೫	೧೦೬	೧೦೩	೨೦೯
೩	ಮಾಗಡಿ	೩೮೩	೩೬೯	೭೫೨	೬೬	೬೭	೧೩೩	೩೧೭	೩೦೨	೬೧೯
೪	ರಾಮನಗರ	೧೧೮೯	೧೧೨೧	೨೩೧೦	೧೭೬	೧೬೯	೩೪೫	೧೦೧೩	೯೫೨	೧೯೬೫
	ಒಟ್ಟು	೩೫೦೧	೩೨೯೩	೬೭೯೪	೫೩೭	೫೦೦	೧೦೩೭	೨೯೬೪	೨೭೯೩	೫೭೫೭

ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ನಾಲ್ಕು ತಾಲೂಕುಗಳಲ್ಲಿ ಪ್ರತಿ ತಾಲೂಕಿನ ಹೋಬಳಿವಾರು ಬರುವ ನೆಲೆಗಳನ್ನು ಕ್ಷೇತ್ರಕಾರ್ಯದ ಮೂಲಕ ಅಂಕಿ-ಅಂಶಗಳನ್ನು ಪಡೆಯಲಾಗಿದ್ದು, ಇದರಲ್ಲಿ ಒಟ್ಟಾರೆ ೬೭೯೪ ಜನಸಂಖ್ಯೆಯನ್ನು ಹೊಂದಿದ್ದು, ಲಿಂಗವಾರು ಒಟ್ಟು ಪುರುಷರು ೩೫೦೧ ಹಾಗೂ

ಮಹಿಳೆಯರು ೩೯೩ರಷ್ಟಿದ್ದಾರೆ. ಇವರ ಒಟ್ಟಾರೆ ಸಾಕ್ಷರತೆಯ ಪ್ರಮಾಣವನ್ನು ಮೊದಲಿಗೆ ಗಮನಿಸೋಣ. ನಂತರ ಪ್ರಸ್ತುತ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ಶೈಕ್ಷಣಿಕ ಸ್ಥಿತಿಗತಿಗಳನ್ನು ನೋಡಬಹುದು.

ಕೋಷ್ಟಕ ೬.೩. ರಾಮನಗರ ಜಿಲ್ಲೆಯ ಇರುಳಿಗ ಸಮುದಾಯದ ತಾಲೂಕುವಾರು, ಹೋಬಳಿವಾರು ಮತ್ತು ಲಿಂಗವಾರು ಅಕ್ಷರಸ್ಥರ, ಅನಕ್ಷರಸ್ಥರ ಪ್ರಮಾಣ

ತಾಲೂಕುಗಳು	ಹೋಬಳಿಗಳು	ಸಾಕ್ಷರರ್ಹರು			ಸಾಕ್ಷರಸ್ಥರು			ಸಾಕ್ಷರಸ್ಥರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಕನಕಪುರ	ಉಯ್ಯಂಬಳ್ಳಿ	೭೮	೭೭	೧೫೫	೨೯	೨೮	೫೭	೪೯	೪೯	೯೮
	ಕಸಬಾ	೪೩೫	೪೪೦	೮೭೫	೨೧೨	೧೯೫	೪೦೭	೨೨೩	೨೪೫	೪೬೮
	ಕೋಡಿಹಳ್ಳಿ	೩೧೯	೩೧೧	೬೩೦	೨೦೯	೧೪೬	೩೫೫	೧೧೦	೧೬೫	೨೭೫
	ಮರಳವಾಡಿ	೨೨೫	೨೦೦	೪೨೫	೧೨೬	೮೭	೨೧೩	೯೯	೧೧೩	೨೧೨
	ಸಾತನೂರು	೧೯೬	೧೬೯	೩೬೫	೧೧೪	೬೮	೧೮೨	೮೨	೧೦೧	೧೮೩
	ಕನಕಪುರ ತಾಲೂಕು	**೧೨೫೩**	**೧೧೯೭**	**೨೪೫೦**	**೬೯೦**	**೫೨೪**	**೧೨೧೪**	**೫೬೩**	**೬೭೩**	**೧೨೩೬**
ಚನ್ನಪಟ್ಟಣ	ಮಳೂರು	**೮೬**	**೭೮**	**೧೬೪**	**೪೮**	**೪೪**	**೯೨**	**೩೮**	**೩೪**	**೭೨**
ಮಾಗಡಿ	ಕಸಬಾ	೧೧	೧೫	೨೬	೪	೧೧	೧೫	೭	೪	೧೧
	ಮಾಡಬಾಳ್	೨೦೪	೧೯೭	೪೦೧	೧೦೪	೮೮	೧೯೨	೧೦೦	೧೦೯	೨೦೯
	ಸೋಲೂರು	೩೬	೨೩	೫೯	**೧೯**	**೬**	**೨೫**	೧೭	೧೭	೩೪
	ಮಾಗಡಿ ತಾಲೂಕು	**೨೫೧**	**೨೩೫**	**೪೮೬**	**೧೨೭**	**೧೦೫**	**೨೩೨**	**೧೨೪**	**೧೩೦**	**೨೫೪**
ರಾಮನಗರ	ಕಸಬಾ	೧೯೮	೧೯೯	೩೯೭	೧೨೫	೧೨೨	೨೪೫	೭೩	೭೭	೧೫೦
	ಕೂಟಗಲ್	೩೭೬	೩೪೦	೭೧೬	೨೫೬	೧೮೭	೪೪೩	೧೨೦	೧೫೩	೨೭೩
	ಕೈಲಂಚ	೨೫೯	೨೪೦	೪೯೯	೧೪೮	೧೧೪	೨೬೨	೧೧೧	೧೨೬	೨೩೭
	ಬಿಡದಿ	೫	೨	೭	೨	೨	೪	೩	೦	೩
	ರಾಮನಗರ ತಾಲೂಕು	**೮೩೭**	**೭೮೩**	**೧೬೨೦**	**೫೩೧**	**೪೨೫**	**೯೫೪**	**೩೦೭**	**೩೫೬**	**೬೬೩**

ಕೋಷ್ಟಕದ ಅಂಕಿ-ಅಂಶಗಳನ್ನು ಗಮನಿಸಿದಾಗ ಸಾಕ್ಷರಸ್ಥರರ ಒಟ್ಟಾರೆ ಜನಸಂಖ್ಯೆಯಲ್ಲಿ ೦-೬ರ ವಯೋಮಾನದವರನ್ನು ಅಕ್ಷರಸ್ಥರಲ್ಲದ ಗುಂಪು ಎಂದು ಪರಿಗಣಿಸಲಾಗಿದೆ. ಒಟ್ಟಾರೆ ಕ್ಷೇತ್ರಕಾರ್ಯದ ನಾಲ್ಕು ತಾಲೂಕುವಾರು ಅಂಕಿಅಂಶಗಳನ್ನು ಕೋಷ್ಟಕ ೪ರಲ್ಲಿ ಗಮನಿಸಿದಾಗ ಸಾಕ್ಷರಸ್ಥರು ಲಿಂಗವಾರು ಪುರುಷರು ಶೇ. ೫೧.೩೯ರಷ್ಟು, ಮಹಿಳೆಯರು ಶೇ. ೪೮.೬೧ರಷ್ಟು ಕಂಡುಬರುತ್ತದೆ. ಆದರೆ, ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಗಮನಿಸಿದಾಗ ಶೇ. ೫೩ರಷ್ಟಿದ್ದಾರೆ. ಒಟ್ಟಾರೆ ಅನಕ್ಷರಸ್ಥರ ಪ್ರಮಾಣ ಶೇ. ೪೭ರಷ್ಟಿರುವುದು ಕಂಡುಬರುತ್ತದೆ. ಲಿಂಗವಾರು ಸಾಕ್ಷರತೆಯಲ್ಲಿ ಗಂಡು ಶೇ. ೫೭.೫೯ರಷ್ಟು, ಹೆಣ್ಣು ಶೇ.೪೭.೫೯ರಷ್ಟು ಕಂಡುಬಂದರೆ, ಅನಕ್ಷರತೆಯ ಪ್ರಮಾಣದಲ್ಲಿ ಗಂಡು ಶೇ. ೪೨.೪೧ರಷ್ಟು, ಹೆಣ್ಣು ಶೇ. ೫೨.೪೧ರಷ್ಟಿದ್ದಾರೆ.

ಲಂಬಚಿತ್ರ ೬.೨ ರಾಮನಗರ ಜಿಲ್ಲೆಯ ತಾಲೂಕುವಾರು, ಲಿಂಗವಾರು ಅಕ್ಷರಸ್ಥರು, ಅನಕ್ಷರಸ್ಥರ ಪ್ರಮಾಣ



ರಾಮನಗರ ಜಿಲ್ಲೆಯನ್ನೊಳಗೊಂಡಂತೆ ಕನಕಪುರ, ಚನ್ನಪಟ್ಟಣ, ಮಾಗಡಿ ತಾಲೂಕುವಾರು ಇರುಳಿಗ ಸಮುದಾಯದ ಕ್ಷೇತ್ರಕಾರ್ಯದ ಲಿಂಗವಾರು ಸಾಕ್ಷರತೆ ಮತ್ತು ಅನಕ್ಷರಸ್ಥರ ಪ್ರಮಾಣವನ್ನು ಗಮನಿಸಿದಾಗ ಒಟ್ಟಾರೆ ಕನಕಪುರ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ೫ ಹೋಬಳಿಗಳ (ಉಯ್ಯಂಬಳ್ಳಿ, ಕಸಬಾ, ಕೋಡಿಹಳ್ಳಿ, ಮರಳವಾಡಿ, ಸಾತನೂರು,) ಸಾಕ್ಷರಸ್ಥರ ಪ್ರಮಾಣ ಶೇ.೫೦ರಷ್ಟು ಆಗಿದ್ದು, ಲಿಂಗವಾರು ಪ್ರಮಾಣದಲ್ಲಿ ನೋಡಿದಾಗ ಗಂಡು ಶೇ. ೫೫.೦೭ರಷ್ಟು ಹೆಣ್ಣು ಶೇ. ೪೩.೭೮ರಷ್ಟು ಕಂಡುಬರುತ್ತದೆ. ಅನಕ್ಷರಸ್ಥರ ಪ್ರಮಾಣ ಶೇ.೫೦ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೪೪.೯೩ರಷ್ಟು, ಹೆಣ್ಣು ಶೇ. ೫೬.೨೨ರಷ್ಟಿದ್ದಾರೆ.

ಚನ್ನಪಟ್ಟಣ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಮಳೂರು ಹೋಬಳಿಯ ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೫೬ರಷ್ಟು ಆಗಿದ್ದು, ಲಿಂಗವಾರು ಪ್ರಮಾಣದಲ್ಲಿ ನೋಡಿದಾಗ ಗಂಡು ಶೇ. ೫೫.೮೧ರಷ್ಟು ಹೆಣ್ಣು ಶೇ. ೫೬.೪೧ರಷ್ಟು ಕಂಡುಬರುತ್ತದೆ. ಅನಕ್ಷರಸ್ಥರ ಪ್ರಮಾಣ ಶೇ. ೪೪ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೪೪.೧೯ರಷ್ಟು, ಹೆಣ್ಣು ಶೇ. ೪೩.೫೯ರಷ್ಟಿದ್ದಾರೆ.

ಮಾಗಡಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ೩ ಹೋಬಳಿಗಳ (ಕಸಬಾ, ಮಾಡಬಾಳ್, ಸೋಲೂರು) ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೪೮ರಷ್ಟು ಆಗಿದ್ದು, ಲಿಂಗವಾರು ಪ್ರಮಾಣದಲ್ಲಿ ನೋಡಿದಾಗ ಗಂಡು ಶೇ. ೫೦.೬೦ರಷ್ಟು ಹೆಣ್ಣು ಶೇ. ೪೪.೬೮ರಷ್ಟು ಕಂಡುಬರುತ್ತದೆ. ಅನಕ್ಷರತಸ್ಥರ ಪ್ರಮಾಣ ಶೇ. ೫೨ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೪೯.೪೦ರಷ್ಟು, ಹೆಣ್ಣು ಶೇ. ೫೫.೩೨ರಷ್ಟಿದ್ದಾರೆ.

ರಾಮನಗರ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ೪ ಹೋಬಳಿಗಳ (ಕಸಬಾ, ಕೂಟಗಲ್, ಕೈಲಂಚ, ಬಿಡದಿ) ಒಟ್ಟಾರೆ ಸಾಕ್ಷರಸ್ಥರ ಪ್ರಮಾಣ ಶೇ. ೫೯ರಷ್ಟು ಆಗಿದ್ದು, ಲಿಂಗವಾರು ಪ್ರಮಾಣದಲ್ಲಿ ನೋಡಿದಾಗ ಗಂಡು ಶೇ. ೬೩.೩೭ರಷ್ಟು ಹೆಣ್ಣು ಶೇ. ೫೪.೪೨ರಷ್ಟು ಕಂಡುಬರುತ್ತದೆ. ಅನಕ್ಷರಸ್ಥರ ಪ್ರಮಾಣ ಶೇ. ೪೧ರಷ್ಟಾಗಿದೆ. ಲಿಂಗವಾರು ಪ್ರಮಾಣದಲ್ಲಿ ಗಂಡು ಶೇ. ೩೬.೬೩ರಷ್ಟು, ಹೆಣ್ಣು ಶೇ. ೪೫.೫೮ರಷ್ಟಿರುವುದು ಕಂಡುಬರುತ್ತದೆ.

ಇರುಳಿಗ ಸಮುದಾಯ ಸಾಕ್ಷರತೆಯಲ್ಲಿ ಅತ್ಯಂತ ಹಿಂದುಳಿದಿದೆ. ಇವರು ಇದರ ಸಾಕ್ಷರತೆ ಶೇ. ೫೩ರಷ್ಟು ಇದ್ದು ರಾಜ್ಯದ ಹಾಗೂ ಜಿಲ್ಲೆಯ ಸಾಕ್ಷರತೆಗಿಂತ ಅತ್ಯಂತ ಕಡಿಮೆ ಇದೆ. ಅರಣ್ಯ ಪ್ರದೇಶದಲ್ಲಿ ಇರುವವರಲ್ಲಿ ಸಾಕ್ಷರತೆ ಎಂಬುದು ಇನ್ನೂ ಕನಸಿನ ಮಾತಾಗಿಯೇ ಉಳಿದಿದೆ. ಸರ್ಕಾರದ ಸಾಮೂಹಿಕ ಸಾಕ್ಷರತಾ ಆಂದೋಲನದ ಪ್ರಭಾವವು ಸಹ ಇವರನ್ನು ಇನ್ನೂ ಮುಟ್ಟದೇ ಇರುವುದು ವಿಪರ್ಯಾಸವೇ ಸರಿ. ಔಪಚಾರಿಕ ಆಧುನಿಕ ಶಿಕ್ಷಣ ಅಂದರೆ ಶಾಲಾ ಶಿಕ್ಷಣ ಇರುಳಿಗ ಸಮುದಾಯಕ್ಕೆ ಅತ್ಯಂತ ಹೊಸತು ಮತ್ತು ಇತ್ತೀಚಿನದು. ಬಹು ಹಿಂದೆ ಮಕ್ಕಳು ತಮ್ಮ ತಂದೆ ತಾಯಿ ಮತ್ತು ಕುಟುಂಬದ ಸದಸ್ಯರಿಂದ ಅನೌಪಚಾರಿಕ ಶಿಕ್ಷಣವನ್ನು ಕೆಲಸ ಕಾರ್ಯಗಳ ಮೂಲಕ ಪಡೆಯುತ್ತಿದ್ದರು.

ಕೃಷಿ, ಬೇಟೆ, ಜೇನು ಇಳಿಸುವುದು ಪಶುಪಾಲನೆ ಹೀಗೆ ತಮ್ಮ ಕುಟುಂಬದ ಸದಸ್ಯರಿಂದಲೇ ಅನೌಪಚಾರಿಕ ಶಿಕ್ಷಣವನ್ನು ಪಡೆಯುತ್ತಿದ್ದರು. ಇಂದಿಗೂ ಎರಡು ದಶಕಗಳ ಹಿಂದಿನ ಮೇಲ್ಪಟ್ಟವರಲ್ಲಿ ಔಪಚಾರಿಕ ಶಿಕ್ಷಣ ಎನ್ನುವುದಿಲ್ಲ.

ಆಧುನಿಕ ಔಪಚಾರಿಕ ಶಿಕ್ಷಣ ವ್ಯವಸ್ಥೆ ಜಾರಿಗೆ ಬಂದ ನಂತರ ಜಿಲ್ಲೆಯ ಇತರೆ ಬೇರೆ ಬೇರೆ ಸಮುದಾಯಗಳು ಅವರವರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳಿಗೆ ತಕ್ಕಂತೆ ಶಿಕ್ಷಣವನ್ನು ಪಡೆದರು. ಆದರೆ ಇರುಳಿಗ ಸಮುದಾಯದವರು ಔಪಚಾರಿಕ ಶಿಕ್ಷಣದಿಂದ ವಂಚಿತರಾದರು. ಕಾರಣ ಇವರ ಅರಣ್ಯವಾಸ, ಹಿಂದುಳಿದಿರುವ ಪ್ರದೇಶಗಳಲ್ಲಿ ವಾಸದ ನೆಲೆ ಹಾಗೂ ಮಕ್ಕಳಿಗೆ ಶಾಲೆಗೆ ಕಳುಹಿಸುವ ಬಗ್ಗೆ ಇದ್ದ ಅನಾಸಕ್ತಿ. ಹೀಗಾಗಿ ಈ ಸಮುದಾಯದ ಬಹುತೇಕ ತಂದೆ-ತಾಯಿಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ. ತಾವು ಅಲೆಮಾರಿಗಳಾಗಿ ತೋಟ ಹಾಗೂ ಇತರೆ ಪ್ರದೇಶಗಳಿಗೆ ಹೊಟ್ಟೆಪಾಡಿಗಾಗಿ ಹೋಗುವುದರಿಂದ ತಮ್ಮ ಜೊತೆಯಲ್ಲಿಯೇ ಮಕ್ಕಳನ್ನು ಕರೆದುಕೊಂಡು ಹೋಗುವುದ ರಿಂದ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ. ಮಕ್ಕಳನ್ನು ಏಕೆ ಶಾಲೆಗೆ ಕಳುಹಿಸುವುದಿಲ್ಲ? ಎಂದು ಕೇಳಿದರೆ 'ಕಲಿತು ಏನು ಉದ್ಧಾರವಾಗಬೇಕಿದೆ?' 'ಓದಿದವರಿಗೆಲ್ಲ ಕೆಲಸ ಸಿಕ್ಕುತ್ತದೆಯಾ?' ಎಂಬ ಮರು ಪ್ರಶ್ನೆ ಹಾಕುತ್ತಾರೆ. ಇದಕ್ಕೆ ಅತ್ಯಂತ ಬಲವಾದ ಕಾರಣವೆಂದರೆ, ಇವರು ಪ್ರತ್ಯೇಕವಾಗಿ ವಾಸಿಸುವ ಕಾಲೋನಿಗಳಲ್ಲಿ ಶಿಕ್ಷಣದ ಅರಿವು ಇಲ್ಲದೆ ಇರುವುದು ಹಾಗೂ ತಮ್ಮ ಕಾಲೋನಿಗಳಲ್ಲಿ ಶಾಲಾ ಸೌಲಭ್ಯಗಳಿಲ್ಲದೆ ಇರುವುದು. ಒಂದುವೇಳೆ ಈ ಕಾಲೋನಿಯಲ್ಲಿರುವ ಮಕ್ಕಳು ಶಾಲೆಗೆ ಹೋಗಬೇಕಾದರೆ ಕಾಲೋನಿಯಿಂದ ಬಹುದೂರ ಹೋಗಿ ಕಲಿಯಬೇಕಾಗಿತ್ತು.

ಆದರೆ ಈಗ ಬದಲಾವಣೆ ಅಗಿದೆ. ಕಾಲೋನಿಯ ಹತ್ತಿರವೇ ಶಾಲೆಗಳು ಇವೆ. ಆದರೂ ಕಾಲೋನಿಗಳು ಮೂಲ ಅಗತ್ಯ ನಾಗರಿಕ ಸೌಲಭ್ಯಗಳಿಲ್ಲದೆ ಇರುಳಿಗ ಕೊಳಗೇರಿಗಳಂತಾಗಿವೆ. ಇಂತಹ ಪರಿಸರದಲ್ಲಿ ಜನಿಸಿದ ಮಕ್ಕಳಿಗೆ ಎಂತಹ ಶಿಕ್ಷಣ ಸಿಕ್ಕೀತು? ಶಿಕ್ಷಣ ಕಲಿಯುವ ಮನಸ್ಸು ಮತ್ತು ಪ್ರೋತ್ಸಾಹ ಹಾಗೂ ಸ್ಫೂರ್ತಿ ಎನ್ನುವುದು ಹೇಗೆ ಬರುತ್ತದೆ? ಇತ್ತೀಚೆಗೆ ಸರ್ಕಾರವು ಶಿಕ್ಷಣ ಘೋಷಣೆಗಳಾದ ಉಚಿತ ಹಾಗೂ ಕಡ್ಡಾಯ ಶಿಕ್ಷಣ, ೧೪ ವರ್ಷದವರೆಗಿನ ಮಕ್ಕಳಿಗೆ ಉಚಿತ, ಕಡ್ಡಾಯ ಶಿಕ್ಷಣ ಪರಿಣಾಮದಿಂದಾಗಿ ಮತ್ತು ರಾಜ್ಯ ಸರ್ಕಾರ ಶಿಕ್ಷಣಕ್ಕೆ ಅನೇಕ ರೀತಿಯ ಸೌಲಭ್ಯಗಳನ್ನು ಒದಗಿಸುತ್ತಿದೆ.

ಕಲಿ–ನಲಿ	**ನಲಿ–ಕಲಿ**
ಮರಳಿ ಬಾ ಶಾಲೆಗೆ	ಸರ್ವಶಿಕ್ಷಣ ಅಭಿಯಾನ
ಅಕ್ಷರ ದಾಸೋಹ ಕಾರ್ಯಕ್ರಮ	ಉಚಿತ ಪಠ್ಯಪುಸ್ತಕ
ಉಚಿತ ಸಮವಸ್ತ್ರ	ವಿದ್ಯಾರ್ಥಿ ವೇತನ
ಕ್ಷೀರಭಾಗ್ಯ ಯೋಜನೆ	ಸೈಕಲ್ ಸರಬರಾಜು
ಕುವೆಂಪು ಪಾಠಶಾಲೆ	ಕಡ್ಡಾಯ ಶಿಕ್ಷಣ ಕಾಯ್ದೆ(RTI)
ಮುರಾರ್ಜಿ ಶಾಲೆ	ಆಶ್ರಮ ಶಾಲೆ
ಕಿತ್ತೂರ ಚೆನ್ನಮ್ಮ ಶಾಲೆ	ವಿದ್ಯಾರ್ಥಿ ನಿಲಯಗಳು
ಬಾ. ಬಾಲೆ ಶಾಲೆಗೆ	ಟೆಂಟ್ ಶಾಲೆ
ಷೂ ಭಾಗ್ಯ ಯೋಜನೆ	ಉಚಿತ ಅರೋಗ್ಯ ತಪಾಸಣೆ ಕಾರ್ಯಕ್ರಮ

ಕರ್ನಾಟಕ ದರ್ಶನ ಶೈಕ್ಷಣಿಕ ಪ್ರವಾಸ(SC.ST ಮಕ್ಕಳಿಗೆ)

ಈ ನಿಟ್ಟಿನಲ್ಲಿ ಸರ್ಕಾರದ ಯೋಜನೆಗಳು ತಳಸಮುದಾಯದ ಮಕ್ಕಳಿಗೆ ವರದಾನವಾಗಿ ಪರಿಣಮಿಸಿದೆ. ಇರುಳಿಗ ಸಮುದಾಯದ ಮಕ್ಕಳು ಈಗೀಗ ಶಾಲೆಗೆ ಹೋಗಲು ಪ್ರಾರಂಭಿಸಿದ್ದಾರೆ. ಜೊತೆಗೆ ಇಂದು ಬಹುತೇಕ ಇರುಳಿಗರ ಕಾಲೋನಿಗಳಲ್ಲಿ ಪ್ರಾಥಮಿಕ ಶಾಲೆಗಳು ಪ್ರಾರಂಭವಾಗಿರುವುದು ಈ ಮನ್ವಂತರದ ಮಕ್ಕಳಿಗೆ ವರದಾನವಾಗಿದೆ. ಅದರೆ ಸಮುದಾಯದ ಹಿಂದಿನ ಬಹುತೇಕ ವಯಸ್ಕರು ಅನಕ್ಷಸ್ಥರಾಗಿದ್ದು ಔಪಚಾರಿಕ ಶಿಕ್ಷಣದಿಂದ ವಂಚಿತರಾಗಿದ್ದಾರೆ.

ಒಟ್ಟಾರೆ ಇರುಳಿಗ ಸಮುದಾಯದ ಜನರ ಶಿಕ್ಷಣದ ಹಿನ್ನಲೆ ಹೀಗಿರುವಾಗ ಈ ಸಮುದಾಯ ಮಹಿಳೆಯರ ಶಿಕ್ಷಣದ ಬಗ್ಗೆ ಮಾತನಾಡುವ ಹಾಗೆಯೇ ಇಲ್ಲ. ಇವರಲ್ಲಿ ೧೦೦ಕ್ಕೆ ೫೨ರಷ್ಟು ಮಹಿಳೆಯರು ಅನಕ್ಷರಸ್ಥರಾಗಿದ್ದು, ಕನಿಷ್ಠ ಪ್ರಾಥಮಿಕ ಶಿಕ್ಷಣದಿಂದಲೂ ವಂಚಿತರಾಗಿರುವುದು ಅಂಕಿ

ಅಂಶಗಳಿಂದ ತಿಳಿದು ಬರುತ್ತದೆ. ಶೇಕಡ ೫೨ ರಷ್ಟು ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿದ್ದಾರೆ ಎಂದರೆ ಇನ್ನುಳಿದ ೪೮ರಷ್ಟು ಮಹಿಳೆಯರು ಶಿಕ್ಷಣ ಪಡೆದಿದ್ದಾರೆ ಎಂದು ಹೇಳಲಾಗುವುದಿಲ್ಲ. ಶೇಕಡ ೩೫ಕ್ಕೂ ಮೇಲ್ಪಟ್ಟ ಮಹಿಳೆಯರು ತಮ್ಮ ಸಹಿ ಮಾಡುವಷ್ಟರ ಮಟ್ಟಿಗೆ ಮಾತ್ರ ಸಾಕ್ಷರರಾಗಿದ್ದಾರೆ. ಇನ್ನುಳಿದ ಶೇಕಡ ೧೫ರಷ್ಟು ಹೆಣ್ಣುಮಕ್ಕಳು ಇತ್ತೀಚೆಗೆ ಶಾಲೆಗೆ ಹೋಗತೊಡಗಿದ್ದಾರೆ. ಶೈಕ್ಷಣಿಕ ವಿಷಯದಲ್ಲಿ ಇರುಳಿಗ ಸಮುದಾಯದ ಮಹಿಳೆಯರು ಅತ್ಯಂತ ನಿರ್ಲಕ್ಷಿತರಾಗಿದ್ದಾರೆ ಎಂದರೆ ತಪ್ಪಾಗಲಾರದು.

ಒಟ್ಟಾರೆ ಅಂಕಿ ಅಂಶಗಳನ್ನು ಗಮನಿಸಿದರೆ ಜಿಲ್ಲೆಯಲ್ಲಿ ಇರುಳಿಗ ಸಮುದಾಯದ ಶಿಕ್ಷಣ ಹಿಂದುಳಿದಿರುವಿಕೆ ಮನದಟ್ಟಾಗುತ್ತದೆ. ಇದರಲ್ಲಿ ಶೇ. ೪೭ ಕ್ಕಿಂತಲೂ ಹೆಚ್ಚು ಜನ ಅನಕ್ಷರಸ್ಥರಿದ್ದಾರೆ. ಶಾಲೆಯನ್ನು ಮಧ್ಯದಲ್ಲೇ ಬಿಡುವವರ ಸಂಖ್ಯೆ ಅಧಿಕವಾಗಿದೆ. ಜೊತೆಗೆ ಬಡತನ ಅಜ್ಞಾನವೂ ಕಾರಣವಾಗಿದ್ದೂ ಹಾಗೂ ಬಡತನದಿಂದ ದುಡಿಯುವ ಕೈಗಳು ಹೆಚ್ಚಾದಂತೆ ಕುಟುಂಬದ ಆದಾಯವು ಹೆಚ್ಚಾಗುತ್ತಾ ಹೋಗುತ್ತದೆ. ಇದರಿಂದ ದೈನಂದಿನ ತುತ್ತಿನಚೀಲ ತುಂಬಿಸಲು ವಿದ್ಯಾಭ್ಯಾಸವನ್ನು ಮಧ್ಯದಲ್ಲೇ ನಿಲ್ಲಿಸಬೇಕಾಗುತ್ತದೆ. ಉನ್ನತ ಶಿಕ್ಷಣ ಪಡೆದವರು ಈ ಸಮುದಾಯದ ಪ್ರತಿಶತ ಒಂದಕ್ಕಿಂತಲೂ ಕಡಿಮೆ ಎಂದು ಹೇಳಬಹುದು. ಉನ್ನತ ವ್ಯಾಸಂಗ ಹಾಗೂ ಶಾಲಾ ಕಾಲೇಜುಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ಈ ಸಮುದಾಯದ ವಿದ್ಯಾರ್ಥಿಗಳ ಸಂಖ್ಯೆಯನ್ನು ಜಿಲ್ಲಾ ಪ್ರತಿಶತ ಜನಸಂಖ್ಯೆಗೆ, ಇತರೆ ಸಮುದಾಯಲ್ಲೇ ಹೋಲಿಸಿದರೆ ತೀರಾ ಕಡಿಮೆ.

ಇರುಳಿಗ ಮಹಿಳೆಯರ ಶೈಕ್ಷಣಿಕ ಅನರ್ಹತೆಗಳು ಹತ್ತು ಹಲವಾರು. ಇವರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಆಯಾಮಗಳಿಂದ ವಿಶ್ಲೇಷಿಸಬಹುದು. ಪುರುಷರಂತೆ ಮಹಿಳೆರಲ್ಲಿಯೂ ನಾವು ಅನುತ್ತೀರ್ಣತೆ ಮತ್ತು ಅಪಮೌಲ್ಯವನ್ನು ಕಾಣಬಹುದು. ಶೇ. ೩೮ರಷ್ಟು ಹೆಣ್ಣು ಮಕ್ಕಳು ಪ್ರೌಢಶಾಲೆಯ ಹಂತದಲ್ಲಿ ಶಾಲೆ ಬಿಟ್ಟವರಾಗಿದ್ದಾರೆ. ಪ್ರೌಢಶಾಲೆ ಹಂತದಲ್ಲಿ ಪ್ರಕೃತಿದತ್ತವಾಗಿ ಋತುಮತಿಯಾದ ದಿನದಿಂದ ಅವಳನ್ನು ಶಾಲೆಗೆ ಕಳುಹಿಸುವುದಿಲ್ಲ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ಹೆಣ್ಣು ಮಕ್ಕಳ ಶೈಕ್ಷಣಿಕ ವ್ಯಾಸಂಗದ ಬಗ್ಗೆ ಪ್ರಶ್ನಿಸಿದಾಗ ಬಂದ ಉತ್ತರ ಈ ರೀತಿ ಇತ್ತು. "ನಾವು ಹೆಣ್ಣು ಮಕ್ಕಳನ್ನು ಹೆಚ್ಚು ಓದಿಸುವುದಿಲ್ಲ. ಏಕೆಂದರೆ ಅವರನ್ನು ಕಾಲೇಜು ಶಿಕ್ಷಣಕ್ಕೆ ಕಳುಹಿಸಿದರೆ ಹೊರ ಜಗತ್ತಿನ ಜನರೊಡನೆ ಬೆರೆತು ಪ್ರೀತಿ-ಪ್ರೇಮಕ್ಕೆ ಸಿಲುಕಿ ಸಮುದಾಯಕ್ಕೆ ಕೆಟ್ಟ ಹೆಸರು ತರಬಹುದು ಹಾಗೂ ಹೆಚ್ಚು ಓದಿಸಿದರೆ ಮದುವೆಯಾಗಲು ತಮ್ಮಲ್ಲಿ ತಕ್ಕ ವರನು ಸಿಗದೆ ಇರಬಹುದು" ಎಂಬ ಮುಗ್ಧತೆಯ ಉತ್ತರವನ್ನು ನೀಡುತ್ತಾರೆ. ಇರುಳಿಗ ಮಹಿಳೆಯರು ಓದಿ ಬರೆದಿಲ್ಲವಾದರೂ ಜೀವನದ ಅನುಭವದಲ್ಲಿ ಕಷ್ಟ ಸುಖಗಳಲ್ಲಿ ನೊಂದು ಬೆಂದು ತನ್ನ ಮೂಲ ವೃತ್ತಿಯನ್ನು ಅವಲಂಬಿಸಿ, ಗುರುಹಿರಿಯರನ್ನು ಗೌರವಿಸುತ್ತಾ ಗಂಡನೇ ತನ್ನ ಜೀವನದ ಸರ್ವಸ್ವವೆಂದು ಭಾವಿಸಿ ಬದುಕಿನಲ್ಲಿ ಬರುವ ಎಲ್ಲಾ ಬವಣೆಗಳನ್ನು ಮೌನವಾಗಿ ಸ್ವೀಕರಿಸುತ್ತಾ ಬಂದಿದ್ದಾರೆ. ಎಲ್ಲದರಲ್ಲೂ ರಾಜಿ ಮಾಡಿಕೊಂಡು ಬದುಕುತ್ತಿದ್ದಾಳೆ

ಆದರೆ ತನ್ನ ಮುಂದಿನ ಪೀಳಿಗೆಗೆ ತನ್ನ ಜೀವನದ ಜಂಜಾಟ ಬೇಡವೆಂಬ ಸತ್ಯದ ಅರಿವಿನೊಂದಿಗೆ ಬದುಕು ಸಾಗಿಸುತ್ತಿದ್ದಾಳೆ.

ಇಂದು ಶಾಲೆಗಳಲ್ಲಿ ತಳಸಮುದಾಯದ ಮಕ್ಕಳ ದಾಖಲಾತಿ ಹೇರಳವಾಗಿಯೇ ಆಗುತ್ತದೆ. ಈ ಮೇಲಿನ ಎಲ್ಲಾ ಕಾರಣಗಳಿಂದ ದಾಖಲಾತಿಯಷ್ಟೇ ಪ್ರಮಾಣದಲ್ಲಿ ಹಾಜರಾತಿಯನ್ನು ಅಪೇಕ್ಷಿಸುವುದು ಕಷ್ಟಸಾಧ್ಯ. ಈ ನಿಟ್ಟಿನಲ್ಲಿ ರಾಮನಗರ ಜಿಲ್ಲೆಯ ಇರುಳಿಗ ಸಮುದಾಯದ ಮಕ್ಕಳ ಶಿಕ್ಷಣದ ಸ್ಥಿತಿಗತಿಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಗ್ರಾಮಗಳ ಮೂಲಕ ಅರಿಯಲು ಪ್ರಯತ್ನಿಸಲಾಗಿದೆ.

ರಾಮನಗರ ಜಿಲ್ಲೆಯ ನಾಲ್ಕು ತಾಲ್ಲೂಕುಗಳ ಇರುಳಿಗ ಮಕ್ಕಳ ಶೇಕಡವಾರು ಶೈಕ್ಷಣಿಕ ಮಟ್ಟವನ್ನು ಪರಿಶೀಲಿಸಲಾಗಿದೆ. ಕಿರಿಯ ಪ್ರಾಥಮಿಕ ಹಂತದಲ್ಲಿ ಪುರುಷರಿಗೂ ಮಹಿಳೆಯರಿಗೂ ಅಂತರ ಕಡಿಮೆ ಇದ್ದು ಮೇಲಿನ ತರಗತಿಗಳಿಗೆ ಹೋದಂತೆಲ್ಲಾ ಮಹಿಳೆಯ ಶೈಕ್ಷಣಿಕ ಪ್ರಗತಿ ಕ್ಷೀಣಿಸುತ್ತಾ ಬಂದಿದೆ. ಅಂದರೆ ಇರುಳಿಗರ ಸಮುದಾಯದಲ್ಲಿ ಇಂದಿಗೂ ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡದೆ ಕೇವಲ ಇನ್ನೂ ಮೌಢ್ಯ, ಮೂಢನಂಬಿಕೆ ಹಾಗೂ ಇತರೆ ಕೆಲಸ ಕಾರ್ಯಗಳಿಗೆ ಗಮನ ನೀಡಲಾಗುತ್ತಿದೆ ಎಂಬುದು ಸತ್ಯವಾದ ಮಾತು.

೬.೩. ಇರುಳಿಗರ ಶೈಕ್ಷಣಿಕ ವಿವರ

ಒಂದರಿಂದ ೪ನೇ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣವೆಂದು, ೫ ರಿಂದ ೭ನೇ ತರಗತಿಯವರೆಗೆ ಮಾಧ್ಯಮಿಕ ಶಿಕ್ಷಣವೆಂದು, ೮ ರಿಂದ ೧೦ನೇ ತರಗತಿಯವರೆಗೂ ಪ್ರೌಢ ಶಿಕ್ಷಣವೆಂದು, ೧೧ ರಿಂದ ೧೨ನೇ ತರಗತಿವರೆಗೂ ಪಿಯುಸಿ, ಪದವಿಪೂರ್ವ ಶಿಕ್ಷಣವೆಂದು, ಅದರ ನಂತರದ ೩ ವರ್ಷಗಳ ಶಿಕ್ಷಣವನ್ನು ಪದವಿ ಶಿಕ್ಷಣವೆಂದು, ಇತರೆ ಶಿಕ್ಷಣವನ್ನು ತಾಂತ್ರಿಕ ಶಿಕ್ಷಣ ಮತ್ತು ಇತರೆ ಶಿಕ್ಷಣವನ್ನು ಅದನ್ನು ಇತರೇ ವಿಭಾಗದಲ್ಲಿ ನೋಡಲಾಗಿದೆ.(ಕೋಷ್ಟಕ–೬.೩)

ಕನಕಪುರ ತಾಲೂಕಿನ ಐದು ಹೋಬಳಿಗಳನ್ನೊಳಗೊಂಡಂತೆ ಸಾಕ್ಷರರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೧೯.೦೯ರಷ್ಟು ಕಂಡುಬಂದದೆ. ಮಾಧ್ಯಮಿಕ ಶೇ. ೧೬.೨೭ರಷ್ಟು ಕಾಣಸಿಗುತ್ತದೆ. ಇನ್ನುಳಿದ ಹಂತಗಳಾದ ಪ್ರೌಢ ಶೇ. ೧೧.೭೫, ಪದವಿಪೂರ್ವ ಶೇ. ೧.೭೯, ಪದವಿ ಶೇ. ೦.೨೮, ಸ್ನಾತಕೋತ್ತರ ಶೇ. ೦.೧೨, ಇತರೆ ಶೇ. ೦.೨೦ರಷ್ಟಿದ್ದು, ಯಾವುದೇ ಡಿಪ್ಲೊಮಾ ಶಿಕ್ಷಣದಲ್ಲಿ ಇಲ್ಲದಿರುವುದು ಹಾಗೂ ಶೇ. ೫೦.೪೯ರಷ್ಟು ಅನಕ್ಷರಸ್ಥರ ಪ್ರಮಾಣ ಇರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.

ಚನ್ನಪಟ್ಟಣ ತಾಲೂಕಿನ ಮಳೂರು ಹೋಬಳಿವಾರು ಸಾಕ್ಷರರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೩೦.೪೯ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೧೩.೪೧ರಷ್ಟು ಕಾಣಸಿಗುತ್ತದೆ. ಇನ್ನುಳಿದ ಹಂತಗಳಾದ ಪ್ರೌಢ ಶೇ. ೧೦.೩೭, ಪದವಿಪೂರ್ವ ಶೇ. ೧.೮೨, ಡಿಪ್ಲೊಮಾ, ಪದವಿ, ಸ್ನಾತಕೋತ್ತರ, ಇತರೆ ಯಾವುದೇ ಶಿಕ್ಷಣದಲ್ಲಿ ಇಲ್ಲದಿರುವುದು ಹಾಗೂ ಶೇ.

ಕೋಷ್ಟಕ ೬.೪. ಸಮೀಕ್ಷೆಗೊಳ್ಳಪಟ್ಟ ರಾಮನಗರ ಜಿಲ್ಲೆಯ ಇರುಳಿಗ ಸಮುದಾಯದ ತಾಲೂಕುವಾರು ಮತ್ತು ಲಿಂಗವಾರು ಶೈಕ್ಷಣಿಕ ಹಂತಗಳು

ಶೈಕ್ಷಣಿಕ ಹಂತ	ಕನಕಪುರ ತಾಲೂಕು			ಚನ್ನಪಟ್ಟಣ ತಾಲೂಕು			ಮಾಗಡಿ ತಾಲೂಕು			ರಾಮನಗರ ತಾಲೂಕು		
	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
ಪ್ರಾಥಮಿಕ	೨೭೪	೧೯೪	೪೬೮	೧೮	೩೨	೫೦	೩೪	೨೩	೫೭	೨೧೦	೨೦೧	೪೧೧
ಮಾಧ್ಯಮಿಕ	೨೦೬	೧೯೩	೩೯೯	೧೮	೪	೨೨	೪೧	೪೪	೮೫	೧೮೦	೧೩೭	೩೧೫
ಪ್ರೌಢಶಾಲೆ	೧೬೫	೧೨೩	೨೮೮	೯	೮	೧೭	೪೨	೩೭	೭೯	೧೧೭	೭೨	೧೮೯
ಡಿಪ್ಲೋಮಾ	-	-	-	-	-	-	೧	-	೧	೨	-	೨
ಪದವಿಪೂರ್ವ	೩೩	೧೧	೪೪	೩	-	೩	೭	೧	೮	೧೫	೧೪	೨೯
ಪದವಿ	೬	೧	೭	-	-	-	೨	-	೨	೨	೧	೩
ಸ್ನಾತಕೋತ್ತರ	೨	೧	೩	-	-	-	3	-	3	-	-	-
ಇತರೆ	೪	೧	೫	–	–	–	೫	೧	೬	೫	–	೫
ಒಟ್ಟು	೬೯೦	೫೨೪	೧೨೧೪	೪೮	೪೪	೯೨	೧೩೫	೧೦೬	೨೪೧	೫೩೧	೪೨೫	೯೫೪

೪೩.೯ರಷ್ಟು ಅನಕ್ಷರಸ್ಥರ ಪ್ರಮಾಣ ಇರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.

ಮಾಗಡಿ ತಾಲೂಕಿನ ಮೂರು ಹೋಬಳಿಗಳನ್ನೊಳಗೊಂಡಂತೆ ಸಾಕ್ಷರರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೧೧.೭೩ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೧೭.೪೯ರಷ್ಟು ಕಾಣಸಿಗುತ್ತದೆ. ಇನ್ನುಳಿದ ಹಂತಗಳಾದ ಪ್ರೌಢ ಶೇ. ೧೬.೨೬, ಡಿಪ್ಲೊಮಾ ಶೇ. ೦.೨೦, ಪದವಿಪೂರ್ವ ಶೇ. ೧.೬೪, ಪದವಿ ಶೇ. ೦.೪೧, ಸ್ನಾತಕೋತ್ತರ ಶೇ. ೦.೬೧, ಇತರೆ ಶೇ. ೧.೨೩ರಷ್ಟಿದ್ದು, ಹಾಗೂ ಶೇ. ೫೦.೪೧ರಷ್ಟು ಅನಕ್ಷರಸ್ಥರ ಪ್ರಮಾಣ ಇರುವುದು ಕ್ಷೇತ್ರಕಾರ್ಯದ ಅಂಕಿಅಂಶಗಳ ಮಾಹಿತಿಯಿಂದ ತಿಳಿದುಬರುತ್ತದೆ.

ರಾಮನಗರ ತಾಲೂಕಿನ ನಾಲ್ಕು ಹೋಬಳಿಗಳನ್ನೊಳಗೊಂಡಂತೆ ಸಾಕ್ಷರರಲ್ಲಿ ಶೈಕ್ಷಣಿಕ ಹಂತಗಳನ್ನು ಗಮನಿಸಿದಾಗ ಪ್ರಾಥಮಿಕ ಶೇ. ೨೫.೩೭ರಷ್ಟು ಕಂಡುಬಂದರೆ, ಮಾಧ್ಯಮಿಕ ಶೇ. ೧೯.೪೪ರಷ್ಟು ಕಾಣಸಿಗುತ್ತದೆ. ಇನ್ನುಳಿದ ಹಂತಗಳಾದ ಪ್ರೌಢ ಶೇ. ೧೧.೬೬, ಡಿಪ್ಲೊಮಾ ಶೇ. ೦.೧೨, ಪದವಿಪೂರ್ವ ಶೇ. ೧.೭೯, ಪದವಿ ಶೇ. ೦.೧೮, ಇತರೆ ಶೇ. ೦.೩೦ರಷ್ಟಿದ್ದು, ಯಾವುದೇ ಸ್ನಾತಕೋತ್ತರ ಶಿಕ್ಷಣದಲ್ಲಿ ಇಲ್ಲದಿರುವುದು ಹಾಗೂ ಶೇ. ೪೧.೧೧ರಷ್ಟು ಅನಕ್ಷರಸ್ಥರ ಪ್ರಮಾಣ ಇರುವುದು ಕಂಡುಬಂದಿದೆ.

ಮೇಲಿನ ಒಟ್ಟಾರೆ ತಾಲ್ಲೂಕುವಾರು ಹಾಗೂ ಹೋಬಳಿವಾರು ಶೈಕ್ಷಣಿಕ ಪ್ರಗತಿಯನ್ನು ಗಮನಿಸಿದರೆ ಜಿಲ್ಲೆಯ ಇತರೆ ತಳಸಮುದಾಯಗಳಲ್ಲಿರುವಂತೆ ಶೈಕ್ಷಣಿಕ ಮಟ್ಟದಲ್ಲಿ ಸಾಕಷ್ಟು ಬದಲಾವಣೆ ಕಾಣದೆ ಹಾಗೂ ಸಾಮಾಜಿಕವಾಗಿ ಪ್ರಗತಿ ಹೊಂದದಿರುವುದು ಇರುಳಿಗ ಸಮುದಾಯದಲ್ಲಿ ಕಂಡುಬರುತ್ತದೆ. ಹೀಗಾಗಿ ಇರುಳಿಗ ಸಮುದಾಯ ಶಿಕ್ಷಣಕ್ಕೆ ಮಹತ್ವ ನೀಡದೆ ಸಾಮಾಜಿಕ ವ್ಯವಸ್ಥೆಯಲ್ಲಿ ಇತರೆ ಸಮುದಾಯಗಳೊಂದಿಗೆ ಸಮಾನತೆ ಕಾಯ್ದುಕೊಳ್ಳದೆ ಇಂದಿಗೂ ಆಧುನಿಕ ಪ್ರಭಾವಕ್ಕೆ ತೆರೆದು ಕೊಳ್ಳದಿರುವುದನ್ನು ಕಾಣಬಹುದು. ೧ರಿಂದ ೧೦ನೇ ತರಗತಿಯವರೆಗೆ ೧೦೦ ಜನ ವಿದ್ಯಾರ್ಥಿಗಳು ದಾಖಲಾದರೆ ಈ ತರಗತಿಗಳನ್ನು ಪೂರ್ಣಗೊಳಿಸುವುದರ ಒಳಗೆ ಶೇ. ೫೦% ಅಷ್ಟು ವಿದ್ಯಾರ್ಥಿಗಳು ಶಾಲೆಯನ್ನು ಮಧ್ಯದಲ್ಲಿ ಬಿಡುತ್ತಾರೆ. ಇದಕ್ಕೆ ಸಂಬಂಧಿಸಿದ ಕಾರಣಗಳೇನು ಎನ್ನುವುದನ್ನು ವಿದ್ಯಾರ್ಥಿಗಳ ದೃಷ್ಟಿಯಿಂದ ನೋಡಿದಾಗ

೧. ಅರಣ್ಯ ಪ್ರದೇಶದಲ್ಲಿ ವಾಸ ಮಾಡುವುದು ಹಾಗೂ ಸಾಮಾಜಿಕವಾಗಿ ಜನರ ಜೊತೆ ಇದ್ದರೂ ಶಿಕ್ಷಣದ ಮಹತ್ವದ ಬಗ್ಗೆ ಅರಿವು ಇಲ್ಲದೇ ಇರುವುದು.

೨. ಚಿಕ್ಕ ವಯಸ್ಸಿನಲ್ಲೇ ಹೆಣ್ಣು ಮಕ್ಕಳಿಗೆ ವಿವಾಹ ಮಾಡುವುದು. ಹೆಣ್ಣು ಮಕ್ಕಳು ದಾಖಲಾತಿ ಹಾಜರಾತಿಗಳು ಇಂದಿಗೂ ಕಡಿಮೆ ಮಟ್ಟದಲ್ಲಿರುವುದಕ್ಕೆ ಕಾರಣವಾಗಿದೆ.

೩. ಅರಣ್ಯ ಪರಿಸರದಲ್ಲಿ ಬರುತ್ತಿದ್ದವರಿಗೆ ಶಾಲೆಗೆ ಹಾಜರಾದ ಕೂಡಲೇ ಕಟ್ಟುನಿಟ್ಟಾದ ಶಿಸ್ತು ಸಹಿಸಲಾಗದೇ ಇರುವುದರಿಂದ ಶಾಲೆಯನ್ನು ಮಧ್ಯದಲ್ಲಿ ಬಿಡುತ್ತಾರೆ.

೪. ತಾವು ವಾಸಿಸುವ ಕಾಲೋನಿ ಹಾಗೂ ಪರಿಸರದಲ್ಲಿ ವ್ಯಾಸಂಗಕ್ಕೆ ಪೂರಕವಾದ ವಾತಾವರಣ ಇಲ್ಲದೇ ಇರುವುದು.

೫. ಗಿರಿಜನ ವಿದ್ಯಾರ್ಥಿಗಳ ಮಾನಸಿಕ ಸ್ಥಿತಿಯನ್ನು ಅರಿತು ಬೋಧಿಸುವ ಶಿಕ್ಷಕರ ಅಭಾವ.

ವಿಭಕ್ತ ಕುಟುಂಬದ ಜೀವನದಿಂದಾಗಿ ಕುಟುಂಬ ನಿರ್ವಹಣೆ ಹಾಗೂ ಕುಟುಂಬದ ಜವಾಬ್ದಾರಿಯನ್ನು ಹೊರಬೇಕಾಗಿರುವುದರಿಂದ ಕೂಲಿಕಾರ್ಮಿಕರಾಗಿ ದುಡಿಯಬೇಕಾದ ಅನಿವಾರ್ಯತೆ ಮಕ್ಕಳಿಗೆ ಇದೆ. ಸ್ವಂತ ದುಡಿಮೆಗೆ ಬೇಕಾದ ಕೌಶಲ್ಯವಾಗಲೀ ಹಾಗೂ ಆಸ್ತಿಪಾಸ್ತಿಯಿಲ್ಲದೆ ಜೀವನ ನಿರ್ವಹಣೆಗೆ ಕಷ್ಟ ಪಡಬೇಕಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಇರುಳಿಗ ಸಮುದಾಯದಲ್ಲಿ ವಿದ್ಯೆ ಕಲಿಯಲು ಪ್ರಾಥಮಿಕ ಹಂತದಿಂದ ಮುಂದಿನ ಶೈಕ್ಷಣಿಕ ವ್ಯಾಸಂಗ ಸಾಧ್ಯವಾಗದ ಪರಿಸ್ಥಿತಿಯಿದ್ದಾಗ ಇನ್ನೂ ಮಹಿಳೆಯರ ವಿದ್ಯಾಭ್ಯಾಸ ಕುರಿತು ಆಲೋಚಿಸುವುದು ದೂರದ ಮಾತೇ ಸರಿ. ದುಡಿದು ತಿನ್ನುವ ಅನಿವಾರ್ಯತೆ, ಕೂಲಿಗಾಗಿ ವಲಸೆ ಹೋಗುವ ಪಾಲಕರು ಹಾಗೂ ತಮ್ಮ ಮಕ್ಕಳನ್ನು ವಿದ್ಯಾರ್ಥಿನಿಲಯ ಅಥವಾ ಆಶ್ರಮ ಶಾಲೆಯಂತಹ ಶೈಕ್ಷಣಿಕ ವ್ಯವಸ್ಥೆಯನ್ನು ಬೆಳೆಸಿಕೊಳ್ಳಲು ನಿರಾಕರಿಸುವ ಪೋಷಕರ ಮನೋಭಾವ. ಹೀಗೆ ಹತ್ತು ಹಲವು ಕಾರಣಗಳಿಂದಾಗಿ ಸಮುದಾಯದ ಶೈಕ್ಷಣಿಕ ಪ್ರಗತಿಯು ಕುಂಠಿತವಾಗಿದೆ ಎಂಬುದು ಕ್ಷೇತ್ರಕಾರ್ಯದ ಮೂಲಕ ತಿಳಿದುಬಂದಿದೆ.

೬.೪. ರಾಜಕೀಯ ಸ್ಥಿತಿಗತಿ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುತೇಕವಾಗಿ ಅಧಿಕಾರವನ್ನು ಹೊಂದುವವರು ಬಂಡವಾಳಶಾಹಿಗಳಾಗಿತ್ತಾರೆ. ಪ್ರಜಾಪ್ರಭುತ್ವದ ದೊಡ್ಡ ಲೋಪ ದೋಷವೆಂದರೆ ಇದೇ ಆಗಿದೆ. ಅದರಲ್ಲೂ ಭಾರತದಂತಹ ಜಾತಿ ವ್ಯವಸ್ಥೆಯಿಂದ ಕೂಡಿದ ದೇಶದಲ್ಲಿ ಬಂಡವಾಳಶಾಹಿಗಳಷ್ಟೇ ಪ್ರಬಲವಾದುದು ಜಾತಿಯಾಗಿದೆ. ಜಾತಿ ಮತ್ತು ಹಣ ಈ ಎರಡೇ ಕೊನೆಗೆ ಅಧಿಕಾರ ಪಾಲುಗಾರಿಕೆಯ ನಿರ್ಣಾಯಕ ಶಕ್ತಿಗಳಾಗುತ್ತವೆ. ಹೀಗಾಗಿ "ಈ ದೇಶದಲ್ಲಿ ಬಂಡವಾಳಶಾಹಿಗಳು ಮತ್ತು ಮೇಲ್ಜಾತಿಗಳು ತಮ್ಮನ್ನು ಮೀರಿಸುವವರು ಯಾರೂ ಇಲ್ಲ ಎನ್ನುವಂತೆ ಮೆರೆದಾಡುತ್ತವೆ. ಪ್ರಾಯಶಃ ಸಂವಿಧಾನದಲ್ಲಿ ತಳವರ್ಗಗಳಿಗಾಗಿ ಮೀಸಲಾತಿ ಕಲ್ಪಿಸದೇ ಹೋಗಿದ್ದಲ್ಲಿ ತಳ ಸಮುದಾಯಗಳಿಗೆ ಇಂದಿಗೂ ಅಧಿಕಾರವೆಂಬುದು ಕೇವಲ ಮರೀಚಿಕೆಯಾಗಿ ಉಳಿದುಬಿಡುವ ಸಾಧ್ಯತೆಯೇ ಹೆಚ್ಚಾಗಿತ್ತು. ಲೋಹಿಯಾರಂಥವರು ಈ ಕಾರಣಕ್ಕಾಗಿಯೇ ಅಲ್ಪಸಂಖ್ಯಾತ ಜಾತಿಗಳಿಗೂ ರಾಜಕೀಯ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ಅವಕಾಶ ಕಲ್ಪಿಸಬೇಕೆಂದು ತಿಳಿಸುತ್ತಾರೆ".[೬] ತಳ ಸಮುದಾಯಗಳಿಗೆ ಅಧಿಕಾರದ ಗದ್ದುಗೆ ಹಿಡಯಲು ಮತ್ತು ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಮೀಸಲಾತಿ ಪರಿಣಾಮಕಾರಿ ವ್ಯವಸ್ಥೆಯಾಗಿದೆ.

ರಾಜಕೀಯವಾಗಿ ಬಲಾಢ್ಯರಾದ ವ್ಯಕ್ತಿಗಳು ಇಂದು ಎಲ್ಲಲ್ಲೂ ಕಂಡು ಬರುತ್ತಿದ್ದಾರೆ. ರಾಮನಗರವು ರಾಜ್ಯ ರಾಜಧಾನಿಗೆ ಹತ್ತಿರದಲ್ಲಿದೆ ಹೀಗಾಗಿ ಇಲ್ಲಿ ನೆಲೆಸಿರುವ ಬಂಡವಾಳಶಾಹಿಗಳು ಸ್ಥಳೀಯ ರಾಜಕಾರಣದ ಜೊತೆಗೆ ರಾಜ್ಯ ರಾಜಕಾರಣದಲ್ಲೂ ನೇರವಾಗಿ ಇಲ್ಲವೆ ಪರೋಕ್ಷವಾಗಿ ಮೂಗು ತೂರಿಸುವುದು ಸಹಜ. ರಾಮನಗರ ಜಿಲ್ಲೆಯಾದ್ಯಂತ ಒಕ್ಕಲಿಗರೇ ಮುಖ್ಯವಾಗಿ ರಾಜಕೀಯದಲ್ಲಿ

ಕಂಡು ಬರುತ್ತಾರೆ. ಇತರೆ ಮುಂದುವರೆದ ಸಮುದಾಯಗಳು ಗೆದ್ದೆತ್ತಿನ ಬಾಲದ ಕಡೆ ತಾವೆಂಬಂತೆ ತಟಸ್ಥವಾಗಿ ಉಳಿದಂತೆ ತೋರಿಸುತ್ತಲೇ ಒಳಗೊಳಗೇ ರಾಜಕೀಯ ಮಾಡುವುದು ಕಂಡುಬರುತ್ತದೆ.

ಕರ್ನಾಟಕದಲ್ಲಿ ಐವತ್ತು ಅನುಸೂಚಿತ ಪರಿಶಿಷ್ಟ ಪಂಗಡಗಳಿವೆಯಾದರೂ ರಾಜಕೀಯವಾಗಿ ಮೀಸಲಾತಿ ಸೌಲಭ್ಯದಡಿ ಎಮ್.ಎಲ್.ಎ, ಎಂ.ಪಿ, ಮಂತ್ರಿ ಸ್ಥಾನಗಳಲ್ಲಿರುವವರು ಮಾತ್ರ ನಾಯಕ ಬುಡಕಟ್ಟಿಗೆ ಸೇರಿದವರಾಗಿದ್ದಾರೆ. ಬಹುಸಂಖ್ಯಾತ ನಾಯಕರು ಮಾತ್ರ ರಾಜ್ಯ ರಾಜಕಾರಣದಲ್ಲಿ ಪ್ರವೇಶ ಪಡೆದಿದ್ದು ಇನ್ನುಳಿದ ನಲವತ್ತೊಂಭತ್ತು ಪರಿಶಿಷ್ಟ ಪಂಗಡಗಳು ರಾಜ್ಯ ರಾಜಕಾರಣದಿಂದ ದೂರ ಉಳಿಯುವಂತಾಗಿದೆ. ಜಿಲ್ಲೆಯಲ್ಲಿ ಇರುಳಿಗ ಸಮುದಾಯದ ಜನ ಗೆಲುವು ಸಾಧಿಸುವುದು ಸಾಮಾನ್ಯ ವಿಚಾರವಲ್ಲ. ಆದರೆ ಇಲ್ಲಿನ ಪ್ರದೇಶದಲ್ಲಿ ರಾಜಕೀಯ ಮೀಸಲಾತಿ ಕಡ್ಡಾಯವಾಗಿರುದರಿಂದ ಅವರು ಅನಿವಾರ್ಯವಾಗಿ ಗೆಲ್ಲುವಂತಾಯಿತು. ಗ್ರಾಮಮಟ್ಟದಿಂದ ಕೇಂದ್ರದವರೆಗೂ ಪ್ರತಿಯೊಂದು ಸಮುದಾಯದವರಿಗೂ ರಾಜಕೀಯ ಅವಕಾಶ ನೀಡಲಾಗಿದೆ. ಸಂವಿಧಾನದ ಪರಿಚ್ಛೇದ ೩೩೨, ೩೩೪ರ ವಿಧಿಗಳು ಲೋಕಸಭೆ ಮತ್ತು ರಾಜ್ಯ ವಿಧಾನಮಂಡಲಗಳಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಹಾಗೂ ಇತರೆ ಹಿಂದುಳಿದ ವರ್ಗದವರಿಗೂ ಮೀಸಲಾತಿ ಸ್ಥಾನಗಳನ್ನು ಕಲ್ಪಿಸಿದೆ. "ಜನಗಣತಿಯ ಆಧಾರದಂತೆ ಅನುಸೂಚಿತ ಜಾತಿ ಮತ್ತು ವರ್ಗಗಳಿಗೆ ಲೋಕಸಭೆ ಸ್ಥಾನಗಳನ್ನು ರಾಜ್ಯಗಳಲ್ಲಿ ಮೀಸಲಾಗಿಡಬೇಕೆಂದು ಸಂವಿಧಾನ ೩೩೦ನೇ ವಿಧಿ ತಿಳಿಸುತ್ತದೆ. ಇದರ ಪ್ರಕಾರ ಸಂಸತ್‌ನಲ್ಲಿ ಒಟ್ಟು ಸ್ಥಾನಗಳಲ್ಲಿ ೭೯ ಸ್ಥಾನವನ್ನು ಅನುಸೂಚಿತ ಜಾತಿಯವರಿಗೆ ಹಾಗೂ ೩೮ ಸ್ಥಾನವನ್ನು ಅನುಸೂಚಿತ ವರ್ಗಕ್ಕೆ ಒಟ್ಟು ೧೧೭ ಸ್ಥಾನಗಳನ್ನು ಮೀಸಲು ಕ್ಷೇತ್ರವಾಗಿ ಘೋಷಿಸಲಾಗಿದೆ. ಕರ್ನಾಟಕ ರಾಜ್ಯದ ವಿಧಾನಸಭೆಯಲ್ಲಿ ಪರಿಶಿಷ್ಟ ಪಂಗಡಕ್ಕೆ ೧೫ ವಿಧಾನಸಭೆ ಸ್ಥಾನಗಳನ್ನು ಮತ್ತು ೨ ಲೋಕಸಭಾ ಸ್ಥಾನವನ್ನು ಕಾಯ್ದಿರಿಸಲಾಗಿದೆ".[೭]

ನಗರ ಮತ್ತು ಗ್ರಾಮೀಣ ಸ್ಥಳೀಯ ಆಡಳಿತ ಸಂಸ್ಥೆಗಳನ್ನು ನೋಡುವುದಾದರೆ ಗ್ರಾಮೀಣ ಪ್ರದೇಶದಲ್ಲಿ ಎರಡು ಶತಮಾನಗಳಷ್ಟು ತಡವಾಗಿ ಆಡಳಿತ ಅಸ್ತಿತ್ವಕ್ಕೆ ಬಂದಿದೆ. "ಬ್ರಿಟಿಷ್ ಆಡಳಿತ ಕಾಲದಲ್ಲಿ ಮದ್ರಾಸಿನ ಮುನ್ಸಿಪಲ್ ೧೬೮೭ರಲ್ಲಿ ರಚಿತಗೊಂಡಿತ್ತು. ೧೭೨೬ರಲ್ಲಿ ಮುಂಬೈ ಮತ್ತು ಕಲ್ಕತ್ತಾ ಕಾರ್ಪೋರೇಶನ್ ಅಸ್ತಿತ್ವಕ್ಕೆ ಬಂತು. ೧೮೮೨ರಲ್ಲಿ ಸ್ಥಳೀಯ ಸರ್ಕಾರಗಳ ಬೆಳವಣಿಗೆಗೆ ಸರ್ಕಾರ ಆದೇಶ ಹೊರಡಿಸಿತು. ರಾಯಲ್ ಕಮೀಷನ್ ಸಹ ೧೯೦೭ರಲ್ಲಿ ಸ್ಥಳೀಯ ಸರ್ಕಾರಗಳ ಅಭಿವೃದ್ಧಿಗೆ ಶಿಫಾರಸ್ಸು ಮಾಡಿತು. ಬೆಂಗಳೂರು ದಂಡು ಪ್ರದೇಶದ ಮುನ್ಸಿಪಾಲಿಟಿ ಪ್ರಾರಂಭಿಸಲು ಆಗಿನ ಮೈಸೂರು ಸರ್ಕಾರ ೧೮೬೨ರಲ್ಲಿ ಕಾನೂನನ್ನು ಜಾರಿಗೆ ತಂದಿತು."[೮]

ಹೀಗೆ ಭಾರತೀಯ ಸಮಾಜದಲ್ಲಿ ಹಂತ ಹಂತವಾಗಿ ಆಡಳಿತ ವ್ಯವಸ್ಥೆ ರೂಪುಗೊಳ್ಳುತ್ತಾ ಬಂದಿತು. ಸ್ವಾತಂತ್ರ್ಯದ ನಂತರ ಗ್ರಾಮೀಣ ಅಭಿವೃದ್ಧಿ ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆ. ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದರ ಸಲುವಾಗಿ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಗ್ರಾಮಗಳು ನಮ್ಮ ದೇಶದ ಬುನಾದಿ ಆಗಬೇಕೇ ವಿನಃ ಉದ್ದಿಮೆದಾರರ ಸಾಮ್ರಾಜ್ಯಗಳಲ್ಲ

ಎಂಬುದು ಜಯಪ್ರಕಾಶ ನಾರಾಯಣ, ರಾಮಮನೋಹರ ಲೋಹಿಯಾ ಅವರಂತಹ ದೇಶದ ಹಿರಿಯರು ಕಂಡ ಕನಸಿನಂತೆ ಗ್ರಾಮ ಪಂಚಾಯತ್‌ರಾಜ್ ಮೊದಲಿಗೆ ಅಸ್ತಿತ್ವಕ್ಕೆ ಬಂದಿತ್ತು. ೧೯೮೩ರಲ್ಲಿ ಕರ್ನಾಟಕದಲ್ಲಿ ಪ್ರಜಾಪ್ರಭುತ್ವ ಎಂಬುದು ತಲೆ ಎಣಿಕೆಗೆ ಸೀಮಿತವಾಗಿತ್ತು. ಜನರಿಂದ ಸರ್ಕಾರ ಎನ್ನುವುದಕ್ಕಿಂತ ಹಲವು ಅಧಿಕಾರ ಗುಂಪುಗಳನ್ನೊಳಗೊಂಡ ಪಕ್ಷದಿಂದ ಸರ್ಕಾರ ಎಂದಾಗಿ ಹೋಗಿತ್ತು. ಆದರೆ ಅಬ್ದುಲ್ ನಜೀರ್‌ಸಾಬ್, ರಾಮಕೃಷ್ಣ ಹೆಗ್ಗಡೆ, ಎಂ.ವೈ. ಘೋರ್ಪಡೆ, ಎಲ್.ಸಿ. ಜೇನ್ ಅವರಂಥವರು ಸಾಮಾಜಿಕ ವ್ಯವಸ್ಥೆಯನ್ನಾಧರಿಸಿದ ಪರ್ಯಾಯ ಆಡಳಿತ ವ್ಯವಸ್ಥೆಯೊಂದನ್ನು ರೂಪಿಸಲು ವಿರೋಧಗಳ ನಡುವೆಯೂ ಅಪಾರವಾಗಿ ಶ್ರಮಿಸಿದರು. ಅಲ್ಲಿಂದ ಇಂದಿನ ರಮೇಶಕುಮಾರ್ ಸಮಿತಿಯ ಶಿಫಾರಸ್ಸುಗಳ ತನಕ ಬಂದು ನಿಂತಿದೆ. “ದೇಶದಲ್ಲಿ ಮೊದಲ ಬಾರಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಶೇ. ೫೦ರಷ್ಟು ಮಹಿಳಾ ಮೀಸಲಾತಿಯನ್ನು ಕಲ್ಪಿಸಲಾಗಿದೆ”. ಇಂದು ರಾಜ್ಯದಲ್ಲಿ ಮೂರು ಹಂತಗಳ ಪಂಚಾಯತ್‌ರಾಜ್ ವ್ಯವಸ್ಥೆಯಿದೆ. ಇದರಿಂದಾಗಿ ಬುಡಕಟ್ಟು ಸಮುದಾಯಗಳಿಗೆ, ಮಹಿಳೆಯರಿಗೆ ಹಾಗೂ ಪರಿಶಿಷ್ಟ ಜಾತಿ, ಇತರೆ ಹಿಂದುಳಿದ ವರ್ಗಗಳಿಗೆ ರಾಜಕೀಯ ಪ್ರವೇಶ ಸುಲಭವಾಯಿತು.

ಬಹುತೇಕ ಪರಿಶಿಷ್ಟ ಪಂಗಡದ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ, ಮತ್ತು ಜಿಲ್ಲಾ ಪಂಚಾಯಿತಿ ಪರಿಶಿಷ್ಟ ಪಂಗಡದ ಸದಸ್ಯರಿಗೆ ರಾಮನಗರ ಜಿಲ್ಲೆಯಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡದ ಸಮುದಾಯಗಳು ಎಷ್ಟಿವೆ ಎಂದು ಕೇಳಿದರೆ ಇರುಳಿಗ ಬುಡಕಟ್ಟಿನ ಸದಸ್ಯರು ತಮಗೇನೂ ಗೊತ್ತಿಲ್ಲ ಎಂದು ತಿಳಿಸುತ್ತಾರೆ. ತಾವು ಇರುಳಿಗರು, ಅದಕ್ಕಾಗಿ ನಮಗೆ ಪರಿಶಿಷ್ಟ ಪಂಗಡ ಎಂದು ಕರೆಯುತ್ತಾರೆ ಎಂದಷ್ಟೇ ತಿಳಿಸಿದರು. ಅದರಾಚೆಗೆ ಏನೂ ಅರಿಯದ ಮುಗ್ಧರವರು.

ಪ್ರಾಯಶಃ ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಗಳ ಮೂಲಭೂತ ಸಮಸ್ಯೆಯೂ ಇದೇ ಆಗಿದೆ. ಕರ್ನಾಟಕದ ಅನುಸೂಚಿತ ಪಟ್ಟಿಯಲ್ಲಿರುವ ಒಟ್ಟು ೫೦ ಪರಿಶಿಷ್ಟ ಪಂಗಡಗಳಲ್ಲಿ ಇನ್ನೂ ೪೯ ಪರಿಶಿಷ್ಟ ಪಂಗಡ ಸಮುದಾಯಗಳು ತೀರಾ ಅಲ್ಪ ಸಂಖ್ಯಾತ ಸಮುದಾಯಗಳಾಗಿವೆ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಂವಿಧಾನಬದ್ಧವಾಗಿ ಯಾವ ಯಾವ ಸವಲತ್ತುಗಳನ್ನು ಸರ್ಕಾರ ನೀಡುತ್ತದೆ ಎಂಬುದರ ಕುರಿತಾಗಿ ಅರಿಯಲಾರದಷ್ಟು ಮುಗ್ಧ ಸಮುದಾಯಗಳು ಇಲ್ಲಿ ಚುನಾವಣೆಗೆ ನಿಲ್ಲುವ ವ್ಯಕ್ತಿ ತನ್ನ ಕೋಮಿಗೆ ಸೇರಿದವರ ಜನಸಂಖ್ಯೆ ಆ ಕ್ಷೇತ್ರದಲ್ಲಿ ಎಷ್ಟು ಎಂದು ಸ್ಪಷ್ಟವಾಗಿ ಸೂಚಿಸಬೇಕು. ಆ ವ್ಯಕ್ತಿಗೆ ಚುನಾವಣೆಗೆ ಅಭ್ಯರ್ಥಿಯಾಗಿಸಲು ಆ ಒಂದು ಅಂಶವನ್ನು ಪ್ರತಿಯೊಂದು ಪಕ್ಷಗಳು ಪರಿಗಣಿಸುತ್ತವೆ.

ಒಬ್ಬ ವ್ಯಕ್ತಿ ಚುನಾವಣೆಗೆ ನಿಲ್ಲಲು ಗಮನಿಸುವ ಅತೀ ಮುಖ್ಯ ಅಂಶಗಳು ಈ ಕೆಳಗಿನಂತಿವೆ

೧. ಅಭ್ಯರ್ಥಿ ಯಾವ ಜಾತಿ/ಕೋಮಿಗೆ ಸೇರಿದ್ದಾನೆ. ಮತ್ತು ಅವನು ನಿಲ್ಲುವ ಕ್ಷೇತ್ರದಲ್ಲಿ ಮತ ನೀಡುವವರಲ್ಲಿ ಅಭ್ಯರ್ಥಿಯ ಜಾತಿ/ಕೋಮಿಗೆ ಸೇರಿದ ಒಟ್ಟು ಜನಸಂಖ್ಯೆ ಎಷ್ಟಿದೆ.

೨. ಚುನಾವಣೆಗೆ ಅಭ್ಯರ್ಥಿಯಾಗಿ ನಿಲ್ಲುವವನು ಆರ್ಥಿಕವಾಗಿ ಎಷ್ಟು ಸಬಲತೆಯನ್ನು ಹೊಂದಿದ್ದಾನೆ.

ಮತ್ತು ಚುನಾವಣೆಯಲ್ಲಿ ಆತ ಹಣ ಎಷ್ಟು ವೆಚ್ಚ ಮಾಡಬಲ್ಲ ಎಂಬುದನ್ನು ಗಮನಿಸಲಾಗುತ್ತದೆ ಮತ್ತು ಆ ವ್ಯಕ್ತಿ ಎಷ್ಟು ಪಾರ್ಟಿಫಂಡ್ ನೀಡಬಲ್ಲ ಎಂಬುದನ್ನು ಗಮನಿಸಲಾಗುತ್ತದೆ.

೩. ಚುನಾವಣೆಗೆ ನಿಲ್ಲುವ ಅಭ್ಯರ್ಥಿ ಆ ಚುನಾವಣೆಗೆ ಸ್ಪರ್ಧಿಸಲು ನೈತಿಕವಾಗಿ ಎಷ್ಟು ಯೋಗ್ಯ ಎಂದು ನೋಡುವುದಿಲ್ಲ.

೪. ಚುನಾವಣೆಗೆ ನಿಲ್ಲುವ ಅಭ್ಯರ್ಥಿ ಜನ ಸಾಮಾನ್ಯರಿಗೆ ನ್ಯಾಯ ಒದಗಿಸಬಲ್ಲಷ್ಟು ಹೊಣೆಗಾರಿಕೆ ಹೊರಬಲ್ಲನೆ ಮತ್ತು ನೈತಿಕ ಯೋಗ್ಯತೆ ಇರುವವನೆ ಎಂಬುದನ್ನು ಗಮನಿಸುವುದಿಲ್ಲ.

೫. ಚುನಾವಣಾ ಅಭ್ಯರ್ಥಿ ಶಿಕ್ಷಣ ಪಡೆದವನೆ ಅಥವಾ ಇಲ್ಲವೆ, ಶಿಕ್ಷಣ ಪಡೆದಿದ್ದರೆ ಅವನು ಎಷ್ಟು ಶಿಕ್ಷಣ ಪಡೆದಿದ್ದಾನೆ ಮುಂತಾಗಿ ಯಾವುದನ್ನೂ ಗಮನಿಸುವುದಿಲ್ಲ.

ಇಂದು ಚುನಾವಣಾ ಸ್ವರೂಪವೇ ಬದಲಾಗುತ್ತಿದೆ. ಜಾತಿ ನೋಡಿ, ಚುನಾವಣೆಗೆ ನಿಂತ ಅಭ್ಯರ್ಥಿಯ ಸಾಮರ್ಥ್ಯ ನೋಡಿ ಮತದಾರ ಮತ ಹಾಕುವುದನ್ನು ಮರತೇ ಬಿಟ್ಟಿದ್ದಾನೆನೋ ಎನ್ನುವಷ್ಟು ಅಧ್ವಾನದ ಫಲಿತಾಂಶಗಳು ಚುನಾವಣಾ ವಿಚಾರದಲ್ಲಿ ಹೊರಬೀಳುತ್ತವೆ. ಬಹುತೇಕವಾಗಿ ಈ ದೇಶದಲ್ಲಿ ನಡೆಯುವ ಎಲ್ಲಾ ಸ್ವರೂಪದ ಚುನಾವಣೆಗಳು ಚುನಾವಣಾ ನೀತಿಯನ್ನು ಮುರಿದೇ ಚುನಾವಣೆ ನಡೆಸುತ್ತವೆ ಎಂಬುದನ್ನು ಗಮನಿಸಬಹುದಾಗಿದೆ. ಹಣ, ಹೆಂಡ, ಸೀರೆ, ಇತ್ಯಾದಿ ಚಿಕ್ಕ ಪುಟ್ಟ ಆಸೆಗಳನ್ನು ಮತದಾರನಲ್ಲಿ ತುಂಬಿ ಚುನಾವಣೆಯಲ್ಲಿ ಗೆಲ್ಲುವವರ ಪ್ರಮಾಣವೇ ಹೆಚ್ಚು. ಅದಕ್ಕೆ ಪಂಚಾಯತ್‌ರಾಜ್ ವ್ಯವಸ್ಥೆಯೂ ಹೊರತಲ್ಲ.

ರಾಮನಗರ ಜಿಲ್ಲೆಯ ನಾಲ್ಕು ತಾಲೂಕುಗಳ ಪಂಚಾಯತ್‌ರಾಜ್ ವ್ಯವಸ್ಥೆಯ ಚುನಾಯಿತ ಪರಿಶಿಷ್ಟ ಪಂಗಡದ ಇರುಳಿಗ ಸದಸ್ಯರ ರಾಜಕೀಯ ಸ್ಥಿತಿಗತಿಗಳ ಕುರಿತು ಈ ಅಧ್ಯಯನದಲ್ಲಿ ಅವಲೋಕಿಸಲಾಗಿದೆ.

ರಾಮನಗರ ಜಿಲ್ಲೆಯಲ್ಲಿ ಮೂರು ಹಂತಗಳ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ೨೨ ಜನ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಿಂದ ಪರಿಶಿಷ್ಟ ಜಾತಿಗೆ ನಾಲ್ಕು ಸ್ಥಾನಗಳು ಹಾಗೂ ಪರಿಶಿಷ್ಟ ವರ್ಗಕ್ಕೆ ಒಂದು ಸ್ಥಾನ ಮೀಸಲಾತಿ ಕಲ್ಪಿಸಲಾಗಿದೆ. ಜಿಲ್ಲೆಯಲ್ಲಿ ನಾಲ್ಕು ತಾಲೂಕು ಪಂಚಾಯಿಗಳಿಂದ ಇದರಲ್ಲಿ ನಾಲ್ಕು ಪಂಚಾಯಿತಿಗಳಿಂದ ೮೪ ಸದಸ್ಯರನ್ನು ಒಳಗೊಂಡಿದ್ದ ಪರಿಶಿಷ್ಟ ಜಾತಿಯ ೧೭ ಸದಸ್ಯರು ಹಾಗೂ ಪರಿಶಿಷ್ಟ ಪಂಗಡದ ನಾಲ್ಕು ಸದಸ್ಯರಿದ್ದಾರೆ. ಹಾಗೆಯೇ ಜಿಲ್ಲೆಯಲ್ಲಿ ಒಟ್ಟು ೧೩೦ ಗ್ರಾಮಪಂಚಾಯಿತಿಗಳಿದ್ದು, ೪೩೨ ಪರಿಶಿಷ್ಟ ಜಾತಿಯ ಗ್ರಾಮಪಂಚಾಯಿತಿ ಸದಸ್ಯರು ೧೨೪ ಜನ ಪರಿಶಿಷ್ಟ ಪಂಗಡದ ಸದಸ್ಯರು ಇದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ಜಿಲ್ಲೆಯ ಜಿಲ್ಲಾಪಂಚಾಯಿತಿ ಸದಸ್ಯರು ಹಾಗೂ ತಾಲೂಕು ಪಂಚಾಯಿತಿ ಗ್ರಾಮಪಂಚಾಯಿತಿಗಳಲ್ಲಿ ಅಧಿಕಾರವನ್ನು ಪಡೆದಿದ್ದು ರಾಜಕೀಯ ಕ್ಷೇತ್ರದಲ್ಲಿ ಇರುಳಿಗರ ಮಹಿಳೆಯರು ಪುರುಷರಿಗಿಂತಲೂ ಹೆಚ್ಚು ಪ್ರಾಬಲ್ಯ ಹೊಂದಿದ್ದಾರೆ. ಕನಕಪುರ ತಾಲೂಕಿನ ದೊಡ್ಡಆಲಹಳ್ಳಿ ಜಿಲ್ಲಾಪರಿಷತ್ ಕ್ಷೇತ್ರದಿಂದ ಶ್ರೀಮತಿ ಮಹಾದೇವಿಯವರು

ಪರಿಶಿಷ್ಟ ಪಂಗಡದ ಇರುಳಿಗ ಮಹಿಳೆಯಾಗಿದ್ದು ಜಿಲ್ಲಾ ಪಂಚಾಯಿತಿನಲ್ಲಿ ಉಪಾಧ್ಯಕ್ಷರಾಗಿಯು ಕಾರ್ಯನಿರ್ವಹಿಸಿದ್ದಾರೆ. ರಾಮನಗರ ಜಿಲ್ಲಾ ಪಂಚಾಯತಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಕನಕಪುರ ತಾಲೂಕು ಪಂಚಾಯಿತಿಯಲ್ಲಿ ಕೂತಗಾನಹಳ್ಳಿ ತಾಲೂಕು ಪಂಚಾಯಿತಿ ಸದಸ್ಯರಾಗಿ ಇರುಳಿಗ ಮಹಿಳೆ ಶ್ರೀಮತಿ ಸರೋಜಮ್ಮ ರಾಮಸ್ವಾಮಿ ಅವರು, ರಾಮನಗರ ತಾಲೂಕು ಪಂಚಾಯಿತಿ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು.

ಗ್ರಾಮಪಂಚಾಯತಿ ಚುನಾವಣೆಗಳಲ್ಲಿ ಯಾವುದೇ ರಾಷ್ಟ್ರೀಯ ಅಥವಾ ಪ್ರಾದೇಶಿಕ ಪಕ್ಷಗಳು ಪ್ರವೇಶಿಸುವಂತಿಲ್ಲ. ಹೀಗಾಗಿ ಗ್ರಾಮ ಪಂಚಾಯಿತಿ ಅಭ್ಯರ್ಥಿಗಳಿಗೆ ಯಾವುದೇ ಪಕ್ಷದ ಗುರುತನ್ನು ಚುನಾವಣಾ ಗುರುತಾಗಿ ನೀಡುವುದಿಲ್ಲ. ಅವರಿಗೆ ಚುನಾವಣಾ ಆಯೋಗ ನಿರ್ಧಾರ ಮಾಡಿದ ಯಾವುದಾದರೂ ಒಂದು ಗುರುತನ್ನು ನೀಡಲಾಗುತ್ತದೆ ಅಷ್ಟೇ. ಆದರೆ ಗ್ರಾಮ ಮಟ್ಟದಲ್ಲಿ ಚುನಾವಣೆಗೆ ನಿಂತವರು ವೋಟ್ ಬ್ಯಾಂಕ್‌ಗಳು ಎಂದರಿತ ಪಕ್ಷಗಳು ಅವರನ್ನು ಓಲೈಸಲೆಂದು ತಮ್ಮ ಕಡೆ ಸೆಳೆದುಕೊಳ್ಳಲು ಪ್ರಯತ್ನಿಸುತ್ತವೆ ಹಾಗೂ ಆ ಜನರಿಗೆ ಸರಾಯಿ, ಹಣ ಇತ್ಯಾದಿಗಳನ್ನು ನೀಡಿ ತಮ್ಮ ಪ್ರೀತಿಯನ್ನು ಗಳಿಸಿಕೊಳ್ಳತ್ತವೆ. ಸಂವಿಧಾನಕವಾಗಿ ಪಕ್ಷಾತೀತವಾಗಿ ಜರುಗಬೇಕಾದ ಗ್ರಾಮ ಪಂಚಾಯಿತ ಚನಾವಣೆ ಪಕ್ಷ – ಪಕ್ಷಗಳ ಮಧ್ಯದ ಹಣಾಹಣಿಯಾಗಿ ಏರ್ಪಡುತ್ತದೆ.

ರಾಮನಗರ ಜಿಲ್ಲೆಯ ತಾಲೂಕುವಾರು ಇರುಳಿಗ ಗ್ರಾಮ ಪಂಚಾಯತಿ ಸದಸ್ಯರು ಈ ಕೆಳಗಿನಂತಿದೆ

ಕೋಷ್ಟಕ ೬.೫. ರಾಮನಗರ ಜಿಲ್ಲೆಯ ತಾಲೂಕುವಾರು ಇರುಳಿಗ
ಗ್ರಾಮ ಪಂಚಾಯತಿ ಸದಸ್ಯರ ಸಂಖ್ಯಾ ವಿವರ

ಕ್ರಸಂ	ತಾಲೂಕು	ಇರುಳಿಗ ಬುಡಕಟ್ಟಿನ ಗ್ರಾಮ ಪಂಚಾಯತಿ ಸದಸ್ಯರು		
		ಗಂಡು	ಹೆಣ್ಣು	ಒಟ್ಟು
೧	ಚನ್ನಪಟ್ಟಣ	–	೦೧	೦೧
೨	ಕನಕಪುರ	೦೧	೧೮	೧೯
೩	ಮಾಗಡಿ	–	೦೧	೦೧
೪	ರಾಮನಗರ	೦೨	೦೪	೦೬
	ಒಟ್ಟು	೦೩	೨೪	೨೭

ಕೃಪೆ: ರಾಮನಗರ ಜಿಲ್ಲೆಯ ನಾಲ್ಕು ತಾಲೂಕು ಪಂಚಾಯತಿ ಕಾರ್ಯಾಲಯಗಳ ಮಾಹಿತಿ, ಜುಲೈ ೧೩, ೨೦೧೫.

ಕೋಷ್ಟಕ ೬.೬. ರಾಮನಗರ ಜಿಲ್ಲೆಯ ಗ್ರಾಮಪಂಚಾಯಿತಿಗಳಲ್ಲಿ ಇರುಳಿಗರ ಸದಸ್ಯರ ವಿವರ

ಕ್ರ.ಸಂ.	ತಾಲೂಕುಗಳು	ಗ್ರಾಮಪಂಚಾಯಿತಿ	ಚುನಾಯಿತರಾದ ಕ್ಷೇತ್ರ	ಸದಸ್ಯರು
೧.	ಚನ್ನಪಟ್ಟಣ	ಮಾಕಳಿ	ಇರುಳಿಗರ ಕಾಲೋನಿ	ಬರಗಮ್ಮ
೨.	ಕನಕಪುರ	ಅರೆಕೆರೆ	ಹಂಚಗುಳಿ	ಶಿವನಮ್ಮ
		ಅಚ್ಚಲು	ವಡ್ಲೇಗೌಡನದೊಡ್ಡ	ನಾಗಮ್ಮ
		ಅಳ್ಳಿಮಾರನಹಳ್ಳಿ	ಅಳ್ಳಿಮಾರನಹಳ್ಳಿ	ಮಂಗಳ
		ಬನವಾಸಿ	ತಟ್ಟೆಕೆರೆ–೨	ಮಹಾಲಕ್ಷ್ಮಿ
		ಬೂದಿಗುಪ್ಪೆ	ಬರದನಹಳ್ಳಿ	ಮುತ್ತಮ್ಮ
		ಚಿಕ್ಕಮುದುವಾಡಿ	ತಿಮ್ಮೇಗೌಡನದೊಡ್ಡಿ	ಚಿಕ್ಕಮಣಮ್ಮ
		ದೊಡ್ಡಮುದುವಾಡಿ	ದೊಡ್ಡುಮುದುವಾಡಿ	ಅಮುದ
		ಹೊನ್ನಿಗನಹಳ್ಳಿ	ಸಾಸಾಲಪುರ	ಶಿವಲಿಂಗಮ್ಮ
		ಹೊಸದುರ್ಗ	ಸಾಲುಬನ್ನಿ	ಮುತ್ತಮ್ಮ
		ಹುಣಸನಹಳ್ಳಿ	ತಟ್ಟೆಕೆರೆ–೪	ಮಹದೇವಮ್ಮ
		ಐ.ಗೊಲ್ಲಹಳ್ಳಿ	ಶಿವನೇಗೌಡನದೊಡ್ಡಿ	ಮುತ್ತಮ್ಮ
		ಕಲ್ಲಹಳ್ಳಿ	ಹೊಸಕೋಟೆ	ಚಿಕ್ಕತಾಯಮ್ಮ
		ಕಬ್ಬಾಳು	ಗುರುವಿನಪುರ	ಶಿವಮ್ಮ ಬರಗಮ್ಮ
		ನಾರಾಯಣಪುರ	ಬೊಮ್ಮಸಂದ್ರ	ಜಯಲಕ್ಷ್ಮಿ
		ಟಿ. ಬೇಕುಪ್ಪೆ	ಹೊರಳಗಲ್ಲು	ಪಾರ್ವತಮ್ಮ
		ಸೋಮದೇವಪ್ಪನಹಳ್ಳಿ	ಕೂತಗೊಂಡನಹಳ್ಳಿ	ಗಿರಿಜಮ್ಮ
		ಶಿವನಹಳ್ಳಿ	ರಾಮನಹಳ್ಳಿ	ಗೌರಮ್ಮ
		ಯಲಚವಾಡಿ	ದೊಡ್ಡಬಿಜ್ಜನಹಳ್ಳಿ	ಗೌರಮ್ಮ
		ಯಲಚವಾಡಿ	ಯಲಚವಾಡಿ	ಕಾಳಯ್ಯ
೩.	ಮಾಗಡಿ	ಮಾಡಬಾಳ್	ಜೇನುಕಲ್ಲಪಾಳ್ಯ	ಮುತ್ತಮ್ಮ
೪.	ರಾಮನಗರ	ಮಾಯಾಗಾನಹಳ್ಳಿ	ಬಸವನಪುರ	ಲಕ್ಷ್ಮಮ್ಮ ತಿಮ್ಮಯ್ಯ
		ಕೈಲಂಚ	ಕೈಲಂಚ	ಈರಮ್ಮ

		ಬನ್ನಿಕುಪ್ಪೆ(ಕೈ)	ಬನ್ನಿಕುಪ್ಪೆ(ಕೈ)	ಲಕ್ಷ್ಮಮ್ಮ
		ಹರಿಸಂದ್ರ	ಹರಿಸಂದ್ರ	ವೆಂಕಟೇಶ
		ಕೂಟಗಲ್	ಇರುಳಿಗರದೊಡ್ಡಿ	ಬಿಳಿಯಪ್ಪ
		ಹುಣಸನಹಳ್ಳಿ	ಅಚ್ಚಲು	ಕಬ್ಬಾಳಮ್ಮ

ಕೃಪೆ: ರಾಮನಗರ ಜಿಲ್ಲೆಯ ನಾಲ್ಕು ತಾಲೂಕು ಪಂಚಾಯತಿ ಕಾರ್ಯಾಲಯಗಳ ಮಾಹಿತಿ, ಜುಲೈ ೧೩, ೨೦೧೫.

ಪಕ್ಷಾತೀತವಾಗಿ ಗೆಲುವನ್ನು ಸಾಧಿಸಿ ಗ್ರಾಮ ಪಂಚಾಯಿತಿಯ ವಿವಿಧ ಹುದ್ದೆಗಳನ್ನು ಅಲಂಕರಿಸಿದ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರನ್ನು ವಿಚಾರಿಸಲಾಗಿ ಅವರೆಲ್ಲಾ ಬಹುತೇಕ ಶೇಕಡ ನೂರರಷ್ಟು ಜನ ಹೊಸದಾಗಿ ರಾಜಕೀಯ ಪ್ರವೇಶ ಮಾಡಿದವರು. ತಮ್ಮ ಸದಸ್ಯತ್ವದ ಕಾಲಾವಧಿ ಮುಗಿದ ತರುವಾಯ ರಾಜಕೀಯದಿಂದ ನಿವೃತ್ತಿಗೊಂಡು ತಮ್ಮ ಪಾಡಿಗೆ ತಾವು ಮನೆಕೆಲಸ, ಕೂಲಿ ಇತ್ಯಾದಿಗಳಲ್ಲಿ ತೊಡಗಿಸಿಕೊಳ್ಳುವವರು.

ಇರುಳಿಗ ಸಮುದಾಯಕ್ಕೆ ಸೇರಿದ ಬಹುತೇಕ ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿ ಹಾಗೂ ಗ್ರಾಮಪಂಚಾಯತಿ ಮಹಿಳಾ ಸದಸ್ಯರು ನಾಮಕಾವಸ್ಥೆಗೆ ಚುನಾವಣೆಗೆ ನಿಂತು ಸದಸ್ಯರಾದವರು. ಇವರ ಪರವಾಗಿ ಜಿಲೆಯ ಪ್ರಬಲ ಸಮುದಾಯಗಳು ಇವರ ರಾಜಕೀಯ ಅಧಿಕಾರವನ್ನು ಚಲಾವಣೆ ಮಾಡುತ್ತಾರೆ. ಕೇವಲ ಪರಿಶಿಷ್ಟ ಪಂಗಡದ ಮೀಸಲಾತಿ ಬಂದಿದೆ ಎಂಬ ಕಾರಣಕ್ಕಾಗಿ ಇವರನ್ನು ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಲಾಗಿದೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪರಿಶಿಷ್ಟ ಪಂಗಡದ ಇರುಳಿಗ ಮಹಿಳಾ ಸದಸ್ಯರ ಕುಟುಂಬದ ಪುರುಷರು ರಾಜಕೀಯ ಜೀವನಕ್ಕೆ ತಮ್ಮ ಮಹಿಳೆಯರನ್ನು ಕರೆತಂದರೆಂಬುದಕ್ಕಿಂತ ಆ ಮಹಿಳೆಯರ ಹೆಸರಿನಲ್ಲಿ ಪ್ರಬಲ ಸಮುದಾಯಗಳು ಇವರನ್ನು ರಾಜಕೀಯ ಪ್ರವೇಶ ಮಾಡುವಂತೆ ನೋಡಿಕೊಳ್ಳಲಾಗಿದೆ. ಆ ರಾಜಕೀಯ ಅಧಿಕಾರದ ಫಲಾನುಭವಿಗಳು ಮಾತ್ರ ಜಿಲ್ಲೆಯ ಪ್ರಬಲ ಸಮುದಾಯ ಮತ್ತು ಬಂಡವಾಳಶಾಹಿಗಳಾಗಿದ್ದಾರೆ. ಆ ಮಹಿಳಾ ಮೀಸಲಾತಿಯ ಲಾಭವನ್ನು ನೇರವಾಗಿ ಮಹಿಳಾ ಸದಸ್ಯರು ಪಡೆದಿದ್ದಾರೆನಿಸಿದರೂ ಪರೋಕ್ಷವಾಗಿ ಮಹಿಳೆ ಕೇವಲ ನೆಪಮಾತ್ರದ ಸದಸ್ಯೆಯಾಗುತ್ತಾಳೆ. ಕ್ಷೇತ್ರಕಾರ್ಯದಲ್ಲಿ ಗಮನಿಸಿದ ಪ್ರತಿ ಸದಸ್ಯೆಯೂ ಇದೇ ಮಾದರಿಯವರಾಗಿದ್ದಾರೆ.

ಚುನಾವಣೆಗೆ ಸ್ಪರ್ಧಿಸಿ ಸದಸ್ಯರಾಗಿರುವ ಪರಿಶಿಷ್ಟ ಪಂಗಡದ ಇರುಳಿಗ ಮಹಿಳೆಯರು ತಮ್ಮ ಮನೆಯ ಗಂಡಸರು ಹೇಳಿದ್ದರಿಂದ ರಾಜಕೀಯ ಪ್ರವೇಶ ಮಾಡಿದೆವು, ಅದರಾಚೆಗೆ ನಮಗೇನೂ ಗೊತ್ತಿಲ್ಲ. "ಮೊದಲು ನಮ್ದು ಜಾತಿ ಸರ್ಟಿಫಿಕೇಟ್ ಮಾಡಿಸಿದ್ರು, ಆಮೇಲೆ ಎಲೆಕ್ಷನ್ ಫಾರ್ಮ ತುಂಬಿಸಿ ನಮ್ಮ ಕೂಡ ಸಹಿ ಮಾಡಿಸಿದ್ರು, ಮುಂದಿನ ಕೆಲಸನೆಲ್ಲಾ ನಮ್ಮ ಮನೆ ಗಂಡಸರು ಮಾಡಿದ್ರು, ಆಮೇಲೆ ಏನೇನು ಮಾಡಿದ್ರೋ ಅವರಿಗೆ ಗೊತ್ತು, ಆ ಮೇಲೆ ಚುನಾವಣೆಗೆ ಸ್ಪರ್ಧಿಸಲು

ಅವಕಾಶ ಆಯಿತು ಅಂತ ಗೊತ್ತಾದ ಮೇಲೆ ಪ್ರಚಾರಕ್ಕೆ ಹೋದ್ವಿ, ನಮಗೇನೂ ಗೋತ್ತಿಲ್ಲ ಎಂಬ ಅಮಾಯಕವಾದ ಉತ್ತರವೇ ಅವರಿಂದ ದೊರೆತದ್ದು".[೧೦]

ರಾಜಕೀಯ ಒಳಸುಳಿಗಳ ಪರಿಚಯವೇ ಇಲ್ಲದ ಗ್ರಾಮೀಣ ಪರಿಸರದ ಅಮಾಯಕರಾದ ಪರಿಶಿಷ್ಟ ಪಂಗಡದ ಇರುಳಿಗ ಮಹಿಳೆಯರಿಗೆ ತಾವು ಯಾವ ಪಕ್ಷದಿಂದ ಗೆದ್ದಿದ್ದೇವೆ ಎಂಬ ಸ್ಪಷ್ಟ ಚಿತ್ರಣವೂ ಇಲ್ಲವಾಗಿದೆ. ಸಂವಿಧಾನದ ವಿಧಿಗಳನ್ವಯ ಗ್ರಾಮ ಪಂಚಾಯತಿ ಮಟ್ಟದಲ್ಲಿ ಯಾವುದೇ ಪಕ್ಷದ ಅಡಿಯಲ್ಲಿ ಚುನಾವಣೆಗಳು ನಡೆಯಬಾರದೆಂದಿದೆ. ಆ ಪ್ರಕಾರ ಯಾವುದೇ ಪಕ್ಷದ ಚಿಹ್ನೆಯನ್ನು ಗ್ರಾಮ ಪಂಚಾಯಿತಿ ಮಟ್ಟದ ಚುನಾವಣೆಗೆ ನೀಡುವುದಿಲ್ಲ. ಚುನಾವಣಾಧಿಕಾರಿ ಪ್ರಾದೇಶಿಕ, ರಾಜ್ಯ, ರಾಷ್ಟ್ರ ಮಟ್ಟದ ರಾಜಕೀಯ ಪಕ್ಷಗಳ ಚಿಹ್ನೆಗಳ ಹೊರತಾದ ಚಿಹ್ನೆಗಳನ್ನು ಗ್ರಾಮ ಪಂಚಾಯಿತಿ ಅಭ್ಯರ್ಥಿಗಳಿಗೆ ಆಯ್ಕೆ ಮಾಡಿ ಕೊಡುತ್ತಾನೆ. ಇದರ ಉದ್ದೇಶ ಗ್ರಾಮ ಮಟ್ಟದಲ್ಲಿ ರಾಜಕೀಯ ಪಕ್ಷಗಳ ಹೆಸರಿನಲ್ಲಿ ಘರ್ಷಣೆಗಳಾಗಬಾರದು ಎಂಬುದೇ ಆಗಿದೆ. ಆದರೆ ಬಹುತೇಕವಾಗಿ ಇಂದು ಗ್ರಾಮ ಪಂಚಾಯಿತಿ ಚುನಾವಣೆಗಳು ರಾಜಕೀಯ ಪಕ್ಷಗಳ ಹಿನ್ನೆಲೆಯಲ್ಲಿಯೇ ನಡೆಯುತ್ತವೆ. ಇದಕ್ಕೆ ರಾಜ್ಯ ಮಟ್ಟದ ರಾಜಕಾರಣಿಗಳ ಕುಮ್ಮಕ್ಕೂ ಇರುತ್ತದೆ ಎನಿಸುತ್ತದೆ. ಯಾವುದೇ ಪಕ್ಷದ ಅಭ್ಯರ್ಥಿಯಾಗಿರದ ಗ್ರಾಮ ಪಂಚಾಯಿತಿ ಸದಸ್ಯರಲ್ಲಿ ಕೆಲವರು ತಾವು ಬಿ.ಜೆ.ಪಿ ಪಕ್ಷದವರೆಂದೂ ಇನ್ನೂ ಕೆಲವರು ಕಾಂಗ್ರೆಸ್ ಪಕ್ಷದವರೆಂದೂ ಇನ್ನು ಕೆಲವರು ಜೆ.ಡಿ.ಎಸ್. ಇತ್ಯಾದಿ ಪಕ್ಷಗಳ ಹೆಸರಿನ ಅಡಿಯಲ್ಲಿ ಪ್ರಚಾರ ಕಾರ್ಯ ನಡೆಸುತ್ತಾರೆ.

ತಾಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗೆ ಸ್ಪರ್ಧಿಸಿ ಸದಸ್ಯರಾದವರು ಗ್ರಾಮ ಪಂಚಾಯಿತಿ ಸದಸ್ಯರಿಗಿಂತ ಯಾವ ರೀತಿಯಲ್ಲಿಯೂ ಭಿನ್ನವಾಗಿರಲಿಲ್ಲ. ಅವರು ಸಹ ಅಮಾಯಕರೇ ಆಗಿದ್ದರು. ಇರುಳಿಗರ ಒಬ್ಬ ಮಹಿಳೆ ಹಿಂದಿನ ಚುನಾವಣೆಯಲ್ಲಿ ಗೆದ್ದು ಜಿಲ್ಲಾ ಪಂಚಾಯತಿಯ ಉಪಾಧ್ಯಕ್ಷರಾಗಿದ್ದರು. ಇವರಲ್ಲದೆ ತಾಲೂಕು ಪಂಚಾಯಿತಿ ಸದಸ್ಯರೂ ಇದ್ದಾರೆ. ಆದರೆ ಇವರೆಲ್ಲಾ ಇವತ್ತಿನ ರಾಜಕೀಯ ಹಿಕ್ಮತ್ತುಗಳನ್ನು ಅರಿಯದ ಮುಗ್ಧ ಸದಸ್ಯರಾಗಿದ್ದಾರೆ. ಸಮುದಾಯದಲ್ಲಿನ ಜನರಲ್ಲಿ ಇನ್ನು ಚುನಾವಣೆಯ ಬಗ್ಗೆ ಸ್ಪಷ್ಟವಾದ ಪರಿಕಲ್ಪನೆಯಾಗಲಿ, ಇದರ ಆಗುಹೋಗುಗಳ ಬಗ್ಗೆ ಚಿಂತಿಸುವ ಚಿಂತನೆಯು ಹೆಚ್ಚಾಗಬೇಕಾಗಿದೆ. ಮುಖ್ಯವಾಗಿ ದಿನನಿತ್ಯ ಜೀವನದಲ್ಲಿನ ಬಡತನ ಅನಕ್ಷರತೆ ಇತರೆ ಒಟ್ಟಾರೆ ಸಮುದಾಯಗಳ ಒತ್ತಡ ಹೀಗೆ ಹಲವು ರೀತಿಯಿಂದ ರಾಜಕೀಯ ನಿರ್ಧಾರಗಳನ್ನು ಸ್ವಂತ ಕೈಗೊಳ್ಳಲಾರದ ಸಂದರ್ಭಗಳೇ ಹೆಚ್ಚಾಗಿದೆ. ಇವರ ಬಡತನ ಅನಕ್ಷರತೆಯ ದೌರ್ಬಲ್ಯವನ್ನು ತಮ್ಮ ರಾಜಕೀಯ ಜೀವನದ ಯಶಸ್ವಿಯಿಂದ ತಿಳಿದಿರುವ ರಾಜಕೀಯ ಮುಖಂಡರು ಮತ್ತು ಬಹುಸಂಖ್ಯಾತ ಸಮಾಜ ಇವರನ್ನು ಪ್ರಜಾಪ್ರಭುತ್ವ ಸಂವಿಧಾನಬದ್ಧವಾಗಿಯೇ ಬೇರೊಂದು ರೀತಿಯಲ್ಲಿ ಶೋಷಿಸುತ್ತಿದ್ದಾರೆಯೇ ಅಥವಾ ದಿಕ್ಕು ತಪ್ಪಿಸುತ್ತಿದ್ದಾರೆಯೇ ತಿಳಿಯದಾಗಿದೆ? ಮತ್ತೊಂದು ವಿಪರ್ಯಾಸವೆಂದರೆ ಮತದಾನದ ಗುರುತಿನ ಚೀಟಿಯನ್ನು ಸಂಪೂರ್ಣವಾಗಿ ಒದಗಿಸಲಾಗದೆ ಮತದಾನ ಕಡ್ಡಾಯ ಮಾಡಲು ಹೊರಟಿರುವ ಪ್ರಭುತ್ವ, ಈ ಎಲ್ಲ ವೈರುಧ್ಯಗಳ ನಡುವೆ ತಮಗೆ ದೊರೆತಿರುವ ತಳಸಮುದಾಯ ಗಳು ರಾಜಕೀಯ ಅವಕಾಶ ಬಳಸಿಕೊಂಡು ಮುಂದೆ ಬರುವುದಕ್ಕೆ ಸಮಾಜದಲ್ಲಿನ ಸಮುದಾಯಗಳ

ಮಧ್ಯದಲ್ಲಿರುವ ಮೇಲು-ಕೀಳು, ಜಾತಿ ಸಂಘರ್ಷ, ಅಧಿಕಾರಿ ವರ್ಗದ ಅಸಹಕಾರವೇ ಕಾರಣವಾಗಿದೆ ಯೆಂದರೆ ತಪ್ಪಾಗಲಾರದು. ಒಟ್ಟಾರೆಯಾಗಿ ಜಿಲ್ಲೆಯಲ್ಲಿನ ಇರುಳಿಗ ಜನರಿಗೆ ರಾಜಕೀಯ ತರಬೇತಿ ಪ್ರಜ್ಞೆ ಮತ್ತು ವಿಕೇಂದ್ರಿಕರಣದ ಉದ್ದೇಶಗಳ ಬಗ್ಗೆ ಸೂಕ್ತವಾದ ರಾಜಕೀಯ ಅರಿವು ಮೂಡಿಸಿದರೆ ಅತ್ಯುತ್ತಮವಾದ ಚುನಾಯಿತ ಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುತ್ತಾರೆ. ಇದಕ್ಕೆ ಪೂರಕವಾದ ವ್ಯವಸ್ಥೆಯನ್ನು ಈ ಸಮುದಾಯದ ಸಂಘಟನೆಗಳು ಇತ್ತೀಚೆಗೆ ತಮ್ಮನ್ನು ತೊಡಗಿಸಿಕೊಂಡಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

೬.೪.೧. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿನ ಸಭೆಗಳ ಕುರಿತಾಗಿ ಮಹಿಳಾ ಸದಸ್ಯರಿಗಿರುವ ತಿಳುವಳಿಕೆ

ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಈ ಮೂರು ಹಂತ ಗಳಲ್ಲಿಯೂ ಹಲವಾರು ಸಭೆಗಳು ನಡೆಯುತ್ತವೆ. ಅದರಲ್ಲೂ ಸಾರ್ವಜನಿಕ ಸಭೆಗಳ ಕುರಿತು ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಿಗಿಂತ ಗ್ರಾಮ ಪಂಚಾಯಿತಿಗಳ ಪಾತ್ರ ಹಿರಿದಾದುದಾಗಿದೆ. ಏಕೆಂದರೆ ಗ್ರಾಮ ಮಟ್ಟದಲ್ಲಿಯ ಜವಾಬ್ದಾರಿಗಳು ಮತ್ತು ಮೂಲಭೂತ ಸೌಕರ್ಯಗಳ ಕುರಿತು ಮಾಡಬೇಕಾದ ಕಾರ್ಯಗಳೇ ಮುಖ್ಯ ಎಂದು ಅರಿತಿರುವ ಸರ್ಕಾರ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಜವಾಬ್ದಾರಿಗಳನ್ನು ವಹಿಸಿದೆ. ಸಾಮಾನ್ಯವಾಗಿ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಜನಸಾಮಾನ್ಯರ ಮಧ್ಯ ಹೋಗಿ ಅವರ ಸಮಸ್ಯೆಗಳು ಯಾವುವು ಎಂಬುದನ್ನು ಜನಗಳೊಂದಿಗೆ ಚರ್ಚಿಸಿ ಅವರ ಸಮಸ್ಯೆಗಳನ್ನು ಪರಿಹರಿಸುವ ಕಾರ್ಯವನ್ನು ಗ್ರಾಮ ಪಂಚಾಯತಿಯ ಸದಸ್ಯರು ಮಾಡಬೇಕು ಎಂಬುದೇ ಅದರ ಆಶಯ. ಹಾಗೆ ಗ್ರಾಮ ಪಂಚಾಯಿತಿಯ ಕಾರ್ಯ ಯೋಜನೆಗಳೇನು, ಅದು ಎಷ್ಟು ಯೋಜನೆಗಳನ್ನು ಪೂರೈಸಿದೆ, ಭವಿಷ್ಯದಲ್ಲಿ ಯಾವ ಯೋಜನೆಗಳನ್ನು ಪೂರೈಸಬೇಕಾಗಿದೆ, ಯಾವ ಯೋಜನೆಗೆ ಎಷ್ಟು ಹಣ ಮಂಜೂರಾಗಿದೆ, ಯಾವ ಯೋಜನೆಯಡಿ ಹಣ ಬಿಡುಗಡೆಯಾಗಿದೆ ಮುಂತಾದ ಪ್ರತಿಯೊಂದು ವಿವರವೂ ಸಾರ್ವಜನಿಕರಿಗೆ ತಿಳಿಯಬೇಕು ಮತ್ತು ಪಾರದರ್ಶಕವಾಗಿರಬೇಕು. ಪ್ರತಿಯೊಬ್ಬ ಪ್ರಜೆಯೂ ಆಡಳಿತ

ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವುದೇ ವಿಕೇಂದ್ರಿಕರಣದ ಉದ್ದೇಶ.

ಆದರೆ ಎಷ್ಟೋ ಸಭೆಗಳ ಕುರಿತು ಜನಸಾಮಾನ್ಯರಿಗೆ ಇರಲಿ ಗ್ರಾಮ ಪಂಚಾಯತ್ ಸದಸ್ಯರಿಗೆ ಅರಿವಿರುವುದಿಲ್ಲ. ವರ್ಷಕ್ಕೊಮ್ಮೆಯಾದರೂ ಗ್ರಾಮ ಸಭೆ ನಡೆಸಬೇಕು ಹಾಗೂ ವಾರ್ಡ್ ಸಭೆಗಳನ್ನು ನಡೆಸಬೇಕೆಂಬ ನಿಯಮವಿದ್ದರೂ ಎಷ್ಟೊ ಗ್ರಾಮ ಪಂಚಾಯಿತಿಗಳು ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳನ್ನು ನಡೆಸುವುದೇ ಇಲ್ಲ. ಸಾಮಾನ್ಯವಾಗಿ ಗ್ರಾಮ ಸಭೆಗೆ ಸ್ಥಳೀಯ ಅಧಿಕಾರಿಗಳೊಂದಿಗೆ ತಾಲೂಕು ಮಟ್ಟದ ಅಧಿಕಾರಿಗಳು ಬರಬೇಕೆಂದಿದ್ದರೂ ಬೆರಳೆಣಿಕೆಯಷ್ಟು ಅಧಿಕಾರಿಗಳು ಮಾತ್ರ ಬಂದಿರುತ್ತಾರೆ. ಎಷ್ಟೋ ಬಾರಿ ಗ್ರಾಮ ಪಂಚಾಯಿತಿ ಸದಸ್ಯರೇ ಗ್ರಾಮ ಸಭೆಗಳಿಗೆ ಹೋಗುವುದಿಲ್ಲ. ಸಾರ್ವಜನಿಕರಿಗೆ ಒಮ್ಮೊಮ್ಮೆ ಗ್ರಾಮ ಸಭೆ ಎಲ್ಲಿ ನಡೆಯಿತು ಎಂಬುದೇ ತಿಳಿಯುವುದಿಲ್ಲ.

ಅಧ್ಯಯನದ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳ ಕುರಿತು ಕೇಳಿದಾಗ ಹಲವಾರು ರೀತಿಯ ಪ್ರತಿಕ್ರಿಯೆಗಳು ಗ್ರಾಮ ಪಂಚಾಯತ್ ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರಿಂದ ದೊರೆತವು. ಆ ಸಭೆಗಳ ಕುರಿತು ಸದಸ್ಯರ ಪ್ರತಿಕ್ರಿಯೆಗಳನ್ನು ಗಮನಿಸಿದಾಗ ಕಂಡು ಬಂದ ವಿಚಾರಗಳು ಈ ಕೆಳಗಿನಂತಿವೆ.

೬.೪.೨. ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳ ಕುರಿತು ಸದಸ್ಯರಿಗಿರುವ ತಿಳುವಳಿಕೆಗಳ ವಿವರ

ಒಟ್ಟು ನಾಲ್ಕು ತಾಲೂಕುಗಳ ಮಧ್ಯ ಗ್ರಾಮ ಪಂಚಾಯತಿ ಸದಸ್ಯರಾಗಿ ಆಯ್ಕೆಯಾದ ೨೭ ಜನ ಪರಿಶಿಷ್ಟ ಪಂಗಡದ ಇರುಳಿಗ ಸದಸ್ಯರಲ್ಲಿ ಬಹುತೇಕ ಯಾರಿಗೂ ಸರಿಯಾದ ರೀತಿಯಲ್ಲಿ ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳ ಕುರಿತು ಮಾಹಿತಿಯಾಗಲೀ, ಆ ಸಭೆಗಳು ಏಕೆ ಮಾಡಲಾಗುತ್ತದೆ ಎಂಬ ತಿಳುವಳಿಯಾಗಲೀ ಯಾವುದೂ ಗೊತ್ತಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡುಬಂದಿತು. ಯಾವುದೇ ಗ್ರಾಮ ಸಭೆ ಅಥವಾ ವಾರ್ಡ್ ಸಭೆಗಳಿಗೆ ಆಯಾ ಗ್ರಾಮ ಪಂಚಾಯತ್ ಅಧ್ಯಕ್ಷರು, ಕಾರ್ಯದರ್ಶಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಸದಸ್ಯರು ಮತ್ತು ಸಾರ್ವಜನಿಕರು ಪಾಲ್ಗೊಳ್ಳಬೇಕು. ಆದರೆ ಚುನಾಯಿತ ಇರುಳಿಗ ಸದಸ್ಯರಲ್ಲಿ ಅದರಲ್ಲೂ ವಿಶೇಷವಾಗಿ ಮಹಿಳಾ ಸದಸ್ಯರು ಆ ಸಭೆಗಳಿಗೆ ಹಾಜರಾಗುವುದು ಅಪರೂಪವೆಂದೇ ಹೇಳಬಹುದು.

ನೀವೇಕೆ ಗ್ರಾಮ ಸಭೆಗಳಿಗೆ ಹಾಜರಾಗುವುದಿಲ್ಲ ಎಂದು ಪ್ರಶ್ನಿಸಿದರೆ ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳಲ್ಲಿ ಮಾತನಾಡುವುದಕ್ಕೆ ಸೆಕ್ರೆಟರಿ ಮತ್ತು ಅಧ್ಯಕ್ಷರಿರುತ್ತಾರೆ. ನಮ್ಮದೇನೂ ಕೆಲಸವಿರುವುದಿಲ್ಲ. ನಮಗೇನೂ ತಿಳಿಯುವುದಿಲ್ಲ. ಮೀಟಿಂಗ್ ನಂತರ ಯಾರಾದರೂ ಬಂದು ನಮ್ಮ ಸಹಿಯನ್ನು ಪುಸ್ತಕದಲ್ಲಿ ಪಡೆಯುತ್ತಾರೆ. ಮತ್ತೆ ನಾವೇಕೆ ಮನೆ ಕೆಲಸ ಬಿಟ್ಟು ಆ ಸಭೆಗಳಿಗೆ ಹಾಜರಾಜಬೇಕು ಎಂದು ಹೋಗಲಿಲ್ಲ ಎಂದು ತಿಳಿಸುತ್ತಾರೆ. ಪ್ರಾಯಶಃ ಜಿಲ್ಲೆಯ ಪ್ರಬಲ ಸಮುದಾಯಗಳ ರಾಜಕೀಯ ಹಿಡಿತದ ಪ್ರಭಾವ ಹಾಗೂ ಇರುಳಿಗ ಸದಸ್ಯರಿಗೆ ಇರುವ ಶಿಕ್ಷಣದ ಕೊರತೆ ಕಾರಣವಾಗಿರಬೇಕೆನಿಸುತ್ತದೆ.

ಕಾರ್ಯಕಾರಿ ಸಭೆಗಳಲ್ಲಿ ಪಾಲ್ಗೊಳ್ಳುವುದು

ಪ್ರತಿಯೊಬ್ಬ ಚುನಾಯಿತ ಪ್ರತಿನಿಧಿಯೂ ತಮ್ಮ ಸಂಸ್ಥೆಯ ಪ್ರತಿಯೊಂದು ಕಾರ್ಯಕಾರಿ ಸಭೆಗೆ ಹಾಜರಗಲೇಬೇಕು. ಆದರೆ ಪಂಚಾಯತ್ ರಾಜ್ ವ್ಯವಸ್ಥೆಯ ಬಹುಪಾಲು ಇರುಳಿಗ ಪ್ರತಿನಿಧಿಗಳು ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯಕಾರಿ ಸಭೆಗಳಿಗೆ ಹಾಜರಾಗುವುದಿಲ್ಲ. ಪ್ರಾಯಶಃ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳಲ್ಲಿ ಇವರು ಪಾಲ್ಗೊಳ್ಳದೇ ಇರಲು ಯಾವ ಕಾರಣಗಳಿವೆಯೋ ಅವೇ ಕಾರಣಗಳು ಕಾರ್ಯಕಾರಿ ಸಭೆಗಳಿಗೆ ಹಾಜರಾಗದಂತಹ ಅಡ್ಡಗೋಡೆಗಳಾಗಿವೆ. ಮುಖ್ಯವಾಗಿ ಗ್ರಾಮ ಪಂಚಾಯತ್ ಮತ್ತು ತಾಲೂಕು ಪಂಚಾಯತ್ ವ್ಯವಸ್ಥೆಯಲ್ಲಿ ಇವರ ಪಾಲ್ಗೊಳ್ಳುವಿಕೆಯ ಕೊರತೆ ಎದ್ದು ಕಾಣುತ್ತದೆ. ಅದರಲ್ಲೂ ತಳಸಮುದಾಯದ ಇರುಳಿಗ ಸದಸ್ಯರ ಪಾಲ್ಗೊಳ್ಳುವಿಕೆಯ ಪರಿ ಮಾತ್ರ ತುಂಬಾ ಶೋಚನೀಯವಾಗಿದೆ.

ಯೋಜನೆಗಳ ಕುರಿತು ವಿವರ

ಪ್ರತಿ ವರ್ಷವೂ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಗ್ರಾಮೀಣಾಭಿವೃದ್ಧಿಗಾಗಿಯೇ ಇಂತಿಷ್ಟು ಎಂದು ಬಜೆಟ್‌ನಲ್ಲಿ ಹಣವನ್ನು ಕಾಯ್ದಿರಿಸಿರುತ್ತವೆ. ನಾನಾ ಯೋಜನೆ, ಕಾರ್ಯಕ್ರಗಳ ಅಡಿಯಲ್ಲಿ ಇಂಥದಕ್ಕೆ ಇಂತಿಷ್ಟು ಹಣವೆಂದು ಕಾಯ್ದಿರಿಸಿ ಆಯಾ ಸಂಸ್ಥೆಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಣ ಬಿಡುಗಡೆ ಮಾಡುತ್ತವೆ. ಮೊದಲಿಗೆ ಜಿಲ್ಲಾ ಪಂಚಾಯಿತಿಯಿಂದ ತಾಲೂಕು ಪಂಚಾಯಿತಿಗೆ, ತಾಲೂಕು ಪಂಚಾಯಿತಿಯಿಂದ ಗ್ರಾಮ ಪಂಚಾಯಿತಿಗೆ ಅನುದಾನ ಬಿಡುಗಡೆಯಾಗುತ್ತಿತ್ತು. ಈ ರೀತಿ ಅನುದಾನ ಬಿಡುಗಡೆಯಾಗುವಾಗ ಮಧ್ಯದಲ್ಲಿ ಸೋರಿಕೆ ಹೆಚ್ಚಾಗುತ್ತದೆ ಎಂಬುದನ್ನು ಅರಿತ ಸರ್ಕಾರ ನೇರವಾಗಿ ಇಂದು ಗ್ರಾಮ ಪಂಚಾಯಿತಿಗಳಿಗೆ ಅನುದಾನಗಳನ್ನು ಬಿಡುಗಡೆ ಮಾಡುತ್ತದೆ. ಅದನ್ನು ಶಿಫಾರಸ್ಸು ಮಾಡುವ ಕೆಲಸ ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳು ಮಾಡುತ್ತವೆ. ಆ ಯೋಜನೆಗಳು ಯಾವುವು, ಯಾವ ಯೋಜನೆಗಳಿಗೆ ಎಷ್ಟು ಹಣ ಬಿಡುಗಡೆಯಾಗುತ್ತದೆ, ಅದನ್ನು ಯಾವುದಕ್ಕೆ ನಿರ್ಧಿಷ್ಟವಾಗಿ ಉಪಯೋಗಿಸಬೇಕು ಎಂಬುದರ ಅರಿವು ಪ್ರತಿಯೊಬ್ಬ ಪಂಚಾಯತ್ ರಾಜ್ ಸಂಸ್ಥೆಯ ಸದಸ್ಯರಿಗೆ ಇರಬೇಕಾಗಿರುತ್ತದೆ. ಆದರೆ ಬಹುಪಾಲು ಇರುಳಿಗ ಸದಸ್ಯರಿಗೆ ಆ ಅನುದಾನ ಯೋಜನೆಗಳು ಯಾವುವು ಇವೆ, ಯಾವ ಅನುದಾನ ಯೋಜನೆಯಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ ಮುಂತಾದ ಯಾವ ವಿಚಾರವು ಗೊತ್ತಿಲ್ಲ. ಇದು ಕೇವಲ ಗ್ರಾಮ ಪಂಚಾಯಿತಿ ಇರುಳಿಗ ಸದಸ್ಯರ ಸಮಸ್ಯೆ ಮಾತ್ರವಾಗಿರದೆ ತಾಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರ ಸಮಸ್ಯೆಯೂ ಆಗಿದೆ.

ಪಂಚಾಯತ್‌ರಾಜ್ ವ್ಯವಸ್ಥೆಯ ಉಪಸಮಿತಿಗಳ ಕುರಿತಾಗಿ ಸದಸ್ಯರಿಗಿರುವ ತಿಳುವಳಿಕೆಯ ವಿವರ

ಚುನಾಯಿತ ಪ್ರತಿ ಸದಸ್ಯರು ಪಂಚಾಯತ್‌ರಾಜ್ ಸಂಸ್ಥೆಯ ಉಪಸಮಿತಿಗಳಿಗೆ ಸದಸ್ಯರು, ಅಧ್ಯಕ್ಷರು ಇತ್ಯಾದಿ ಸ್ಥಾನಗಳಲ್ಲಿದ್ದು ಕಾರ್ಯ ನಿರ್ವಹಿಸಬೇಕಾಗುತ್ತದೆ. ಇದರಲ್ಲಿ ಸಾಮಾನ್ಯವಾಗಿ ಗ್ರಾಮ ಪಂಚಾಯತ್ ಸಂಸ್ಥೆಯ ಅಧ್ಯಕ್ಷರು ಕೆಲವು ಅಧಿಕಾರಗಳನ್ನು ತಮ್ಮಲ್ಲಿ ಇರಿಸಿಕೊಂಡರೆ ಉಪಾಧ್ಯಕ್ಷರಿಗೆ ಕೆಲವು ಉಪಸಮಿತಿ ಅಧಿಕಾರಗಳನ್ನು ಬಿಟ್ಟು ಕೊಡುತ್ತಾರೆ. ಇನ್ನು ಕೆಲವು ಸದಸ್ಯರಿಗೆ ಬೇರೆ ಬೇರೆ ಉಪಸಮಿತಿಗಳ ಉಸ್ತುವಾರಿಗೆ ಬಿಡುತ್ತಾರೆ. ಇದೇ ರೀತಿಯ ವ್ಯವಸ್ಥೆ ತಾಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಗಳಲ್ಲೂ ಇದೆ.

ಮುಖ್ಯವಾಗಿ ಶಿಕ್ಷಣ, ಆರೋಗ್ಯ ಮತ್ತು ನೈರ್ಮಲ್ಯೀಕರಣ, ನ್ಯಾಯ ಪಂಚಾಯತಿಯಂತಹ ಉಪ ಸಮಿತಿಗಳಿವೆ. ಈ ಸಮಿತಿಗಳಲ್ಲಿ ಆರೋಗ್ಯ, ನೈರ್ಮಲ್ಯೀಕರಣ ಮತ್ತು ನ್ಯಾಯ ಪಂಚಾಯತಿ ಸಮಿತಿಗಳಿಗೆ ಸಂಸ್ಥೆಯ ಅಧ್ಯಕ್ಷರೇ ಅಧ್ಯಕ್ಷರಾಗಿದ್ದರೆ ಶಿಕ್ಷಣ ಸಮಿತಿಗೆ ಉಪಾಧ್ಯಕ್ಷರು ಅಧ್ಯಕ್ಷರಾಗಿರುತ್ತಾರೆ. ಇನ್ನುಳಿದ ಸದಸ್ಯರು ಆ ಸಮಿತಿಗಳ ಸದಸ್ಯರಾಗಿ ಪಾಲ್ಗೊಳ್ಳುತ್ತಾರೆ. ಆದರೆ ಎಷ್ಟೋ ಜನರಿಗೆ ತಾವು ಯಾವ ಸಮಿತಿಯ ಸದಸ್ಯರಾಗಿದ್ದೇವೆ, ಯಾವ ಸಮಿತಿಯ ಸದಸ್ಯರಾಗಿಲ್ಲ ಎಂಬುದರ ಕುರಿತು

ತಿಳುವಳಿಕೆಯೆ ಇರುವುದಿಲ್ಲ. ತಿಳುವಳಿಕೆ ಇದ್ದರೂ ತಮ್ಮ ಕರ್ತವ್ಯಗಳನ್ನು ಪೂರೈಸುವಲ್ಲಿ ಅವರು ಸೋತಿರುತ್ತಾರೆ.

ಒಟ್ಟಾರೆಯಾಗಿ ಕಾಡಿನೊಂದಿಗೆ ಕಳ್ಳುಬಳ್ಳಿಯ ಸಂಬಂಧವಿರಿಸಿಕೊಂಡ ಇರುಳಿಗರಂತಹ ಬುಡಕಟ್ಟು ಜನರು ನಾಡಿಗೆ ಬಂದು ನಾಡಿನ ಶಿಷ್ಟಾಚಾರಗಳನ್ನು ಕಲಿಯಲು ಪರದಾಡುವ ಸ್ಥಿತಿ ಇಂದಿಗೂ ಇದೆ. ಮೀಸಲಾತಿಯ ಕಾರಣಕ್ಕೆ ರಾಜಕೀಯ ವ್ಯವಸ್ಥೆಯೊಳಗೆ ಈ ಸಮುದಾಯದ ಜನ ರಾಜಕೀಯದಲ್ಲಿ ಪಾಲ್ಗೊಂಡಿದ್ದಾರಾದರೂ ಅವರಿಗೆ ಈ ವ್ಯವಸ್ಥೆಯನ್ನು ಸಂಪೂರ್ಣವಾಗಿ ಅರಿಯಲು ಸಾಧ್ಯವಾಗಿಲ್ಲ ಎಂಬುದು ಕ್ಷೇತ್ರಕಾರ್ಯದ ಮೂಲಕ ತಿಳಿದುಬಂದಿತು.

ಅಡಿ ಟಿಪ್ಪಣಿ

೧ ವಿಷ್ಣು ಶಿಂಥೆ, ಬುಡಕಟ್ಟು ಮತ್ತು ಶಿಕ್ಷಣ, ಜಾನಪದ ಮಾಸಪತ್ರಿಕೆ, ವಾರ್ತಾ ಮತ್ತು ಪ್ರಸಾರ ಇಲಾಖೆ, ಬೆಂಗಳೂರು ಪುಟ ೨೮, ೨೦೧೦

೨ ಪ್ರಶಾಂತ ಎಚ್.ಡಿ., ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೩೯, ೨೦೦೫

೩ ಆರ್ಥಿಕ ಹಾಗೂ ಸಾಂಖ್ಯಿಕ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು, ಪು.೯೮, ೨೦೧೨.

೪. ಶೈಕ್ಷಣಿಕ ಮಾರ್ಗದರ್ಶಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ಪು. ೧೮, ೨೦೧೫.

೫. ತಿಳುವಳಿಕೆದಾರರು, ಚಿಕ್ಕಮಾರಮ್ಮ (೬೫), ಚಿಕ್ಕ ಅಂಕನಹಳ್ಳಿ, ರಾಮನಗರ ತಾಲೂಕು.

೬ ಲೋಹಿಯಾ, ಜಾತಿವಿನಾಶ, ಪತ್ರಿಕೆ ಪ್ರಕಾಶನ, ಬೆಂಗಳೂರು, ಪು. ೨೪, ೧೯೮೯

೭ ಭುವನೇಶ್ವರ ಪ್ರಸಾದ್, ಭಾರತದ ಸಂವಿಧಾನ, ಪದ್ಮ ಪ್ರಕಾಶನ, ಬೆಂಗಳೂರು, ಪುಟ ೨೩, ೧೯೯೮

೮. ಅಭಿವೃದ್ಧಿ–ಚುನಾವಣೆ ಗೆಲುವು, ವಿಜಯ ಕರ್ನಾಟಕ ಪತ್ರಿಕೆ, ಪುಟ ೮ ದಿನಾಂಕ: ೧೧ ಜನವರಿ ೨೦೧೩

೯. ಬರಗೂರು ರಾಮಚಂದ್ರಪ್ಪ, (ಲೇಖನ) ವರ್ತಮಾನ, ಪ್ರಜಾವಾಣಿ, ಪುಟ ೯, ೧೪ ಆಗಸ್ಟ್ ೨೦೧೫

೧೦. ತಿಳುವಳಿಕೆದಾರರು, ಶಿವಮ್ಮ ಬರಗಮ್ಮ (೫೦), ಗ್ರಾಮಪಂಚಾಯಿತಿ ಸದಸ್ಯರು, ಕಬ್ಬಾಳ ಪಂಚಾಯಿತಿ, ಗುರುವಿನಪುರ, ಕನಕಪುರ ತಾಲೂಕು.

ಅಧ್ಯಾಯ ಏಳು

ಇರುಳಿಗರ ಕಲೆ ಮತ್ತು ಸಾಹಿತ್ಯ ಹಾಗೂ ಭಾಷೆ

ಪ್ರತಿಯೊಂದು ಬುಡಕಟ್ಟು ತಮ್ಮ ಹವ್ಯಾಸಕ್ಕೆ, ಗೃಹೋಪಯೋಗಿ ಬಳಕೆಗೆ, ಮನೋರಂಜನೆಗೆ ಹೀಗೆ ನಾನಾ ಕಾರಣಗಳಿಗಾಗಿ ಕಲೆಯನ್ನು ರೂಢಿಸಿಕೊಂಡಿವೆ. ತಮ್ಮ ದಿನದ ಕಷ್ಟದ ಬದುಕನ್ನು ಮರೆಯಲು ದಿವ್ಯ ಔಷಧಿಯಾಗಿ ಕಂಡುಕೊಂಡಿರುವ ಮಾರ್ಗವೇ ಮೌಖಿಕ ಸಾಹಿತ್ಯ. ದಿನಾಲೂ ಹೊಲ ಗದ್ದೆಗಳಲ್ಲಿ ಕೆಲಸ ಮಾಡುವಾಗ, ಮದುವೆ ಮುಂತಾದ ಮಂಗಳ ಕಾರ್ಯ ಸಂದರ್ಭದಲ್ಲಿ ಹಾಡುಗಳನ್ನು ಹೇಳದೆ ಆ ಕಾರ್ಯವೇ ಮುಗಿಯದು ಎಂದು ತಿಳಿದವರು ಅವರು. ಇನ್ನು ರಾತ್ರಿ ಹೊತ್ತು ಮಲಗಿದಾಗ ದಿನದ ಕಷ್ಟವನ್ನೆಲ್ಲಾ ಮರೆತು ಕಥೆ, ಗಾದೆ, ಒಗಟುಗಳನ್ನು ಪರಸ್ಪರ ಹೇಳಿಕೊಳ್ಳುತ್ತ ಸಂಭ್ರಮಿಸುತ್ತಾರೆ. ಈ ವಿಚಾರವಾಗಿ ಇರುಳಿಗರು ಹೊರತಲ್ಲ. ದನ ಕಾಯುತ್ತ ಅಲೆಯುವಾಗ ತಮ್ಮ ಬೇಸರ ಕಳೆದುಕೊಳ್ಳಲು ಹಾಡು ಹೇಳುವ ದನಗಾಹಿ ಇರುಳಿಗರನ್ನು ಕ್ಷೇತ್ರಕಾರ್ಯದಲ್ಲಿ ನೋಡಲಾಗಿದೆ. ಅದೇ ರೀತಿ ಬೇರೆ ಬೇರೆ ಸಂದರ್ಭಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಪದಕಟ್ಟಿ ಹಾಡುವ ಜನರನ್ನೂ ಈ ಸಮುದಾಯದಲ್ಲಿ ಕಾಣಬಹುದು.

೭.೧. ಕುಶಲಕಲೆ

ಬುಡಕಟ್ಟು ಸಮುದಾಯಗಳಲ್ಲಿ ಕಲೆಗೆ ಪ್ರಮುಖ ಸ್ಥಾನವಿದೆ. ಪರಂಪರೆಯಿಂದ ಅಸಂಖ್ಯಾತ ಕಲೆಗಳು ಬೆಳೆದುಬಂದಿವೆ. ಸಂಗೀತ, ನೃತ್ಯ, ಚಿತ್ರಕಲೆಗಳನ್ನು ಲಲಿತಕಲೆ ಎಂದು ವಿಭಾಗಿಸಲಾಗಿದೆ. ಕರಕುಶಲ ಕಲೆಗಳು ಶುದ್ಧ ಕಲೆಗಳ ನೆಲೆಯಿಂದ ಜನ್ಮತಳೆದವುಗಳು. ಅವು ದೈನಂದಿನ ಬದುಕಿನ ನೆಲೆಯಿಂದ ಹುಟ್ಟಿಕೊಂಡ ವಸ್ತುಗಳು. ಮಾನವ ತನ್ನ ಕಲ್ಪನೆ, ಪ್ರಯೋಗಶೀಲತೆ ಮತ್ತು ತಂತ್ರದಿಂದ

ತನ್ನ ಕುಟುಂಬದ ಉಪಯುಕ್ತತೆಗೆ ಬೇಕಾದ ಉಪಕರಣ ವಸ್ತುಗಳನ್ನು ತಯಾರಿಸಿಕೊಂಡ. ಹಾಗೆ ತಯಾರಿಸಿದ ಸಾಮಗ್ರಿಗಳು ತನ್ನ ಬದುಕಿನ ಒಂದು ಭಾಗವಾಗಿ ದಾಖಲಾದವು. ಇಂತಹ ಸಂದರ್ಭದಲ್ಲಿ ತಯಾರಿಕೆಯಲ್ಲಿ ಆತನ ಸೌಂದರ್ಯ ಪ್ರಜ್ಞೆಯಿಂದ ರೂಪ, ಆಕರಗಳು ಸಿದ್ಧವಾದವು. ಹೀಗೆ ರೂಪುಗೊಂಡ ವಸ್ತುಗಳಲ್ಲಿ ಮೊರ, ಪುಟ್ಟಿ, ಗೂಡೆ ಮುಂತಾದ ಪರಿಕರಗಳನ್ನು ಕಾಣುತ್ತೇವೆ. ಕಾಡಿನಲ್ಲಿ ಸಿಗುವ ಬಿದರು, ನಾನಾ ರೀತಿಯ ಬಳ್ಳಿಗಳನ್ನು ಉಪಯೋಗಿಸಿಯೇ ಪುಟ್ಟಿ, ಗೂಡೆಯಂತಹ ವಸ್ತುಗಳನ್ನು ಇರುಳಿಗರು ತಯಾರಿಸುತ್ತಾರೆ. ತಮ್ಮ ಅವಶ್ಯಕತೆಗೆ ಎಷ್ಟು ಬೇಕೋ ಅಷ್ಟನ್ನು ಇರಿಸಿಕೊಂಡು ಉಳಿದ ಹೆಚ್ಚಾದ ವಸ್ತುಗಳನ್ನು ಪರರಿಗೆ ಮಾರುತ್ತಾರೆ.

೭.೨. ಹಚ್ಚೆ

ಇರುಳಿಗರು ರೂಢಿಸಿಕೊಂಡ ಮತ್ತೊಂದು ಕಲೆ ಹಚ್ಚೆ ಹಾಕುವುದು. ಹಚ್ಚೆ ನೆನಪಿನ ಸಂಗಾತಿ. ಹಚ್ಚೆಯ ಕುರಿತು ಇವರಲ್ಲಿ ಒಂದು ವಾಡಿಕೆಯ ಮಾತಿದೆ. ಜೊತೆಗೆ ಹುಟ್ಟಿದ ಅಣ್ಣ ತಮ್ಮಂದಿರು, ಮಾಡಿಕೊಂಡ ಗಂಡ, ಹೆಂಡತಿ, ಕೊನೆಗೆ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ದೂರಾಗಬಹುದು. ಆದರೆ ಸಾಯುವವರೆಗೆ ಜೊತೆಗೆ ಬರುವುದು ಹಚ್ಚೆಯೊಂದೆ. ಅದಕ್ಕಾಗಿಯೇ ಹಚ್ಚೆ ಹಾಕಿಸಿಕೊಳ್ಳಬೇಕು ಎಂದು ಹೇಳುತ್ತಾರೆ

ಪ್ರಾಚೀನ ಕಾಲದಿಂದಲೂ ಇಂದಿನವರೆಗೂ ಪ್ರಪಂಚದದ್ಯಾಂತ ವ್ಯಾಪಕವಾಗಿ ಜನಪ್ರಿಯವಾಗಿರುವ ಹಚ್ಚೆ ಕಲೆಯ ಸಂಪ್ರದಾಯ ಬುಡಕಟ್ಟು ಸಮುದಾಯಗಳ ಒಂದು ಭಾಗವಾಗಿದೆ. ಹಚ್ಚೆ ಎಂಬ ಪದವು ಪಚ್ಚೆ ಎಂಬ ಪದದಿಂದ ಬಂದಿರಬೇಕು. ಪಚ್ಚೆ ಎಂದರೆ ಹಸಿರು ಎಂದರ್ಥ. "ಕನ್ನಡ, ತಮಿಳು, ತೆಲಗು, ಮಲೆಯಾಳ, ಭಾಷೆಗಳಲ್ಲಿಯೂ ಈ ಪದಕ್ಕೆ ಸಮಾನ ರೂಪವಾದ ಪದಗಳು ದೊರಕುತ್ತದೆ. ಪಚ್ಚೆ ಎಂಬುದು ಮೂಲ ದ್ರಾವಿಡ ಪದ ಎಂಬ ಅಭಿಪ್ರಾಯವಿದೆ. ಗಿಡಮೂಲಿಕೆಗಳಿಂದ ತಯಾರಿಸಿದ ಹಳದಿ ಮಿಶ್ರಿತ ಹಸಿರು ರಸದ ಕಲೆಯು ದೇಹದ ಮೇಲೆ ಶಾಶ್ವತವಾಗಿ ಉಳಿಯುವಂತೆ ಮಾಡುವ ಕಲೆಗೆ ಹಚ್ಚೆ ಎಂದು ಕರೆಯುತ್ತಾರೆ".[೧]

ಇರುಳಿಗ ಸಮುದಾಯದಲ್ಲಿ ಹೆಂಗಸರು ಹೆಚ್ಚು ಪ್ರೀತಿಯಿಂದ ತಮ್ಮ ಅಂಗಗಳ ಮೇಲೆ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಇದನ್ನು ತಮಗೆ ಪ್ರೀತಿಪಾತ್ರರಾದವರ ನೆನಪಿಗಾಗಿ, ಸಂಗಾತಿಗಳ ನೆನಪಿನ ದ್ಯೋತಕವಾಗಿ ತಮ್ಮ ಶರೀರದ ಮೇಲೆ ಹಾಕಿಸಿಕೊಳ್ಳುತ್ತಾರೆ. ಹಚ್ಚೆ ಶಾಶ್ವತವಾದದ್ದು, ಇದರ ಸಮಾನವಾದದ್ದು ಮತ್ತೊಂದು ಇಲ್ಲವೆಂಬ ನಂಬಿಕೆ ಇದೆ. ಸಾವಿನ ನಂತರವೂ ತಮ್ಮ ಜೊತೆ ಬರುವ ಏಕೈಕ ಸಂಗಾತಿ ಎಂಬ ನಂಬಿಕೆ ಇರುಳಿಗ ಮಹಿಳೆಯರಲ್ಲಿ ಗಾಢವಾಗಿ ಇದೆ.

ಹಚ್ಚೆ ಹಾಕುವವರು ಸಮುದಾಯದ ಹಿರಿಯ ಮಹಿಳೆಯರು. ಹಚ್ಚೆ ಹಾಕಲು ಇವರು ಬಳಸುವ ವಸ್ತುಗಳು ಪ್ರಕೃತಿಯಲ್ಲಿ ದೊರೆಯುವ ಕಾರೆಮುಳ್ಳು, ನಗ್ಗಲುಮುಳ್ಳು, ಎರಡು ಮೂರು ರೀತಿಯ ಸೂಜಿಗಳು ಇತ್ಯಾದಿ. ಹಚ್ಚೆ ಹಾಕುವ ಮೊದಲು ಕೈಯನ್ನು ಸ್ವಚ್ಛಗೊಳಿಸಿ ಅರಿಶಿಣದ ನೀರು ಮತ್ತು ಕೆಮ್ಮಣ್ಣು ಬಣ್ಣವನ್ನು ಒಂದು ಕಡ್ಡಿಯಿಂದ ಅದ್ದಿ ಗೆರೆಯಾಕಾರದಲ್ಲಿ ದೇಹದ ಮೇಲೆ ಚಿತ್ರ ಬಿಡಿಸುತ್ತಾರೆ.

ನಂತರ ವಿವಿಧ ರೀತಿಯ ಹಾಡುಗಳನ್ನು ಹಾಡುತ್ತಾ ಮುಳ್ಳಿನಿಂದ ಅಥವಾ ಸೂಜಿಗಳ ಸಮೂಹದಿಂದ ತಾವು ಮೊದಲೇ ಗುರುತಿಸಿಕೊಂಡ ಆಕಾರದ ಮೇಲೆ ಚುಚ್ಚುತ್ತಾ ಹೋಗುತ್ತಾರೆ

ಹಚ್ಚೆಯ ಬಣ್ಣ ತಯಾರಿಸಲು ಬಳಸುವ ವಿಧಾನ ವಿಶೇಷವಾಗಿದ್ದು, ನೈಸರ್ಗಿಕವಾಗಿ ದೊರೆಯುವ ವಿವಿಧ ಬಗೆಯ ಸೊಪ್ಪುಗಳನ್ನು ಬಳಸಿಕೊಂಡು ಹಚ್ಚೆಯ ಕಾಡಿಗೆಯನ್ನು ತಯಾರಿಸುತ್ತಾರೆ. ಕಾಡಿಗೆ ತಯಾರಿಸುವಾಗ ಎರಡು ಅಂಶಗಳಿಗೆ ಮಹತ್ವ ನೀಡುತ್ತಾರೆ. ಮೊದಲನೆಯದು ಕಾಡಿಗೆ ಬಣ್ಣ ಶಾಶ್ವತವಾಗಿ ದೇಹದಲ್ಲಿ ಉಳಿಯುವುದು, ಹಾಗೂ ಅದು ದೇಹಕ್ಕೆ ರೋಗ ನಿರೋಧಕ ಶಕ್ತಿಯನ್ನು ನೀಡುವಂತೆ ಮಾಡುವುದು. ಹಚ್ಚೆಯ ಕಪ್ಪನ್ನು ತಯಾರಿಸಲು ವಿವಿಧ ಪ್ರದೇಶದಲ್ಲಿ ಬೇರೆ ಬೇರೆಯಾದ ಕೌಶಲ್ಯ, ಸಾಮಗ್ರಿಯನ್ನು ಬಳಸಿದರೂ ಸಾಮಾನ್ಯವಾಗಿ ಅವರೆಸೊಪ್ಪು, ಹೊನ್ನಗೂನೆಸೊಪ್ಪು, ಹಚ್ಚೆ ಸೊಪ್ಪು, ಉಗುನಿಹಂಬಿನ ಹಾಲು, ತಾಯಿಯ ಹಾಲು ಸೇರಿಸಿ ಹರಳೆಣ್ಣೆ ದೀಪದಿಂದ ಸಂಸ್ಕರಿಸಿ ಅದರಿಂದ ಬಂದ ಕಪ್ಪನ್ನು ಎಳ್ಳೆಣ್ಣೆಗೆ ಮಿಶ್ರಣ ಮಾಡಿ ಬಣ್ಣ ತಯಾರಿಸುತ್ತಾರೆ.

ಹಚ್ಚೆ ಹಾಕುವ ದೇಹದ ಭಾಗಗಳು

ದೇಹದ ಪ್ರತಿ ಭಾಗಕ್ಕೂ ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ. ಮುಂಗೈ, ಅಂಗೈ, ತೋಳು, ಹುಬ್ಬು, ಕೆನ್ನೆ, ಗಲ್ಲ, ಕಣ್ಣು ರಪ್ಪೆಯ ಅಂಚು, ಬೆನ್ನು, ತಲೆ, ಎದೆ, ಮೊಣಕಾಲು, ಹೊಟ್ಟೆ ಹೀಗೆ ದೇಹದ ಬೇರೆ-ಬೇರೆ ಭಾಗಗಳಿಗೆ ವಿವಿಧ ನಮೂನೆಯ ಹಚ್ಚೆಯ ಚಿತ್ರವನ್ನು ಹಾಕಿಸಿಕೊಳ್ಳುತ್ತಾರೆ. ಇಂತಿಂಥ ಅಂಗಕ್ಕೆ ಈ ರೀತಿಯಾದ ಚಿತ್ರಗಳು ಎಂದು ನಿಗಧಿ ಮಾಡಿಕೊಂಡಿರುತ್ತಾರೆ. ದೇಹದ ಯಾವ ಭಾಗಕ್ಕೆ ಯಾವ ಆಕಾರದ ಹಚ್ಚೆ ಚಿತ್ರ ಎಂಬುದನ್ನು ಸಂದರ್ಶನದ ವೇಳೆಯಲ್ಲಿ ತಿಳುವಳಿಕೆದಾರರು ನೀಡಿದ ಮಾಹಿತಿಯನ್ನು ಈ ಕೆಳಗಿನಂತೆ ಕೊಡಲಾಗಿದೆ.

ಕೋಷ್ಟಕ ೭.೧. ಶರೀರದ ಕೆಲವು ಭಾಗಗಳ ಮೇಲೆ ಹಾಕಿಸಿಕೊಳ್ಳುವ ಹಚ್ಚೆಗಳು

ಕ್ರಸಂ	ಶರೀರದ ಭಾಗಗಳು	ವಿವಿಧ ನಮೂನೆಯ ಚಿತ್ರಗಳು
೧.	ಹಣೆಯ ಹಚ್ಚೆ	ಚಂದ್ರ, ಗೆರೆ, ತಿಲಕ
೨.	ಹುಬ್ಬಿನ ಹಚ್ಚೆ	ದೃಷ್ಟಿಬೊಟ್ಟು
೩.	ಗಲ್ಲದ ಹಚ್ಚೆ	ಗಲ್ಲದ ಹಚ್ಚೆ, ಸಣ್ಣ ದೃಷ್ಟಿಬೊಟ್ಟು
೪.	ತೋಳಿನ ಹಚ್ಚೆ	ಮುತ್ತಿನ ಬಳ್ಳಿ, ಸೀತೆಯ ಸೆರಗು, ಒಡವೆ
೫.	ಬಲ ಮೊಣಕೈ ಹಚ್ಚೆ	ನಾಗರಹಾವು, ಬಾಳೆಗಿಡ, ತೆಂಗಿನಗಿಡ
೬.	ಎಡ ಮೊಣಕೈ ಹಚ್ಚೆ	ತಾವರೆಹೂ, ಜೇಡ, ಹೆಸರುಗಳು
೭.	ಮೂಗಿನ ಹಚ್ಚೆ	ಚುಕ್ಕಿಸರ

೮.	ಮುಂಗೈ ಹಚ್ಚೆ	ಸ್ವಸ್ತಿಕ, ಹುಲಿಯ ಹೆಜ್ಜೆಯ ಗುರುತು, ಗಿಂಡಿ ಮಾವಿನ ಎಲೆ, ರಂಗವಲ್ಲಿ, ರಾಗಿರಾಶಿ, ಗಾಳಿಪಟ, ತ್ರಿಕೋನ, ಹೆಜ್ಜೇನು
೯.	ಕಣ್ಣು ಹಚ್ಚೆ	ಚುಕ್ಕಿ ಸೋಲೆ,
೧೦.	ಎಡಮುಂಗೈ ಹಚ್ಚೆ	ನಂದಿಕೋಲು, ತಾವರೆ, ಅಷ್ಟಕೊಳ
೧೧.	ಬಲಮುಂಗೈ ಹಚ್ಚೆ	ಗೆಳತಿ–ಗೆಳೆಯನ ಹೆಸರು, ಅಪ್ಪ, ಅಮ್ಮ, ತಂಗಿ, ತಾತ, ಅಜ್ಜಿ, ಹೆಂಡತಿ, ಗಂಡ, ಬಸವ, ಶಿವಲಿಂಗ, ಬಿಲ್ವಪತ್ರೆಯ ಚಿತ್ರಗಳು
೧೨.	ಹೆಬ್ಬೆರಳು ಹಚ್ಚೆ	ಚೇಳು, ಹುಲಿಹೆಜ್ಜೆ, ಗರುಡ
೧೩.	ಬೆನ್ನಮೂಳೆ	ಸಣ್ಣ ಚುಕ್ಕಿ, ನಾಗರಹಾವು, ರಂಗವಲ್ಲಿ ನಕ್ಷತ್ರ

ಕೃಪೆ: ಸಮೀಕ್ಷೆಗೊಳಪಟ್ಟ ತಿಳುವಳಿಕೆದಾರರ ಮಾಹಿತಿ

ಇರುಳಿಗ ಸಮುದಾಯದ ಎಲ್ಲ ಹೆಂಗಸರು ಸಾಮಾನ್ಯವಾಗಿ ಹಚ್ಚೆಯನ್ನು ಹಾಕಿಸಿಕೊಳ್ಳುತ್ತಾರೆ. ಹಚ್ಚೆಯನ್ನು ತಾವೇ ಸ್ವಯಂ ಹಾಕಿಕೊಳ್ಳುವುದಿಲ್ಲ. ಅವರಿಗೆ ಪ್ರೀತಿ–ಪಾತ್ರರಾದವರು ಅಂದರೆ ತಾಯಿ, ಚಿಕ್ಕಮ್ಮ, ಸಂಬಂಧಿಗಳು ಮುಂತಾದವರು ತಮ್ಮ ನೆನಪಿಗೆ ಹಚ್ಚೆ ಹಾಕಿಸುತ್ತಾರೆ

ಹಚ್ಚೆಯ ಬಗ್ಗೆ ಇರುಳಿಗರಲ್ಲಿರುವ ನಂಬಿಕೆಗಳು

ಹಚ್ಚೆಯ ಬಗ್ಗೆ ಬಲವಾದ ಸಾಂಪ್ರದಾಯಿಕ ನಂಬಿಕೆಯೇ ಹಚ್ಚೆ ಹಾಕಿಸಿಕೊಳ್ಳವುದಕ್ಕೆ ಕಾರಣವಾಗಿದೆ. ಜಾನಪದ ಶೈಲಿಯಲ್ಲಿ ಹಚ್ಚೆಯ ಬಗ್ಗೆ ಸಮುದಾಯದ ಮಹಿಳೆಯರು ಹೀಗೆ ಹೇಳುತ್ತಾರೆ. "ಸತ್ತಾಗ ನಮ್‌ಕೂಟ ಮತ್ತೇನ್ ಬರುತ್ತದೆ ಅವ್ವ, ಅವ್ವನು ಹಾಕಿಸಿದ ಹಚ್ಚೆಯೇ ಅಲ್ಲದೆ ಮತ್ತೇನು ಒಡವೆ ಬರುತ್ತದೆಯೇ ಹಚ್ಚೆ ಹಾಕಿಸಿದವರ ಸಂತತಿ ಹೆಚ್ಚು ಹೆಚ್ಚಲಿ ಜಗದೊಳಗೆ".[೨] ಹೀಗೆ ಹಚ್ಚೆಯ ಬಗ್ಗೆ ಅಪಾರವಾದ ಪವಿತ್ರ ಭಾವನೆಯನ್ನು ಇರುಳಿಗರ ಮಹಿಳೆಯರು ಹೊಂದಿದ್ದು ಇದಕ್ಕೆ ಕೆಲವು ನಂಬಿಕೆಗಳು ಇವೆ. ಹಚ್ಚೆ ಇಲ್ಲದವರ ಕೈಯಲ್ಲಿ ನೀರನ್ನು ಕುಡಿಯಬಾರದು ಹಚ್ಚೆ ಹಾಕಿಸಿಕೊಂಡರೆ ಮುತ್ತೈದೆ ಸಾವು ಬರುತ್ತದೆ ಹೆಣ್ಣಿನ ಕೈ ಮೇಲೆ ಗಿಂಡಿಯ ಹಚ್ಚೆ ಇಲ್ಲದ ಹೆಂಗಸು ಗಂಡನಿಗೆ ನೀರು ಕೊಟ್ಟರೆ ಆತನಿಗೆ ಶ್ರೇಯಸ್ಸು ಆಗುವುದಿಲ್ಲ, ಮದುವೆಯಲ್ಲಿ ಕಳಸ ಕನ್ನಡಿ ಹಿಡಿಯಲು ಹಚ್ಚೆ ಹಾಕಿಸಿಕೊಂಡ ಹೆಂಗಸೇ ಬೇಕು. ಹಚ್ಚೆ ಇಲ್ಲದ ಹೆಂಗಸರನ್ನು ಹಿಂದೆ ರಾಶಿ ಕಣಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ. ಹೀಗೆ ಅನೇಕ ನಂಬಿಕೆ ಇರುಳಿಗರಲ್ಲಿದೆ. ಹಚ್ಚೆಯ ಬಗ್ಗೆ ಈ ಸಮುದಾಯದವರಲ್ಲಿ ಇರುವ ಅಭಿಪ್ರಾಯಗಳು

* ಹಚ್ಚೆ ಇದ್ದವರ ಬಳಿ ಭೂತ ಪ್ರೇತಗಳು ಸುಳಿಯುವುದಿಲ್ಲ
* ಮಾಟ ಮಂತ್ರ ಮದ್ದಿನಿಂದ ತಪ್ಪಿಸಿಕೊಳ್ಳಬಹುದು.
* ಧಾನ್ಯಗಳಿಗೆ ಹುಳ ಹತ್ತುವುದಿಲ್ಲ, ಕಣಜದಲ್ಲಿ ಧಾನ್ಯ ಸಮೃದ್ಧಿಯಾಗಿರುತ್ತದೆ.

* ಚೇಳು, ಹಾವು ಕಚ್ಚಿದರೆ ಬೇಗ ವಿಷ ಏರುವುದಿಲ್ಲ.

* ದೃಷ್ಟಿದೋಷ ಉಂಟಾಗುವುದಿಲ್ಲ, ಸಾಮಾನ್ಯವಾಗಿ ಕಾಯಿಲೆಗಳು ಕಡಿಮೆ

೭.೩. ಭಿತ್ತಿ ಚಿತ್ರ

ಪ್ರಕೃತಿ ಪ್ರಿಯರಾದ ಇರುಳಿಗ ಮಹಿಳೆಯರು ತಮ್ಮದೇ ಆದಂತಹ ಚಿತ್ರಕಲೆಯನ್ನು ರೂಢಿಸಿಕೊಂಡು ಬಂದಿದ್ದಾರೆ. ಇವರು ವಾಸಿಸುವ ಮನೆಗಳ ಗೋಡೆಯ ಮೇಲೆ ಹಲವು ಬಗೆಯ ಚಿತ್ರಗಳನ್ನು ಇಂದಿಗೂ ನೋಡಬಹುದು. ಈ ಚಿತ್ರಗಳು ಹೆಚ್ಚಾಗಿ ತಮ್ಮ ಸುತ್ತಲಿನ ನಿಸರ್ಗದಲ್ಲಿ ಇರುವ ಗಿಡ, ಮರ, ಬಳ್ಳಿ, ಗಿಳಿ, ನವಿಲು ಮುಂತಾದ ಚಿತ್ರಗಳಲ್ಲದೇ ಹಲವು ವೈವಿಧ್ಯಮಯವಾದ ರೇಖಾಚಿತ್ರಗಳು ಇವೆ. ಇಂತಹ ಚಿತ್ರಗಳು ಸಾಂಪ್ರದಾಯಿಕ ಆಚರಣೆ ಮದುವೆಯಂತಹ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಬರೆಯುತ್ತಾರೆ. ವಧುವರರನ್ನು ಕುಳ್ಳಿರಿಸುವ ಹಸೆಮಣೆಯ ಹಿಂಭಾಗದ ಹಸೆ ಚಿತ್ರವನ್ನು ಬಿಡಿಸುತ್ತಾರೆ. ಮದುವೆಯ ಸಂದರ್ಭದಲ್ಲಿ ರಚಿಸುವ ಗೋಡೆಯ ಚಿತ್ರಗಳಿಗೆ ವಧುವು ಬಣ್ಣವನ್ನು ತಯಾರಿಸಿ ಕೊಡುತ್ತಾಳೆ. ಅಕ್ಕಿ ಹಿಟ್ಟಿನೊಂದಿಗೆ ಇದ್ದಿಲು ಪುಡಿ, ಕೆಮ್ಮಣ್ಣನ್ನು ಬೆರೆಸಿ ಬಣ್ಣವನ್ನು ತಯಾರಿಸುತ್ತಾರೆ.

೭.೪. ಮಣ್ಣಿನ ಮಡಕೆ ಮೇಲಿನ ಚಿತ್ರ

ಮಣ್ಣಿನ ಮಡಿಕೆಯ ಮೇಲೆ ವಿವಿಧ ಬಗೆಯ ಅಲಂಕಾರವನ್ನು ಇರುಳಿಗರು ಮಾಡುತ್ತಾರೆ. ಮಡಿಕೆಗೆ ಬಿಳಿಯ ಬಣ್ಣ ಬಳಿದು ಅದರ ಮೇಲೆ ಕೆಂಪು ಮತ್ತು ಹಳದಿಬಣ್ಣ ಹಚ್ಚುವರು. ಬಣ್ಣದಿಂದ ಬಳ್ಳಿ, ಮರ, ಗಿಡ ಚಿತ್ರಗಳನ್ನು ಬಿಡಿಸುವರು. ವಿಶೇಷವಾದ ಹಬ್ಬದ ದಿನದಂದು ಮತ್ತು ದೊಡ್ಡ ದೇವರ ಹಬ್ಬದ ಸಂದರ್ಭದಲ್ಲಿ ಮಾತ್ರ ಇಂತಹ ಕುಂಭಗಳನ್ನು ಬಳಸುತ್ತಾರೆ. ಇತ್ತೀಚೆಗೆ ಇಂತಹ ಕಲೆ ಮರೆಯಾಗುತ್ತಿದ್ದು ಹೊಸ ತಲೆಮಾರಿನ ಇರುಳಿಗ ಯುವ ಸಮೂಹದಲ್ಲಿ ಈ ಕಲೆಯ ಬಗ್ಗೆ ಆಸಕ್ತಿ ಕಡಿಮೆಯಾಗುತ್ತಿದೆ.

೭.೫. ರಂಗೋಲಿ ಕಲೆ

ರಂಗೋಲಿ ಕಲೆಯು ಜಾತ್ರೆ, ಹಬ್ಬ, ವಿಶೇಷ ಆರಾಧನೆ, ವಿವಾಹ ಮುಂತಾದ ವಿಶೇಷ ದಿನಗಳಲ್ಲಿ ಶುಭ ಸಂಕೇತವಾಗಿ ಬಳಸುತ್ತಾರೆ. ಇಂದು ಸಾಮಾನ್ಯವಾಗಿ ಮಹಿಳೆಯರು ತಮ್ಮ ಮನೆಯ ಅಂಗಳದಲ್ಲಿ ಪ್ರತಿ ದಿವಸ ಮುಂಜಾನೆ ಸಮಯದಲ್ಲಿ ರಂಗೋಲಿ ಬಿಡಿಸುತ್ತಾರೆ. ರಂಗೋಲಿ ಕಲೆಯು ಜೀವಂತ ಕಲೆಯಾಗಿ ಮುಂದುವರೆಯುತ್ತಿದೆ. ಇರುಳಿಗ ಸಮುದಾಯದ ಮಹಿಳೆಯರ ಪ್ರಕಾರ ರಂಗವಲ್ಲಿಯನ್ನು ಮನೆಯ ಮುಂದೆ ಹಾಕುವುದರಿಂದ ಇತರೆ ದುಷ್ಟಶಕ್ತಿಗಳು ಮನೆಯ ಒಳಗೆ ಬರಲು ಸಾಧ್ಯವಿಲ್ಲ.

೭.೬. ಸಾಹಿತ್ಯ

ಜಗತ್ತಿನ ಬಹಳಷ್ಟು ಸಮುದಾಯಗಳ ಸಂಸ್ಕೃತಿಯು ಇಂದಿಗೂ ಮೌಖಿಕ ಸಾಹಿತ್ಯದಲ್ಲಿ ಅಂತರ್ಗತವಾಗಿದೆ. ಗುಡ್ಡಗಾಡು ಬುಡಕಟ್ಟು ಸಮುದಾಯಗಳ ಮಟ್ಟಿಗಂತೂ ಇದು ಸತ್ಯ.

ಬರವಣಿಗೆ ಜ್ಞಾನದಿಂದ ಹೊರಗಿರುವುದೇ ಮೌಖಿಕ ಸಾಹಿತ್ಯ. ಬರಹ ಸಂಸ್ಕೃತಿಯಿಂದ ಭಿನ್ನವಾದ ಮೌಖಿಕ ಪರಂಪರೆಯೇ ಮೌಖಿಕ ಸಾಹಿತ್ಯ; ತಮ್ಮ ಮನದಾಳದ ನೋವು ನಲಿವು ಹಿಗ್ಗು-ಕುಗ್ಗುಗಳನ್ನು ವ್ಯಕ್ತಪಡಿಸುವ ಏಕೈಕ ಅಭಿವ್ಯಕ್ತಿ ಮಾರ್ಗ. "ಸಾಮಾಜಿಕ ಜೀವನದಲ್ಲಿ ಮಾನವ ತನ್ನ ಅಗತ್ಯಕ್ಕೆ ಅನುಗುಣವಾಗಿ ಭಾಷೆಯನ್ನು ಯಾವಾಗ ಬಳಕೆಗೆ ತಂದುಕೊಂಡನೋ ಆಂದಿನಿಂದಲೇ ತನ್ನ ಭಾವನೆಗಳನ್ನು ಕಾವ್ಯಮಯವಾಗಿ ಅಭಿವ್ಯಕ್ತಪಡಿಸುವುದನ್ನು ಕಲಿತಿದ್ದಾನೆ".[೩]

ಬರವಣಿಗೆ ಇಲ್ಲದ ಸಮುದಾಯಗಳಿಗೆ ತಮ್ಮ ಪರಂಪರೆ ಮೌಖಿಕತೆಯಲ್ಲಿಯೇ ತಲೆಮಾರಿನಿಂದ ತಲೆಮಾರಿಗೆ ಸಾಗಿಬರುತ್ತದೆ. ಹಾಗೇ ಸಾಗಿಬರುವಾಗ ಸೂಕ್ಷ್ಮ ಸ್ವರೂಪದಲ್ಲಿ ಬದಲಾವಣೆಯನ್ನು ಹೊಂದುತ್ತಿರುತ್ತದೆ. ನಮ್ಮ ದೇಶದ ಸಂದರ್ಭದಲ್ಲಿ ಇಲ್ಲಿನ ಸಮುದಾಯಗಳ ಸಾಂಸ್ಕೃತಿಕ ಬದುಕನ್ನು ವಿವರಿಸುವಲ್ಲಿ ಮೌಖಿಕ ಪರಂಪರೆ ಬಹಳ ಪ್ರಾಮುಖ್ಯತೆ ಪಡೆದಿದೆ. ಹೆಚ್ಚು ಅನಕ್ಷರಸ್ಥರೇ ಇರುವ ಸಮುದಾಯಗಳಿಗೆ ಅವರ ನೋವು-ನಲಿವು, ಅಲೋಚನಾ ಕ್ರಮ, ಜ್ಞಾನಪರಂಪರೆ, ರೂಢಿ ಸಂಪ್ರದಾಯ ಎಲ್ಲವೂ ಮೌಖಿಕ ಪಂರಪರೆಯಲ್ಲಿ ಅಭಿವ್ಯಕ್ತಗೊಂಡಿವೆ. ನಮ್ಮ ಲಿಖಿತ ಸಾಹಿತ್ಯ ಪರಂಪರೆ ಬಹುಮಟ್ಟಿಗೆ ರಾಜರ ಆಶ್ರಯಗಳಲ್ಲಿ ಅಥವಾ ಧರ್ಮದ ಆಸರೆಯಲ್ಲಿಯೇ ಬೆಳೆದು ಬಂದಿದೆ. ಹೀಗಾಗಿ ಆಧುನಿಕ ಸಾಹಿತ್ಯದ ಉಗಮದವರೆಗೂ ನಮ್ಮ ಜನಸಾಮಾನ್ಯರ ಬದುಕು ಸಾಹಿತ್ಯದಲ್ಲಿ ಎಲ್ಲೋ ಅಪರೂಪಕ್ಕೆ ಮಾತ್ರ ಇಣುಕುವುದು ಕಂಡುಬರುತ್ತದೆ. ಹೀಗಿರುವಾಗ ಓದು ಬರಹ ಬಾರದ ಬಹುಸಂಖ್ಯಾತರ ನಿರೂಪಣ ಮಾರ್ಗ ಮೌಖಿಕ ಪರಂಪರೆ ಆಗಿರಲು ಮಾತ್ರ ಸಾಧ್ಯವಿದೆ. ಆದರೆ ಇಂತಹ ಮೌಖಿಕ ಸಾಹಿತ್ಯ ಪರಂಪರೆಗೆ ಬರಹದ ಶಾಶ್ವತ ಗುಣ ಇರಲು ಸಾಧ್ಯವಿಲ್ಲ. ಇದು ಕಾಲಕಾಲಕ್ಕೆ ಬದಲಾಗುತ್ತಲೇ ಇರುವಂಥದ್ದು. ಜನಪದ ಗೀತೆ, ಕಥೆ, ಲಾವಣಿ, ಗಾದೆ, ಒಗಟು, ಶುಭ ಸಮಾರಂಭಗಳಲ್ಲಿ ಹಾಡಿನ ರೂಪಗಳಲ್ಲಿ ಹೊರಹೊಮ್ಮುತ್ತವೆ. "ಈ ಮೌಖಿಕ ಸಂಕಥನವು ಅತೀವವಾಗಿ ಕಡೆಗಣಿಸಲಾದ ಕ್ಷೇತ್ರ ವಾಗಿದ್ದರೂ ಒಂದು ನಿರ್ದಿಷ್ಟವಾದ ಸಮುದಾಯದ ಸಾಮಾಜಿಕ ಅಸ್ತಿತ್ವವನ್ನು ತಿಳಿದುಕೊಳ್ಳುವುದಕ್ಕೆ ಮಹತ್ವದ ಒಳನೋಟವನ್ನು ಒದಗಿಸುತ್ತದೆ".[೪]

ಹೀಗೆ ಪ್ರತಿಯೊಂದು ಸಮುದಾಯವು ಹೊಂದಿರುವ ಶ್ರೀಮಂತ ಮೌಖಿಕ ಸಾಹಿತ್ಯದಂತೆ ಇರುಳಿಗ ಸಮುದಾಯವು ಮೌಖಿಕ ಸಾಹಿತ್ಯದ ಕಣಜದ ಭಂಡಾರವನ್ನು ತನ್ನಲ್ಲಿ ಇರಿಸಿಕೊಂಡಿದೆ. ಇರುಳಿಗ ಸಮುದಾಯದ ಸಾಹಿತ್ಯ ಪ್ರಕಾರಗಳಿಗೆ ಸಾಕ್ಷಿಯಾಗಿ ಸೃಷ್ಟಿ ಪುರಾಣ, ಐತಿಹ್ಯ, ಜನಪದ ಕಥೆ, ಜನಪದ ಗೀತೆ, ಜನಪದ ಮಹಾಕಾವ್ಯ, ಒಗಟು, ಗಾದೆ ಮುಂತಾದ ಮೌಖಿಕ ಪರಂಪರೆಯ ಸಾಹಿತ್ಯ ಪ್ರಕಾಗಳು ಇರುಳಿಗರಲ್ಲಿ ಕಂಡುಬರುತ್ತವೆ.

ಸಮುದಾಯವು ಅನುಭವಿಸುವ ಬಡತನ, ನೋವು, ನಲಿವುಗಳ ಸಂದರ್ಭದಲ್ಲಿ ವ್ಯಕ್ತಪಡಿಸುವ ಅಂತರಾಳದ ಭಾವನೆಯೇ ಕಾವ್ಯದ ರೂಪಪಡೆದು ಹೊರಬಂದಿರುತ್ತದೆ. ಇವು ಈ ಸಮಾಜದ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಕುರುಹುಗಳಾಗಿ ಕಾಣಿಸುತ್ತವೆ. ಆದರೂ ಇವರ ಈ ಎಲ್ಲಾ ಸಾಹಿತ್ಯಗಳ ಮೇಲೆ ಸೃಷ್ಟಿಪುರಾಣ ಕಥೆಯೊಂದನ್ನು ಹೊರತುಪಡಿಸಿ ಮಿಕ್ಕೆಲ್ಲದರ ಮೇಲೆ ಇತರೆ

ಸ್ಥಳೀಯ ಸಮುದಾಯದ ಪ್ರಭಾವವು ನಿಚ್ಚಳವಾಗಿ ಆಗಿರುವುದು ಕಂಡುಬರುತ್ತದೆ. ಇತರ ಸಾಹಿತ್ಯವನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ೧. ಪುರುಷ ಸಾಹಿತ್ಯ ಮತ್ತು ೨. ಮಹಿಳಾ ಸಾಹಿತ್ಯ

೧. ಸೃಷ್ಟಿ ಪುರಾಣ

ಒಂದು ಸಮುದಾಯದ ಹುಟ್ಟಿನ ವಿಷಯದೊಂದಿಗೆ ಧಾರ್ಮಿಕ ವಿಷಯಗಳು ಹುಟ್ಟಿಕೊಳ್ಳುವ ಪುರಾಣಗಳು ಆ ಸಮುದಾಯವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಬುಡಕಟ್ಟು ಸಂಸ್ಕೃತಿಯನ್ನು ತಿಳಿಯುವ ಸಲುವಾಗಿ ಅವರ ಪುರಾಣಗಳನ್ನು ಅವಲೋಕಿಸಬೇಕಾಗುತ್ತದೆ. ಇಂತಹ ಸೃಷ್ಟಿಯ ಕುರಿತಾದ ಕಥೆಗಳು ಇರುಳಿಗರಲ್ಲಿಯೂ ಇವೆ. ಅವುಗಳಲ್ಲಿ ಕೆಲವನ್ನು ಉದಾಹರಣೆಗೆ ನೋಡಬಹುದು

"ಕಾಡಿಗೆ ಬೇಟೆಗೆ ಹೋದ ಬೇಟೆಗಾರ ಹೊಂಚುಹಾಕಿ ಕುಳಿತಿದ್ದ. ತಾಯಿ ಹಂದಿಯೊಂದು ತನ್ನ ಮರಿಗಳ ಜೊತೆ ಆಹಾರ ಹುಡುಕುತ್ತಾ ಮಾತನಾಡುವ ಶಬ್ದವನ್ನು ಕೇಳಿದ. ಬೇಟೆಗಾರ ಬೆರಗಾಗಿ ಆ ಮಾತನ್ನು ಕೇಳಿಸಿಕೊಂಡ. ಸಿಕ್ಕ ಆಹಾರವನ್ನೇ ಹೊಟ್ಟೆತುಂಬ ತಿನ್ನಿ; ನಾಳೆ ಸೂರ್ಯ ಮುಳುಗಿದ ಮೇಲೆ ಲೋಕವೆಲ್ಲ ಪ್ರಳಯವಾಗುತ್ತದೆ ಎಂಬ ಹಂದಿಯ ಮಾತನ್ನು ಆಶ್ಚರ್ಯದಿಂದ ಆಲಿಸಿದ ಬೇಟೆಗಾರ ಬೇಟೆಯಾಡುವುದನ್ನೇ ನಿಲ್ಲಿಸಿ ಅವುಗಳ ಮಾತನ್ನು ಕೇಳಿಸಿಕೊಳ್ಳಲು ಪ್ರಾರಂಭಿಸಿದ. ಹಂದಿ ಮರಿಗಳು ನಾವು ಬದುಕುವುದಿಲ್ಲವೇ ಅವ್ವ ಎಂದು ಕೇಳುತ್ತವೆ. ಉಳಿಯಬಹುದು ಆದರೆ ಕಷ್ಟ; ಊರ ಯಜಮಾನನ ತೋಟದಲ್ಲಿ ಇರುವ ಗೂಡೆಯಾಕಾರದ ಸೊರೆಕಾಯಿ ತಂದು ಖಾಲಿಮಾಡಿ ನಾವೆಲ್ಲರೂ ಅದರೊಳಗೆ ಹೋಗಿ ಅಡಗಿಕೊಂಡರೆ ಬದುಕಬಹುದು. ಸಮುದ್ರ ಉಕ್ಕಿದರೂ ಬದುಕುತ್ತೇವೆ ಎಂದು ಮರಿಗಳಿಗೆ ತಾಯಿ ಹಂದಿ ಹೇಳುತ್ತಿತ್ತು.

ಇದನ್ನು ಕೇಳಿಸಿಕೊಂಡ ಬೇಟೆಗಾರ ಬೇಟೆ ಬಿಟ್ಟು ಪ್ರಾಣ ಉಳಿದರೆ ಸಾಕು ಎಂದು ತಿಳಿದು ತಾಯಿ ಇಲ್ಲದ ತನ್ನ ಮಗಳನ್ನು ಕರೆದುಕೊಂಡು ಹಂದಿಯು ಹೇಳಿದ ಮಾತಿನಂತೆ ಸೋರೆ ಬುರುಡೆಯಲ್ಲಿ ಅಡಗಿಕೊಳ್ಳುತ್ತಾನೆ. ಹಂದಿಯ ಮಾತಿನಂತೆ ಸಮುದ್ರ ಉಕ್ಕಿ ಇಡೀ ಲೋಕವೆಲ್ಲ ಅಲ್ಲೋಲ ಕಲ್ಲೋಲವಾಯಿತು. ಇದನ್ನು ನೋಡುವುದಕ್ಕೆ ಅಂತ ಪಾರ್ವತಿ ಪರಮೇಶ್ವರ ಬಂದರು. ನಾಶವಾಗಿರುವ ಇಡೀ ಪ್ರಪಂಚದಲ್ಲಿ ಸೋರೆ ಬುರುಡೆ ತೇಲುತ್ತಿರುವುದನ್ನು ನೋಡಿ ಆಶ್ಚರ್ಯಗೊಂಡ ಶಿವ ಪಾರ್ವತಿಯರು ಸೋರೆ ಬುರುಡೆ ತೆಗೆದು ನೋಡುತ್ತಾರೆ. ಅದರೊಳಗೆ ನರಮನುಷ್ಯರು ಇದ್ದಾರೆ. ಅವರನ್ನು ಕಂಡ ಶಿವ ಪಾರ್ವತಿಯರು ನಿಮ್ಮಿಂದಲೇ ಇನ್ನು ಮುಂದೆ ನರಲೋಕದಲ್ಲಿ ನರಮಾನವ ಸೃಷ್ಟಿಯಾಗಲಿ ಎಂದು ವರ ನೀಡಿ ಹೋಗುತ್ತಾರೆ. ತಂದೆ-ಮಗಳಿಂದ ಬೆಳೆದ ಸಂಸಾರ ದೊಡ್ಡದಾಗಿ ಇವರ ಬದುಕು ನೋಡಲು ಬಂದ ಪಾರ್ವತಿ ಪರಮೇಶ್ವರನು ಇವರ ಸಂತತಿಗೆ ಕೆಲಸ ನೇಮಿಸಿದರು. ಪ್ರತಿಯೊಂದು ಕುಟುಂಕ್ಕೂ ಕೆಲಸ ನೇಮಿಸಿದರು. ಒಂದು ಕುಟುಂಬವು ಹಾರೆಕೋಲು ಇಲಿ ಬುರುಡೆ ಮಡಿಕೆ ತೆಗೆದುಕೊಂಡಿದ್ದರಿಂದ ತಾವು ಇರುಳಿಗರು ಆದೆವು"[೫] ಎಂದು ವಿವರಿಸುತ್ತಾರೆ.

೨. ಐತಿಹ್ಯಗಳು

ಒಂದು ನಿರ್ದಿಷ್ಟ ಬುಡಕಟ್ಟಿನಲ್ಲಿ ನಡೆದ ಘಟನಾವಳಿಗಳಿಗೆ ಪೌರಾಣಿಕ ಲೇಪನಗೊಳಿಸಲಾಗಿರುತ್ತದೆ. ತಮ್ಮ ಸಮುದಾಯದಲ್ಲಿ ನಡೆದಿದೆ ಎಂದು ಭಾವಿಸಲಾದ ಘಟನೆಗೆ ಐತಿಹ್ಯ ಎಂದು ಕರೆಯಲಾಗುತ್ತದೆ. ಐತಿಹ್ಯವು ನಿರ್ದಿಷ್ಟ ಸ್ಥಳದಲ್ಲಿ ನಡೆದ ಗತಕಾಲದ ಇತಿಹಾಸ ಪುಟಗಳನ್ನು ತೆರೆದು ಇಡುವ ಪ್ರಯತ್ನ ಮಾಡುತ್ತದೆ. ಇರುಳಿಗ ಸಮುದಾಯದಲ್ಲಿ ಇಂತಹ ಬಹಳಷ್ಟು ಐತಿಹ್ಯ ಕಥೆಗಳಿದ್ದು ಸಂಗ್ರಹಿಸಿದ ಹಲವು ಐತಿಹ್ಯಗಳಲ್ಲಿ ಒಂದು ಐತಿಹ್ಯವನ್ನು ಇಲ್ಲಿ ನೀಡಲಾಗಿದೆ.

ಈಗಿನ ರೇವಣಸಿದ್ಧೇಶ್ವರ ಬೆಟ್ಟದಲ್ಲಿನ ರೇವಣ್ಣಪ್ಪನನ್ನು ಕಂಡು ಹಿಡಿದವರು ಇರುಳಿಗರು ಎಂದು ಹೇಳುತ್ತಾರೆ. ಒಂದು ದಿನ ಒಬ್ಬ ಕಾಡುಪೂಜಾರಿ ಬೇಟೆಗಾಗಿ ಬೆಟ್ಟಕ್ಕೆ ಹೋಗಿದ್ದ. ಆ ಬೆಟ್ಟದಲ್ಲಿ ಮುಳ್ಳುಹಂದಿ, ಉಡಗಳು ಬಹಳಷ್ಟು ಇದ್ದವು. ಒಂದು ದಿನ ದೊಡ್ಡದಾದ ಒಂದು ಉಡ ನೋಡಿದ ಇರುಳಿಗ ಬೇಟೆಗಾರ ಅದನ್ನು ಹಿಡಿಯಲು ಪ್ರಯತ್ನಿಸಿದ. ಅದು ಸಿಕ್ಕದೆ ತಪ್ಪಿಸಿಕೊಂಡು ಗವಿಯೊಳಕ್ಕೆ ಹೋಗುತ್ತದೆ. ಅದನ್ನು ಹಿಡಿಯಲು ಹಿಂಬಾಲಿಸಿದಾಗ ಗುಹೆಯೊಳಗೆ ಒಬ್ಬ ಸನ್ಯಾಸಿ ಇದ್ದುದನ್ನು ಕಾಣಲಾಗುತ್ತದೆ. ಉಡ ಹಿಡಿಯಲು ಹೋಗಿದ್ದವನ ಸದ್ದು ಕೇಳಿ ಎಚ್ಚೆತ್ತ ರೇವಣ್ಣಪ್ಪ 'ಅದನ್ನು ಬಿಟ್ಟುಬಿಡು ನಿನಗೆ ಏನು ಬೇಕು ಕೇಳು ಕೊಡುತ್ತೇನೆ' ಎಂದು ಹೇಳಿ ಹಣಕೊಟ್ಟು ಕಳುಹಿಸಿದ. ನಾನು ಇಲ್ಲಿರೋ ಸುದ್ದಿ ಯಾರಿಗೂ ಹೇಳಬ್ಯಾಡ; ಈ ಸುದ್ದಿ ತಿಳಿಸಿದರೆ ನಿನ್ನ ತಲೆ ಸಾವಿರಹೋಳು ಆಗುತ್ತದೆ ಎಂದು ಹೇಳಿ ಕಳುಹಿಸುತ್ತಾನೆ. ಮನೆಗೆ ಬಂದಮ್ಯಾಲೆ ಹೆಂಡ್ತಿ ಕೇಳುತ್ತಾಳೆ. ಈಪಾಟಿ ದುಡ್ಡು ಎಲ್ಲಿತ್ತು ಹೇಳು; ಕಳ್ಳತನ ಮಾಡಿ ತಂದೆಯಾ? ಹೇಳಿದರೆ ನಾ ಸಾಯಿತಿನಿ ಎಂದು ಗಂಡ ಹೇಳಿದರೆ ನೀನು ಹೇಳಿದಿದ್ದರೆ ನಾನಾ ಸಾಯಿತಿನಿ ಎಂದು ಹೆಂಡತಿ ಹೇಳುತ್ತಾಳೆ. ಹೆಂಡತಿಯ ಕಾಟ ತಾಳದೆ ಬೇಟೆಗಾರ ಬಾಯಿಬಿಟ್ಟು ಸತ್ತ. ಇವತ್ತಿಗೂ ರೇವಣ್ಣಪ್ಪನು ತಮ್ಮ ಹಿರಿಯನ ತಲೆಹೋಳು ಮಾಡಿದ ಅಂತ ಇರುಳಿಗರು ಹೇಳುತ್ತಾರೆ. ಇರುಳಿಗರೇ ರೇವಣಪ್ಪನನ್ನು ಜಗತ್ತಿಗೆ ತೋರಿಸಿದವರು ಎಂದು ಹೇಳಲಾಗುತ್ತದೆ.

೩. ಜನಪದ ಕಥೆಗಳು

ಎಲ್ಲಿ ಜನರ ಬದುಕು ಪ್ರಾರಂಭವಾಗುತ್ತದೋ ಅಲ್ಲಿ ಸಂಸ್ಕೃತಿ ಜೀವಿಸುತ್ತದೆ. ಸಂಸ್ಕೃತಿ ಎಲ್ಲಿ ಜೀವಿಸುತ್ತದೆಯೋ ಅಲ್ಲಿ ಜನಪದ ಕಥೆಗಳು ಹುಟ್ಟುತ್ತವೆ. ಇರುಳಿಗರಲ್ಲಿ ಇಂತಹ ಹಲವಾರು ಕಥೆಗಳ ಸಂಗ್ರಹವೇ ಇದೆ. ನೀತಿ ಕಥೆಗಳು, ಪ್ರಾಣಿ ಕಥೆಗಳು, ವಿನೋದದ ಕಥೆಗಳು, ಅತಿಮಾನುಷ ಕಥೆ, ಕಿನ್ನರ ಕಥೆಗಳು ಹೀಗೆ ಹಲವಾರು ಕಥೆಗಳನ್ನು ಇವರಲ್ಲಿ ಕಾಣಬಹುದು

೪. ಜನಪದ ಗೀತೆಗಳು

ಭಾರತ ಜನಪದದ ತವರೂರು; ಅದರಲ್ಲೂ ಆದಿವಾಸಿ ಬುಡಕಟ್ಟುಗಳಲ್ಲಿ ಹಲವು ರೂಪದಲ್ಲಿ ಜಾನಪದ ವ್ಯಕ್ತವಾಗಿದೆ. ಧಾರ್ಮಿಕ ನೆಲೆ ಕೌಟುಂಬಿಕ ನೆಲೆಯಿಂದ ಪ್ರಾರಂಭವಾಗಿ ಮುಂದೆ ವೃತ್ತಿ ಗಾಯಕರ ಜೀವಾಳವಾಗಿ ಪ್ರವಹಿಸುತ್ತಿವೆ. ಇರುಳಿಗರು ಕಬ್ಬಾಳಮ್ಮ, ಬಿಸಿಲಮ್ಮ, ಮದ್ದೂರಮ್ಮ ಬಾಣಂತಿ ಮಾರಮ್ಮ ಕುರಿತು ಹಾಡುತ್ತಾರೆ.

ಅಕ್ಕ ಕಬ್ಬಾಳಿ ತಂಗಿ ಬಿಸಲಮ್ಮ
ಐನೋರ ಮನೆಯ ಮನೆ ಮಗಳಿಗೆ
ಒಲಿದವಳೇ ಬಿಸಿಲವ್ವ
ಅವರ ಅಟ್ಟಿಯ ಗಂಧ–ಚಂದನಕೆ
ಒಲಿದವಳೇ ಮುಂದಿನ ಬಂಡಿ
ಮುಂಬು ಪೂಜೆ ಕೇಳದವಳೇ
ಅವರಲ್ಲಿ ಏನು ಕಂಡು ಒಲಿದೆ ಬಿಸಿಲ್ವ
ತಿಗಳರ ಮನೆಯ ಕೆಂಡಕ್ಕೆ
ಐನೂರ ಮನೆಯ ಧೂಪ ಕೆಳ್ದವಳೇ
ಕೊಂಡಕೆ ಕೆಂಡವು ಕೋಳಿರಾಯನ
ಊರಿಂದ ಬರಬೇಕೆ ಆ ಕೆಂಡೆದ
ಮ್ಯಾಲೆ ಮಡಿಮ್ಯಾಲೆ ಹೋಗೋಳೆ
ನಿನಗೆ ಕೆಂಡವು ಸೂತಕವೆ
ಏಳು ಮಕ್ಕಳ ತಾಯಿ ಬಿಸಿಲವ್ವ

ಹಾಡಿದವರು: ಬರಗಮ್ಮ (೬೦), ಇರುಳಿಗರ ಕಾಲೋನಿ, ಚನ್ನಪಟ್ಟಣ ತಾಲೂಕು

೫. ಜನಪದ ಮಹಾಕಾವ್ಯಗಳು

ರಾಮನಗರ ಪ್ರದೇಶ ಜನಪದ ಮಹಾಕಾವ್ಯಗಳಿಗೆ ಭದ್ರಬುನಾದಿ ಒದಗಿಸಿದ ಸ್ಥಳ. ಇರುಳಿಗರಲ್ಲಿ ನೀಲಗಾರ ಪರಂಪರೆಯನ್ನು ಅನುಸರಿಸುವವರಿದ್ದಾರೆ. ಹಾಗೆಯೇ ಮಲೆಮಹದೇಶ್ವರ ಭಕ್ತರೂ ಇದ್ದಾರೆ. ಮಂಟೇಸ್ವಾಮಿ ಕಥೆ, ಮಹದೇಶ್ವರ ಕಥೆ, ನೀಲವೇಣಿ, ಬಾಲನಾಗಮ್ಮ, ನಂಜುಂಡೇಶ್ವರ, ಚಾಮುಂಡಿ ಕಾವ್ಯ, ರಾಚಪ್ಪಾಜಿ ಸಿದ್ಧಪ್ಪಾಜಿ, ಚೆನ್ನಮ್ಮಾಜಿ, ಮುಂತಾದ ಕಥೆಗಳನ್ನು ಬಹುಸೊಗಸಾಗಿ ಹಾಡುವ ಈ ಸಮುದಾಯದ ಮೂರು ನಾಲ್ಕು ತಂಡಗಳಿವೆ. ಈ ಮಹಾಕಾವ್ಯವನ್ನು ತೆಗೆದುಕೊಂಡು ಹಾಡುಗಾರ ತನ್ನದೇ ದಾಟಿಯಲ್ಲಿ ಹಾಡಲು ಪ್ರಾರಂಭಿಸಿದರೆ ಎಂಥವರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತದೆ. ಈ ಸಮುದಾಯದ ಗಾಯಕರನ್ನು ಇದುವರೆಗೂ ಸರ್ಕಾರ, ಸಂಘ–ಸಂಸ್ಥೆಗಳು ಗುರುತಿಸದೆ ಇರುವುದು ನಮ್ಮ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಈ ಅಧುನಿಕ ಭರಟೆಯಲ್ಲಿ ಬೆಲೆಕಟ್ಟಲಾಗದಂತಹ ಎಷ್ಟೋ ಅಮುಲ್ಯವಾದ ಜನಪದ ಸಿರಿಯನ್ನು ಕಳೆದುಕೊಳ್ಳುತ್ತಿದ್ದೇವೆ ಏನಿಸುತ್ತದೆ.

೬. ಗಾದೆಗಳು

ಇರುಳಿಗರಲ್ಲಿ ಗಾದೆಯ ಸಂಪತ್ತು ಅಪೂರ್ವವಾಗಿದೆ. ಅವರ ಗಾದೆಗಳಲ್ಲಿ ಕಾಣುವ ಮುಖ್ಯವಸ್ತುವೆಂದರೆ ಪ್ರಾಣಿ, ಪಕ್ಷಿ, ಜನರ ಆಚಾರ ವಿಚಾರಗಳು. ಇವರು ವಾಸಿಸುವ, ಮಾಡುವ ವೃತ್ತಿಗಳು ಇವರ ಗಾದೆಗಳ ಉಗಮದ ಮೇಲೆ ಹೆಚ್ಚು ಪ್ರಭಾವ ಬೀರಿದಂತೆ ಕಾಣುತ್ತದೆ.

ಎತ್ತಿನಂತೆ ದುಡಿ; ಇಲಿಯಂತೆ ತಿನ್ನು

ಬೋನಿಗೆ ಬಿದ್ದ; ಇಲಿಯಂತೆ ಆಡಬ್ಯಾಡ

ಎದುರಿಸಿ ಬದುಕಲಾರದವ; ಇಲಿ ಬಿಲ ಹೊಕ್ಕಂತೆ

ಹಂಗಿನ ಹಾಲಿಗಿಂತ; ರಾಗಿ ಅಂಬಲಿ ಲೇಸು

ಚಾಡಿ ಮಾತಿನಿಂದ; ಚಾವುಡಿ ಹಾಳಾಯಿತು

ಒಗಟು: ಒಗಟುಗಳ ಮುಖ್ಯವಾದ ಗುರಿ ಮನುಷ್ಯನಿಗೆ ಮನರಂಜನೆಯನ್ನು ನೀಡುವುದೇ ಆಗಿದೆ. ಬಡುಕಟ್ಟು ಜನರು ತಮ್ಮ ವಿರಾಮ ಕಾಲದಲ್ಲಿ ತಮ್ಮ ಸಮಯವನ್ನು ಕಳೆಯಲು ಒಗಟು ಬಿಡಿಸುವುದನ್ನು ರೂಢಿಸಿಕೊಂಡಿದ್ದಾರೆ. ಈ ಜನ ಮರಗಿಡಗಳ ಜೊತೆ, ಗಡ್ಡೆಗೆಣಸುಗಳ ಜೊತೆ, ಕಾಡುಪ್ರಾಣಿಗಳ ಜೊತೆ ಒಡನಾಡಿದವರು. ಅವರ ಬದುಕಿನ ಅವಿಭಾಜ್ಯ ಅಂಗಗಳಾದ ಇವು ಅವರ ಒಗಟುಗಳ ಮೇಲೆ ಪ್ರಭಾವ ಬೀರಿದೆ.

ಗುಟ್ಟ ಕಿತ್ತುಕೊಂಡು ಸಂತೆಗೆ ಪೋಯ – ಮೂಲಂಗಿ

ಅಂಗೈಯೆಂಬ ಹೊಲ ಮುಂಗೈಗೆ ಬಂದ– ಜೇನು

ಏರಿಮ್ಯಾಲೆ ಉತ್ತರಾಣಿ ಗಿಡ ಹುಟ್ಟಿ ಎತ್ತುರು ಬರಲ್ಲ ಕೆತ್ತುರು ಬರಲ್ಲ – ಹಚ್ಚೆ

ಕೆರೆ ತುಂಬಾ ಕುರಿ ಹೆಜ್ಜೆ – ನಕ್ಷತ್ರ

ನಡಸಣ್ಣ ನಾಗರ್ ಬಣ್ಣ ಹಿಡಿಯೋಕೆ ಹೋದ್ರ ಕಡಿಯೋಕೆ ಬರ್ತದೆ – ಕಡಜ

ಬೈಗಳುಗಳು: ಬೈಗಳುಗಳು ಇರುಳಿಗ ಸಮುದಾಯದಲ್ಲಿ ಸಾಮಾನ್ಯವಾಗಿ ಭಾವನಾತ್ಮಕವಾಗಿ ಜಗಳ ಅಥವಾ ತಮಾಷೆಗಾಗಿ ಹಲವು ಸಂದರ್ಭಗಳಲ್ಲಿ ಬಳಕೆಯಾಗುತ್ತವೆ.

ನಿನ್ ಮನೆಗೆ ಬೆಂಕಿಬೀಳಾ

ನಿನ್ ಮನೆ ಎಕ್ಕುಟ್ಟೋಗಿ ಎಕ್ಕದ ಗೆಡ್ಡೆ ಬೆಳ್ಯಾ

ನಿನುಗ್ ಬರಬಾರದ್ ಬರ

ಮಹಿಳೆಯರ ಸಾಹಿತ್ಯ

ಇರುಳಿಗ ಮಹಿಳೆಯರಲ್ಲಿ ಹಾಡುಗಳ ವೈವಿಧ್ಯತೆ ಕಂಡುಬಂದಿಲ್ಲ. ಅಷ್ಟೇ ಅಲ್ಲ. ಇವರದೇ ಆದ ವಿಶಿಷ್ಟವಾದ ಒಂದು ಗೀತ ಪ್ರಕಾರವಿದೆ ಎಂದು ಅನ್ನಿಸುತ್ತಿಲ್ಲ. ಸೋಬಾನೆ ಪದ, ಕೃಷಿನಾಟಿ ಪದಗಳು, ದೈವಸಂಬಂಧಿ ಪದ, ಜಾನಪದಗೀತೆ, ಹಚ್ಚೆಯ ಹಾಡುಗಳು ಸಾಮಾನ್ಯವಾಗಿದ್ದು ಇವುಗಳನ್ನು ಹೊರತುಪಡಿಸಿ ಅಂತಹ ವಿಶೇಷವಾದ ಸಾಹಿತ್ಯ ಕೃಷಿ ಕಂಡುಬರುವುದಿಲ್ಲ.

ಒಂದು ಬುಡಕಟ್ಟಿನಲ್ಲಿ ಸಾಹಿತ್ಯ ಇರಲೇಬೇಕೆಂದೇನೂ ಇಲ್ಲ. ಯುರೋಪಿನಲ್ಲಿ ಅತಿ ಕಡಿಮೆ ಜನಸಂಖ್ಯೆಯಿರುವ ಯಾವುದೋ ಒಂದು ಬುಡಕಟ್ಟಿನಲ್ಲಿ ಸಾಹಿತ್ಯವೇ ಇಲ್ಲವೆಂದು ಹೇಳಲಾಗುತ್ತದೆ. ಹಾಗಾಗಿ ಈ ಸಾಹಿತ್ಯದ ಸೃಷ್ಟಿ ಆಯಾ ಸಮುದಾಯಗಳ ಮೇಲೆ ಅವಲಂಬಿತವಾಗಿರುತ್ತದೆ. ನಮ್ಮ ದೇಶದ ಹಲವು ಬುಡಕಟ್ಟುಗಳಲ್ಲಿ ಸಾಹಿತ್ಯದ ಸೃಷ್ಟಿಯ ಪ್ರಮಾಣದಲ್ಲಿ ಹೆಚ್ಚು ಕಡಿಮೆಯಿದೆ. ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ ಸಮುದಾಯಗಳು ತಮ್ಮದೇ ಆದ ವಿಶಿಷ್ಟ ಶೈಲಿಯ ಸಾಹಿತ್ಯವನ್ನು ಹುಟ್ಟುಹಾಕಿದ್ದಾರೆ. ನದಿಬಯಲು ಪರಿಸರದಲ್ಲಿ ವಾಸಿಸುವ, ಅರಣ್ಯದಲ್ಲಿ ವಾಸಿಸುವ ಸಮುದಾಯಗಳ ಸಾಹಿತ್ಯಕ್ಕೆ ಅನೇಕ ವೈವಿಧ್ಯತೆಯಿರುತ್ತದೆ. ಕಾರಣ ಭೌಗೋಳಿಕ ಪರಿಸರವೂ ಇದಕ್ಕೆ ಮುಖ್ಯ ಕಾರಣವಾಗಿರಬಹುದು.

ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಮುದಾಯಗಳ ವಲಸೆ ನಡೆಯುತ್ತಿರುತ್ತದೆ. ಮೂಲ ಪರಿಸರದ ಹಾಗೂ ವಾಸಿಸುವ ಮೂಲ ಪ್ರದೇಶದಲ್ಲಿನ ಸಮುದಾಯದ ಸಾಹಿತ್ಯ ಅನೇಕ ಸಾಮ್ಯತೆಯನ್ನು ಪಡೆದಿರುತ್ತದೆ. ಆಗ ಭೌಗೋಳಿಕ ಏಕತೆಯಿಂದ ಸಂಸ್ಕೃತಿಯಲ್ಲಿ ಏಕರೀತಿಯ ಪರಿಣಾಮ ಸಾಧ್ಯವಾಗುತ್ತದೆ. ವಲಸೆ ಹೋದಂತಹ ಸಮುದಾಯದ ಮೇಲೆ ಸ್ಥಳೀಯ ಪರಿಸರದ ಪ್ರೇರಣೆಯಿಂದ ಮತ್ತೊಂದು ಬಗೆಯ ಸಾಹಿತ್ಯ ಕೃಷಿಗೆ ಪ್ರೇರಣೆ ಆಗಬಹುದು.

ಪ್ರಸ್ತುತ ಇರುಳಿಗ ಸಮುದಾಯಕ್ಕೆ ತನ್ನದೇ ಆದಂತಹ ಮೌಖಿಕ ಸಾಹಿತ್ಯವಿದೆ. ಆದರೆ ಈ ಸಾಹಿತ್ಯವೆಲ್ಲ ಇವರದೇ ಮೂಲದಿಂದ ಸೃಷ್ಟಿಸಿಕೊಳ್ಳಲಾಗಿಲ್ಲ. ಅನ್ಯ ಸಮುದಾಯಗಳ ಪರಿಸರ ಪ್ರಭಾವ ಇವರು ಸಾಹಿತ್ಯದ ಮೇಲೆ ಆಗಿರುವುದು ನಿಚ್ಚಳವಾಗಿ ಕಂಡುಬರುತ್ತದೆ. ಅದಕ್ಕೆ ಸಮುದಾಯದ ಪರಿಮಿತಿ, ಜನಸಂಖ್ಯಾ ಭೌಗೋಳಿಕ ಪರಿಸರ ಕಾರಣವಾಗಿರಬಹುದು. ಲಭ್ಯವಿರುವ ಸಾಹಿತ್ಯವನ್ನು ಕ್ಷೇತ್ರಕಾರ್ಯದ ಸಮಯದಲ್ಲಿ ಹಾಗೂ ವ್ಯಕ್ತಿಸಂದರ್ಶನ ಸಂದರ್ಭದಲ್ಲಿ ಸಂಗ್ರಹಿಸಲಾಗಿದೆ.

೭.೭. ಇರುಳಿಗ ಸಮುದಾಯದ ಭಾಷೆ

ಭಾಷೆ ಒಂದು ಸಂವಹನ ಪ್ರಕ್ರಿಯೆ. ಸಾಮಾಜಿಕ ಶ್ರೇಣಿಗಳಲ್ಲಿ ಕಾಲ, ದೇಶ ಪರಿಸರಕ್ಕೆ ಅನುಗುಣವಾಗಿ ಅಭಿವ್ಯಕ್ತಿ ಮಾಧ್ಯಮವಾಗಿ ನಿಲ್ಲಬಲ್ಲ ಸಮರ್ಥ್ಯ ಭಾಷೆಗಿದೆ. ಪ್ರಪಂಚದಾದ್ಯಂತ ಭೌಗೋಳಿಕ ಪರಿಸರಕ್ಕೆ ಅನುಗುಣವಾಗಿ ಭಾಷೆ ಭಿನ್ನತೆಯನ್ನು ಪಡೆದುಕೊಂಡಿದೆ. ದಿನನಿತ್ಯದ ವ್ಯವಹಾರದಲ್ಲಿ ಭಾಷೆಯ ಪಾತ್ರ ಮಹತ್ವದ್ದದಾಗಿದೆ. ಭಾಷೆ ಪ್ರಾಣವಾಯುವಿನಷ್ಟು ಸಹಜ ಹಾಗೂ ಅನಿವಾರ್ಯ. ಅದು ವ್ಯಕ್ತಿಯ ಭೌತಿಕ ಚಟುವಟಿಕೆ, ಅನಿಸಿಕೆ, ಅಭಿಪ್ರಾಯ, ಭಾವನೆ, ಅನುಭವ ಕ್ರಿಯೆ-ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸುವ ಮಾಧ್ಯಮ.

ಭಾಷೆ ಎಂಬುದು ಸಮಾಜದ ಸಮಗ್ರ ಜೀವಂತ ಚಟುವಟಿಕೆಯ ಪ್ರತೀಕವಾಗಿದೆ. ವ್ಯಕ್ತಿಯ ಭಾವನೆಗಳನ್ನು ಇತರರೊಂದಿಗೆ ಹಂಚಿಕೊಳ್ಳುವುದರ ಜೊತೆಗೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಮೇಲ್ಮೈಯನ್ನು ಸಾಧಿಸುವ ಪ್ರಯತ್ನದಲ್ಲಿ ಭಾಷೆ ಪ್ರಮುಖವಾಗಿದೆ. ಸಮಾಜದ ಬೆಳವಣಿಗೆ ಹಾಗೂ ಬದಲಾವಣೆಗೆ ಭಾಷೆ ಅನಿವಾರ್ಯವಾಗಿದೆ. ಹಾಗೂ ಅದು ಸಮಾಜದ ಪ್ರತಿ ಘಟನೆಗಳೊಂದಿಗೆ ಸಮವಾಗಿ ಬೆರೆತು ತಲೆಮಾರಿನಿಂದ ತಲೆಮಾರಿಗೆ ರೂಢಿ, ಸಂಪ್ರದಾಯ, ನೀತಿ–ನಿಯಮ, ಪರಂಪರೆಗಳ ಅಂಶಗಳನ್ನು ಆಯಾ ಸಮುದಾಯಗಳಲ್ಲಿ ಬಳಸಿಕೊಂಡು ಬರಲು ಸಹಾಯ ಮಾಡುತ್ತದೆ. "ಜಗತ್ತಿನಲ್ಲಿ ಸಮಾಜವಿಲ್ಲದೆ ಭಾಷೆಯಿಲ್ಲ, ಭಾಷೆಯಿಲ್ಲದೆ ಸಮಾಜವಿಲ್ಲ"[೬] ಎನ್ನುವಷ್ಟರಮಟ್ಟಿಗೆ ಭಾಷೆ ಅನಿವಾರ್ಯ ವಾಗಿದೆ. ಹೀಗಾಗಿ ಜಗತ್ತಿನಾದ್ಯಂತ ಇರುವ ಸಮುದಾಯಗಳು ತಮ್ಮದೇ ಆದ ಭಾಷೆಯನ್ನು ಒಳಗೊಂಡಿವೆ. ಇದರಂತೆ ಬುಡಕಟ್ಟು ಸಮುದಾಯಗಳಲ್ಲಿ ತಮ್ಮದೇ ಆದ ಭಾಷೆಯನ್ನು ಉಳಿಸಿಕೊಂಡಿರುವುದನ್ನು ಕಾಣಬಹುದು. ಬಹುಮುಖ್ಯವಾಗಿ ಬುಡಕಟ್ಟು ಸಮುದಾಯಗಳು ಅರಣ್ಯದಲ್ಲಿ ವಾಸಿಸುವುದರಿಂದ ಅವರ ಭಾಷೆಯು ಬದಲಾವಣೆಯಾಗದೆ ಉಳಿದಿರುವ ಸಾಧ್ಯತೆ ಹೆಚ್ಚಾಗಿದೆ.

ಭಾರತದಲ್ಲಿ ಒಟ್ಟು ೫೭೩ ಬುಡಕಟ್ಟು ಸಮುದಾಯಗಳು ನೆಲೆಗೊಂಡಿದ್ದು ಈ ಸಮುದಾಯಗಳು ಬಳಸುವ ಭಾಷೆ ೨೭೦ಕ್ಕೂ ಹೆಚ್ಚು. ೨೦೦೧ರ ಜನಗಣತಿಯ ಪ್ರಕಾರ ೮೪.೬ ಮಿಲಿಯನ್ ಬುಡಕಟ್ಟು ಜನರು ಭಾರತದಲ್ಲಿದ್ದಾರೆ. ಇವರುಗಳು ಬಳಸುವ ಭಾಷೆಯನ್ನು "೧೯೬೧ರ ಜನಗಣತಿ ಪ್ರಕಾರ ಗ್ರಿಯರ್ಸನ್ ಲಿಂಗ್ವಿಸ್ಟಿಕ್ ಸರ್ವೇ ಆಫ್ ಇಂಡಿಯಾ ವಿಂಗಡನೆ ಕ್ರಮದಂತೆ ೨೦ ಭಾಷೆಗಳು ಅಸ್ಟ್ರಿಕ್ ಗುಂಪಿಗೂ, ೯೧ ಭಾಷೆಗಳು ಟಿಬೆಟೊ–ಬರ್ಮನ್ ಗುಂಪಿಗೂ, ೧೩ ಭಾಷೆಗಳು ದ್ರಾವಿಡ ಹಾಗೂ ೦೨ ಭಾಷೆಗಳು ಇಂಡೋ ಆರ್ಯನ್ ಭಾಷಾ ವರ್ಗಕ್ಕೂ ಸೇರಿವೆ".[೭]

ದ್ರಾವಿಡ ಭಾಷಾ ಕುಟುಂಬಕ್ಕೆ ಸೇರಿದ ಭಾಷೆಗಳನ್ನು ಮೂರು ಬಗೆಯಲ್ಲಿ ತಿಳಿಸಲಾಗಿದೆ. ತಮಿಳುನಾಡಿನ ತೊದ, ಕೋತ, ಇರುಳಿಗ ಭಾಷಾ ಸಮೂಹಗಳು ತೆಂಕಣ ದ್ರಾವಿಡ ಭಾಷಾ ಕುಟುಂಬಕ್ಕೆ ಸೇರಿವೆ ಎಂದು ಹೇಳಲಾಗುತ್ತದೆ. "೧೯೬೧ರ ಜನಗಣತಿ ಪ್ರಕಾರ ಪ್ರತಿಯೊಂದು ಬುಡಕಟ್ಟು ಭಾಷೆ ಮಾತನಾಡುವ ಜನರು ಎಷ್ಟು ಎಂಬುದನ್ನು ದಾಖಲಿಸಿದೆ. ಇದರ ಪ್ರಕಾರ ಕರ್ನಾಟಕದಲ್ಲಿ ಇರುಳಿಗ ಭಾಷೆಯನ್ನು ಮಾತನಾಡುವವರ ಸಂಖ್ಯೆ ಕೇವಲ ೨೫ ಜನರು"[೮] ಎಂದು ದಾಖಲಿಸಲಾಗಿದೆ.

ಭಾರತದಲ್ಲಿ ೧೫೩ ವರ್ಗೀಕೃತ ಮತ್ತು ೨೪೯ ವರ್ಗೀಕರಿಸದ ಭಾಷೆಗಳಿದ್ದು ಇವುಗಳಲ್ಲಿ ಒಂದರಿಂದ ಐದು ಜನ ಮಾತನಾಡುವ ಭಾಷೆಗಳಿವೆ. ಇತ್ತೀಚಿನ UNESCO ವರದಿಯ ಪ್ರಕಾರ ಪ್ರಪಂಚದಲ್ಲಿ ಅತ್ಯಂತ ವೇಗವಾಗಿ ಅವಸಾನ ಹೊಂದುತ್ತಿರುವ ಭಾಷೆಗಳ ಸಂಖ್ಯೆ ೧೯೬. ಈ ಎಲ್ಲ ಭಾಷೆಗಳು ಹೆಚ್ಚಾಗಿ ಬುಡಕಟ್ಟು ಸಮುದಾಯದ ಭಾಷೆಗಳು ಎಂಬುದು ಬಹಳ ಆತಂಕದ ವಿಷಯವಾಗಿದೆ.

ಇರುಳಿಗ ಭಾಷೆಯ ಸ್ವರೂಪ

ಬುಡಕಟ್ಟು ಸಮುದಾಯಗಳಲ್ಲಿ ಇರುಳಿಗ ಸಮುದಾಯವು ರಾಜ್ಯದಲ್ಲೇ ಅತಿಹೆಚ್ಚು ವಾಸವಾಗಿರವುದು ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿಯೇ. ಇದು ಆದಿವಾಸಿ ಬುಡಕಟ್ಟು ಎಂದು ಗುರುತಿಸಿಕೊಂಡಿದೆ. ಇರುಳಿಗರು ಬಳಸುವ ಇರುಳಿಗ ಭಾಷೆಯು ದಕ್ಷಿಣ ದ್ರಾವಿಡ ಭಾಷಾ ವರ್ಗಕ್ಕೆ ಸೇರುತ್ತದೆ. ಈ ವರ್ಗಕ್ಕೆ ಸೇರಿದ ಭಾಷೆಗಳಲ್ಲಿ ತಮಿಳು, ಮಲಯಾಳಂ, ಕೋತ, ತೊದ, ಇರುಳ ಕುರುಂಬ, ಮುದುಗ ಮುಂತಾದ ಭಾಷೆಗಳು”[೯] ಮುಖ್ಯವಾಗಿವೆ. ಇವು ಮೂಲತಮಿಳು ಭಾಷೆಯಿಂದ ಹುಟ್ಟಿ ಬೆಳೆದು ಬಂದ ಭಾಷೆಗಳಾಗಿವೆ ಎಂದು ಭಾಷಾತಜ್ಞರು ಅಭಿಪ್ರಾಯಪಡುತ್ತಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗೆಝೆಟಿಯರ್‌ನಲ್ಲಿ ಇರುಳಿಗರ ಭಾಷೆಯ ಕುರಿತು “The speak a dialect mixed with Kannada, Telugu and Tamil words. They are grouped under scheduled tribes. According to a legend they are the descendants of billayya, an ardent devotess of Mahadeshwar and the brother of Karayya. The proginator of the Soligas accoding to another legend they are the descendents of male rishi the sage of hills. Some of the Iruligas are said to be immigrants from the Nilgiri hills and some others from annamalai forests”[10] ಎಂಬ ಅಭಿಪ್ರಾಯ ನೀಡಲಾಗಿದೆ.

ಇರುಳಿಗ ಭಾಷೆಯನ್ನು ಅಧಿಕವಾಗಿ ಬಳಸುವ ಇರುಳಿಗರು ತಮಿಳುನಾಡಿನ ನೀಲಗಿರಿ ಜಿಲ್ಲೆ ಕರ್ನಾಟಕದ ರಾಮನಗರ ಜಿಲ್ಲೆಯ ಕನಕಪುರದ ಗಡಿ ಪ್ರದೇಶ ಹಾಗೂ ಮಾಗಡಿ, ತುಮಕೂರು ಜಿಲ್ಲೆಗಳಲ್ಲಿ ವಾಸಿಸುತ್ತಾರೆ. “೧೯೬೮ರಲ್ಲಿ ಕಾಮಿಲ್ ಝುವೆಲ್‌ಬಿಲ್ ಎಂಬಾತನು ಮೊಟ್ಟಮೊದಲಿಗೆ ಈ ಇರುಳಿಗ ಭಾಷೆಯನ್ನು ಗುರುತಿಸಿದನು. ಇದು ಒಂದು ಪ್ರತ್ಯೇಕವಾದ ಹಾಗೂ ಸ್ವತಂತ್ರವಾದ ದ್ರಾವಿಡ ಭಾಷೆ ಎಂಬುದು ಇವರ ಅಭಿಮತ”[೧೧] ಈ ಭಾಷೆಯನ್ನು ಇರುಳಿಗರ ಭಾಷೆ, ಇರುಳರ ಭಾಷೆ, ಇಲ್ಲಿಗರ ಭಾಷೆ ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಈ ಭಾಷೆಯು ತಮಿಳು ಭಾಷೆಯನ್ನು ಹೆಚ್ಚು ಹೋಲುತ್ತದೆ. ಇದು ತಮಿಳು ಭಾಷೆಯ ಉಪಭಾಷೆ ಇದ್ದರೂ ಇರಬಹುದು ಎನಿಸುವಷ್ಟು ತಮಿಳು ಪದಗಳು ಹೆಚ್ಚಾಗಿವೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ.

ಇರುಳಿಗ ಭಾಷೆಯು ತಮಿಳು ಭಾಷೆಯಿಂದ ಯಾವ ಸಮಯದಲ್ಲಿ ಬೆಳೆದುಬಂದಿತು ಎಂಬುದರ ಬಗ್ಗೆ ನಿಖರವಾದ ಆಧಾರಗಳು ದೊರೆಯುವುದಿಲ್ಲ. ಇರುಳ ಭಾಷೆಯ ಬಗ್ಗೆ ಅನೇಕ ಅಧ್ಯಯನಗಳು ನಡೆದಿವೆಯಾದರೂ ಖಚಿತವಾದ ವಿವರಗಳು ದೊರೆಯುವುದಿಲ್ಲ. ಇವರ ಭಾಷೆಯಲ್ಲಿ ವಲಸೆಯ ಪರಿಣಾಮವಾಗಿ ಕನ್ನಡ, ತಮಿಳು, ಮಲೆಯಾಳಂ ಹಾಗೂ ತೆಲುಗು ಭಾಷೆಗಳು ಮಿಶ್ರಣವಾಗಿರಬಹುದು. ಇದು ಇವರ ವಲಸೆಯ ಮಾರ್ಗಸೂಚಿಯನ್ನು ಸೂಚಿಸುತ್ತದೆ ಎಂದು ಹೇಳಬಹುದು. ಇದರ ಮೇಲೆ ಕೋತ, ತೊದ, ಕುರುಂಬ, ಪಣೆಯ, ಬಡಗ, ಕಸಬ ಭಾಷೆಯ ಪ್ರಭಾವ ಹೆಚ್ಚಾಗಿದೆ. ಇವು ಲಿಪಿ ಇಲ್ಲದ ಬಹುಭಾಷಾ ವರ್ಗಕ್ಕೆ ಸೇರಿದ ಭಾಷೆಗಳು.

ಲಿಂಗವಚನ, ವಿಭಕ್ತಿ ಪ್ರತ್ಯಯಗಳು ತಮಿಳು ಮತ್ತು ಕನ್ನಡದ ಲಿಂಗವಚನ ವಿಭಕ್ತಿ ಪ್ರತ್ಯಯಗಳನ್ನು ಹೋಲುತ್ತವೆ. ಈ ಭಾಷೆಯಲ್ಲಿನ ಶಬ್ದದಲ್ಲಿ ಸ್ವರಕ್ಕಿಂತ ವ್ಯಂಜನಾಂತ್ಯಗಳೇ ಹೆಚ್ಚು ಇದ್ದಂತೆ ಕಂಡುಬರುತ್ತದೆ. ವರ್ತಮಾನದಲ್ಲಿ ಇತ್ತೀಚಿನ ಹೊಸತಲೆಮಾರಿನ ಯುವಜನರಿಗೆ ಇರುಳ ಭಾಷೆಯ ಕಲಿಕೆಯ ಬಗ್ಗೆ ಆಸಕ್ತಿ ಇಲ್ಲದೆ ಇರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಬಂದಿತು. ಈ ಭಾಷೆಯು ಮಾಗಡಿ ವ್ಯಾಪ್ತಿಯ ಸಾವನದುರ್ಗ ಹಾಗೂ ಮಾನಗಲ್ಲು ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವ ಪ್ರದೇಶದಲ್ಲಿ ಮಾತ್ರ ಬಳಕೆಗೊಳುವುದು ಕಂಡುಬರುತ್ತದೆ.

ತಮ್ಮ ಬದುಕು ಮತ್ತು ತಲೆತಲಾಂತರದಿಂದ ವಾಸ ಮಾಡುತ್ತಿದ್ದ ನೆಲೆಗಳನ್ನು ಅಭಿವೃದ್ಧಿಯ ಹೆಸರಿನಲ್ಲಿ ಒಕ್ಕಲೆಬ್ಬಿಸಿ ನಾಶ ಮಾಡುತ್ತಿರುವ ಈ ಕಾಲಘಟ್ಟದಲ್ಲಿ ಅವರ ಉಳಿಯುವಿಕೆಗೆ ಅಪಾಯ ಬಂದು ಒದಗಿರುವ ಈ ಸಂದರ್ಭದಲ್ಲಿ ಭಾಷೆಯ ಉಳಿವಿನ ಬಗ್ಗೆ ಚರ್ಚಿಸುವುದೇ ಅಸಂಗತವೇ ಸರಿ. ಈಗಿನ ಪ್ರಶ್ನೆ ಉಳಿಸಿಕೊಳ್ಳಬೇಕಾಗಿರುವ ತಮ್ಮ ಬದುಕನ್ನೋ? ಅಥವಾ ಭಾಷೆಯನ್ನೋ? ಎಂಬ ಪ್ರಶ್ನೆ ಬಾರದೆ ಇರದು. ಪ್ರಸ್ತುತ ಇಲ್ಲಿ ರಾಮನಗರ ಜಿಲ್ಲೆಯ ಇರುಳಿಗರು ಮಾತನಾಡುವ ಭಾಷೆಯ ಕೆಲವು ಪದಗಳನ್ನು ನೋಡಲಾಗಿದೆ. ಬಂಧುತ್ವಕ್ಕೆ ಸಂಬಂಧಿಸಿದಂತೆ ಇರುಳಿಗ ಭಾಷೆಯಲ್ಲಿ ಬಳಕೆಗೊಳ್ಳುವ ಪದಗಳನ್ನು ಮೊದಲಿಗೆ ಸಂಕ್ಷಿಪ್ತವಾಗಿ ಗಮನಿಸಲಾಗಿದೆ.

೧. ಬಂಧುತ್ವಕ್ಕೆ ಸಂಬಂಧಿಸಿದ ಇರುಳಿಗ ಪದಗಳು

ಇರುಳಿಗ ಭಾಷೆಯಲ್ಲಿ ಬಳಕೆಯಲ್ಲಿರುವ ಕೆಲವು ಸಂಬಂಧವಾಚಿ ಪದಗಳು ಇಲ್ಲಿವೆ

ಇರುಳಿಗ ಭಾಷೆ	**ಕನ್ನಡ ಭಾಷೆ**
ಅಮ್ಮಾ, ಆವಾ, ಅಮ್ಮ	ತಾಯಿ
ಅಪ್ಪೂ	ತಂದೆ
ಅಣ್ಣೈ	ಅಣ್ಣ
ಪರಂದಾಳ ತಂಗೇ	ತಂಗಿ
ಅಕ್ಕಲ್	ಅಕ್ಕ
ಪಾಟಾ	ಅಜ್ಜ
ಪಾಟಿ	ಅಜ್ಜಿ
ಪುಲ್ಲೆ	ಮಗು[೧೧] (ವಕ್ತೃ ಮಾಹಿತಿ)

ವೈವಾಹಿಕ ಸಂಬಂಧವಾಚಕ ಪದಗಳು

ಇರುಳಿಗರ ಭಾಷೆ	**ಕನ್ನಡದ ಭಾಷೆ**
ಮಾಮ್	ಮಾವ

ಅತ್ತ್ಯ	ಅತ್ತೆ
ಮಾಡ್ನಿ	ನಾದಿನಿ
ಅಳಿಯಾರ	ಅಳಿಯ
ಅನ್ನಿ	ಅತ್ತಿಗೆ
ಓಡೂಓ	ಗಂಡ
ಪಂಟಿ	ಹೆಂಡತಿ

ಅಂಗಾಂಗಗಳು

ಇರುಳಿಗರು ದೇಹದ ಅಂಗಾಂಗಗಳಿಗೆ ಸಂಬಂಧಿಸಿದಂತೆ ಬಳಸುವ ಇರುಳಿಗ ಪದಗಳು ಹೀಗಿವೆ.

ಇರುಳಿಗ ಭಾಷೆ	**ಕನ್ನಡ ಭಾಷೆ**
ಕಣ್ಣಾರ್ರು	ಕಣ್ಣು
ಬಾಯಾರ್ರ	ಬಾಯಿ
ಪಲ್ಲಾರ್ರ	ಹಲ್ಲು
ಅಂಗಾಲಸ್ತ	ಅಂಗಾಲು
ಉದಡು	ತುಟಿ
ಕದಪಾಟ್ಟಿ	ದವಡೆ
ನಾಕ್	ನಾಲಿಗೆ
ವರ್ಲ್ಲ	ಬೆರಳು
ಮೊಯುಗೈ	ಮುಂಗೈ
ಅಣ್ಯೆ	ಹಣೆ
ಮ್ಯೆತ್	ಹೊಟ್ಟೆ
ದಾಡಿ	ಗಲ್ಲ
ಚಾಮರ್ಾ	ಚರ್ಮ

ಆಹಾರ ಸಂಬಂಧಿ ಪದಗಳು

ಇರುಳಿಗ ಭಾಷೆ	**ಕನ್ನಡ ಭಾಷೆ**
ಕಳಿ	ಮುದ್ದೆ

ಶೂಖ	ಅನ್ನ
ತನ್ನಿ	ನೀರು
ಕರಮಾಲಾ	ಕಬ್ಬು
ಕಣಂಗ್	ಗೆಣಸು
ನೆಲೆಕೊಂಗ್	ನೆಲೆಗೆಣಸು
ಒಟೆಪಿಲಾ	ಅವರೆಕಾಯಿ

"ಭಾರತದ ಬುಡಕಟ್ಟು ಜನರು ಬಹುಬೇಗ ತಮ್ಮ ಮೂಲಭಾಷೆಯನ್ನು ಬಿಟ್ಟುಕೊಟ್ಟು ತಮ್ಮ ನೆರೆಹೊರೆಯ ಜನರ ಭಾಷೆಗಳನ್ನು ಮಾತನಾಡುತ್ತಾರೆ. ಏಕೆಂದರೆ ಪರಿಣಿತ ನುಡಿಗಳು ಹಾಗೂ ಪ್ರಚಲಿತ ಸಂವಹನ ಭಾಷೆ"[೨] ಎಂದು ಸ್ಟೇಪನ್ ಫಕ್ಸರ್ ಅಭಿಪ್ರಾಯಪಡುತ್ತಾರೆ. ಇದು ಪ್ರಸ್ತುತ ಇರುಳಿಗರ ಭಾಷೆಯಲ್ಲಿಯು ನಾವು ಗಮನಿಸಬಹುದಾಗಿದೆ.

ಸಂಸ್ಕೃತೀಕರಣ ಹಾಗೂ ಬದಲಾವಣೆಯ ಪ್ರಕ್ರಿಯೆಯನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ ಮತ್ತು ಇರುಳಿಗರು ಪ್ರಾದೇಶಿಕ ಭಾಷೆಯಲ್ಲಿಯೇ ಸಂವಹನ, ವ್ಯವಹಾರ ಹಾಗೂ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇದರ ಪರಿಣಾಮವಾಗಿ ಅವರ ಮಕ್ಕಳು ಪ್ರಾದೇಶಿಕ ಭಾಷೆಯನ್ನೇ ಹೆಚ್ಚಾಗಿ ಅವಲಂಭಿಸಿದ್ದಾರೆ. ಶಾಲೆಗಳಲ್ಲಿಯೂ ಪ್ರಾದೇಶಿಕ ಭಾಷೆಯೇ ಶಿಕ್ಷಣ ಮಾಧ್ಯಮದ ಭಾಷೆಯಾಗಿದೆ. ಈ ಸಮುದಾಯದ ಪ್ರತಿಯೊಬ್ಬರು ಪ್ರತಿ ಕಾರ್ಯಕ್ಕಾಗಿ ಬಾಹ್ಯ ಜಗತ್ತಿನೊಂದಿಗೆ ಹೆಚ್ಚು ತೆರೆದುಕೊಂಡಿದ್ದು ಸ್ಥಳೀಯ ಭಾಷೆಯನ್ನು ಅಭ್ಯಾಸಿಸುವ ಅಗತ್ಯವಿದೆ. ಹಾಗಾಗಿ ಅನಿವಾರ್ಯವಾಗಿ ತಮ್ಮ ಮೂಲಭಾಷೆಯನ್ನು ಕಳೆದುಕೊಂಡು ಪ್ರಾದೇಶಿಕ ಭಾಷೆಗೆ ಬದಲಾಗುತ್ತಿದ್ದಾರೆ.

ಅಡಿ ಟಿಪ್ಪಣಿ

೧. ಸಿದ್ಧಗಂಗಯ್ಯ ಬಿ. ಕಂಬಾಳ, ಇರುಳಿಗರ ಉಪ ಸಂಸ್ಕೃತಿ ಮಾಲೆ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು. ೩೭, ೧೯೯೩

೨. ತಿಳುವಳಿಕೆದಾರರು, ಕೆಂಚವ್ವ (೮೬), ಸರಸ್ವತಿಪುರ, ಕನಕಪುರ ತಾಲೂಕು.

೩. ನಲ್ಲೂರು ಪ್ರಸಾದ್, ಗಂಗಡಿಕಾರ ಒಕ್ಕಲಿಗರು, ಅಪ್ರಧೀನ ಪ್ರಕಾಶನ, ಬೆಂಗಳೂರು, ಪು. ೧೨೩, ೧೯೯೮.

೪. ನಾರಾಯಣ ಕಿಕ್ಕೇರಿ (ಮೂಲ), ಚಂದನ್ ಕುಮಾರ ಶರ್ಮ (ಲೇ), ಬುಡಕಟ್ಟು ಸಂಸ್ಕೃತಿ, ಅರುಹು-ಕುರುಹ ಪ್ರಕಾಶನ, ಮೈಸೂರು, ಪು. ೨, ೨೦೧೧.

೫. ತಿಳುವಳಿಕೆದಾರರು: ಮಾರಮ್ಮ (೬೫), ಕಾಡನಕುಪ್ಪೆ, ರಾಮನಗರ ತಾಲೂಕು.

೬. ಮಹಾದೇವಯ್ಯ ಸಿ, ಸಾಮಾಜಿಕ ಉಪಭಾಷೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು. ೨, ೨೦೦೦.

೭. ಯೋಜನಾ ಮಾಸಪತ್ರಿಕೆ, ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಬೆಂಗಳೂರು, ಪು.೧೪, ೨೦೧೪

೮. ಕರ್ನಾಟಕ ರಾಜ್ಯ ಗೆಜಿಟಿಯರ್, ಭಾಗ-೧, ಗೆಜಿಟಿಯರ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ಪು. ೩೪೪, ೧೯೮೯.

೯. ಕೆಂಪೇಗೌಡ ಕೆ., ಮೂಲ ದ್ರಾವಿಡ ಭಾಷೆ, ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ಮೈಸೂರು, ಪು.೧೨, ೨೦೧೧

೧೦. ಕರ್ನಾಟಕ ರಾಜ್ಯ ಗೆಜಿಟಿಯರ್ ಬೆಂಗಳೂರು ಗ್ರಾಮಾಂತರ ಜಿಲ್ಲಾ ಗೆಜಿಟಿಯರ್, ರಾಜ್ಯ ಕರ್ನಾಟಕ ಸರ್ಕಾರ ಬೆಂಗಳೂರು, ಪು. ೩೩೫-೩೫೯, ೧೯೯೮.

೧೧. ಕೆಂಪೇಗೌಡ ಕೆ., ದ್ರಾವಿಡ ಭಾಷೆಗಳು, ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ಮೈಸೂರು, ಪು.೧೨, ೨೦೧೧.

೧೨. Fuch Stephen, The Aborginal Tribes of India, Mac Millan, Delhi, P-37, 1973

ಅಧ್ಯಾಯ ಎಂಟು

ಇರುಳಿಗ ಸಮುದಾಯದ ವರ್ತಮಾನದ ಸ್ಥಿತಿಗತಿಗಳು

ಪ್ರಸ್ತುತ ಅಧ್ಯಾಯದಲ್ಲಿ ಇರುಳಿಗ ಸಮುದಾಯವು ಅನುಭವಿಸುತ್ತಿರುವ ನಾನಾ ರೀತಿಯ ಸಮಸ್ಯೆಗಳು ಅದಕ್ಕೆ ಸಂಬಂಧಿಸಿದ ಕಾರಣಗಳು, ಸರ್ಕಾರವು ನೀಡುತ್ತಿರುವ ಯೋಜನೆಗಳು ಹಾಗೂ ಸಂವಿಧಾನಾತ್ಮಕ ರಕ್ಷಣೆ, ಕಾನೂನುಗಳನ್ನು ಬಳಸಿಕೊಳ್ಳುವಲ್ಲಿ ಸಮುದಾಯದ ಪಾತ್ರ, ಸಮುದಾಯದ ಇತ್ತೀಚಿನ ಪರಿವರ್ತನೆ ಹಾದಿ, ಜಿಲ್ಲೆಯಲ್ಲಿನ ರಾಜಕೀಯ ಸ್ಥಾನಮಾನ, ಸಂಘಟನೆ, ಸಂಘ–ಸಂಸ್ಥೆಗಳ ಪಾತ್ರ ಹಾಗೂ ಇನ್ನಿತರ ವಿಷಯಗಳ ಬಗ್ಗೆ ವಿಶ್ಲೇಷಿಸಲಾಗಿದೆ.

ಜಗತ್ತಿನ ಬಹುತೇಕ ಕಡೆ ದುಡಿಯುವ ವರ್ಗ ಮತ್ತು ದುಡಿಸಿಕೊಳ್ಳುವ ವರ್ಗ ಎಂಬ ಎರಡು ವರ್ಗಗಳು ಕಂಡುಬರುತ್ತವೆ. ದುಡಿಸಿಕೊಳ್ಳುವ ವರ್ಗ ಸಮಾಜದ ಮೇಲುಸ್ತರದಲ್ಲಿದ್ದು ತಮ್ಮ ಸೇವೆ ಮಾಡುವುದಕ್ಕೆ ದುಡಿಯುವ ವರ್ಗವನ್ನು ಸೃಷ್ಟಿಸಿ ದಾಸ್ಯ ಭಾವನೆಯಿಂದ ನೋಡುವ ಪರಿಪಾಠವಿದೆ. ಆದರೆ ದುಡಿಯುವ ವರ್ಗವು ಆಧುನಿಕ ಜಾಗತೀಕರಣದ ಸಂದರ್ಭಕ್ಕೆ ಹೊಂದಿಕೊಳ್ಳದೆ ಹಿಂದಿನ ತಲೆಮಾರಿನ ದುಡಿತದ ನೀತಿಯಲ್ಲಿ ಮುಂದುವರೆಯುತ್ತಿದೆ. ಇಂತಹ ಶ್ರಮಿಕ ವರ್ಗದವರು ಸಾಮಾನ್ಯವಾಗಿ ಅನಕ್ಷರಸ್ಥರಾಗಿದ್ದಾರೆ. ಇದನ್ನು ಬಂಡವಾಳ ಮಾಡಿಕೊಂಡ ಆಳುವ; ದುಡಿಸಿಕೊಳ್ಳುವ ವರ್ಗವು ಶ್ರಮಿಕ ವರ್ಗದವರನ್ನು ಕಡಿಮೆ ಆದಾಯಕ್ಕೆ ದುಡಿಸಿಕೊಂಡು ಶೋಷಿಸುತ್ತಿರುವ ಪರಿಸ್ಥಿತಿ ಮುಂದುವರಿಯುತ್ತಿದೆ. ಜಾಗತೀಕರಣ ಮತ್ತು ಖಾಸಗೀಕರಣಗಳು ಒಮ್ಮೆಲೆ ತಮ್ಮ ವೇಷ ಬದಲಿಸಿಕೊಂಡು ಬೇರೆ ರೀತಿಯಲ್ಲಿಯೇ ಶೋಷಣೆಗೆ ನಿಂತಿರುವುದು ದುರಂತವೇ ಸರಿ. ಅಭಿವೃದ್ಧಿ, ನಗರೀಕರಣ, ನಾಗರಿಕತೆ ಎಂಬ ನಾನಾ ರೀತಿಯ ಕಬಂದಬಾಹುಗಳನ್ನು ಅವು ಚಾಚಿದ್ದು ಅದಕ್ಕೆ ಮೊದಲು ಬಲಿಯಾಗುವುದೇ ಬುಡಕಟ್ಟು ಗಿರಿಜನರು.

ಕಾಡಿನಿಂದ ಇವರನ್ನು ಬಿಡಿಸಿ ಊರಿಗೆ ಕರೆತಂದು ಸಾಮಾಜಿಕ ಜಾಲತಾಣಗಳಲ್ಲಿ ಕುಣಿಸುವ ಗೊಂಬೆಯಂತೆ ಬಳಸಿಕೊಂಡು ಹಣ ಮಾಡುವ ಪರಿಯನ್ನು ಸಮುದಾಯಗಳ ಅಭಿವೃದ್ಧಿ ಎಂದು ಹೇಳಲು ಸಾಧ್ಯವೆ?

ಬುಡಕಟ್ಟುಗಳನ್ನು ಉದ್ಧರಿಸುವುದಕ್ಕೆಂದೇ ತಾವು ಕಾರ್ಯನಿರ್ವಹಿಸುತ್ತಿರುವುದೆಂದು ಹೇಳುವ ಸ್ವಯಂಸೇವಾ ಸಂಸ್ಥೆಗಳು, ಸರ್ಕಾರ ಬುಡಕಟ್ಟುಗಳಿಗೆಂದೇ ಸೃಷ್ಟಿಸಿರುವ ವಿಶೇಷ ಅನುದಾನಿತ ಯೋಜನೆಗಳಾವೂ ಅವರನ್ನು ಅಭಿವೃದ್ಧಿಗೊಳಿಸಲು ಸಾಧ್ಯವಾಗಿಲ್ಲ.

ಸರ್ಕಾರ ರೂಪಿಸಿರುವ ಅರಣ್ಯ ಹಕ್ಕು, ಕಾನೂನು ಕಾಯ್ದೆಗಳ ನಡುವೆ ಇರುಳಿಗರ ಸ್ಥಿತಿಗತಿಗಳ ಅಧ್ಯಯನವನ್ನು ಹೇಗೆ ವಿಶ್ಲೇಷಿಸುವುದು ಎಂಬ ನೂರಾರು ವಿಷಯಗಳ ಸಂದಿಗ್ಧತೆಯ ನಡುವೆ ಈ ವಿಚಾರದ ವಿಶ್ಲೇಷಣೆಯಲ್ಲಿ ತೊಡಗಬೇಕಾಗಿದೆ.

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಧಾನವಾಗಿರುವ ಪ್ರಬಲ ಸಮುದಾಯಗಳು ಸಾರ್ವಜನಿಕ ಆಡಳಿತದಲ್ಲಿ ಸದಾ ಹಸ್ತಕ್ಷೇಪ ಮಾಡುತ್ತಿರುವುದರಿಂದ ತಳಸಮುದಾಯಗಳು ಅಭಿವೃದ್ಧಿ ಪಥದಲ್ಲಿ ಸಾಗಲು ಸಾಧ್ಯವಾಗುತ್ತಿಲ್ಲ. ಹಾಗಾಗಿಯೇ ಸರ್ಕಾರದ ಯೋಜನೆಗಳು ನಿಶ್ಚಿತವಾದ ಗುರಿಯನ್ನು ತಲುಪುವಲ್ಲಿ ವಿಫಲವಾಗುತ್ತಿವೆ. ಆರ್ಥಿಕ ಯೋಜನೆಗಳು ಮೇಲ್ವರ್ಗದ ಸಮುದಾಯಗಳಿಗೆ ದಕ್ಕಿ ತಳಸಮುದಾಯದವರು ಬಡತನ ಹಾಗೂ ನಿರುದ್ಯೋಗದಂತಹ ಸಮಸ್ಯೆಗಳಿಂದ ನರಳುವಂತೆ ಮಾಡಿದೆ. ಒಂದುವೇಳೆ ಅರ್ಹ ಫಲಾನುಭವಿಗಳಿಗೆ ಯೋಜನೆಗಳು ತಲುಪಬಹುದಾದರೂ ನಿಧಾನಗತಿ ಆಡಳಿತ ವ್ಯವಸ್ಥೆಯಿಂದ ಅಡ್ಡಿಯಾಗುವ ಸಾಧ್ಯತೆಗಳು ಹೆಚ್ಚಾಗಿವೆ.

ಬುಡಕಟ್ಟುಗಳು ತಮ್ಮ ಸ್ಥಿತಿಗತಿಗಳನ್ನು ಉತ್ತಮ ಪಡಿಸಿಕೊಳ್ಳಲು ಹಲವು ರೀತಿಯ ವ್ಯೂಹಗಳಿಂದ ಹೊರ ಸಾಗಬೇಕಾಗಿದೆ. ಮನೆಯೊಂದು ಸದಾ ನೆಮ್ಮದಿಯಿಂದಿರಬೇಕಾದರೆ ಅದರ ಸದಸ್ಯರಾದವರೆಲ್ಲರೂ ಹೇಗೆ ಪೂರಕ ಮನೋಧರ್ಮ ಉಳ್ಳವರಾಗಿರಬೇಕೊ ಹಾಗೆಯೇ ಸರ್ಕಾರದ ಆಡಳಿತಾಂಗಗಳಲ್ಲಿ ಸಕ್ರಿಯವಾಗಿರುವವರು ಸಹ ದೇಶದ ಸಂವಿಧಾನ ಮತ್ತು ಅದರ ಅಡಿಯಲ್ಲಿ ರಚಿತವಾದ ಕಾನೂನು ಕಟ್ಟಳೆಗಳಿಗೆ ಗೌರವಿಸಿ ಇಂತಹ ಸಮುದಾಯಗಳ ಏಳ್ಗೆಗೆ ದುಡಿಯುವ ಹಾಗೂ ಅಭಿವೃದ್ಧಿಗೆ ಮುನ್ನಡೆಸುವ ಮನಸ್ಥಿತಿ ಹೊಂದುವತನಕ ಇಂತಹ ಸಮುದಾಯಗಳ ಬದುಕು ಅಸಹನೀಯವೇ ಸರಿ.

ಇರುಳಿಗ ಸಮುದಾಯದ ಜನ ಇಂದಿನ ದಿನಗಳಲ್ಲಿ ಕೃಷಿ, ಕೃಷಿ ಕೂಲಿ ಹಾಗೂ ಕೃಷಿಯೇತರ ಕೂಲಿ, ಸೌದೆ ಶೇಖರಣೆ, ಬುಟ್ಟಿ ಹೆಣೆಯುವುದು ಮತ್ತು ಬಿದಿರಿನ ಸಾಮಗ್ರಿಗಳ ತಯಾರಿಕೆ ಹಾಗೂ ಮಾರಾಟ, ಪಶುಪಾಲನೆ ಮುಂತಾದ ವೃತ್ತಿಯಲ್ಲಿ ತೊಡಗಿಕೊಂಡಿದ್ದಾರೆ. ಇಷ್ಟೆಲ್ಲ ದುಡಿದರೂ ಆರ್ಥಿಕವಾಗಿ ಬಡತನದ ಬೇಗೆಯಲ್ಲಿ ಬಳಲಾಡುತ್ತಿದ್ದಾರೆ. ಕೃಷಿಯೂ ಇವರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಸಾಧ್ಯವಾಗಿಲ್ಲ. ಇದಕ್ಕೆ ಕಾರಣ ಇವರ ಒಟ್ಟಾರೆ ಭೂಹಿಡುವಳಿ ಒಣಭೂಮಿ ಹಾಗೂ ಕೃಷಿಗೆ ಯೋಗ್ಯವಲ್ಲದ ಭೂಮಿಯನ್ನು ಅವಲಂಭಿಸಿರುವುದೇ ಕಾರಣವಾಗಿದೆ. ಇವರ ಬಹುತೇಕ ಭೂಮಿಯು

ಯಾವುದೇ ನೀರಾವರಿ ಸೌಲಭ್ಯ ಪಡೆದಿರುವುದಿಲ್ಲ. ಕೇತ್ಲು ಬೇಸಾಯವನ್ನು ಆಶ್ರಯಿಸಿದ್ದ ಇರುಳಿಗರು ಅದರಿಂದಲೂ ದೂರ ಸರಿದಿದ್ದಾರೆ. ಇರುಳಿಗ ಸಮುದಾಯ ಕೃಷಿಯನ್ನು ತ್ಯಜಿಸುತ್ತಿದೆ. ಬದಲಾಗಿ ಜೀವನ ನಿರ್ವಹಣೆಗಾಗಿ ಇತರ ಕೃಷಿಕೂಲಿ, ಮರಳುಸಾಗಣೆ, ಮನೆಗೆಲಸದಂತಹ ಕೆಲಸದಲ್ಲಿ ನಿರತವಾಗಿದ್ದು ದುಡಿಮೆಗೆ ತಕ್ಕ ಪ್ರತಿಫಲ ದೊರೆಯದೆ ಆರ್ಥಿಕ ದುಸ್ಥಿತಿ ಅನುಭವಿಸುವಂತಾಗಿದೆ.

೮.೧. ಇರುಳಿಗ ಸಮುದಾಯದ ಸಮಸ್ಯೆಗಳು

ಬದುಕೇ ನಿಸರ್ಗವೆಂದು, ದೈವವೆಂದು ನಂಬಿ ಆರಾಧಿಸಿಕೊಂಡು ಬಂದ ಅರಣ್ಯವಾಸಿಗಳಾಗಿರುವ ಇರುಳಿಗರು ತಮ್ಮ ವೃತ್ತಿ ಬದುಕಿನಲ್ಲಿ ಹತ್ತು ಹಲವು ಸಮಸ್ಯೆಗಳನ್ನು ತಮ್ಮ ಸಾಮಾಜಿಕ ಹಾಗೂ ವೃತ್ತಿ ಜೀವನದಲ್ಲಿ ಅನಿವಾರ್ಯವಾಗಿ ಎದುರಿಸುತ್ತಿದ್ದಾರೆ. ಭಾರತದಂತಹ ಜನಬಾಹುಳ್ಯವುಳ್ಳ ದೇಶದಲ್ಲಿ ಶೇ. ೪೦ರಷ್ಟು ಜನ ಹಸಿವಿನಿಂದ ನರಳುತ್ತಿದ್ದಾರೆ. ಅದೆಷ್ಟೋ ಕಡೆ ನೆಲೆರಹಿತ ಜೀವನ ನಡೆಸುತ್ತಿರುವ ಬುಡಕಟ್ಟು ಜನರನ್ನು ಇಂದಿಗೂ ಕಾಣಬಹುದು. ಹೀಗೆ ಅನೇಕ ರೀತಿಯ ಸಮಸ್ಯೆಗಳ ಸರಮಾಲೆ ನಡುವೆ ಈ ಸಮುದಾಯ ತಮ್ಮ ಬದುಕನ್ನು ಸಾಗಿಸುತ್ತಿದೆ. ಮುಖ್ಯವಾಗಿ ಇರುಳಿಗರು ಅನುಭವಿಸುತ್ತಿರುವ ಸಮಸ್ಯೆಗಳು ಈ ರೀತಿಯಾಗಿವೆ.

೧. ಫಲವತ್ತಾದ ಕೃಷಿ ಭೂಮಿಯ ಸಮಸ್ಯೆ

೨ ಅರಣ್ಯ ಸಮಸ್ಯೆ

೩. ಮೂಲನಿವಾಸಿಗಳ ಹಕ್ಕುಪತ್ರ ಸಮಸ್ಯೆ

೪. ಆರ್ಥಿಕ ಸಮಸ್ಯೆ

೫. ಸಾಮಾಜಿಕ ಸಮಸ್ಯೆಗಳು

೬. ಮೂಲಭೂತ ಸೌಕರ್ಯದ ಸಮಸ್ಯೆ

೭ ಶೈಕ್ಷಣಿಕ ಸಮಸ್ಯೆ

೮. ಆರೋಗ್ಯ ಮತ್ತು ನೈರ್ಮಲ್ಯದ ಸಮಸ್ಯೆ

೯. ಇನ್ನಿತರ ಸಮಸ್ಯೆಗಳು

೧. ಕೃಷಿ ಭೂಮಿಯ ಸಮಸ್ಯೆ: ಶತಶತಮಾನಗಳಿಂದಲೂ ಯಾವುದೇ ಒಂದು ಪ್ರಭುತ್ವದ ತೆಕ್ಕೆಗೆ ಒಳಪಡದೆ ಮುಕ್ತವಾಗಿ ಅರಣ್ಯದಲ್ಲಿ ನೆಲೆಸಿದ್ದ ಇರುಳಿಗರು ಅರಣ್ಯ ಉತ್ಪನ್ನಗಳನ್ನು ತಮ್ಮ ಬದುಕಿನ ಆಸರೆಯಾಗಿ, ಬಾಳಿನ ಆಧಾರವಾಗಿ ಕಂಡುಕೊಂಡವರು. ಆಹಾರ ಸಮಸ್ಯೆ ಉಂಟಾದಾಗ ಕಾಡಿನ ಒಂದು ಭಾಗದಲ್ಲಿನ ಗಿಡಗಂಟಿ ಪೊದೆಗಳನ್ನು ಸುಟ್ಟು ಮಳೆಗಾಲದಲ್ಲಿ ನೆಲವನ್ನು ಹದಮಾಡಿ ರಾಗಿ ಮತ್ತು ಜೀವನ ನಿರ್ವಹಣೆಗೆ ಬೇಕಾದ ದವಸಧಾನ್ಯಗಳನ್ನು ಬಿತ್ತಿ ಕೇತ್ಲು ಬೇಸಾಯ ಮಾಡಿಕೊಳ್ಳುತ್ತಿದ್ದರು. ಇವರ ಕೃಷಿ ಕ್ರಮವೇ ವಿಶಿಷ್ಟ; ಒಂದು ವರ್ಷ ಬೇಸಾಯ ಮಾಡಿದ ಜಾಗದಲ್ಲಿ ಮತ್ತೊಂದು ವರ್ಷ ಬೇಸಾಯ ಮಾಡದೆ ಇನ್ನೊಂದು ಜಾಗಕ್ಕೆ ಹೋಗುವಂಥದ್ದಾಗಿತ್ತು.

"ಸುಗ್ಗಿಯ ಕಾಲದಲ್ಲಿ ಅವರು ಬೇರೆಯವರ ಭೂಮಿಯಲ್ಲಿ ಕೂಲಿ ಮಾಡಿದರೆ ಇರುಳಿಗರಿಗೆ ಬೇರೆಯವರಿಗಿಂತ ಕಡಿಮೆ ಕೂಲಿ ಕೊಡುತ್ತಿದ್ದರು. ಅದು ಕೂಡ ವಸ್ತುವಿನ ರೂಪದಲ್ಲಿ ಪಾವತಿಯಾಗುತಿತ್ತು. ಅವರು ಕೃಷಿಯಲ್ಲಿ ಸಹಕರಿಸಲಿ ಅಥವಾ ಇಲ್ಲದಿರಲಿ ಸುಗ್ಗಿಯ ನಂತರ ಭೂಮಿಯಲ್ಲಿ ಕಾಳು ಹೆಕ್ಕುವ ಹಕ್ಕು ಅವರದ್ದಾಗಿತ್ತು. ಕೆಲವರು ಬೇಟೆಯಾಡಿ ಆಹಾರ ಸಂಪಾದಿಸುತ್ತಿದ್ದರು. ಇನ್ನೂ ಕೆಲವರು ಕೀಟಗಳು, ಇಲಿ, ಹೆಗ್ಗಣಗಳನ್ನು ಮತ್ತು ಹಾವುಗಳನ್ನು, ಕೆಲವರು ಕೋತಿಗಳನ್ನು, ಕಾಳು ತೂರಿದ ಹೊಟ್ಟನ್ನು ಮತ್ತು ರೈತರು ಬೇಸಾಯ ಮಾಡಿದ ನಂತರ ಉಳಿದದ್ದನ್ನೇ ತಮ್ಮ ಆಹಾರಕ್ಕಾಗಿ ಬಳಸುತ್ತಿದ್ದರು. ಇಂದಿಗೂ ಈ ಪರಂಪರೆ ಅಲ್ಲಲ್ಲಿ ಗೋಚರಿಸುತ್ತಿದೆ"[೧].

ಕೇತ್ಲು ಬೇಸಾಯದಿಂದ ಕಾಡಿನ ನಾಶವಾಗುತ್ತದೆಂದು ಸರ್ಕಾರ ಅರಣ್ಯದ ನಿಜವಾದ ವಾರಸುದಾರರಾದ ಇವರ ಮೇಲೆ ತಮ್ಮ ಹಕ್ಕನ್ನು ಸ್ಥಾಪಿಸಿ ಕೇತ್ಲು ಬೇಸಾಯ ಪದ್ಧತಿಯನ್ನು ನಿಷೇಧಿಸಿ ಇರುಳಿಗರ ಜೀವನವನ್ನು ದುಸ್ತರಗೊಳಿಸಿತು.

ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಇರುವ ಬೆಟ್ಟ-ಗುಡ್ಡಗಳ ಇಳಿಜಾರು ಪ್ರದೇಶಗಳಲ್ಲಿ ವ್ಯವಸಾಯ ಮಾಡುತ್ತಿದ್ದ ಇವರನ್ನು ಒಕ್ಕಲೆಬ್ಬಿಸಿ ಕೃಷಿಭೂಮಿಯನ್ನು ಕಸಿದು ಸಾಗುವಾನಿ, ಅಕೇಶಿಯಾದಂತಹ ಮರಗಳನ್ನು ನೆಟ್ಟು ಇವರ ಬದುಕಿನ ಕನಸುಗಳನ್ನು ನೂಚ್ಚುನೂರು ಮಾಡಿದೆ. ಆಸ್ತಿಯ ಹಕ್ಕನ್ನು ತಮ್ಮದಾಗಿಸಿಕೊಳ್ಳುವ ಪಾರಿಪಾತವಿಲ್ಲದ ಈ ಬುಡಕಟ್ಟು ಜನರು ಕೇತ್ಲು ವ್ಯವಸಾಯ ಮಾಡುವ ಕೃಷಿಭೂಮಿಗೆ ಸರಿಯಾದ ದಾಖಲೆ ಇಲ್ಲದೆ ಇರುವುದರಿಂದ ಈ ಸಮಸ್ಯೆ ಉದ್ಭವಿಸಿದೆ.

೨. ಅರಣ್ಯ ಸಮಸ್ಯೆ: ಇರುಳಿಗರು ರಾಮನಗರ ಜಿಲ್ಲೆಯ ವ್ಯಾಪ್ತಿಯದ್ದಾರೆ. ಅರಣ್ಯದಂಚಿನ ಪ್ರದೇಶದಲ್ಲೇ ನೆಲೆಗೊಂಡಿದ್ದಾರೆ. ಅರಣ್ಯ ಎಂಬುದು ಇವರ ಜೀವನದ ಅವಿಭಾಜ್ಯ ಅಂಗವಾಗಿ ರೂಪುಗೊಂಡಿದ್ದು ಇವರಲ್ಲಿ ಬಹಳಷ್ಟು ಜನರು ಪಶುಪಾಲನೆ ಮಾಡುತ್ತ ಬಂದಿದ್ದಾರೆ. ಕೃಷಿಯಿಂದ ಹೆಚ್ಚಿನ ಆದಾಯ ಇಲ್ಲವಾದ್ದರಿಂದ ತಮ್ಮ ಉಪಜೀವನಕ್ಕಾಗಿ ಪಶುಪಾಲನೆಯನ್ನು ಅವಲಂಬಿಸಿರುವುದು ಕಂಡುಬರುತ್ತದೆ. ಆದರೆ ಪ್ರಸ್ತುತ ದಿನಗಳಲ್ಲಿ ಅರಣ್ಯ ಇಲಾಖೆಯವರು ಇವರ ಪಶುಗಳನ್ನು ಕಾಡುಗಳಲ್ಲಿ ಮೇಯಿಸುವುದಕ್ಕೆ ಬಿಡುತ್ತಿಲ್ಲ. ಅರಣ್ಯದಲ್ಲಿ ನೆಲೆಸಿದ್ದ ಇವರನ್ನು ಒಕ್ಕಲೆಬ್ಬಿಸಿ ಇವರ ಬದುಕು ಅತಂತ್ರವಾಗುವಂತೆ ಮಾಡಲಾಯಿತು.

ನಿಸರ್ಗದ ಸೂಕ್ಷ್ಮಸಂಬಂಧಗಳ ಆಹಾರ ಸರಪಳಿಯನ್ನು ಹದಗೆಡದಂತೆ ನೋಡಿಕೊಂಡು ಬಂದಿದ್ದ ಈ ಸಮುದಾಯದ ಜೀವನ ನಿರ್ವಹಣೆಗೆ ಬೇಕಾದ ಹಣ್ಣುಗಳು, ಔಷಧಿಯ ಸಸ್ಯಗಳು, ಎಲೆಕಾಂಡ ಮೂಲಗಳು ಇವುಗಳಲ್ಲದೆ ಜೇನು, ಬಿದಿರು, ಮೇಣ, ಅಂಟುವಾಳಕಾಯಿ ಇಂತಹ ಅರಣ್ಯ ಉತ್ಪನ್ನಗಳಿಂದಲೂ ಇಂದು ದೂರ ಉಳಿಯುವಂತಾಗಿದೆ. "ಅಮೆರಿಕಾದಲ್ಲಿ ವಾಷಿಂಗ್ಟನ್ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಲು ಸಿಯಾಟಲ್ ಎಂಬ ಬುಡಕಟ್ಟು ಜನಾಂಗದ ಮುಖ್ಯಸ್ಥನನ್ನು ಭೇಟಿ ಮಾಡಿ ನಿಮ್ಮ ಕಾಡನ್ನು ಕೊಂಡುಕೊಳ್ಳುತ್ತೇನೆಂದು, ಅದಕ್ಕೆ ಎಷ್ಟಾದರೂ ಹಣವನ್ನು ಕೊಡುತ್ತೇನೆಂದು ಹೇಳುತ್ತಾನೆ". ಆಗ ಆ ಬುಡಕಟ್ಟು ಜನಾಂಗದ ನಾಯಕ ಹೇಳುತ್ತಾನೆ. "ಈ ನೆಲ, ಜಲ, ಗಾಳಿ,

ಮರ, ಇವೆಲ್ಲವನ್ನು ನಾವು ದೇವರೆಂದು ಭಾವಿಸುತ್ತೇವೆ. ಅವನೆ ಇವೆಲ್ಲವನ್ನು ಕೊಟ್ಟವನು. ನಾವು ಇದನ್ನು ಕೊಂಡುಕೊಂಡಿಲ್ಲ. ಆದ್ದರಿಂದ ನಾವು ಮಾರುವುದಿಲ್ಲ"[೨] ಎಂದು ಹೇಳುತ್ತಾನೆ. ಸಚೇತನಾವಾದಿಗಳಾದ ಬುಡಕಟ್ಟುಗಳು ಅರಣ್ಯವು ನೈಸರ್ಗಿಕವಾಗಿ ತಮ್ಮನ್ನು ರಕ್ಷಿಸುವ ತಾಣವೆಂದು ನಂಬಿದ್ದವು. ಸರ್ಕಾರಗಳು ವಿವಿಧ ವಿಧಿ ನಿಯಮಗಳ ಹೆಸರಿನಲ್ಲಿ ಆ ನಂಬಿಕೆಯನ್ನು ಅಲುಗಾಡುವಂತೆ ಮಾಡುತ್ತಿವೆ.

ಬುಡಕಟ್ಟು ಸಮುದಾಯದವರು ಕಾಡನ್ನು ಆದಾಯದ ಮೂಲವಾಗಿ ಉಳಿಸಿ ಕಾಪಾಡಿಕೊಂಡು ಬಂದಿದ್ದರು. ಈಗ ಅರಣ್ಯದಲ್ಲಿ ಕಾಲಿರಿಸುವಂತಿಲ್ಲ. ಕೆಲಸ ಕಾರ್ಯಕ್ಕೆ ಹೋಗುವಂತಿಲ್ಲ. ದಿನನಿತ್ಯದ ಉರುವಲು, ಪಶುಗಳ ಮೇವಿಗೂ ಕೂಡ ಪ್ರವೇಶ ದುರ್ಲಭವಾಗಿದೆ.

೩. ಮೂಲನಿವಾಸಿಗಳ ಹಕ್ಕು ಪತ್ರದ ಸಮಸ್ಯೆ: ಭೂಮಿಯನ್ನು ನಮ್ಮ ಖಾಸಗಿ ಆಸ್ತಿ ಎಂದು ಶತಮಾನಗಳಿಂದಲೂ ಪರಿಭಾವಿಸದ ಬುಡಕಟ್ಟು ಜನ ಸಮುದಾಯವು ತಮ್ಮ ಪರಂಪರೆಯಿಂದ ರೂಢಿಸಿಕೊಂಡು ಬಂದಿದ್ದ ಶ್ರದ್ಧೆ ಮತ್ತು ನಂಬಿಕೆಗೆ ವಿರುದ್ಧವಾದ ನಡವಳಿಕೆಯನ್ನು ಮೈಗೂಡಿಸಿಕೊಳ್ಳಲೇ ಬೇಕಾದ ಪರಿಸ್ಥಿತಿ ಬಂದಿದೆ. ಬುಡಕಟ್ಟು ಸಮುದಾಯಗಳು ಅರಣ್ಯವನ್ನು ತಲೆಮಾರುಗಳಿಂದ ತಮ್ಮ ಸಾಂಪ್ರದಾಯಿಕ ಮತ್ತು ಪಾರಂಪರಿಕ ನೆಲೆಯಾಗಿ ಅನುಭವಿಸುತ್ತಾ ಬಂದಿದ್ದು, ಪರಂಪರೆ ರೂಢಿಯಂತೆ ತಾವು ಕೃಷಿ ಚಟುವಟಿಕೆಗಳಿಗೆ ಬಳಸುತ್ತಿದ್ದ ಭೂಮಿಗೆ ಬೇಲಿ ಹಾಕದೆ ಹಾಗೂ ಅದಕ್ಕೆ ಸಂಬಂಧಿಸಿದ ಅಸ್ತಿಯ ದಾಖಲೆಯನ್ನು ಸೃಷ್ಟಿಸಿಕೊಳ್ಳದೇ ಇದ್ದಿದ್ದು ಇವರು ಮಾಡಿದ ಅಪರಾಧ ಎಂಬಂತೆ ಅರಣ್ಯ ಇಲಾಖೆ ಕೃಷಿ ಭೂಮಿಗೆ ಕಲ್ಲು ಬೇಲಿ ಹಾಕಿ ಕಾನೂನಿನ ಹೆಸರಿನಲ್ಲಿ ಇರುಳಿಗರಂತಹ ಬುಡಕಟ್ಟುಗಳನ್ನು ಮೂಲ ನೆಲೆಯಿಂದ ಹೊರಹಾಕಿದೆ.

ಬ್ರಿಟಿಷ್ ವಸಾಹತುಶಾಹಿ ಅನುಸರಿಸುತ್ತಿದ್ದ ದಬ್ಬಾಳಿಕೆಯನ್ನು ಸ್ವತಂತ್ರ್ಯಾನಂತರದ ಸರ್ಕಾರಗಳು ಮುಂದುವರಿಸಿಕೊಂಡು ಬರುತ್ತಿವೆ. ಕೇಂದ್ರ ಸರ್ಕಾರವು ೨೦೦೬ರಲ್ಲಿ ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಪಾರಂಪರಿಕ ಆದಿವಾಸಿಗಳ ಅಧಿನಿಯಮವನ್ನು ಜಾರಿಗೊಳಿಸಿ ೨೦೦೮ರಲ್ಲಿ ನೀತಿ ನಿಯಮಗಳನ್ನು ರೂಪಿಸಿದೆ. ವಸಾಹತು ಧೋರಣೆಗೆ ಹೊರತಾಗಿ ದೇಶೀಯ ಪಾರಂಪರಿಕ ನೆಲೆಯನ್ನು ಗೌರವಿಸಿ ಮಾಡಿರುವ ವಿಶೇಷ ಅಧಿನಿಯಮ ಇದಾಗಿದ್ದು, ಆದಿವಾಸಿಗಳಿಗಾದ ಐತಿಹಾಸಿಕ ಅನ್ಯಾಯ ಸರಿಪಡಿಸಲು, ತಲೆತಲಾಂತರಗಳಿಂದ ಅರಣ್ಯದಲ್ಲೇ ವಾಸಿಸುತ್ತಿರುವ ಅವರ ಹಕ್ಕುಗಳನ್ನು ದಾಖಲಿಸಿದೆ. ಇದರ ಪ್ರಕಾರ ಅನುಸೂಚಿತ ಬುಡಕಟ್ಟುಗಳ ಅರಣ್ಯ ಭೂಮಿಗೆ ಹಕ್ಕುಪತ್ರ ನೀಡಲು ಈ ಅಧಿನಿಯಮ ಅವಕಾಶ ನೀಡಿದೆ. ಅಲ್ಲದೆ ಸರ್ಕಾರದ ಅಭಿವೃದ್ಧಿ ಯೋಜನೆಗಳಾದ ಕಾರ್ಖಾನೆ, ಗಣಿಗಾರಿಕೆ, ರಕ್ಷಿತಾರಣ್ಯ, ರಾಷ್ಟ್ರೀಯ ಉದ್ಯಾನಗಳಿಂದ ನಿರ್ವಸಿತರಾದ ಆದಿವಾಸಿಗಳಿಗೆ ಪರ್ಯಾಯ ನೆಲೆ ದೊರಕಿಸಲು, ಅದಕ್ಕೆ ಸಂಬಂಧಿಸಿದ ದಾಖಲೆಪತ್ರ ನೀಡುವ ಉದ್ದೇಶವನ್ನು ಈ ಕಾನೂನು ಹೊಂದಿದೆ. ಇದರ ಮತ್ತೊಂದು ಬಹುಮುಖ್ಯ ಉದ್ದೇಶವೆಂದರೆ ಹಾಡಿ ಮಟ್ಟದಲ್ಲಿನ ಗ್ರಾಮಸಭೆಗಳಿಗಿರುವ ಅಧಿಕಾರವನ್ನು ಗೌರವಿಸಿ ಅವರ ಸಾಂಪ್ರದಾಯಿಕ ಗಡಿ ವ್ಯಾಪ್ತಿಯಲ್ಲಿ ಅರಣ್ಯಗಳನ್ನು ಹಾಗೂ ವನ್ಯಜೀವಿಗಳನ್ನು

ರಕ್ಷಿಸುವ ಹೊಣೆಗಾರಿಕೆಯನ್ನು ಗ್ರಾಮ ಸಭೆಗೆ ವಹಿಸಿ ಪರಿಸರ ಅರಣ್ಯವನ್ನು ಸಂರಕ್ಷಿಸುವ ಹೊಣೆಗಾರಿಕೆಯನ್ನು ಜನಸಮುದಾಯಕ್ಕೆ ಕಾನೂನು ಬದ್ಧವಾಗಿ ವಹಿಸುವ ಮಹತ್ವದ ಅವಕಾಶ ನೀಡಿದೆ.

ಈ ಕಾನೂನಿನಂತೆ ನಮ್ಮ ರಾಜ್ಯದಲ್ಲಿನ ರಾಮನಗರ, ಚಾಮರಾಜನಗರ, ಮೈಸೂರು, ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಮತ್ತು ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹಾಡಿ ಮಟ್ಟದ ಅರಣ್ಯ ಹಕ್ಕುಗಳ ಸಮಿತಿಗಳನ್ನು ಗ್ರಾಮಪಂಚಾಯಿತಿಗಳು ರಚಿಸಿವೆ. ಉಪವಿಭಾಗ ಮತ್ತು ಜಿಲ್ಲಾಮಟ್ಟದ ಅರಣ್ಯ ಹಕ್ಕುಗಳ ಸಮಿತಿಗಳನ್ನು ರಾಜ್ಯಸರ್ಕಾರ ರಚಿಸಿದೆ. ಮೂಲನಿವಾಸಿ ಕುಟುಂಬಗಳು ಈಗಾಗಲೇ ಅರಣ್ಯಾಧಾರಿತ ಕೃಷಿಭೂಮಿಗಾಗಿ ಅರ್ಜಿ ಸಲ್ಲಿಸಿವೆ. ನಮೂನೆ ಬಿ ಮೂಲಕ ಠರಾವು ಮಾಡಿ ಪ್ರತಿ ಕುಟುಂಬಕ್ಕೆ ೧೦ ಎಕರೆ ಅರಣ್ಯಭೂಮಿ ಹಾಗೂ ವಾಸದ ನೆಲೆಗಳ ಮೇಲಿನ ಹಕ್ಕು, ಕಾಡಿನ ಕಿರು ಸಂಪನ್ಮೂಲಗಳ ಮೇಲಿನ ಹಕ್ಕು ಇತ್ಯಾದಿಗಳನ್ನು ಅರಣ್ಯ ಹಕ್ಕು ಕಾಯ್ದೆ ಗೌರವಿಸುತ್ತದೆ.

ಇಂತಹ ಕಾನೂನನ್ನು ದೇಶದ ಪ್ರಜಾಪ್ರಭುತ್ವದ ಅತ್ಯುನ್ನತ ಸಂಸ್ಥೆಯಾದ ಲೋಕಸಭೆಯು ಅನುಮೋದಿಸಿ ಜಾರಿಗೊಳಿಸುವಂತೆ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿದೆ. ಆದರೆ ಈ ಗಿರಿಜನ ಸಮುದಾಯಗಳ ದೌರ್ಭಾಗ್ಯವೆಂದರೆ ಇಂತಹ ಐತಿಹಾಸಿಕ ಕಾಯ್ದೆ ಜಾರಿಗೆ ಬಂದು ಮೂರು ವರ್ಷಗಳು ಕಳೆದರೂ ಇನ್ನು ಸಹ ಜಾರಿಯಾಗದೆ ಅರಣ್ಯದಿಂದ ಒಕ್ಕಲೆಬ್ಬಿಸುವ ಮತ್ತು ನಿರಂತರವಾಗಿ ಇವರು ಕೃಷಿ ಮಾಡುತ್ತಿದ್ದ ಅರಣ್ಯಭೂಮಿಗೆ ತಂತಿ ಬೇಲಿ ಹಾಕುವ ಕಾರ್ಯ ಮುಂದುವರೆಯುತ್ತಿದೆ. ಮೂಲನಿವಾಸಿಗಳಿಗೆ ಈ ಕಾಯ್ದೆಯ ಬಗ್ಗೆ ಪರಿಜ್ಞಾನ ಮೂಡಿಸುವ ಕೆಲಸ ನಡೆದಿಲ್ಲ. ಸಾಮೂಹಿಕ ಹಕ್ಕುಪತ್ರ ನೀಡದೆ ನಿರ್ಲಕ್ಷ್ಯ ತೋರಲಾಗುತ್ತಿದೆ. "ಈ ಕಾಯ್ದೆಯ ಬಗ್ಗೆ ಎಚ್ಚೆತ್ತ ಮೈಸೂರು ಜಿಲ್ಲೆಯ ಗಿರಿಜನ ಸಮುದಾಯ ಗ್ರಾಮ ಸಭೆಯಲ್ಲಿ ಠರಾವು ಮಾಡಿ ಕಳುಹಿಸಿದ ಅರ್ಜಿಗಳನ್ನು ಉಪವಿಭಾಗ ಅರಣ್ಯ ಸಮಿತಿ ನಿಯಮಗಳನ್ನು ಗಾಳಿಗೆ ತೂರಿ ೪೫೦೦ಕ್ಕೂ ಹೆಚ್ಚು ಅರ್ಜಿಗಳನ್ನು ತಿರಸ್ಕರಿಸಿದೆ. ಇದಕ್ಕೆ ಸಂಬಂಧಿಸಿದಂತೆ ಪುನರ್ ಮೇಲ್ಮನವಿಯನ್ನು ಸಲ್ಲಿಸುವ ಕೆಲಸದ ಹೊರತಾಗಿ ಮತ್ತೇನೂ ಮಾಡಲು ಸಾಧ್ಯವಾಗಿಲ್ಲ. ಸಂಘಟನೆಗಳ ಮೂಲಕ ಕಾಡಿನಲ್ಲೇ ಇರಲು ಇಷ್ಟಪಟ್ಟವರ ಮೇಲೆ ಅನೇಕ ನಿರ್ಬಂಧಗಳನ್ನು ಹೇರಲಾಗಿದೆ. ಅವರು ಕಾಡಿನಲ್ಲಿ ಇರಬಹುದು. ಆದರೆ ಅವರು ಜೀವನಾಧಾರವಾದ ಅರಣ್ಯದ ಸಂಪನ್ಮೂಲಗಳನ್ನು ಬಳಸುವಂತಿಲ್ಲ. ಹಣ್ಣುಗಳನ್ನು ಬಿಟ್ಟ ಮರವನ್ನು ಅವರು ದೂರನಿಂತು ಕಣ್ತುಂಬ ನೋಡಬಹುದೇ ಹೊರತು ಹಣ್ಣುಗಳನ್ನು ಕೀಳುವಂತಿಲ್ಲ, ಕೊಳದಲ್ಲಿರುವ ಮೀನುಗಳನ್ನು ನೋಡಬಹುದೇ ಹೊರತು ಅವುಗಳನ್ನು ಹಿಡಿದು ಆಹಾರವಾಗಿ ಬಳಸುವಂತಿಲ್ಲ. ಜೇನನ್ನು ನೋಡಬಹುದೇ ಹೊರತು ಇವರಿಗೆ ಅದನ್ನು ಕಿತ್ತು ಸವಿಯುವ ಸೌಭಾಗ್ಯವಿಲ್ಲ."[೩] ಅರಣ್ಯ ಕಾಯ್ದೆ ಬಡ ಬುಡಕಟ್ಟು ಗಿರಿಜನರ ಮೇಲೆ ಅರಣ್ಯರೋಧನ ನ್ಯಾಯವನ್ನು ಹೇರಿದೆ ಎಂದರೆ ಉತ್ಪ್ರೇಕ್ಷೆಯಲ್ಲ. ಇದಕ್ಕೆ ತಜಾ ಉದಾಹರಣೆ ಎಂಬಂತೆ ರಾಮನಗರ ಜಿಲ್ಲೆಯ ವ್ಯಾಪ್ತಿಯ ಕನಕಪುರ ತಾಲೂಕಿನ ಅರ್ಕಾವತಿ ಅರಣ್ಯ ಪ್ರದೇಶದಲ್ಲಿನ ಶಿವನಂಕೇಶ್ವರ ಅರಣ್ಯ ಪ್ರದೇಶ, ಅಚ್ಚಲು ಸಾತನೂರು ಹಾಗೂ ಸೋಲಿಗೇರಿ ಪ್ರದೇಶಗಳಲ್ಲಿ ಗಿರಿಜನರ ಭೂಮಿಗೆ ಅರಣ್ಯಾಧಿಕಾರಿಗಳು ಬೇಲಿ ಹಾಕುವ ಕೆಲಸ ನಡೆಸಿದಾಗ ಸ್ಥಳೀಯ ಬುಡಕಟ್ಟುಗಳ ಪ್ರತಿಭಟನೆಯ ಫಲದಿಂದಾಗಿ ಬೇಲಿ ಹಾಕಿ ಒಕ್ಕಲೆಬ್ಬಿಸುವ ಕಾರ್ಯ ತಾಕ್ಕಾಲಿಕವಾಗಿ ನಿಂತಿದೆ.

ಅರಣ್ಯ ಹಕ್ಕು ಕಾಯ್ದೆ ಜಾರಿಗೊಳಿಸಲು ಇರುವ ತೊಡಕುಗಳಾವುವು? ಈ ಕಾಯ್ದೆ ಜಾರಿಯಾಗದಂತೆ ತಡೆಯಲು ಕಾರಣವೇನು ಎಂಬುದು ತಿಳಿಯದಂತಾಗಿದೆ.

೪. ಆರ್ಥಿಕ ಸಮಸ್ಯೆ : ಪಾರಂಪರಿಕ ವೃತ್ತಿ ಮಾರ್ಗವನ್ನು ನಂಬಿದ ಇರುಳಿಗ ಸಮುದಾಯಕ್ಕೆ ಹಿಂದೆ ಅನೇಕ ರೀತಿಯ ದುಡಿಯುವ ಮಾರ್ಗಗಳಿದ್ದವು. ಅರಣ್ಯ ಪ್ರದೇಶದಲ್ಲಿ ವಾಸಿಸುತ್ತಿದ್ದು, ಇವರು ಅರಣ್ಯ ಉತ್ಪನ್ನಗಳನ್ನೇ ನಂಬಿ ಬದುಕು ಸಾಗಿಸುತ್ತಿದ್ದರು. ಈ ಪ್ರದೇಶದಲ್ಲಿ ದೊರೆಯುತ್ತಿದ್ದ ನೆಲ್ಲಿಕಾಯಿ, ಅಂಟುವಾಳ, ಮಾಕಳಿಬೇರು, ಜೇನು, ಸೀಗೆಕಾಯಿ ಇತ್ಯಾದಿಗಳನ್ನು ಶೇಖರಿಸಿ ತಮಗೆ ಬೇಕಾದಷ್ಟನ್ನು ಉಪಯೋಗಿಸಿ ಹೆಚ್ಚಾದ ಅಲ್ಪ ಸ್ವಲ್ಪ ವಸ್ತಗಳನ್ನು ಮಾರಾಟ ಮಾಡಿ ಜೀವನ ಮಾಡುತ್ತಿದ್ದರು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಸರ್ಕಾರವು ಅರಣ್ಯ ಉತ್ಪನ್ನಗಳನ್ನು ಗುತ್ತಿಗೆಗೆ ವಹಿಸಿದ್ದು ಇದರಿಂದ ಅವಕಾಶ ಮತ್ತು ಆರ್ಥಿಕತೆಯ ಮೇಲೆ ನೇರ ಪರಿಣಾಮ ಬೀರಿದೆ. ಹಂಚಿಕಡ್ಡಿ ಹಾಗೂ ಈಚಲು ಹುಲ್ಲು ಶೇಖರಿಸಿ ಕಸಪೊರಕೆ ತಯಾರಿಸುವ ಕೆಲಸವು ಸಹ ಗುತ್ತಿಗೆದಾರರ ಪಾಲಾಗಿದ್ದು, ಇದರಿಂದ ಬಹಳಷ್ಟು ಮಹಿಳೆಯರಿಗೆ ಬರುತ್ತಿದ್ದ ಸಂಪಾದನೆಯ ಮೂಲವು ಇಲ್ಲದಂತಾಗಿದೆ. ಉಳಿದಂತೆ ಬಿದಿರಿನಿಂದ ತಯಾರಾಗುತ್ತಿದ್ದ ಜಿಲ್ಲೆಯ ರೇಷ್ಮೆ ಕೃಷಿಗೆ ಪೂರಕವಾಗಿದ್ದ ಚಂದ್ರಿಕೆ, ರೇಷ್ಮೆ ಹುಳುವಿನ ತಟ್ಟೆ, ಸೊಪ್ಪು ಸಂಗ್ರಹಿಸಲು ಬೇಕಾದ ಮೂದು, ಮೊರ ಇತ್ಯಾದಿ ವಸ್ತುಗಳನ್ನು ತಯಾರಿಸಿ ಇರುಳಿಗರು ಮಾರಾಟ ಮಾಡುತ್ತಿದ್ದರು. ಇದಕ್ಕೂ ಅರಣ್ಯ ಇಲಾಖೆಯ ಕಾನೂನು ಹಾಗೂ ರೇಷ್ಮೆ ಇಲಾಖೆಯಲ್ಲಿ ಉಂಟಾದ ಹೊಸ ರೀತಿಯ ರೇಷ್ಮೆ ಸಾಕಾಣಿಕೆ ತಂತ್ರಜ್ಞಾನದಿಂದಾಗಿ ಈ ವಸ್ತುಗಳ ಬೇಡಿಕೆ ಕುಂಠಿತಗೊಂಡಿದೆ. ಇದು ಸಹ ಇರುಳಿಗರ ಆರ್ಥಿಕ ಹಿನ್ನಡೆಗೆ ಕಾರಣವಾಗಿದೆ.

ಇರುಳಿಗರು ಮೂಲತಃ ಕೇತ್ಲು ಬೇಸಾಯ ಮತ್ತು ಬೇಟೆ ವೃತ್ತಿಯನ್ನವಲಂಭಿಸಿದವರು. "ಭಾರತದಲ್ಲಿ ಶೇ. ೬೫ರಷ್ಟು ಜನರು ಪ್ರಾಥಮಿಕ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ"[೪] ಪ್ರಸ್ತುತ ಜಿಲ್ಲೆಯಲ್ಲಿ ಶೇ. ೪೯ರಷ್ಟು ಇರುಳಿಗರು ಕೃಷಿಕೂಲಿಗಳಾಗಿದ್ದಾರೆ. ಸಣ್ಣ ಪ್ರಮಾಣದಲ್ಲಿ ಕೃಷಿ ಹಾಗೂ ಬೃಹತ್ ಪ್ರಮಾಣದಲ್ಲಿ ಕೃಷಿಕೂಲಿ ಮತ್ತು ಕೃಷಿಯೇತರ ಕೂಲಿಗಳಾಗಿ ಕೆಲಸ ಮಾಡುತ್ತಿದ್ದರೂ ಸಹ ಇರುಳಿಗರ ಆರ್ಥಿಕತೆ ಅಭಿವೃದಿಗೊಂಡಿಲ್ಲ. ಇದಕ್ಕೆ ಹತ್ತು ಹಲವು ಕಾರಣಗಳು ಇವೆ.

ಕೃಷಿಯನ್ನು ಅವಲಂಬಿಸಿರುವ ಇರುಳಿಗರಲ್ಲಿ ಬಹುಪಾಲು ಜನರಿಗೆ ಸ್ವಂತ ಸಾಗುವಳಿ ಭೂಮಿ ಇಲ್ಲ. ದೊಡ್ಡ ಹಿಡುವಳಿ ಹೊಂದಿರುವ ಭೂಮಾಲೀಕರ ಬಳಿ ಗುತ್ತಿಗೆಗೆ ಅಥವಾ ಪಾಲಿಗಾಗಿ ಭೂಮಿ ಪಡೆದು ಕೃಷಿ ಮಾಡಬೇಕಿದೆ. ಇಂದಿನ ಆಧುನಿಕ ಕೃಷಿ ದುಬಾರಿಯದಾಗಿದ್ದು ಅದರ ಎಲ್ಲಾ ಖರ್ಚು ವೆಚ್ಚಗಳನ್ನು ನಿರ್ವಹಿಸಲು ಸಾಲದ ಮೊರೆ ಹೋಗಬೇಕಾಗುತ್ತದೆ. ಸಾಲದ ಹಣವನ್ನು ಬಡ್ಡಿಸಮೇತ ಮರುಪಾವತಿ ಮಾಡುವುದು ಹಾಗೂ ಬಂದ ಫಸಲಿನಲ್ಲಿ ಅರ್ಧ ಭಾಗವನ್ನು ಭೂಮಾಲೀಕರಿಗೆ ನೀಡಬೇಕಾಗಿರುತ್ತದೆ. ಮಳೆಯಾಶ್ರಿತ ಭೂಮಿಯಾಗಿರುವುದರಿಂದ ಮಳೆ ಬಂದರೆ ಬೆಳೆ ಇಲ್ಲದಿದ್ದರೆ ಇಲ್ಲ ಎಂಬ ಸ್ಥಿತಿ ಇದೆ. ಆಧುನಿಕ ಬೇಸಾಯದ ಕೌಶಲ್ಯವಾಗಲಿ, ತಂತ್ರಜ್ಞಾನದ ಜ್ಞಾನವಾಗಲಿ ಇವರಿಗೆ ದೊರೆಯುವುದಂತು ದೂರದ ಮಾತೇ ಸರಿ. ಹೀಗಾಗಿ ಇವರ ಆರ್ಥಿಕ ಪರಿಸ್ಥಿತಿ ತುಂಬಾ ಶೋಚನೀಯ

ವಾಗಿದೆ. ಇವರಲ್ಲಿ ಬಹಳಷ್ಟು ಜನರು ಪಶುಪಾಲನೆಯನ್ನು ಉಪಕಸುಬಾಗಿ ಮಾಡುತ್ತಿದ್ದು ಪಶುಪಾಲನೆಗೆ ಅಗತ್ಯವಾಗಿ ಬೇಕಾದ ಮೇವು ಹಾಗೂ ಮೇಯಿಸಲು ಬೇಕಾದ ಭೂಮಿಯು ಇಲ್ಲ. ಅರಣ್ಯ ಪ್ರದೇಶಕ್ಕೆ ಜಾನುವಾರುಗಳು ಹೋಗುವಂತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಹೈನುಗಾರಿಕೆಯಿಂದ ಹಣ ಗಳಿಸುವ ಕಾರ್ಯಕ್ಕೂ ಸಹ ಅಡ್ಡಿಯುಂಟಾಗಿದೆ. ಹೀಗಾಗಿ ಪಶುಪಾಲನೆಯನ್ನು ಕೂಡ ತೊರೆಯಬೇಕಾದ ಅನಿವಾರ್ಯತೆ ಇರುಳಿಗರಿಗೆ ಒದಗಿದೆ.

ಸರ್ಕಾರಗಳು ಇವರಷ್ಟಕ್ಕೆ ಇವರನ್ನು ಬಿಡದೆ ಇವರನ್ನು ಒಕ್ಕಲೆಬ್ಬಿಸಿ ಆ ಸ್ಥಳಗಳನ್ನು ಬಹುರಾಷ್ಟ್ರೀಯ ಕಂಪನಿಗಳು ಅಥವಾ ಬಂಡವಾಳಗಾರರ ಹಿಡಿತಕ್ಕೆ ಕೊಡಲಾಗುತ್ತಿದೆ. ಇದರಿಂದ ಇರುಳಿಗರು ತಮ್ಮ ನೆಲೆಯನ್ನು ಕಳೆದುಕೊಂಡು ಮತ್ತಷ್ಟು ಸಂಕಟಕ್ಕೆ ಈಡಾಗುವಂತಾಗಿದೆ. ಆಧುನಿಕ ಉದ್ಯೋಗಕ್ಕೆ ಬೇಕಾದ ಕೌಶಲ್ಯವಾಗಲಿ, ಶಿಕ್ಷಣವಾಗಲಿ ಇವರಿಗಿಲ್ಲ. ಜೀವನ ನಿರ್ವಹಣೆಗಾಗಿ ಇರುಳಿಗ ಕುಟುಂಬಗಳು ನಗರದ ಸುತ್ತಮುತ್ತಲಿನ ಭೂಮಾಲೀಕರ ಫಾರಂ ಹೌಸ್‌ಗಳಲ್ಲಿ ಜೀತಕ್ಕೆ ಸೇರಿಕೊಂಡಿರುವ ಹಲವು ನಿರ್ದಶನಗಳು ದೊರೆಯುತ್ತವೆ.

೫. ಸಾಮಾಜಿಕ ಸಮಸ್ಯೆಗಳು: ಬಾಲ್ಯವಿವಾಹ ಸಾಮಾಜಿಕ ಅಪರಾಧವಾಗಿದೆ. ಹೀಗಿದ್ದೂ ಬಹುತೇಕ ಹಳ್ಳಿಗಾಡಿನ ತಳ ಸಮುದಾಯಗಳು ಬಾಲ್ಯ ವಿವಾಹವನ್ನು ಮಾಡುತ್ತಿವೆ. ಅದರಲ್ಲೂ ಇರುಳಿಗರಂತಹ ಬುಡಕಟ್ಟುಗಳು ಬಾಲ್ಯ ವಿವಾಹ ಪದ್ಧತಿಯನ್ನು ಇನ್ನೂ ಜೀವಂತ ಉಳಿಸಿಕೊಂಡು ಬಂದಿವೆ. ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರತಿವರ್ಷ ಈ ಸಮುದಾಯ ಮಕ್ಕಳ ಬಾಲ್ಯವಿವಾಹದ ಬಗ್ಗೆ ಹಲವು ಪ್ರಕರಣಗಳು ಬಾಲನ್ಯಾಯ ಮಂಡಳಿಯಲ್ಲಿ ದಾಖಲಾಗುತ್ತಿರುವುದು ಇವರಲ್ಲಿ ಇನ್ನು ಬಾಲ್ಯವಿವಾಹದ ಜೀವಂತ ಇರುವುದನ್ನು ತೋರಿಸುತ್ತದೆ. ೨೦೧೪ರಲ್ಲಿ ದೇಶದ ವಿವಿಧ ರಾಜ್ಯಗಳಲ್ಲಿನ ವರದಿಯಾದ ಪ್ರಕರಣಗಳಲ್ಲಿ ದಕ್ಷಿಣ ಭಾರತದಲ್ಲಿಯೇ, "ಕರ್ನಾಟಕ ಬಾಲ್ಯವಿವಾಹದಲ್ಲಿ ಎರಡನೇ ಸ್ಥಾನದಲ್ಲಿದ್ದು ಶೇ. ೪೪ರಷ್ಟು ಬಾಲ್ಯವಿವಾಹಗಳ ಪ್ರಮಾಣವಿದೆ ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ವರದಿ ಮಾಡಿದೆ"[೫]. ಬಹುಶಃ ಇಂತಹ ವರದಿಗಳಿಗೆ ಪೂರಕ ಎಂಬಂತೆ ಇರುಳಿಗ ಸಮುದಾಯದಲ್ಲಿ ಬಾಲ್ಯವಿವಾಹ ನಡೆಯುತ್ತಿವೆ. ಇದಕ್ಕೆ ಮೂಢನಂಬಿಕೆ ಮತ್ತು ಅನಕ್ಷರತೆ, ಬಾಲ್ಯವಿವಾಹದ ಘೋರ ಪರಿಣಾಮದ ಬಗ್ಗೆ ಅರಿವು ಇಲ್ಲದಿರುವುದು ಕಾರಣವಾಗಿದೆ.

ಹಾಗೆಯೇ ಇರುಳಿಗರು ಅನ್ಯ ಸಮುದಾಯಗಳ ಜೊತೆಯಲ್ಲಿ ಬೇರೆಯುವುದು ತುಂಬಾ ಕಡಿಮೆ. ಕಾರಣ ಇವರ ಪ್ರತ್ಯೇಕವಾದ ನೆಲೆಗಳು ಇರುಳಿಗರನ್ನು ಕಾಡುಪೂಜಾರಿಗಳು ಎಂದು ಕರೆಯುವುರಾದರೂ ಸಾಮಾಜಿಕವಾಗಿ ತುಂಬಾ ಕೀಳಾಗಿಯೇ ಕಾಣಲಾಗುತ್ತದೆ.

೬. ಮೂಲಭೂತ ಸೌಕರ್ಯಗಳ ಸಮಸ್ಯೆ: ಇರುಳಿಗ ಸಮುದಾಯದ ಜನರು ಇಂದಿಗೂ ಮೂಲಭೂತ ಸೌಲಭ್ಯದ ವಿಷಯದಲ್ಲಿ ತೀರಾ ಹಿಂದುಳಿದವರಾಗಿದ್ದು ಬವಣೆಯ ಬದುಕನ್ನು ಸಾಗಿಸುತ್ತಿದ್ದಾರೆ. ತಾವು ವಾಸಿಸುವ ಮನೆಗಳಲ್ಲಿ ಒಂದು ಕುಟುಂಬದ ಜೀವನಕ್ಕೆ ಬೇಕಾದಂತಹ ಅಡುಗೆಮನೆ, ಸ್ನಾನದ ಮನೆ, ಮಲಗುವ ಕೊಠಡಿ ಇಲ್ಲ. ಇವರು ಇಂದಿಗೂ ಶೌಚಾಲಯಕ್ಕೆ ಬಯಲನ್ನು ಬಳಸುತ್ತಿರುವುದು ಕ್ಷೇತ್ರ

ಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ. ಸರ್ಕಾರವು ಇವರಿಗಾಗಿಯೇ ನಿರ್ಮಾಣ ಮಾಡಿಕೊಟ್ಟಿರುವ ಆಶ್ರಯ, ಅಂಬೇಡ್ಕರ್, ಯೋಜನಾಶ್ರಿತ ವಸತಿಗೃಹಗಳು ಇವರ ಮೂಲ ವಸತಿಗಳಿಗೆ ಹೊಂದುವುದಿಲ್ಲ. ಈ ಸಮುದಾಯದ ಜನರು ತಮ್ಮ ಮೂಲ ವಸತಿಗಳಿಗೆ ಹೊಂದದಿದ್ದರೂ ಸಹ ಅನಿವಾರ್ಯವಾಗಿ ಸರ್ಕಾರ ನಿರ್ಮಿಸಿಕೊಡುವ ಮನೆಗಳಲ್ಲಿ ವಾಸಿಸುತ್ತಿವೆ. ಅಸಮರ್ಪಕವಾದ ಕಳಪೆ ಕಟ್ಟಡದಿಂದ ಕೂಡಿದ ಈ ಮನೆಗಳು ಮಳೆಗಾಲದಲ್ಲಿ ಸೋರುತ್ತವೆ. ಇಂತಹ ವಸತಿಯಿಂದಾಗಿ ಇರುಳಿಗರು ಬಹಳಷ್ಟು ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ.

ಇವರು ವಾಸ ಮಾಡುವ ಕಾಲೊನಿಗಳ ಅಥವಾ ಹಳ್ಳಿಗಳ ಪರಿಸ್ಥಿತಿಯಂತು ತುಂಬಾ ಶೋಚನೀಯ. ಮಾನಗಲ್ಲು, ಚಿಕ್ಕಸೊಲಿಗೆರೆ, ರಾಮಕಲ್ಲುಪಾಳ್ಯದಲ್ಲಿ ಇವರು ವಾಸ ಮಾಡುವ ಹಳ್ಳಿಗಳಿಗೆ ಯಾವುದೇ ರೀತಿಯ ರಸ್ತೆ ಸಂಪರ್ಕವಿಲ್ಲ. ಕಾಡಿನ ಮಧ್ಯದಲ್ಲೇ ಸಾಗಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ. ಇವು ಕೇವಲ ಮಾದರಿಗಾಗಿ ಮಾತ್ರ ಉಲ್ಲೇಖಿಸಲಾಗಿದೆ. ಇಂತಹ ಹತ್ತು ಹಲವು ಮೂಲಭೂತ ಸೌಕರ್ಯ ವಂಚಿತ ಜನವಸತಿ ಪ್ರದೇಶಗಳು ಇವೆ. ತಟ್ಟೆಕೆರೆ ಇರುಳಿಗರ ಕಾಲೋನಿ; ಮಾಗಡಿ ತಾಲೂಕಿನಲ್ಲಿ ಇವರು ವಾಸ ಮಾಡುವ ಕಾಲೋನಿಗೆ ಅಡ್ಡಲಾಗಿ ಇಟ್ಟಿಗೆ ತಯಾರಿಸುವ ಕಾರ್ಖಾನೆಗಳಿವೆ. ಇರುಳಿಗರು ಓಡಾಡುವ ರಸ್ತೆಯಲ್ಲಿ ಮಣ್ಣಿಗಾಗಿ ದೊಡ್ಡ ದೊಡ್ಡ ಗುಂಡಿಗಳನ್ನು ತೆಗೆಯಲಾಗಿದೆ. ರಸ್ತೆ ಸಂಪರ್ಕ, ಕುಡಿಯುವ ನೀರಿನ ಕೊರತೆಯಿಂದಾಗಿ ನಿತ್ಯ ಬದುಕಿನಲ್ಲಿ ಇರುಳಿಗರು ನರಕಯಾತನೆ ಅನುಭವಿಸು ವಂತಾಗಿದೆ.

ರಸ್ತೆಗಳೇ ಇರದ ಗ್ರಾಮಗಳಿಗೆ ವಿದ್ಯುತ್ ಸೌಕರ್ಯದ ಬಗ್ಗೆ ಮಾತನಾಡುವಂತಿಲ್ಲ. ಇರುಳಿಗರ ಬಹುತೇಕ ಕುಟುಂಬಗಳು ವಿದ್ಯುತ್ ಸೌಲಭ್ಯದಿಂದಲೂ ವಂಚಿತವಾಗಿವೆ. ಭಾಗ್ಯಜ್ಯೋತಿ ಯೋಜನೆ ಅಡಿಯಲ್ಲಿ ಕೆಲವು ಕುಟುಂಬಗಳು ವಿದ್ಯುತ್ ಸೌಲಭ್ಯ ಪಡೆದಿವೆಯಾದರೂ ವಿದ್ಯುತ್ ಶುಲ್ಕ ಕಟ್ಟಲಾಗದೆ ವಿದ್ಯುತ್ ಸಂಪರ್ಕವನ್ನು ಕಳೆದುಕೊಂಡು ಕತ್ತಲೆಯಲ್ಲಿಯೇ ಜೀವನ ಸಾಗಿಸುತ್ತಿವೆ.

ಇನ್ನು ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾದ ಅನ್ನಭಾಗ್ಯ ಯೋಜನೆ ಹಾಗೂ ಕೇಂದ್ರ ಸರ್ಕಾರದ "ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ೨೦೧೩, ಮಾನವನ ಜೀವನಕ್ಕೆ ಅವಶ್ಯವಾದ ಆಹಾರ ಮತ್ತು ಪೌಷ್ಠಿಕ ಭದ್ರತೆಯನ್ನು ಕಾಲಕಾಲಕ್ಕೆ ನೀಡುವುದು, ಜನತೆಗೆ ಉತ್ತಮ ಗುಣಮಟ್ಟದ ಬೆಲೆಯಲ್ಲಿ ಆಹಾರ ನೀಡುವ ಭರವಸೆ ಹಾಗೂ ಗೌರವ ಘನತೆಯಿಂದ ಬಾಳುವಂತೆ ಮಾಡುವುದು ಈ ಯೋಜನೆಗಳು ಮುಖ್ಯ ಆಶಯವಾಗಿದ್ದು"[೬] ಇಂತಹ ಯೋಜನೆಯ ಉಪಯುಕ್ತತೆ ಯನ್ನು ಪಡೆಯುವಲ್ಲಿ ಇರುಳಿಗ ಸಮುದಾಯದ ಜನರು ವಿಫಲರಾಗಿದ್ದಾರೆ. ಜಿಲ್ಲೆಯ ವ್ಯಾಪ್ತಿಯಲ್ಲಿ ಕೇವಲ ಶೇಕಡ ೬೦ ಕುಟುಂಬಗಳು ಮಾತ್ರ ಪಡಿತರ ಚೀಟಿ ಹೊಂದಿವೆ. ಇನ್ನೂ ಶೇಕಡ ೪೦ರಷ್ಟು ಕುಟುಂಬಗಳು ಪಡಿತರ ಚೀಟಿ ಹೊಂದಿಲ್ಲ. ಪಡಿತರ ಚೀಟಿ ಹೊಂದಿರದ ಬಗ್ಗೆ ಕ್ಷೇತ್ರಕಾರ್ಯದಲ್ಲಿ ಸಮುದಾಯದ ಕುಟುಂಬಗಳನ್ನು ಪ್ರಶ್ನಿಸಲಾಗಿ ಸರ್ಕಾರವು ಹೊಸದಾಗಿ ಜಾರಿ ತಂದಿರುವ ಇ-ಕಂಪ್ಯೂಟರ್ ಮಾದರಿಯ ಪಡಿತರಚೀಟಿ ವ್ಯವಸ್ಥೆಯು ಅಕ್ಷರ ಜ್ಞಾನವಿಲ್ಲದ ಬುಡಕಟ್ಟು ಸಮುದಾಯಕ್ಕೆ ಪಡೆಯಲು ಆಗಿಲ್ಲ.

ಪಡಿತರ ಚೀಟಿ ಹೊಂದಿಲ್ಲದವರ ಬವಣೆ ಒಂದು ರೀತಿಯಾದರೆ ಆಹಾರ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಬವಣೆ ಮತ್ತೊಂದು ರೀತಿ. ಬಡತನ ರೇಖೆಗಿಂತ ಕೆಳಗಿರುವವರಿಗೆ ನೀಡಬೇಕಾದ(ಬಿಪಿಎಲ್) ಕಾರ್ಡಿನ ಬದಲಾಗಿ ಬಡತನ ರೇಖೆಗಿಂತ ಮೇಲಿರುವ ಕಾರ್ಡುಗಳ ವಿತರಣೆ ಮಾಡಿರುವುದು(ಎಪಿಎಲ್) ಆಹಾರ ಪಡೆಯಲು ಸಾಧ್ಯವಾಗದಂತಹ ಸನ್ನಿವೇಶಗಳನ್ನು ಸೃಷ್ಟಿಸಿವೆ.

ಐದಾರು ಗ್ರಾಮಗಳಿಗೆ ಒಂದು ನ್ಯಾಯಬೆಲೆ ಅಂಗಡಿಯನ್ನು ತೆರೆದಿರುವುದರಿಂದ ದೂರದ ಪ್ರದೇಶಕ್ಕೆ ಹೋಗಿ ಪಡಿತರ ಪದಾರ್ಥ ಪಡೆಯಲು ಹರಸಾಹಸ ಪಡಬೇಕಾಗಿದೆ.

ಸರ್ಕಾರವು ಬುಡಕಟ್ಟು ಜನರಿಗಾಗಿ ವಿವಿಧ ಯೋಜನೆ ರೂಪಿಸಿದೆಯಾದರೂ ಆ ಯೋಜನೆಗಳ ಬಗ್ಗೆ ವಿವರಗಳು ತಿಳಿಯಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಇರುಳಿಗರು ಬದುಕುತ್ತಿದ್ದಾರೆ.

೬. **ಶೈಕ್ಷಣಿಕ ಸಮಸ್ಯೆ :** ಇರುಳಿಗ ಸಮುದಾಯದ ಸಾಕ್ಷರತೆಯ ಪ್ರಮಾಣವನ್ನು ಜಿಲ್ಲೆಯಲ್ಲಿ ಗಮನಿಸಿದಾಗ ಪುರುಷರ ಲಿಂಗವಾರು ಸಾಕ್ಷರತಾ ಪ್ರಮಾಣ ಶೇ. ೫೧.೯ರಷ್ಟು ಮತ್ತು ಮಹಿಳೆಯರ ಪ್ರಮಾಣ ಶೇ. ೪೮.೬೧ರಷ್ಟು ಮಾತ್ರ. ಸಮುದಾಯದ ಜನಸಂಖ್ಯೆಯ ಹೆಚ್ಚಿನ ಜನರು ಇಂದಿಗೂ ಅನಕ್ಷರಸ್ಥರಾಗಿಯೇ ಉಳಿದಿದ್ದಾರೆ, ಓದಿನ ಬಗೆಗೆ ಆಸಕ್ತಿ ಇದ್ದರೂ ಸೌಲಭ್ಯಗಳ ಕೊರತೆ ಹಾಗೂ ಇವರ ಆರ್ಥಿಕ ಪರಿಸ್ಥಿತಿಯು ಬಹುತೇಕ ಇವರನ್ನು ಅಕ್ಷರ ಜ್ಞಾನದಿಂದ ವಂಚಿತರನ್ನಾಗಿ ಮಾಡಿದೆ.

ಇದಕ್ಕೆ ಕಾರಣ ಬಹುತೇಕ ಸಮುದಾಯದ ವಾಸಗಳು ಅರಣ್ಯದ ಅಂಚಿನಲ್ಲಿದ್ದು, ಇವರ ವಾಸ ಸ್ಥಳಕ್ಕೆ ರಸ್ತೆ ಸಂಪರ್ಕ ಹಾಗೂ ಶಾಲೆಗಳು ದೂರದಲ್ಲಿದ್ದು ಅಕ್ಷರ ಕಲಿಕೆಗೆ ತೊಡಕಾಗಿದೆ. ಬಹುತೇಕರು ತಮ್ಮ ಮಕ್ಕಳನ್ನು ಆಶ್ರಮ ಶಾಲೆಗಳಿಗೆ ಹಾಗೂ ಗಿರಿಜನ ವಿದ್ಯಾರ್ಥಿ ನಿಲಯಗಳಿಗೆ ದಾಖಲು ಮಾಡಲು ಒಪ್ಪದೆ ತಮ್ಮ ಮಕ್ಕಳು ತಮ್ಮ ಬಳಿಯಲ್ಲಿಯೇ ಇರಬೇಕೆಂಬ ಆಕಾಂಕ್ಷೆಯು ಸಹ ಇವರ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯನ್ನುಂಟು ಮಾಡುತ್ತಿದೆ. ಪ್ರಾಥಮಿಕ ಶಾಲೆಗಳು ಅಲ್ಲಲ್ಲಿ ಇದ್ದರೂ ಇವೆಲ್ಲವೂ ಸಾಮಾನ್ಯವಾಗಿ ಏಕೋಪಾಧ್ಯಾಯ ಶಾಲೆಗಳಾಗಿದ್ದು ಶಿಕ್ಷಕರು ಮತ್ತಾವುದೋ ಇಲಾಖೆಯ ಕೆಲಸ ನಿಮಿತ್ತ ಅಥವಾ ವೈಯಕ್ತಿಕ ರಜೆಯ ಮೇಲೆ ತೆರಳಿದರೆ ಶಾಲೆಯಲ್ಲಿನ ಶೈಕ್ಷಣಿಕ ವ್ಯವಸ್ಥೆ ನಿಂತಂತೆ. ಪ್ರಾಥಮಿಕ ಶಾಲೆಯನ್ನು ಪೂರೈಸಿದ ಮಕ್ಕಳು ಪ್ರೌಢಶಾಲೆ ವ್ಯಾಸಂಗಕ್ಕೆ ದೂರದ ಊರುಗಳಿಗೆ ಹೋಗಿ ಬರಬೇಕಾಗಿದ್ದು ಈ ಹಂತದಲ್ಲಿ ಮಕ್ಕಳು ಶಾಲೆಗೆ ಹೋಗದೆ ತಪ್ಪಿಸಿಕೊಳ್ಳುವ ಪರಿಪಾಠವನ್ನು ಬೆಳೆಸಿಕೊಂಡು ಮಧ್ಯದಲ್ಲಿ ಶಾಲೆಬಿಡುವ ಪ್ರಸಂಗಗಳು ಅಧಿಕವಾಗಿ ಕಂಡುಬರುತ್ತದೆ. ತಮ್ಮ ಮಕ್ಕಳು ನಿಯಮಿತವಾಗಿ ಶಾಲೆಗೆ ತೆರಳುತ್ತಿದ್ದಾರೆಯೇ ಇಲ್ಲವೋ ಎಂಬ ಉಸ್ತುವಾರಿಯನ್ನು ಪೋಷಕರು ಮಾಡುವುದಿಲ್ಲ. ಅನಿವಾರ್ಯ ಕಾರಣಗಳಿಗಾಗಿ ಪ್ರಾಥಮಿಕ ಹಂತದಲ್ಲಿ ಆಗುವ ದಾಖಲಾತಿ ಪ್ರಮಾಣ ಪ್ರೌಢಶಾಲೆಗೆ ಬರುವ ಸಮಯಕ್ಕೆ ಕಡಿಮೆಯಾಗುತ್ತಾ ಹೋಗುತ್ತದೆ. ಜಿಲ್ಲೆಯಲ್ಲಿ ಪ್ರಾಥಮಿಕ ಹಂತದಲ್ಲಿ ೯೮೬ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು ಪ್ರೌಢಶಾಲೆ ಹಂತಕ್ಕೆ ಬರುವ ಹೊತ್ತಿಗೆ ೫೮೪ ಜನ, ಪದವಿ ೧೨ ಜನ ವಿದ್ಯಾರ್ಥಿಗಳು ಹಾಗೂ ಸ್ನಾತಕೋತ್ತರ ಪದವಿಗೆ ದಾಖಲಾಗಿರುವವರು ೪ ಜನ

ಕಂಡುಬರುತ್ತಾರೆ. ಉನ್ನತ ಶಿಕ್ಷಣ ಪಡೆಯುತ್ತಿರುವವರ ಪ್ರಮಾಣ ಶೇ. ೧೨ರಷ್ಟು ಕೂಡ ಕಂಡುಬರುವುದಿಲ್ಲ. ಇನ್ನು ಹೆಣ್ಣುಮಕ್ಕಳ ಶಿಕ್ಷಣದಲ್ಲಿ ಬಹಳಷ್ಟು ಕಡಿಮೆ ಇರಲು ಪ್ರಮುಖ ಕಾರಣ ಇವರಲ್ಲಿ ಅಸ್ತಿತ್ವದಲ್ಲಿರುವ ಬಾಲ್ಯವಿವಾಹ ಕಾರಣವಾಗಿದೆ. ಅತಿ ಚಿಕ್ಕ ವಯಸ್ಸಿನಲ್ಲಿಯೇ ವಿವಾಹ ಮಾಡಿ ಕಳುಹಿಸುವುದರಿಂದ ಶಾಲೆಗೆ ಬರುವ ಸಾಧ್ಯತೆ ಕಡಿಮೆ. ಸಾಮಾನ್ಯವಾಗಿ ಉನ್ನತ ಶಿಕ್ಷಣದ ವಿದ್ಯಾಭ್ಯಾಸಕ್ಕೆ ಬೇಕಾದ ಜಾತಿ ಪ್ರಮಾಣ ಪತ್ರ, ಅದಕ್ಕೆ ಸಂಬಂಧಿಸಿದ ಮಾರ್ಗದರ್ಶನದ ಕೊರತೆ ಸಹ ಇವರನ್ನು ವಿದ್ಯಾಭ್ಯಾಸದಿಂದ ದೂರ ಇರಿಸಿದೆ. ಹೀಗೆ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಲು ಸಾಧ್ಯವಾಗದೆ ಶಿಕ್ಷಣದ ಕೊರತೆಯನ್ನು ಇರುಳಿಗರ ಬಹುತೇಕ ಮಕ್ಕಳು ಅನುಭವಿಸುವಂತಾಗಿದೆ.

೮. ಆರೋಗ್ಯ ಮತ್ತು ನೈರ್ಮಲ್ಯದ ಸಮಸ್ಯೆ : ಸಮುದಾಯ ಒಂದರ ಅಭಿವೃದ್ಧಿಯಲ್ಲಿ ಅವರ ಆರೋಗ್ಯ ಮತ್ತು ನೈರ್ಮಲ್ಯ ಸಹ ಪರಿಣಾಮ ಬೀರುತ್ತದೆ. ಇರುಳಿಗ ಸಮುದಾಯದಲ್ಲಿ ಸಾಮಾನ್ಯವಾಗಿ ಕಂಡುಬರುವ ಅನಾರೋಗ್ಯದ ಸಮಸ್ಯೆಗಳೆಂದರೆ ನೆಗಡಿ, ಜ್ವರ, ಕಾಮಾಲೆ, ರಕ್ತಹೀನತೆ, ಚರ್ಮರೋಗ ಇತ್ಯಾದಿ. ಇಂತಹ ಕಾಯಿಲೆಗಳಿಗೆ ಇವರು ಸಮುದಾಯದಲ್ಲಿನ ನಾಟಿ ವೈದ್ಯರ ನೆರವು ಪಡೆದು ಗುಣಪಡಿಸಿಕೊಳ್ಳುತ್ತಾರೆ. ಇತ್ತೀಚಿನ ಯುವ ಸಮುದಾಯವು ಮಾತ್ರ ಆಸ್ಪತ್ರೆಯ ಕಡೆಗೆ ಮುಖ ಮಾಡುತ್ತಿದೆ. ಬಾಲ್ಯ ವಿವಾಹ ಜಾರಿ ಇರುವುದರಿಂದ ಹೆರಿಗೆ ಸಮಯದಲ್ಲಿ ಹೆಚ್ಚು ದುರಂತಗಳು ನಡೆಯುತ್ತವೆ. ಇರುಳಿಗರು ಇಂದಿಗೂ ಸೂಲಗಿತ್ತಿಯರನ್ನು ಹೆರಿಗೆ ಮಾಡಿಸಲು ಆಶ್ರಯಿಸುತ್ತಿದ್ದಾರೆ.

ಈ ರೀತಿಯ ಸೂಲಗಿತ್ತಿಯರನ್ನು ಆಶ್ರಯಿಸಲು ಹಾಗೂ ಸ್ಥಳೀಯ ನಾಟಿ ವೈದ್ಯರನ್ನು ಆಶ್ರಯಿಸುವುದಕ್ಕೆ ಮತ್ತೊಂದು ಕಾರಣವೇನೆಂದರೆ ಇವರು ವಾಸಿಸುವ ಗ್ರಾಮಗಳು ಹಾಗೂ ಕಾಲೋನಿಗಳು ಬೆಟ್ಟ ಗುಡ್ಡದ ಪ್ರದೇಶ ಹಾಗೂ ಅರಣ್ಯ ವ್ಯಾಪ್ತಿಗೆ ಸೇರಿರುವುದರಿಂದ ಸಂಪರ್ಕ ಸಮಸ್ಯೆ ಇರುತ್ತದೆ. ಬಹಳ ತುರ್ತು ಸಮಯದಲ್ಲಿ ಆಸ್ಪತ್ರೆಗೆ ಹೋಗಲೇಬೇಕಾದ ಸಂದರ್ಭಗಳಲ್ಲಿ ಜೋಲಿಯಲ್ಲಿ ಹಾಕಿಕೊಂಡು ಬಂದು ಚಿಕಿತ್ಸೆ ಕೊಡಿಸುತ್ತಾರೆ(ಬಿದಿರು ಬೊಂಬಿಗೆ ಬಟ್ಟೆಯನ್ನು ಕಟ್ಟಿ ರೋಗಿಯನ್ನು ಮಲಗಿಸಿ ಹೊತ್ತು ತರುತ್ತಾರೆ). ಇದರಿಂದಾಗಿ ಸರ್ಕಾರ ಜಾರಿಗೆ ತಂದಿರುವ ಆರೋಗ್ಯ ಕವಚ ಮತ್ತು ೧೦೮ ತುರ್ತು ಸೇವೆಯಂತಹ ಯೋಜನೆಗಳು ಇವರಿಗೆ ದೊರೆಯದಂತಾಗಿದೆ. ತಮ್ಮ ಕಾಲೋನಿಗೆ ದೂರದಲ್ಲಿರುವ ಸರ್ಕಾರಿ ಪ್ರಾಥಮಿಕ ಘಟಕಗಳಲ್ಲಿ ಸರಿಯಾದ ಸೌಲಭ್ಯಗಳಾಗಲೀ ಮಹಿಳಾ ವೈದ್ಯರಾಗಲಿ ಇರುವುದಿಲ್ಲ. ಇರುವ ಒಬ್ಬರೇ ವೈದ್ಯರು ಇಂತಹ ಸಮಯದಲ್ಲಿ ದೊರೆಯದೆ ಹೋಗುವ ಪ್ರಸಂಗಗಳು ಇವೆ.

೩೫೮೭ ಜನರಿರುವ ಈ ಸಮುದಾಯದಲ್ಲಿ ಒಬ್ಬ ವಿವಾಹಿತರು ಕುಟುಂಬ ಯೋಜನೆ ಒಳಪಟ್ಟಿದ್ದಾರೆ. ೧೩೧೭ ಜನರು ಮಾತ್ರ ಸರ್ಕಾರವು ಜಾರಿಗೆ ತಂದಿರುವ ಬಾಣಂತಿ ಪೋಷಕಾಂಶ ಯೋಜನೆಗಳ ಸಹಾಯ ಪಡೆದಿದ್ದಾರೆ. ಮನೆಯಲ್ಲಿ ಹೆರಿಗೆಯಾಗುವುದರಿಂದ ಮಕ್ಕಳಿಗೆ ಆರು ಮಾರಕ ರೋಗಗಳ ವಿರುದ್ಧ ಕೊಡಬೇಕಾದ ಚುಚ್ಚುಮದ್ದುಗಳಿಂದಲೂ ಇವರು ದೂರವಿದ್ದಾರೆ. ಬಹಳಷ್ಟು ಮಹಿಳೆಯರು ಮತ್ತು ಮಕ್ಕಳು ಅನಿಮೀಯಾದಂತಹ ರಕ್ತಹೀನತೆಯಿಂದ ನರಳುತ್ತಿರುವುದು ಕಂಡುಬರುತ್ತದೆ.

ನೈರ್ಮಲ್ಯ ವ್ಯವಸ್ಥೆಯಲ್ಲಿ ಇರುಳಿಗರ ಗ್ರಾಮಗಳು ಬಹಳಷ್ಟು ಹಿಂದುಳಿದಿದ್ದು ವೈಯಕ್ತಿಕವಾಗಿಯೂ ಸ್ವಚ್ಛತೆಯ ಕೊರತೆ ಎದ್ದು ಕಾಣಿಸುತ್ತದೆ. ಇದರಿಂದಾಗಿ ಬಹುತೇಕರು ಚರ್ಮದ ನಾನಾ ಸಮಸ್ಯೆಗಳಿಂದ ತೊಂದರೆ ಅನುಭವಿಸುತ್ತಿದ್ದಾರೆ. ಹಾಗೆಯೇ ಕುಡಿಯುವ ನೀರಿಗಾಗಿ ಕೊಳವೆಬಾವಿ ಅಥವಾ ಕಟ್ಟೆಯ ನೀರುಗಳನ್ನು ಬಳಸುವ ಅನಿವಾರ್ಯತೆಯು ಕೆಲವು ಕಡೆ ಇಂದಿಗೂ ಇದೆ. ಸರ್ಕಾರವು ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಮಿನಿ ಟ್ಯಾಂಕ್‌ಗಳನ್ನು ನಿರ್ಮಿಸಿ ನೀರು ಸರಬರಾಜು ಮಾಡುತ್ತಿದ್ದರೂ. ನೀರು ಶೇಖರಿಸುವ ಟ್ಯಾಂಕುಗಳ ಶುದ್ಧೀಕರಣಗೊಳಿಸುವುದಿಲ್ಲ. ನೀರಿನ ಟ್ಯಾಂಕಿಯ ಸುತ್ತ ಅಶುದ್ಧ ನೀರು ನಿಲ್ಲುವ ವ್ಯವಸ್ಥೆಯಿದ್ದು ಇದರಿಂದಾಗಿ ಸೊಳ್ಳೆಯಿಂದ ಹಲವು ಸಾಂಕ್ರಾಮಿಕ ರೋಗರುಜಿನಗಳು ಹರಡುತ್ತಿವೆ. ಕೆಲವು ಬಾರಿ ಜೀವನಾವಶ್ಯಕವಾದ ನೀರಿನ ಕೊರತೆಯಂತೂ ಹೇಳತೀರದಾಗಿದೆ.

ಇತ್ತ ಕಾಡಿನ ಸ್ವಚ್ಛಂದ ಬದುಕಿನಿಂದ ವಂಚಿತವಾದ ಈ ಜನರಿಗೆ ನಾಡಿನ ಮೂಲಭೂತ ಸೌಲಭ್ಯಗಳ ಕೊರತೆ ಅನುಭವಿಸುವಂತಾಗಿರುವುದು ನಿಜಕ್ಕೂ ಶೋಚನೀಯವೆನಿಸಿದೆ.

೯. ಇತರ ಸಮಸ್ಯೆಗಳು:

೧. ಸರ್ಕಾರಗಳು ನೀಡುತ್ತಿರುವ ಯೋಜನೆಗಳು ಇವರಿಗೆ ದೊರೆಯುತ್ತಿಲ್ಲ. ಅರಣ್ಯವಾಸಿ ಯೋಜನೆಗಳ ಸೌಲಭ್ಯಗಳನ್ನು ಬೇರೆಯವರು ಇವರ ಹೆಸರಿನಲ್ಲಿ ಪಡೆಯುತ್ತಿದ್ದಾರೆ.

೨. ಸಮುದಾಯದಲ್ಲಿನ ಯುವಕರು ಪ್ರಬಲ ಸಮುದಾಯದ ಕಪಿಮುಷ್ಟಿಗೆ ಸಿಲುಕಿ. ತಾವು ಮಾಡದ ತಪ್ಪಿಗಾಗಿ ಬಲಿಪಶುಗಳಾಗುತ್ತಿದ್ದಾರೆ.

೩. ಬ್ಯಾಂಕಿನಿಂದ ದೊರೆಯಬಹುದಾದ ಅನೇಕ ಸಾಲ ಸೌಲಭ್ಯಗಳು, ಬಡ್ಡಿ ಕಡಿತದಂಥ ಯೋಜನೆಗಳು ಇರುಳಿಗರಿಗೆ ದೊರೆಯುತ್ತಿಲ್ಲ.

೪. ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ದೊರಕಬೇಕಾದ ವಿಶೇಷ ಸೌಲಭ್ಯಗಳ ಬಗ್ಗೆ ಅರಿವು ಇರುಳಿಗರಿಗಿಲ್ಲ.

೮.೨. ಇರುಳಿಗರು ಮತ್ತು ಸರ್ಕಾರದ ಅಭಿವೃದ್ಧಿ ಯೋಜನೆಗಳು

ಸಂವಿಧಾನಬದ್ಧ ಆಶಯಗಳನ್ನು ಜಾರಿಗೆ ತರುವಲ್ಲಿ ಪ್ರಭುತ್ವವೊಂದು ಸದಾಕಾಲವು ಪರಿವರ್ತನೆ ಬಗ್ಗೆ ಚಿಂತಿಸುತ್ತಾ ಇರುತ್ತದೆ. ಹಾಗೂ ಕಾರ್ಯ ಯೋಜನೆಗಳ ಮೂಲಕ ತನ್ನ ಪರಿಧಿಯೊಳಗೆ ವಾಸಿಸುವ ಮಾನವ ಅಭಿವೃದ್ಧಿಗೆ ಹೊಸ ಬಗೆಯ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಸಾಧಿಸುವ ಹೊಣೆ ಸರ್ಕಾರದಾಗಿರುತ್ತದೆ. ಹಾಗೆಯೇ ನಿರ್ಲಕ್ಷಿತ ಸಮುದಾಯಗಳ ಬಗ್ಗೆ ವಿಶೇಷವಾದ ಯೋಜನೆಗಳನ್ವಯ ಅಭಿವೃದ್ಧಿಪಡಿಸುವ ಪ್ರಯತ್ನ ಮಾಡುತ್ತ ಇರಲೇಬೇಕಾಗುತ್ತದೆ.

ಸರ್ಕಾರದ ಆಶಯಗಳು, ಯೋಜನೆಗಳು ಉತ್ತಮವಾಗಿವೆ. ಇವನ್ನು ಜಾರಿಗೊಳಿಸುವ ಹಂತದಲ್ಲಿ ವಿಫಲವಾಗುತ್ತಿರುವುದಂತು ಸಾರ್ವಕಾಲಿಕ ಸತ್ಯ. ಇದಕ್ಕೆ ತಾಜಾ ಉದಾಹರಣೆಯಾಗಿ ಅರಣ್ಯ ಹಕ್ಕು ಕಾಯ್ದೆಯನ್ನು ನೋಡಬಹುದು. ಆಧುನಿಕ ಸರ್ಕಾರಗಳಂತೂ ಪಕ್ಕ ಕಾರ್ಪೋರೇಟ್ ವಲಯಕ್ಕೆ

ಬಹಳಷ್ಟು ಸಿದ್ಧತೆಯನ್ನು ಒದಗಿಸುತ್ತಿರುವುದನ್ನೇ ಕಾಣಬಹುದು. "ಪ್ರಜಾಪ್ರಭುತ್ವ ಎಂದು ಹೇಳಿಕೊಳ್ಳುವ ದೇಶದಲ್ಲಿ ಪಕ್ಕಾ ಬಂಡವಾಳಿಗರು ಹಾಗೂ ಭೂಮಾಲೀಕ, ಮೂಲಭೂತವಾದಿಗಳ ವ್ಯವಸ್ಥೆ ಯಾವತ್ತೂ ದೇಶವನ್ನು ಆಳುತ್ತದೆ"[೭]. ಈ ಸನ್ನಿವೇಶಗಳಲ್ಲಿ ಮುಂದುವರೆದ ಪ್ರಜ್ಞಾವಂತ ಸಮುದಾಯಗಳಿಗೆ ಯೋಜನೆಯನ್ನು ಪಡೆಯಲು ಹರಸಾಹಸ ಪಡಬೇಕಾದ ಸಂದರ್ಭದಲ್ಲಿ ಆದಿವಾಸಿ ಅರಣ್ಯ ಬುಡಕಟ್ಟುಗಳ ಪರಿಸ್ಥಿತಿ ಹೇಗಿರಬೇಕು? ಕಾಡುಗಳಲ್ಲಿ ಬೆಟ್ಟಗುಡ್ಡ ಪ್ರದೇಶದಲ್ಲಿ ಜೀವನ ಸಾಗಿಸುತ್ತಿರುವ ಇರುಳಿಗರು ಸರ್ಕಾರದ ಹಲವು ಯೋಜನೆಗಳಿಂದ ವಂಚಿತವಾಗಿರುವ ಸಮುದಾಯ. ಇವರ ಅಭಿವೃದ್ಧಿಗಾಗಿ ಸರ್ಕಾರ ತಯಾರಿಸುವ ವಿಶೇಷ ಯೋಜನೆಗಳು ಬಹಳ ಅತ್ಯಲ್ಪ. ಇಂದಿಗೂ ಹೆಚ್ಚಾಗಿ ಮೂಲ ಸೌಕರ್ಯವಿಲ್ಲದೆ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದು ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿ ಅಭದ್ರತೆಯ ಬದುಕು ಸಾಗಿಸುತ್ತಿದ್ದಾರೆ. ಇರುವ ಸವಲತ್ತುಗಳನ್ನು ಬಳಸಿಕೊಳ್ಳಲು ಪ್ರಯತ್ನಿಸುವ ಸಮುದಾಯದ ವ್ಯಕ್ತಿಗಳಿಗೆ ಪ್ರಬಲ ಸಮುದಾಯಗಳು ತಡೆಯೊಡ್ಡಿ ಅವನ್ನು ತಮ್ಮದಾಗಿಸಿಕೊಳ್ಳುತ್ತಿವೆ.

ಸರಕಾರಗಳು ನೀಡುವ ಯೋಜನೆಗಳನ್ನು ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಸದುಪಯೋಗಿಸಿ ಕೊಂಡು ಬೆರಳೆಣಿಕೆಯಷ್ಟು ಬುಡಕಟ್ಟು ಸಮುದಾಯಗಳು ಬದಲಾವಣೆಗೊಳ್ಳುತ್ತಿವೆಯಾದರೂ ಇರುಳಿಗರಂತಹ ಅಲಕ್ಷಿತ ಬುಡಕಟ್ಟುಗಳು ಆ ಯೋಜನೆಗಳನ್ನು ಪಡೆಯಲು ಸಾಧ್ಯವಾಗದ ಸ್ಥಿತಿಯಲ್ಲಿವೆ. ಪ್ರಾಯಶಃ ಇದಕ್ಕೆ ಕಾರಣ ಸರ್ಕಾರದ ಅಭಿವೃದ್ಧಿ ನೀತಿಗಳು ಮಂದಗತಿಯಲ್ಲಿ ಸಾಗುತ್ತಿರುವುದೇ ಆಗಿದೆ. ಇತ್ತೀಚಿನ ದಿನಗಳಲ್ಲಿ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಹಾಗೂ ಆರ್ಥಿಕತೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಜಾರಿಗೆ ತಂದಿರುವ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಫಲಾನುಭವಿಗಳಾಗುವಲ್ಲಿಯೂ ಇರುಳಿಗ ಬುಡಕಟ್ಟು ಹಿಂದೆ ಇರುವುದು ದುರಾದೃಷ್ಟಕರ ಸಂಗತಿಯಾಗಿದೆ. ಇದಕ್ಕೆ ಹಲವಾರು ಕಾರಣಗಳಿವೆ; ಮೇಲ್ವರ್ಗದವರ ಅಧಿಕಾರದ ಹಿಡಿತ, ಅನಕ್ಷರತೆ, ಯೋಜನೆಗಳ ಬಗ್ಗೆ ಮಾಹಿತಿಗಳ ಕೊರತೆ, ಅನುಷ್ಠಾನಗೊಳಿಸುವಲ್ಲಿ ರಾಜಕೀಯ ಹಿತಾಸಕ್ತಿ ಹೀಗೆ ಹತ್ತು ಹಲವು ಕಾರಣಗಳಿಂದಾಗಿ ಸರ್ಕಾರದ ಯೋಜನೆಗಳಿಂದ ಇರುಳಿಗರು ಬಹುದೂರ ಇರುವುದು ಗೋಚರಿಸುತ್ತದೆ.

ಇಂತಹ ಸಮಸ್ಯೆಗಳನ್ನು ಮನಗಂಡ ಸರ್ಕಾರವು ಸಮುದಾಯಗಳ ಅಭಿವೃದ್ಧಿಗಾಗಿಯೇ ರೂಪಿಸಿದ ೧೯ ಗಿರಿಜನ ಉಪಯೋಜನೆಗಳನ್ನು ಪ್ರಾರಂಭಿಸಿದೆ. "ಪರಿಶಿಷ್ಟ ಪಂಗಡದವರ ಸರ್ವತೋಮುಖ ಅಭಿವೃದ್ಧಿಗಾಗಿ ಗಿರಿಜನ ಉಪಯೋಜನೆಯ ಅಡಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಸುಮಾರು ೨೮ ಅಭಿವೃದ್ಧಿ ಇಲಾಖೆ, ನಿಗಮ, ಮಂಡಳಿಗಳು ತಮ್ಮ ಯೋಜನಾ ಆಯವ್ಯಯದಲ್ಲಿ ಶೇ. ೩ರಷ್ಟನ್ನು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಮೀಸಲಾಗಿಟ್ಟಿದೆ. ಬಡತನರೇಖೆಯ ಕೆಳಗಿನ ಕುಟುಂಬಗಳಿಗೆ ಹಲವಾರು ಆರ್ಥಿಕ ಸೌಲಭ್ಯಗಳ ಜೊತೆಗೆ ಶೈಕ್ಷಣಿಕ ಮತ್ತು ಸಾಮಾಜಿಕ ಸೌಲಭ್ಯಗಳನ್ನು ಈ ಯೋಜನೆಯ ಮೂಲಕ ಒದಗಿಸುತ್ತಿವೆ. ಕುಡಿಯುವ ನೀರಿನ ಪೂರೈಕೆ, ಶುದ್ಧೀಕರಣ, ವೈದ್ಯಕೀಯ ಸೌಲಭ್ಯ, ವಸತಿ, ಸಂಪರ್ಕ ರಸ್ತೆ ಮುಂತಾದ ಮೂಲಭೂತ ಸೌಕರ್ಯಗಳಿಗೆ ಆದ್ಯತೆ ನೀಡಲಾಗುತ್ತಿದೆ. ಬುಡಕಟ್ಟು ಸಮುದಾಯಗಳ ಪರ ಇರುವ ಯೋಜನೆಗಳನ್ನು ಫಲಾನುಭವಿಗಳಿಗೆ ಮುಟ್ಟಲು ಹಾಗೂ

ಅನಾವಶ್ಯಕ ವಿಳಂಬವನ್ನು ತಪ್ಪಿಸಲು ಮತ್ತು ಪರಿಣಾಮಕಾರಿಯಾಗಿ ಯೋಜನೆಗಳನ್ನು ಪರಿಶೀಲಿಸಲು ಅನುಕೂಲವಾಗುವಂತೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿನ ಜಿಲ್ಲಾ ಮತ್ತು ಗ್ರಾಮಪಂಚಾಯಿತಿ ಮೂಲಕ ಕೇಂದ್ರ ಪುರಸ್ಕೃತ ಯೋಜನೆಗಳೆಂದು ವಿಭಜಿಸಿ ಅನುಷ್ಠಾನ ಗೊಳಿಸಲಾಗುತ್ತಿದೆ”[೮]. ಆದರೂ ಇರುಳಿಗ ಬುಡಕಟ್ಟು ಇದರ ಸದುಪಯೋಗವನ್ನು ಪಡೆದುಕೊಳ್ಳಲು ಸಾಧ್ಯವಾಗಿಲ್ಲ ಹಾಗೂ ಇಂತಹ ಯೋಜನೆಗಳಿವೆ ಎಂಬ ಮಾಹಿತಿಯು ಸಹ ಇವರಿಗೆ ಇರುವುದಿಲ್ಲ.

ಇರುಳಿಗ ಸಮುದಾಯ ಪಡೆದಿರುವ ಸರ್ಕಾರಿ ಸವಲತ್ತುಗಳು

ಯಾವುದೇ ಸಮುದಾಯ ಅಭಿವೃದ್ಧಿ ಹೊಂದಬೇಕಾದರೆ ಸರ್ಕಾರದ ಪಾತ್ರ ಬಹುಮುಖ್ಯವಾದುದು. ಈ ಹಿನ್ನೆಲೆಯಲ್ಲಿ ಇರುಳಿಗ ಸಮುದಾಯ ಸರ್ಕಾರ ಕೊಡಮಾಡಿರುವ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸೌಲಭ್ಯಗಳನ್ನು ನಿಧಾನಗತಿಯಲ್ಲಿ ಬಳಸಿಕೊಳ್ಳುತ್ತಿದೆ. ಇದರ ಬಗ್ಗೆ ಗಮನಹರಿಸಬೇಕಾಗಿದೆ.

ಕುಟುಂಬ ಯೋಜನೆ: ರಾಮನಗರ ಜಿಲ್ಲೆಯಲ್ಲಿ ಇರುಳಿಗರ ೧೫೬೫ ಕುಟುಂಬಗಳಿವೆ. ಇವರಲ್ಲಿ ೧೩೧೦ ಮಹಿಳೆಯರು ಹಾಗೂ ೦೫ ಜನ ಪುರುಷರು ಕುಟುಂಬ ಯೋಜನೆಗೆ ಒಳಗಾಗಿದ್ದಾರೆ. ಇರುಳಿಗರ ಕುಟುಂಬಗಳು ಈ ಯೋಜನೆಗೆ ಉತ್ತಮ ರೀತಿಯಲ್ಲಿ ಸ್ಪಂದಿಸಿದ್ದು ಇದಕ್ಕೆ ಜನಸಂಖ್ಯಾ ಜಾಗೃತಿಯೇ ಕಾರಣವಾಗಿರಬಹುದು. ಸರ್ಕಾರ ಈ ಯೋಜನೆಯನ್ನು ಯಶಸ್ವಿಯಾಗಿ ನೆರವೇರಿಸುವಂತೆ ಇತರೆ ಯೋಜನೆಗಳನ್ನು ತಲುಪಿಸಬೇಕಾದ ಇಚ್ಛಾಶಕ್ತಿಯನ್ನು ಹೊಂದಬೇಕಾಗಿದೆ. ಹಾಗೆಯೇ ಕುಟುಂಬ ಯೋಜನೆಯ ಪ್ರಯೋಜನ ಪಡೆದ ರೀತಿಯಲ್ಲಿಯೇ ಇತರೆ ಸರ್ಕಾರಿ ಕಾರ್ಯಕ್ರಮಗಳನ್ನು ಪಡೆಯಲು ಈ ಸಮುದಾಯದ ಜನರು ಮುಂದೆ ಬರಬೇಕಾಗಿದೆ. ಈ ಯೋಜನೆಗೆ ಒಳಪಟ್ಟ ಕುಟುಂಬಕ್ಕೆ ಸರ್ಕಾರ ಒಂದು ಸಾವಿರ ರೂಪಾಯಿ ಪ್ರೋತ್ಸಾಹ ಧನ ನೀಡುತ್ತದೆ.

ಮಕ್ಕಳನ್ನು ಪಡೆಯುವ ವಿಚಾರದಲ್ಲಿ ಮೌಢ್ಯತೆಯಿಂದ ಹೊರಬಂದು ಯೋಜನೆಗೆ ಉತ್ತಮ ಪ್ರತಿಕ್ರಿಯೆ ತೋರಿಸಿರುವುದು ಸಮುದಾಯದಲ್ಲಿ ಆಶಾದಾಯಕ ಬೆಳವಣಿಗೆ.

ಜಿಲ್ಲೆಯ ವ್ಯಾಪ್ತಿಯಲ್ಲಿ ೨೧೨ ಜನ ವಿಧವೆಯರು ಇದ್ದು ೩೫ ಜನ ವಿಧುರರಿದ್ದು, ವಿಧವಾ ವೇತನವನ್ನು ೧೧೪ ಮಹಿಳೆಯರು ಮಾತ್ರ ಪಡೆಯುತ್ತಿದ್ದಾರೆ. ಇದು ಸ್ತ್ರೀಯರ, ಅದರಲ್ಲೂ ವಿಧವೆಯರ ಸಬಲೀಕರಣಕ್ಕೆ ಸಹಾಯಕವಾಗಿದ ಯೋಜನೆಯಾಗಿದೆ. ವಿಧವಾ ವೇತನ ಪಡೆಯಲು ಅವಶ್ಯವಾದ ಪತಿಯ ಮರಣ ಪ್ರಮಾಣ ಪತ್ರ ಹಾಗೂ ಇತರೆ ದಾಖಲೆಗಳನ್ನು ಒದಗಿಸಲು ಸಾಧ್ಯವಾಗದೆ ಇತರೆ ಮಹಿಳೆಯರು ಯೋಜನೆಯ ಫಲಾನುಭವಿಗಳಾಗಲು ಸಾಧ್ಯವಾಗಿಲ್ಲ ಎಂಬುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ. ಸರ್ಕಾರ ಇತ್ತೀಚಿಗೆ ಜಾರಿಗೆ ತಂದಿರುವ ಮನಸ್ವಿನಿ ಹಾಗೂ ಆರೋಗ್ಯ ಸಂಜೀವಿನಿ ಯೋಜನೆಗಳನ್ನು ಇರುಳಿಗರು ಪಡೆದಿರುವುದಿಲ್ಲ.

ವೃದ್ಧಾಪ್ಯ ವೇತನ ಪಡೆಯುವುದರಲ್ಲಿ ಸಮುದಾಯದ ಬಹಳಷ್ಟು ಜನರು ವಿಫಲರಾಗಿದ್ದಾರೆ. ೬೦ ವರ್ಷದ ವಯೋವೃದ್ಧರಿಗಾಗಿ ಇರುವ ಸರ್ಕಾರದ ಸಂಧ್ಯಾ ಸುರಕ್ಷ ಯೋಜನೆಗೆ ಆರ್ಹರಾದ

ಕೋಷ್ಟಕ ೮.೧. ಸಮೀಕ್ಷೆಗೊಳ್ಳಪಟ್ಟ ಇರುಳಿಗ ಸಮುದಾಯ ಪಡೆದಿರುವ ಸರ್ಕಾರಿ ಸವಲತ್ತುಗಳು

ತಾಲೂಕುಗಳು	ಹೋಬಳಿಗಳು	ಸರ್ಕಾರಿ ಸೌಲಭ್ಯಗಳು																			ಭಾಗ್ಯ ಲಕ್ಷ್ಮೀ ಯೋಜನೆ
		ಕುಟುಂಬ ಯೋಜನೆ			ಗುರುತಿನ ಚೀಟಿ			ವಿಧವಾ ವೇತನ	ಅಂಗವಿಕಲ			ವೃದ್ಧಾಪ್ಯ ವೇತನ			ಶಿಷ್ಯವೇತನ				
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು		
ಕನಕಪುರ	ಉಯ್ಯಂಬಳ್ಳಿ		೪೯	೪೯	೪೭	೫೦	೯೭	೪				೩	೩	೬					
	ಕಸಬಾ		೨೧೯	೨೧೯	೨೯೩	೨೭೩	೫೬೬	೨೬	೩		೩	೩೦	೨೧	೫೧	೨೧	೩೦	೫೧		
	ಕೋಡಿಹಳ್ಳಿ	೧	೧೯೯	೨೦೦	೨೦೮	೧೯೮	೪೦೬	೨೫	೧		೧	೩೪	೨೨	೫೬	೩೮	೨೦	೫೮		
	ಮರಳವಾಡಿ	೧	೧೨೨	೧೨೩	೧೨೪	೧೩೧	೨೫೫	೨೭	೧		೧	೪		೪	೧೧	೧೨	೨೩		೧
	ಸಾತನೂರು		೧೧೧	೧೧೧	೧೨೯	೧೨೪	೨೫೩	೬	೩		೩	೧೧	೧೭	೨೭	೧೦	೭	೧೭		೧
	ಕನಕಪುರ ತಾಲೂಕು	೨	೭೦೦	೭೦೨	೮೦೧	೭೭೬	೧೫೭೭	೮೮	೮		೮	೮೨	೬೩	೧೪೪	೮೦	೬೯	೧೪೯		೨
ಚನ್ನಪಟ್ಟಣ	ಮಳೂರು		೪೧	೪೧	೫೨	೪೭	೯೯	೧				೩	೨	೫					
ಮಾಗಡಿ	ಕಸಬಾ		೪	೪	೫	೫	೧೦												
	ಮಾಡಬಾಳ್	೧	೧೦೪	೧೦೪	೧೨೯	೧೨೮	೨೫೭	೭	೩		೩	೨	೪	೬	೮	೭	೧೫		೩
	ಸೋಲೂರು		೧೬	೧೬	೨೫	೨೬	೫೦						೧	೧					
	ಮಾಗಡಿ ತಾಲೂಕು	೧	೧೨೪	೧೨೫	೧೫೯	೧೫೯	೩೧೮	೭	೩		೩	೨	೫	೭	೮	೭	೧೫		೩
ರಾಮನಗರ	ಕಸಬಾ	೧	೧೦೧	೧೦೩	೧೨೮	೧೧೩	೨೩೬	೪	೩	೨	೫	೫	೩	೮	೪	೫	೯		
	ಕೂಟಗಲ್	೧	೨೦೫	೨೦೬	೨೪೮	೨೧೩	೪೬೧	೧೦	೩	೨	೫	೨೩	೧೮	೪೧	೨೧	೧೪	೩೬		೪
	ಕೈಲಂಚ		೧೩೩	೧೩೩	೧೮೪	೧೭೮	೩೬೨	೪	೧	೧	೨	೧೭	೧೩	೩೦	೨೧	೧೦	೩೧		೩
	ಬಿಡದಿ		೧	೧	೨	೨	೪								೧		೧		
	ರಾಮನಗರ ತಾಲೂಕು	೨	೪೪೦	೪೪೨	೫೬೨	೫೦೬	೧೦೬೮	೧೮	೭	೫	೧೨	೪೫	೩೪	೭೯	೪೭	೨೯	೭೭		೭

ಪುರುಷರು ೨೪೯ ಮತ್ತು ೧೫೦ ಮಹಿಳೆಯರಿದ್ದಾರೆ. ೧೩೨ ಪುರುಷರು ಹಾಗೂ ೧೦೪ ಮಹಿಳೆಯರು ಮಾತ್ರ ಇದರ ಪ್ರಯೋಜನ ಪಡೆಯುತ್ತಿರುವುದು ಕಂಡು ಬಂದಿದೆ.

ಭಾಗ್ಯಲಕ್ಷ್ಮಿ ಯೋಜನೆ

ಕರ್ನಾಟಕ ಸರ್ಕಾರವು ೨೦೦೬ರಲ್ಲಿ ಮಹಿಳಾ ಸಬಲೀಕರಣ ಮತ್ತು ಲಿಂಗತಾರತಮ್ಯ ನಿವಾರಣೆಗಾಗಿ ಜಾರಿಗೆ ತಂದಿರುವ ಯೋಜನೆ ಇದು. ಕುಟುಂಬದಲ್ಲಿ ಜನಿಸುವ ಪ್ರತಿ ಎರಡು ಹೆಣ್ಣುಮಕ್ಕಳ ಹೆಸರಿನಲ್ಲಿ ನೀಡುವ ವಿಮಾ ಸೌಲಭ್ಯವನ್ನು ಪಡೆಯುವುದರಲ್ಲಿ ಇರುಳಿಗರು ವಿಫಲರಾಗಿದ್ದಾರೆ. ಇದಕ್ಕೆ ಹಲವು ಕಾರಣಗಳಿವೆ. ಇಂದಿಗೂ ಕುಟುಂಬದಲ್ಲಿನ ಪ್ರತಿ ಹೆರಿಗೆಯು ಸೂಲಗಿತ್ತಿಯರಿಂದ ನಡೆಯುವುದು ಹಾಗೂ ಯೋಜನೆಯ ಸೌಲಭ್ಯ ಪಡೆಯಲು ಅಗತ್ಯವಾದ ಜನನ ಪ್ರಮಾಣ ಪತ್ರ, ವಿವಾಹ ದಾಖಲೆ, ಮತದಾರರ ಗುರುತಿನ ದಾಖಲೆಗಳು ಇವರಲ್ಲಿಲ್ಲ. ಈ ಯೋಜನೆಯ ಬಗ್ಗೆ ಇರುಳಿಗ ಸಮುದಾಯದಲ್ಲಿ ಅರಿವು ಮೂಡಿಲ್ಲ. ಹಾಗಾಗಿ ಈ ಯೋಜನೆಯಿಂದ ದೂರ ಉಳಿದಿರುವುದು ಕಂಡುಬರುತ್ತದೆ.

ಕೋಷ್ಟಕ ೮.೨. ಸಮೀಕ್ಷೆಗೊಳ್ಳಪಟ್ಟ ಭಾಗ್ಯಲಕ್ಷ್ಮಿ ಸೌಲಭ್ಯ ಯೋಜನೆ ವಿವರ

ಕ್ರ.ಸಂ.	ತಾಲೂಕು	೦–೬ ವಯೋಮಾನ ಯೋಜನೆಗೆ ಅರ್ಹರು	ಯೋಜನಾ ಫಲಾನುಭವಿಗಳು
೧	ಚನ್ನಪಟ್ಟಣ	೨೫	೦
೨	ರಾಮನಗರ	೧೬೯	೦೭
೩	ಕನಕಪುರ	೨೩೯	೦೨
೪	ಮಾಗಡಿ	೬೭	೦೩
ಒಟ್ಟು		೫೦೦	೧೨

ಮತದಾನದ ಗುರುತಿನ ಚೀಟಿ : ಮತದಾನದ ಗುರುತಿನ ಚೀಟಿ ಸರ್ಕಾರದ ಪ್ರತಿ ಯೋಜನೆಯ ಸೌಲಭ್ಯಗಳನ್ನು ಪಡೆಯವಲ್ಲಿ ಬಹಳ ಮಹತ್ವದ ಪಾತ್ರವಹಿಸುತ್ತದೆ. ಇಂತಹ ಪ್ರಮುಖ ಗುರುತಿನ ಚೀಟಿಯನ್ನು ಪಡೆಯುವಲ್ಲಿ ಜಿಲ್ಲೆಯ ಇರುಳುಗ ಸಮುದಾಯದ ಜನ ವಿಫಲರಾಗಿದ್ದಾರೆ. ಮತದಾನ ಪ್ರತಿ ಭಾರತೀಯ ಪೌರನ ಕರ್ತವ್ಯವಾಗಿದ್ದು ಇತ್ತೀಚೆಗೆ ಸರ್ಕಾರವು ಮತದಾನ ಕಡ್ಡಾಯಗೊಳಿಸಲು ಯೋಚಿಸುತ್ತಿರುವ ಸಂದರ್ಭದಲ್ಲಿ ಮತದಾರರ ಗುರುತಿನ ಚೀಟಿಯನ್ನು ಎಲ್ಲರಿಗೂ ಒದಗಿಸದೆ ಇರುವ ಸಂದರ್ಭದಲ್ಲಿ ಈ ರೀತಿಯ ಯೋಚನೆ ಸಮಂಜಸವಲ್ಲ. ಜಿಲ್ಲೆಯಲ್ಲಿ ೧೮ ರಿಂದ ೬೦ ವರ್ಷಕ್ಕೆ ಮೇಲ್ಪಟ್ಟ ಸುಮಾರು ೪೪೧೫ ಜನ ಇರುಳಿಗರಿದ್ದಾರೆ. ಇದರಲ್ಲಿ ಮತದಾರರ ಗುರುತಿನ ಚೀಟಿಯನ್ನು ಹೊಂದಿರುವವರ ಸಂಖ್ಯೆ ಕೇವಲ ೩೦೬೨ ರಷ್ಟಿದೆ. ಮತದಾರರ ಗುರುತಿನ ಚೀಟಿಯನ್ನು ಪಡೆಯದೆ

ಇರುವವರ ಸಂಖ್ಯೆ ೧೩೫೩ ಇರುತ್ತದೆ. ಮತದಾನ ಮಾಡುವುದು ಪ್ರತಿ ನಾಗರಿಕನ ಆದ್ಯ ಕರ್ತವ್ಯ ಮತ್ತು ಹಕ್ಕಾಗಿದ್ದು ಇಂತಹ ಮಹತ್ವದ ದಾಖಲೆಯಿಂದ ಬಹಳಷ್ಟು ಜನ ವಂಚಿತರಾಗಿರುವುದು ಕ್ಷೇತ್ರಕಾರ್ಯದ ಅಂಕಿ ಅಂಶಗಳಿಂದ ತಿಳಿಯಬಹುದು. ಸಮುದಾಯದಲ್ಲಿನ ರಾಜಕೀಯ ನಿರಾಸಕ್ತಿ, ಜಾಗೃತಿಯ ಕೊರತೆ, ಅಧಿಕಾರಶಾಹಿಗಳ ತಾತ್ಸಾರ ಮನೋಭಾವಗಳಿಂದ ಸಮುದಾಯವು ಬಹಳಷ್ಟು ಸರ್ಕಾರಿ ಸೌಲಭ್ಯದಿಂದ ವಂಚಿತರಾಗುತ್ತಿರುವುದು ನಿಜವಾದ ಸಂಗತಿ.

ಕೋಷ್ಟಕ ೮.೩. ಸಮೀಕ್ಷೆಗೊಳಪಟ್ಟ ಮತದಾರರ ಹಕ್ಕು ಸೌಲಭ್ಯಗಳು

ಕ್ರ.ಸಂ.	ತಾಲೂಕುಗಳು	ಒಟ್ಟು ಮತದಾರರು			ಮತದಾನದ ಗುರುತಿನ ಚೀಟಿ ಹೊಂದಿರುವವರು			ಮತದಾನದ ಗುರುತಿನ ಚೀಟಿ ಹೊಂದಿಲ್ಲದವರು		
		ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೧	ಕನಕಪುರ	೧೧೮೩	೧೧೨೦	೨೩೦೩	೮೦೧	೭೭೬	೧೫೭೭	೩೮೨	೩೪೪	೭೨೬
೨	ಚನ್ನಪಟ್ಟಣ	೮೨	೭೭	೧೫೯	೫೨	೪೭	೯೯	೩೦	೩೦	೬೦
೩	ಮಾಗಡಿ	೨೩೯	೨೩೬	೪೭೫	೧೫೯	೧೫೯	೩೧೮	೮೦	೭೭	೧೫೭
೪	ರಾಮನಗರ	೭೪೭	೭೩೧	೧೪೭೮	೫೬೨	೫೦೬	೧೦೬೮	೧೮೫	೨೨೫	೪೧೦
ಒಟ್ಟು		೧೫೭೪	೧೪೮೮	೩೦೬೨	೧೫೭೪	೧೪೮೮	೩೦೬೨	೬೭೭	೬೭೬	೧೩೫೩

ಸಂವಿಧಾನಾತ್ಮಕ ಬುಡಕಟ್ಟು ರಕ್ಷಣಾತ್ಮಕ ಕಲ್ಯಾಣ ಯೋಜನೆಗಳು

ಸ್ವಾತಂತ್ರ್ಯ ನಂತರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಅನುಸೂಚಿತ ಸಮುದಾಯಗಳನ್ನು ಗುರುತಿಸಿ ಅವುಗಳನ್ನು ಅಧ್ಯಯನ ಮಾಡಿ ಸಮಾಜದಲ್ಲಿರುವ ಅಸಮಾನತೆ ಹಾಗೂ ತಾರತಮ್ಯ, ಸಾಮಾಜಿಕ ನ್ಯಾಯವನ್ನು ನೀಡುವ ಸಲುವಾಗಿ ಸಂವಿಧಾನಬದ್ಧವಾದ ಹಕ್ಕು ಕಲ್ಪಿಸಲು ಕ್ರಮ ಕೈಗೊಳ್ಳಲಾಯಿತು. ಸಂವಿಧಾನದ ೩೪೧, ೩೪೨ನೆಯ ಕಲಂನ ಪ್ರಕಾರ ರಾಷ್ಟ್ರಪತಿಯಿಂದ ಅಂಕಿತಗೊಂಡು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪಟ್ಟಿಯನ್ನು ಜಾರಿಗೊಳಿಸಲಾಯಿತು. ಇಂತಹ ಕಾನೂನುಗಳು ಜಾರಿಯಾಗುವಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಅರ್. ಅಂಬೇಡ್ಕರ್ ಅವರ ಪಾತ್ರ ಪ್ರಮುಖ. ಇದಕ್ಕಾಗಿ ಬ್ರಿಟಿಷರು ಕರೆದಿದ್ದ ದುಂಡುಮೇಜಿನ ಪರಿಷತ್ತಿನ ಸಮ್ಮೇಳನದಲ್ಲಿ ಅವರ ಆಡಿದ ಬಿರುನುಡಿಗಳೇ ಸಾಕ್ಷಿ. ಜಾತಿ ವರ್ಗರಹಿತ ಸಮಾಜ ನಿರ್ಮಾಣದ ಹೋರಾಟದಲ್ಲಿ ಅಂಬೇಡ್ಕರ್ ಅವರಿಗೆ ಅಗ್ರಸ್ಥಾನ ಸಲ್ಲಬೇಕು. ಗಾಂಧೀಜಿಯವರಿಗೆ ರಾಜಕೀಯ ಸರ್ವಾಧಿಕಾರದ ವಿರುದ್ಧ ಹೋರಾಡುವುದು ಆದ್ಯತೆಯಾದರೆ, ಅಂಬೇಡ್ಕರ್ ಅವರಿಗೆ ಸಾಮಾಜಿಕ ಸರ್ವಾಧಿಕಾರ ವಿರುದ್ಧ ಹೋರಾಡುವುದು ಪ್ರಮುಖವಾಯಿತು.

"ಇಂಡಿಯಾದಲ್ಲಿ ಬಂಡವಾಳಶಾಹಿಗಳು ಕಾರ್ಮಿಕ ವರ್ಗವನ್ನು ಶೋಷಿಸುತ್ತಿದ್ದಾರೆ. ಭೂಮಾಲೀಕರು ಬಡ ಕೃಷಿಕಾರರನ್ನು ಹಿಂಡುತ್ತಿದ್ದಾರೆ. ಮೇಲ್ವರ್ಗದವರು ದಲಿತರಿಗೆ ಅಸಹನೀಯ ಹಿಂಸೆ ಕೊಡುತ್ತಿದ್ದಾರೆ. ಈ ಎಲ್ಲ ವಿಷಯಗಳೂ ಬ್ರಿಟಿಷ್ ಸರ್ಕಾರಕ್ಕೆ ಗೊತ್ತು. ಇದನ್ನು ತಡೆಯುವ ಅಧಿಕಾರವೂ ಸರ್ಕಾರಕ್ಕಿದೆ. ಆದರೆ ಅವರ ವಿರುದ್ಧ ಹೋಗಲಾರದೆ ಸರ್ಕಾರವು ಕೈಕಟ್ಟಿಕೊಂಡು ಕೂತಿದೆ. ಇಂಥ ಸರ್ಕಾರದಿಂದ

ಏನು ತಾನೆ ಸಾಧನೆ ಸಾಧ್ಯ? ನಮಗೆ ನಮ್ಮ ಹಕ್ಕುಗಳನ್ನು ರಕ್ಷಿಸುವ ಸರ್ಕಾರ ಬೇಕು ಎಂದು ಮಾತನಾಡುವ ಮೂಲಕ ಪರಿಶಿಷ್ಟರು ಹಾಗೂ ಹಿಂದುಳಿದ ಜಾತಿ, ವರ್ಗಗಳಿಗೆ ರಕ್ಷಣಾತ್ಮಕ ಕಾನೂನು ನೀಡಲು ಸೂಚಿಸಿದ್ದರು".[೯]

ಸರ್ಕಾರವು ಮೊದಲ ಹಂತದಲ್ಲಿ ಬುಡಕಟ್ಟು ಅಭಿವೃದ್ಧಿಗೆ ಮೂರು ನೀತಿಗಳನ್ನು ರೂಪಿಸಿತು. ರಕ್ಷಣಾತ್ಮಕ ನೀತಿ, ಮೀಸಲಾತಿ ನೀತಿ ಮತ್ತು ಅಭಿವೃದ್ಧಿ ನೀತಿ. ರಕ್ಷಣಾತ್ಮಕ ನೀತಿಯು ಸಂವಿಧಾನಾತ್ಮಕ ಹಾಗೂ ಕಾನೂನಾತ್ಮಕ ಹಕ್ಕುಗಳನ್ನು ಒಳಗೊಂಡಿದ್ದು ಬುಡಕಟ್ಟು ಜನರ ಹಿತಾಸಕ್ತಿಯನ್ನು ಕಾಪಾಡುವಂತಾಯಿತು. ರಾಜ್ಯಾಂಗವು "ಪರಿಶಿಷ್ಟ ಬುಡಕಟ್ಟುಗಳ ರಕ್ಷಣೆ" ಸರ್ಕಾರದ ಆದ್ಯ ಕರ್ತವ್ಯವಾಗಿದೆ ಎಂದು ಸ್ಪಷ್ಟಪಡಿಸಿದೆ. ಇದಕ್ಕಾಗಿ ಬಹಳಷ್ಟು ಕಾನೂನು ಸಂವಿಧಾನಿಕ ವಿಧಿಗಳನ್ನು ವಿವರಿಸಿದೆ ಅವುಗಳೆಂದರೆ,

(೧) ಪರಿಚ್ಛೇಧ(Articce) ೧೫ ಮತ್ತು ೧೬ ಇದು ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ್ದು, ಎಲ್ಲರಿಗೂ ಸಮಾನ ಅವಕಾಶ ನೀಡಬೇಕು. ಇದು ಬಡ ಸಮುದಾಯಗಳಿಗೆ ವಿಶೇಷ ಸೌಲಭ್ಯ ಮೀಸಲಾತಿ ಹಾಗೂ ವಿನಾಯಿತಿಯನ್ನು ನೀಡಲು ಅವಕಾಶ ನೀಡಿದೆ.

(೨) ಪರಿಚ್ಛೇಧ(Article) ಸರ್ಕಾರಕ್ಕೆ ಪರಿಶಿಷ್ಟ ಬುಡಕಟ್ಟುಗಳ ಅಭಿವೃದ್ಧಿಗೆ ವಿಶೇಷ ವ್ಯವಸ್ಥೆ ಮಾಡಲು ಅವಕಾಶ ನೀಡಿದೆ.

(೩) ಪರಿಚ್ಛೇದ(article) ೭೫-೧ ಬಿ ಕೇಂದ್ರ ಸರ್ಕಾರ ಬಡವರ ಅಭಿವೃದ್ಧಿಗೆ ವಿಶೇಷ ಹಣಕಾಸಿನ ವ್ಯವಸ್ಥೆಗೆ ಆವಕಾಶ ನೀಡಿದ್ದು ರಾಜ್ಯ ಸರ್ಕಾರಗಳು ಬಡವರ ಅಭಿವೃದ್ಧಿಗೆ, ವಿಶೇಷ ಯೋಜನೆಗಳನ್ನು ಮಾಡಿ ಕೇಂದ್ರದ ಒಪ್ಪಿಗೆ ಪಡೆದಿದ್ದರೆ, ಯೋಜನೆಗಳಿಗೆ ಕಡ್ಡಾಯವಾಗಿ ಹಣಕಾಸಿನ ನೆರವು ನೀಡುವಂತೆ ಕಡ್ಡಾಯ ಮಾಡಿದೆ.

(೪) ೫ನೇ ಪರಿಶಿಷ್ಟ ವಿಧಿ(v-Schedule) ಇದು ವಿಶೇಷವಾದ ಅಧಿಕಾರವಾಗಿದ್ದು ರಾಜ್ಯ ಸರ್ಕಾರಗಳು ಪರಿಶಿಷ್ಟ ಬುಡಕಟ್ಟುಗಳ ಹಿತಾಸಕ್ತಿಗೆ ಮಾರಕವಾದ ಯೋಜನೆ ಅಥವಾ ಕಾನೂನು ಮಾಡಲಾಗದು. ರಾಜ್ಯಪಾಲರು ಅದನ್ನು ರದ್ದು ಮಾಡುವ ಪರಮಾಧಿಕಾರ ಹೊಂದಿದ್ದಾರೆಂದು ತಿಳಿಸುತ್ತದೆ. ರಾಜ್ಯಪಾಲರು ಸಂಸತ್ತಿನ ಕಾನೂನನ್ನು ದಿಕ್ಕರಿಸುವ ವಿಶೇಷಾಧಿಕಾರವನ್ನು ಸಂವಿಧಾನದಲ್ಲಿ ಬೇರಲ್ಲೂ ಬೇರಾರಿಗೂ ನೀಡುವುದಿಲ್ಲ.

(೫) ಸಂವಿಧಾನದ ೬ನೇ ವಿಧಿ(VI-schedule) ಬುಡಕಟ್ಟುಗಳು ಹೆಚ್ಚಾಗಿರುವ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಸ್ವಾಯತ್ತ ಸಂಸ್ಥೆಯೊಂದನ್ನು ರಚಿಸಿ, ಅದಕ್ಕೆ ಶಾಸನಾತ್ಮಕ, ಹಣಕಾಸಿನ, ಧಾರ್ಮಿಕ ಹಾಗೂ ಕಾರ್ಯಾತ್ಮಕ ಅಧಿಕಾರ ನೀಡಲು ಅವಕಾಶ ನೀಡಿದೆ. ಇದು ಈಶಾನ್ಯ ರಾಜ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿದ ಶಾಸನವಾಗಿದ್ದು ಅಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಸ್ವತಂತ್ರ ಸ್ವಾಯುತ್ತ ರಾಜ್ಯವಾಗಿ ಕಾರ್ಯ ಮಾಡಬಹುದಾಗಿದೆ.

(೬) ಪರಿಚ್ಛೇಧ (Articec) ೪೬ ಇದು ಬುಡಕಟ್ಟು ಸಮುದಾಯಗಳ ಆರ್ಥಿಕ ಮತ್ತು ಶೈಕ್ಷಣಿಕ ಪ್ರಗತಿ ಸಾಧಿಸಲು ಸಹಾಯಕವಾಗಿದೆ.

(೭) ಪರಿಚ್ಛೇಧ (Article) ೨೪೪ ಪರಿಶಿಷ್ಟ ಬುಡಕಟ್ಟು ಪ್ರದೇಶಗಳ ವಿಶೇಷ ಆಡಳಿತಕ್ಕೆ ಸಂಬಂಧಿಸಿದೆ.

(೮) ಪರಿಚ್ಛೇಧ (Article) ೨೭೫ ಇದು ರಾಜ್ಯಗಳು ಕೈಗೊಳ್ಳುವ ಬುಡಕಟ್ಟು ಅಭಿವೃದ್ಧಿ ಯೋಜನೆಗಳಿಗೆ ಕೇಂದ್ರದ ಸಂಚಿತ ನಿಧಿಯಿಂದ ಧನಸಹಾಯ ನೀಡಲು ಅಧಿಕಾರ ನೀಡಿದೆ.

(೯) ಪರಿಚ್ಛೇಧ (Artiece) ೩೩೦ ಇದು ಪಾರ್ಲಿಮೆಂಟ್‌ನಲ್ಲಿ ಪರಿಶಿಷ್ಟ ಬುಡಕಟ್ಟುಗಳಿಗೆ ಪ್ರಾತಿನಿಧ್ಯ ನೀಡಲು, ಮೀಸಲಾತಿ ನೀಡಲು ಅವಕಾಶ ನೀಡಿದೆ.

(೧೦)ಪರಿಚ್ಛೇಧ (Artiece) ೩೩೨ ರಾಜ್ಯಗಳ ವಿಧಾನಸಭೆಗಳಲ್ಲಿ ಪರಿಶಿಷ್ಟ ಬುಡಕಟ್ಟುಗಳಿಗೆ ಮೀಸಲಾತಿ ಕಲ್ಪಿಸಿವೆ.

(೧೧)ಪರಿಚ್ಛೇಧ (Artiece) ೩೩೪ ಪರಿಶಿಷ್ಟ ಬುಡಕಟ್ಟುಗಳಿಗೆ ನೀಡಿದ ಮೀಸಲಾತಿ ಮತ್ತೆ ೩೦ ವರ್ಷಗಳಿಗೆ ಮುಂದುವರಿಸುವ ಅವಕಾಶ ನೀಡಿದೆ(ಸಂಸತ್ತಿನ ಉಭಯ ಸದನಗಳು ೨೫-೧-೯೮೦ರಂದು ಅನುಮೋದನೆ ಮಾಡಿದೆ).

(೧೨)ಪರಿಚ್ಛೇಧ (Artiece) ೩೩೫ ರಾಜ್ಯ ಹಾಗೂ ಕೇಂದ್ರ ಸರ್ಕಾರಿ ಹುದ್ದೆಗಳಲ್ಲಿ ಬುಡಕಟ್ಟು ಸಮುದಾಯಗಳಿಗೆ ವಿಶೇಷ ಅವಕಾಶ ನೀಡಿದೆ.

(೧೩)ಪರಿಚ್ಛೇಧ (Artiece) ೩೩೮ರ ಅನ್ವಯ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟುಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ತನಿಖೆ ಮಾಡಲು ತನಿಖಾಧಿಕಾರಿಯನ್ನು ನೇಮಿಸಲು ರಾಷ್ಟ್ರಪತಿಗಳಿಗೆ ಅಧಿಕಾರ ನೀಡುತ್ತಾರೆ.

(೧೪)ಪರಿಚ್ಛೇಧ (Artiece) ೩೩೯ರ ಪರಿಶಿಷ್ಟ ಪಂಗಡದ ಕಲ್ಯಾಣ ಹಾಗೂ ಪ್ರದೇಶಗಳ ಆಡಳಿತದ ಮೇಲೆ ಕೇಂದ್ರದ ನಿಯಂತ್ರಣಕ್ಕೆ ಅವಕಾಶ ನೀಡಿದೆ.

(೧೫) ಸಂವಿಧಾನದ ೯೪ ತಿದ್ದುಪಡಿ : ಇತ್ತೀಚೆಗೆ ೨೦೦೩ ಆಗಸ್ಟ್ ತಿಂಗಳಲ್ಲಿ ಲೋಕಸಭೆಯು ರಾಷ್ಟ್ರೀಯ ಬುಡಕಟ್ಟು ಆಯೋಗ ರಚಿಸಲು ಅವಕಾಶ ನೀಡಿವ ಮಸೂದೆಯನ್ನು ಅಂಗೀಕರಿಸಿದೆ.

ಇಷ್ಟೆಲ್ಲ ಸಂವಿಧಾನಬದ್ಧ ಅವಕಾಶ ಸೌಲಭ್ಯಗಳನ್ನು ಕಳೆದ ೭೦ ವರ್ಷಗಳಿಂದ ಸರ್ಕಾರಗಳು ಕೊಡಮಾಡುತ್ತಿದ್ದರೂ ಬುಡಕಟ್ಟು ಜನ ಸಮುದಾಯದ ಅಭಿವೃದ್ಧಿ ಮರೀಚಿಕೆಯಾಗಿಯೇ ಇದೆ ಏಕೆ? ಎಂಬ ಪ್ರಶ್ನೆಗೆ ಹಲವು ರೀತಿಯ ಸಮಸ್ಯೆಗಳು ಕಂಡುಬರುತ್ತವೆ.

ಅಧಿಕಾರಶಾಹಿ ವ್ಯವಸ್ಥೆಯು ಸ್ವಾತಂತ್ರ್ಯದ ನಂತರ ದೇಶದಲ್ಲಿ ನಗರೀಕರಣ, ಕೈಗಾರಿಕರಣದಂತಹ ಹತ್ತು ಹಲವು ಅಭಿವೃದ್ಧಿ ಕ್ಷೇತ್ರಗಳ ಬೆಳವಣಿಗೆಗೆ ನೀಡಿದ ಲಕ್ಷ್ಯವನ್ನು ಬುಡಕಟ್ಟು ಜನರ ಅಭಿವೃದ್ಧಿಗೆ

ನೀಡದೆ ಹೋಯಿತು. ಬುಡಕಟ್ಟುಗಳಿಗೆ ಸಂಬಂಧಿಸಿದ ಪುನರ್ವಸತಿ, ಅರಣ್ಯ ಹಕ್ಕು ಕಾಯ್ದೆ ಮುಂತಾದವುಗಳಿಗೆ ಸ್ಪಂದಿಸಬೇಕಾದ ಪಂಚಾಯತ್‌ರಾಜ್ ಇಲಾಖೆ, ಪರಿಸರ ಇಲಾಖೆ, ಅರಣ್ಯ ಇಲಾಖೆ ಮುಂತಾದ ಇಲಾಖೆಗಳು ಇವರೆಡೆಗೆ ಗಮನಹರಿಸಲಾರದೇ ಹೋದವು. ಇತ್ತೀಚೆಗೆ ಭಾರತ ಸರ್ಕಾರ ಬುಡಕಟ್ಟು ಜನರ ವ್ಯವಹಾರಗಳನ್ನು ನೋಡಿಕೊಳ್ಳುವುದಕ್ಕಾಗಿಯೇ Ministry For tribal Affairs ಮಂತ್ರಿಯನ್ನು ನೇಮಕ ಮಾಡಿದೆಯಾದರೂ ಬುಡಕಟ್ಟು ಜನರ ಅಭಿವೃದ್ಧಿಯಲ್ಲಿ ಅಂತಹ ಮಹತ್ವದ ಬದಲಾವಣೆ ಏನನ್ನೂ ಕಾಣಲಾಗಿಲ್ಲ. ಸರ್ಕಾರದಿಂದ ಪ್ರತಿವರ್ಷ ಮಂಜೂರಾಗುವ ಹಣವು ಕೆಲವೇ ಕೆಲವು ಯೋಜನೆಗಳಿಗೆ ತೊಡಗಿಸಿ ಸುಮ್ಮನಾಗುತ್ತಿದೆ.

ಉದಾಹಾರಣೆಗೆ ವಿದ್ಯಾರ್ಥಿ ವೇತನ, ಸರ್ಕಾರೇತರ ಸಂಸ್ಥೆಗಳಿಗೆ ದೇಣಿಗೆ ನೀಡುವುದು ಇಂಥ ಚಟುವಟಿಕೆಗೆ ಮಾತ್ರ ವಿನಿಯೋಗವಾಗುತ್ತಿದೆಯೇ ಹೊರತು ಬುಡಕಟ್ಟು ಜನರಿಗೆ ಸಂಬಂಧಿಸಿದ ಅರಣ್ಯ, ಪರಿಸರ, ಗ್ರಾಮೀಣ ಅಭಿವೃದ್ಧಿ ಖಾತೆಯ ಸಚಿವಾಲಯಗಳೊಡನೆ ಸಮನ್ವಯ ಸಾಧಿಸಿ ಅಭಿವೃದ್ಧಿಗೆ ಸೂಕ್ತ ವ್ಯವಸ್ಥೆ ಮಾಡುತ್ತಿರುವಂತೆ ಕಂಡುಬರುತ್ತಿಲ್ಲ. ದೌರ್ಭಾಗ್ಯವೆಂದರೆ ಬುಡಕಟ್ಟು ಸಮುದಾಯದಲ್ಲಿ ಅಗಾಧವಾದ ಸಮಸ್ಯೆಗಳ ಸರಮಾಲೆಯೇ ಇದ್ದರೂ ಅವರಿಗಾಗಿ ಮಂಜೂರಾದ ಹಣದಲ್ಲಿ ವೆಚ್ಚವಾಗುತ್ತಿರುವುದು ಅತ್ಯಲ್ಪ. ಕಳೆದ ೫ ವರ್ಷಗಳಿಂದ ಸರ್ಕಾರವು ಮಂಜೂರು ಮಾಡಿದ ಹಣವನ್ನು ಇಲಾಖೆಗಳು ಸರಿಯಾಗಿ ಬಳಸಿಕೊಳ್ಳದೆ ವಾಪಸ್ ಕಳುಹಿಸುತ್ತಿವೆ. ಈ ರೀತಿ ಬಜೆಟ್ ಹಣ ವಾಪಸ್ ಹೋಗಲು ಕಾರಣ ಕೇಂದ್ರದ ಮಾರ್ಗಸೂಚಿಯಂತೆ ರಾಜ್ಯ ಸರ್ಕಾರಗಳು ಸಾಕಷ್ಟು ಪ್ರಮಾಣದ ಪ್ರಸ್ತಾವನೆಗಳನ್ನು ಕೇಂದ್ರಕ್ಕೆ ಕಳುಹಿಸದೇ ಇರುವುದು.

ಭೌತಿಕ ಅಭಿವೃದ್ಧಿಯ ಕೊರತೆ: ಬುಡಕಟ್ಟು ಸಮುದಾಯ ಅಭಿವೃದ್ಧಿಗಾಗಿ ಇರುವ ನಿಗಮ ಮಂಡಳಿಗಳಲ್ಲಿ ಖಾಲಿ ಇರುವ ಹುದ್ದೆಗಳೂ ಹಾಗೂ ಹಣದ ಬಳಕೆಯ ಬಗ್ಗೆ ನೌಕರರಲ್ಲಿ ಇರುವ ತಿಳುವಳಿಕೆಯ ಕೊರತೆ, ಇವರ ಸಮಸ್ಯೆಗಳನ್ನು ಅರ್ಥೈಸಿಕೊಂಡು ಗಮನಹರಿಸುವ ಮನಸ್ಥಿತಿಯ ನೌಕರರ ಕೊರತೆ ಕಂಡುಬರುತ್ತಿದೆ. ಸರ್ಕಾರಿ ಯೋಜನೆಗಳಿಂದ ವಂಚಿತರಾದ ಬುಡಕಟ್ಟು ಜನರ ಏಳಿಗೆಗಾಗಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕಾಗಿದೆ.

೮.೩. ಬುಡಕಟ್ಟು ಅಭಿವೃದ್ಧಿಯಲ್ಲಿ ಸರ್ಕಾರೇತರ ಸಂಸ್ಥೆಗಳು ಮತ್ತು ಸಂಘಟನೆಗಳು

ಒಂದು ಸದೃಢ ಸಮಾಜದ ರಚನೆಯಲ್ಲಿ ಸ್ವಯಂಸೇವಾ ಸಂಸ್ಥೆಗಳ, ಸಂಘ ಸಂಸ್ಥೆಗಳ ಪಾತ್ರ ಅಗತ್ಯವೆನಿಸುತ್ತದೆ. ವಿಶ್ವಸಂಸ್ಥೆಯ ಮಾಜಿ ಅಧ್ಯಕ್ಷ ಕೋಫಿ ಅನ್ನಾನ್ ೨೧ನೇ ಶತಮಾನವನ್ನು NGOಗಳ ಯುಗ ಎಂದು ಬಣ್ಣಿಸುತ್ತಾರೆ. ಭಾರತದಲ್ಲಿ ಸರ್ಕಾರೇತರ ಸಂಸ್ಥೆಗಳ ಇತಿಹಾಸವು ಸುಮಾರು ೧೮೫೦ರಷ್ಟು ಹಿಂದಿನಿಂದ ಪ್ರಾರಂಭವಾಗುತ್ತದೆ. ೧೯೧೧ರ ವೇಳೆಗೆ ಭಾರತದಲ್ಲಿ ೧೦೮೩ ಸ್ವಯಂ ಸೇವಾ ಸಂಸ್ಥೆಗಳು ಇದ್ದವು ಎಂದು ಅಂದಾಜಿಸಲಾಗಿದೆ. ೧೯೪೫ ರಂದು ವಿಶ್ವಸಂಸ್ಥೆ ಸೇವಾ ಸಂಸ್ಥೆಗಳಿಗೆ ಸ್ಪಷ್ಟ ರೂಪ ನೀಡಿದ ನಂತರ ವಿಶ್ವಾದ್ಯಂತ NGOಗಳು ಅಗಾಧ ರೀತಿಯಲ್ಲಿ ಬೆಳವಣಿಗೆ ಹೊಂದಿದವು. ೧೯೭೦ರ ದಶಕದ ನಂತರ ದೇಶದಲ್ಲಿ ಇವುಗಳ ಸಂಖ್ಯೆ ಅಧಿಕಗೊಂಡವು. ಈ

ದಶಕದಲ್ಲಿ ಒಟ್ಟು ೧,೪೪ ಲಕ್ಷ ಸಂಸ್ಥೆಗಳು ನೋಂದಣಿಯಾಗಿದ್ದವು. ೨೦೦೦ರ ನಂತರ ಈ ನೋಂದಣಿಯು ಗರಿಷ್ಠ ಮಟ್ಟ ತಲುಪಿತು. ಸರ್ಕಾರಿ ಆಯೋಗವೊಂದು ಕೈಗೊಂಡ ಸಮೀಕ್ಷೆಯ ಪ್ರಕಾರ ೨೦೦೯ರ ಅಂತ್ಯದ ವೇಳೆಗೆ ಸುಮಾರು ೩.೩ ದಶಲಕ್ಷ NGOಗಳು ಭಾರತದಲ್ಲಿವೆ. ಅಂದರೆ ಪ್ರತಿ ನಾಲ್ಕು ನೂರಕ್ಕಿಂತ ಕಡಿಮೆ ಭಾರತೀಯರಿಗೆ ಒಂದು NGO ಇದೆ ಎಂದು ಅಂದಾಜಿಸಲಾಗಿದೆ. ಕರ್ನಾಟಕದಲ್ಲಿ ಇಂತಹ ೧.೯ ಲಕ್ಷ NGOಗಳು ಇವೆ ಎಂದು ತಿಳಿದುಬರುತ್ತದೆ. ಈ ಸಂಸ್ಥೆಗಳಿಗೆ ಅನುದಾನದ ವಿಷಯದಲ್ಲಿ ಸರ್ಕಾರವು ದೊಡ್ಡ ದಾನಿಯಾಗಿದೆ. ವಿದೇಶಿ ದಾನಿಗಳ ಸಹಭಾಗಿತ್ವವೂ ಇವುಗಳ ನಿಧಿಯ ಮೂಲವಾಗಿವೆ. ಅನುದಾನಕ್ಕೆ ಸಂಬಂಧಿಸಿದಂತೆ NGOಗಳು ಸರಿಯಾದ ರೀತಿಯ ಯೋಜನೆಗಳನ್ನು ರೂಪಿಸದೇ ಸಾರ್ವಜನಿಕ ಹಣವನ್ನು ತಮ್ಮ ಸ್ವಂತ ಹಿತಾಸಕ್ತಿಗೆ ಬಳಸಿಕೊಳ್ಳುತ್ತಿವೆ ಎಂಬ ಟೀಕೆಗಳಿಗೆ ಒಳಗಾಗಿವೆ. ಇದನ್ನು ಮನಗಂಡ ಕೇಂದ್ರ ಸರ್ಕಾರ ಇಂತಹ ಹಲವು ಸ್ವಯಂ ಸೇವಾ ಸಂಸ್ಥೆಗಳನ್ನು ಕಪ್ಪುಪಟ್ಟಿಗೆ ಸೇರಿಸಿ ವಿದೇಶಿ ದೇಣಿಗೆಯನ್ನು ಪಡೆಯುವುದಕ್ಕೆ ಪ್ರತಿಬಂಧಿಸಿದೆ. ಇಂತಹ ಸನ್ನಿವೇಶಗಳ ನಡುವೆಯು ಬುಡಕಟ್ಟು ಅಭಿವೃದ್ಧಿಗೆ ಸಂಬಂಧಿಸಿದ ಆರೋಗ್ಯ, ಮಾನವ ಹಕ್ಕು, ರಕ್ಷಣೆ, ಅರಣ್ಯ ಹಕ್ಕು ಕಾಯ್ದೆಯಂಥ ವಿಷಯಗಳಲ್ಲಿ ಸ್ವಯಂಸೇವಾ ಸಂಘಗಳ ಪಾತ್ರ ಬಹುಮುಖ್ಯವಾಗಿದೆ.

ಸರ್ಕಾರದ ಸಹಭಾಗಿತ್ವದಲ್ಲಿ ಸ್ವಯಂಸೇವಾ ಸಂಸ್ಥೆಗಳ ಮೂಲಕ ಅನುದಾನಗೊಳ್ಳುತ್ತಿರುವ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಸಹಾಯಧನ ನೀಡಲು ಅವಕಾಶ ನೀಡುತ್ತಾರೆ.

"ಭಾರತ ಸರ್ಕಾರದ ಇತ್ತೀಚಿನ ಮಾರ್ಗಸೂಚಿಯ ಪ್ರಕಾರ ಕೆಳಕಂಡ ಯೋಜನೆಯನ್ನು ಸ್ವಯಂ ಸಂಸ್ಥೆಗಳು ನಡೆಸಿಕೊಟ್ಟರೆ ಅಂತಹ ಸಂಸ್ಥೆಗಳಿಗೆ ಸಹಾಯಧನ ನೀಡಲು ಅವಕಾಶವಿರುತ್ತದೆ.

೧. ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳು/ರಹಿತ ಶಾಲೆಗಳು.

೨. ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ರಾತ್ರಿ ಶಾಲೆಗಳು.

೩. ಗ್ರಂಥಾಲಯಗಳು.

೪. ೧೦ ಹಾಸಿಗೆಗಳ ಆಸ್ಪತ್ರೆ/ಸಂಚಾರಿ ಆರೋಗ್ಯ ಘಟಕ.

೫. ಕಂಪ್ಯೂಟರ್/ಬೆರಳಚ್ಚು ತರಬೇತಿ ಕೇಂದ್ರ.

೬. ಮನೆಗೆಲಸ/ಟಿ.ವಿ/ರೇಡಿಯೊ ರಿಪೇರಿ ತರಬೇತಿ ಕೇಂದ್ರ.

೭. ಚಿತ್ರ, ಬಿದಿರು, ತೆಂಗಿನ ಉತ್ಪನ್ನ, ಅಗರಬತ್ತಿ ತಯಾರಿಕಾ ಕೇಂದ್ರ ಸೌಲಭ್ಯ.

೮. ಮೋಟರ್ ಬೈಕ್ ರಿಪೇರಿ ತರಬೇತಿ.

೯. ಪ್ರಿಂಟಿಂಗ್, ಬುಕ್ ಬೈಡಿಂಗ್, ಹ್ಯಾಂಡ್‌ಲೂಮ್ಸ್ ತರಬೇತಿ.

೧೦. ಬಾಲವಾಡಿ/ ಶಿಶು ವಿಹಾರ ಕೇಂದ್ರ.

೧೧. ಪರಿಶಿಷ್ಟ ವರ್ಗದವರಿಗೆ ಕುಡಿಯುವ ನೀರು ಯೋಜನೆ/ ವಿದ್ಯಾರ್ಥಿ ನಿಲಯ.[೧೦]

ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಮೇಲ್ಕಾಣಿಸಿದ ಯಾವುದೇ ಯೋಜನೆಗಳನ್ನು ಹಮ್ಮಿಕೊಳ್ಳಬಯಸಿದಲ್ಲಿ ಸಂಬಂಧಿಸಿದ ಬುಡಕಟ್ಟುಗಳು ನೆಲೆಸಿರುವ ಜಿಲ್ಲೆಯ ಜಿಲ್ಲಾಧಿಕಾರಿಗಳ ಮೂಲಕ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರ ಸಚಿವಾಲಯಕ್ಕೆ ಅನುದಾನಕ್ಕಾಗಿ ಕಳುಹಿಸಬಹುದು.

೮.೪. ಇರುಳಿಗ ಸಮುದಾಯದ ಸಂಘಟನೆಗಳು

ಸಮುದಾಯಗಳ ಕುಂದು ಕೊರತೆಯನ್ನು ಪರಿಹರಿಸಿಕೊಳ್ಳಲು ಸಂಘಟನೆಗಳಿಂದ ಮಾತ್ರ ಸಾಧ್ಯ. ಅವರನ್ನು ಅವರೇ ಆಳಿಕೊಳ್ಳುವುದೇ ನಿಜವಾದ ಸ್ವಾತಂತ್ರ್ಯ. ಇರುಳಿಗ ಸಮುದಾಯದಲ್ಲಿ ಮೊದಲಿನಿಂದಲೂ ಸಂಘಟನೆಗಳೆಲ್ಲ ತಮ್ಮ ಬೇಕು ಬೇಡಗಳನ್ನು ಇತರ ಸ್ವಯಂ ಸೇವಾ ಸಂಸ್ಥೆಗಳ ಮೂಲಕವೇ ಬಗೆ ಹರಿಸಿಕೊಳ್ಳಬೇಕಾದ ವ್ಯವಸ್ಥೆಯಿಂದ ಹೊರಬಂದು ಇದೀಗ ಯುವ ಸಮೂಹ ಜಾಗೃತಗೊಂಡು ಸಂಘಟನೆಗೆ ಮುಂದಾಗಿರುವುದು ಆಶಾದಾಯಕ ಬೆಳವಣಿಗೆಯೇ ಸರಿ. "ಒಬ್ಬರ ಪ್ರಗತಿಯನ್ನು ಇನ್ನೊಬ್ಬರು ಮಾಡಲಾಗುವುದಿಲ್ಲ. ಅವರವರ ಪ್ರಗತಿಗೆ ಅವರೇ ಜವಾಬ್ದಾರರು. ಸಂಘಟನೆಯಲ್ಲಿ ಶಕ್ತಿಯಿದೆ"[೧೧] ಎಂಬ ಅಂಬೇಡ್ಕರ್ ಅವರ ಮಾತು ಸಾರ್ವಕಾಲಿಕ ಸತ್ಯ. ಇದರಂತೆ ರಾಮನಗರ ಜಿಲ್ಲೆಯಲ್ಲಿನ ಇರುಳಿಗ ಸಮುದಾಯವು ಸಂಘಟನೆಯನ್ನು ಪ್ರಾರಂಭಿಸಿವೆ.

ತಮ್ಮ ಸಮುದಾಯದ ಏಳಿಗೆಗೆ ಸಂಘಟನೆ ಅಗತ್ಯ ಎಂದು ಮನಗಂಡು ಅನ್ಯ ಸಮುದಾಯ ದಲ್ಲಿರುವಂತೆ ಇವರೂ ತಮ್ಮ ಸಮುದಾಯದ ಜನರನ್ನೊಳಗೊಂಡ ಸಂಘಟನೆಗಳನ್ನು ನಿರ್ಮಿಸಿ ಕೊಂಡಿದ್ದಾರೆ.

೧. ಗಿರಿಜನ ಕ್ಷೇಮಾಭಿವೃದ್ಧಿ ಸಂಘ, ಜೀವನ ಎಂಟರ್‌ಪ್ರೈಸಸ್, ಕನಕಪುರ ಟೌನ್, ರಾಮನಗರ ಜಿಲ್ಲೆ.

ದಿನಾಂಕ ೬.೮.೨೦೧೪ರಂದು ಅಸ್ತಿತ್ವಕ್ಕೆ ಬಂದ ರಾಮನಗರ ಜಿಲ್ಲೆಯಲ್ಲಿ ಇರುಳಿಗ ಸಮುದಾಯದ ಸದಸ್ಯರೇ ಸೇರಿ ರಚಿಸಿಕೊಂಡ ಮೊದಲ ಗಿರಿಜನ ಕ್ಷೇಮಾಭಿವೃದ್ಧಿ ಸಂಘ ಇದಾಗಿದೆ.

ಈ ಸಂಘವು ಅರಣ್ಯ ಹಕ್ಕು ಪತ್ರ ಹಾಗೂ ಜಿಲ್ಲೆಯಲ್ಲಿನ ಇರುಳಿಗ ಸಮುದಾಯದ ಜನರ ಕ್ಷೇಮಾಭಿವೃದ್ಧಿ ನೋಡಿಕೊಳ್ಳುವುದು, ಸರ್ಕಾರಿ ಸೌಲಭ್ಯಗಳನ್ನು ದೊರಕಿಸಿಕೊಡುವುದು, ಜನರಲ್ಲಿ ಶಿಕ್ಷಣದ ಬಗ್ಗೆ ಅರಿವು ಮೂಡಿಸುವುದು, ವಿದ್ಯಾರ್ಥಿಗಳಿಗೆ ವಸತಿ ನಿಲಯಗಳನ್ನು ಕಲ್ಪಿಸಲು ಸಹಾಯ ಮಾಡುವುದು ಇತ್ಯಾದಿ ಕಾರ್ಯಕ್ರಮ ಹಾಕಿಕೊಂಡಿದೆ.

೨. ಇರುಳಿಗರ (ಅರಣ್ಯವಾಸಿ) ಕ್ಷೇಮಾಭಿವೃದ್ಧಿ ಸಂಘ, ರಾಮನಗರ ಟೌನ್, ರಾಮನಗರ ಜಿಲ್ಲೆ.

ಸಮುದಾಯದ ಹೆಸರಿನಲ್ಲಿ ಸಂಘಟಿತವಾದ ಮೊದಲನೆಯ ಸಂಘಟನೆ ಇರುಳಿಗರ ಕ್ಷೇಮಾಭಿವೃದ್ಧಿ ಸಂಘವು ಸಂಘ-ಸಂಸ್ಥೆಗಳ ನೋಂದಣಾಧಿಕಾರಿಗಳಲ್ಲಿ ದಿನಾಂಕ ೧೪.೧೦.೧೪ರಂದು ನೋಂದಣಿ ಯಾಗಿದ್ದು ಹೊಸ ಆಶಯಗಳೊಂದಿಗೆ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯದ ಬಗ್ಗೆ ಪ್ರತಿಭಟನೆ, ಸಮಾಜದ ಜನರಿಗೆ ಕಾನೂನು ಅರಿವು ಮೂಡಿಸುವುದು, ನಿವೇಶನ ರಹಿತರಿಗೆ ನಿವೇಶನ ಸೌಲಭ್ಯ,

ಸಣ್ಣ ಉಳಿತಾಯದ ಬಗ್ಗೆ ಅರಿವು ಮೂಡಿಸುವುದು, ಸಮುದಾಯದ ಯುವಕ ಯುವತಿಯರಿಗೆ ವೃತ್ತಿಯಾಧಾರಿತ ತರಬೇತಿ, ಅರಣ್ಯ ಹಕ್ಕು ನೀತಿ ಜಾರಿಗೆ ಒತ್ತಾಯ ಇಂಥ ಆಶಯಗಳೊಂದಿಗೆ ಈ ಸಂಘಟನೆ ಸ್ಥಾಪಿತವಾಗಿದೆ.

ಸಮುದಾಯದ ಮೇಲೆ ನಡೆಯುವ ದೌರ್ಜನ್ಯವನ್ನು ತಡೆಯುವುದು, ಅಶಕ್ತರಿಗೆ ಸಹಾಯ ಮಾಡುವ ಕೆಲಸವನ್ನು ಈ ಸಮಿತಿಯ ಪದಾಧಿಕಾರಿಗಳು ಕ್ರಿಯಾಶೀಲವಾಗಿ ಮಾಡುತ್ತಿದ್ದಾರೆ. ಸಮುದಾಯದ ಪರ ಕಾಳಜಿಯಿಂದಾಗಿ ತನ್ನ ಉದ್ದೇಶ ಸಾಧನೆಗಾಗಿ ಸರ್ಕಾರದ ಹಲವಾರು ಇಲಾಖೆಗಳಿಗೆ ಹಾಗೂ ವಿವಿಧ ಖಾತೆಯ ಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ದಿನಪತ್ರಿಕೆ, ಸಮಾಜಕಲ್ಯಾಣ ಇಲಾಖೆ ಹಾಗೂ ಇತರ ಸಮುದಾಯದ ಸಂಘಟನೆಗಳ ಜೊತೆ ಸಮನ್ವಯ ಸಾಧಿಸಿ ಕಾರ್ಯನಿರ್ವಹಿಸುತ್ತಿದೆ.

ಈ ಎಲ್ಲಾ ಸಂಘಟನೆಗಳು ಇರುಳಿಗ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿವೆ. ತಮ್ಮ ಬೇಡಿಕೆಗಳನ್ನು ಸರ್ಕಾರ ವಿವಿಧ ಸಚಿವಾಲಯದ ಮುಖ್ಯಸ್ಥರಿಗೆ ಸಲ್ಲಿಸಿದ್ದು ಸರ್ಕಾರದ ಉತ್ತರ ಮತ್ತು ಸವಲತ್ತುಗಳ ನಿರೀಕ್ಷೆಯಲ್ಲಿವೆ.

೮.೫. ಪರಿವರ್ತನಾ ಹಾದಿಯಲ್ಲಿ ಇರುಳಿಗರು

ಪರಿವರ್ತನೆ ಎಂಬುದು ನಿಸರ್ಗದ ನಿಯಮ ಹಾಗೂ ಸಾರ್ವತ್ರಿಕವಾದದ್ದು. ಸಮುದಾಯ ಒಂದರ ಬದಲಾವಣೆ ಆ ಸಮುದಾಯದ ಜೀವಂತಿಕೆಯ ಪ್ರತೀಕವು ಹೌದು. ಬದಲಾವಣೆ ಎಂಬುದು ಪ್ರಾರಂಭ ಮತ್ತು ಅಂತ್ಯವಾಗದೇ ಅದು ಸಂದರ್ಭಗಳಿಗೆ ಅನುಗುಣವಾಗಿ ನಿರಂತರವಾಗಿ ನಡೆಯುವ ಪ್ರಕ್ರಿಯೆ ಆಗಿರುತ್ತದೆ ಎಂದು ರಾಗರ್ಸ್ ಎಂಬ ಸಮಾಜಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಬದಲಾವಣೆಯ ಸಂದರ್ಭದಲ್ಲಿ ಸಮುದಾಯಗಳು ಕೆಲವು ಬಾರಿ ಸ್ವೀಕರಿಸುವ ಮತ್ತು ಕಳೆದುಕೊಳ್ಳುವ ಪ್ರಕ್ರಿಯೆ ಸಾಮಾನ್ಯವಾಗಿ ನಡೆಯುತ್ತದೆ. "ಯಾವುದೇ ಸಮುದಾಯ ತನ್ನ ಸಂಸ್ಕೃತಿಯ ಕೋಶದ ಒಳಗೆ ಕಾಲದ ಅನಿವಾರ್ಯತೆಯ ಫಲವಾಗಿ ಏರ್ಪಡುವ ಉಬ್ಬರ ಇಳಿತಗಳನ್ನು ಸಾವಧಾನವಾಗಿ ಗಮನಿಸುತ್ತಲೇ ಇರುತ್ತದೆ. ಬದಲಾಗುವ ಕಾಲಮಾನದ ಲಯಕ್ಕೆ ಹೊಂದಿಸಿಕೊಳ್ಳುವ ಪ್ರಯತ್ನವನ್ನು ಸಮುದಾಯ ಯಾವತ್ತೂ ಜೀವಂತವಾಗಿಟ್ಟುಕೊಂಡಿರುತ್ತದೆ".[೨]

ಯಾವಾಗ ಭಾರತಕ್ಕೆ ಪರಂಗಿಯವರು ಪ್ರವೇಶಿಸಿದರೋ ಅಂದಿನಿಂದ ಪರಿವರ್ತನೆಯು ತೀವ್ರತೆಯನ್ನು ಪಡೆಯಿತು. ಜೀವನದ ಪ್ರತಿಹಂತಗಳು ಹಂತಹಂತವಾಗಿ ಸ್ಥಿತ್ಯಂತರ ಹೊಂದುತ್ತ ಹೋಯಿತು. ಇರುಳಿಗ ಸಮುದಾಯದಲ್ಲಿ ಉಂಟಾಗಿರುವ ಹಲವು ರೀತಿಯ ಪರಿವರ್ತನೆಯನ್ನು ಕಾಣಬಹುದಾಗಿದೆ.

* ಕೆಲವು ಮನ್ವಂತರ ಹಿಂದೆ ಇರುಳಿಗರು ಸಂಪೂರ್ಣವಾಗಿ ಬುಡಕಟ್ಟಿನ ದಟ್ಟ ಕುರುಹುಗಳು ಹೊಂದಿದ್ದು, ಕಾಡು, ಕಣಿವೆಗಳಲ್ಲಿರುವ ಗವಿಗಳಲ್ಲಿ ವಾಸ ಮಾಡುತ್ತಾ, ಆಹಾರ ಸಂಗ್ರಹಣೆಗೆ ಬೇಟೆ ಯಾಡುತ್ತಾ ಕಾನನದಿಂದ ಕಾನನಕ್ಕೆ ಅಲೆಯುತ್ತಿದ್ದರು. ಕಾಲಚಕ್ರದ ಪ್ರಭಾವದಿಂದಾಗಿ ಇಂತಹ

ಜೀವನಕ್ಕೆ ಇತಿಶ್ರೀ ಹಾಡಿ ನಾಡಿನ ಜೀವನ ಪದ್ಧತಿಗೆ ಹೊಂದಿಕೊಂಡು ಹೊಸ ಜೀವನ ವ್ಯವಸ್ಥೆಗೆ ಹೊಂದಿಕೊಳ್ಳುತ್ತಿದ್ದಾರೆ.

* ಬದಲಾದ ಸಂದರ್ಭದಲ್ಲಿ ಬೇಟೆ ಹಂತದಿಂದ ಕೃಷಿ ಹಂತಕ್ಕೆ ಪಲ್ಲಟಗೊಳ್ಳುವ ಮೂಲಕ ಒಂದು ನಿರ್ದಿಷ್ಟ ಸ್ಥಳದಲ್ಲಿ ನೆಲೆನಿಂತು ಇತರೆ ಸಮುದಾಯದ ಜನರೊಡನೆ ಪ್ರೀತಿ ವಿಶ್ವಾಸ ಸೌಹಾರ್ದತೆ ಸಹಬಾಳ್ವೆ ಬಾಳುವುದರೊಂದಿಗೆ ತಮ್ಮ ಮೂಲಭೂತ ಅವಶ್ಯಕತೆಯನ್ನು ಪಡೆದು ಕೊಳ್ಳುತ್ತಿದ್ದಾರೆ.

* ಇರುಳಿಗರ ಕುಟುಂಬದಲ್ಲಿ ಆಧುನಿಕ ಪ್ರಭಾವ ಪ್ರವೇಶಿಸಿದ್ದರೂ ಕುಟುಂಬದ ಹಿರಿಯರಿಗೆ ಗೌರವ ಮನ್ನಣೆಗಳನ್ನು ನೀಡುತ್ತಾ ಬದಲಾದ ಕಾಲದ ಪರಿಸರದಲ್ಲಿ ಪ್ರತ್ಯೇಕ ಜೀವನ ಪದ್ಧತಿಯನ್ನು ಅಳವಡಿಸಿಕೊಳ್ಳುತ್ತಿದ್ದಾರೆ.

* ಹಿಂದೆ ಸೂಲಗಿತ್ತಿಯರ ನೆರವಿನಿಂದ ತಮ್ಮ ಮನೆಗಳಲ್ಲಿಯೇ ಹೆರಿಗೆಯನ್ನು ಮಾಡಿಸುವ ಪದ್ಧತಿಯನ್ನು ಇರುಳಿಗರು ಅನುಸರಿಸುತ್ತಿದ್ದರು. ಪ್ರಸ್ತುತ ಹೆರಿಗೆ ಸಮಯದಲ್ಲಿ ಯಾವ ತೊಂದರೆಯಾಗದಿರಲಿ ಎಂಬ ಕಾರಣಕ್ಕೆ ಆಸ್ಪತ್ರೆಗಳಲ್ಲಿ ಹೆರಿಗೆ ಮಾಡಿಸುವುದು ಸಾಮಾನ್ಯವಾಗಿದೆ. ಹೆರಿಗೆಯ ವಿಚಾರದಲ್ಲಿ ಹಿಂದೆ ಇದ್ದ ಆಚರಣೆಗಳನ್ನು ಪಾಲಿಸುತ್ತಾರಾದರೂ ಅದರಲ್ಲಿ ಸ್ವಲ್ಪಮಟ್ಟಿಗೆ ಸಡಿಲಿಕೆಗೊಂಡಿರುವುದನ್ನು ಕಾಣುತ್ತೇವೆ.

* ಮಗುವಿನ ನಾಮಕರಣ ಹಾಗೂ ಜನನದ ಸಂದರ್ಭದಲ್ಲಿ ಸೂತಕ ಕಳೆಯುವ ರೀತಿ–ನೀತಿಗಳು ಬದಲಾಗಿವೆ. ಹಿಂದೆ ಕಟ್ಟೆಮನೆ ಗೌಡ ಅಥವಾ ದಾಸಯ್ಯನವರು ಆಚರಣೆಯಲ್ಲಿ ಮುಖ್ಯ ಪಾತ್ರ ವಹಿಸುತ್ತಿದ್ದರು. ಇಂದು ಆ ಸ್ಥಾನದಲ್ಲಿ ವೈಷ್ಣವ ಅಥವಾ ಜಂಗಮ ಪುರೋಹಿತರು ಗೌಡ ಅಥವಾ ದಾಸಯ್ಯನ ಸ್ಥಾನವನ್ನು ಆಕ್ರಮಿಸಿದ್ದಾರೆ. ಮಕ್ಕಳಿಗೆ ಇಡುತ್ತಿದ್ದ ಹೆಸರುಗಳಲ್ಲಿ ಬದಲಾವಣೆ ಕಂಡುಬರುತ್ತಿದೆ. ಗಂಡ ಮಕ್ಕಳಿಗೆ ಆಧುನಿಕವಾಗಿ ನವೀನ, ಸುಂದರ, ಅಂಬರೀಷ, ವಿಷ್ಣು, ಅರುಣ ಇತ್ಯಾದಿ ಹೆಸರುಗಳನ್ನು, ಹೆಣ್ಣುಮಕ್ಕಳಿಗೆ ಸುಧಾರಾಣಿ, ಕುಸುಮ, ಅಮುದ, ಲಕ್ಷ್ಮೀ ಮುಂತಾದ ಹೆಸರುಗಳು ಚಾಲ್ತಿಗೆ ಬಂದಿವೆ. ಈ ಮೂಲಕ ಇರುಳಿಗರು ಆಧುನಿಕ ಸಂಸ್ಕೃತಿಗೆ ಮಾರುಹೋಗಿದ್ದು ಇತರೆ ಸಮುದಾಯಗಳ ಪ್ರಭಾವವು ಇವರ ಮೇಲೆ ಆಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

* ಹಿಂದಿನ ತಲೆಮಾರಿನ ಕುಟುಂಬದ ಮುಖ್ಯಸ್ಥರ ಹೆಸರು ಹಾಗೂ ಅಜ್ಜಿ, ತಾತಾ, ಕುಲದೇವತೆಗಳ ಹೆಸರು ಇಡುವ ಪದ್ಧತಿಯು ಮರೆಗೆ ಸರಿದಿರುವುದು ಕಂಡುಬರುತ್ತಿದೆ.

* ಹೆಣ್ಣು ಮಗು ಪುಷ್ಪವತಿಯಾಗುವ ಸಂದರ್ಭದಲ್ಲಿ ಇದ್ದ ಅಶುದ್ಧಳು ಎಂಬ ಮನೋಭಾವನೆ ಹಾಗೂ ಆಕೆಯನ್ನು ದೂರ ಇರಿಸುತ್ತಿದ್ದ ಪದ್ಧತಿಗಳು ಮಾಯವಾಗುತ್ತಿದ್ದು ಬದಲಾದ ಸಂದರ್ಭದಲ್ಲಿ ಹಿಂದಿನ ಯಾವುದೇ ಆಚರಣೆಗಳು ಕಾಣಸಿಗುತ್ತಿಲ್ಲ.

* ಇರುಳಿಗರಲ್ಲಿ ವಿವಾಹದ ಸಂದರ್ಭದಲ್ಲಿ ಹಿಂದೆ ಇದ್ದ ಗಂಡು-ಹೆಣ್ಣು ಅರಣ್ಯಕ್ಕೆ ಜೊತೆಯಾಗಿ ಹೋಗಿ ಸ್ವಲ್ಪ ಸಮಯದ ನಂತರ ಹಿರಿಯರ ಒಪ್ಪಿಗೆ ಪಡೆಯುತ್ತಿದ್ದ ಆಚರಣೆ ಕಣ್ಮರೆಯಾಗಿದೆ. ಹಿಂದೆ ಜಾರಿಯಲ್ಲಿದ್ದ ತೆರ ಅಥವಾ ಕನ್ಯಾಶುಲ್ಕ ಪದ್ಧತಿಯು ಮರೆಯಾಗಿ ವರದಕ್ಷಿಣೆ ಪದ್ಧತಿ ಚಾಲ್ತಿಗೆ ಬಂದಿದೆ.

* ಹಿಂದೆ ಇದ್ದ ಜಾತಿ ನಿರ್ಬಂಧಗಳು ಇಂದು ಕಡಿಮೆಯಾಗುತ್ತಿವೆ.

* ಮರಣ ಸಂಬಂಧಿ ಕಲ್ಲುಸೇವೆ ಎಂಬ ವಿಶಿಷ್ಟವಾದ ಶವಸಂಸ್ಕಾರ ಪದ್ಧತಿ ಮಾಯವಾಗಿದ್ದು ಇತರ ಸಮುದಾಯದವರಂತೆ ಶವಸಂಸ್ಕಾರ ಮಾಡುವ ಪದ್ಧತಿಯು ಪ್ರವೇಶ ಪಡೆದಿದೆ. ಸಾವಿಗೆ ಸಂಬಂಧಿಸಿದ ಆಚರಣೆಯಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಕಂಡುಬರುತ್ತಿದೆ. ಸತ್ತ ಆತ್ಮವನ್ನು ಕರೆಯುವ ಕಣಿಶಾಸ್ತ್ರವು ಇಂದಿಗೂ ಉಳಿದಿದೆ. ಹಾಗೆಯೇ ಮುಂದುವರೆಯುತ್ತಿದೆ. ಒಟ್ಟಿನಲ್ಲಿ ಶವಸಂಸ್ಕಾರ ಪದ್ಧತಿಯು ಅಲ್ಪಸ್ವಲ್ಪ ಬದಲಾವಣೆ ಕಂಡಿದೆ.

* ವಸಾಹತುಶಾಹಿ ಕಾಲಘಟ್ಟದಲ್ಲಿ ಇರುಳಿಗರು ಕಾಡುಗಳಲ್ಲಿ ಅಲೆದಾಡುತ್ತಿದ್ದ ಸಂದರ್ಭದಲ್ಲಿ ಗಂಡಸರು ಸೊಂಟದವರೆಗೆ ಹಾಗೂ ಹೆಂಗಸರು ಎದೆಯ ತನಕ ದಟ್ಟಿಯೊಂದನ್ನು ಉಡುವ ಪದ್ಧತಿಯಿತ್ತು. ಆಧುನಿಕ ಯುಗ ಇವರ ವಸ್ತ್ರವಿನ್ಯಾಸದಲ್ಲಿ ತುಂಬಾ ಬದಲಾವಣೆ ತಂದಿದೆ. ಇರುಳಿಗ ಯುವಕ-ಯುವತಿಯರು ಪ್ಯಾಂಟು, ಶರ್ಟ್, ಸ್ಯಾಂಡಲ್ಸ್, ವಿವಿಧ ಬಗೆಯ ಬೂಟು, ನೈಟಿ, ಚೂಡಿದಾರ, ಗಾಗರ್, ಸೀರೆ ಇತ್ಯಾದಿ ಧರಿಸುತ್ತಿದ್ದಾರೆ. ಹಿಂದೆ ಮಹಿಳೆಯರು ಕಿವಿಗೆ ಧರಿಸುತ್ತಿದ್ದ ಬಿಚ್ಚಲೆಗರಿಗಳು ಕಾಣೆಯಾಗಿದ್ದು ಮಧ್ಯವಯಸ್ಸಿನ ಗಂಡಸರು ನಿಕ್ಕರ್ ಪಂಚೆಯನ್ನು, ಹೆಂಗಸರು ವಿವಿಧ ವಿನ್ಯಾಸದ ಸೀರೆಯನ್ನು ಉಡುತ್ತಾರೆ. ಇರುಳಿಗರಲ್ಲಿ ಗತಕಾಲದಲ್ಲಿ ಕಂಡುಬರುವ ಯಾವುದೇ ವಸ್ತ್ರವಿನ್ಯಾಸ ಕಾಣದಾಗಿದ್ದು ಯುವಕರು, ಮಕ್ಕಳ ಉಡುಪುಗಳಲ್ಲಿ ಬಹಳ ಪರಿವರ್ತನೆಯಾಗಿದೆ.

* ಮೂಲತಃ ಮಾಂಸಹಾರಿಗಳಾದ ಇರುಳಿಗರು ಅರಣ್ಯದಲ್ಲಿನ ಬೇಟೆಯಲ್ಲಿ ದೊರೆಯುತ್ತಿದ್ದ ಕಾಡಿನ ಪ್ರಾಣಿ ಪಕ್ಷಿಗಳಾದ ಮೊಲ, ಮುಳ್ಳುಹಂದಿ, ಕಾಡುಕೋಳಿ, ಆಮೆ, ಇಲಿ ಮುಂತಾದವುಗಳನ್ನು ತಿನ್ನುತ್ತಿದ್ದರು. ಜೊತೆಗೆ ಕಾಡಿನಲ್ಲಿ ದೊರೆಯುತ್ತಿದ್ದ ಹಲವು ವಿದಧ ಗಡ್ಡೆ ಗೆಣಸುಗಳ ಸೇವನೆ ಇಂದು ನಿಂತಿದೆ. ಪರಂಪರೆಯ ಇಲಿಯ ಬೇಟೆಯನ್ನು ಬಿಟ್ಟಿದ್ದಾರೆ. ಇದರ ಬದಲಾಗಿ ಕುರಿ, ಮೇಕೆ ಮಾಂಸವನ್ನು ಅಕ್ಕಿ, ರಾಗಿ, ತೊಂಡೆಕಾಯಿ, ನುಗ್ಗೆಕಾಯಿ, ದೋಸೆ, ಪಾಯಸ, ಉಪ್ಪಿಟ್ಟು ಇಂತಹ ಆಹಾರ ಸೇವಿಸುತ್ತಾರೆ.

* ಕಾಡಿನಿಂದ ನಾಡಿಗೆ ಬಂದ ಇರುಳಿಗರು ಸಣ್ಣಪುಟ್ಟ ಗುಡಿಸಲುಗಳನ್ನು ನಿರ್ಮಿಸಿಕೊಂಡು ಚಿಕ್ಕದಾದ ಬಾಗಿಲುಗಳ ಜೋಪಡಿಗಳಲ್ಲಿ ವಾಸವಾಗಿದ್ದರು. ಇತ್ತೀಚೆಗೆ ಸರ್ಕಾರದ ಪುನರ್ವಸತಿ ಯೋಜನೆಯನ್ವಯ ಪ್ರತ್ಯೇಕ ವಸತಿಗಳನ್ನು ನಿರ್ಮಿಸಲಾಗಿದೆ. ಇಟ್ಟಿಗೆ, ಸಿಮೆಂಟ್, ಮಂಗಳೂರು ಹೆಂಚು, ಶೀಟ್‌ಗಳನ್ನು ಬಳಸಿ ವಸತಿ ನಿರ್ಮಾಣ ಮಾಡಿಲಾಗಿದೆ. ಹಿಂದೆ ಇವರ ಮನೆಯ ಗೋಡೆಗಳ ಮೇಲೆ

ಗೋಚರಿಸುತ್ತಿದ್ದ ಬುಡಕಟ್ಟು ಚಿತ್ರಗಳು ಕಾಣದಾಗಿದೆ. ಆಧುನಿಕತೆಯ ತೋರಣಗಳು ಮನೆಯ ಬಾಗಿಲನ್ನು ಆಶ್ರಯಿಸಿವೆ.

* ಹಿಂದೆ ಇವರ ಆರ್ಥಿಕತೆಯ ಕೇಂದ್ರಬಿಂದು ಅರಣ್ಯವಾಗಿತ್ತು. ಅಲ್ಲಿ ದೊರೆಯುವ ಹಣ್ಣು, ಸೊಪ್ಪು, ಗಡ್ಡೆ ಗೆಣಸು, ಜೇನು ಸಂಗ್ರಹಣೆ, ಹಲವು ಪ್ರಾಣಿ ಪಕ್ಷಿಗಳನ್ನು ಬೇಟೆಯಾಡುತ್ತಾ ಸ್ವಾವಲಂಬನೆ ಜೀವನ ನಡೆಸುತ್ತಿದ್ದರು. ಕಾಡಿನಿಂದ ನಾಡಿಗೆ ಬಂದ ಇರುಳಿಗರು ತಮ್ಮ ಮೂಲ ವೃತ್ತಿಯಿಂದ ಪಲ್ಲಟಗೊಂಡು ಸುತ್ತಲಿನ ಸಮುದಾಯಗಳ ಜೊತೆ ಬೆರೆಯುವ ಮೂಲಕ ಸುತ್ತಲಿನ ಶ್ರೀಮಂತರನ್ನು ಜೀವನ ನಿರ್ವಹಣೆಗಾಗಿ ಅವಲಂಬಿಸಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಇದು ಇವರ ಆರ್ಥಿಕ ಸ್ವಾತಂತ್ರ್ಯವನ್ನು ಪರಾಧೀನಗೊಳಿಸುವ ಮೂಲಕ ಅರ್ಥವ್ಯವಸ್ಥೆ ಸ್ಥಿತ್ಯಂತರಕ್ಕೆ ಒಳಗಾಗಲೇ ಬೇಕಾಯಿತು. ಇಂದು ಕೃಷಿಯೇತರ ಕೂಲಿ, ಖಾಸಗಿ ಸಂಸ್ಥೆಗಳಲ್ಲಿ ಕೆಲಸ, ನಗರ ಪ್ರದೇಶದಲ್ಲಿನ ಹಲವು ರೀತಿಯ ವೃತ್ತಿಗಳಲ್ಲಿ ಕೆಲಸ ಮಾಡುತ್ತಾ ಜೀವನ ನಿರ್ವಹಣೆ ಮಾಡುತ್ತಿದ್ದಾರೆ.

* ಕೇತ್ಲು ಬೇಸಾಯದಿಂದ ದೂರಸರಿದು ಇತರೆ ಸಮುದಾಯದ ಜನರ ಭೂಮಿಯನ್ನು ಗೇಣಿ ಪದ್ಧತಿಯಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿರುವುದು ಕಂಡುಬರುತ್ತಿದೆ.

* ಒಂದು ಸಮುದಾಯ ರಾಜಕೀಯ ರಕ್ಷಣೆ ಇಲ್ಲದಿದ್ದರೆ ಅವರ ಸ್ವಾತಂತ್ರ್ಯ ಮತ್ತು ಪೌರ ಹಕ್ಕು, ಮೂಲಭೂತ ಹಕ್ಕುಗಳನ್ನು ಪಡೆದುಕೊಳ್ಳುವುದು ಕಷ್ಟಸಾಧ್ಯ. ತಳಸಮುದಾಯಗಳ ರಾಜಕೀಯ ಹಕ್ಕುಗಳಿಂದ ಹಾಗೂ ಸಂವಿಧಾನ ಮತ್ತು ಸರ್ಕಾರದ ಪ್ರಯತ್ನದ ಫಲವಾಗಿ ಇರುಳಿಗರ ಹಾಡಿಗಳಲ್ಲಿ ಇಂದು ಸಾಕಷ್ಟು ರಾಜಕೀಯ ಅವಕಾಶಗಳು ದೊರೆಯುತ್ತಿವೆ. ಈ ಸೌಲಭ್ಯದ ಫಲವಾಗಿ ಇರುಳಿಗರಲ್ಲಿ ಸ್ವಲ್ಪಮಟ್ಟಿಗೆ ಪಂಚಾಯತ್‌ರಾಜ್ ವ್ಯವಸ್ಥೆಗಳಲ್ಲಿ ಸ್ಪರ್ಧಿಸುವಂಥ ಅವಕಾಶ ಪಡೆದಿದ್ದಾರೆ. ಇತ್ತೀಚಿನ ದಿನಗಳವರೆಗೂ ಪಂಚಾಯಿತ್ ಸಂಸ್ಥೆಗಳಲ್ಲಿ ಪ್ರಬಲ ಸಮುದಾಯಗಳ ಪ್ರಾಬಲ್ಯ ಕಂಡುಬರುತ್ತಿತ್ತು. ಸರ್ಕಾರ ಜಾರಿಗೆ ತಂದಿರುವ ಮೀಸಲಾತಿ ನಿಯಮಗಳ ಕಾರಣ ಇರುಳಿಗ ಸಮುದಾಯದ ಕೆಲವರು ಮಾತ್ರ ಇಂದು ಗ್ರಾಮಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳಲ್ಲಿ ಪ್ರಾತಿನಿಧ್ಯ ಪಡೆದಿದ್ದಾರೆ. ಅದರಲ್ಲೂ ಇರುಳಿಗರ ಮಹಿಳೆಯರೇ ಅಧಿಕ ಪ್ರಮಾಣದಲ್ಲಿ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿರುವುದು ಕಾಣುತ್ತದೆ. ಹೀಗೆ ಕೆಲವರಾದರೂ ಪರಿವರ್ತನೆಯ ದಿಕ್ಕಿನತ್ತ ಸಾಗುವ ಸಾಹಸಿಗರಾಗಿದ್ದಾರೆ".[೧೩]

* ಇರುಳಿಗರಲ್ಲಿನ ಹಬ್ಬ-ಆಚರಣೆಗಳಲ್ಲಿ ಬಹಳಷ್ಟು ಬದಲಾವಣೆ ಹೆಚ್ಚಾಗಿದೆ. ಸ್ತ್ರೀ ದೈವಗಳನ್ನು ಹೆಚ್ಚಾಗಿ ಆರಾಧಿಸುವ ಇವರು ಬಹುತೇಕ ಹಬ್ಬಗಳ ಸಂದರ್ಭದಲ್ಲಿ ಇತರೆ ಸಮುದಾಯಗಳನ್ನು ಅನುಸರಿಸುತ್ತಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಿದೆ.

* ವಿಶೇಷವಾಗಿ ತಾವು ಆಚರಿಸುವ ಬುಡಕಟ್ಟು ಆಚರಣೆಗಳನ್ನು ನೆರವೇರಿಸುವಾಗ ಬದಲಾದ ಸಾಮಾಜಿಕ ಪರಿಸರಕ್ಕೆ ತಕ್ಕಂತೆ ಆಚರಣೆಗಳು ಇಂದು ಸಾಂಕೇತಿಕವಾಗಿ ಉಳಿದಿರುವುದು ಕಂಡು ಬರುತ್ತದೆ. ತಮ್ಮ ಕುಲದೈವದ ಆರಾಧನೆಯ ಸಮಯದಲ್ಲಿ ಸಮುದಾಯದ ಹಿರಿಯ ಮಹಿಳೆಯರ

ಹಾಡುಗಳು ಇಂದು ಮಾಯವಾಗಿ ಈ ಸ್ಥಾನವನ್ನು ಧ್ವನಿವರ್ಧಕಗಳು, ಬೆಳದಿಂಗಳ ಬೆಳಕಿನ ಬದಲು ವಿದ್ಯುತ್ ದೀಪಗಳು ಸ್ಥಾನ ಪಡೆದುಕೊಂಡಿವೆ.

* ಶೈಕ್ಷಣಿಕವಾಗಿ ಬಹಳ ಹಿಂದೆ ಉಳಿದಿದ್ದ ಸಮುದಾಯವು ಕಳೆದ ಎರಡು ದಶಕಗಳಿಂದ ಶಿಕ್ಷಣದ ಬಗ್ಗೆ ಅಲ್ಪಸ್ವಲ್ಪ ಗಮನಹರಿಸುತ್ತಿದ್ದಾರೆ. ಶೈಕ್ಷಣಿಕವಾಗಿ ಮಕ್ಕಳನ್ನು ಶಾಲೆಗೆ ಕಳುಹಿಸುವುದರಿಂದ ಉತ್ತಮ ಜೀವನ ರೂಪಿಸಬಹುದು ಎಂಬ ಅರಿವು ಮೂಡಿದೆ. ಸಂಘ, ಸಂಸ್ಥೆಗಳನ್ನು ಸ್ಥಾಪಿಸಿ ಕೊಳ್ಳಬೇಕೆಂಬ ಅರಿವು ಸಮುದಾಯದಲ್ಲಿ ಹೊಸ ಮನ್ವಂತರದ ಪರಿವರ್ತನೆಯ ಸೂಚನೆಯಾಗಿ ಕಂಡುಬರುತ್ತಿದೆ.

* ದೂರದರ್ಶನ, ಟೇಪ್‌ರೆಕಾರ್ಡರ್, ಮೊಬೈಲ್, ಮೋಟಾರ ಸೈಕಲ್ ವಾಹನಗಳು ಇರುಳಿಗರ ಸಮುದಾಯದೊಳಕ್ಕೆ ಪ್ರವೇಶ ಮಾಡಿವೆ.

೮.೬. ಜಾಗತೀಕರಣದ ಹಾದಿಯಲ್ಲಿ ಇರುಳಿಗರು

ಜಾಗತೀಕರಣ ಎಂಬ ಸುದ್ದಿಯೇ ಜಗತ್ತನ್ನು ಕಿರಿದಾಗಿಸುವ ಹಾಗೂ ಜಗತ್ತಿನ ಎಲ್ಲ ವಿಷಯಗಳನ್ನು ವ್ಯಾಪಾರ ಕೇಂದ್ರವಾಗಿ ನೋಡುವ ಕ್ರಮವಾಗಿ ಬೆಳೆದಿದೆ. ಇದು ಜಗತ್ತಿನ ಹಲವು ವಿಚಾರಗಳಲ್ಲಿ ಬದಲಾವಣೆ ಮಾಡಿದೆ. ಅಂತೆಯೇ ಭಾರತದಂತಹ ಬಹುಸಂಸ್ಕೃತಿಯ ದೇಶದಲ್ಲಿ ಇದರ ಪ್ರಭಾವ ಕಡಿಮೆ ಏನೂ ಇಲ್ಲ. ಬಹುತೇಕ ಬುಡಕಟ್ಟು ಸಮುದಾಯಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಿದೆ. ಇದರ ಪ್ರಭಾವದ ನೆರಳು ಕಾಡು–ನಾಡು, ಗುಹೆ–ಗುಡಾರ ಯಾವುದನ್ನು ಬೀಡದೆ ವಿಸ್ತರಿಸುತ್ತಿದೆ. ಅರಣ್ಯವಾಸಿ ಬುಡಕಟ್ಟುಗಳ ಜೀವನಕ್ರಮ, ಆಚಾರ–ವಿಚಾರ, ಧಾರ್ಮಿಕತೆ ಆರ್ಥಿಕ ವಿಚಾರಗಳಲ್ಲಿ ಇದರ ಪ್ರಭಾವ ಹೆಚ್ಚಿದಂತೆ ಕಂಡುಬರುತ್ತಿದೆ. "ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಸೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಕೃಷಿ, ವೈದ್ಯ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ ತಂತ್ರಜ್ಞಾನವೇ ಜ್ಞಾನ ಎಂದು ರೂಪಿಸುವ ಇಂದಿನ ಆಲೋಚನೆಗೆ ಪ್ರತಿಯಾಗಿ ಇವರ ಪರಂಪರೆ ಜ್ಞಾನ ಶಾಖೆಯಲ್ಲಿ ಹುದುಗಿರುವ ದೇಸೀ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕು".[೧೪]

ಭಾರತದ ಮಟ್ಟಿಗೆ ಜಾಗತೀಕರಣವು ಸರ್ವವ್ಯಾಪಕವಾಗಿ ಆಕ್ರಮಿಸುತ್ತಿದೆ. ನಿಸರ್ಗ ಜೀವನಕ್ಕೆ ಮತ್ತೊಂದು ಹೆಸರೇ ಬುಡಕಟ್ಟು ಸಮುದಾಯ. ನಿಸರ್ಗ ಬುಡಕಟ್ಟು ಜೀವನದ ಒಂದು ದೇಹ ಎರಡು ಆತ್ಮ ಎನಿಸುವಷ್ಟು ಸಹ ಸಂಬಂಧ ಹೊಂದಿದ್ದು, ಹಂಚಿ ತಿನ್ನುವ, ಕೊಟ್ಟು ಪಡೆಯುವ ಸೌಹಾರ್ದಯುತ ಜೀವನಶೈಲಿಗೆ ವಿರುದ್ಧವಾದುದೇ ಜಾಗತೀಕರಣ. ಜಗತ್ತಿನಲ್ಲಿ ಸಮೃದ್ಧತೆಯನ್ನು, ಸುಮಧುರ ಸಂಬಂಧ ಕಲ್ಪಿಸುವುದೇ ತನ್ನ ಉದ್ದೇಶವೆಂದು ಸಾರುತ್ತಾ ಕನ್ನಡ ಜಾನಪದದಲ್ಲಿ ಬರುವ

ಮಾತಿನಂತೆ ಮೊದಲು ಮಕ್ಕಳನ್ನು ಚಿವುಟಿ ಅಳಿಸಿ ಕೂಗಿಸಿ ನಂತರ ತಾನೇ ಅವರನ್ನು ತೂಗಿ ಮಲಗಿಸುವಂತೆ ಆಧುನಿಕ ಚಕ್ರವ್ಯೂಹವಾದ ಜಾಗತೀಕರಣ ಕಾರ್ಯಕೈಗೊಂಡಿದೆ. ಬುಡಕಟ್ಟು ಜನರು ಸಹ ತಿಳಿಯದಂತೆ ಇದರ ಪ್ರಭಾವಕ್ಕೆ ಸಿಲುಕಿ ಆನಂದಿಸುತ್ತಿದ್ದಾರೆ. ನಮ್ಮಗಳ ಅತಿಯಾಸೆ ವಿದ್ಯುಚ್ಚಕ್ತಿ ಬೇಕೆಂದು ಅಣೆಕಟ್ಟುಗಳು ಕಟ್ಟುತ್ತೇವೆ ಆರ್ಥಿಕ ಸಬಲತೆ ಕಾಣುತ್ತೇವೆ ಎಂದು ಹೇಳಿ ಬೆಲೆಕಟ್ಟಲಾಗದ ಜೀವಂತ ಬುಡಕಟ್ಟು ಸಂಸ್ಕೃತಿಯ ಮೂಲವಾದ ಸಸ್ಯಸಂಪತ್ತು, ವನಸಂಪತ್ತುಗಳನ್ನು ನಾಶ ಮಾಡುತ್ತಿದ್ದೇವೆ. ಜಾಗತೀಕರಣದ ಅಮಲಿನಲ್ಲಿ ಆರ್ಥಿಕತೆ ಸಾಧಿಸುವತ್ತ ದಾಪುಗಾಲು ಹಾಕುತ್ತ ಈ ಹೊತ್ತಿನಲ್ಲಿ ಭಾರತದ ಬುಡಕಟ್ಟು ಜನರ ಜೀವನವನ್ನು ಹೇಗೆ ಪೂರೈಸುತ್ತಿದ್ದೇವೆ ಎಂಬುದಕ್ಕೆ ತಾಜಾ ಉದಾಹರಣೆ. ನಮ್ಮ ದೇಶದಲ್ಲಿ ಅತಿಹೆಚ್ಚು ಬುಡಕಟ್ಟು ಜನರು ವಾಸಿಸುವ ರಾಜ್ಯಗಳಾದ ಛತ್ತಿಸ್‌ಘಡ್, ಜಾರ್ಖಂಡ್, ಒರಿಸ್ಸಾ, ರಾಜ್ಯಗಳತ್ತ ಗಮನಿಸಿದರೆ ಇದರ ವಿನಾಶಕಾರಿ ಬೆಳವಣಿಗೆ ಗೋಚರಿಸುತ್ತದೆ. ಹೆಚ್ಚು ಖನಿಜ ಸಂಪತ್ತನ್ನು ಹೊಂದಿರುವ ಈ ರಾಜ್ಯಗಳಲ್ಲಿ ಲಕ್ಷಾಂತರ ಆದಿವಾಸಿಗಳ ಜೀವನ ಹೇಗೆ ದುರ್ಬಲಗೊಳ್ಳುತ್ತಿದೆ ಎಂದು ನೋಡಬಹುದು. ಇದು ಇವರ ಭೌತಿಕ ಸ್ಥಿತಿಯ ಮೇಲೆ ಮಾಡಿದ ದಾಳಿಯಾದರೆ ಇನ್ನು ಜಾಗತೀಕರಣದ ಪ್ರಭಾವ ಇಷ್ಟಕ್ಕೆ ನಿಲ್ಲದೆ ಇವರ ಸಂಸ್ಕೃತಿ, ಆಚಾರ-ವಿಚಾರ, ಜೀವನಶೈಲಿ, ಸಂಪಾದನೆಯ ಮೇಲೆ ಮತ್ತೊಂದು ರೀತಿಯಲ್ಲಿ ದಾಳಿ ಇಡುತ್ತಿದೆ. ಜಾಗತೀಕರಣವು ಎಲ್ಲವನ್ನು ಉದ್ಯಮರೂಪದಲ್ಲಿ ಲಾಭಾಂಶವಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದ ಬುಡಕಟ್ಟು ಜನರ ಪ್ರತಿಯೊಂದು ಜೀವನಕ್ರಮವನ್ನು ತಮ್ಮದಾಗಿಸಿಕೊಂಡು ಹಣ ಮಾಡುವ ಹತ್ತು ಹಲವು ರೂಪಗಳನ್ನು ಇಂದಿನ ಜಾಗತೀಕರಣ ಉಂಟುಮಾಡಿದೆ. ಈ ಸಮುದಾಯಗಳು ಜಾಗತೀಕರಣದಿಂದ ಪಡೆದಿದ್ದಕ್ಕಿಂತ ತಮ್ಮನ್ನು ತಾವು ಮಾರುಕಟ್ಟೆಗೆ ತೆರೆದುಕೊಂಡಂತೆ ಭಾಸವಾಗುತ್ತಿದೆ. ಇಂತಹ ಹತ್ತು ಹಲವು ಘಟನೆಗಳನ್ನು ನಿರೂಪಿಸಬಹುದು.

* ಬುಡಕಟ್ಟು ಜನರ ಜಾನಪದ ಸಂಗೀತದ ತಾಳ ಮೇಳವನ್ನು ತಮ್ಮದಾಗಿಸಿಕೊಂಡು ಹಣ ಮಾಡುವ ಪರಿ.
* ಬುಡಕಟ್ಟು ಜನರ ಕಾಡಿನ ವಸತಿ ಮಾದರಿಗಳನ್ನು ಬಳಸಿ ಹಣ ಮಾಡುವ ಬಗೆ.
* ಇವರ ನೃತ್ಯ, ಜೀವನಕ್ರಮಗಳನ್ನು ಆಧರಿಸಿ ಸಾಕ್ಷ್ಯಚಿತ್ರಗಳು, ಟೆಲಿಚಿತ್ರಗಳು, ದೂರದರ್ಶನದಲ್ಲಿ ರಿಯಾಲಿಟಿ ಶೋಗಳನ್ನು ಮಾಡಿ ಹಣ ಮಾಡುವ ಪರಿ.
* ಬುಡಕಟ್ಟು ಜನರ ನಾಟಿವೈದ್ಯ, ಆಹಾರ, ಜೇನು, ಮಾಕಳಿಬೇರು, ಸೂಗಡೆಬೇರುಗಳನ್ನು ಬ್ರಾಂಡ್ ಹೆಸರಿನಲ್ಲಿ ಮಾರಾಟ ಮಾಡುವ ಮತ್ತೊಂದು ಬಗೆ.
* ಬುಡಕಟ್ಟು ಜನರ ಒಡವೆ ವಸ್ತುಗಳ ವಿನ್ಯಾಸ ತಯಾರಿಕೆಯಲ್ಲಿ ತೊಡಗಿಸಿಕೊಂಡು ಜಾಗತೀಕರಣ ಸಂದರ್ಭದಲ್ಲಿ ಹಣ ಮಾಡುವ ಇತರೆ ಸಮುದಾಯಗಳು.

* ತಮ್ಮ ಪ್ರಸಾರದ ಅವಧಿಯನ್ನು (ಟಿ.ಆರ್.ಪಿ.) ಹೆಚ್ಚಿಸಿಕೊಳ್ಳುವುದಕ್ಕಾಗಿ ಬುಡಕಟ್ಟು ಜನರನ್ನು ಹಾಡಿಯಿಂದ ನಾಡಿಗೆ ತಂದು ಇಲ್ಲಿ ಇರಲಾರದೆ ಕಾಡಿಗೆ ಹೋಗಲಾರದ ಪರಿಸ್ಥಿತಿ ನಿರ್ಮಾಣ ಮಾಡಿ ಪ್ರಾಣ ತೆಗೆಯುವ ಜಾಗತೀಕರಣದ ಅಮಾನವೀಯ ಮುಖದ ದರ್ಶನ ಮಾಡಿಸುತ್ತದೆ.
* ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಕೇಲವು ವೃತ್ತಿ ಆಧಾರಿತ ಸಮುದಾಯಗಳ ಮೂಲ ವೃತ್ತಿಯನ್ನು ತಮ್ಮದಾಗಿಸಿಕೊಂಡು ಬೆಳೆಯುತ್ತಿರುವ ಪರಿ. ಉದಾಹರಣೆಗೆ ಚರ್ಮಕುಟೀರ ಉದ್ಯಮದ ಕಡೆಗೆ ಹೋಗಿ ಬಾಟಾ, ಪ್ಯಾರಗಾನ್ ಮುಂತಾದ ಕಂಪನಿಗಳು.

ಹೀಗೆ ಹತ್ತು ಹಲವು ಬಗೆಯಲ್ಲಿ ಜಾಗತೀಕರಣವು ಇವರ ಭೌತಿಕ, ಸಾಂಸ್ಕೃತಿಕ, ಸಾಮಾಜಿಕ ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ದಾಳಿ ಮಾಡುತ್ತಿರುವುದು. ನಿಚ್ಚಳವಾಗಿ ಗೋಚರಿಸುತ್ತಿದೆ. ಬುಡಕಟ್ಟು ಜನರ ನಿಸ್ವಾರ್ಥ ಬದುಕು, ಅನುಕಂಪ, ಪರರ ಸಂಕಷ್ಟ ಮತ್ತು ಸ್ಪಂದಿಸುತ್ತಿದ್ದ ಗುಣ ಇವುಗಳನ್ನು ನಾಶಮಾಡುತ್ತ ಹಣಕ್ಕೆ ಶಕ್ತಿಯಿದೆ ಎಂಬ ತತ್ವದಲ್ಲಿ ನಂಬಿಕೆ ಇರಿಸುವಂತೆ ಮಾಡಿದೆ ಜಾಗತೀಕರಣ.

ಹೀಗೆ ಉಂಟಾದ ಜಾಗತೀಕರಣದ ಪ್ರಭಾವ ಇರುಳಿಗ ಸಮುದಾಯದ ಮೇಲೂ ಉಂಟಾಗಿದೆ. ಯಾವುದೇ ಸಮುದಾಯವು ಒಂದು ಜೀವನ ಮಾದರಿಯಲ್ಲಿ ಉಳಿಯಲು ಸಾಧ್ಯವಿಲ್ಲ. ಸಾಮಾಜಿಕ ಜೀವನವಿಧಾನ ಕೂಡ ಕಾಲ ಕ್ರಮೇಣ ಬದಲಾವಣೆಗೆ ತೆರೆದುಕೊಳ್ಳುತ್ತಿರುತ್ತದೆ. ಇದರಿಂದಾಗಿ ಇವರಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ಆಚಾರ ವಿಚಾರಗಳಲ್ಲಿ ಪರಿವರ್ತನೆ ಕಾಣುತ್ತಿವೆ.

ಇರುಳಿಗರು ವಾಸಿಸುವ ಸ್ಥಳಗಳು ಪ್ರಕೃತಿ ನಿರ್ಮಿತ ಸುಂದರ, ಪ್ರಶಾಂತ ಸ್ಥಳವಾದ್ದರಿಂದ ಇವರನ್ನು ಒಕ್ಕಲೆಬ್ಬಿಸಿ ಈ ಸ್ಥಳಗಳಲ್ಲಿ ಸುಂದರವಾದ ಮೋಜಿನ ತಾಣಗಳನ್ನು ನಿರ್ಮಾಣ ಮಾಡಲು ಇಂದಿಗೂ ಪ್ರಯತ್ನ ನಡೆಯುತ್ತಿದೆ. ಬೆಂಗಳೂರು ನಗರ ಹತ್ತಿರವಿರುವುದರಿಂದ ಇವರ ವಾಸಸ್ಥಳಗಳ ಮೇಲೆ ಜಾಗತೀಕರಣದ ಪ್ರಭಾವದಿಂದ ಕಪ್ಪುಛಾಯೆ ಮೂಡಿದೆ.

ಸಮುದಾಯದಲ್ಲಿನ ಅವಿಭಕ್ತ ಕುಟುಂಬಗಳಲ್ಲಿ ಪ್ರೀತಿ ವಾತ್ಸಲ್ಯಗಳು ಇಂದು ಕಣ್ಮರೆಯಾಗಿವೆ. ಕೇವಲ ಗಂಡ-ಹೆಂಡತಿ, ಮಕ್ಕಳು ಮಾತ್ರ ಜೀವನಕ್ಕೆ ಬೇಕಾದ ವ್ಯವಸ್ಥೆ ಮಾಡಿಕೊಳ್ಳುವ ವ್ಯವಸ್ಥೆ ಜಾಗತೀಕರಣದ ಪ್ರಭಾವದಿಂದ ಆಗಿದೆ.

ಹಿಂದೆ ಅರಣ್ಯ ಉಪಉತ್ಪನ್ನಗಳಾದ ಜೇನು ಕಿತ್ತು ಮಾರಾಟ ಮಾಡುವುದು. ಬಿದಿರಿನ ಬುಟ್ಟಿ ಹೆಣೆಯುವುದು, ಕಾಡಿನಿಂದ ಸೌದೆ ತಂದು ಮಾರಾಟ ಮಾಡುತ್ತಿದ್ದ ಇರುಳಿಗರು ಅಲ್ಪ ಆದಾಯ ತರುವ ವೃತ್ತಿಗಳೆಂದು ತಿಳಿದು ಇಂದು ನಗರ ಪ್ರದೇಶದಲ್ಲಿ ಉದ್ಯೋಗ ಅರಸಿ ಹೋಗುತ್ತಿರುವುದು ಮತ್ತೊಂದು ರೀತಿಯ ಪರಿಣಾಮವಾಗಿದೆ.

* ಹಿಂದೆ ಸಮುದಾಯದ ಜನರು ತಮ್ಮ ಪರಂಪರೆಯಿಂದ ಬಂದ ಕಣಿ ಹೇಳುವ ಮೂಲಕ ಊರಿಂದೂರಿಗೆ ಸಾಗಿ ಕಣಿ ಹೇಳುತ್ತಾ ಆಹಾರ ಧಾನ್ಯ, ಹಣವನ್ನು ಗಳಿಸುವ ಪಾರಿಪಾಠ ಇತ್ತು. ಜಾಗತೀಕರಣ ಪ್ರಭಾವದ ತಕ್ಕೆಗೆ ಒಳಗಾಗಿ ಈ ಸಮುದಾಯ ಇಂದು ಈ ಸಂಪ್ರದಾಯವನ್ನು ಬಿಟ್ಟಿದ್ದಾರೆ.

* ಪೊರಕೆ, ಬಾಚಣಿಕೆ, ಮೊರ, ಚಾಪೆಯಂತಹ ಕರಕುಶಲ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದು ಸಮುದಾಯದ ಮೇಲೆ ಜಾಗತೀಕರಣ ಹಾಗೂ ಕೈಗಾರಿಕೆಯ ಪರಿಣಾಮವಾಗಿದೆ. ಈ ವಸ್ತುಗಳ ಸ್ಥಾನಕ್ಕೆ ಪ್ಲಾಸ್ಟಿಕ್ ವಸ್ತುಗಳು ಬಂದಿರುವುದರಿಂದ ಇವರ ಕರಕುಶಲ ಕಲೆಯ ವಸ್ತುಗಳಿಗೆ ಬೆಲೆ ಇಲ್ಲದಂತಾಗಿದೆ.

ಹೀಗೆ ಬದಲಾದ ಸನ್ನಿವೇಶದಲ್ಲಿ ಜಾಗತೀಕ ಮಟ್ಟದ ಕಂಪನಿಗಳಾದ ಟೊಯೋಟಾ, ಬೊಲೆರೋ, ಪೆಪ್ಸಿಕೋಲಾ ಕಾರ್ಖಾನೆಗಳಲ್ಲಿ ದಿನಗೂಲಿ ನೌಕರರಾಗಿ ದುಡಿಯುತ್ತಿದ್ದು, ಮತ್ತೆ ಕೆಲವರು ಹೋಟೆಲ್‌ಗಳಲ್ಲಿ ಇತರೆ ಸಣ್ಣಪುಟ್ಟ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ನೈಸ್ ಕಾರಿಡಾರ್ ಯೋಜನೆ ಜಾರಿಗೆ ಬಂದ ನಂತರ ಮಾಗಡಿ ಮತ್ತು ರಾಮನಗರ ತಾಲೂಕಿನ ಈ ಸಮುದಾಯ ಜನರನ್ನು ನೆಲೆಯಿಲ್ಲದಂತೆ ಒಕ್ಕಲೆಬ್ಬಿಸಿ ಈ ಜಾಗತೀಕರಣದ ಭೂತ ಇವರ ಜೀವನದ ಆರ್ಥಿಕ ಶಕ್ತಿಯನ್ನು ಕುಗ್ಗಿಸುತ್ತಿದೆ. ಹಾಗೆಯೇ ಜಿಲ್ಲೆಯಲ್ಲಿ ಅನಾದಿಕಾಲದಿಂದಲೂ ಆದಿಮ ಸಂಸ್ಕೃತಿಯವರು ಪ್ರೀತಿಸುತ್ತಿದ್ದು ಲಕ್ಷಾಂತರ ಮರಗಳು ನೆಲಕ್ಕುರುಳಿಸಿದೆ. ಜಾಗತೀಕರಣ ಪ್ರಭಾವವನ್ನು ಕೆಲವು ವಾಕ್ಯಗಳಲ್ಲಿ ಹೀಗೆ ಸ್ಪಷ್ಟಪಡಿಸಬಹುದು.

* ಅಗಲವಾದ ರಸ್ತೆಗಳು ಬಂದಿವೆ.
  ಆದರೆ ಮನುಷ್ಯನ ಮನಸ್ಸು ಚಿಕ್ಕದಾಗುತ್ತಿದೆ.

* ಆರ್ಥಿಕತೆಯ ಮೂಲಗಳು ಹೆಚ್ಚಾಗುತ್ತಿವೆ.
  ಆದರೆ ನೈತಿಕತೆಯ ಮೂಲಗಳು ಬತ್ತುತ್ತಿವೆ.

* ಮನೆಯ ವಿನ್ಯಾಸಗಳು ದೊಡ್ಡದಾಗುತ್ತಿವೆ.
  ಆ ಮನೆಯಲ್ಲಿ ವಾಸಿಸುವ ಕುಟುಂಬಗಳು ಚಿಕ್ಕದಾಗುತ್ತಿವೆ.

* ಜಗತ್ತಿನಲ್ಲಿ ಎಲ್ಲ ವಸ್ತುಗಳ ಬೆಲೆ ಹೆಚ್ಚಾಗುತ್ತಿವೆ.
  ಆದರೆ ಮಾನವ ಬೆಲೆ ಮಾತ್ರ ಕಡಿಮೆಯಾಗುತ್ತಿದೆ.

ಜಾಗತೀಕರಣವನ್ನು ಮೆಟ್ಟಿ ನಿಲ್ಲಲು ಬುಡಕಟ್ಟು ಜನಾಂಗವನ್ನು ಬಲಶಾಲಿಯಾಗಿ ಮಾಡಬೇಕಾಗುತ್ತದೆ. ಏಕೆಂದರೆ ಒಂದು ಬುಡಕಟ್ಟು ಜನಾಂಗ ನಾಶವಾದರೆ ಅವರ ಭಾಷೆ, ಸಂಸ್ಕೃತಿ, ಜ್ಞಾನಪರಂಪರೆ ಹೀಗೆ ಎಲ್ಲವೂ ನಶಿಸುವ ಸಾಧ್ಯತೆ ಇದೆ. ಜಗತ್ತಿನಲ್ಲಿ ಪ್ರಕೃತಿಯ ಆರಾಧಕರಾಗಿ ಸಾವಿರಾರು ವರ್ಷಗಳಿಂದ ಇಂತಹ ಅಮೂಲ್ಯ ಸಂಸ್ಕೃತಿಯ ಹರಿಕಾರರಾಗಿ ಉಳಿದ ಬುಡಕಟ್ಟೇತರ ಜನರ

ಜೀವನಕ್ಕೆ ಆದರ್ಶವಾಗಿ ಇರಬಲ್ಲವರು ಇರುಳಿಗರು ಇಂತಹ ಸಮುದಾಯಗಳ ಬಗ್ಗೆ ಕಾಳಜಿ ಜೊತೆಗೆ ಅವರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಬೇಕಾಗಿದೆ.

ಸಾಮಾಜಿಕ ಪರಿವರ್ತನೆಯಲ್ಲಿ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಚ್ಚೇನೂ ಬದಲಾವಣೆಗಳು ಕಂಡುಬರದಿದ್ದರೂ ಕೆಲವರಾದರೂ ಇಂತಹ ಆಧುನಿಕ ಪರಿವರ್ತನೆಯ ದಿಕ್ಕಿನತ್ತ ಸಾಗುತ್ತಿರುವುದು ಹಾಗೂ ತಮ್ಮ ಮೂಲವೃತ್ತಿ ಜೀವನಕ್ಕೆ ವಿದಾಯ ಹೇಳಿ ಸಮುದಾಯವು ಆಮೆನಡಿಗೆಯಲ್ಲಿ ಪರಿವರ್ತನ ಜಾಡಿನ ಕಡೆಗೆ ಸಾಗುತ್ತಿರುವುದು ಶುಭ ಸಂಗತಿಯೇ ಸರಿ.

ಅಡಿಟಿಪ್ಪಣಿಗಳು

೧. Sibi Zakarias, The Microlevel Impact, Social Dvelopment Programmes Among the Kadar Tribe of Kerala. project Report, Center for Development Studies. Thiruvanthapuram, Pp. 7-9, 2003

೨. ನಾರಾಯಣ ಕಿಕ್ಕೇರಿ (ಸಂ), ಬುಡಕಟ್ಟು ಸಂಸ್ಕೃತಿ, ಅರುಹು-ಕುರುಹ ಪ್ರಕಾಶನ, ಕುವೆಂಪುನಗರ, ಮೈಸೂರು, ಪು. ೬-೮, ೨೦೧೧

೩. ಸಿದ್ಧಲಿಂಗಯ್ಯ, ೮೧ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ಭಾಷಣ, ಹಾಸನ, ಪು. ೨೨-೨೩, ೧ ಫೆಬ್ರವರಿ, ೨೦೧೫

೪. ಪ್ರಜಾವಾಣಿ ದಿನಪತ್ರಿಕೆ, ನಮ್ಮ ರಾಮನಗರ ವಿಭಾಗ, ಪು. ೭, ೨೧-೮-೨೦೦೫

೫. ಯೋಜನಾ ಅಭಿವೃದ್ಧಿ ಮಾಸಪತ್ರಿಕೆ, ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಬೆಂಗಳೂರು, ಪು. ೧೮-೧೯, ೨೦೧೪

೬. ಅದೇ, ಪು. ೧೮-೧೯, ೨೦೧೪

೭. ಪ್ರಭಾಕರ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೧೫೦, ೨೦೦೦

೮. ಯೋಜನಾ ಅಭಿವೃದ್ಧಿ ಮಾಸಪತ್ರಿಕೆ, ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ, ಬೆಂಗಳೂರು, ಪು. ೪೩-೪೪, ೨೦೧೪

೯. ಬರಗೂರು ರಾಮಚಂದ್ರಪ್ಪ, ವರ್ತಮಾನ (ಲೇಖನ), ಪ್ರಜಾವಾಣಿ, ಪು. ೯, ೧೪ ಅಗಸ್ಟ್, ೨೦೧೫.

೧೦. ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ಪು. ೨-೯, ೨೦೧೪

೧೧. ಅಂಬೇಡ್ಕರವರ ಬರಹಗಳು ಮತ್ತು ಭಾಷಣಗಳು, ಸಂಪುಟ–೧, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ಪು.೩೯, ೧೯೯೧

೧೨. ಸಮಾಜಶಾಸ್ತ್ರದ ಸಿದ್ಧಾಂತಗಳು ಮತ್ತು ಚಿಂತಕರು, ಕರ್ನಾಟಕ ಮುಕ್ತವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು, ಪು. ೨೮–೨೯, ೨೦೦೮

೧೩. ಚಲುವರಾಜು, ದಕ್ಕಲಿಗರ ಸಂಸ್ಕೃತಿ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.೬೯, ೧೯೯೩.

೧೪. ಕೇಶವನ್ ಪ್ರಸಾದ್ ಕೆ., ಬುಂಡೆಬೇಸ್ತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೫–೬, ೨೦೧೦.

ಸಮಾರೋಪ

ಶ್ರೇಣೀಕೃತ ಸಮಾಜದಲ್ಲಿ ಚಲನಶೀಲತೆ ಸಮುದಾಯದ ಬಹುಮುಖ್ಯ ಲಕ್ಷಣ. ಬದಲಾಗುವ ಕಾಲದ ವ್ಯವಸ್ಥೆಗೆ ಸಮಾಜ ಅಥವಾ ಸಮುದಾಯ ತನ್ನನ್ನು ವಿಸ್ತರಿಸಿಕೊಳ್ಳುತ್ತಾ ಹಾಗೂ ಸೂಕ್ಷ್ಮತೆಗೆ ಹೊಂದಿಕೊಳ್ಳುವ ಪ್ರಯತ್ನವನ್ನು ಸದಾ ತೆರೆದುಕೊಂಡಿರುತ್ತದೆ. ಹೀಗೆ ಬದಲಾವಣೆಯ ಪ್ರಕ್ರಿಯೆಗೆ ಇರುಳಿಗ ಸಮುದಾಯವು ಒಳಗಾಗಿದ್ದು ಗಮನಾರ್ಹ ಸಂಗತಿ. ಹಾಗೆಯೇ ತನ್ನ ಆದಿಮ ಸಂಸ್ಕೃತಿ-ಸಂಸ್ಕಾರಗಳನ್ನು ಜೀವಂತವಾಗಿ ಕಾದಿಟ್ಟು ವರ್ತಮಾನದಲ್ಲಿ ಮುಖಾಮುಖಿಯಾಗುವ ಹತ್ತು ಹಲವು ಸವಾಲುಗಳಿಗೆ ತನ್ನ ಪಾರಂಪರಿಕವಾದ ಸಾಂಪ್ರದಾಯಿಕ ಗುಣದ ಮೂಲಕವೇ ಪ್ರತಿಸ್ಪಂದಿಸುವ ದೃಢನಿರ್ಧಾರಗಳನ್ನು ಸಮುದಾಯವು ತೆಗೆದುಕೊಂಡಿದೆ. ಪ್ರಸ್ತುತ ಅಧ್ಯಯನವು ಇರುಳಿಗ ಸಮುದಾಯದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಬದಲಾವಣೆ ಕುರಿತು ವಿಶ್ಲೇಷಿಸುವ ನಿಟ್ಟಿನಲ್ಲಿ ಒಂದು ಪ್ರಯತ್ನವಾಗಿದೆ.

ಬಹು ಶತಮಾನಗಳ ಹಿಂದೆ ಕಾಡಿನಲ್ಲಿನ ನಿಸರ್ಗದೊಡನೆ ಸಹಸಂಬಂಧಿಗಳಾಗಿ ಅವುಗಳೊಂದಿಗೆ ಉತ್ಪಾದಕತೆ ಮತ್ತು ವ್ಯವಹಾರ ನಡೆಸುತ್ತಾ ಸ್ವಚ್ಛಂದ ಜೀವನ ನಡೆಸುತ್ತಿದ್ದ ಸಮುದಾಯ ಕಾಲ ವಿಘಟನೆಯಿಂದಾಗಿ ವೃತ್ತಿಗಳ ಕಾರಣಕ್ಕಾಗಿ ಪಂಥ ಪಂಗಡಗಳ ಪರಧಿಗೆ ಬಂದು ಅಲ್ಲಿಂದ ಮುಂದೆ ಜಾತಿಗಳಾಗಿ ಪರಿವರ್ತನೆಗೊಂಡವು. ಯಾವುದೇ ರಾಜಪ್ರಭುತ್ವದ ಹಂಗಿಲ್ಲದೆ ಬಹುತೇಕ ಸ್ವಾತಂತ್ರ್ಯಮಯ ಜೀವನ ನಡೆಸಿದ ಇರುಳಿಗ ಸಮುದಾಯ ತಮ್ಮ ಮೂಲ ನೆಲೆ ಕಳೆದುಕೊಂಡು ಓಡಾಡುವ ಪರಿಸ್ಥಿತಿ ಬಂದಿದ್ದು ಮಾತ್ರ ವಿಪರ್ಯಾಸ. ವಸಾಹತುಶಾಹಿ ಬ್ರಿಟಿಷ್ ಆಡಳಿತದ ಪ್ಲಾಂಟೇಷನ್ ಆಸೆಗಾಗಿ ನಿರ್ಗತಿಕರಾದ ಇರುಳಿಗ ಸಮುದಾಯ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಹೋರಾಡಿತು. ಅದರ ಫಲವಾಗಿ

‘ಅಪರಾಧಿ ಬುಡಕಟ್ಟು’ ಎಂಬ ಹಣೆಪಟ್ಟಿಯೊಂದಿಗೆ ಸ್ವಲ್ಪ ಸಮಯ ಅಲೆಮಾರಿ ಜೀವನ ನಡೆಸಬೇಕಾದ ಧಾರುಣ ಪರಿಸ್ಥಿತಿ ಅನುಭವಿಸಬೇಕಾಯಿತು. ಹೀಗೆ ಸ್ವಾತಂತ್ರ್ಯಪೂರ್ವ ವ್ಯವಸ್ಥೆಯಲ್ಲಿ ಅನುಭವಿಸಿದ ನೋವು ಹತಾಶೆಗಳಾದರೆ, ಸ್ವತಂತ್ರ ಭಾರತದಲ್ಲಿ ದೇಶಿಯ ಆಡಳಿತ ವ್ಯವಸ್ಥೆಯಲ್ಲಿ ತಮ್ಮ ಮೂಲನೆಲೆಗಳಲ್ಲಿಯೇ ಏನಾದರೂ ಬದಲಾವಣೆ ಆಗಿದೆಯೇ? ಅದು ಇಲ್ಲ. ಅರಣ್ಯಾಧಿಕಾರಿಗಳು, ಪೋಲಿಸರು ಮತ್ತು ನಾಗರಿಕ ಸಮುದಾಯಗಳಿಂದ ನಿತ್ಯ ನಿರಂತರ ನೋವು, ಸುಲಿಗೆ, ಸ್ಥಳಾಂತರ, ನಿಂದನೆಯಂತಹ ಹತ್ತು ಹಲವು ಬಗೆಯ ಕಷ್ಟನಷ್ಟಗಳನ್ನು ಇಂದಿಗೂ ಅನುಭವಿಸುವುದು ತಪ್ಪಲಿಲ್ಲ. ಅವೆಲ್ಲವೂ ಸಮುದಾಯದ ಅಂತರಾಳದ ನೋವಿನ ನುಡಿಯಾಗಿ ಹೊರಹೊಮ್ಮಿದೆ.

ಪ್ರಸ್ತುತ ಈ ಅಧ್ಯಯನದ ಪ್ರಮುಖ ಉದ್ದೇಶವೆಂದರೆ ರಾಮನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ವಾಸಿಸುವ ಇರುಳಿಗ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಬಗ್ಗೆ ವಿವರವಾಗಿ ತಿಳಿಯುವುದು.

ಇರುಳಿಗ ಸಮುದಾಯವು ಪರಿಶಿಷ್ಟ ಪಂಗಡಕ್ಕೆ ಸೇರಿದ ಬುಡಕಟ್ಟು ಸಮುದಾಯವಾಗಿದ್ದು. ಹೆಚ್ಚಾಗಿ ರಾಮನಗರ ಜಿಲ್ಲೆಯ ಕನಕಪುರ, ರಾಮನಗರ, ಮಾಗಡಿ, ಚನ್ನಪಟ್ಟಣ ತಾಲೂಕಿನ ಪ್ರದೇಶಗಳಲ್ಲಿ ಕಾಣಸಿಗುತ್ತಾರೆ. ಕೆಲವು ಗುಂಪುಗಳು ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ಮತ್ತು ಹುಣಸೂರು ತಾಲೂಕು, ಚಾಮರಾಜನಗರ ಜಿಲ್ಲೆ, ಮಂಡ್ಯ ಜಿಲ್ಲೆಯಲ್ಲಿ ಚದುರಿದಂತೆ ಹಾಗೆಯೇ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೆಕಲ್ಲು, ಬನ್ನೇರುಘಟ್ಟ ಅರಣ್ಯ ವ್ಯಾಪ್ತಿ ಪ್ರದೇಶಗಳಲ್ಲಿ ಕಾಣಸಿಗುತ್ತಾರೆ. ಹಾಗೆಯೇ ದಕ್ಷಿಣ ಭಾರತದ ತಮಿಳುನಾಡು, ಕೇರಳ ಮತ್ತು ಪಾಂಡಿಚೇರಿ ರಾಜ್ಯಗಳಲ್ಲಿ ಕಂಡುಬರುತ್ತಾರೆ. ಇರುಳಿಗ ಸಮುದಾಯವು ಒಂದು ಬುಡಕಟ್ಟು ಪಂಗಡವಾಗಿದ್ದು ಕರ್ನಾಟಕದ ಇತರ ಪರಿಶಿಷ್ಟ ಪಂಗಡಗಳಂತೆ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳು ಕೆಳಮಟ್ಟದಲ್ಲಿದೆ.

ದೇಶದಲ್ಲಿ ಅಭಿವೃದ್ಧಿ ಯೋಜನೆಗಳ ನೆಪದಲ್ಲಿ ಅನೇಕ ಸಮುದಾಯಗಳನ್ನು ಒಕ್ಕಲೆಬ್ಬಿಸುವಂತೆ ಇರುಳಿಗರನ್ನು ಒಕ್ಕಲೆಬ್ಬಿಸುವಂತಹ ಕಾರ್ಯ ನಿರಂತರವಾಗಿ ಸಂಭವಿಸುತ್ತಲೇ ಬಂದಿದೆ. ಇಂದಿನ ಸ್ಪರ್ಧಾತ್ಮಕ, ಆಧುನಿಕ ಯುಗದಲ್ಲಿ ಪ್ರಪಂಚದ ಬಹುತೇಕ ರಾಷ್ಟ್ರಗಳು ಬುಡಕಟ್ಟುಗಳ ಮೇಲೆ ಧರ್ಮ, ರಾಜಕೀಯ, ಸಂಸ್ಕೃತಿಕರಣವನ್ನು ಹೆಸರಿನಲ್ಲಿ ಒತ್ತಾಯಪೂರ್ವಕವಾಗಿ ಹೇರುತ್ತಿವೆ. ಅವರಿಗೆ ಅಗತ್ಯವಾದ ಮೂಲಭೂತ ಅವಶ್ಯಕತೆಗಳಾದ ಮಾನವಹಕ್ಕು, ಸಾಮಾಜಿಕ, ಆರ್ಥಿಕ, ಸ್ವಾತಂತ್ರ್ಯವನ್ನು ಕಿತ್ತುಕೊಂಡು ಜೀವನಪೂರ್ತಿ ಸಂಘರ್ಷಯುತ ಜೀವನ ನಡೆಸುವ ವಾತಾವರಣವನ್ನು ಸೃಷ್ಟಿಸುತ್ತಿವೆ. ಹೀಗೆಯೇ ಜಗತ್ತಿನ ಬಹುತೇಕ ಸಮಸ್ಯೆಗಳನ್ನು, ಪಿತೂರಿಗಳನ್ನು, ಬಿಕ್ಕಟ್ಟುಗಳನ್ನು ಚಾರಿತ್ರಿಕವಾಗಿ ಎಲ್ಲಾ ಸಮುದಾಯಗಳು ಬೆನ್ನಿಗೆ ಕಟ್ಟಿಕೊಂಡು ಜೀವನ ಸಾಗಿಸುತ್ತಿವೆ. ಶತ ಶತಮಾನಗಳಿಂದ ಅಂಧಕಾರದ ಶೋಷಣೆ ಎಂಬ ಬವಣೆಯ ಬದುಕಿನಲ್ಲೇ ನಿತ್ಯನಿರಂತರವಾಗಿ ಜೀವನ ನಡೆಸುತ್ತಿರುವುದು ಬದುಕಿನ ಭಾಗವಾಗಿ ಬಿಟ್ಟಿದೆ. ಹೀಗೆ ಇಂತಹ ಶೋಷಣೆಗೆ ಒಳಗಾದ ಸಮುದಾಯಗಳಲ್ಲಿ ಇರುಳಿಗ ಸಮುದಾಯವು

ಒಂದು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳುವಳಿಕೆದಾರರು ತೆರೆದಿಟ್ಟ ಒಂದೊಂದು ಸಮಸ್ಯೆಗಳ ಸರಮಾಲೆಯ ಹಿಂದೆ ಅವರ ಬದುಕಿನ ಕರಾಳ ರೂಪವಿದೆ. ನೋವಿನ ಕಥೆ ವ್ಯಥೆಯಿದೆ. ಸಮಸ್ಯೆಗಳು ಅವರನ್ನು ಶೋಷಣೆಗೆ ಗುರಿಪಡಿಸಿವೆ. ಅವರ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕತೆಯ ಜೀವನದ ಮೇಲೆ ಗಾಬರಿ ಹುಟ್ಟಿಸುವಷ್ಟು ಘಾಸಿಗೊಳಿಸಿವೆ. ಆಧುನಿಕ ವ್ಯವಸ್ಥೆಯಲ್ಲಿ ಎದುರುಗೊಂಡ ಅನೇಕ ಸಮಸ್ಯೆಗಳ ಜೇಡದ ಬಲೆಯಂತೆ ಸಿಕ್ಕಿ ಹಾಕಿಕೊಂಡಿವೆ. ಹೀಗಿದ್ದರೂ ಆಧುನಿಕ ಬದಲಾವಣೆಗೆ ತಮ್ಮ ಬದುಕು ಚಲನಶೀಲತೆಗೆ ಒಪ್ಪಿಕೊಳ್ಳುವ ಅನಿವಾರ್ಯತೆ ಸೃಷ್ಟಿಸಿದೆ. ತಮ್ಮ ಪ್ರತಿ ಪ್ರಯತ್ನದ ಹಿಂದೆ ಸಮುದಾಯದ ಹೊರಗಿನ ಒತ್ತಡಗಳು ಹಾಗೂ ಒಳಗಿನ ಒತ್ತಡಗಳು ಕಾರಣವಾಗಿರುತ್ತದೆ. ಈ ನಿಟ್ಟಿನಲ್ಲಿ ಇರುಳಿಗರು ಕಾಲದಿಂದ ಕಾಲಕ್ಕೆ ಸ್ಥಿತ್ಯಂತರಕ್ಕೆ ಒಳಗಾಗುತ್ತಿದ್ದಾರೆ. ಸ್ಥಿತ್ಯಂತರವೇನೂ ಸಂಪೂರ್ಣ ವಾಗಿ ಅಲ್ಲ. ತಮ್ಮ ಪೂರ್ವದ ಸಾಂಸ್ಕೃತಿಕ ಚಹರೆಗಳನ್ನುಳಿಸಿಕೊಂಡು ಬದಲಾಗುತ್ತದೆ. ಇಂತಹ ಹತ್ತು ಹಲವು ಬಗೆಯ ಬದಲಾವಣೆಯನ್ನು ಸ್ವಾಗತಿಸುವ ಮನಸ್ಥಿತಿಯನ್ನು ಇರುಳಿಗ ಸಮುದಾಯವು ಕಾಯ್ದುಕೊಂಡಿದೆ.

ಇರುಳಿಗ ಬುಡಕಟ್ಟು ಸಮುದಾಯವು ಜಾಗತೀಕರಣದ ಈ ಸನ್ನಿವೇಶದಲ್ಲಿ ಚಲನಶೀಲತೆಯ ಗುಣವನ್ನು ಸದಾ ಸ್ವೀಕರಿಸುವ ಗುಣ ಹೊಂದಿರುವುದರಿಂದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ, ಶೈಕ್ಷಣಿಕ ವ್ಯವಸ್ಥೆಗಳಲ್ಲಿ ಬದಲಾವಣೆಗಳಾಗಿವೆ. ಆಧುನಿಕರಣ, ಕೈಗಾರಿಕರಣ, ವಿಜ್ಞಾನ–ತಂತ್ರಜ್ಞಾನ, ಜಾಗತೀಕರಣಗಳ ಪ್ರಭಾವದಿಂದ ಬದಲಾವಣೆ ಆಗಿರುವುದು ಪ್ರಸ್ತುತ ಅಧ್ಯಯನದಿಂದ ಸ್ಪಷ್ಟವಾಗುವುದು. ಇರುಳಿಗರು ವಾಸಿಸುವ ಪರಿಸರದಲ್ಲಿನ ಇತರ ಸಮುದಾಯಗಳಾದ ಒಕ್ಕಲಿಗರು, ಲಿಂಗಾಯಿತರು, ವೈಷ್ಣವರು ಮತ್ತು ಇತರೆ ಮೇಲ್ಜಾತಿಯ ಪ್ರಭಾವ ಕೂಡ ಇವರ ಮೇಲೆ ಆಗಿರುವುದನ್ನು ಕಡೆಗಣಿಸುವಂತಿಲ್ಲ. ಈ ಬದಲಾವಣೆಯ ಅಂಶಗಳನ್ನು ಸಮುದಾಯದ ಅಧ್ಯಯನ ವಿಧಾನಗಳಾದ ಅವಲೋಕನ, ಸಂದರ್ಶನ, ಪ್ರಶ್ನಾವಳಿ ವಿಧಾನಗಳು, ಕ್ಷೇತ್ರಕಾರ್ಯ ಸಮಯದಲ್ಲಿ ಮಾಹಿತಿ ಸಮೀಕ್ಷೆಗಳನ್ನು ಬಳಸಿ ಅಧ್ಯಯನ ಕೈಗೊಳ್ಳಲಾಗಿದೆ.

ಪ್ರಸ್ತುತ ಈ ಮಹಾಪ್ರಬಂಧದ ವ್ಯಾಪ್ತಿಗೆ ಸಂಬಂಧಿಸಿದಂತೆ ರಾಮನಗರ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಇರುಳಿಗರು ವಾಸಿಸುವ ವಾಸಸ್ಥಳಗಳನ್ನು ಆಯ್ದುಕೊಳ್ಳಲಾಗಿದೆ. ಅಲ್ಲಿ ವಾಸಿಸುವ ಇರುಳಿಗರ ಬದುಕಿನ ಬವಣೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇತರ ಸಾಮಾಜಿಕ, ಸ್ವಾವಲಂಬನೆ, ಆರ್ಥಿಕ ಸುಭದ್ರತೆ, ರಾಜಕೀಯ ಸ್ಥಾನಮಾನ ಪಡೆಯುವಲ್ಲಿ ಇರುಳಿಗರು ಹಲವು ಪ್ರಯತ್ನಗಳನ್ನು ಮಾಡಿ ಯಶಸ್ಸು ಕಂಡಿದ್ದಾರೆ, ಮತ್ತೆ ಕೆಲವು ಕಡೆ ಪ್ರಯತ್ನಕ್ಕೆ ಸೋಲಾಗಿದೆ. ಸೋಲಿಗೆ ನಿರ್ದಿಷ್ಟವಾದ ಕಾರಣಗಳಿರಬಹುದು. ಆದರೆ ತಮ್ಮ ಸಾಮಾಜಿಕ ಸ್ಥಾನಮಾನ ಉತ್ತಮಪಡಿಸಿಕೊಳ್ಳುವ ನಿಟ್ಟಿನಲ್ಲಿ ಇರುಳಿಗರು ಸಾಗುತ್ತಿರುವುದು ಸಮುದಾಯವೊಂದು ಹೊಸ ಬಗೆಯ ದಿಕ್ಕಿಗೆ ತೆರೆದುಕೊಳ್ಳುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಇರುಳಿಗ ಸಮುದಾಯವು ಆಧುನಿಕ ಮೌಲ್ಯಗಳೊಂದಿಗೆ ಸಮ್ಮಿಲನಗೊಂಡಿದೆ.

ಇದನ್ನು ಈ ಸಮುದಾಯದ ಜೀವನದಲ್ಲಿನ ಭಿನ್ನತೆ, ವೈವಿಧ್ಯತೆ ಹಾಗೂ ವೈಶಿಷ್ಟ್ಯತೆಗಳಲ್ಲಿ ಗುರುತಿಸಬಹುದಾಗಿದೆ. ಇರುಳಿಗರು ಅನುಭವಿಸುತ್ತ ಬಂದ ಶೋಷಣೆಯ ರೂಪಗಳು ಬದಲಾಗಿವೆ. ಆದರೆ ಸಾಮಾಜಿಕವಾಗಿ ಸಮಾಜದಲ್ಲಿನ ಅಸಮಾನತೆ ಒಂದು ಜಾತಿ ಸೂಚಕವಾದ ವ್ಯವಸ್ಥೆಯಲ್ಲಿ ಅಸ್ತಿತ್ವದಲ್ಲಿದೆ. ಶ್ರೇಣಿ ವ್ಯವಸ್ಥೆಯ ಆಧಾರದ ಮೇಲೆ ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುವ ಹಿಂದಿನ ವ್ಯವಸ್ಥೆ ಹಾಗೆಯೇ ಕಂಡು ಕಾಣದಂತೆ ಮುಂದುವರಿದಿದೆ. ಆಧುನಿಕರಣ ಅವರ ವಸ್ತ್ರವಿನ್ಯಾಸ, ಒಡವೆಗಳಲ್ಲಿ ಬದಲಾವಣೆಯನ್ನು ತಂದಿದೆಯಾದರೂ ಸಾಮಾಜಿಕ ಜೀವನದ ಸ್ಥಾನಮಾನವನ್ನು ಬದಲಾಯಿಸುವಲ್ಲಿ ವಿಫಲವಾಗಿದೆ.

ಆರ್ಥಿಕ ಸಾಮರ್ಥ್ಯ ಎಂಬುದು ಸಮುದಾಯವೊಂದರ ಸಾಮಾಜಿಕ ಸ್ಥಾನಮಾನವನ್ನು ನಿರ್ಧರಿಸುತ್ತದೆ. ಆರ್ಥಿಕ ಸ್ಥಿತಿಗತಿ ಸಮುದಾಯ ಒಂದರ ಉನ್ನತಿ ಮತ್ತು ಹಿಂದುಳಿಯುವಿಕೆಯ ಮೇಲೆ ಪ್ರಭಾವ ಬೀರುತ್ತದೆ. ಇರುಳಿಗರು ಆರ್ಥಿಕ ಪರಿಸ್ಥಿತಿ ನಿರ್ಧರಿಸುವ ವ್ಯವಸಾಯ, ಭೂಒಡೆತನಲ್ಲಿ ಹೆಚ್ಚಿನ ಬವಣೆಪಡುತ್ತಿದ್ದಾರೆ. ಅರಣ್ಯ ಹಕ್ಕು ಕಾನೂನಿಗಿಂತ ಅರಣ್ಯ ಸಂರಕ್ಷಣಾ ಕಾನೂನು ಹೆಚ್ಚು ಜಾರಿ ಮಾಡುತ್ತಿರುವ ಸರ್ಕಾರದ ನೀತಿ ಸ್ಪಷ್ಟವಾಗಿ ಗೋಚರಿಸುತ್ತದೆ. ಇದರ ಮೂಲಕ ಇರುಳಿಗ ಸಮುದಾಯದ ಕೃಷಿಭೂಮಿಗೆ ಸಂಚಕಾರ ಒದಗಿ ಬಂದಿದ್ದು, ಭೂಮಿ ಇದ್ದರೂ ಕೃಷಿ ಮಾಡಲಾರದ ಸ್ಥಿತಿಯಿದೆ. ಕೆಲವು ಜನರಿಗೆ ಫಲವತ್ತಾದ ಭೂಮಿ ಇರದೇ ಹಾಗೂ ಭೂಮಿ ಇದ್ದರೂ ನೀರಾವರಿ ಸೌಲಭ್ಯಗಳಾಗಲಿ, ಸರ್ಕಾರದ ಗಂಗಾ ಕಲ್ಯಾಣ ಯೋಜನೆಯಂತಹ ಮಹತ್ವ ಯೋಜನೆಗಳು ತಲುಪದೆ ಅಸಹಾಯಕ ಪರಿಸ್ಥಿತಿ ಅವರದಾಗಿದೆ. ಇತರೆ ಸಮುದಾಯಗಳ ಪ್ರಭಾವಿ ವ್ಯಕ್ತಿಗಳು, ಬಲಿಷ್ಠ ಜನರು ಇಂತಹ ಸೌಲಭ್ಯಗಳನ್ನು ಹಲವು ದಶಕಗಳಿಂದಲೂ ಕಬಳಿಸುತ್ತಿರುವುದು ಕಂಡುಬರುತ್ತದೆ. ತುತ್ತಿನ ಚೀಲ ತುಂಬಿಸಲು ದಿನನಿತ್ಯ ದುಡಿಮೆಯಲ್ಲೇ ಬೇಕಾದ ಪರಿಸ್ಥಿತಿ ಇರುಳಿಗರ ಸಮುದಾಯದಾಗಿದೆ. ಸಾಂಪ್ರದಾಯಿಕ ಕೃಷಿಕೂಲಿಯಲ್ಲಿ ಲಿಂಗತಾರತಮ್ಯ ಎದ್ದು ಕಾಣುತ್ತದೆ. ಆಧುನಿಕ ಕೃಷಿ ವ್ಯವಸ್ಥೆ ಅವರ ಪಾಲಿನ ಕೂಲಿಯನ್ನು ಕಿತ್ತುಕೊಂಡಿದೆ. ಹಾಗೆಯೇ ಆರ್ಥಿಕ ಬದುಕನ್ನು, ಸಾಮಾಜಿಕ ಜೀವನವನ್ನು ಉತ್ತಮಪಡಿಸಿಕೊಳ್ಳಲು ವಿಫಲಗೊಂಡಿದೆ.

ಇರುಳಿಗ ಸಮುದಾಯದವರು ಜೀವನ ನಿರ್ವಹಣೆಗಾಗಿ ಇತರೆ ವಿವಿಧ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಬಹುತೇಕ ಕೃಷಿಕೂಲಿ ದುಡಿದರೆ ಕೂಲಿ; ಎನ್ನುವುದು ಇಲ್ಲದೆ ಹೋದರೆ ಉಪವಾಸ. ಇಂದಿಗೂ ಮುಂದುವರಿದಿದೆ. ಇರುಳಿಗರ ಸಾಕ್ಷರತೆ ಪ್ರಮಾಣ ತುಂಬ ಕಡಿಮೆಯಿದೆ. ಪ್ರಾಥಮಿಕ ಹಂತದಿಂದ ಮಾಧ್ಯಮಿಕ, ಪ್ರೌಢ ಹಂತದಲ್ಲಿಯೇ ಅತಿಹೆಚ್ಚಿನ ಅಪವ್ಯಯ ಕಂಡುಬರುತ್ತದೆ. ಉನ್ನತ ಶಿಕ್ಷಣ ಪಡೆಯುವಲ್ಲಿ ಬಹಳಷ್ಟು ಜನ ಯಶಸ್ವಿಯಾಗಿರುವುದಿಲ್ಲ. ಇದಕ್ಕೆ ಸಮುದಾಯದಲ್ಲಿರುವ ಜಾಗ್ರತೆಯ ಕೊರತೆ, ಬಡತನ, ಸಾಮಾಜಿಕ ಪ್ರಜ್ಞೆಯ ಕೊರತೆಗಳೇ ಕಾರಣ ಕಾಲ ಬದಲಾದಂತೆ ಇವರ ಹಲವಾರು ಆಚರಣೆಗಳು, ರೂಢಿ, ಸಂಪ್ರದಾಯಗಳು ಬದಲಾಗುತ್ತಾ ಹೊಸ ರೂಪವನ್ನು ಪಡೆದರೆ ಕೆಲವು ನಶಿಸುತ್ತಿವೆ.

ಬದಲಾವಣೆಯ ಇಂದಿನ ಸನ್ನಿವೇಶದಲ್ಲಿ ಇರುಳಿಗ ಸಮುದಾಯದಲ್ಲಿ ಕೈಗಾರಿಕರಣ ಪ್ರಭಾವದಿಂದಾಗಿ ಕೆಲವು ಆಚರಣೆಗಳು ಮಾಯವಾಗಿ ಮತ್ತೆ ಕೆಲವು ಬಂದು ಸೇರುತ್ತ ಹೊಸ ರೂಪ ಪಡೆದಿವೆ. ಸಾಮಾಜಿಕ ಸ್ಥಾನಮಾನ, ಆಸ್ತಿ, ಜಮೀನು ಪಡೆಯಬೇಕೆಂಬ ಮನೋಭಾವನೆ ಬೆಳೆಯುತ್ತಿದೆ. ಸರ್ಕಾರದ ಯೋಜನೆಗಳಾದ ನೀರಾವರಿ, ಪಂಪಹೌಸ್, ಆಶ್ರಯ ಯೋಜನೆ, ಸಾಮಾಜಿಕ ಪಿಂಚಣಿ ಯೋಜನೆ, ಗುರುತಿನ ಚೀಟಿ, ಭಾಗ್ಯಲಕ್ಷ್ಮಿ, ಆಹಾರ ಭಾಗ್ಯ, ಪಶುಭಾಗ್ಯದಂತಹ ಯೋಜನೆಗಳು ಯೋಜನೆಗಳಾಗಿಯೇ ಉಳಿದಿದ್ದು ಈ ಸಮುದಾಯದ ಜನರನ್ನು ತಲುಪದೇ ಇರುವುದು ಕಂಡುಬರುತ್ತದೆ. ಮೂಲಭೂತ ಸೌಲಭ್ಯಗಳಾದ ನೀರು, ಚರಂಡಿ, ಆಸ್ಪತ್ರೆ, ಶೌಚಾಲಯಗಳ ಕೊರತೆ ಅಧಿಕವಾಗಿದೆ. ಯಾವುದೇ ಸ್ವಚ್ಛ ಭಾರತ ಯೋಜನೆ, ನಿರ್ಮಲ ಕರ್ನಾಟಕ ಯೋಜನೆ ಯಂತಹ ಯೋಜನೆಗಳು ಇವರು ವಾಸಿಸುವ ನೆಲೆಗಳಿಗೆ ದೊರಕಿದಂತೆ ಕಾಣಿಸುವುದಿಲ್ಲ.

ಇರುಳಿಗರು ವೃಕ್ಷ ಆರಾಧಕರು. ಅನೇಕ ದೇವ ದೇವತೆಗಳನ್ನು ಪವಾಡ ಪುರುಷರನ್ನು ಹಾಗೂ ಭೂತ ಮಾಂತ್ರಿಕ ಶಕ್ತಿಗಳನ್ನು ಪೂಜಿಸುತ್ತಾರೆ. ಮನೆದೈವ, ಗ್ರಾಮದೈವಗಳನ್ನು ಆರಾಧಿಸುತ್ತಿದ್ದ ಇರುಳಿಗರು ಇಂದು ರಾಮ, ಕೃಷ್ಣ, ಕಾಳಿ, ಲಕ್ಷ್ಮೀ, ಶಕ್ತಿ ಆರಾಧನೆಗೂ ಮಹತ್ವ ನೀಡುತ್ತಿದ್ದಾರೆ. ಪೂರ್ವಿಕ ಪೂಜೆ ಒಂದು ಮಹತ್ವದ ಆಚರಣೆಯಾಗಿದ್ದು ಮೂರು ವರ್ಷಗಳಿಗೊಮ್ಮೆ ಆತ್ಮವನ್ನು ಆಹ್ವಾನಿಸಿ ಬಲಿಪೂಜೆ, ನೈವೇದ್ಯ ಅರ್ಪಿಸುವ ಪದ್ಧತಿ ಹಾಗೂ ವಿಶೇಷ ಆಚರಣೆ ನಡೆಯುತ್ತದೆ. ಸತ್ತ ಆತ್ಮವನ್ನು ಕರೆದು ಮಾತನಾಡಿಸುವ ಕಣೆ ಮುಂದುವರೆಯುತ್ತಿದೆ.

ಬುಡಕಟ್ಟು ಹಾಗೂ ಬಹುತೇಕ ತಳಸಮುದಾಯಗಳಿಗೆ ಶತಶತಮಾನಗಳಿಂದ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಸರಿಯಾದ ನ್ಯಾಯಯುತವಾದ ಸ್ಥಾನಮಾನ, ಅವಕಾಶಗಳನ್ನು ನಿರಾಕರಿಸುತ್ತಲೇ ಬರಲಾಗಿದೆ. ಸಂವಿಧಾನ ನೀಡುವ ಹಕ್ಕುಗಳು ಇರುಳಿಗರಿಗೆ ಸ್ಥಾನಮಾನ ಉತ್ತಮಪಡಿಸುವಲ್ಲಿ ಗಮನಾರ್ಹವಾದ ಬದಲಾವಣೆ ತಂದಿಲ್ಲ. ಅನೇಕ ದಶಕಗಳಿಂದಲೂ ತುಳಿತಕ್ಕೆ ಒಳಗಾದ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾನತೆ, ಶೈಕ್ಷಣಿಕ ಮತ್ತು ಆರ್ಥಿಕ ಸ್ವಾವಲಂಬನೆ ಕಲ್ಪಿಸುವುದರ ಜೊತೆಗೆ ಸರ್ಕಾರದ ಯೋಜನೆಗಳು ಇವರಿಗೆ ಸರಿಯಾದ ರೀತಿಯಲ್ಲಿ ಮುಟ್ಟುವಂತೆ ನೋಡಿಕೊಳ್ಳಬೇಕಾಗಿದೆ. ರಾಷ್ಟ್ರೀಯ ಅರಣ್ಯ ಯೋಜನೆಯ ನೆಪದಲ್ಲಿ ಒಕ್ಕಲೆಬ್ಬಿಸುವ ಕಾರ್ಯ ನಿಲ್ಲಬೇಕು. ಇರುಳಿಗರು ಸ್ವಪ್ರಯತ್ನದಿಂದ ತಮ್ಮ ಸಮುದಾಯಕ್ಕೆ ದೊರೆಯಬೇಕಾದ ಹಕ್ಕು ಬಾಧ್ಯತೆಯನ್ನು ಪಡೆಯುವ ದಿಕ್ಕಿನಲ್ಲಿ ಹೋರಾಟ ಮಾಡಬೇಕಾಗಿದೆ. ಹೋರಾಟಕ್ಕೆ ಸಮುದಾಯದ ಸಂಘ ಸಂಸ್ಥೆಗಳು ನಿರಂತರ ಬೆನೆಲುಬಾಗಿ ನಿಂತು ಎಲ್ಲಾ ಪರಿವರ್ತನೆಗೆ ಮೂಲವಾದ ಶಿಕ್ಷಣದ ಅರಿವು ಮೂಡಿಸುವಲ್ಲಿ ಸಹಕರಿಸಬೇಕಾಗಿದೆ. ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಸದೃಢ ಸ್ವಯಂಪೂರ್ಣ ಸಮುದಾಯವಾಗಲಿ ಎಂಬುದೇ ಈ ಅಧ್ಯಯನದ ಮುಖ್ಯ ಆಶಯವಾಗಿದೆ.

ಅಧ್ಯಯನದ ಫಲಿತಗಳು

ದಕ್ಷಿಣ ಭಾರತದ ಪ್ರಮುಖ ಬುಡಕಟ್ಟು ಸಮುದಾಯದ ಇರುಳಿಗರ ಸಂಸ್ಕೃತಿಯಲ್ಲಿ ಇಂದಿನ ಆಧುನಿಕ ವೈಜ್ಞಾನಿಕ ಸಮಾಜಕ್ಕೆ ಬೇಕಾದ ಅನೇಕ ಅಂಶಗಳಿವೆ. ವಿವಿಧ ಜ್ಞಾನಶಿಸ್ತುಗಳ ಮೂಲಕ ಅಧ್ಯಯನ ಮಾಡಲು ಸಾಧ್ಯತೆಗಳಿವೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಗಮನಕ್ಕೆ ಬಾರದ, ಬಿಟ್ಟು ಹೋಗಿರುವ ಮತ್ತು ವ್ಯಕ್ತಪಡಿಸಲಾಗದ ವಿಷಯಗಳು ಉಳಿದಿರಬಹುದು. ಒಟ್ಟಾರೆಯಾಗಿ ಈ ಅಧ್ಯಯನ ಇರುಳಿಗರ ಬಗೆಗಿನ ಭವಿಷ್ಯದ ಅಧ್ಯಯನಗಳಿಗೆ ಆಕರವಾಗಬಲ್ಲದು ಎಂಬುದು ನನ್ನ ವಿನಮ್ರ ಅನಿಸಿಕೆ.

ಇರುಳಿಗರ ಸಮುದಾಯದ ಸಾಮಾಜಿಕ ಆರ್ಥಿಕ ಶೈಕ್ಷಣಿಕ ಸ್ಥಿತಿಗತಿಗಳ ಅಧ್ಯಯನ ಎಂಬ ಶೀರ್ಷಿಕೆಯಡಿಯ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ಈ ರೀತಿ ಪಟ್ಟಿ ಮಾಡಲಾಗಿದೆ.

೧. ಇರುಳಿಗ ಸಮುದಾಯವು ನಗರಕ್ಕೆ ಸಮೀಪದಲ್ಲಿರುವ ವಾಸಸ್ಥಳಗಳಲ್ಲಿ ಬುಡಕಟ್ಟು ಲಕ್ಷಣಗಳನ್ನು, ಸಂಸ್ಕಾರ–ಸಂಪ್ರದಾಯಗಳನ್ನು ಕಳೆದುಕೊಳ್ಳುತ್ತಿದ್ದು, ನಗರದಿಂದ ಬಹುದೂರದ ವಾಸಸ್ಥಳಗಳಲ್ಲಿ ಬುಡಕಟ್ಟು ಆಚರಣೆ, ಸಂಪ್ರದಾಯ, ಸಂಸ್ಕಾರ ಪದ್ಧತಿಯಗಳನ್ನು ದಟ್ಟವಾಗಿ ಉಳಿಸಿ ಕೊಂಡಿರುವುದು ಕಂಡುಬರುತ್ತದೆ.

೨. ಸಮುದಾಯದಲ್ಲಿನ ಬಹುತೇಕ ಕುಟುಂಬಗಳು ಕೃಷಿಕೂಲಿಯನ್ನು ಅವಲಂಬಿಸಿದ್ದಾರೆ.

೩. ಕೃಷಿಯನ್ನು ನಂಬಿ ಬದುಕುವ ಇರುಳಿಗರು ತುಂಡು ಭೂಮಿ ಹೊಂದಿದ್ದಾರೆ. ಹೆಚ್ಚಿನ ಜನರಿಗೆ ಯಾವುದೇ ದಾಖಲೆಗಳಾಗಲಿ ಹಾಗೂ ಖಾತಾ ಪಟ್ಟವಾಗಲಿ ಇಲ್ಲದೇ ಪ್ರಬಲ ಸಮುದಾಯ ಮತ್ತು ಅರಣ್ಯ ಇಲಾಖೆಯವರ ಜೊತೆ ನಿರಂತರ ಸಂಘರ್ಷ ಮಾಡುತ್ತಿರುವುದು ಕಂಡುಬರುತ್ತದೆ. ಅಕ್ರಮ ಸಕ್ರಮ ಯೋಜನೆಯಡಿ ನೀಡಿರುವ ಮನವಿಪತ್ರಕ್ಕೆ ಯಾವುದೇ ರೀತಿಯ ಸ್ವೀಕೃತಿ ನೀಡದೆ, ಹಕ್ಕು ಪತ್ರವನ್ನೂ ನೀಡದೆ ನಿರಂತರ ಸವಾಲು ಎದುರಿಸುತ್ತಿದ್ದಾರೆ.

೪. ಸೇವಾವಲಯ, ರಾಜಕೀಯ ವಲಯದಲ್ಲಿ ಸಮುದಾಯ ಭಾಗವಹಿಸಿದ್ದರೂ ತಮ್ಮ ಅಧಿಕಾರವನ್ನು ಪ್ರಬಲ ಸಮುದಾಯಗಳ ಅಣತಿಯಂತೆ ನಡೆಸುವ ಸನ್ನಿವೇಶ ಇದೆ.

೫. ಪಾರಂಪರಿಕ ವೃತ್ತಿಯಿಂದ ಆಧುನಿಕವಾಗಿ ಸೃಷ್ಟಿಯಾದ ನೂತನ ವೃತ್ತಿಗಳ ಕಡೆ ಸಮುದಾಯ ಮುಖಮಾಡಿ ನಿಂತಿದೆ. ಆದರೆ ಅದಕ್ಕೆ ಬೇಕಾದ ಕೌಶಲ್ಯ/ಶಿಕ್ಷಣ ಇಲ್ಲದೆ ಪರಿತಪಿಸುತ್ತಿದೆ.

೬. ಸರ್ಕಾರ ಜಾರಿಗೊಳಿಸಿರುವ ಪರಿಶಿಷ್ಟ ಪಂಗಡ ಸಮುದಾಯಗಳಿಗಿರುವ ಹಲವು ಯೋಜನೆಗಳ ಬಗ್ಗೆ ಅರಿವು ಇಲ್ಲದೆ ಆದರ ಪ್ರಯೋಜನ ಪಡೆಯಲು ಸಾಧ್ಯವಾಗಿಲ್ಲ. ಇವರ ಹೆಸರಿನಲ್ಲಿ ಯೋಜನೆಯ ಲಾಭವನ್ನು ಬೇರೆಯವರು ಪಡೆಯುತ್ತಿರುವುದು ಕಂಡುಬರುತ್ತಿದೆ.

೭. ಇರುಳಿಗ ಸಮುದಾಯ ಇಂದಿಗೂ ಪ್ರಕೃತಿಗೆ ಸಂಬಂಧಿಸಿದ ಆಚರಣೆ, ಮಾತೃದೇವತಾ ಆರಾಧನೆ, ಹಿರಿಯರ ಆರಾಧನೆಗಳನ್ನು ಉಳಿಸಿಕೊಂಡು ಹೋಗುತ್ತಿದೆ.

೮. ಇರುಳಿಗರಲ್ಲಿ ಭೂರಹಿತ ಕೂಲಿಕಾರರೇ ಹೆಚ್ಚಾಗಿದ್ದು ಭೂಹಿಡುವಳಿ ಹೊಂದಿರುವವರಲ್ಲಿ ಹಿಡುವಳಿ ಗಾತ್ರ ತುಂಬಾ ಚಿಕ್ಕದಾಗಿದ್ದು ನೀರಾವರಿ ಸೌಲಭ್ಯಗಳಿರುವುದಿಲ್ಲ.

೯. ಇರುಳಿಗ ಸಮುದಾಯದಲ್ಲಿ ಆರ್ಥಿಕವಾಗಿ ಮಹಿಳೆಯರ ಪಾತ್ರ ಪ್ರಮುಖವಾಗಿದ್ದರೂ ಸಾಮಾಜಿಕವಾಗಿ ಸಮಾಜದ ಒಳಗೆ ಮತ್ತು ಕುಟುಂಬದ ಒಳಗೆ ಉನ್ನತ ಸ್ಥಾನಮಾನಗಳನ್ನು ದೊರಕಿಲ್ಲ. ನ್ಯಾಯ ಪಂಚಾಯಿತಿ ಪ್ರಮುಖ ತೀರ್ಮಾನಗಳಲ್ಲಿ ಮಹಿಳೆಯರಿಗೆ ಯಾವುದೇ ಪ್ರಾಧಾನ್ಯತೆ ಇಲ್ಲ.

೧೦. ಹಳೆಯ ತಲೆಮಾರಿಗೆ ಆಧುನಿಕ ಬದಲಾವಣೆಗಳನ್ನು ಒಪ್ಪಿಕೊಳ್ಳಲು ಅಂಜಿಕೆ ಇದ್ದರೂ ಹೊಸ ತಲೆಮಾರು ಇದಕ್ಕೆ ಒಪ್ಪಿಕೊಂಡಿರುವುದು ವ್ಯಕ್ತವಾಗಿದೆ.

೧೧. ಸಮುದಾಯದಲ್ಲಿ ಇನ್ನೂ ಬಾಲ್ಯವಿವಾಹ, ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ತಾತ್ಸಾರ ಮನೋಭಾವ ಹೇರಳವಾಗಿದೆ.

